ಪ್ರಬುದ್ಧ ಕರ್ಣಾಟಕ



೧೮೭ - ೧೮೮

ಪ್ರಸಾರಾಂಗ : : ಮೈಸೂರು ವಿಶ್ವವಿದ್ಯಾನಿಲಯ

ಪ್ರಬುದ್ಧ ಕರ್ಣಾಟಕ

ಸಂಪುಟ ೭೩ ಸಂಚಿಕೆ ೨೮೭ ಮತ್ತು ೨೮೮

(ಸಂಯುಕ್ತ)

ಶ್ರೀ ಪ್ರಮೋದ ಸಂವತ್ಸರ

ಆಷಾಢ—ಭಾದ್ರಪದ ಸಂಚಿಕೆ

ಮೈಸೂರು

ಮೈಸೂರು ವಿಶ್ವವಿದ್ಯಾನಿಲಯ

೧೯೯೨

PRABUDDHA KARNATAKA, a Kannada Quarterly of the University of Mysore, Vol. 73 Number 1 and 2, pp. 220.

ಪ್ರಧಾನ ಸಂಪಾದಕರು :

ಡಾ. ಸಿ. ಪಿ. ಕೃಷ್ಣಕುಮಾರ್

ಸಂಪಾದಕರು :

ಡಾ. ಡಿ. ಕೆ. ರಾಜೇಂದ್ರ

ಡಾ. ಸಿ. ಪಿ. ಸಿದ್ಧಾಶ್ರಮ

ಪ್ರಕಾಶಕರು :

ಕೆ. ಟಿ. ವೀರಪ್ಪ

ನಿರ್ದೇಶಕರು, ಪ್ರಸಾರಾಂಗ, ಮೈಸೂರು–೬

ಮುದ್ರಕರು :

ಬಿ. ಎಸ್. ಸಿದ್ದೇಗೌಡ

ಕಾರ್ಯಭಾರಿ ನಿರ್ದೇಶಕರು, ವಿ.ವಿ. ಮುದ್ರಣಾಲಯ, ಮೈಸೂರು–೬

ವಿಷಯಸೂಚಿ

ಈ ಸಂಚಿಕೆಯ ಲೇಖಕರು

ಬಿ. ವೀರಭದ್ರಪ್ಪ	C/o ಹೊರಕೇರಪ್ಪ, ಬುರಜನ ಹಟ್ಟಿ ಚಿತ್ರದುರ್ಗ
ರಾ. ಗಣೇಶ್	ಸಂಸ್ಕೃತ ವಿಭಾಗ, ಬೆಂಗಳೂರು
ಮೈಸೂರು ಕೃಷ್ಣಮೂರ್ತಿ	ಕನ್ನಡ ಅಧ್ಯಾಪಕರು, ಕೊಳ್ಳೇಗಾಲ
ಡಾ. ಕೆ. ಕೆಂಪೇಗೌಡ	ಭಾಷಾ ವಿಜ್ಞಾನ ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು–೫೭೦೦೦೬
ನಾಗಣ್ಣ	ಇಂಗ್ಲಿಷ್ ಅಧ್ಯಾಪಕರು, ಮಹಾರಾಜ ಕಾಲೇಜು, ಮೈಸೂರು
ಡಾ. ಬಸವರಾಜ ಸಬರದ	ರೀಡರ್, ಕನ್ನಡ ಅಧ್ಯಯನ ಸಂಸ್ಥೆ ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ ೫೮೫೧೦೬
ಮಂಜುನಾಥ ಬೇವಿನಕಟ್ಟಿ	ಸಂಶೋಧನಾ ವಿದ್ಯಾರ್ಥಿ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು–೬
ಡಾ. ಎಚ್. ಎಸ್. ಸುಜಾತಾ	ಕನ್ನಡ ರೀಡರ್, ಡಿ. ಬನುಮಯ್ಯನವರ ಕಾಲೇಜು, ಮೈಸೂರು
ಡಾ. ಮೋಹನ ಕುಮಾರ್	ಕನ್ನಡ ಅಧ್ಯಾಪಕರು, ಸರ್ಕಾರಿ ಜೂನಿಯರ್ ಕಾಲೇಜು, ರಾಮನಗರ
ಸಿ. ಜಿ. ವೆಂಕಟಯ್ಯ	ಅಧ್ಯಾಪಕ ಸಂಶೋಧಕರು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು–೬
ಕೆ. ಗೋವಿಂದರಾಜು	ಎಂ. ಫಿಲ್ (ಭಾಷಾಂತರ) ವಿದ್ಯಾರ್ಥಿ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ ಮೈಸೂರು
ಸುಧಾಕರ	ರೀಡರ್, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು
ಡಾ. ಕೆ. ಕುಶಾಲಪ್ಪಗೌಡ	ವಿಶ್ರಾಂತ ಕನ್ನಡ ಪ್ರಾಧ್ಯಾಪಕರು, ಸುಳ್ಯ (ದ. ಕ.)
ಡಾ. ಆರ್. ರಾಮಕೃಷ್ಣ	ಅಧ್ಯಾಪಕ, ಭಾಷಾಶಾಸ್ತ್ರ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು

ಬಿ. ವೀರಭದ್ರಪ್ಪ, ಎಂ.ಎ.

ಜೀಯೆನೆ ಬೇಡಿಕೊಳ್ಳದೆ

> ಶ್ರೀಯನರಾತಿ ಸಾಧನ ಪಯೋನಿಧಿಯೊಳ್ ಪಡೆದುಂ ಧರಿತ್ರಿಯಂ ।
> ಜೀಯೆನೆ ಬೇಡಿಕೊಳ್ಳದೆ ವಿರೋಧಿ ನರೇಂದ್ರರನೊತ್ತಿಕೊಂಡು ಮಾ
> ತ್ಮೀಯ ಸುಪುಷ್ಪ ವೃಷ್ಟಿಯನೊಡಂಬಡೆ ತಾಳ್ದಿಯುಮಿಂತುದಾತ್ತ ನಾ
> ರಾಯಣನಾದ ದೇವನೆವಂಗೀಗರಿಕೇಸರಿ ಸೌಖ್ಯಕೋಟಿಯಂ ॥[1]

ಪಂಪಭಾರತದ ಪ್ರಥಮಾಶ್ವಾಸದ ಈ ಪದ್ಯದಲ್ಲಿ ವಿಷ್ಣುವಿಗಿಂತಲೂ ಅರಿಕೇಸರಿ ಅಧಿಕ, ವಿಷ್ಣುವಾದರೊ ಬೇಡಿ ಕಾಡಿ ಭೂಮಿಯನ್ನು ಸಂಪಾದಿಸಿದನು. ಆದರೆ ಅರಿಕೇಸರಿ ಹಾಗೆ ಮಾಡದೆ ವಿರೋಧಿ ನರೇಂದ್ರರನ್ನು ಸೋಲಿಸಿ ಭೂಮಿಯನ್ನು ಗಳಿಸಿದನು. ಆದ್ದರಿಂದ ವಿಷ್ಣುವಿಗಿಂತ ಈತ ಅಧಿಕ ಎನ್ನುತ್ತಾರೆ ಹಲವಾರು ವಿದ್ವಾಂಸರು.

"ಈ ಪದ್ಯದಲ್ಲಿ ನಾರಾಯಣನಿಗಿಂತಲೂ ಆಧಿಕ್ಯವನ್ನು ತನ್ನ ಉದಾತ್ತ ನಾರಾಯಣನಲ್ಲಿ ಕವಿ ಹೊಳೆಯಿಸುತ್ತಾನೆ. ಅವನು ಪಯೋನಿಧಿಯೊಳಗೆ ಶ್ರೀಲಕ್ಷ್ಮಿಯನ್ನು ಪಡೆದರೂ ವಿರೋಧಿ ನರೇಂದ್ರನಾದ ಬಲಿಚಕ್ರವರ್ತಿಯಲ್ಲಿ ಬೇಡಿಯೇ ಧರಿತ್ರಿಯನ್ನು ಪಡೆದುಕೊಂಡನು" ಮುಂದುವರಿದು "ಆತ್ಮೀಯನಾದ ಪುಷ್ಪವೃಷ್ಟಿಯನ್ನು ಅವನೊಬ್ಬನೇ ತಾಳ್ದಿದನು. ನಮ್ಮ ನಾಯಕನು ಹಾಗಲ್ಲ. ಗೋವಿಂದ ರಾಜನ ಸಹಾಯದಿಂದುಕ್ಕಿದ ಅರಾತಿಸಾಧನ ಪಯೋನಿಧಿಯನ್ನು ಮಥಿಸಿ ಶ್ರೀ[ವಿಜಯಶ್ರೀ]ಯನ್ನು ಪಡೆದುದು. ಧರಿತ್ರಿಯನ್ನು ಜೀಯೆನೆ ಬೇಡಿಕೊಳ್ಳದೆ ವಿರೋಧಿ ನರೇಂದ್ರರನೊತ್ತಿಕೊಂಡುದು ಎಂಬ ವಿಕ್ರಮಗಳೆರಡೂ ಇವನೊಬ್ಬನವುಗಳೇ"[2] ಎಂದು ಮುಳಿಯ ತಿಮ್ಮಪ್ಪಯ್ಯನವರು ಅಭಿಪ್ರಾಯಪಡುತ್ತ "ಹೀಗೆ ನಾರಾಯಣನಿಗಿಂತಲೂ ಮೇಲಾದ 'ಉದಾತ್ತ'ತೆಯನ್ನೊಂದಿರುವುದರಿಂದಲೇ ಅರಿಕೇಸರಿ ಉದಾತ್ತ ನಾರಾಯಣನೆಂದು ತಾತ್ಪರ್ಯ" ಎನ್ನುತ್ತಾರೆ.

---

1. ಪಂ. ಭಾ. ಆ. ೧. ಪ. ೧. ಪು. ೧.
2. ನಾ. ಪಂ. ಪು. ೧೮೫.

ದಿ|| ಡಿ. ಎಲ್. ಎನ್. ಅವರೂ ಈ ಪದ್ಯವನ್ನು ಕುರಿತು ಬರೆಯುತ್ತ ಆಧಿಕ್ಯ ಸೂಚನೆ ಅಂದರೆ ನಾರಾಯಣನಿಗಿಂತ ತನ್ನ ದೊರೆ ಉತ್ತಮನೆಂದು ಹೇಳಿದ್ದಾನೆ ಎನ್ನುತ್ತ

"ನಾರಾಯಣನಾದರೆ ದೇವದಾನವರು ಸೇರಿ ಸಮುದ್ರಮಥನ ಮಾಡಿದಾಗ ಹುಟ್ಟಿಬಂದ ಲಕ್ಷ್ಮಿಯನ್ನು ಏನೂ ಕಷ್ಟವಿಲ್ಲದೆ ಸ್ವೀಕರಿಸಿದನು, ಅರಿಕೇಸರಿ ವೈರಿಗಳನ್ನು ಮೆಟ್ಟಿ ಭೂಮಿಯನ್ನು ತೆಗೆದುಕೊಂಡನು. ನಾರಾಯಣನಾದರೆ ವಾಮನ ರೂಪದಲ್ಲಿ ಬಲಿಚಕ್ರವರ್ತಿಯಿಂದ ನೆಲವನ್ನು ಬೇಡಿ ಪಡೆದನು; ಅರಿಕೇಸರಿ ತನಗೇ ಮೀಸಲಾಗಿದ್ದ ಸುಪುಷ್ಪಪಟ್ಟವೆಂಬ ಕಿರೀಟವನ್ನು ಧರಿಸಿದ್ದರೆ ನಾರಾಯಣನು ಬರಿ ಪುಷ್ಪಪಟ್ಟವನ್ನು ತಾಳಿದನು. ಆದ್ದರಿಂದ ಅರಿಕೇಸರಿ ನಾರಾಯಣನಿಗಿಂತ ಉದಾತ್ತನಾದನು"[3] ಎಂದು ಈ ಪದ್ಯಕ್ಕೆ ಅರ್ಥಮಾಡಿದ್ದಾರೆ. ಈ ವಿದ್ವಾಂಸರ ಅಭಿಪ್ರಾಯಗಳಿಗೆ ಕಾರಣವಾದ ಅಂಶಗಳನ್ನು ಮೊದಲು ಇಲ್ಲಿ ಪರಿಶೀಲಿಸಬೇಕಾಗಿದೆ. 'ಜೀಯೆನೆ' ಎಂಬ ಪದ ಪ್ರಯೋಗಕ್ಕೆ ಮತ್ತು 'ಬೇಡಿಕೊಳ್ಳದೆ' ಎಂಬುದಕ್ಕೆ ವಿದ್ವಾಂಸರೆಲ್ಲ ವಾಮನಾವತಾರದ ಕಲ್ಪನೆಕೊಡುತ್ತಾರೆ. 'ಶ್ರೀಕೃಷ್ಣನು ಅವತಾರ ಪುರುಷನೆಂಬುದನ್ನು ಪಂಪ ಅಸಡ್ಡೆ ಮಾಡಿಲ್ಲ' ಎಂದು ಹೇಳುತ್ತ, ಕೃಷ್ಣನನ್ನು ಪಂಪ ಹೊಗಳಿರುವ ಕೆಲವು ಬಗೆಗಳನ್ನು ತಿಳಿಸಿ ಶ್ರೀಕೃಷ್ಣನ ಅಲೌಕಿಕ ಮಹಿಮೆಯನ್ನೂ, ಅವನು ಮೆರೆದ ಹಲವು ಪವಾಡಗಳನ್ನೂ, ಭಾರತ ಯುದ್ಧದಲ್ಲಿ ಅವನು ತೋರಿದ ದೈವಿಶಕ್ತಿಯನ್ನೂ ಪಂಪ ಕೊಂಡಾಡಿದ್ದಾನೆ. ಆದರೆ ಅವನ ಚರಿತ್ರೆ, ಲೋಕಪೂಜ್ಯವೆಂದೂ ಅವನ ಕಥೆಯನ್ನೊಳಗೊಂಡುದರಿಂದ ಭಾರತ ಲೋಕಪೂಜ್ಯವಾಯಿತೆಂದು ವಾಚ್ಯವಾಗಿ ಹೇಳಲು 'ಜಿನಪದಾಂಭೋಜ ವರ ಪ್ರಸಾದೋತ್ಪನ್ನ ಪ್ರಸನ್ನ ಗಂಭೀರ ವಚನ ರಚನ ಚತುರನಾದ ಪಂಪಕವಿ ಅದೇಕೋ ಹಿಂತೆಗೆದಿದ್ದಾನೆ'[4] ಎಂದು ಶ್ರೀ ಕೆ. ವೆಂಕಟರಾಮಪ್ಪನವರು ತಮ್ಮ ಪಂಪಭಾರತದರ್ಶನದಲ್ಲಿ ಅಭಿಪ್ರಾಯಪಡುತ್ತಾರೆ. ಈ ದೃಷ್ಟಿಯಿಂದ ವಿಮರ್ಶಿಸಿದ ಶ್ರೀಯುತರು ಕೂಡ "ಧರಿತ್ರಿಯನ್ ಜೀಯೆನೆ ಬೇಡಿಕೊಳ್ಳದೆ' ಎಂಬುದಕ್ಕೆ ಬಲಿಬಂಧನನಾದ ವಾಮನನ ಅವತಾರ ಕಲ್ಪಿಸಿ ಶ್ರೀವಿಷ್ಣುವಿಗಿಂತ ಅರಿಕೇಸರಿ ಮೇಲು ಎಂದು ಪಂಪ ಹೇಳಿದ್ದಾನೆ ಎನ್ನುತ್ತಾರೆ'[5]. ಇದೇ ಸಂದರ್ಭದಲ್ಲಿ ಚಿಕ್ಕದಾದರೂ ಚೊಕ್ಕ ವಿಮರ್ಶೆಗೆ ಹೆಸರಾದ 'ಪಂಪ' ಎಂಬ ಕಿರುಹೊತ್ತಿಗೆಯಲ್ಲಿ ತೀ. ನಂ. ಶ್ರೀ ಅವರು "ಪಂಪನ ಗ್ರಂಥದಲ್ಲಿ ಬೇರೆಲ್ಲಿಯೂ ಜೈನ ಕಥೆಯ ಪ್ರಭಾವ ಕಾಣಬರುವುದಿಲ್ಲ. ವ್ಯಾಸಭಾರತದ ಸ್ವಾರಸ್ಯಕ್ಕೆ ಅವನು ಮನಸೋತಿದ್ದಾನೆ; ವೈದಿಕ ಮತದವನಾದ ಅರಿಕೇಸರಿಯನ್ನು ತನ್ನ ಕಾವ್ಯನಾಯಕನನ್ನಾಗಿ ಮಾಡಿಕೊಂಡಿದ್ದನು. ಆದ್ದರಿಂದ ಪಂಪನ ಜೈನ ಶ್ರದ್ಧೆ ಎಲ್ಲಿಯೂ ಕಥೆಗೆ ಅಡ್ಡಿಯಾಗಿ

---

3. ಪಂ. ಭಾ. ದೀ. ಆ. ೧. ಪ. ೧. ಪು. ೧.
4. ಪಂ. ಭಾ. ದ.—ಕೆ. ವೆಂಕಟರಾಮಪ್ಪ ಪು. ೧೯೮–೨೦೦
5. ಪಂ. ಭಾ. ದ.—ಕೆ. ವೆಂಕಟರಾಮಪ್ಪ ಪು. ೫–೬.

ತಲೆಹಾಕಿಲ್ಲ. ವಿಕ್ರಮಾರ್ಜುನ ವಿಜಯದಲ್ಲಿ ಕಣ್ಣಿಟ್ಟು ನೋಡಿದರೆ ಅಲ್ಲೊಂದು ಇಲ್ಲೊಂದು ಜೈನವಾಸನೆಯುಳ್ಳ ಮಾತೂ ಮಾರ್ಪಾಡೂ ಸಿಕ್ಕಬಹುದು" (ಪು. ೩೭) ಎಂದು ಹೇಳಿ "ಶ್ರೀಕೃಷ್ಣನ ಮಹಿಮೆಯನ್ನು ಪಂಪನು ತುಂಬುಕಂಠದಿಂದ ಘೋಷಿಸದೆ ಇರುವುದಕ್ಕೆ ಅವನ ಜೈನದೃಷ್ಟಿ ಕಾರಣವಾಗಿರಬಹುದು ಅಷ್ಟೆ" ಎನ್ನುತ್ತಾರೆ. ಈ ವಿಮರ್ಶೆಯೂ ಗಮನಾರ್ಹ! ಪಂಪ ಮೊದಲೆ ತನ್ನ ಭಾರತವನ್ನು ಸಮಸ್ತಭಾರತ ವೆಂದು ತಿಳಿಸಿ ತನ್ನ ಆಶ್ರಯದಾತನಾದ ಅರಿಕೇಸರಿಯನ್ನು ಅರ್ಜುನನೊಡನೆ ತಗುಳ್ಚಿ ಕಾವ್ಯ ಬರೆಯುತ್ತೇನೆಂದು ಸ್ಪಷ್ಟವಾಗಿ ಹೇಳಿ ಅವನ ವಂಶಾವಳಿಯನ್ನೂ ಕೊಟ್ಟಿದ್ದಾನೆ. ಅವನು ಅಲ್ಲಿ ಮಾಡಿಕೊಂಡಿರುವ ಮಾರ್ಪಾಟು ಈ ಹೇಳಿಕೆಯ ಹಿನ್ನೆಲೆಯಲ್ಲಿ ಇದೆ. ಆದ್ದರಿಂದ ಪಂಪ ಜೈನ, ಹೀಗೆ ಮಾಡಿದ್ದಾನೆ ಎನ್ನಲೂ ಬರುವಂತಿಲ್ಲ. ಮೇಲಾಗಿ ಅರಿಕೇಸರಿ ವೈದಿಕ, ಅವನಿಗೆ ಕಾವ್ಯ ಹಿತವಾಗಿರಬೇಕು 'ಪೆಜರೀವುದೇಂ ಪೆಜ ರಿಂದಪ್ಪುದೇಂ' ಎಂಬ ಕವಿ ಚೇತನವಾದರೂ ತನ್ನ ಒಡೆಯನಿಗಾಗಿ ಈ ಕಾವ್ಯರಚಿಸು ತ್ತಿದ್ದಾನೆ. ಅರಿಕೇಸರಿಯ ಬಿರುದುಗಳು, ಅರ್ಜುನನ ಬಿರುದುಗಳು, ಅಷ್ಟೇಕೆ ಪಂಪನ ಬಿರುದುಗಳೂ ಒಟ್ಟಿಗೆ ಸೇರಿವೆ. ತಾರ್ಕಿಕವಾಗಿ ವಿಚಾರಮಾಡಿದರೆ ಒಂದನೇ ಆಶ್ವಾಸದ ಪ್ರಥಮ ಪದ್ಯದಲ್ಲಿ ತನ್ನ ರಾಜನ ಆರಾಧ್ಯದೈವ ಅಂದರೆ ವೈದಿಕ ಸಂಪ್ರದಾಯದ ವಿಷ್ಣುವನ್ನು ಸ್ತುತಿಸುವಾಗ ರಾಜನೇ ಮೇಲು ಎಂದು ವರ್ಣಿಸಲಾರ, ಅದರಲ್ಲೂ ಪಂಪ ವರ್ಣಿಸಲಾರ. ಎರಡನೆಯದು ಡಿ|| ತೀ. ನಂ. ಶ್ರೀ ಅವರು ಹೇಳುವ ಮಾತು ನೂರಕ್ಕೆ ನೂರು ಸತ್ಯ. ಆದರೆ ಜೈನನಾದ್ದರಿಂದ ಶ್ರೀಕೃಷ್ಣನನ್ನು ತುಂಬು ಕಂಠದಿಂದ ಘೋಷಿಸಿಲ್ಲ ಎಂಬ ಮಾತು ಸರಿಯಲ್ಲ. ಶ್ರೀಕೃಷ್ಣನ ಅವತಾರಗಳನ್ನು ಕೊಂಡಾಡಿರುವ ಪದ್ಯಗಳನ್ನು ಗಮನಿಸಿದಾಗ ಈ ಮಾತು ಅಷ್ಟು ಉಚಿತವಲ್ಲವೇನೊ ಎನಿಸಬಹುದು. ಅವನನ್ನು ಕೊಂಡಾಡುವ ಉದ್ದೇಶದಿಂದ ಪಂಪ ಕಾವ್ಯ ಬರೆಯಲು ಹೊರಟಿಲ್ಲ. ಇದೂ ಗಮನಾರ್ಹ ವಿಷಯ. ಶ್ರೀ ಕೃಷ್ಣನನ್ನೇ ಕೊಂಡಾಡಲು ಹೊರಟ ಕುಮಾರವ್ಯಾಸ ಎಷ್ಟೋ ಕಡೆ ಅವನನ್ನು ದೇವರೆಂದು ವಾಚ್ಯವಾಗಿ ಹೇಳಿದರೂ ಗೋವಳಿಗನೆಂವೇ ಬಗೆದು ನಡೆಸಿಕೊಂಡಿದ್ದಾನೆ. ಸಂಧಿ ೮, ೯ನ್ನು ಪಂಪನ ಹಿತಮಿತ ವೃದು ವಚನದ ಸಂಧಿ ಪ್ರಸಂಗದೊಡನೆ ಹೋಲಿಸಿದರೆ ತಿಳಿಯುತ್ತದೆ. ಮಹಾ ವಿದ್ವಾಂಸರಾದ ಇವರು ಅದನ್ನು ಗಮನಿಸಿಲ್ಲನೆಂದಲ್ಲ. ಕಣ್ಣಿಟ್ಟು ಹುಡುಕಿದರೆ ಇವನು ಜೈನ ಎಂಬ ಅರಿವು ಬರುವ ಸನ್ನಿವೇಶವಿರಬಹುದು ಎನ್ನುತ್ತಾರೆ. ನಿಜ, ಮೇಲಾಗಿ ಪಂಪ ವೈದಿಕ ಧರ್ಮದ ವಿರೋಧಿಯಂತೂ ಅಲ್ಲ. ಏಕೆಂದರೆ ಈತನ ತಂದೆ ವೈದಿಕ ಧರ್ಮ ಅಂದರೆ ಬ್ರಾಹ್ಮಣ ಧರ್ಮ ಬಿಟ್ಟು ಜೈನನಾದ, ಎಷ್ಟಾದರೂ ಆ ಸಂಸ್ಕಾರ ಪಂಪನಿಗೆ ಹೋಗಿಲ್ಲ. ಇಂಥ ವಿಮರ್ಶೆಯ ಹಿನ್ನೆಲೆಯಲ್ಲಿ ಪಂಪನನ್ನು ಓದಿದಾಗ ಹೌದೇನೊ ಎನಿಸುತ್ತದೆ. ಆದರೆ ಕೂಲಂಕಷವಾಗಿ ವಿಚಾರ ಮಾಡಿದಾಗ ಶ್ರೀಕೃಷ್ಣ ಒಬ್ಬ ಮುತ್ಸದ್ಧಿ. ಸಂಧಿಯ ಸಂದರ್ಭದಲ್ಲಿನ, ಪಂಪನ ಶ್ರೀಕೃಷ್ಣನ ಆ ವಿನಯ, ಗಾಂಭೀರ್ಯ ಮಾತಿನ ಓಘ ಇಂದಿನ Diplomatಗೂ ಇಲ್ಲ ಎನಿಸುತ್ತದೆ. ಅದೇ

ಕುಮಾರವ್ಯಾಸನ ಶ್ರೀಕೃಷ್ಣ ಬಾಯಿಬಡುಕನಂತೆ ಮೊದಲೆ ರೇಗಿ ಸಂಧಿಯೂ ಕೆಡಲು ಕಾರಣನಾಗುತ್ತಾನೆ. ದುರ್ಯೋಧನ ಮೊದಲೆ ಉದ್ಧಟ! ಯಾವ ವೈದಿಕ ಪರಂಪರೆಯ ನಾರಣಪ್ಪ ಶ್ರೀಕೃಷ್ಣನನ್ನು ದೇವರ ಮಟ್ಟಕ್ಕೆತ್ತಬೇಕಿತ್ತೊ, ಅವನೇ ಅವನನ್ನು ನಮ್ಮ ಮಟ್ಟಕ್ಕೆ ಇಳಿಸಿದ್ದಾನೆ. ಈ ಬಗ್ಗೆ ನಿಜಕ್ಕೂ ತುಲನಾತ್ಮಕ ಅಧ್ಯಯನ ಆಗಬೇಕು. ಆಗ ಮಾತ್ರ ಸತ್ಯ ಬೆಳಗೀತು. ಇಷ್ಟನ್ನು ಹೇಳುವ ಉದ್ದೇಶ ತೀ. ನಂ. ಶ್ರೀ ಅವರು ಸಾರಾಸಾರವಾಗಿ ತೂಗಿ ನೋಡಿ ವಿಮರ್ಶಿಸುವ ವಿದ್ವಾಂಸರು. ಆದರೆ ಅಷ್ಟನ್ನೆಲ್ಲ ವಿಮರ್ಶಿಸಲು ಆ ಗ್ರಂಥದ ವ್ಯಾಪ್ತಿ ಸಾಕಾಗದೆ ಹೋಗಿದೆ ಎಂದು ಹೇಳಿ ಬಿಡದೆ ವಿಧಿಯಿಲ್ಲ. (ಈ ಬಗ್ಗೆ ಒಂದು ಲೇಖನವನ್ನು ಬರೆಯುವ ಉದ್ದೇಶವಿದೆ. ಪಂಪ ನಿಜಕ್ಕೂ ಕೃಷ್ಣನನ್ನು ಉಪೇಕ್ಷಿಸಿದ್ದಾನೆಯೇ? ಹಾಗಾದರೆ ಏಕೆ ಎಂಬುದನ್ನು ಅಲ್ಲಿ ಚರ್ಚಿಸಲಾಗುವುದು) ಅಂತು ಎಲ್ಲ ವಿದ್ವಾಂಸರು ಇಂಥ ಹೇಳಿಕೆಗಳಿಂದ ಹೊರತಾಗಿಲ್ಲ. ಕವಿಯ ಮತೀಯ ಧಾರ್ಮಿಕ ಹಿನ್ನೆಲೆಯಲ್ಲಿ ಅವನ ಗ್ರಂಥವನ್ನು ವಿಮರ್ಶಿಸುವ ಒಂದು ಪದ್ಧತಿ ಇದೆ. ಆದರೆ ಅದು ಸಂಪ್ರದಾಯದಂತೆ ಮೂಢನಂಬಿಕೆಯಂತೆ ಬರಬಾರದು ಅಷ್ಟೆ. ಕುಮಾರವ್ಯಾಸ ಮಹಾಕವಿ, ಆದರೆ ಅತಿಯಾದ ಮಾತಿನಲ್ಲಿ ಎಲ್ಲ ಮುಚ್ಚಿಬಿಡುತ್ತಾನೆ ಅಷ್ಟೆ. ಪಂಪನ ಹಿತಮಿತ ಮೃದುವಚನದಲ್ಲಿ ಇತಿಹಾಸ ತಲೆಹಾಕಿ ಪಂಪ ಎಡವಿದನೇನೋ ಎನಿಸಿದರೂ ನಿರ್ವ್ಯಾಜ ವಿಮರ್ಶಕರಿಗೆ ತೀ. ನಂ. ಶ್ರೀ ಅವರು ಹೇಳುವಂತೆ ಸಂಶೋಧನೆಗೆಂದು ಹೊರಟಲ್ಲದೆ ಪಂಪ ಜೈನನೆಂಬುದೇ ತಿಳಿಯುವುದಿಲ್ಲ ಎಂಬುದು ನಿಜ. ಅವನು 'ವ್ಯಾಸಭಟ್ಟಾರಕ' ಎನ್ನಬಹುದು ಅಂದಾಕ್ಷಣ ಜೈನಭಟ್ಟಾರಕರ ನೆನಪು ಬರುತ್ತದೆ. ಆಧುನಿಕ ಪ್ರಸಿದ್ಧಕವಿ, ವಿಮರ್ಶಕರಾದ ಟಿ. ಎಸ್. ಎಲಿಯಟ್ ಹೇಳುವಂತೆ "Past speaks powerfully in the present" ಎನ್ನುವಂತೆ ತನ್ನ ಅರಿಕೇಸರಿಯ ಸ್ವಂತ ವಿಷಯಗಳನ್ನು ಹೇಳಿಕೊಂಡರೆ, ಹೋಮರ್, ಡಾಂಟೆ, ಕುವೆಂಪು ಇಂಥ ಮಹಾಕವಿಗಳು ತಮ್ಮ ಕಾವ್ಯದಲ್ಲಿ ಸ್ವವಿಷಯ ಸಮಕಾಲೀನ ಚಿತ್ರಗಳನ್ನು ತಂದದ್ದು ಆ ಕಾಲವನ್ನು ಪ್ರತಿನಿಧಿಸಿದ್ದಾರೆಂದು ವಿಮರ್ಶಕರು ಅಭಿಪ್ರಾಯ ಪಡುತ್ತಾರೆ. ಹಾಗೇ ಇವನ ಪ್ರಯೋಗಗಳೂ. ವಾಮನಾವತಾರದ ಕಲ್ಪನೆ ಎಲ್ಲರಿಗೂ ಗೊತ್ತಿರುವ ಅಂಶ, ಮಹಾದಾನಿ ಎಂದು ದುರಹಂಕಾರದಿಂದ ಮೆರೆಯುತ್ತಿದ್ದ ಬಲಿಯನ್ನು ಶ್ರೀವಿಷ್ಣು ಮೂರು ಪಾದ ಭೂಮಿಯನ್ನು ಬೇಡಿ ಪಡೆದು ಒಂದನ್ನು ಭೂಮಿಯ ಅಗಲಕ್ಕೂ. ಮತ್ತೊಂದನ್ನು ಗಗನಕ್ಕೂ ವಿಸ್ತರಿಸಿ, ಇನ್ನೊಂದು ಪಾದವನ್ನು ಎಲ್ಲಿಡಬೇಕೆಂದು ಕೇಳಿದಾಗ ತನ್ನ ನೆತ್ತಿಯನ್ನೇ ತೋರಿಸಿದ ಬಲಿಯ ತಲೆಯಮೇಲೆ ಪಾದವಿಟ್ಟು ನೆಲಕ್ಕೆ ತುಳಿದ ವಾಮನಾವತಾರದ ಕಲ್ಪನೆ ಎಲ್ಲರಿಗೂ ತಿಳಿದಿರುವ ವಿಷಯ. ವಾಮನ, ಬಲಿಯನ್ನು ಮೂರು ಪಾದ ಜಾಗ ಬೇಡಿದ್ದು ನಿಜ. ಹಾಗೆ ಬೇಡಿ, ಮೂರುಪಾದ ಭೂಮಿಯನ್ನು ಪಡೆಯುವ ಸೋಗಿನಲ್ಲಿ ಇಡೀ ಭೂಮಿಯನ್ನು ಕಬಳಿಸಿ ಬಲಿಯನ್ನು ನೆಲಕ್ಕೆ ತುಳಿದು ಬಲಿದರ್ಪಹರನಾದದ್ದೂ ನಿಜ. ಇಲ್ಲಿ ಶ್ರೀವಿಷ್ಣು ಭೂಮಿಯನ್ನು ಗಳಿಸುವುದಕ್ಕಾಗಿ ವಾಮನಾವತಾರ ತಾಳಲಿಲ್ಲ.

ಬಲಿಯ ದರ್ಪವನ್ನು ಮುರಿಯುವುದಕ್ಕಾಗಿ ಎಂಬುದನ್ನು ಮರೆಯಬಾರದು. ಹಾಗಾದರೆ ಭೂಮಿಯನ್ನು ಪರಾಕ್ರಮದಿಂದ ಸಂಪಾದನೆ ಮಾಡಿದ್ದು, ಗಳಿಸಿದ್ದು ಯಾವ ಅವತಾರದಲ್ಲಿ? ರಾಜಸೂಯಯಾಗ ಮಾಡಬೇಕು ಯಾಗದಲ್ಲಿ ಅಧ್ಯಕ್ಷ ಪದವಿ ಯಾರಿಗೆ ಸಲ್ಲಬೇಕು? ಹಿರಿಯರಾದ ಭೀಷ್ಮರು ಹೇಳುವ ಮಾತು ಗಮನಾರ್ಹ!

ಬಲಿಯಂ ಕಟ್ಟಿದವನಾವನೀ ಧರಣಿಯಂ ವಿಕ್ರಾಂತದಿಂದಂ ರಸಾ ।
ತಲದಿಂದೆತ್ತಿದನಾವನಂದು ನರಸಿಂಹಾಕಾರದಿಂ ದೈತ್ಯನಂ ॥
ಚಲದಿಂ ಸೀಳ್ದನನಾವನಬ್ಧಿ ಮಥನ ಪ್ರಾರಂಭದೊಳ್ ಮಂದರಾ ।
ಚಲಮಂ ತಂದವನಾವನಾತನೆ ವಲಂ ತಕ್ಕಂ ಪೆಜರ್ ತಕ್ಕರೇ ॥[6]

ಭೀಷ್ಮರ ಈ ಅಭಿಪ್ರಾಯ ವಿಚಾರಯೋಗ್ಯವಾಗಿದೆ. ಬಲಿಯನ್ನು ಜಯಿಸಿದವನು ಯಾವನೊ ಅವನು, ಪರಾಕ್ರಮದಿಂದ, ಭೂಮಿಯನ್ನು ಪಾತಾಳಲೋಕದಿಂದ ಯಾವನು ಎತ್ತಿ ತಂದನೊ ಅವನು, ಅಂದು ನರಸಿಂಹಾವತಾರದಿಂದ ದೈತ್ಯನನ್ನು ಚಲದಿಂದ ಸೀಳಿದವನು ಯಾವನೊ ಅವನು, ಸಮುದ್ರ ಮಥನ ಪ್ರಾರಂಭದಲ್ಲಿ ಮಂದರ ಪರ್ವತವನ್ನು ತಂದವನು ಯಾವನೊ ಅವನೆ ಶ್ರೇಷ್ಠ, ತಕ್ಕವನು. ಬೇರೆ ಯವರು ತಕ್ಕವರೇ? ತಕ್ಕವರಲ್ಲ ಎಂಬುದು ಭೀಷ್ಮರ ಅಭಿಪ್ರಾಯ. ಇಷ್ಟೊಂದು ಸ್ಪಷ್ಟವಾಗಿ, ಖಚಿತವಾಗಿ ವಯೋವೃದ್ಧರಾದ ಮಹಾಭಾರತದ ಪಿತಾಮಹಾರಾದ ಭೀಷ್ಮರು ವಿಷ್ಣುವಿನ ಗುಣಗಾನಮಾಡಿ, ಒಂದೊಂದು ಅವತಾರದ ಕಲ್ಪನೆಯನ್ನೂ ವಿಶೇಷಣಗಳ ಮೂಲಕ ಕೊಟ್ಟಿರುವುದರಿಂದ ಭೂಮಿಯನ್ನು ರಸಾತಲದಿಂದ ಮೇಲೆತ್ತಿದವನು ಯಾವನೊ ಅವನು ಮಹಾ ಪರಾಕ್ರಮಿ. ಆದ್ದರಿಂದಲೇ 'ಧರಣಿಯಂ ವಿಕ್ರಾಂತದಿಂದಂ' ಎಂದಿರುವುದು. ಪರಾಕ್ರಮದಿಂದ ಭೂಮಿಯನ್ನು ಪಾತಾಳದಿಂದ ಮೇಲೆತ್ತಿದ್ದು ಯಾವ ಅವತಾರದಲ್ಲಿ? ಶ್ರೀ ವಿಷ್ಣುವಿನ ಹತ್ತು ಅವತಾರಗಳೂ ಹತ್ತು ಉದ್ದೇಶಗಳಿಗೆ ಮೀಸಲಾಗಿವೆ. ಹಾಗಾದರೆ ಹಿರಣ್ಯಾಕ್ಷನು ಭೂಮಿಯನ್ನು ಚಾಪೆಯಂತೆ ಸುತ್ತಿಕೊಂಡು ಪಾತಾಳಕ್ಕೆ ಕೊಂಡೊಯ್ದಾಗ ಅದನ್ನು ರಸಾತಲದಿಂದ ಮೇಲೆತ್ತಿ ಧರೆಯನ್ನುದ್ಧರಿಸಿದವನು ಭೂಮಿಯನ್ನು ಸಂಪಾದಿಸಿದವನು ಯಾರು? ಯಾವ ಅವತಾರ ಆ ಕೆಲಸ ಮಾಡಿತು ಎಂಬುದು ಬಹಳ ಮುಖ್ಯ! ಭಾರತೀಯ ಧಾರ್ಮಿಕ ಜಗತ್ತಿನಲ್ಲಿ ಪಶುಪಕ್ಷಿಗಳೂ, ವಿಶಿಷ್ಟ ಪ್ರಾಣಿಗಳೂ ದೇವರ ಅಪರಾವತಾರವಾಗಿ ಆಸ್ತಿಕ ಜನರ ಅಪಾರಭಕ್ತಿ ಗೌರವಗಳನ್ನು ಪಡೆದಿವೆ. ಇಂಥ ಅವತಾರಗಳಲ್ಲಿ ವರಾಹ ಅವತಾರ ಅದ್ಭುತವಾದ ಕಲ್ಪನೆ, ಭೂಮಿಯನ್ನು ಉದ್ಧರಿಸುವ ವರಾಹ ಅವತಾರ ತಾಳಿದ ಸಂದರ್ಭವನ್ನು—

"ಒಂದಾನೊಂದು ಕಾಲದಲ್ಲಿ ಈ ದೈತ್ಯರು ಪಾಲಿಸುವ ಭೂಮಿಗೆ ಆಧಾರಗಳಾದ ಪರ್ವತಗಳು ರೆಕ್ಕೆಗಳುಳ್ಳವುಗಳಾದ್ದರಿಂದ ಹಾರಿ ಹೋಗಲಾಗಿ ಆ

---

6. ಪಂ. ಭಾ. ಆ. ೬. ಪ. ೪೧. ಪು. ೧೫೯.

ಭೂಖಂಡಗಳು ಸಮುದ್ರದಲ್ಲಿ ಮುಳುಗಿ ಹೋದವು. ಅದನ್ನು ನೋಡಿ ಹಿರಣ್ಯಾಕ್ಷನು ಕಡು ಕೋಪಿಸಿ ನನ್ನ ಭೂಮಿ ನಾಶವಾದ ಬಳಿಕ ದೇವತೆಗಳ ಭೂಮಿಯಾದರೂ ಏಕಿರಬೇಕು ಎಂದು ದೇವ ಭೂಮಿಯನ್ನು ನೀರಿನಲ್ಲಿ 'ಮುಳುಗಿಸಲು ಯೋಚಿಸಿ ದೈತ್ಯ ಬಲದೊಡನೆ ಇಂದ್ರನ ಮೇಲೆ ಯುದ್ಧಕ್ಕೆ ಹೊರಟನು...... ಆದರೆ ಹಿರಣ್ಯಾಕ್ಷನು ಇಂದ್ರನನ್ನು ಸೋಲಿಸಲಾಗಿ ದೇವತೆಗಳೆಲ್ಲರೂ ಓಡಿ ಹೋದರು. ಆಗ ದೇವ ಭೂಮಿಗಳನ್ನು ಹಿರಣ್ಯಾಕ್ಷನು ಸಮುದ್ರದಲ್ಲಿ ಮುಳುಗಿಸಲು ದೇವತೆಗಳೂ, ಮುನಿಗಳೂ ಭೂಮಿಯನ್ನು ಉದ್ಧರಿಸಲು ಮಹಾ ವಿಷ್ಣುವನ್ನು ಪ್ರಾರ್ಥಿಸುತ್ತಿದ್ದರು.

ಶ್ರೀ ಮಹಾವಿಷ್ಣುವು ಪ್ರಸನ್ನನಾಗಿ ದೇವತೆಗಳಿಗೆ ಅಭಯವಿತ್ತು ವರಾಹವೆಂಬ ಪರ್ವತದಿಂದ ತಾನು ಶ್ವೇತವರಾಹ ಮೂರ್ತಿಯಾಗಿ ಅವತರಿಸಿ ಶಂಖ ಚಕ್ರ ಪಾಣಿಯಾಗಿ ದೈತ್ಯರ ಮೇಲೆ ಯುದ್ಧಕ್ಕೆ ಹೊರಡಲು ವಿಷ್ಣುವಿನ ಶಂಖಧ್ವನಿಯನ್ನು ದೈತ್ಯ ದಾನವ ರಾಕ್ಷಸರೂ ಕೇಳಿ ಹೆದರಿ ಓಡಿ ಹೋದರು........ಕಡೆಗೆ ಸುದರ್ಶನವೆಂಬ ಚಕ್ರದಿಂದ ಹಿರಣ್ಯಾಕ್ಷನ ತಲೆಯನ್ನು ತರಿದು ಹಾಕಿದನು........ಸಮುದ್ರದಲ್ಲಿ ಮುಳುಗಿದ್ದ ದೇವತೆಗಳ ಭೂಮಿಯನ್ನು ತನ್ನ ಕೋಡಿನ ತುದಿಯಲ್ಲಿ ಎತ್ತಿಕೊಂಡು ಬಂದು ಸಪ್ತ ದ್ವೀಪಗಳನ್ನೂ ಪೂರ್ವದಂತೆ ಸರಿಯಾಗಿ ನಿಲ್ಲಿಸಿ ಭೂದೇವಿಗೊಡೆಯನಾದನು."[7] ಎಂದಿದೆ ವಚನರಾಮಾಯಣದಲ್ಲಿ. ವಿವಿಧ ರೀತಿಯ ಕಥೆಗಳಿದ್ದರೂ ಎಲ್ಲ ಒಂದೇ ವಿಷಯವನ್ನು ಸ್ಪಷ್ಟಗೊಳಿಸುತ್ತವೆ, ಈ ಮೇಲಿನದು ವರಾಹ ಅವತಾರದಲ್ಲಿ ಭೂಮಿಯನ್ನು ಹೇಗೆ ಪಡೆಯಲಾಯಿತು ಎಂಬುದನ್ನು ತಿಳಿಯಪಡಿಸುತ್ತದೆ. ವಿವರವಾದ ಮಾಹಿತಿಗೆ 'Legends, Myths and Epics of India' ಗ್ರಂಥವನ್ನು ನೋಡಬಹುದು. ಹಿರಣ್ಯಾಕ್ಷ ಶಸ್ತ್ರಾಯುಧವನ್ನು ಪ್ರಯೋಗಿಸುತ್ತಾನೆ. ಕೊನೆಗೆ ಮುಷ್ಟಿಯುದ್ಧ ಮಾಡುತ್ತಾನೆ. ವರಾಹ ಮೂರ್ತಿ ಲೀಲಾಯುದ್ಧವನ್ನು ಮಾಡಿ ಕೊನೆಗೆ ಸುದರ್ಶನ ಚಕ್ರದಿಂದ ಹಿರಣ್ಯಾಕ್ಷನನ್ನು ಸಂಹರಿಸಿ ತನ್ನ ಬಿಳಿಯ ಕೋರೆದಾಡೆಗಳಿಂದ, ಭೂಮಿಯನ್ನು ರಸಾತಲದಿಂದ ಮೇಲೆತ್ತಿತರುತ್ತಾನೆ. ರಸಾತಲದ ಕಲ್ಪನೆ ಹಲವಾರು ಗ್ರಂಥಗಳಲ್ಲಿದೆ. ಅರ್ಜುನ, ವಿಷ್ಣು, ಅವಿಭಾಜ್ಯವಾಗಿ ವರ್ಣಿಸಲ್ಪಟ್ಟಿರುವುದರಿಂದ ಇಲ್ಲಿ ಜೀಯ, ದಯೆ ಎಂದು ಬೇಡಿ ಪಡೆಯದೆ ವಿರೋಧಿ ರಾಜರುಗಳನ್ನು ರಣರಂಗದಲ್ಲಿ ಎದುರಿಸಿ, ಇದುರಿಸಿ ಹೋರಾಡಿ ಗೆದ್ದ ಚಿತ್ರವಿದೆ. 'ಧರಿತ್ರಿಯುನ್ ಜೀಯನೆ ಬೇಡಿಕೊಳ್ಳದೆ' ಎಂಬುದನ್ನು ವಿಷ್ಣುವಿಗೆ ಅನ್ವಯಿಸಿದರೆ ಅವನೂ ಕೂಡ ಭೂಮಿಯನ್ನು ಬೇಡದೆ ಪರಾಕ್ರಮದಿಂದಲೇ ಸಂಪಾದಿಸಿದ ಎಂಬ ಅರ್ಥಬರುತ್ತದೆ. ಪರಾಕ್ರಮದಿಂದ ಭೂಮಿಯನ್ನು ಗೆದ್ದ ವರಾಹ ಅವತಾರದ ಕಲ್ಪನೆಯೇ ಈ ಪದ್ಯದಲ್ಲಿದೆ ಎಂಬುದಕ್ಕೆ ಪಂಪಭಾರತದ ಇತರೆ ಸಂದರ್ಭಗಳ ನಿದರ್ಶನ ಕೊಡಬಹುದು.

---

7. ವಚನ ರಾಮಾಯಣ–ಅಶ್ವತ್ಥನಾರಾಯಣ ಶಾಸ್ತ್ರಿ ಪು. ೧೪–೧೫.

ಎಳೆಯಂ ಕ್ರಮದಿಂ ತರಲ್ ಮಹಿಧರಂ ಮುನ್ ಪಂದಿಯಾದಂತೆ ಪೋ
ದೆಳೆಯಂ ದಾಯಿಗರಂ ಪಡಲ್ವಡಿಸಿ ಕೊಂಡಾಳಲ್ಕಮಾದೇವದಿಂ ॥
ಮುಳಿಸಿಂ ರಂಭೆಯ ಕೊಟ್ಟ ಶಾಪಮನದಂ ನೀಗಲ್ಕಮಾಗಳ್ ಬೃಹಂ
ದಳೆಯಾದಂ ನರನಾತ್ಮಕಾರ್ಯ ವಶದಿಂ ಶುದ್ಧಾಂತದೊಳ್ ಮತ್ಸ್ಯನಾ[8]

ಇಲ್ಲಿ ಅರ್ಜುನನಿಗೆ ರಂಬೆಯಿಂದ ಬಂದ ಶಾಪ ವೃತ್ತಾಂತವೂ ವರಾಹ ರೂಪ ಧರಿಸಿ ವಿಕ್ರಮದಿಂದ ಎಳೆಯನ್ನುದ್ಧರಿಸಿದ ವೃತ್ತಾಂತವೂ ಅಡಕವಾಗಿದೆ. ಕಿರಿದರಲ್ಲಿ ಪಿರಿದನ್ನು ಅಡಗಿಸಿ ಹೇಳುವ ಪಂಪನ ಸಾರ ಸಂಗ್ರಹಕ್ಕೆ ಈ ಪದ್ಯ ನಿದರ್ಶನವಾಗ ಬಲ್ಲುದು. ರಂಭೆಯಿಂದ ಶಾಪಗ್ರಸ್ತನಾದ ಅರ್ಜುನ ಬೃಹಂದಳೆಯಾದದ್ದು, ದೇವತೆಗಳ ಕಲ್ಯಾಣಕ್ಕಾಗಿ, ಭಕ್ತರ ಉದ್ಧಾರಕ್ಕಾಗಿ !!

ಸಂಧಿಮಾಡಿಕೊಳ್ಳುವುದುತ್ತಮ ಎಂಬ ವಿಷಯವನ್ನು ಶ್ರೀ ಕೃಷ್ಣ ಪಾಂಡವರಿಗೆ ಹೇಳಬೇಕಾಗಿತ್ತು. ಆ ಸಂದರ್ಭದಲ್ಲಿ ಬಂದ ಶ್ರೀ ಕೃಷ್ಣನನ್ನು ಕಂಡು ಹರ್ಷಚಿತ್ತನಾಗಿ ಧರ್ಮರಾಯ— -

ಎಳೆರಸೆಯೊಳಟ್ಟುದಂ ಭುಜ
ಬಳದಿಂ ಮುನ್ನೆತ್ತಿದಂತೆ ವಿಷಯಾಂಬುಧಿಯೊಳ್
ಮುಳುಗಿರ್ದೆಮ್ಮಯ್ವರುಮಂ
ಬಳಿಹರಂ ಪಿಡಿದೆತ್ತಲೆಂದು ಬಂದೈ ಬರವಂ[9]

ಎನ್ನುತ್ತಾನೆ. ಭೂಮಿ ರಸಾತಲದಲ್ಲಿ ಮುಳಗಿದ್ದನ್ನು ಭುಜಬಲದಿಂದ ಮುಂಚೆ ಎತ್ತಿದಂತೆ ಪ್ರಾಪಂಚಿಕ ವಿಷಯ ಲಾಲಸೆಯಲ್ಲಿ ಮುಳುಗಿರುವ ನಮ್ಮೈವರನ್ನೂ ಉದ್ಧರಿಸಲೆಂದೆ ಬಂದಿರುವ ಬಲಿಹರ ನಮ್ಮನ್ನು, ಸೂಕ್ತ ಮಾರ್ಗದರ್ಶನವಿತ್ತು ಕಾಪಾಡಬೇಕೆಂದು ಪ್ರಾರ್ಥಿಸುವ ಈ ಪದ್ಯದಲ್ಲಿ 'ಎಳೆ ರಸೆಯೊಳಟ್ಟಿದ್ದೂ, ಭುಜಬಲ ದಿಂದ ಅದನ್ನು ಉದ್ಧರಿಸಿದ್ದೂ' ಎಂಬ ಮಾತು ಗಮನಾರ್ಹ ! ಇಲ್ಲಿ ಭುಜಬಲದಿಂದ ಭೂಮಿಯನ್ನು ರಸಾತಲದಿಂದ ಮೇಲೆತ್ತಿದ್ದು ವರಾಹ ಎಂಬುದರಲ್ಲಿ ಸಂಶಯವಿಲ್ಲ. (ಈ ಪದ್ಯದ ಮೂರನೆ ಪಾದದಲ್ಲಿ ಆದಿ ಪ್ರಾಸ ದೋಷವಿದೆ. 'ಎಳೆ' ಎಂಬುದನ್ನು 'ಎಲೆ' ಎನ್ನಲು ಬರುವುದಿಲ್ಲ. ಅರ್ಥ ಕೆಡುತ್ತದೆ. ಆದ್ದರಿಂದ ಇದು ಕುಳವೇ. 'ಬಳ, ಬಳಿ' ಎಂಬುದನ್ನು 'ಬಲ, ಬಲಿ' ಎಂದು ಹೇಳಬಹುದು. ಇವು ಕ್ಷಳಗಳು. ಇವುಗಳ ಪ್ರಾಸಸ್ಥಾನಕ್ಕೆ 'ೞ' ಬರಬಾರದು. ಇದು ಅಚ್ಚಿನ ದೋಷವಿರಬೇಕು. 'ಮುೞಿಗಿರ್ದ' ಎಂದು ಊಹಾಪಾಠ ಸೇರಿಸಬಹುದು. 'ಮೞಗಿರ್ದ'ದ 'ಮ' 'ಮು' ಆಗಬೇಕು, 'ೞ' ಪಂಪವಿನಾಯಿತ್ತು ಪ್ರಾಸ ಎನ್ನಬೇಕು !)

ಪಾಂಡವ ಕೌರವರ ಬದ್ಧ ದ್ವೇಷನಿವಾರಣೆಗೆ ಮೊದಲು ಮಾಡಬೇಕಾದ ಕೆಲಸ ಯಾವುದು ಎಂಬುದನ್ನು ಶ್ರೀಕೃಷ್ಣ ತಿಳಿಸುತ್ತ—

---

8. ಪಂ.ಭಾ.ಆ. ೮. ಪ. ೫೫, ಪು. ೨೦೮.
9. ಪಂ.ಭಾ.ಆ. ೯. ಪ. ೧೫, ಪು. ೨೨೬.

ಬಲಿಯುಂ ವಾಮನರೂಪದಿಂದಮೆ ವಲಂ ಮುಂ ಬೇಡಿದಂ ಭೂರಿ ಭೂ
ತಲಮಂ ಕುಂದೆನಗಾಯ್ತೆ ಕೊಂಡೆನಿಳೆಯಂ ಕಟ್ಟಿಟ್ಟೆನಿನ್ನುಂ ರಸಾ
ತಲದೊಳ್ ದೈತ್ಯನನಂತೆ ನೀನುಮಿಳೆಯಂ ಮುಂಬೇಡಿಯುಟ್ಟಿಟ್ಟೆಮಾ
ರ್ಮಲೆದಾತಂ ಕುಡದಿರ್ದೊಡಂದಿಱಿಯ ನೀಂ ಲೋಕಂ ಗುಣಗೊಳ್ವಿನಂ[10]

ಎನ್ನುತ್ತಾನೆ. ಮೊದಲು ವಾಮನ ರೂಪದಿಂದ ಬ್ರಾಹ್ಮಣ ವೇಷತಳೆದು ಭೂಮಿಯನ್ನು ಬೇಡಿದೆ; ಕುಂದು ಏನಗಾಯ್ತು? ರಾಕ್ಷಸನನ್ನು ರಸಾತಲದಲ್ಲಿ 'ಕಟ್ಟಿಟ್ಟು ಇಳೆಯನ್ನು ಪಡೆದೆ, ಗೆದ್ದೆ. ಹಾಗೆ ನೀನೂ ಇಳೆಯನ್ನು ಮೊದಲು ಬೇಡಿ ಕೊಡದಿದ್ದರೆ ಮೇಲೆ ಬಿದ್ದು ಇರಿ, ಈ ಲೋಕ ಹೊಗಳುವ ಹಾಗೆ! ಎನ್ನುತ್ತಾನೆ ಶ್ರೀಕೃಷ್ಣ. ಈ ಬುದ್ಧಿವಾದಕ್ಕೆ ಕಾರಣ 'ಮೆಲ್ಪುಬಲ್ಪನಱಿಗುಂ' ಎಂಬುದು. ಕೈವಾರವೂ ಅಂದರೆ ಹೊಗಳಿಕೆಯೂ ಸೇರಿಬಿಟ್ಟರೆ ಮತ್ತೂ ಶರಿಸುತ್ತದೆ. ಆದ್ದರಿಂದ ಮೊದಲು ಸಾಮವನ್ನು ಪ್ರಯೋಗಿಸಿ ಅನಂತರ ದಂಡವನ್ನು ಪಯೋಗಿಸಬೇಕು. “ದಂಡಮನೆ ಮುಂ ಮುಂತಿಕ್ಕುವಂ ಮಂತ್ರಿಯೇ”[11] ಎನ್ನುತ್ತಾನೆ ಮುರಾರಿ! ಈ ನಯವಾದ ಬುದ್ಧಿವಾದದಲ್ಲಿ ಶ್ರೀಕೃಷ್ಣನೇ ಹೇಳುವಂತೆ ದೈತ್ಯನನ್ನು ರಸಾತಲದಲ್ಲಿ ಕಟ್ಟಿಟ್ಟು ಭೂಮಿಯನ್ನು ಪಡೆದನಂತೆ. ಮೊದಲು ಬೇಡಿ ಪಡೆದ ಚಿತ್ರ. ಅದಕ್ಕೆ ಬಗ್ಗದಿದ್ದರೆ ಇಕ್ಕಿಮೆಟ್ಟಿ ಪಡೆವ ಗಂಡುತನದ ಚಿತ್ರ. ಇವು ಇದರಲ್ಲಿ ಬಿಂಬಿತವಾಗಿವೆ. ಇದೇ ಸಂದರ್ಭದಲ್ಲಿ ರಸಾತಲದಿಂದ ಇಳೆಯನ್ನುದ್ಧರಿಸಿದ ಸಂದರ್ಭವನ್ನು ತನ್ನ ಶೌರ್ಯಕ್ಕೆ ಹೋಲಿಸಿಕೊಂಡು ಜೋರಲು ಬಿದ್ದರೂ ಮೀಸೆ ಮಣ್ಣಾಗಲಿಲ್ಲವೆಂಬಂತೆ ತರ್ಕಬದ್ಧವಾಗಿ ಹೇಳುವ ದುರ್ಯೋಧನನ—

ಎಳೆಯುಮಂ ದೈತ್ಯನ ಕೆಯ್ಗೆ ಪೋಗೆ ತರಲೆಂದೀ ಚಕ್ರಿಯುಂ ಮುನ್ನಂ ರಸಾ
ತಳಮಂ ಪೊಕ್ಕುದುಮೀ ಮಹೋಗ್ರರಣದೊಳ್ನಿಮ್ಮೊಂದು ಕೆಯ್ವಿಟ್ಟಿಭೂ
ತಳಮಂ ಮತ್ತೆ ತರಲ್ ವಿಶುದ್ಧನಿಯಮ ಪ್ರಾರಂಭದಿಂದಾನು ಮೀ
ಕೊಳನಂ ಪೊಕ್ಕುದುಮಾವ ದೋಷಮೆನಗಿಂ ಮಾಱಾಂಪರಾರ್ ತೋಱಿರೇ[12]

ಈ ಮಾತು 'ಅಯ್ಯೋ ಪಾಪ ಎನ್ನುವಂತಿದೆ. ಜೀವರಕ್ಷಣೆಗಾಗಿ ಭೀಷ್ಮರ ಹಿತನುಡಿ ಮೀರಿಗೆ ವೈಶಂಪಾಯನ ಸರೋವರದಲ್ಲಿ ಅಡಗಿಕೊಂಡಿದ್ದಾನೆ. ಅದೂ ಹೇಗೆ? ಹಿಂದೆ ಹಿಂದೆ ಹೆಜ್ಜೆ ಹಾಕಿ ಕೊಳದೊಳಗೆ ಅಡಗಿದಾನೆ. “ಎನ್ನ ಸರಂಗೇಳ್ದಲ್ಲದೀ ಭೂತು ಪೊಱಮಡುವನಲ್ಲನೀತಂಗಾನೆ ಬಲ್ಲೆನ್”[13] ಎಂದು ನಾನಾ ರೀತಿ ಮೂದಲಿಸಿ “ಸಿಲ್ಕಿದ್ದೈ ಪೋ ಪೊಱಮಡು ಕೊಳದಿಂ ಸತ್ತ್ರೊಡಂ ಪುಟ್ಟಿನೀ

10. ಅದೇ ಆ. ೯ ಪ. ೨೦ ಪು. ೨೨೭
11. ಅದೇ ಆ. ೯ ಪ. ೧೯ ಪು. ೨೨೭
12. ಅದೇ ಆ. ೧೩. ಪ. ೮೪. ಪು. ೩೮೦
13. ಅದೇ ಆ. ೧೩. ಪ. ೭೬. ಪು. ೩೭೯

ನೀಗಡೆ" "ನೀಂ ಮಾನಸನೆನೆ ನೀರೊಳೆಲವೊ ನೀನುಂ ಮೀನೆಂಬೀನೆವದಿರ್ದೆ...."[14] ಎನ್ನುತ್ತಾನೆ ಕೌರವಕುಳ ನಳಿನೀ ಕುಂಜರ ಭೀಮಸೇನ! ಅದನ್ನು ಕೇಳಿ ಸಹಿಸದ ದುರ್ಯೋಧನ ತನ್ನ ಶೌರ್ಯಕ್ಕೆ ಧಕ್ಕೆ ಇದು ಎಂದು ಬಗೆದು ಕಾಳಕೂಟವಿಷ ಚಿಮ್ಮಿದಂತೆ ಮೇಲೆದ್ದು ಬಂದನಂತೆ! ಅಷ್ಟೆ ಅಲ್ಲ ಮೀನಂತೆ ನೀರಲ್ಲಿ ಮುಳುಗಿದ್ದ ನೆಂಬ ಮೂದಲಿಕೆಗೆ ಉತ್ತರ ರೂಪವಾಗಿ ತನ್ನ ತಪ್ಪನ್ನು ಸಮುಜಾಯಿಸಿಕೊಳ್ಳಲು ಮೇಲಿನಂತೆ ತಿಳಿಸುತ್ತಾನೆ. ಹಿಂದೆ ಭೂಮಿ ರಾಕ್ಷಸನ ಕೈಗೆ ಹೋಗಲು ಈ ಚಕ್ರಿಯೂ ಕೂಡ ರಸಾತಲವನ್ನು ಹೊಕ್ಕಿದ್ದ. ಈ ಮಹಾ ಸಂಗ್ರಾಮದಲ್ಲಿ ನಿಮ್ಮ ಕೈಗೆ ಬಿದ್ದ ಭೂಮಿಯನ್ನು ಮತ್ತೆ ತರಲು, ಪಡೆಯಲು ವಿಶುದ್ಧನಿಯಮ ಪ್ರಾರಂಭ ದಿಂದ ನಾನೂ ಕೂಡ ಈ ಕೊಳವನ್ನು ಹೊಕ್ಕಿದ್ದೇನೆ. ಇದು ಯಾವ ದೋಷ? ನನಗೆ ಎದುರು ಬೀಳುವವರು ಮಾತನಾಡುವವರು ಯಾರು? ತೋರಿಸಿ? ಎನ್ನುತ್ತಾನೆ. ಇದೊಂದು ರೀತಿಯ ಸಮರ್ಥನೆ. ಹರಿಹೊಕ್ಕದ್ದು ರಸೆ, ಫಣಿರಾಜ ಕೇತನ ಹೊಕ್ಕದ್ದು ವೈಶಂಪಾಯನ ಸರೋವರ! ಇಬ್ಬರ ಉದ್ದೇಶವೂ ಒಂದೆ. ಅದು ಭೂಲಾಭ, ಭೂಮಿಯನ್ನು ಮೇಲೆತ್ತುವುದು. ಒಂದು ಜಗತ್ಕಲ್ಯಾಣ ಕ್ಕಾಗಿ. ಮತ್ತೊಂದು ದುರ್ಯೋಧನನ ಸ್ವಾರ್ಥದ ಲಾಭಕ್ಕಾಗಿ ಅಷ್ಟೆ! ಅವನ ಉಕ್ತಿ ವೈಚಿತ್ರ್ಯ ಮೆಚ್ಚುವ ಹಾಗಿದ್ದರೂ ನಗುತರುವಂತಿದೆ. ಅಸಹಾಯಕ ನಾಗಿದ್ದಾನೆ! ಅದೇನೇ ಇದ್ದರೂ ಇಲ್ಲಿ ಶ್ರೀವಿಷ್ಣು ರಸಾತಲದಿಂದ ಭೂಮಿಯನ್ನು ಉದ್ಧರಿಸಿದ ಸಂದರ್ಭದ ಕೊಂಡಾಡುವಿಕೆಯನ್ನು ಅವನ ವಿರೋಧಿಯ ಬಾಯಲ್ಲಿ ಕೇಳುವುದೂ ಸೊಗಸೆ. ಅದಕ್ಕೆ ಬೆಲೆಯೂ ಹೆಚ್ಚು. ಅದನ್ನು ಮೆಚ್ಚುವುದಾದರೆ ಇದನ್ನೂ ಮೆಚ್ಚು ಎಂಬ ಧಾಟಿ. ಇಲ್ಲಿ ಕೃಷ್ಣನ ಬಗ್ಗೆ ಕಟಕಿಯೂ ಇದೆ. ಒಟ್ಟನಲ್ಲಿ ಪರಾಕ್ರಮದಿಂದ ಭೂಮಿಯನ್ನು ಗೆದ್ದ ಪ್ರಸ್ತಾಪ ವಾಮನಾವತಾರದ್ದಲ್ಲ; ಅದು ವರಾಹ ಅವತಾರದ್ದು. ಸಮರ್ಥನೆಗಾಗಿ ಶ್ರೀಕೃಷ್ಣನೂ ಬೇಡಿದ, ಪರಾಕ್ರಮ ತೋರಿದ ಎರಡು ಸಂದರ್ಭಗಳು ಭಿನ್ನ. ಒಂದು ಜೀಯ ಹಸಾದ ಎಂದು ಬೇಡಿದ್ದು, ಎರಡನೆಯದು ದೈತ್ಯನನ್ನು ಕಟ್ಟಿಟ್ಟು ಪಡೆದದ್ದು. ಒಟ್ಟನಲ್ಲಿ ಪರಾಕ್ರಮ ದಿಂದ ಭೂಮಿಯನ್ನು ಗೆದ್ದ ಪ್ರಸ್ತಾಪ ವಾಮನಾವತಾರದ್ದಲ್ಲ. ಅದು ವರಾಹ ಅವತಾರದ್ದು. ಈ ವರಾಹ ಅವತಾರದ ಕಲ್ಪನೆಯ ಪ್ರಸಂಗವನ್ನು ನಾವು ಕೆಲವು ಶಾಸನಗಳಲ್ಲಿರುವುದನ್ನು ನೋಡಬಹುದು. ರಾಜನನ್ನು ಹೊಗಳುವಾಗ, ವರ್ಣಿಸು ವಾಗ ವಿಷ್ಣುವಿಗೆ ಹೋಲಿಸಿ, ಸಮೀಕರಿಸಿ ಅಥವಾ ವಿಷ್ಣುವನ್ನೇ ಹೊಗಳಿ ಪ್ರಾರಂಭಿ ಸಿರುವ ಶಾಸನಗಳೂ ಇವೆ.

ಜಯಾತ್ಯಾವಿಷ್ಕೃತಂ ವಿಷ್ಣೋರ್ವಾರಾಹಂ ಕ್ಷೋಭಿತಾರ್ಣವಂ
ದಕ್ಷಿಣೋನ್ನತ ದಂಷ್ಟ್ರಾಗ್ರ ವಿಶ್ರಾಂತ ಭುವನಂ ವಪುಃ॥[15]

---

14. ಅದೇ ಆ. ೧೩. ಪ. ೭೯. ಪು. ೩೭೯

15. ಕ್ರಿ.ಶ. ೭೦೮ರ ರಾಯಘಡದ ತಾಮ್ರಪಟಗಳಲ್ಲಿ ದೊರಕಿದ್ದು,

ಇದು ರಾಯುಘಡದ ತಾಮ್ರಪಟದ ಶ್ಲೋಕ. ವಿಷ್ಣು ವರಾಹ ರೂಪ ಧರಿಸಿ, ತನ್ನ ದಾಡೆಗಳಿಂದ ಸಮುದ್ರದಲ್ಲಿ ಮುಳುಗಿದ್ದ ಭೂಮಿಯನ್ನು ಮೇಲೆತ್ತಿದ ವರ್ಣನೆ ಇದೆ. ಇನ್ನೊಂದು ಕ್ರಿ.ಶ. ೯೫ರ ಶಾಸನದ್ದು—

ನಮಸ್ತ ಸ್ಮೈವರಾಹಾಯ ಲಿಲಯಾ ಚರತೇ ಮಹೀಂ
ಖುರಾಂತರ ಗತೋ ಯಸ್ಯಮೇರುಃ ಕಣಕಣಾಯತೇ ||16

ಈ ಶಾಸನ ಶ್ಲೋಕದಲ್ಲೂ ವರಾಹ ರೂಪಿಯಾದ ವಿಷ್ಣುವಿನ ವರ್ಣನೆ ಇದೆ. ಪಂಪನ ಕಾಲಕ್ಕೂ ಹಿಂದೆ ರಾಜನನ್ನೂ ಹೊಗಳುವಾಗ ವಿಷ್ಣುವನ್ನು ಹೊಗಳುವ ಒಂದು ಸಂಪ್ರದಾಯ ಬೆಳೆದು ಬಂದಿದೆ. ಇದಕ್ಕೆ ಕಾರಣ ಇಲ್ಲದಿಲ್ಲ. ನಾವು ಮೂರು ದೇವತೆಗಳನ್ನು ಕಲ್ಪಿಸಿಕೊಂಡಿದ್ದೇವೆ. ಬ್ರಹ್ಮ ಸೃಷ್ಟಿಕರ್ತನೆಂದೂ, ವಿಷ್ಣು ಸ್ಥಿತಿಕರ್ತನೆಂದೂ, ಮಹೇಶ್ವರ ಲಯಕರ್ತನೆಂದೂ, ಅಂಗೀಕರಿಸಿದ್ದೇವೆ. ಬ್ರಹ್ಮಮಹೇಶ್ವರರಿಗಿಲ್ಲದ ಗೌರವ ಘನತೆ ವಿಷ್ಣುವಾಗಿದೆ. ಕಾರಣವೇನೆಂದರೆ ಆತ ಸ್ಥಿತಿ ಕರ್ತ. ಎಲ್ಲರನ್ನು ಸಲಹುವ ವ್ಯಕ್ತಿ. ಆದ್ದರಿಂದಲೇ ಆತನನ್ನು ರಾಜರೊಡನೆ ಹೋಲಿಸಿ, ಅಥವಾ ಸಮಾಕರಿಸಿ ಕಾವ್ಯಗಳಲ್ಲಿ, ಶಾಸನಗಳಲ್ಲಿ ವರ್ಣಿಸುವುದು. ರಾಜನೂ ಸ್ಥಿತಿಕರ್ತನೆ. ಈ ದೃಷ್ಟಿಯಿಂದ ವಿಷ್ಣುಸ್ಥಿತಿ ಹೆಚ್ಚು ಕಂಡುಬರುತ್ತದೆ. ರಾಜಾ ಪ್ರತ್ಯಕ್ಷ ದೇವತಾ ಎಂಬುದು ಆಗಿನ ಕಾಲದ ನಂಬಿಕೆ. ರಾಜನಿಗೆ ದೇವಾಂಶ ಸಂಭೂತ ಗುಣಗಳೂ ಬೇಕು. ಅಂಥ ಗುಣಗಳಿದ್ದರಂತೂ ವಿಷ್ಣವನ್ನು ರಾಜನೊಡನೆ ಸಮೀಕರಿಸಿ ವರ್ಣಿಸುವುದು ಸರ್ವೇಸಾಮಾನ್ಯ. ಇಂಥ ವರ್ಣನೆಗಳನ್ನು ಹಲವಾರು ಕಾವ್ಯಗಳಲ್ಲೂ ನೋಡಬಹುದು. ಸಾಮಾನ್ಯವಾಗಿ ಇಂಥ ವರ್ಣನೆಗಳು ಒಂದೇ ಸಮನಿರುತ್ತವೆ. ಪಂಪನ ಈ ಪದ್ಯವನ್ನು ಹೋಲುವ ನಾಗವರ್ಮನ ಛಂದೋಂಬುಧಿಯ ಪೀಠಿಕಾವಸರದ ಈ ಪದ್ಯವನ್ನು ನೋಡಿ—

ಶ್ರೀವಧುವಂ ಪಯೋನಿಧಿ ಮಥನೋದ್ಭವ ವಸ್ತು ಸಮೂಹದೊಳ್ ಮಹಾ
ದೇವ ಸಮೇತರಿರ್ದಸುರರುಂ ಸುರರುಂ ಕುಡೆ ತನ್ನ ಮೆಚ್ಚುಗೊಂ
ಡಾವನ ಶೇಷ ಭೂಭುವನ ಮಂಡಲ ವಲ್ಲಭನಾದ ದೇವ ನೀ
ಗಾವಗಮೆಮ್ಮ ಬೇಟ್ಪವರಮಂ ದಯೆಯಿಂ ಸುಕವೀಂದ್ರ ವಲ್ಲಭಂ|| 17

ಇದರಲ್ಲಿ ಸಮುದ್ರಮಥನದ ಕಾಲದಲ್ಲಿ ಹುಟ್ಟಿಬಂದ ಲಕ್ಷ್ಮಿಯನ್ನು ಸುರರು ಅಸುರರೂ ಕೈಯೆತ್ತಿ ಕೊಡಲು ವಿಷ್ಣು ಆಕೆಯನ್ನು ಮೆಚ್ಚಿಕೆಯಾಗಿ ಸ್ವೀಕರಿಸಿದ ಪ್ರಸ್ತಾಪವಿದೆ. ಹೀಗೆ ವಿಷ್ಣುವಿನ ಒಂದೊಂದು ಅವತಾರದ ಒಂದೊಂದು ಸಂದರ್ಭವನ್ನು ದೊಡ್ಡದು ಮಾಡಿ ಕೊಂಡಾಡಿದ ಸಂದರ್ಭಗಳನ್ನು ನಾವು ನೋಡಬಹುದು.

---

16. BK ೧.೧.೧. ೪೭. ೯೫ AD.
17. ಛಂದೋಂಬುಧಿ—ನಾಗವರ್ಮ ಪ್ರಥಮಾಧಿಕಾರಂ ಪ. ೧. ಪು. ೧

ಒಂದು ಪದ್ಯದಲ್ಲಿ ಶ್ಲೇಷೆ ಇದ್ದರೆ ಅದು ಇಬ್ಬರಿಗೂ ಅನ್ವಯವಾಗುತ್ತದೆ ಎಂಬುದನ್ನು ಮರೆಯಬಾರದು. ಡಿ.ಎಲ್.ಎನ್ ಅವರು ಹೇಳುವಂತೆ 'ದೇವದಾನವರು ಸೇರಿ ಸಮುದ್ರಮಥನ ಮಾಡಿದಾಗ ಹುಟ್ಟಿಬಂದ ಲಕ್ಷ್ಮಿಯನ್ನು ಏನೂ ಕಷ್ಟವಿಲ್ಲದೆ ಸ್ವೀಕರಿಸಿದನು. ಅರಿಕೇಸರಿ ವೈರಿಗಳನ್ನು ಮೆಟ್ಟಿ ಭೂಮಿಯನ್ನು ತೆಗೆದುಕೊಂಡನು' ಎಂಬುದಾಗಲಿ 'ಅರಿಕೇಸರಿ ತನಗೇ ಮೀಸಲಾಗಿದ್ದ ಸುಪುಷ್ಪಪಟ್ಟವೆಂಬ ಕಿರೀಟ ವನ್ನು ಧರಿಸಿದ್ದರೆ ನಾರಾಯಣನು ಬರಿ ಪುಷ್ಪಪಟ್ಟವನ್ನು ತಾಳಿದನು' ಎಂಬರ್ಥ ಈ ಪದ್ಯದಲ್ಲಿ ಬರುವುದಿಲ್ಲ. ಲಕ್ಷ್ಮಿಯನ್ನು ವಿಷ್ಣುವಿಗೆ ಆರೋಪಿಸಿದರೆ ಸಂಪತ್ತನ್ನು ಅರಿಕೇಸರಿಗೆ ಆರೋಪಿಸಬಹುದು. ಸುಪುಷ್ಪಪಟ್ಟ ಅರಿಕೇಸರಿಗಷ್ಟೆ ಸೀಮಿತವಾಗದೆ ವಿಷ್ಣುವಿಗೂ ಅದು ಅನ್ವಯವಾಗುತ್ತದೆ ಎಂಬುದನ್ನು ಮರೆಯಬಾರದು.

ಹಾಗಾದರೆ ಈ ಪದ್ಯಕ್ಕೆ ಈ ವಿದ್ವಾಂಸರು ವಾಮನಾವತಾರದ ಕಲ್ಪನೆ ಮಾಡಿದ್ದೇಕೆ? ವಿಷ್ಣುವಿಗಿಂತ ನಾರಾಯಣ ಶ್ರೇಷ್ಠ ಎಂದದ್ದೇಕೆ? ಅದಕ್ಕೆ ಕಾರಣ 'ಜೀಯೆನೆ ಬೇಡಿಕೊಳ್ಳದೆ' ಎಂಬುದಾಗಿದೆ. ಜೀಯೆನೆ ಎಂದರೇನು? ಜೀಯೆನೆ ಎಂದರೆ ದಮ್ಮಯ್ಯ, ಹಸಾದ, ಎಂದು ದೈನ್ಯತೆಯಿಂದ ಬೇಡುವ ಒಂದು ಉಕ್ತಿ ವೈಚಿತ್ರ್ಯ ಅಷ್ಟೆ; ಇದೇ ಪದವನ್ನು ದುರ್ಯೋಧನ ಕರ್ಣನಿಗೆ ಅಂಗದ ರಾಜ್ಯಕ್ಕೆ ಪಟ್ಟಕಟ್ಟುವ ಸಂದರ್ಭದಲ್ಲಿ ಪ್ರಯೋಗಿಸಿದ್ದಾನೆ.

ಪೊಡಮಡುವರ್ ಜೀಯೆಂಬರ್
ಕುಡುದಯೆಗೆಯ್ಯೆಂ ಪ್ರಸಾದಮೆಂಬಿವು ಪೆಱರೊಳ್
ನಡೆಗೆಮ್ಮ ನಿನ್ನಯೆಡೆಯೊಳ್
ನಡೆಯಲ್ವೇಡೆನಗೆ ಕೆಳೆಯನೈ ರಾಧೇಯಾ 18

ದುರ್ಯೋಧನ ಮತ್ತು ಕರ್ಣರ ಆತ್ಮೀಯ ಗೆಳೆತನವನ್ನು ಸೂಚಿಸುವ ಈ ಪದ್ಯದಲ್ಲಿ 'ಜೀಯೆಂಬರ್' ಒಂದು ಆಡುಮಾತಿನ ಧಾಟಿಯಲ್ಲಿ, ಆದರೆ ಅಷ್ಟೇ ಸತ್ವಯುತವಾಗಿ ಬಳಸಲ್ಪಟ್ಟಿದೆ. ಇದು ಬಂದಿರುವ ಸಂದರ್ಭ, ಧಾಟಿ ಮುಂತಾದವು ಗಳನ್ನು ನೋಡಿದರೆ ಅಗಿನ ಕಾಲದಲ್ಲಿ ಆಡುಮಾತಿನ ಧಾಟಿಯಲ್ಲಿ ಅದನ್ನು ಬಳಸು ತ್ತಿದ್ದರೆಂದು ಕಾಣುತ್ತದೆ. ಸಾಮಾನ್ಯ ಜನರ ಆಡುಮಾತುಗಳನ್ನು, ಪದಗಳನ್ನು ಬಳಸುವಲ್ಲಿ ಪಂಪನದು ಎತ್ತಿದ ಕೈ 'ದೇಸಿಯೊಳ್ ಪುಗುವುದು, ಪೊಕ್ಕು ಮಾರ್ಗದೊಳೆ ತಳ್ಪುದು' ಪಂಪನ ಕಾವ್ಯ ರಚನೆಯ ರೀತಿ. ಅಪಾರ ಶಬ್ದ ಸಂಪತ್ತಿನಿಂದ ಕೂಡಿದ ಪಂಪಭಾರತ ಉತ್ತರ ಕನ್ನಡ, ಮೈಸೂರು ಕನ್ನಡ, ಘಟ್ಟದ ತಗ್ಗಿನ ಕನ್ನಡ ಹೀಗೆ ಹಲವಾರು ಪ್ರಾಂತ್ಯಭೇದಗಳನ್ನೂ, ಅವುಗಳ ಪದಸಂಪತ್ತನ್ನೂ ಪಡೆದಿದೆ. ಈ ಬಗ್ಗೆ ದಿ|| ಮುಳಿಯ ತಿಮ್ಮಪ್ಪಯ್ಯನವರು 'ನಾಡೋಜಪಂಪ'ದಲ್ಲಿ ಸವಿವರವಾಗಿ ಚರ್ಚಿಸಿದ್ದಾರೆ. ಇಂಥ ಭಾಷಾ ವೈವಿಧ್ಯತೆಯನ್ನು ಕರತಲಾಮಲಕ ಮಾಡಿಕೊಂಡ

18. ಪಂ. ಭಾ. ಆ. ೨. ಪ. ೮೫. ಪು. ೬೧.

ಪಂಪ 'ಜೀಯೆನೆ' ಎಂಬುದನ್ನು ಸಾಮಾನ್ಯವಾದ ಅರ್ಥದಲ್ಲಿ ಬಳಸಿದ್ದಾನೆ. ಇಂದಿಗೂ ಸಾಲವಸೂಲಿ ಮಾಡುವಾಗ ಆಡುಮಾತಿನಲ್ಲಿ 'ಜೀಯ, ಹಸಾದ, ಅಂತ ಬೇಡಾಕ್ ಬಂದಿಲ್ಲ. ಕೊಟ್ಟಸಾಲ ಕೊಡಯ್ಯ ಎನ್ನುವುದಾಗಲಿ, ಜೀಯ, ದಮ್ಮಯ್ಯ ಅಂತ ಬೇಡಾಕ್ ಬಂದಿಲ್ಲ, ಮಾಡಿದ ಕೂಲಿ ಕೇಳೋಕ್ ಬಂದಿದೀವಿ' ಎನ್ನುವ ಮಾತುಗಳನ್ನು ಗಮನಿಸಬಹುದು. ಮೇಲಿನ ಪದ್ಯದಲ್ಲಿ 'ಪೊಡಮಡುವರ್ (ನಮಸ್ಕರಿಸುತ್ತೇವೆ), ಜೀಯೆಂಬರ್ (ಜೀಯ ಎನ್ನುತ್ತೇವೆ) ಕೊಡಿ, ದಯಮಾಡಿ ಏಂ ಪ್ರಸಾದಿಪನ್' ಎಂಬಂಥ ಮಾತುಗಳು ಪೆಱರೊಳ್ (ಬೇರೆಯವರಲ್ಲಿ) ನಡೆಗೆ (ನಡೆಯಲಿ) ಎಮ್ಮ ನಿನ್ನ ಎಡೆಯೊಳ್ ನಡೆಯಲ್ವೇಡ (ನಮ್ಮ, ನಿಮ್ಮಲ್ಲಿ ನಡೆಯುವುದು ಬೇಡ) ಎನಗೆ ಕೆಳೆಯನೈ (ನನಗೆ ಗೆಳೆಯನಯ್ಯ) ರಾಧೇಯ (ಕರ್ಣ) ಎನ್ನುವ ದುರ್ಯೋಧನ ನಿಜಕ್ಕೂ ವಿನಯಸಂಪನ್ನ, ಸ್ನೇಹಸಂಪನ್ನ! ದೀನತೆಯ, ಬೇಡಿಕೆಯ, ಭೃತ್ಯರಾಡುವ ಮಾತುಗಳು ನನ್ನಲ್ಲಿ ಬೇಡ. ನೀನು ನನ್ನ ಆತ್ಮೀಯ ಗೆಳೆಯನಯ್ಯ. ನಾನು ರಾಜನಾಗಿರಬಹುದು. ಆದರೂ ಗೆಳೆತನಕ್ಕೆ ಸಾಟಿಯೆ ದೊರೆತನ? ಎಂಬ ಧ್ವನಿತಾರ್ಥವೂ ಇದೆ! ಆದ್ದರಿಂದ 'ಜೀಯೆನೆ' ಎಂದರೆ ದಮ್ಮಯ್ಯ ಹಸಾದ ಎಂಬ ದೈನ್ಯತೆ ಸೂಚಕ ಅರ್ಥವೇ ವಿನಾ ಈ ಸಂದರ್ಭದಲ್ಲಿ ಬೇರೆ ಅರ್ಥ ಬರುವುದಿಲ್ಲ. ಹಿಂದಿಯಲ್ಲಿ ಸೇವಕ ಒಡೆಯನ ಅಪ್ಪಣೆಯನ್ನು ಕೇಳುವಾಗ ಆಗಲಿ ಎನ್ನುವಾಗ 'ಜೀ ಹುಜೂರ್' ಎನ್ನುತ್ತಾನೆ. ಜೀ ಎಂಬ ಪದ ಬಳಕೆಯಲ್ಲಿದೆ. ಕುಮಾರವ್ಯಾಸನ ಕಾಲಕ್ಕಾಗಲೆ ಉರ್ದು ಫಾರ್ಸಿ ಪದಗಳ ಬಳಕೆ ಯಥೇಚ್ಛವಾಗಿ ಆಗುತ್ತಿತ್ತು. ಕುಮಾರವ್ಯಾಸನ ಭಾರತದಲ್ಲಿ 'ಜೀಯೆನೆ' ಎಂಬುದು ಬೇಕಾದಷ್ಟು ಕಡೆ ಬಂದಿದೆ. ನೋಡಿ–'ಕರ್ಣಾಟಕ ಭಾರತ ಕಥಾಮಂಜರಿ'—ಪು. ೨೧, ಪದ್ಯ ೨೭.

ನುತ ಶುಭೋದಯ ಜೀಯ ಶತ್ರು
ಪ್ರತತಿ ಸಂಹಾರಕ ಸಮಸ್ತ
ಕ್ಷಿತಿಪತಿ ಬ್ರಹ್ಮಾಯ ರಸ್ತು ವೆನುತ್ತ ಕೈ ನೆಗಹಿ

ಎಂದು ಸುಭಟರಿಗರುಹಿ ಸಾತ್ಯಕಿ
ಬಂದು ಕೃಷ್ಣನ ಕಿವಿಯ ಹತ್ತಿರ
ನಿಂದು ವದನವ ಚಾಚಿ ಬಿನ್ನಹ ಮಾಡಿದನು ನಗುತ
ಮಂದ ಮತಿಗಳು ತಪ್ಪಿದರು ಮನ
ಗುಂದಲಾಗದು ಜೀಯ ಚಿತ್ತೈ
ಸೆಂದಡಸುರಾರಾತಿ ನಗುತವೆ ಭೀಷ್ಮಗಿಂತೆಂದ[19]

ಶ್ರೀಕೃಷ್ಣನು ಸಂಧಿಕಾರ್ಯದ ರಾಯಭಾರ ಹೊತ್ತು ಬಂದ ಸಂದರ್ಭದ ಈ ಪದ್ಯಗಳಲ್ಲಿ ಮೊದಲನೆಯದು ದುರ್ಯೋಧನನ ಸಭೆಯಲ್ಲಿ ಭಟ್ಟಂಗಿಗಳು ಮಾಡಿದ ಸ್ತುತಿ ವಾಚಕದ ಪದ್ಯ. ಇಲ್ಲಿ ಜೀಯ ಪದ ಗಮನಿಸಿ. ಎರಡನೆಯದು ಲಾಳ ಮಾಳವ

19. ಕರ್ಣಾಟಕ ಭಾರತ ಕಥಾ ಮಂಜರಿ—ಕುಮಾರವ್ಯಾಸ. ಸಂ ೮. ಪ. ೩೯. ಪು. ೩೩೩.

ಮುಂತಾದ ಹಲವು ದೇಶದ ಜನ ನೆರೆದು—"ಜೀಯೆನುತಿರಲು ಕೋಮಲಿಕೆಯರು ಸಿತಚಾಮರವ ಚಿಮ್ಮಲು ಭೂಪ ಮೆರೆದನು ಸಿಂಹಪೀಠದಲಿ" (ಸಂ ೮. ೪೫. ಪ್ರ ೩೩೩) ಇದೂ ಅದೇ ಸಂದರ್ಭದ್ದು. ಇನ್ನು ಮೂರನೆಯದು ಸಂಧಿ ಪ್ರಸ್ತಾಪ ಮುರಿದು ಬೀಳಲು, ಮಾತಿನ ಚಕಮಕಿಯಲ್ಲಿ ದುರ್ಯೋಧನ ಕೃಷ್ಣನನ್ನು ಹಿಡಿದು ಕಟ್ಟಲು ಆಲೋಚಿಸಿದ್ದಾನೆ. ವಿಷಯ ತಿಳಿದ ಸಾತ್ಯಕಿ ಕೃಷ್ಣನ ಕಿವಿಯಲ್ಲಿ ಈ ವಿಷಯವನ್ನು ತಿಳಿಸುತ್ತಾನೆ. ಮಂದಮತಿಗಳು ತಪ್ಪುಮಾಡಿದರು, ಎದೆಗುಂದ ಬೇಡಿ ಸ್ವಾಮಿ ಎನ್ನುತ್ತಾನೆ. ಮೊದಲೆ ಪವಾಡ ಪುರುಷನಾದ ಶ್ರೀಕೃಷ್ಣನಿಗೆ ಭಯವೆಲ್ಲಿ? ಭೀಷ್ಮರೊಡನೆ ಆಲೋಚಿಸುತ್ತಾನೆ. ಭೃತ್ಯರು, ಭಕ್ತರು, ತಮ್ಮ ಸ್ವಾಮಿಗೆ ಒಡೆಯನಿಗೆ ಸ್ವಸ್ತಿಮಾಡುವಾಗ, ಹೊಗಳುವಾಗ, ಯಾವುದಾದರೂ ವಿಷಯ ತಿಳಿಸುವಾಗ ಜೀಯ ಎಂಬ ಪದಪ್ರಯೋಗ ಸರ್ವೇಸಾಮಾನ್ಯವಾಗಿ ಮಾಡು ವಂಥದ್ದು ಎಂಬುದು ಈ ಮೂರು ಸಂದರ್ಭಗಳನ್ನು ಗಮನಿಸಿದಾಗ ತಿಳಿಯುತ್ತದೆ. ಒಂದನೆಯದರಲ್ಲಿ ಸ್ವಸ್ತಿವಾಚನವಿದೆ; ಎರಡನೆಯದರಲ್ಲಿ ಹೊಗಳಿಕೆ ಇದೆ; ಮೂರನೆ ಯದರಲ್ಲಿ ಭಕ್ತ ತನ್ನ ಹಿತನೂ ದೇವನೂ ಆದವನಿಗೆ ಸಹಜವಾಗಿ, ಗುಟ್ಟಾಗಿ ತಿಳಿಸುವ ವಿಷಯ ನಿರೂಪಣೆ ಇದೆ. ಇಂಥ ಎಲ್ಲ ಕಡೆ ಸಾಮಾನ್ಯವಾಗಿ ಸ್ವಾಮಿ ಎಂಬ ಸಂಬೋಧನ ಪದದ ಬದಲು ಜೀಯ ಪದ ಬಳಕೆಯಲ್ಲಿತ್ತು ಎಂದು ಹೇಳ ಬಹುದು. ೮ನೇ ಸಂಧಿಯಲ್ಲಿ ಎರಡುಕಡೆ, ೯ನೇ ಸಂಧಿಯಲ್ಲಿ ಒಂದು ಕಡೆ ಬಂದಿದೆ. ಅಂದ ಮೇಲೆ ಇದರ ವಿಪುಲ ಪ್ರಯೋಗ ಕುಮಾರವ್ಯಾಸನಲ್ಲಿ ಹೆಚ್ಚು ಎಂಬುದನ್ನು ಮತ್ತೆ ಬೇರೆ ಹೇಳಬೇಕಾಗಿಲ್ಲ.

ಪಂಪನ ಕಾಲದಲ್ಲಿ ಅದು ಅಂಕುರವಾಗಿದೆ. ಆದ್ದರಿಂದ ಈ ಪದ್ಯದಲ್ಲಿ ಜೀಯೆನೆ ಬೇಡಿಕೊಳ್ಳದೆ ವಿರೋಧಿ ರಾಜರುಗಳನ್ನು ಸೋಲಿಸಿ, ಅತ್ತ ಸರಿಸಿ, ತುಳಿದು ಭೂಮಿಯನ್ನು ಗಳಿಸಿದ ವರಾಹ ಅವತಾರದ ಕಲ್ಪನೆ ಇದೆ. ದ್ರುಪದನು ತನ್ನ ಮಗಳನ್ನು ಕೊಟ್ಟು ವಿವಾಹಮಾಡಿ ಅರ್ಜುನನನ್ನು ತನ್ನ ಪಟ್ಟಣಕ್ಕೆ ಕರೆತಂದ ಸಂದರ್ಭದಲ್ಲಿ—

"ಪುರಾಂಗನಾ ಜನಂಗಳ ಜಯ ಜೀಯ ಮಾನರವ ನಿಕ್ಕ ಸೇಸೆ ಮನೋನು ರಾಗಮಂ ಬಳಯಿಸೆ ಪೊಕ್ಕನಾ ದ್ರುಪದ ಮಂದಿರಮಂ ಪರಸೈನ್ಯ ಭೈರವಂ" ಎನ್ನುತ್ತಾನೆ ಪಂಪ. (ಆ೩. ಪ೭೪. ಪು. ೮೬) ಇಲ್ಲಿ ಪುರಾಂಗನಾವನಿತೆಯರು 'ಜೀಯ' ಎನ್ನು ತ್ತಿದ್ದರಂತೆ! ಜೀಯ ಎಂದರೆ ಸ್ವಾಮಿ, ಮುಂತಾಗಿ ಹೊಗಳುವ ಶಬ್ದ ಕೇಳಿಸುತ್ತಿತ್ತು ಎನ್ನುತ್ತಾನೆ ಕವಿ. ಜೀಯ ಇಂಥ ಸಂದರ್ಭಗಳಲ್ಲಿ ಸಾಮಾನ್ಯವಾಗಿ ಬರುವಪದ.

ಜೀಯೆನೆ ಎಂಬ ಪದ ಒಂದು ಶಾಸನದಲ್ಲೂ ಪ್ರಯೋಗಿಸಲ್ಪಟ್ಟಿದೆ. ಪಂಪಾ ಶತಕದಲ್ಲಿ ಈ ಸೇವಾವೃತ್ತಿಯನ್ನು ಕುರಿತು ಹರಿಹರ "ಪೋಗೆನೆ ಪೋಪ ಬಾರೆಲವೊ ಬಾರೆನೆ ಜೀಯ ಹಸಾದವೆಂದು ಬೆಳ್ಗಾಗುತೆ ಬರ್ಪ ಮಾಣೆಲವೊ ಸುಮ್ಮ ನಿರೆಂದಡೆ ಸುಮ್ಮನಿರ್ಪ ಮತ್ತಾಗಳೆ ಝೊಂಕಿಸುತ ನಡುಗಿ ಬೀಳುವ ಸೇವೆಯ ಕಷ್ಟ

ವೃತ್ತಿಯಂ ನೀಗಿದೆನಿಂದು ನಿಮ್ಮ ದೆಶೆಯಿಂ ಕರುಣಾಕರ ಹಂಪೆಯಾಳ್ದನೆ !"[20] ಎನ್ನುತ್ತಾನೆ. ಇಲ್ಲಿ ಜೀಯ, ಹಸಾದ, ಎಂಬ ಪದಗಳನ್ನು ಗಮನಿಸಬೇಕು. ಜೀಯ ಎಂದ ತಕ್ಷಣ ಮೂರುಪಾದ ಭೂಮಿಯನ್ನು ಬೇಡಿ ಪಡೆದ ವಾಮನಾವತಾರದ ಕಲ್ಪನೆ ಮಾಡಬೇಕಾಗಿಲ್ಲ. ಹಾಗಾದರೆ ಈ ಪದ್ಯಕ್ಕೆ ಅರ್ಥವೇನು? ಹೇಗೆ ಅರ್ಥೈಸಬಹುದು? ನೋಡಿ—

ವಿಷ್ಣು ಪರ ಅರ್ಥ—

ಅರಾತಿ–ಶತ್ರು, ಸಾಧನ-(ಶತ್ರುಗಳನ್ನೇ) ಸಾಧನ ಸಹಾಯ ಮಾಡಿಕೊಂಡು ಸಹಾಯವೆಂಬ ಪಯೋನಿಧಿಯೊಳ್—ಸಮುದ್ರದಲ್ಲಿ, ಶ್ರೀಯಂ—ಲಕ್ಷ್ಮಿಯನ್ನು, ಪಡೆದುಂ—ಪಡೆದುಕೊಂಡು, ಜೀಯನೆ–ಹಸಾದ, ದಮ್ಮಯ್ಯ ಎಂದು, ಬೇಡಿಕೊಳ್ಳದೆ—ಬೇಡದೆ, ವಿರೋಧಿ–ಶತ್ರು, ನರೇಂದ್ರರನ್—ರಾಜರನ್ನು, ಒತ್ತಿ—ಹಿಮ್ಮೆಟ್ಟಿಸಿ, ಸೋಲಿಸಿ, ಧರಿತ್ರಿಯಂ—ಭೂಮಿಯನ್ನು, ಕೊಂಡುವಂ–ಪಡೆದು (ಹಾಗೆ ಲಕ್ಷ್ಮಿಯನ್ನೂ, ಭೂಮಿಯನ್ನೂ ಪಡೆದ ಮೇಲೆ ಪುಷ್ಪವೃಷ್ಟಿಯಾಗುವುದು ಸಹಜ) ಆತ್ಮೀಯ–ತನ್ನ, ಪ್ರಿಯವಾದ, ಸುಪುಷ್ಪ–ಒಳ್ಳೆ ಹೂವಿನ, ವೃಷ್ಟಿಯನ್ನು–ಮಳೆಯನ್ನು ಒಡಂಬಡೆ–ಒಪ್ಪುವಂತೆ, ಅಲಂಕಾರಗೊಳ್ಳುವಂತೆ, ತಾಳ್ದಿಯುಂ–ಹೊಂದಿ, ವಿರಾಜಮಾನವಾಗಿ, ಇಂತು—ಹೀಗೆ ಇರುವ ಉದಾತ್ತ ನಾರಾಯಣನಾದ–ಉತ್ತಮ ಗುಣವುಳ್ಳ, ಉದಾರ ಗುಣವುಳ್ಳ ನಾರಾಯಣನಾದ, ಅರಿಕೇಸರಿ–ಶತ್ರುಗಳಿಗೆ ಸಿಂಹಪ್ರಾಯನಾದ, ದೇವನ್–ದೇವನು, ವಿಷ್ಣುವು, ಎಮಗೆ–ನಮಗೆ, ಸೌಖ್ಯ ಕೋಟಿಯಂ–ಹಲವು ಸುಖಗಳನ್ನು, ಈಗೆ–ಕೊಡಲಿ, ದಯಪಾಲಿಸಲಿ. ಇಲ್ಲಿ ವಿರೋಧಿ ನರೇಂದ್ರರನ್ನು ಎಂದರೆ ಶತ್ರುಗಳಾದ ಹಿರಣ್ಯಾಕ್ಷ ಮತ್ತು ಹಿರಣ್ಯಕಶಿಪುರನ್ನು ಜೀಯ ಎಂದು ಬೇಡಿಕೊಳ್ಳದೆ, ಒತ್ತಿ–ಸೋಲಿಸಿ, ತಳ್ಳಿ, ಧರಿತ್ರಿಯಂ ಅಂದರೆ ಭೂಮಿಯನ್ನು ಕೊಂಡುವಂ ಅಂದರೆ ಪಡೆದುಕೊಂಡು ಎಂದು ಅರ್ಥೈಸಬೇಕು. ಇಲ್ಲಿ ಲಕ್ಷ್ಯಾರ್ಥ ಬಹಳ ಮುಖ್ಯ ವಾಮನ ಜೀಯ ಎಂದು ಬೇಡಿ ಭೂಮಿಯನ್ನು ಪಡೆದ. ಇಲ್ಲಿ 'ಜೀಯನೆ ಬೇಡದೆ' ಎಂದಿರುವುದರಿಂದ ಬೇಡದೆ ಸಂಪಾದಿಸಿದ ಭೂಮಿಯನ್ನು ರಸಾತಲದಿಂದ ಉದ್ಧರಿಸಿದ್ದು ವರಾಹ. ಆದ್ದರಿಂದ ಇದಕ್ಕೆ ವಾಮನಾವತಾರದ ಕಥೆ ಅನ್ವಯಿಸದು.

ಇದನ್ನು ಅರಿಕೇಸರಿಯ ಪರವಾಗಿ ಅರ್ಥಮಾಡುವಾಗ—"ಶತ್ರುವೆಂಬ ಸೈನ್ಯ ಸಾಗರದಲ್ಲಿ ಸಂಪತ್ತನ್ನು ಪಡೆದು, ಹಸಾದ ಎಂದು ಬೇಡಿಕೊಳ್ಳದೆ ವಿರೋಧಿ ರಾಜರನ್ನು ಸೋಲಿಸಿ ಭೂಮಿಯನ್ನು ಸಂಪಾದಿಸಿ, ತನ್ನ ಪ್ರಿಯವಾದ ಸುಪುಷ್ಪ ವೃಷ್ಟಿಯನ್ನ ಜನ ಮೆಚ್ಚುವ ಹಾಗೆ (ಒಪ್ಪವಾಗಿ) ತಾಳಿದ, ಉದಾತ್ತ ನಾರಾಯಣ ಬಿರುದಾಂಕಿತ ಅರಿಕೇಸರಿ ದೇವನು, ರಾಜನು ನಮಗೆ ಹಲವು ಸುಖಗಳನ್ನು ದಯಪಾಲಿಸಲಿ" ಎಂದಾಗುತ್ತದೆ. ಇದರ ಹೊರತು ಬೇರೆ ಅರ್ಥಮಾಡಲು

---

20. ಪಂಪಾಶತಕ—ಹರಿಹರ.

ಸಾಧ್ಯವಿಲ್ಲ. ಪ್ರಸ್ತುತ ಪದ್ಯದಲ್ಲಿ—ಇಳಿಕೆ, ಏರಿಕೆ ಯಾವುದೂ ಇಲ್ಲ. ವಿಷ್ಣುವಿಗಿಂತ ಅರಿಕೇಸರಿ ಹೆಚ್ಚೆಂಬುದಾಗಲಿ, ಅರಿಕೇಸರಿಗಿಂತ ವಿಷ್ಣು ಹೆಚ್ಚೆಂಬುದಾಗಲಿ, ಈ ಪದ್ಯದಲ್ಲಿಲ್ಲ. ವಿಷ್ಣು ಅರಿಕೇಸರಿ ಅವಿಭಾಜ್ಯ. ವಿಷ್ಣು ಸಮುದ್ರ ಮಥನದಿಂದ ಲಕ್ಷ್ಮಿಯನ್ನು ಪಡೆದನು. ಆದರೆ ಹಾಗೇ ಅರಿಕೇಸರಿಯೂ ಶತ್ರುಸೈನ್ಯವೆಂಬ ಸಾಗರ ದಲ್ಲಿ ಸಂಪತ್ತನ್ನು (ಒಂದುವೇಳೆ ಒಬ್ಬ ಪ್ರೇಯಸಿಯನ್ನೂ ಪಡೆದಿದ್ದರೂ ಪಡೆದಿರ ಬಹುದು. ಏಕೆಂದರೆ ಅರಿಕೇಸರಿ 'ಪ್ರಿಯಗಳ್ಳ'ನೂ ಹೌದು ! 'ನಾಡೋಜ ಪಂಪ' ದಲ್ಲಿ ಈ ಪ್ರಸ್ತಾಪವಿದೆ)[21] ಪಡೆದನು. ವಿಷ್ಣುಕೂಡ ಜೀಯ, ಹಸಾದ, ಎಂದು ಬೇಡದೆ ವಿರೋಧಿ ರಾಜರನ್ನು ತುಳಿದು, ತಳ್ಳಿ, ಅಡಗಿಸಿ ಭೂಮಿಯನ್ನು ಸಂಪಾದಿಸಿ ದನು. ಹಾಗೇ ಅರಿಕೇಸರಿ ಕೂಡ ಜೀಯ, ಹಸಾದ, ಎನ್ನದೆ ವಿರೋಧಿ ರಾಜರನ್ನು ಸೋಲಿಸಿ ಭೂಮಿಯನ್ನು ಪಡೆದನು. ಹೀಗೆ ಲಕ್ಷ್ಮಿಯನ್ನೂ ಭೂಮಿಯನ್ನೂ ಪಡೆದ ಮೇಲೆ ಉಳಿದದ್ದು ಸುಪುಷ್ಪ ವೃಷ್ಟಿ. ಆದ್ದರಿಂದ ವಿಷ್ಣು, ಅರಿಕೇಸರಿ ಕೂಡ ತನ್ನ ಪ್ರಿಯವಾದ ಸುಪುಷ್ಪ ವೃಷ್ಟಿಯನ್ನು ಪಡೆದರು, ಹಾಗೆ ಕಂಗೊಳಿಸಿದ ವಿಷ್ಣು ಮತ್ತು ಅರಿಕೇಸರಿಯರು ನಮಗೆ ಹಲವು ಸುಖಗಳನ್ನು ದಯಪಾಲಿಸಲಿ, ಕೊಡಲಿ ಎಂಬುದು ಒಟ್ಟು ತಾತ್ಪರ್ಯ! ಇಲ್ಲಿ ರೂಪಕಾಲಂಕಾರಗಳಿದ್ದರೂ ಉಪಮಾಲಂಕಾರಕ್ಕೆ ಪರಿವರ್ತಿ ಸಿದಾಗ ಈ ಮೇಲಿನ ಅರ್ಥ ಹೊಮ್ಮುತ್ತದೆ. ಈ ಪದ್ಯ ಇಬ್ಬರಿಗೂ ಅನ್ವಯಿಸು ವಂಥದ್ದು. ತಾರ್ಕಿಕವಾಗಿ ವಿಚಾರಮಾಡಿದರೆ ವಾಮನಾವತಾರದ ಕಲ್ಪನೆ ಈ ಪದ್ಯ ದಲ್ಲಿದ್ದಿದ್ದರೆ 'ಜೀಯೆನೆ' ಎಂಬುದು ಅವನಿಗೇ ಅನ್ವಯಿಸಿದ್ದು ಎಂದು ಹೇಳಬಹುದಿತ್ತು. ಹಾಗೆ ಒಂದು ವೇಳೆ ಹೇಳಿದ ಎಂದು ಕೊಂಡರೆ ತನ್ನ ಕಥಾನಾಯಕನ ಪರವಾಗಿ ಏನು ಹೇಳಬೇಕು ? ಅರಿಕೇಸರಿಯ ಪರವಾಗಿ ಹೇಗೆ ಹೇಳಬೇಕು? ಆದ್ದರಿಂದ ಇಲ್ಲಿ ಯಾವ ಮುಖದಿಂದ ನೋಡಿದರೂ, ಹೇಗೆ ನೋಡಿದರೂ ವರಾಹ ಅವತಾರದ ಕಲ್ಪನೆ ಇದೆಯೇ ವಿನಾ ವಾಮನಾವತಾರದ ಕಲ್ಪನೆ ಇಲ್ಲ. ಇಲ್ಲಿ ಆಧಿಕ್ಯಸೂಚನೆಯೂ ಇಲ್ಲ.

ಪಂಪಭಾರತದ ಪ್ರಥಮಾಶ್ವಾಸದ ಪ್ರಥಮ ಪದ್ಯದಂತೆಯೇ ಎರಡನೆಯ ಮತ್ತು ಮೂರನೆಯ ಪದ್ಯಗಳಲ್ಲೂ ಶ್ಲೇಷೆ ಇದೆ. ಮಹೇಶ್ವರನನ್ನೂ ಪ್ರಚಂಡ ಮಾರ್ತಾಂಡ ನನ್ನೂ ಸ್ತುತಿಸುವ ಈ ಪದ್ಯಗಳಿಗೆ ಅರ್ಥ ಹೇಳುವಾಗ ಒಬ್ಬರೂ ಆಧಿಕ್ಯದ ಸೂಚನೆ ಯನ್ನು ತಿಳಿಸುವುದಿಲ್ಲ. ಪ್ರಥಮ ಪದ್ಯವನ್ನೂ ಇವುಗಳಿಗೆ ಅರ್ಥ ಮಾಡಿದಂತೆ ವ್ಯಾಖ್ಯಾನ ಮಾಡಬೇಕೇ ವಿನಾ ಬೇರೆ ರೀತಿಯಲ್ಲಿ ಮಾಡಲು ಬರುವುದಿಲ್ಲ ಎಂಬುದು ಸ್ಪಷ್ಟ. ಆದ್ದರಿಂದ ಪ್ರಥಮಾಶ್ವಾಸದ ಪ್ರಥಮ ಪದ್ಯಕ್ಕೂ ಆಧಿಕ್ಯ ಸೂಚನೆಯ ಅರ್ಥಮಾಡಿದರೆ ಸರಿಯಲ್ಲವೆನ್ನಬೇಕು. ನೇರವಾಗಿ ಸ್ಪಷ್ಟವಾಗಿರುವ ಈ ಪದ್ಯಕ್ಕೆ ಮೇಲ್ಕಂಡ ವಿದ್ವಾಂಸರು ಕೊಟ್ಟಿರುವ ವ್ಯಾಖ್ಯಾನ, ಅರ್ಥ, ಅಷ್ಟು ಸಮಂಜಸವಲ್ಲ ಎಂಬುದನ್ನು ಅನಿವಾರ್ಯವಾಗಿ ಹೇಳಬೇಕಾಗಿದೆ. ಅರಿಕೇಸರಿ 'ಉದಾತ್ತ

21. ನಾಡೋಜಪಂಪ–ಮುಳಿಯ ತಿಮ್ಮಪ್ಪಯ್ಯ, ಪು. ೧೫೪

ನಾರಾಯಣ' ಎಂಬ ಬಿರುದನ್ನು ಪಡೆದಿದ್ದಾನೆ. ನಾರಾಯಣ ಬರಿ ನಾರಾಯಣ ; ಇವನೊ 'ಉದಾತ್ತನಾರಾಯಣ' ಎಂದು ಆಧಿಕ್ಯ ಸೂಚಿಸಿ ಅರ್ಥಮಾಡುವುದು ಆಭಾಸ. ಸ್ವತಃ ಪಂಪ 'ಉದಾತ್ತನಾರಾಯಣ' ಎಂಬುದಕ್ಕೆ ಹದಿನಾಲ್ಕನೆಯ ಆಶ್ವಾಸದ ಮುಪ್ಪತ್ತೇಳನೇ ವಚನದಲ್ಲಿ–

''ಸಕಳಭುವನ ತಳಭಾರಮನವಯವದಿಂ ತಾಳ್ದಿದುದಾತ್ತ ವೃತ್ತಿಯೊಳುದಾತ್ತ ನಾರಾಯಣನುಂ''—ಎಂದು ವಿವರಿಸಿದ್ದಾನೆ. ಎಂದರೆ ನಾರಾಯಣನಿಗಿಂತ ಇವನು ಹೆಚ್ಚು ಎಂದಲ್ಲ, ಆ ಮಾತಿನ ಅರ್ಥ ಉದಾತ್ತ ವೃತ್ತಿಯಿಂದ ಇವನು ಉದಾತ್ತ ನಾರಾಯಣನಾದ ಎಂದರ್ಥ ಅಷ್ಟೆ. ಉದಾರ ಗುಣವುಳ್ಳವನಾದ್ದರಿಂದ ನಾರಾಯಣನೂ ಉದಾತ್ತನಾರಾಯಣನಾದ. ಇದಕ್ಕೆ ಕಾರಣಗಳನ್ನು ಕೊಟ್ಟು ಚರ್ಚಿಸಿರುವುದರಿಂದ ಸಾರಸ್ವತ ಪ್ರಪಂಚ ಕವಿಯ ಆಶಯವೇನು ಎಂಬುದನ್ನು ಆಂತರಿಕ ಮತ್ತು ಬಾಹ್ಯ ಪ್ರಮಾಣಗಳನ್ನು ಸರಿಯಾಗಿ ತೂಗಿ ನೋಡಿ ಸ್ವೀಕರಿಸ ಬಲ್ಲುದೆಂದು ನಂಬಿರುವೆ.

ಆಕರ ಗ್ರಂಥಗಳು

೧. ಪಂಪಭಾರತ—ಭಾಗ—೧. ಪಂಪ (ಪರಿಷತ್ ಪ್ರಕಟಣೆ)

೨. ನಾಡೋಜ ಪಂಪ—ಮುಳಿಯ ತಿಮ್ಮಪ್ಪಯ್ಯ.

೩. ವಚನ ರಾಮಾಯಣ—ಪಟ್ಟವರ್ಧನ ಅಶ್ವತ್ಥನಾರಾಯಣ ಶೆಟ್ಟಿ.

೪. ಪಂಪಭಾರತ ಭಾಗ–೨—ಪಂಪ (ಮೈಸೂರು ವಿಶ್ವವಿದ್ಯಾಲಯ ಪ್ರಕಟಣೆ)

೫. ಕ್ರಿ.ಶ. ೭೦೮ರ ರಾಯಘಡದ ತಾಮ್ರಪಟ.

೬. ಕ್ರಿ.ಶ. ೯೯೫ರ ಶಾಸನ BK ೧.೧.೧–೪೭–೯೯೫ AD.

೭. ಛಂದೋಂಬುಧಿ—ನಾಗವರ್ಮ

೮. Legends, Myths and Epics of India–Thamas.

೯. ಪಂಪಭಾರತ ದರ್ಶನ—ಕೆ. ವೆಂಕಟರಾಮಪ್ಪ.

೧೦. ಪಂಪಭಾರತ ದೀಪಿಕೆ—ಡಿ. ಎಲ್. ನರಸಿಂಹಾಚಾರ್.

೧೧. ಪಂಪಾಶತಕ—ಹರಿಹರ

೧೨. ಕರ್ಣಾಟ ಭಾರತ ಕಥಾಮಂಜರಿ—ಕುಮಾರವ್ಯಾಸ.

ರಾ. ಗಣೇಶ್

ಸಂಸ್ಕೃತ ಸಾಹಿತ್ಯದಲ್ಲಿ ದಾರಿದ್ರ್ಯ

I

ಲೇಖನದ ಶೀರ್ಷಿಕೆಯನ್ನೋದುತ್ತಿದ್ದಂತೆಯೇ ಕೆಲವು ಕಟ್ಟಾ ಸಂಸ್ಕೃತಾಭಿಮಾನಿ ಜನಕ್ಕೆ ಬೆರಗೆನಿಸಬಹುದು—ದೇವವಾಣಿಯಲ್ಲಿ, ಅದರ ಸಾಹಿತ್ಯದಲ್ಲಿ ದಾರಿದ್ರ್ಯವೇ ? ಬತ್ತದ ಗಂಗೆಯಾದ ಸಂಸ್ಕೃತದಲ್ಲಿ ಸಾಹಿತ್ಯ ದರಿದ್ರತೆಯೇ ಎಂದು. ಆದರೆ ಇದು ಸಂಸ್ಕೃತ ಸಾಹಿತ್ಯದ ದಾರಿದ್ರ್ಯವಲ್ಲ. ಆ ಸಾಹಿತ್ಯದಲ್ಲಿ ವರ್ಣಿತವಾದ ದಾರಿದ್ರ್ಯದ ಬಗ್ಗೆ ಲೇಖನ.

ನನಗೊಬ್ಬರು ಪರಿಚಯವಿದ್ದ ಸಹೃದಯರು ಹೇಳಿದಮಾತು—"ಇತರ ಯಾವುದೇ ಭಾಷಾಸಾಹಿತ್ಯದಲ್ಲಿರುವ ಎಂಥದೇ ರಸಭಾವ ತೀವ್ರ ಖಂಡಗಳನ್ನಾಗಲೀ ಸಂಸ್ಕೃತದಲ್ಲಿ ಅದು ಇನ್ನೂ ಹೆಚ್ಚು ಪರಿಷ್ಕೃತ, ಪರಿಣತ, ಪ್ರಬುದ್ಧ, ಪರಿಣಾಮ ರಮಣೀಯ ಮತ್ತು ಪರಿಪೂರ್ಣ ರೂಪದಲ್ಲಿರುವುದನ್ನು ತೋರಿಸಬಲ್ಲೆ". ಇದು ಷೇಕ್ಸ್‌ಪಿಯರಿಗಿಂತ ಸಂಸ್ಕೃತಕ್ಕೆ ಸಮುಚಿತ ಎಂದರೆ ಅತಿಶಯೋಕ್ತಿಯಲ್ಲ.

ದೇವ-ಗಂಧರ್ವ-ಯಕ್ಷ-ಕಿನ್ನರರ ಕಥೆಗಳೂ, ರತ್ನ-ಮಾಣಿಕ್ಯ-ಮಣಿ ಹರ್ಮ್ಯಗಳೂ, ಲೋಕಾಂತರ ಪ್ರವಾಸಮಾಡುವ ನಾಯಿಕಾ-ನಾಯಕರೂ ಇರುವ, ಹಾಸುಹೊಕ್ಕಾಗಿ ಶ್ರೀಮಂತಿಕೆಯೇ ಮೆರೆದ ಸಂಸ್ಕೃತ ಸಾಹಿತ್ಯದಲ್ಲಿ ದಾರಿದ್ರ್ಯವೂ ಸಂಪದ್ಭರಿತವಾಗಿದೆ—ರಸಾಲಂಕಾರಧ್ವನಿ ವೈವಿಧ್ಯಗಳಿಂದ.

ಈ ಅನರ್ಘ್ಯ ದಾರಿದ್ರ್ಯವರ್ಣನಾ ಸಮುದ್ರದಲ್ಲಡಗಿದ ಅನಂತವೂ ಅಪಾರವೂ ಆದ ಮಣಿ-ಮೌಕ್ತಿಕ-ಪ್ರವಾಳಗಳು ಮುಳುಗುಗಾರನ ಶ್ವಾಸಸ್ತಂಭನ ತ್ರಾಣ ಪ್ರಮಾಣಾನುಸಾರವಾಗಿ ಅಲ್ಲವೇ ದೊರಕುವುದು ! ನಮ್ಮುಸಿರು ಸೋತೀತೇ ಹೊರತು ಈ ಸಂಪನ್ನಿಧಿ ಬತ್ತಲಾರದು. ಅಂತೆಯೇ ಪ್ರಸ್ತುತ ಲೇಖನ ಲೇಖಕನ ಮಿತಿಯ ಮಟ್ಟಗೋಲಷ್ಟೇ.

II

ಸಂಸ್ಕೃತದ ಮಹಾನ್ ನಾಟಕಕಾರ ಭಾಸನ ಒಂದು ರೂಪಕದ ಹೆಸರೇ 'ದರಿದ್ರ ಚಾರುದತ್ತಂ' ಇದನ್ನೇ ಬಳಸಿ-ಬೆಳೆಸಿದ ಶೂದ್ರಕ ಕವಿಯ ಮೃಚ್ಛಕಟಿಕಪ್ರಕರಣ

ವಸ್ತುನಿಷ್ಠ ಸಾಹಿತ್ಯದಲ್ಲಿ ಮೈಲಿಗಲ್ಲಾಗಿದೆ. ಇದರ ನಾಯಕನ ಬಡತನದ ತೊಳಲಾಟ ಸ್ವಯಂ ಅವನಿಂದಲೇ ಹೀಗೆ ವರ್ಣಿತವಾಗಿದೆ.

ದಾರಿದ್ರ್ಯದಿಂದ ಲಜ್ಜಿಪ, ಲಜ್ಜಿತನು ತೇಜದೂರನಪ್ಪನ್
ನಿಸ್ತೇಜನಪ್ಪನಪಮಾನಿತನು, ಅದರಿಂ ವಿರಕ್ತಿಸಹಜ
ನಿರ್ವಿಣ್ಣನೀತದುಃಖಿಪ, ಶೋಕಿತನು ಬುದ್ಧಿಹೀನನಪ್ಪನ್.
ಬುದ್ಧಿಹೀನಂ ಲಯಿಪ ; ಬಡತನಂ ಸರ್ವಾಪದಕ್ಕಾಸ್ಪದಂ.

(ದಾರಿದ್ರ್ಯಾತ್ ಹ್ರಿಯಮೇತಿ ಹ್ರೀಪರಿಗತೋ ಪ್ರಭ್ರಶ್ಯತೇ ತೇಜಸಾ
ನಿಸ್ತೇಜಃ ಪರಿಭೂಯತೇ ಪರಿಭವಾನ್ನಿರ್ವೇದಮಾಪದ್ಯತೇ |
ನಿರ್ವಿಣ್ಣಃ ಶುಚಮೇತಿ ಶೋಕಪಿಹಿತೋ ಬುದ್ಧ್ಯಾಪರಿತ್ಯಜ್ಯತೇ
ನಿರ್ಬುದ್ಧಿಃ ಕ್ಷಯಮೇತ್ಯಹೋ ನಿಧನತಾ ಸರ್ವಾಪದಾಮಾಸ್ಪದಂ||

ಅಷ್ಟೇ ಅಲ್ಲದೆ ಇದು ;

ಚಿಂತೆಯ ನಿವಾಸ, ಪರಿಹಾಸಕ್ಕೆಗುರಿ, ವೈರಿಯಹುದು ಮತ್ತೊಂದು.
ಸಖರಿಂ ಜುಗುಪ್ಸೆಯಂ ನೆಂಟರೊಳು ಮುನಿಸನುಂ ತಂದಿಡುವುದು.
ಕಾಡಿಗೋಗಲು ಮನಸ್ಸಪ್ಪುದು, ಪರಾಭವಂ ಸತಿಯಿಂದಲೂ ನಿಶ್ಚಿತಂ.
ಎದೆಯ ಬೇಗುದಿಯಗ್ನಿಯುರಿದೊಮ್ಮೆ ಸುಮ್ಮನಿರದನಿಶಂ ದಹಿಸುತಿರ್ಪುದು.

(ನಿವಾಸಶ್ಚಿಂತಾಯಾಃ ಪರಪರಿಭವೋ ವೈರಮಪರಂ
ಜುಗುಪ್ಸಾ ಮಿತ್ರಾಣಾಂ ಸ್ವಜನ ಜನವಿದ್ವೇಷಕರಣಂ|
ವನಂಗಂತುಂ ಬುದ್ಧಿರ್ಭವತಿ ಚ ಕಲತ್ರಾತ್ಪರಿಭವೋ
ಹೃದಿಸ್ಥೋ ಶೋಕಾಗ್ನಿರ್ನಚದಹತಿ ಸಂತಾಪಯತಿ ಚ||

ಇಷ್ಟುಮಾತ್ರವೇ ಅಲ್ಲದೆ ;

ಸಂಗವ ಮಾಡರಾರುಮೊಲವಿಂ ನುಡಿಯಾಡರು ಆರುಮೀತನೊಳ್
ಪೋಗೆ ಧನಾಢ್ಯರಾಲಯದ ಪರ್ವಕೆ ಕೀಳ್ಗರೆದಲ್ತೆ ನೋಡುವರ್
ನಾಚುತ ಚಿಂದಿ ಬಟ್ಟೆಗಳಿನಾಜನರಿಂದತಿ ದೂರ ನಿಲ್ಲುತಂ
ಚಿಂತಿಪ ಘೋರಮಾರನೆಯಪಾತಕಮೆನ್ನುತಕಿಂಚನತ್ವಮಂ.

(ಸಂಗಂ ನೈವಹಿ ಕಶ್ಚಿದಸ್ಯ ಕುರುತೇ ಸಂಭಾಷತೇ ನಾದರಾತ್
ಸಂಪ್ರಾಪ್ತೋ ಗೃಹಮುತ್ಸವೇ ಧನಿನಾಂ ಸಾವಜ್ಞಮಾಲೋಕ್ಯತೇ|
ದೂರಾದೇವ ಮಹಾಜನಸ್ಯವಿಹರತ್ಯಲ್ಪಚ್ಛದೋ ಲಜ್ಜಯಾ
ಮನ್ಯೇ ನಿರ್ಧನತಾ ಪ್ರಕಾಮಮಪರಂ ಷಷ್ಠಂ ಮಹಾಪಾತಕಂ ||)

ಇದಕ್ಕಿಂತ ಮಿಗಿಲಾಗಿ ಚಾರುದತ್ತನು ತನ್ನಲ್ಲಿ ಶಾಶ್ವತ ಮೈತ್ರಿಯಿಂದ ನೆಲಸಿದ ಬಡತನವು ತನ್ನ ಮರಣಾನಂತರ ಯಾರಲ್ಲಿ ಆಶ್ರಯ ಹೊಂದುವುದ? ಅದು ಅನಾಥವೇ ಆಗಿಬಿಡುವುದೇ ಎಂದು ಸಂದೇಹಿಸುವುದಂತೂ ಅಸಾಧಾರಣವಾದ ದಾರಿದ್ರ್ಯ ವಿಚರ್ಯಾಸವಾಗಿದೆ! ಅಲ್ಲದೆ ನಿಷ್ಕ್ರಿಯತಾಪಾ ದರಿದ್ರತಾ (ಬಡತನವೇ ಇಚ್ಚಿಲ್ಲ) ಎಂದೂ ವ್ಯಥಿಸುವನು.

III

ವಸ್ತುಕಗಳಲ್ಲಿ ದಾರಿದ್ರ್ಯದ ದಾಂಧಲೆ ಹೆಚ್ಚಿಲ್ಲವಾದರೂ ಮುಕ್ತಕಗಳಲ್ಲಿ ಅದರ ಸೊಗಸೇ ಸೊಗಸು. ಕೆಲವು ಪದ್ಯಗಳನ್ನು ಓದಿದಾಗಲಂತೂ ಇಂಥ ಕವಿತಾರತ್ನಗಳ ರಚನೆಗಾಗಿ ನಮಗೆ ಬಡತನ ಬಂದರೂ ಸಾರ್ಥಕ ಎಂಬ ಭಾವನೆ ಬಾರದಿರದು.

ಈ ಸುಭಾಷಿತಗಳ ವಿಶೇಷತೆ ಕೇವಲ ಬಡತನದ ಬವಣೆಯ ಬಣ್ಣನೆಯಲ್ಲಿರದೆ, ಸಮಾಜದ ಚಿರಂತನ ಶಾಪಗಳಾದ ಹಲವಾರು ಇನ್ನಿತರ ದುರ್ವ್ಯವಸ್ಥೆಗಳ ಕಟು ಸತ್ಯದ ಮಾರ್ಮಿಕ ವಿಡಂಬನೆಯೂ ಸೇರಿ ಮನಸ್ಸಿನಲ್ಲಿ ಆಳವಾಗಿ ನಿಲ್ಲುತ್ತವೆ. ಅಂಥ ಕರುಳು ಕತ್ತರಿಸುವ ಭಾವ ನಿರ್ಭರ ಶ್ಲೋಕವೊಂದು ಹೀಗಿದೆ.

ಬಾಲವೈಧವ್ಯದಿಂ ಬೇಯ್ವ ಕುಲನಾರಿಯರ ಕುಚಗಳಂತೆ
ಮೇಲೇಳುತೆಂತುಡುಗುವುವೊ ಅಂತೆ ಬಡವರ ಮನೋರಥಗಳು.

(ಬಾಲವೈಧವ್ಯದಗ್ಧಾಣಾಂ ಕುಲಸ್ತ್ರೀಣಾಂ ಕುಚಾ ಇವ।
ಉತ್ಪದ್ಯಂತೇ ವಿಲೀಯಂತೇ ದರಿದ್ರಾಣಾಂ ಮನೋರಥಾಃ॥

ಈ ಶ್ಲೋಕದ ಧ್ವನಿ ಒಂದು ಪ್ರಬಂಧಕ್ಕೇ ವಸ್ತುವಾಗಬಲ್ಲದು. ಮತ್ತೊರ್ವ ಕವಿಯ ಅಭಿಪ್ರಾಯ ಹೀಗಿದೆ. ದಾರಿದ್ರ್ಯವನ್ನು ವಿಧಿಯು ಕೊಡುವುದಾದರೂ ಯಾರಿಗೆ? ಹೇಗೆ?

ಪರಿಕಿಸಿ ಕುಲೀನತೆಯ, ಕಲ್ಕೆಯನು, ರೂಪ, ಬಲ ಶೀಲಗಳನು ;
ನಿಪುಣನೊಲು ವಿಧಿ ಕೊಡುವನಲ ! ಕನ್ನೆಯೊಲು ಬಡತನವನು !

(ಪರೀಕ್ಷ ಸತ್ಕುಲಂ ವಿದ್ಯಾಂ ರೂಪಂ ಶೌರ್ಯಂ ಸುಶೀಲತಾಂ ।
ವಿಧಿರ್ದದಾತಿ ನಿಪುಣಃ ಕನ್ಯಾಮಿವ ದರಿದ್ರತಾಮ್॥

ಇನ್ನೊಬ್ಬನ ಕಟೂಕ್ತಿಯಂತೂ, ಮಾರ್ಮಿಕ. ಆತ ಶುದ್ಧವಾದ ಪಾಂಡಿತ್ಯಕ್ಕೂ ಬಡತನಕ್ಕೂ ತೀರದ ನಂಟೆಂದು ಅನುಭವಿಸಿ ತಿಳಿದಾತ. ಹೀಗೆ ವ್ಯಥಿಸಿ ತನ್ನಂತೆ ಬೇರೆಯವರು ಮೋಸಹೋಗಬಾರದೆಂದಾತನ ಆಶಯ. ಈ ಪದ್ಯವನ್ನು ಕ್ಷೇಮೇಂದ್ರ ತನ್ನ ಔಚಿತ್ಯ ವಿಚಾರ ಚರ್ಚೆಯಲ್ಲಿ ವಿಮರ್ಶಿಸಿ ಇದು ವಿದ್ಯಾನಿಂದನೆಯ ತುಚ್ಛ ನುಡಿ ಎಂದು ಜಂಕಿಸಿದ್ದಾನೆ. ಆದರೆ ಇದರ ವಿಷಾದ ಧ್ವನಿ ರಸಜ್ಞರಿಗೇ ವೇದ್ಯ.

ವ್ಯಾಕರಣವನುತಿಂಬರಲ್ಲ, ಹಸಿದವರು.
ಕಾವ್ಯರಸವೀಂಟರೆ, ಬಾಯಾರಿದವರು.
ಛಂದಸ್ಸಿನಿಂದ ರ ಕುಲವು ವರ್ಧಿಸಲಿಲ್ಲ.
ಹಣವನೊಂದನೆಗಳಿಸು ಕಲೆಗೆ ಫಲವಿಲ್ಲ.

(ಬುಭುಕ್ಷಿತೈರ್ವ್ಯಾಕರಣಂ ನ ಭುಜ್ಯತೇ ಪಿಪಾಸಿತೈಃ ಕಾವ್ಯರಸೋ ನಪೀಯತೇ।
ನ ಛಂದಸಾ ಕೇನಚಿದುದ್ಧೃತಂ ಕುಲಂ ಹಿರಣ್ಯಮೇವಾರ್ಜಯ ನಿಷ್ಫಲಾಃಕಲಾಃ)

ಮತ್ತೊಬ್ಬರ್ವನಿಗೆ ತಾವು ವಿದ್ಯಾವಂತರಾಗಿದ್ದೂ ನಿತ್ಯಾನಿತ್ಯ ವಿವೇಕವಿದ್ದೂ ಹೊಟ್ಟೆಯ ಪಾಡಿಗಾಗಿ ವಿದ್ಯಾವಣಿಜರಾಗುತ್ತಿರುವುದರ ಬಗ್ಗೆ ಸಂಕಟ. ಇದಕ್ಕೆ ಕಾರಣ ಬಡತನವೇ ಅಲ್ಲವೇ !

ಈ ಸುಟ್ಟಹೊಟ್ಟೆಗೇನನು ತಾನೆಗೆಯ್ಯರೀ ಪಂಡಿತ ಜನರ್ !
ವೇಣ್ಗೋತಿಯಂತೆ ಸರಸತಿಯನೇ ಕುಣಿಸುವರ್ ಮನೆಮನೆಯಮುಂದೆ!!

(ಅಸ್ಮದಗ್ಧೋದರಸ್ಯಾರ್ಥಂ ಕಿಂ ನ ಕುರ್ವಂತಿ ಪಂಡಿತಾಃ ।
ವಾನರೀಮಿವ ವಾಗ್ದೇವೀಂ ನರ್ತಯಂತಿ ಗೃಹೇಗೃಹೇ ॥)

ಭರ್ತೃಹರಿ ಈ ರೀತಿಯ ಜ್ಞಾನವಿಕ್ರಯಕ್ಕೆ ಹೀಗೆ ಸಮಾಧಾನ ಹೇಳುತ್ತಾನೆ. ನಿರ್ಜೀವಿಗಳೇ ಹೊಟ್ಟೆಯನ್ನು ಮೊದಲು ಗಮನಿಸುವಾಗ ಜೀವಿಗಳ ಗತಿ ಹೇಗೆ ಭಿನ್ನ?

ಬಾಯ್ಗೆ ಬೋನವನಿಡಲು ಲೋಕದಲ್ಲಾರುವಶವಾಗದಿಹರು?
ಮುಖಲೇಪದಿಂದ ಮಧುರಧ್ವನಿಯ ಮಾಳ್ಪುದು ಮೃದಂಗವಲ್ತೆ

(ಕೋನ ಯಾತಿವಶೋ ಲೋಕೇ ಮುಖೇ ಪಿಂಡೇನ ಪೂರಿತಃ ।
ಮೃದಂಗೋ ಮುಖಲೇಪೇನ ಕರೋತಿ ಮಧುರಧ್ವನಿಮ್ ॥)

ಇನ್ನೊಬ್ಬ ಕವಿಯು ಈ ರೀತಿ ವಾಸ್ತವ ಪ್ರಪಂಚದ ನಗ್ನಸತ್ಯವನ್ನು ಸುಲಭವಾಗಿ ಒಪ್ಪಿಕೊಳ್ಳದೆ ತನ್ನ ವಿದ್ಯೆಗೆ ಧನ-ಅಧಿಕಾರಗಳ ನಾಥರಾದ ರಾಜರು ಗೌರವ ತೋರುವರೆಂದು ನಂಬಿ ರಾಜಾಸ್ಥಾನಗಳಿಗೆ ಹೋಗಿ ಕಹಿ ಘಟನೆಗಳನ್ನನುಭವಿಸಿದನೇನೋ. ಪಾಪ ! ಆತನ ಋಜುಬುದ್ಧಿಗೆ ಇತರರ ವಕ್ರಮಾರ್ಗಗಳು ಗೋಚರಿಸಿದ್ದರೆ ತಾನೇ ರಾಜದರ್ಶನವಾಗುವುದು ! ಕೊನೆಗೂ ರೋಸಿಹೋಗಿ ತನ್ನ ಅನುಭವವನ್ನು ಹೀಗೆ ದಾಖಲಿಸಿದ್ದಾನೆ.

ನಟರಲ್ಲ, ವಿಟರಲ್ಲ, ಹೊಗಳು ಭಟ್ಟರುಮಲ್ಲ,
ಸೇರುವವರಲ್ಲ ಸಭ್ಯೇತರವಿಚಾರದಲ್ಲಿ ;
ದೊರೆಯ ಕಾಣಲಿಕ್ಕಿಲ್ಲ ನಾವಾರು ?
—ಕುಚ ಭಾರನಮ್ರ ನಾರಿಯರುಮಿನ್ನಲ್ಲ !!

(ನ ನಟಾಃ ನವಿಟಾಃ ನ ಶಂಸಕಾಃ ನ ಚ ಸಭ್ಯೇತರವಾದ ಚಂಚವಃ।
ನೃಪಮೀಕ್ಷಿತುಮತ್ರ ಕೇ ವಯಂ ಸ್ತನಭಾರಾನಮಿತಾ ನ ಯೋಷಿತಾಃ॥)

ಮತ್ತೊಬ್ಬರ್ವ ಕವಿ ಈ ರೀತಿಯಾಗಿ ಯಾಚಿಸಲು ಲಜ್ಜೆಯಿಲ್ಲದೆ ಹೊರಟು ಪರಾಭವಗೊಳ್ಳುವುದೇ ದಾರಿದ್ರ್ಯಕ್ಕಿಂತ ಹೀನವೆಂದು ಘೋಷಿಸಿದ್ದಾನೆ.

ಬಡತನದ ಕಡುಕೇಡು ಯಾಚನೆಯದಲ್ಲದೆ ಧನಾಲ್ಪತೆಯುಮಲ್ಲ.
ಕೌಪೀನಧರನಾದರೂ ಶಿವನು ಪರಮೇಶನೆಂದು ಜಸಪಡೆದನಲ್ತೆ.
(ದಾರಿದ್ರ್ಯಸ್ಯಾಪರಾಮೂರ್ತಿರ್ಯಾಂಚಾ ನ ದ್ರವಿಣಾಲ್ಪತಾ।
ಅಪಿ ಕೌಪೀನವಾನ್ ಶಂಭುಸ್ತಥಾಪಿ ಪರಮೇಶ್ವರಃ ॥)

ಶ್ರೀಕೃಷ್ಣನ ಮಿತ್ರ ಕುಚೇಲ (ಸುಧಾಮ) ತನ್ನ ಗರ್ಭದಾರಿದ್ರ್ಯಕ್ಕೆ ವಿಖ್ಯಾತ. ಅದು ಹೇಗೋ ಅವನಿಗೆ ಶ್ರೀಕೃಷ್ಣದರ್ಶನವಾಯಿತು. ಪರಮಾತ್ಮನೇನೋ ಸರ್ವಭೇದಾತೀತ, ಆದರೆ ಕುಚೇಲ ಮಾನವನೇ ತಾನೇ. ತನ್ನ ಹೆಸರೇ ಸೂಚಿಸುವಂತೆ ತಾನು ಕು+ಚೇಲ (ಹರಕು ಬಟ್ಟೆಯವನು, ಕೊಳೆಬಟ್ಟೆಯವನು) ಹೀಗಾಗಿ ತನ್ನ ಸ್ಥಿತಿ ತನಗೇ ಲಜ್ಜೆತರಿಸಿತು. ಆದರೆ ಸ್ವಲ್ಪ ಹಾಸ್ಯ ರಸಿಕತೆಯಿಂದಾಗಿ ಪರಮಾತ್ಮನನ್ನೇ ತನ್ನ ಹರಕು ಬಟ್ಟೆಗೆ ಹೋಲಿಸಿ ಶ್ಲೇಷದಿಂದ ಸ್ತುತಿಸಿ ಸಾಧಿಸಿಬಿಟ್ಟ.

ಅನೇಕಗುಣಯುಕ್ತನಂ ಸಹಸ್ರಾಕ್ಷನಂ ಪುರಾತನನಂ,*
ಆದ್ಯಂತರಹಿತನಂ ನನ್ನ ವಸ್ತ್ರದೊಲಿರ್ಪನಂ ನಮಿಪೆ.

(ಅನೇಕ ಗುಣ ಸಂಯುಕ್ತಂ ಸಹಸ್ರಾಕ್ಷ ಪುರಾತನಂ।
ಆದ್ಯಂತ ರಹಿತಂ ವಂದೇ ಮದ್ವಸ್ತ್ರ ಸದೃಶಂ ವಿಭುಂ॥)

ಆದರೇನು? ವಿಧಿವಿಲಾಸಕ್ಕೆ ದನಿಗೂಡಿಸಿ ಗೋಳಿಡುವವರೇ ನಮ್ಮಲ್ಲಿ ಬಹಳ. ಭೋಜರಾಜನನ್ನು ಬೇಡಲುಹೋದ ಕವಿಯೊಬ್ಬನ ಮೊರೆ ಹೀಗಿದೆ.

ದೊರೆಯೆ ಹೊನ್ನಧಾರೆಯಿಂದ ನೀನೆಲ್ಲೆಡೆ ಮಳೆಯ ಸುರಿಪೆ ;
ಮಂದಭಾಗ್ಯ ಕೊಡೆಯ ಹಿಡಿಯೆ ಎನಗಿಲ್ಲವು ಹನಿಗಳೂ !!

(ರಾಜನ್! ಕನಕಧಾರಾಭಿ : ತ್ವಮಿ ವರ್ಷತಿ ಸರ್ವತಃ ।
ಅಭಾಗ್ಯ ಛತ್ರ ಸಂಛನ್ನೇ ಮಯಿ ನಾಯಾಂತಿ ಬಿಂದವಃ ॥)

ಈ ಪಾಪದ ಕವಿಯು ರಾಜನನ್ನು ಯಾಚಿಸಲು ಬಂದುದಾದರೂ ಏಕೆಂದು ಅವನೇ ಮನಂಬುಗುವಂತೆ ಬಣ್ಣಿಸಿದ್ದಾನೆ.

‘ಅರಳು ಬೇಕೇ ಅರಳು’ ಎಂಬ ಬೀದಿಯ ಕೂಗ ಕೇಳಿ ಗೃಹಿಣಿ
ಯತ್ನದಿಂದೆಂತೊ ಮಗುವಿನ ಕಿವಿಯ ಮುಚ್ಚಿದಳು ದೀನವದನೆ.
ಬೇರೊಂದು ಗತಿಯಿರದೆ ನನ್ನ ಕಂಗಳ ಕೋಡಿ ತುಳುಕುತಿತ್ತು.
ನನ್ನೆದೆಯ ಶೂಲವದು ; ನೀ ಕೀಳಲಳವೆಂದು ತಿಳಿದೆ ನಾನು.

(ಅಯೇ ಲಾಜಾ ಉಚ್ಚೈಃ ಪಥಿ ವಚನಮಾಕರ್ಣ್ಯ ಗೃಹಿಣೀ
ಶಿಶೋಃ ಕರ್ಣೌ ಯತ್ನಾತ್ಸುಪಿಹಿತವತೀ ದೀನವದನಾ ।
ಮಯಿ ಕ್ಷೀಣೋಪಾಯೇ ಯದಕೃತದೃಶಾವಶ್ರು ಬಹುಲೇ
ತದಂತಃ ಶಲ್ಯಂ ಮೇ ತ್ವಮಸಿ ಪುನರುದ್ಧರ್ತುಮುಚಿತಃ॥)

ಕದಿಯಲು ಬಂದ ಕಳ್ಳನ ಮನಸ್ಸನ್ನೂ ಕರಗಿಸಿದ ಗರ್ಭದರಿದ್ರ ದಂಪತಿಗಳ ಸಂಭಾಷಣೆಯನ್ನು ನಮಗಾಗಿ ಕವಿಯೋರ್ವ ದಾಖಲಿಸಿದ್ದಾನೆ.

---

*ಇಲ್ಲಿ ‘ಗುಣ’ ಎಂದರೆ ದಾರದೆಳೆಗಳು ಎಂದೂ, ‘ಸಹಸ್ರಾಕ್ಷ’ ಎಂದರೆ ಸಹಸ್ರ ಛಿದ್ರಗಳೆಂದೂ, ‘ಆದ್ಯಂತರಹಿತ’ನೆಂದರೆ ಅಂಚು–ಸೆರಗು ಹಾಳಾಗಿ ಹೋಗಿರುವುದೆಂದೂ ಶ್ಲೇಷಾರ್ಥ.

'ಬಟ್ಟೆಯ ತುಂಡನಿತ್ತ ಕೊಡು, ಇಲ್ಲದಿರೆತ್ತಿಕೊ ನೀನೆ ಕಂದನಂ'
'ನಾಥ! ಇದೀ ನೆಲಂ ಬರಿದು, ನಿನ್ನಡಿಯಲ್ಲಿದೆ ಹೊಟ್ಟದಾದರೂ'
ರಾತ್ರಿಯೊಳಿಂತು ದಂಪತಿಗಳಾಡುವುದಾಲಿಸಿ ಬಂದ ಕಳ್ಳನೆ–
ಲ್ಲಿಂದಲೋ ಕದ್ದ ಕಂಬಳಿಯನತ್ತ ಬಿಸಾಡುತಳುತ್ತಲೋಡಿದನ್.

('ವಾಸಃ ಖಂಡಮಿದಂ ಪ್ರಯಚ್ಛ ಯದಿ ವಾ ಸ್ವಾಂಕೇಗೃಹಾಣಾರ್ಭಕಂ'
'ರಿಕ್ತಂ ಭೂತಲಮತ್ರನಾಥ ! ಭವತಃ ಪೃಷ್ಟೇಪಲಾಲೋಚ್ಚಯಃ' ।
ದಂಪತ್ಯೋರಿತಿ ಜಲ್ಪಿತಂ ನಿಶಿಯದಾ ಚೋರಃ ಪ್ರವಿಷ್ಟಸ್ತದಾ
ಲಬ್ಧಂ ಕರ್ಪಟ ಮನ್ಯತಸ್ತದುಪರಿ ಕ್ಷಿಪ್ತ್ವಾರುದನ್ನಿರ್ಗತಃ)

ಬಡತನಕ್ಕೆ ಮೂರ್ಛನ ಪ್ರಾಯವಾಗಿ ಸುಡುಗಾಡಿನ ಹೆಣ–ಬಡವ–ಇವರ ಸಂಭಾಷಣೆ ಯೊಂದು ಹೀಗಿದೆ.

'ಬಡತನದೊಜ್ಜೆಯನ್ನು ಹೊರಲೇಳ್ ಚಣಮಾದೊಡ ಮೆನ್ನದಂ ಸಖ!
ಉಪಕೃತನಪ್ಪೆನಾಂ ಮರಣಸೌಖ್ಯವ ಪೊಂದುತಲಲ್ಪಕಾಲದೊಳ್'
–ಬಡವನ ಮಾತನಾಲಿಸಿ ಪರೇತಧರಿತ್ರಿಯೊಳಿರ್ದುದಾಶವಂ
ಬಡತನಕಿಂ ಮಿಗಿಲ್ ಮಿಗಿಲು ಸಾವೆನುತಿರ್ದಿತುಕೆಮ್ಮನೊಮ್ಮೆಲೇ !!

ವೇದವ್ಯಾಸರೇ ಹೇಳಿಬಿಟ್ಟಿದ್ದಾರಲ್ಲ !

ಯಾರುಧನಿಕನೊ ಅವನೆ ಮಾನವಂ ಸತ್ಕುಲಜ,
ಆತನೇ ವಾಗ್ಮಿ ಮೇಣ್ ದರ್ಶನೀಯಂ.
ಅವನೆ ಪಂಡಿತ, ಆತನಲ್ತೆ ಗಂಡು! ಗುಣಜ್ಞ ;
ಎಲ್ಲ ಗುಣಗಳು ಹೊನ್ನನಾಶ್ರಯಿಸಿವೆ.

(ಯಸ್ಯಾಸ್ತಿ ವಿತ್ತಂ ಸ ನರಃಕುಲೀನಃ ಸಏವ ವಕ್ತಾ ಸ ಚ ದರ್ಶನೀಯಃ ।
ಸ ಪಂಡಿತಃ ಸೋಪಿ ಪುಮಾನ್ ಗುಣಜ್ಞಃ ಸರ್ವೇಗುಣಾಃ ಕಾಂಚನ ಮಾಶ್ರಯಂತಿ ॥

ಸಮಸ್ತಗುಣಗಳೆಲ್ಲವೂ ನಾಶವಾಗಿ ಹಣವೊಂದಲ್ಲದೆ ಮತ್ತೇನೂ ಬೇಡ— [ಅರ್ಥೋಽಸ್ತು ನಃ ಕೇವಲಂ] ಎಂದು ಭರ್ತೃಹರಿ ಸಹ ವ್ಯಾಸರೊಡನೆ ದನಿಗೂಡಿ ಸಿದ್ದರೂ ಕೆಲವರಾದರೂ ವಿಧಿನಿಯಮದಲ್ಲಿ ನಂಬಿಕೆಯನ್ನಿರಿಸಿದ್ದರು. ಅವರ ವಾದ ಹೀಗಿದೆ.

ತಂದೆರತ್ನಾಕರು, ಒಡಹುಟ್ಟಿದವಳು ಸಿರಿ ;
ತಿರುಪೆಗಾಗಿಯೆ ಶಂಖ ರೋದಿಸುವುದು ಭಾಗ್ಯಾನುಸಾರವಲ್ತೆ ಫಲಂಗಳು.

(ಪಿತಾ ರತ್ನಾಕರೋಯಸ್ಯ ಲಕ್ಷ್ಮೀರ್ಯಸ್ಯ ಸಹೋದರೀ ।
ಶಂಖೋ ರೋದಿತಿ ಭಿಕ್ಷಾರ್ಥೀ ಫಲಂಭಾಗ್ಯಾನುಸಾರತಃ॥)

ತಕ್ಕ ಉಡುಪಿಲ್ಲದೆ ಸಮಾನರಲ್ಲಿ ಪರಿಭವವನ್ನನುಭವಿಸಿದ ಬಡವರ ಪಾಡು ಬರೀ ಮನುಜರಿಗೆ ಮಾತ್ರ ಸೀಮಿತವಾಗಿಲ್ಲ ತ್ರಿಮೂರ್ತಿಗಳವರೆವಿಗೂ ಈ ಪ್ರಾರಬ್ಧ ಇದ್ದೇ ಇದೆಯೆಂದು ಇನ್ನೊಬ್ಬ ಕವಿಯ ತರ್ಕ.

ಉಡುಗೆತೊಡುಗೆಯಿನೇನದೆಂಬರಾದರು ದಿಟದಿ
ಯೋಗ್ಯತೆಯು ಕಾಣಲವುಗಳೆ ಮುಖ್ಯಮಲ್ತೆ.
ಪೀತಾಂಬರವ ಕಂಡು ತನ್ನ ಕನ್ನೆಯನಿತ್ತ;
ಚರ್ಮಾಂಬರಕೆ ವಿಷವನಿತ್ತನು ಸಮುದ್ರ !

(ಕಿಂ ವಾಸಸಾ ತತ್ರ ವಿಚಾರಣೀಯಂ ವಾಸಃ ಪ್ರಧಾನಂ ಖಲು ಯೋಗ್ಯತಾಯಾಃ
ಪೀತಾಂಬರಂ ವೀಕ್ಷ್ಯದದೌಸ್ವಕನ್ಯಾಂ ಚರ್ಮಾಂಬರಂ ವೀಕ್ಷ್ಯ ವಿಷಂ ಸಮುದ್ರಃ॥)

ಮತ್ತೆ ಕೆಲವರು, ಪಂಚತಂತ್ರದ ಭುಕ್ತಧನನಂಥವರು—ಕೇವಲ ಸ್ವಸುಖ ಮಾತ್ರ ಪ್ರಯೋಜಕವಾದ ಸಂಪತ್ತಿಗಿಂತ ಸಮಸ್ತರಿಗೂ ಉಪಭೋಗಾರ್ಹ ಸಂಪತ್ತು ಬೇಕೆಂದು—ಸಾಮ್ಯವಾದವನ್ನಾರಂಭಿಸಿದ್ದಾರೆ !!

ಗಣಿಕೆಯೊಲು ಪಥಿಕಜನ ಸವಿಯಲಾಗದೆ ಸದಾ
ಗರತಿಯೊಲು ಬಿಮ್ಮನಿಹ ಸಿರಿಯಿನೇನಹುದು?

(ಕಿಂ ತಯಾ ಕ್ರಿಯತೇ ಲಕ್ಷ್ಮ್ಯಾ ಯಾ ವಧೂರಿವ ಕೇವಲಾ ।
ಯಾನವೇಶ್ಯೇವ ಸಾಮಾನ್ಯಾ ಪಥಿಕೈರುಪಭುಜ್ಯತೇ॥)

('ಉತ್ತಿಷ್ಠ! ಕ್ಷಣಮೇಕಮುದ್ವಹ ಸಖೇ! ದಾರಿದ್ರ್ಯಭಾರಂ ಮಮ.
ಶ್ರಾಂತಸ್ತಾವದಂ ಚಿರಾಚ್ಚಮರಣಂ ಸೇವೇ ತದೀಯಂ ಸುಖಂ।
ಇತ್ಯುಕ್ತಂ ಧನವರ್ಜಿತಸ್ಯ ವಚನಂ ಶ್ರುತ್ವಾ ಶ್ಮಶಾನೇ ಶವಃ
ದಾರಿದ್ರ್ಯಾನ್ಮರಣಂ ವರಂವರಮಿತಿಜ್ಞಾತ್ವೈವ ತೂಷ್ಣೀಂ ಸ್ಥಿತಃ॥)

ಇವುಗಳಿಂದ ಹೇಸಿ ಯಾವನೋ ಕವಿ ಈ ದಾರಿದ್ರ್ಯವನ್ನೇಕೆ ಯಾರೂ ನಾಶ ಮಾಡಲಿಲ್ಲನೆಂದು ಹಲುಬುತ್ತಾನೆ.

ಸುಟ್ಟಂ ಖಾಂಡವವಂ ಕಿರೀಟಿಯುಧಟಿಂ ದಿವ್ಯದ್ರುಮಾಕೀರ್ಣಮಂ
ಸುಟ್ಟಂ ವಾಯುಸುತಂ ದಶಾಸ್ಯ ಪುರಿಯಂ ಸ್ವರ್ಣಪ್ರಭಾಲಂಕೆಯಂ
ಸುಟ್ಟಂ ಶಂಕರ ಮಾರನಂ ಸಮುಚಿತಂ ತಾನಲ್ತಿದೀ ಕಾಯಕಂ
ಈ ದಾರಿದ್ರ್ಯವ ಲೋಕ ತಾಪಕವನೇ ಕಾರುಂ ಸುಡಲ್ಕೊಲ್ಲರಯ್?

(ದಗ್ಧಂ ಖಾಂಡವ ಮರ್ಜುನೇನ ಬಲಿನಾ ದಿವ್ಯದ್ರುಮಾಲಂಕೃತಂ
ದಗ್ಧಾ ವಾಯುಸುತೇನ ರಾವಣಪುರೀ ಲಂಕಾ ಮಹಾ ಹೇಮ ಭೂಃ ।
ದಗ್ಧಃ ಪಂಚಶರಃ ಪಿನಾಕ ಪತಿನಾ ತೇನಾಪ್ಯಯುಕ್ತಂ ಕೃತಂ
ದಾರಿದ್ರ್ಯಂ ಜನತಾಪಕಾರಕಮಿದಂ ಕೇನಾಪಿದಗ್ಧಂ ನಹಿ!)

ಕೊನೆಯದಾಗಿ ಪ್ರಕೃತ ಲೇಖಕನ ಪದ್ಯವೊಂದು ಹೀಗಿದೆ.

ಬೆಳೆದುನಿಂದಿಹ ಮಗಳಕಂಡು ಹರ್ಷಿಪನವನು ನನಗಾಕೆಯೇಮನಕೆನೋವತಹಳು.
ಬಂಧುಮಿತ್ರರ ಬರವುಯಾರಿಗಾನಂದಕರವೊ ನನಗದೇ ದುಃಖವನು ತರುತಿರುವುದು.
ಯಾರಿಗೀಲೋಕಸುಖಕೆಂದಿರ್ಪುದೋ ಅದೇ ನನಗೆ ಪರಿಹಾಸಮಂಮಾಡುತಿಹುದು.
ಏನೆಂಬೆ! ದೇವನಾರಿಗೆ ಕರುಣೆ ನಿಧಿಯಹನೊ ನನಗಾತನೇ ಪರಮಕಠಿನ ಮೂರ್ತಿ.

ಚೋದ್ಯವಿದುಧನಿಕನಿಗು ಎನಗುಂವೊದೇವಸ್ತು—
ಚಯುವದುವೆ ಬೇರೆನಿಪ ಫಲವನಿತ್ತಿಹವು.
ದಿಟವ್ಯೆಸೆ ಜಲಜಾತ ಕಮಲ–ಕುಮುದಗಳಲ್ಲಿ
ರವಿ–ಶಶಾಂಕರು ತರುವ ಪರಿಣಾಮ ಭಿನ್ನ (ಬೇರೆ)

(ತರುಣೀಂಸುತಾಂ ವೀಕ್ಷ್ಯಯಸ್ಯವೋದೋ ಮಯಿತು ಸ್ವೈವಾತ್ಮವಿಕ್ಲೇಶ ಹೇತುರಧುನಾ
ಬಂಧುಮಿತ್ರಾಗಮನವಮಾನಂಡದಂ ಯಸ್ಯ ಮೇತದೇವಪತನ ಮಾನಯತಿ ಹಾ !
ಯಸ್ಯಲೋಕೋಯಮುಪಭೋಗಾರ್ಹಏವಾಸ್ತಿ ಮಹ್ಯಂಸ ಏವೋಪಹಸನ ಕಾರೀ
ಕಿಮಥ ! ಯಸ್ಯೇಶ್ವರೋ ಕರುಣಾವಂಯೋಽಶಂ ಸೋಹಿಮೇ ಕಾಠಿನ್ಯಮೂರ್ತಿರವಿಹಾ !

ಚಿತ್ರಮತ್ರ ಶ್ರೀಯುತೇಚಮಯಿ ವಸ್ತೂನಿ
ತಾನ್ಯೇವ ವೈಷಮ್ಯ ಕಾರಕಾನಿ ಸದಾ !
ತಥ್ಯಮಂಬುನಿ ಜಾತ ರಾಜೀವ–ಕುಮುದಯೋಃ
ಅರ್ಕೇಂದು ಪರಿಣಾಮ ಏವ ಭಿನ್ನತರಃ॥)

IV

ಈ ಮನೋಹರ ಕವಿತೆಗಳ ವಿಶ್ಲೇಷಣೆಯಿಂದ ಎದ್ದು ಕಾಣುವ ವಿಚಾರವೇನೆಂದರೆ ರಸಾರ್ದ್ರತೆ. ಭಾರತೀಯ ತತ್ತ್ವಪ್ರಣಾಲಿ ಯಾವುದೇ ಕ್ಷೇತ್ರದಲ್ಲಿ ಪ್ರವಹಿಸಲಿ, ಅದರ ಸತ್ತ್ವ ಅಖಂಡವಾಗಿಯೇ ಉಳಿಯುತ್ತದೆ. ಅಲ್ಲದೆ ಇಂದಿನ ಸಾಹಿತ್ಯದಲ್ಲಿ, ವಿಶೇಷತಃ ಪಾಶ್ಚಾತ್ಯರ ನವನವೀನ ವಿಮರ್ಶನ ಸಿದ್ಧಾಂತಗಳ ಧೋರಣೆಯಿಂದ ಪರಿಪ್ಲಾವಿತ ರಚನೆಗಳಲ್ಲಿ ಕಾಣುವ ಅಸಹನೆ, ಉಸಿರುಕಟ್ಟಿಸುವ ಅನವಶ್ಯಕವಾದ ತೊಳಲಾಟ, ಪರಕೀಯತೆಯ ಮುಖವಾಡ, ಜೋಡಿಸಿದ ತೊಳಲಾಟ, ಸ್ವಯಂ ಆರೋಪಿಸಿಕೊಂಡ—ಅಥವಾ ಆರೋಪಿತವಾಗದೆ ನರಳುವ ಪಾಟಲುಗಳು ಇಲ್ಲದೆಯೇ ನಿಜವಾದ ಕಳಕಳಿಯಿಂದ ಹೃದಯಕ್ಕೇ ನೇರವಾಗಿ ಮುಟ್ಟಿ ಚಿರಪರಿಣಾಮ ಬೀರಿ ಲೋಕೋತ್ತರವಾದ ರಮಣೀಯತೆಯನ್ನು ತೋರಿಯೂ ವಸ್ತುನಿಷ್ಠವಾಗಿರಬಲ್ಲ ಸ್ವಂತಿಕೆಯ ಛಾಪು ಇಲ್ಲಿ ಗಮನಾರ್ಹ. ಅಷ್ಟೇ ಅಲ್ಲದೆ ಉದ್ದಿಷ್ಟ ವಿಚಾರವನ್ನು ನಿರುದ್ವಿಗ್ನವಾಣಿಯಲ್ಲಿ ಸಾಲಂಕೃತ ಛಂದೋಮಾಧ್ಯಮದಲ್ಲಿ ತಿಳಿಸಿಯೂ ಅಪಾರ ಧ್ವನಿ-ವ್ಯಂಜಕತೆಯಿಂದ ಸಹಜವಾಗಿಯೇ ಘನಪರಿಣಾಮವನ್ನು ಬೀರಬಲ್ಲ ಕಸುವು ವಿಸ್ಮಯಕಾರಿ. ಬಹುಶಃ ದಾರಿದ್ರ್ಯದಂಥ ವಸ್ತುವನ್ನು ಔಚಿತ್ಯಪೂರ್ಣವಾಗಿ ಉದಾತ್ತವೂ ಮಾರ್ಮಿಕವೂ ಆದ ಶೈಲಿಯಲ್ಲಿ ನಿರ್ವಹಿಸುವುದು; ವಿಶೇಷತಃ ಕಾವ್ಯಮಯ ರಾಮಣೀಯತೆಯನ್ನೂ ಬಿಡದೆ!—ಕೇವಲ ಸಂಸ್ಕೃತಕ್ಕೇ ಸಾಧ್ಯವೇನೋ ಅಥವಾ ಆ ಭಾಷಾಸಾರವನ್ನು ಹೀರಿ ಬೆಳೆದ ಭಾರತೀಯ ನುಡಿಕಟ್ಟಿಗೇ ಅಳವೇನೋ.

ಆಧಾರ ಗ್ರಂಥಗಳು

1. ಸುಭಾಷಿತ ರತ್ನ ಭಂಡಾಗಾರ [ನಿರ್ಣಯ ಸಾಗರ ಮುದ್ರಣಾಲಯ]
2. ಜಲ್ಹಣನ ಸೂಕ್ತಿಮುಕ್ತಾವಲೀ [ನಿರ್ಣಯ ಸಾಗರ ಮುದ್ರಣಾಲಯ]
3. ವಿಷ್ಣುಶರ್ಮನ ಪಂಚತಂತ್ರ [ನಿರ್ಣಯ ಸಾಗರ ಮುದ್ರಣಾಲಯ]
4. ಬಲ್ಲಾಳಸೇನನ ಭೋಜಪ್ರಬಂಧ [ಚೌಖಾಂಬಾ ಅಮರ ಭಾರತೀ ಪ್ರಕಾಶನ]
5. ಶೂದ್ರಕನ ಮೃಚ್ಛಕಟಿಕ ಪ್ರಕರಣ [ಚೌಖಾಂಬಾ ಅಮರ ಭಾರತೀ ಪ್ರಕಾಶನ]
6. ಭರ್ತೃಹರಿಯ ನೀತಿಶತಕ [ಚೌಖಾಂಬಾ ಅಮರ ಭಾರತೀ ಪ್ರಕಾಶನ]
7. ಕ್ಷೇಮೇಂದ್ರನ ಔಚಿತ್ಯ ವಿಚಾರ ಚರ್ಚಾ [ಚೌಖಾಂಬಾ ಅಮರ ಭಾರತೀ ಪ್ರಕಾಶನ]
8. ವಲ್ಲಭದೇವನ ಸುಭಾಷಿತಾವಲೀ [ಚೌಖಾಂಬಾ ಅಮರ ಭಾರತೀ ಪ್ರಕಾಶನ]
9. ತೀ. ನಂ. ಶ್ರೀಕಂಠಯ್ಯನವರ ಬಿಡಿಮುತ್ತು [ಕಾವ್ಯಾಲಯ ಪ್ರಕಾಶನ]

ಪಿ.ಸೂ.: ಇದರ ಹಲವು ಪದ್ಯಗಳು ಕೆಲವರು ಪಂಡಿತರ ಬಾಯಿಂದ ಕೇಳಿದ್ದೇ ಹೊರತು, ಮೇಲ್ಕಂಡ ಗ್ರಂಥಗಳಲ್ಲಿ ಕಂಡುಬಂದಿಲ್ಲ. ಎಲ್ಲ ಮೂಲ ಪದ್ಯಗಳ ಅನುವಾದವೂ ಲೇಖಕನದೇ.

ಮೈಸೂರು ಕೃಷ್ಣಮೂರ್ತಿ

ಕೊರಿಯನ್ ಕವಿತೆಗಳು

ಪರ್ವತದ ಹಾದಿ

ಪರ್ವತದ ಹಾದಿಯಲ್ಲಿ ಮೌನವಾಗಿ ನಡೆಯುತ್ತೇನೆ
ನಾನೊಬ್ಬನೇ ನಡೆಯುತ್ತೇನೆ
ಸೂರ್ಯಾಸ್ತದೊಡನೆ
ಹಕ್ಕಿಗಳ ಹಾಡು ಅಂತ್ಯವಾಗುತ್ತದೆ
ಕೇಳುವುದೆಲ್ಲಾ ಮೃಗಗಳ ಹೆಜ್ಜೆ ಸದ್ದು
ಪರ್ವತದ ಹಾದಿಯಲ್ಲಿ ಮೌನವಾಗಿ ನಡೆಯುತ್ತೇನೆ
ನಾನೊಬ್ಬನೇ ನಡೆಯುತ್ತೇನೆ
ನಿಶೆ ಮೌನ
ಕಾಡುಕತ್ತಲು
ಎಂಥ ತಲ್ಲಣ !
ಅದೆಂಥ ನಕ್ಷತ್ರರಹಿತ ನಭ !
ಪರ್ವತದ ಹಾದಿಯಲ್ಲಿ ಏನೆಲ್ಲಾ
ಅಪಾಯ, ಎಂಥ ಅನಂತ !
ಆದರೂ
ನನ್ನೀ ದುಃಸ್ವಪ್ನದ ದಾರಿಯಲ್ಲಿ
ಪ್ರಜ್ವಲಿಸುವ ಪ್ರಣತಿಯೊಂದು ಕಾಣುತ್ತದೆ
ಕೊನೆಗಾಣದ ಈ ದಾರಿ ಸವೆಯುವುದೆಂದು ?
ನಿಶೆ, ಉಷೆ ಕಾಣುವುದೆಂದು ?
ಬಂಡೆಯ ಮೇಲೆ
ಬೆಳಕು ಕಾಣಿಸುತ್ತಿದೆ

—ಮೂಲ : ಯಾಂಗ್ ಚು-ಡಾಂಗ್
ಆಂಗ್ಲ ಆವೃತ್ತಿ : ಪೀಟರ್ ಹ್ಯೂನ್

ಡಾ. ಕೆ. ಕೆಂಪೇಗೌಡ

ಮಾತೃಭಾಷಾಬೋಧನೆ

ಮಕ್ಕಳು ತಂದೆತಾಯಿಯರ, ಹಿರಿಯರ ಕಿರಿಯರ, ನೆರೆಹೊರೆಯವರ ಸಹಾಯದಿಂದ ತಮ್ಮ ಮಾತೃಭಾಷೆಯನ್ನು ಸಹಜ ಹಾಗೂ ಸ್ವಾಭಾವಿಕವಾಗಿ ಕಲಿಯುತ್ತವೆ. ಮಕ್ಕಳು ಶಾಲೆಗೆ ಹೋಗುವ ಹೊತ್ತಿಗೆ ಒಂದು ಹಂತದ ವ್ಯಾವಹಾರಿಕ ಮಾತೃಭಾಷೆಯನ್ನು ಕಲಿತಿರುತ್ತವೆ. ಈ ಕಾರಣದಿಂದ ಮಕ್ಕಳಿಗೆ ಮಾತೃಭಾಷೆಯನ್ನು ಶಾಲೆಯಲ್ಲಿ ಬೋಧಿಸಬೇಕೆ ಅಥವಾ ಬೇಡವೆ ಎಂಬುದೊಂದು ಪ್ರಶ್ನೆ. ಈ ದಿಸೆಯಲ್ಲಿ ವಿದ್ವಾಂಸರಲ್ಲಿ ಸಾಕಷ್ಟು ಮತಭೇದಗಳಿವೆ. ಮಕ್ಕಳು ಶಾಸ್ತ್ರೀಯವಾಗಿ ಶಿಕ್ಷಣದ ಭಾಷೆಯನ್ನು ಕಲಿಯದಿದ್ದರೂ ಮಾತನಾಡಬಲ್ಲವು. ಆದರೆ ಅವರು ತಮ್ಮ ವ್ಯವಹಾರದಲ್ಲಿ ಶಿಷ್ಟ ಭಾಷೆಯನ್ನು ಬಳಸಲಾರರು. ಶಿಷ್ಟ ಭಾಷೆಯನ್ನು ಮಕ್ಕಳು ಶಾಲೆಯಲ್ಲಿ ಕಲಿಯದೆ ಶೈಕ್ಷಣಿಕವಾಗಿ ಹಾಗೂ ಸಾಮಾಜಿಕವಾಗಿ ಪರಿಪೂರ್ಣವಾದ ಭಾಷೆಯನ್ನು ಮಾತನಾಡಲಾರರು. ಮಕ್ಕಳು ಮಾತನಾಡಿದರೆ ಸಾಲದು. ಅವರು ಭಾವಪೂರ್ಣವಾಗಿ ಹಾಗೂ ಅರ್ಥಪೂರ್ಣವಾಗಿ ಮಾತನಾಡುವಂತಾಗಬೇಕು. ಓದಿದರೆ ಸಾಲದು, ಅವರು ಸ್ಪಷ್ಟ ಹಾಗೂ ಶುದ್ಧವಾಗಿ ಓದುವಂತಾಗಬೇಕು. ಬರೆದರೆ ಸಾಲದು, ಅವರು ಶುದ್ಧವಾಗಿ ಬರೆಯುವಂತಾಗಬೇಕು. ಈ ಎಲ್ಲಾ ವಿಚಾರಗಳಿಗೆ ಮಾತೃಭಾಷಾ ಬೋಧನೆ ಅತ್ಯಾವಶ್ಯಕ.

ಮಕ್ಕಳು ಮಾತೃಭಾಷೆಯನ್ನು ಮಾತನಾಡುವ ಸಾಮರ್ಥ್ಯ ಅವರ ಶೈಕ್ಷಣಿಕ ಚಟುವಟಿಕೆಗಳನ್ನು ನಿರ್ವಹಿಸಲಾರದು. ಇದಕ್ಕೆ ಸಾಮಾನ್ಯ ಮಟ್ಟದ ಭಾಷೆಗಿಂತ ಉತ್ತಮವಾದ ಮಟ್ಟದ ಭಾಷೆಯ ಜ್ಞಾನ ಅತ್ಯಗತ್ಯ, ಇದನ್ನು ಅವರು ಶಾಲೆಯಲ್ಲಿ ಕಲಿಯಲೇಬೇಕು. ಬಳಸುವ ಭಾಷೆ ಉತ್ತಮವಾಗಿದ್ದರೆ ಜ್ಞಾನಾರ್ಜನೆ ಮತ್ತು ವೈಜ್ಞಾನಿಕ ವಿಚಾರಗಳ ಅಧ್ಯಯನ ಸುಲಭವಾಗುತ್ತದೆ. ಶಿಕ್ಷಣದ ಎಲ್ಲಾ ಚಟುವಟಿಕೆಗಳು ಶಾಲೆಯಲ್ಲಿ ಕಲಿಸುವ ಶಿಷ್ಟ ಭಾಷೆಯಿಂದಲೇ ನಡೆಯಬೇಕಾಗಿರುವುದರಿಂದ ಇದನ್ನು ಶಾಲೆಯಲ್ಲಿ ಹೆಚ್ಚು ಸಮರ್ಥವಾಗಿ ಕಲಿಸಬೇಕಾಗುತ್ತದೆ.

ಭಾಷಾಸಾಮರ್ಥ್ಯವನ್ನು ಬೆಳೆಸುವುದು ಭಾಷಾಬೋಧನೆಯ ಬಹಳ ಮುಖ್ಯವಾದ ಉದ್ದೇಶ. 'ಭಾಷಾ ಸಾಮರ್ಥ್ಯ' ಎಂಬ ಶಬ್ದ ವ್ಯಾಪಕವಾದ ಅರ್ಥವನ್ನು ಪಡೆದುಕೊಂಡಿದೆ. ಇದು ಭಾಷೆ ಕಲಿಯುವವರನ್ನು ಮತ್ತು ಕಲಿಸುವವರನ್ನು

ಅವಲಂಬಿಸಿದೆ. ಭಾಷಾ ಸಾಮರ್ಥ್ಯ ಬೆಳೆಸಬೇಕಾದರೆ ಕೇಳುವುದು (listening) ಮಾತಾಡುವುದು (speaking) ಓದುವುದು (reading) ಮತ್ತು ಬರೆಯುವುದು (writing)—ಇವುಗಳನ್ನು ಹೆಚ್ಚು ಸಮರ್ಥವಾಗಿ ಕಲಿಯಬೇಕಾಗುತ್ತದೆ. ಭಾಷಾ ಸಾಮರ್ಥ್ಯ ನಾನಾ ಹಂತಗಳಲ್ಲಿ ಬೆಳೆದು ಅದು ಪ್ರಯೋಗಕ್ಕೆ ಬರುವಂತಾದರೆ ಸಾಕು. ಆಗ ಮಕ್ಕಳಿಗೆ ಭಾಷಾ ಸಾಮರ್ಥ್ಯ ಬಂದಿದೆ ಎಂದು ಭಾವಿಸಬಹುದಾಗಿದೆ.

ಮಾತೃಭಾಷೆಯನ್ನು ಶಾಲೆಯಲ್ಲಿ ಮಕ್ಕಳಿಗೆ ಕಲಿಸಬೇಕಾದರೆ ಮೊದಲು ಆ ಭಾಷೆಯ ಧ್ವನಿ ಮತ್ತು ಧ್ವನಿಮಾಗಳನ್ನು ಅಕ್ಷರಗಳ ಮೂಲಕ ಬೋಧಿಸಲು ಪ್ರಯತ್ನಿಸಬೇಕು. ಒಂದು ಭಾಷೆಯ ಕೇಳುವಿಕೆ ಆ ಭಾಷೆಯ ಧ್ವನಿಗಳನ್ನು, ಧ್ವನಿಮಾಗಳನ್ನು, ಶಬ್ದಗಳನ್ನು, ವಾಕ್ಯಗಳನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡುತ್ತದೆ. ಕೇಳುವಿಕೆ ಎಂದರೆ ಒಂದು ವಿಚಾರವನ್ನು ಮಾತಿನಲ್ಲಿ ಕೇಳಿ ಅರ್ಥಮಾಡಿ ಕೊಳ್ಳುವುದು ಎಂದರ್ಥ. ಇದು ಮಾತುಗಾರಿಕೆಯನ್ನು ಪ್ರಚೋದಿಸುತ್ತದೆ. ಮಾತಿನ ಭಾವನೆಗಳನ್ನು ಅರ್ಥಮಾಡಿಕೊಳ್ಳಲು, ಕೇಳಿದ ಶಬ್ದ ಮತ್ತು ವಾಕ್ಯಗಳ ಅರ್ಥ ಗ್ರಹಿಸಲು, ಧ್ವನಿ ಮತ್ತು ಧ್ವನಿಮಾಗಳಿಗೆ ಇರುವ ವ್ಯತ್ಯಾಸವನ್ನು ತಿಳಿಯಲು, ಕೇಳಿದ ವಿಚಾರಗಳು ಮಕ್ಕಳ ಮನಸ್ಸಿನಲ್ಲಿ ಯಥಾವತ್ತಾಗಿ ನಾಟಲು ಕೇಳುವಿಕೆಯನ್ನು ಶಾಲೆಯಲ್ಲಿ ಬೋಧಿಸಬೇಕಾಗುತ್ತದೆ. ಕೇಳುವಿಕೆ ಉತ್ತಮವಾಗಿದ್ದರೆ ಅರ್ಥಗ್ರಹಿಕೆಯು ಸುಲಭವಾಗುತ್ತದೆ. ಇದನ್ನು ಶಾಲೆಯಲ್ಲಿ ಮಕ್ಕಳಿಗೆ ಬೋಧಿಸಲು ಕಥೆ ಹೇಳುವುದು ವಿಚಾರಗಳನ್ನು ವಿವರವಾಗಿ ವಿವರಿಸುವುದು, ಓದುವುದು, ಪರಸ್ಪರ ಸಂಭಾಷಿಸುವುದು— ಮುಂತಾದ ಕ್ರಮಗಳನ್ನು ಬೋಧಕನು ನಿಯೋಜಿಸಿಕೊಳ್ಳಬೇಕಾಗುವುದು.

ಮಾತುಗಾರಿಕೆ ಬೆಳೆಸುವುದು ಭಾಷಾಬೋಧನೆಯ ಎರಡನೆ ಬಹಳ ಮುಖ್ಯವಾದ ಉದ್ದೇಶ. ಭಾಷಾ ಸಾಮರ್ಥ್ಯ ಮಾತುಗಾರಿಕೆ ಮತ್ತು ಬರವಣಿಗೆಯಿಂದ ವ್ಯಕ್ತ ವಾಗುವಂತಹದ್ದು. ಮಾತುಗಾರಿಕೆ ಬೆಳೆದರೆ ನಮ್ಮ ಅಭಿಪ್ರಾಯಗಳನ್ನು ಅನಿಸಿಕೆ ಗಳನ್ನು ಇನ್ನೊಬ್ಬರಿಗೆ ಅರ್ಥವಾಗುವಂತೆ ಮಾತಿನಲ್ಲಿ ತಿಳಿಸಬಹುದು. ಮಾತನಾಡಿದ ವಿಚಾರಗಳನ್ನು ಇನ್ನೊಬ್ಬರು ಅರ್ಥಮಾಡಿಕೊಳ್ಳಬೇಕಾದರೆ ಅವನ ಉಚ್ಚಾರಣೆ ಸ್ಪಷ್ಟವಾಗಿರಬೇಕಾಗುತ್ತದೆ. ಮಾತುಗಾರಿಕೆ ಕಲಿಸುವುದರಿಂದ ಶಿಷ್ಟಭಾಷೆಯ ಮೌಖಿಕ ಅಭಿವ್ಯಕ್ತಿ ಸಾಮರ್ಥ್ಯ ಬೆಳೆಯುತ್ತದೆ. ನಮ್ಮ ಅಭಿಪ್ರಾಯಗಳನ್ನು ಅನಿಸಿಕೆಗಳನ್ನು ಇನ್ನೊಬ್ಬರಿಗೆ ಅರ್ಥವಾಗುವಂತೆ ಬರಹದ ಮೂಲಕವೂ ತಿಳಿಸುವುದಕ್ಕೆ ಬರೆಯುವ ಭಾಷೆ ವ್ಯಾಕರಣಿಕವಾಗಿ ಶುದ್ಧವಾಗಿರಬೇಕಾಗುತ್ತದೆ. ಇದನ್ನು ಮಕ್ಕಳಿಗೆ ಶಾಲೆಯಲ್ಲಿ ಕಲಿಸುವುದರಿಂದ ಲಿಖಿತ ಅಭಿವ್ಯಕ್ತಿ ಸಾಮರ್ಥ್ಯ ಬೆಳೆಯುತ್ತದೆ. ಶೈಕ್ಷಣಿಕ ಸಾಧನೆ ಯಶಸ್ವಿಯಾಗಬೇಕಾದರೆ ಮೌಖಿಕ ಮತ್ತು ಲಿಖಿತ ಅಭಿವ್ಯಕ್ತಿ ಸಾಮರ್ಥ್ಯಗಳು ಬೆಳೆದರೆ ಮಾತ್ರ ಸಾಧ್ಯ. ಇವನ್ನು ಬೋಧಿಸಲು ಬೋಧಕನು ಸಂಭಾಷಣೆ, ಚರ್ಚಾಸ್ಪರ್ಧೆಗಳು, ಕಥೆ ಹೇಳುವುದು, ಮತ್ತು ಪ್ರಬಂಧ ಬರೆಸುವುದು ಮುಂತಾದ ಪದ್ಧತಿಗಳನ್ನು ನಿಯೋಜಿಸಿಕೊಳ್ಳಬೇಕಾಗುತ್ತದೆ.

ಓದುಗಾರಿಕೆಯನ್ನು ಬೆಳೆಸುವುದು ಭಾಷಾ ಬೋಧನೆಯ ಇನ್ನೊಂದು ಉದ್ದೇಶ. ಓದುವಿಕೆ ಮತ್ತು ಬರೆಯುವಿಕೆಯನ್ನು ಕಲಿಯದ ಮಕ್ಕಳು ಶಿಕ್ಷಣದಲ್ಲಿ ಸಫಲವಾಗಲಾರರು. ಸರಳವಾಗಿ ಹಾಗೂ ಸ್ಪಷ್ಟವಾಗಿ ಓದುವುದು, ಶುದ್ಧವಾಗಿ ಬರೆಯುವುದು ಇವು ಮಕ್ಕಳಲ್ಲಿ ಜ್ಞಾನಾರ್ಜನೆ ಬೆಳೆಸಲು ಸಹಾಯಮಾಡುತ್ತವೆ. ಅರ್ಥವಾಗುವಂತೆ ಓದುವುದು, ಓದಿದ ವಿಷಯಗಳನ್ನು ಗ್ರಹಿಸುವುದು, ಗ್ರಹಿಸಿದ ವಿಷಯಗಳನ್ನು ಬರೆಯುವುದು—ಮುಂತಾದುವುಗಳನ್ನು ಕಲಿಸುವುದು ಭಾಷಾಬೋಧನೆಯ ಗುರಿಯಾಗಬೇಕು. ಇದರಿಂದ ಓದುಗಾರಿಕೆ ಮತ್ತು ಬರವಣಿಗೆ ಬೆಳೆಯುತ್ತದೆ.

ಮಾತುಗಾರಿಕೆ, ಓದುಗಾರಿಕೆ ಮತ್ತು ಬರವಣಿಗೆ ಬೆಳೆಯಬೇಕಾದರೆ ಅದಕ್ಕೆ ಸತತವಾದ ಭಾಷಾಭ್ಯಾಸ ಬೇಕಾಗುತ್ತದೆ. ಮಕ್ಕಳ ಶಿಕ್ಷಣಕ್ಕೆ ತಕ್ಕ ಶಬ್ದ ಭಂಡಾರವನ್ನು ಪಠ್ಯ ಪುಸ್ತಕಗಳಲ್ಲಿ ಕಂಡುಬರುವ ಹೊಸ ಹೊಸ ಶಬ್ದಗಳನ್ನು ಪರಿಚಯ ಮಾಡಿಕೊಡಬೇಕಾದುದ್ದು ಅತ್ಯಗತ್ಯ. ಕೇವಲ ಶಬ್ದಗಳ ಸಂಖ್ಯೆ ಬೆಳೆದರೆ ಸಾಲದು. ಸಂದರ್ಭ ಹಾಗೂ ಸನ್ನಿವೇಶಕ್ಕೆ ತಕ್ಕ ಶಬ್ದಗಳನ್ನು ಅರ್ಥಪೂರ್ಣವಾಗಿ ಬಳಸುವುದನ್ನು ಕಲಿಸಬೇಕಾಗುತ್ತದೆ.

ಕೇಳಿ ಪುಸ್ತಕಗಳನ್ನು ಓದಿ ಅರ್ಥಮಾಡಿಕೊಂಡ ವಿಚಾರಗಳನ್ನು ಬರಹದ ಮೂಲಕ ವ್ಯಕ್ತಗೊಳಿಸುವುದನ್ನು ಬೋಧಿಸಬೇಕಾಗುತ್ತದೆ. ಓದಿದ ವಿಚಾರಗಳನ್ನು ಬರಹದ ಮೂಲಕ ವ್ಯಕ್ತಗೊಳಿಸಿದರೆ ಬರಹವನ್ನು ಬೆಳೆಸಿಕೊಳ್ಳಲು ಕಷ್ಟವೇನೂ ಆಗುವುದಿಲ್ಲ. ಇದರಿಂದ ಓದುಗಾರಿಕೆ ಮತ್ತು ಬರವಣಿಗೆ ಸಾಮರ್ಥ್ಯ ಬೆಳೆಯುತ್ತದೆ. ಮಕ್ಕಳಲ್ಲಿ ಅನೇಕ ಪ್ರವೃತ್ತಿಗಳು, ವಿಶೇಷ ಕೌಶಲಗಳು ಸುಪ್ತವಾಗಿರುತ್ತವೆ. ಇವುಗಳನ್ನು ಅಭಿವ್ಯಕ್ತಿಗೊಳಿಸಲು ಬರಹದ ಸಹಾಯ ಬೇಕಾಗುತ್ತದೆ. ಮಕ್ಕಳ ಆಲೋಚನೆ ಮತ್ತು ಭಾವನೆಗಳನ್ನು ಬರವಣಿಗೆಯ ಮೂಲಕ ವ್ಯಕ್ತಗೊಳಿಸುವ ತರಬೇತಿ ಕೊಡುವುದು ಅತ್ಯಗತ್ಯ. ಮಕ್ಕಳು ಅಂತಹ ವಿಚಾರಗಳನ್ನು ಬರಹದ ಮೂಲಕ ವ್ಯಕ್ತಗೊಳಿಸುವ ತರಬೇತಿ ಕೊಟ್ಟರೆ ಅದರಿಂದ ಅವರ ಸುಪ್ತ ಭಾವನೆಗಳು ವ್ಯಕ್ತವಾಗುತ್ತವೆ. ಇವನ್ನು ಬೆಳೆಸಲು ಕಥೆ, ಕವನ, ನಾಟಕ, ಪ್ರಬಂಧ ಮುಂತಾದುವುಗಳನ್ನು ಬರೆಸುವ ಅಭ್ಯಾಸ ಮಾಡಿಸಬೇಕಾಗುತ್ತದೆ. ಇದರಿಂದ ಮಕ್ಕಳ ಸ್ವಂತ ಭಾವನೆಗಳು, ಅನಿಸಿಕೆಗಳು, ಆಲೋಚನೆಗಳು ಹೊರಹೊಮ್ಮುತ್ತವೆ.

ಒಂದು ಭಾಷೆಯನ್ನು ಕಲಿತು ಅದನ್ನು ಹೆಚ್ಚು ಪರಿಣಾಮಕಾರಿಯಾಗಿ ಬಳಸಬೇಕಾದರೆ ಆ ಭಾಷೆಯ ವ್ಯಾಕರಣವನ್ನು ಕಲಿಸಬೇಕಾದದ್ದು ಅತ್ಯಗತ್ಯ. ವ್ಯಾಕರಣ ಜ್ಞಾನವಿಲ್ಲದ ಭಾಷಾಬಳಕೆ ಅರ್ಥಪೂರ್ಣವೆನಿಸಿಕೊಳ್ಳುವುದಿಲ್ಲ. ವ್ಯಾಕರಣಾಂಶಗಳನ್ನು ಕಲಿಸದೆ ಭಾಷಾಸಾಮರ್ಥ್ಯ ಹೆಚ್ಚಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಈ ಕಾರಣದಿಂದ ಭಾಷಾಬೋಧನೆಯಲ್ಲಿ ವ್ಯಾಕರಣಾಂಶಗಳನ್ನು ಸಾಂದರ್ಭಿಕವಾಗಿ ಬೋಧಿಸುವ ಕಾರ್ಯವನ್ನು ಯೋಜಿಸಿಕೊಳ್ಳಬೇಕಾಗುತ್ತದೆ.

ಕಥೆ, ಕವನ, ಗೀತೆ, ಭಾವಗೀತೆ, ಕಾದಂಬರಿ, ನಾಟಕ, ಮುಂತಾದ ಸಾಹಿತ್ಯಿಕ

ಪ್ರಕಾರಗಳಲ್ಲಿ ವರ್ಣಿತವಾಗಿರುವ ಪ್ರಕೃತಿ, ಪಶುಪಕ್ಷಿ, ನದಿ, ವನ, ಪರ್ವತ ಮುಂತಾದುವು ಮಕ್ಕಳಲ್ಲಿ ಸೌಂದರ್ಯ ಪ್ರಜ್ಞೆ ಬೆಳೆಯುವಂತೆ ಮಾಡುತ್ತವೆ. ಈ ಕಾರಣದಿಂದ ಸೌಂದರ್ಯ ಭಾವನೆಗಳನ್ನು ಮಕ್ಕಳು ಅರ್ಥಮಾಡಿಕೊಳ್ಳಲು ಅವಕಾಶವನ್ನು ಭಾಷಾಬೋಧನೆಯಲ್ಲಿ ಕಲ್ಪಿಸಿಕೊಡಬೇಕಾಗುತ್ತದೆ. ಇದರಿಂದ ಸಂತೋಷ ಮತ್ತು ಆತ್ಮಾನಂದವು ಲಭಿಸುವುದು.

ಭಾಷೆ ಸಂಸ್ಕೃತಿಯೊಡನೆ ನಿಕಟವಾದ ಸಂಬಂಧವನ್ನು ಪಡೆದುಕೊಂಡಿದೆ. ಸಂಸ್ಕೃತಿ ಮತ್ತು ಸಾಹಿತ್ಯಗಳು ಬೆಳೆಯಬೇಕಾದರೆ ಭಾಷೆಯ ಸಹಾಯ ಅತ್ಯಗತ್ಯ. ಭಾಷೆ ಇಲ್ಲದಿದ್ದರೆ ಸಂಸ್ಕೃತಿಯೂ ಇಲ್ಲ. ಸಾಹಿತ್ಯವೂ ಇಲ್ಲ. ಆದಕಾರಣ ಸಾಂಸ್ಕೃತಿಕ ಪರಂಪರೆಯ ಮೌಲ್ಯಗಳನ್ನು ಭಾಷಾಬೋಧನೆಯಲ್ಲಿ ಪರಿಚಯಮಾಡಿಕೊಡಲು ಬೋಧಕನು ಅವಕಾಶಮಾಡಿಕೊಡಬೇಕು. ಸಂಸ್ಕೃತಿಯ ವಿಶಿಷ್ಟ ಅಂಶಗಳನ್ನು ಬೋಧಿಸಿದರೆ ಮಕ್ಕಳಲ್ಲಿ ಸಂಸ್ಕೃತಿಯ ಬಗೆಗೆ ಅಪಾರವಾದ ಗೌರವ ಮತ್ತು ಅಭಿಮಾನಗಳು ಮೂಡುತ್ತವೆ. ಇದಕ್ಕೆ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಸತ್ಯ ಪುಸ್ತಕಗಳನ್ನು ಭಾಷಾಬೋಧನೆಗೆ ನಿಯೋಜಿಸಿಕೊಳ್ಳಬೇಕಾಗುತ್ತದೆ. ಇದರಿಂದ ಮಕ್ಕಳ ಸಾಂಸ್ಕೃತಿಕ ಪ್ರಜ್ಞೆ ಬೆಳೆಯುವಂತೆ ಮಾಡಬಹುದು.

ಮಕ್ಕಳಲ್ಲಿ ಮಾನವೀಯ ಮೌಲ್ಯಗಳು ಬೆಳೆಯಬೇಕಾದರೆ ಉತ್ತಮವಾದ ಜೀವನಮೌಲ್ಯಗಳನ್ನೊಳಗೊಂಡ ಶಿಕ್ಷಣದಿಂದ ಮಾತ್ರ ಸಾಧ್ಯ. ಇದರಿಂದ ನಾಡು ನುಡಿಗಳ ಬಗ್ಗೆ ಅಪಾರವಾದ ಗೌರವವೂ ಬೆಳೆಯಬಲ್ಲದು. ಮಕ್ಕಳಿಗೆ ಒರಿಯ ಜ್ಞಾನ ಬೆಳೆದರೆ ಸಾಲದು ಅದರಿಂದ ಮಕ್ಕಳ ವ್ಯಕ್ತಿತ್ವವು ಬೆಳೆಯುವುದಿಲ್ಲ. ಮಹಾಪುರುಷರ ರಾಷ್ಟ್ರನಾಯಕರ, ದೇಶಪ್ರೇಮಿಗಳ, ಸಮಾಜ ಸುಧಾರಕರ, ವಿಜ್ಞಾನಿಗಳ, ಸಾಹಿತಿಗಳ, ಆತ್ಮಚರಿತ್ರೆಗಳನ್ನು ಬೋಧಿಸಲು ಅವಕಾಶಮಾಡಿಕೊಟ್ಟರೆ ಮಕ್ಕಳಲ್ಲಿ ಮಾನವೀಯ ಗುಣಗಳು, ಸಾಹಿತ್ಯಾಭಿರುಚಿ, ನಾಡುನುಡಿಗಳ ಬಗ್ಗೆ ಗೌರವ ಮುಂತಾದ ಗುಣಗಳು ಬೆಳೆಯುತ್ತವೆ. ಅಧಃಪತನದತ್ತ ಸಾಗುತ್ತಿರುವ ಇಂದಿನ ಸಮಾಜದ ಭವಿಷ್ಯವನ್ನು ಸರಿಪಡಿಸಲು, ಇಂದಿನ ಮಕ್ಕಳಲ್ಲಿ ಸತ್ಯ, ಧರ್ಮ, ತ್ಯಾಗ, ಸೌಜನ್ಯ, ಮುಂತಾದ ಗುಣಗಳು ಬೆಳೆಯಲು ಅನುಕೂಲವಾಗುವ ಪಾಠಪ್ರವಚನಗಳನ್ನು ಬೋಧಿಸಬೇಕಾಗುತ್ತದೆ.

ಮೇಲೆ ಹೇಳಿದ ಎಲ್ಲಾ ವಿಚಾರಗಳನ್ನು ಮಾತೃಭಾಷಾ ಬೋಧನೆಯಲ್ಲಿ ಒಂದೇ ಹಂತದಲ್ಲಿ ಬೋಧಿಸಲು ಬರುವುದಿಲ್ಲ. ಇವನ್ನು ಹಂತ ಹಂತವಾಗಿ ಬೇರೆ ಬೇರೆ ಪಠ್ಯಕ್ರಮಗಳನ್ನು ನಿಯೋಜಿಸಿಕೊಂಡು ಬೋಧಿಸಬೇಕಾಗುತ್ತದೆ. ನಾವು ಕಲಿತ ಮಾತೃಭಾಷೆ ಪರೋಕ್ಷ ಹಾಗೂ ಪ್ರತ್ಯಕ್ಷವಾಗಿ ನಮ್ಮ ಮಾನಸಿಕ ಹಾಗೂ ಭಾವನಾತ್ಮಕ ವಿಕಾಸಕ್ಕೆ ನೆರವಾಗುವಂತಿದ್ದರೆ ಅಷ್ಟೇ ಸಾಕು. ಆಗ ನಾವು ಪರಿಪೂರ್ಣವಾದ ಜೀವನ ನಡೆಸಲು ಸಾಧ್ಯವಾಗುತ್ತದೆ. ಆಗ ಕಲಿತ ಮತ್ತು ಕಲಿಸಿದ ಜೀವನಮೌಲ್ಯಗಳು ನಮ್ಮ ಜೀವನದಲ್ಲಿ ಸಾರ್ಥಕವೆನಿಸಿಕೊಳ್ಳುತ್ತವೆ.

ಮಾತೃಭಾಷೆಯನ್ನು ಶಾಲೆಯಲ್ಲಿ ಬೋಧಿಸಲು ಇಂದು ಅನೇಕ ವಿಧಾನಗಳು ಬಳಕೆಯಲ್ಲಿವೆ. ಅವುಗಳಲ್ಲಿ ಕಥನವಿಧಾನ (Narrative method), ಉಪನ್ಯಾಸ ವಿಧಾನ (Lecturing method), ಪ್ರಶ್ನೋತ್ತರ ವಿಧಾನ (Question and answer method), ನಾಟಕಾಭಿನಯ ವಿಧಾನ (Actor and Action method), ಪಠ್ಯ ಪುಸ್ತಕ ವಿಧಾನ (Text book method) ಕ್ರೀಡಾ ವಿಧಾನ (Play way method) ಮುಂತಾದ ವಿಧಾನಗಳು ಮುಖ್ಯವಾಗಿವೆ. ಇವು ಮಾತೃಭಾಷಾ ಬೋಧನೆಗೆ ಹೆಚ್ಚು ಉಪಯುಕ್ತವಾದ ವಿಧಾನಗಳಾಗಿವೆ ಎಂದು ಕೆಲವರ ಅಭಿಪ್ರಾಯ.

ಹೇಳುವ ವಿಚಾರಗಳನ್ನು ಹಿತಕರವಾದ ಭಾಷೆಯಲ್ಲಿ ಇನ್ನೊಬ್ಬರಿಗೆ ಮನ ಮುಟ್ಟುವಂತೆ, ಅರ್ಥವಾಗುವಂತೆ ಬೋಧಿಸುವ ವಿಧಾನವನ್ನೇ ಕಥನವಿಧಾನ (narrative method) ಎನ್ನುವರು. ಯಾವುದಾದರೊಂದು ವಿಚಾರವನ್ನೋ ಯಾವುದಾದರೊಬ್ಬ ವ್ಯಕ್ತಿಯ ವ್ಯಕ್ತಿತ್ವವನ್ನೋ, ಯಾವುದಾದರೊಂದು ಐತಿಹಾಸಿಕ ಘಟನೆಯನ್ನೋ ಅರ್ಥಪೂರ್ಣವಾಗಿ ಮೌಖಿಕವಾಗಿ ವಿವರಿಸುವುದು ಈ ವಿಧಾನದ ಮುಖ್ಯ ಉದ್ದೇಶ. ಈ ವಿಧಾನದಲ್ಲಿ ವಿಷಯವನ್ನು ಕಿವಿಯಿಂದ ಕೇಳುವುದರಿಂದ ಹೆಚ್ಚು ಆಯಾಸವಿಲ್ಲದೆ ವಿಚಾರಗಳನ್ನು ಗ್ರಹಿಸಬಹುದು. ಈ ಕಥನವಿಧಾನ ಸಾಂಪ್ರದಾಯಿಕವಾಗಿ ಭಾಷೆಯನ್ನು ಬೋಧಿಸಲು ಸೂಕ್ತವಾದ ವಿಧಾನವಲ್ಲದಿದ್ದರೂ ಇದು ಭಾಷಾಸಾಮರ್ಥ್ಯವನ್ನು ಬೆಳೆಸಲು ಹೆಚ್ಚು ಉಪಯುಕ್ತವಾದ ವಿಧಾನವಾಗಿ ತೋರಿಬರುತ್ತಿದೆ.

ಕಥನವಿಧಾನದಲ್ಲಿ ಯಾವುದಾದರೊಂದು ವಿಚಾರವನ್ನು ಹೋಲಿಕೆ, ವ್ಯತ್ಯಾಸ, ಕಾರಣ ಮುಂತಾದ ವಿವರಣೆಗಳೊಂದಿಗೆ ಅರ್ಥವತ್ತಾದ ವಾಕ್ಯಗಳ ಸಹಾಯದಿಂದ ಮೌಖಿಕವಾಗಿ ಬೋಧಿಸುವುದರಿಂದ ಕೇಳುವಿಕೆಯು ಬೆಳೆಯುತ್ತದೆ. ಪ್ರಾಚೀನ ಭಾರತದಲ್ಲಿ ಈ ವಿಧಾನ ಬಹಳ ಹಿಂದೆಯೇ ಶಿಕ್ಷಣದಲ್ಲಿ ಬಳಕೆಯಲ್ಲಿದ್ದಿತು ಎಂಬುದಕ್ಕೆ ಸಾಕಷ್ಟು ಆಧಾರಗಳು ದೊರೆಯುತ್ತವೆ. ಮಕ್ಕಳಲ್ಲಿ ವಿಷಯಜ್ಞಾನ ಬೆಳೆಸಬೇಕಾದರೆ ಅವರು ಉತ್ತಮವಾದ ಜೀವನಮೌಲ್ಯಗಳನ್ನು ಮತ್ತು ವ್ಯಕ್ತಿತ್ವವನ್ನು ರೂಪಿಸಿ ಕೊಳ್ಳಬೇಕಾದರೆ ಕಥನ ವಿಧಾನದ ಬೋಧನೆಯಿಂದ ಮಾತ್ರ ಸಾಧ್ಯವಾಗುತ್ತದೆ. ಕಥೆ ಕೇಳುವುದು, ಕಥೆ ಹೇಳುವುದು ಎಲ್ಲಾ ವಯಸ್ಸಿನವರಿಗೂ ಹೆಚ್ಚು ಪ್ರಿಯವಾದದ್ದು. ಆದಕಾರಣ ಭಾಷಾ ಪಾಠಗಳು, ಐತಿಹಾಸಿಕ ಪಾಠಗಳು ಸಾಹಿತ್ಯಿಕ ಪಾಠಗಳು ಮುಂತಾದುವುಗಳ ಮೂಲಕ ಮಕ್ಕಳ ಮನಮುಟ್ಟುವಂತೆ ಕಥನ ರೂಪದಲ್ಲಿ ಬೋಧಿಸಬಹುದು. ಕಥೆ ಕೇಳುವುದರಿಂದ ಮಕ್ಕಳಲ್ಲಿ ವಿಷಯ ಗ್ರಹಿಕೆ ಮತ್ತು ಏಕಚಿತ್ತಾಗ್ರತೆ ಬೆಳೆಯುತ್ತದೆ. ಕಥೆಯಿಂದ ಹೊಸ ಹೊಸ ಶಬ್ದಗಳು, ವಿವಿಧ ವಾಕ್ಯಾವಳಿಗಳು, ಹೇಳಿಕೆಗಳು, ವಿವರಣೆಗಳು ಪರಿಚಯವಾಗುತ್ತವೆ. ಇದರಿಂದ ಮಕ್ಕಳಲ್ಲಿ ಶಬ್ದಭಂಡಾರ ಬೆಳೆಯುತ್ತದೆ. ಮಹಾಪುರುಷರ, ರಾಷ್ಟ್ರನಾಯಕರ, ದೇಶಪ್ರೇಮಿಗಳ, ಸಮಾಜ ಸುಧಾರಕರ ಆತ್ಮ ಚರಿತ್ರೆಗಳನ್ನು ಕಥೆಯ ರೂಪದಲ್ಲಿ

ಬೋಧಿಸಿದಲ್ಲಿ ಮಕ್ಕಳಲ್ಲಿ ತ್ಯಾಗ, ಧೈರ್ಯ, ಸಾಹಸ, ಸತ್ಯ, ನಿಷ್ಠೆ ದೇಶಪ್ರೇಮ ಬೆಳೆಯುವುದು. ಮಕ್ಕಳಿಗೆ ಕೆಲವುವೇಳೆ ಅಪೂರ್ಣ ಕಥೆಗಳನ್ನು ಕೊಟ್ಟು ಪೂರ್ಣ ಮಾಡುವಂತೆ ಕಲಿಸಿದರೆ ಅವರ ಕಲ್ಪನಾಶಕ್ತಿ ಬೆಳೆಯುತ್ತದೆ. ಹಾಗೆಯೇ ಇದರಿಂದ ಮಕ್ಕಳ ಮಾನಸಿನ ಶಕ್ತಿಯೂ, ಭಾಷಾ ಕೌಶಲಗಳು, ರಸಭಾವನೆಗಳು ಹೊರ ಹೊಮ್ಮುತ್ತವೆ. ಕಥೆಯಲ್ಲಿ ಬರುವ ವಿಷಯಗಳು, ಪಾತ್ರಗಳು, ಸನ್ನಿವೇಶಗಳು ಸಂಭಾಷಣೆಗಳು ಮಕ್ಕಳ ಅಭಿವ್ಯಕ್ತಿ ಸಾಮರ್ಥ್ಯ ಮತ್ತು ವಿಷಯ ಗ್ರಹಿಕೆ ಬೆಳೆಯುವಂತೆ ಮಾಡುತ್ತವೆ.

ಕಥನವಿಧಾನ ಒಂದರಿಂದಲೇ ಭಾಷಾಸಾಮರ್ಥ್ಯ ಮತ್ತು ವಿಷಯ ಗ್ರಹಿಕೆ ಬೆಳೆಯುವುದಿಲ್ಲ. ಬೇರೆ ಬೇರೆ ವಿಧಾನಗಳಿಂದಲೂ ಇವು ಮಕ್ಕಳಲ್ಲಿ ಬೆಳೆಯುವಂತೆ ಮಾಡಬಹುದು. ಇದಕ್ಕೆ ಮಕ್ಕಳಮಟ್ಟಕ್ಕೆ ತಕ್ಕ ವಿಷಯವನ್ನು ಅವರ ಮಟ್ಟಕ್ಕೆ ತಕ್ಕ ಭಾಷೆಯನ್ನು ಅರ್ಥಗರ್ಭಿತವಾಗಿ ಬೋಧಿಸಬೇಕಾಗುತ್ತದೆ. ಕೇಳುವಕಥೆ ಹೆಚ್ಚು ಕುತೂಹಲಕಾರಿ ಮತ್ತು ಹೆಚ್ಚು ಪರಿಣಾಮಕಾರಿಯಾಗಿದ್ದರೆ ಉತ್ತಮ. ಇದರಿಂದ ಕೇಳಿದ ವಿಚಾರಗಳು ಮಕ್ಕಳ ಮನಸಿನ ಮೇಲೆ ಹೆಚ್ಚು ಪ್ರಭಾವವನ್ನುಂಟು ಮಾಡಬಲ್ಲವು. ಕಥೆಯನ್ನು ಕೇಳಿ ಮಕ್ಕಳು ಮುಂದಿನ ವಿಚಾರವನ್ನು ಊಹಿಸಲು ಅವಕಾಶಮಾಡಿಕೊಟ್ಟರೆ ಅವರ ಆಲೋಚನಾಶಕ್ತಿಯು ಬೆಳೆಯುತ್ತದೆ.

ಸತ್ಯಕ್ಕೆ ದೂರವಾದ ವಿಚಾರಗಳನ್ನು, ಅತಿ ಭಯಂಕರವಾದ ಮತ್ತು ಹೆಚ್ಚು ರಹಸ್ಯಪೂರ್ಣವಾದ ವಿಚಾರಗಳನ್ನು ಮಕ್ಕಳಿಗೆ ಬೋಧಿಸಲು ಹೋಗಬಾರದು. ಮಕ್ಕಳ ಅಭಿರುಚಿಗೆ ತಕ್ಕ ಕಥೆಗಳನ್ನು ಮಾತ್ರ ಬೋಧನೆಗೆ ಆಯ್ದುಕೊಳ್ಳಬೇಕಾಗುತ್ತದೆ. ಹೇಳುವ ಕಥೆಗಳು ಮಕ್ಕಳಲ್ಲಿ ಉತ್ತಮವಾದ ಗುಣಗಳನ್ನು ಬೆಳೆಸಲು ಸಹಾಯಕವಾಗುವಂತಿರಬೇಕು ; ಮಕ್ಕಳ ಮನೋವೈಜ್ಞಾನಿಕ ಪ್ರಜ್ಞೆ, ಪರಿಸರ ಪ್ರೇಮ ಬೆಳಸಲು ನೆರವಾಗುವಂತಿರಬೇಕು, ಲಿಖಿತ ಭಾಷಣಗಳನ್ನು, ಚಿತ್ರಕಥೆಗಳನ್ನು ಕೇಳುವಂತೆ ಮಾಡಿದರೆ ಅದರಲ್ಲಿ ಲಿಖಿತ ಅಭಿವ್ಯಕ್ತಿ ಸಾಮರ್ಥ್ಯ ಬೆಳೆಯಲು ಸಹಾಯಕವಾಗುತ್ತದೆ. ಪಠ್ಯಪುಸ್ತಕಗಳಲ್ಲಿ ಬರುವ ಎಲ್ಲಾ ವಿಚಾರಗಳನ್ನು ಕಥೆಯ ರೂಪದಲ್ಲಿ ಬೋಧಿಸಲು ಬರುವುದಿಲ್ಲ. ಆಯಾ ವಿಚಾರಗಳನ್ನು ಮಾತ್ರ ಕಥೆಯ ರೂಪಕ್ಕೆ ಪರಿವರ್ತಿಸಿಕೊಂಡು ಬೋಧಿಸುವುದು ಹೆಚ್ಚು ಉಪಯುಕ್ತವಾದದ್ದು. ಮಕ್ಕಳು ಕೇಳಿದ ಕಥೆಯನ್ನು ಎಷ್ಟು ಅರ್ಥಮಾಡಿಕೊಂಡಿದ್ದಾರೆ ಎಂಬುದನ್ನು ತಿಳಿಯಲು ಪ್ರಶ್ನೆಗಳನ್ನು ಕೇಳುವುದರ ಮೂಲಕ ಪರೀಕ್ಷಿಸಬಹುದು ಹಾಗೆಯೇ ಮುಂದಿನ ಪರಿಣಾಮವನ್ನು, ಪಾತ್ರಗಳ ಗುಣಾವಗುಣಗಳನ್ನು, ಕಥೆಯ ಸಾರಾಂಶವನ್ನು ನೀತಿಯನ್ನು ಬರೆಸಬಹುದು. ಕಥನ ಪದ್ಧತಿಯಲ್ಲಿ ಕಥೆಗಳನ್ನು ಭಾಷಾ ಬೋಧನೆಗೆ ನೆರವಾಗುವಂತೆ ಅಳವಡಿಸಿಕೊಳ್ಳಬೇಕಾದದ್ದು ಅತ್ಯಾವಶ್ಯಕ.

ತರಗತಿಯಲ್ಲಿ ಬೋಧಿಸಬೇಕಾಗಿರುವ ವಿಷಯಗಳನ್ನು ಸಂಗ್ರಹವಾಗಿ ವಿದ್ಯಾರ್ಥಿಗಳ ಮನಮುಟ್ಟುವಂತೆ ಮಾತಿನಲ್ಲಿ ಹೆಚ್ಚು ಸಮರ್ಥವಾಗಿ ಕೆಲವು ವಾಕ್ಯಾವಳಿಗಳ

ಮೂಲಕ ಹೇಳಬಹುದಾದ ವಿಧಾನವನ್ನೇ ಉಪನ್ಯಾಸ ವಿಧಾನ (lecturing method) ಎನ್ನುವರು. ಯಾವುದಾದರೊಂದು ವಿಷಯವನ್ನು ಕುರಿತು ಸಂಗ್ರಹವಾಗಿ ಕೆಲವು ವಾಕ್ಯಗಳ ಮೂಲಕ ಮಾತಿನಲ್ಲಿ ಹೇಳುವುದು ಈ ವಿಧಾನದ ಮುಖ್ಯ ಉದ್ದೇಶ. ಇದರಿಂದ ವಿದ್ಯಾರ್ಥಿಗಳು ವಿಷಯಗಳನ್ನು ಕೇಳಿ ಅರ್ಥಮಾಡಿಕೊಳ್ಳಲು ಸಾಧ್ಯವಾಗುವುದು.

ಕಾಲೇಜು ಮಟ್ಟದ ಸಂಪ್ರದಾಯ ಶಿಕ್ಷಣ ಪದ್ಧತಿಯನ್ನಾಗಿ ಈ ಉಪನ್ಯಾಸ ವಿಧಾನವನ್ನು ನಿಯೋಜಿಸಿಕೊಳ್ಳಲಾಗಿದೆ. ಈ ವಿಧಾನ ಕೆಳಮಟ್ಟದ ವಿದ್ಯಾರ್ಥಿಗಳಿಗೆ ಸೂಕ್ತವಾದುದಲ್ಲ. ಇದು ಕಾಲೇಜು ಮಟ್ಟದ ಶಿಕ್ಷಣಕ್ಕೆ ಹೆಚ್ಚು ಪರಿಣಾಮಕಾರಿಯಾದದ್ದು. ಉಪನ್ಯಾಸ ವಿಧಾನ ಪ್ರೌಢ ಹಂತದ ಬೋಧನಾ ವಿಧಾನವಾಗಿರುವ ಕಾರಣ ಅನೇಕ ವಿಚಾರಗಳನ್ನು ಅನೇಕ ತತ್ವ ಮತ್ತು ಸಿದ್ಧಾಂತಗಳನ್ನು ಕಡಿಮೆ ಅವಧಿಯಲ್ಲಿ ಸಮರ್ಥವಾಗಿ ವಿವರಿಸಿ ಹೇಳಬಹುದು. ಉಪನ್ಯಾಸಗಳನ್ನು ಕೇಳುವುದರಿಂದ ವಿದ್ಯಾರ್ಥಿಗಳು ಹೆಚ್ಚು ಆಯಾಸವಿಲ್ಲದೆ ವಿಚಾರಗಳನ್ನು ಕಲಿಯಬಲ್ಲರು. ಇದರಿಂದ ವಿದ್ಯಾರ್ಥಿಗಳಲ್ಲಿ ಕೇಳುವಿಕೆ ಮತ್ತು ಅರ್ಥಮಾಡಿಕೊಳ್ಳುವಿಕೆ ಬೆಳೆಯುತ್ತವೆ. ಇದರಲ್ಲಿ ಬೋಧಕನು ಬಳಸುವ ಭಾಷೆಯ ಉಚ್ಚಾರ, ಧ್ವನಿಗಳ ಏರಿಳಿತಗಳು, ಭಾಷಾ ಶೈಲಿಯನ್ನು ವಿದ್ಯಾರ್ಥಿಗಳು ಅನುಕರಿಸುವುದರಿಂದ ಮಾತುಗಾರಿಕೆ ಮತ್ತು ಅಭಿವ್ಯಕ್ತಿ ಸಾಮರ್ಥ್ಯಗಳು ಬೆಳೆಯುತ್ತವೆ.

ಪೀಠಿಕೆ, ಸಾರಾಂಶ, ವಿವರಣೆಗಳನ್ನು ಕೊಡಲು ಉಪನ್ಯಾಸ ವಿಧಾನ ಉತ್ತಮವಾದ ವಿಧಾನವಾಗಿದೆ. ಇದರಲ್ಲಿ ಅಧ್ಯಾಪಕನು ಬಳಸುವ ಭಾಷೆ ದುರ್ಬಲವಾಗಿದ್ದು ವಿಷಯ ನಿರೂಪಣೆಯಲ್ಲಿ ಕೊರತೆ ಕಂಡುಬಂದರೆ ಉಪನ್ಯಾಸ ವಿಧಾನ ಭಾಷಾ ಬೋಧನೆಗೆ ಯಶಸ್ವಿಯಾಗಲಾರದು. ಇದು ಏಕಮುಖ ಬೋಧನಾ ವಿಧಾನ. ಇದರಲ್ಲಿ ವಿದ್ಯಾರ್ಥಿಗಳ ಚಟುವಟಿಕೆಗಳಿಗೆ ಅವರ ಪ್ರತಿಕ್ರಿಯೆಗಳಿಗೆ ಅವಕಾಶವಿಲ್ಲ. ಶಿಕ್ಷಕ ಉಪನ್ಯಾಸದಲ್ಲಿ ಹೇಳುವ ಎಲ್ಲಾ ವಿಚಾರಗಳನ್ನು ವಿದ್ಯಾರ್ಥಿಗಳು ಪೂರ್ಣವಾಗಿ ಗ್ರಹಿಸುತ್ತಾರೆ ಎಂಬುದೇನು ಇಲ್ಲ. ಶಿಕ್ಷಕನ ವೇಗದಲ್ಲಿ ವಿದ್ಯಾರ್ಥಿಗಳು ವಿಚಾರಗಳನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗದಿರಬಹುದು. ವಿದ್ಯಾರ್ಥಿಗಳು ಈ ವಿಧಾನದಲ್ಲಿ ಒಂದೇ ವಿಷಯವನ್ನು ಹೆಚ್ಚು ಸಮಯ ಕೇಳುತ್ತಾ ಹೋದರೆ ಅವರಲ್ಲಿ ಆಸಕ್ತಿಯೂ ಕಡಿಮೆಯಾಗಬಹುದಾದ ಸಾಧ್ಯತೆಗಳು ಇವೆ. ಉಪನ್ಯಾಸ ವಿಧಾನದಿಂದ ಓದುಗಾರಿಕೆ ಮತ್ತು ಮಾತುಗಾರಿಕೆ ಬೆಳೆಯಲಾರವು. ಕಲಿಕೆಯನ್ನು ಇದರಲ್ಲಿ ಮೌಲ್ಯಮಾಪನ ಮಾಡಲು ಸಾಧ್ಯವಾಗುವುದಿಲ್ಲ. ಕಲಿಕೆಗೆ ಸಂಬಂಧಿಸಿದ ದೋಷಗಳನ್ನು ಕುಂದುಕೊರತೆಗಳನ್ನು ತಿದ್ದಿಕೊಳ್ಳಲು ಅವಕಾಶವಿಲ್ಲ. ಉಪನ್ಯಾಸದಲ್ಲಿ ಅಗತ್ಯವಾಗಿ ಬೇಕಾಗುವ ಬೋಧನಾ ಉಪಕರಣಗಳನ್ನು ಬಳಸಬಹುದು. ಮುಖ್ಯವಾದ ವಿಷಯಗಳನ್ನು ತತ್ವಗಳನ್ನು ಸಿದ್ಧಾಂತಗಳನ್ನು ಕಪ್ಪುಹಲಗೆಯ ಮೇಲೆ ಬರೆದು ಬೋಧಿಸಬಹುದಾದ ಅವಕಾಶವಿದೆ.

ಉಪನ್ಯಾಸಕ್ಕೆ ಬಳಸುವ ಭಾಷೆ ವಿದ್ಯಾರ್ಥಿಗಳ ಮಟ್ಟಕ್ಕೆ ಅನುಗುಣವಾಗಿರಬೇಕು. ಉಪನ್ಯಾಸದ ಸಮಯದಲ್ಲಿ ವಿದ್ಯಾರ್ಥಿಗಳು ಮುಖ್ಯಾಂಶಗಳನ್ನು ಟಿಪ್ಪಣಿ ಮಾಡಿಕೊಳ್ಳಲು ಅವಕಾಶವಿರಬೇಕು. ಉಪನ್ಯಾಸದ ಅಂತ್ಯದಲ್ಲಿ ಪ್ರಶ್ನೋತ್ತರಗಳಿಗೆ ಅವಕಾಶವಿರಬೇಕು. ಉಪನ್ಯಾಸದಲ್ಲಿ ವಿಷಯ ನಿರೂಪಣೆ ಸ್ಪಷ್ಟವಾಗಿರಬೇಕು. ಸಮಕಾಲೀನ ವಿಚಾರಗಳಿಗೆ ಅನುಗುಣವಾಗಿ ವಿಚಾರಗಳ ಹೋಲಿಕೆ ಇರಬೇಕು. ಆಗ ಉಪನ್ಯಾಸ ವಿಧಾನ ಹೆಚ್ಚು ಸ್ವಾರಸ್ಯಕರವಾದ ವಿಧಾನವಾಗಿ ಕಾಣಿಸಿಕೊಳ್ಳುತ್ತದೆ.

ಮೌಖಿಕವಾಗಿ ಹಲವಾರು ಪ್ರಶ್ನೆಗಳನ್ನು ಕೇಳುತ್ತಾ, ಮಕ್ಕಳಿಂದ ಉತ್ತರವನ್ನು ಹೇಳಿಸುತ್ತಾ, ಅವರು ಸಾಧಿಸಿರುವ ವಿಷಯ ಜ್ಞಾನವನ್ನು ಪರೀಕ್ಷಿಸುತ್ತಾ, ಮುಂದಿನ ಕಲಿಕೆಯನ್ನು ನಿಯೋಜಿಸಿಕೊಳ್ಳಬಹುದಾದ ವಿಧಾನವನ್ನೇ ಪ್ರಶ್ನೋತ್ತರ ವಿಧಾನ (Question answer method) ಎನ್ನುವರು. ಈ ವಿಧಾನ ಮುಖ್ಯವಾಗಿ ಪ್ರಶ್ನೆ ಮತ್ತು ಉತ್ತರಗಳಿಂದಲೇ ನಡೆಯುವಂತಹದ್ದು. ಮಕ್ಕಳಿಗೆ ಪ್ರಶ್ನೆಗಳನ್ನು ಹಾಕುತ್ತಾ ಅವರಿಂದ ಉತ್ತರಗಳನ್ನು ಹೇಳಿಸುತ್ತಾ ವಿದ್ಯಾರ್ಥಿಗಳ ಕಲಿಕೆಯ ಸಾಮರ್ಥ್ಯವನ್ನು ಪರೀಕ್ಷಿಸುತ್ತಾ ಮುಂದಿನ ಕಲಿಕೆಯನ್ನು ಸಿದ್ಧಪಡಿಸುವುದು ಇದರ ಮುಖ್ಯ ಉದ್ದೇಶ. ವಿದ್ಯಾರ್ಥಿಗಳಿಗೆ ಪ್ರಶ್ನೆಗಳನ್ನು ಹಾಕುವುದರಿಂದ ಉತ್ತರ ಹೇಳಿಸುವುದರಿಂದ ವಿದ್ಯಾರ್ಥಿಗಳು ಏನು ಕಲಿತಿದ್ದಾರೆ, ಎಷ್ಟು ಕಲಿತಿದ್ದಾರೆ, ಹೇಗೆ ಕಲಿತಿದ್ದಾರೆ ಎಂಬುದನ್ನು ಪರೀಕ್ಷಿಸಿಕೊಳ್ಳಬಹುದು. ಗ್ರೀಸ್ ದೇಶದಲ್ಲಿ ಹಿಂದೆ ಇತಿಹಾಸ ಮತ್ತು ರಾಜಕೀಯ ವಿಚಾರಗಳನ್ನು ಕಲಿಸಲು ಪ್ರಶ್ನೋತ್ತರ ವಿಧಾನವನ್ನೇ ಬಳಸಲಾಗುತ್ತಿದ್ದಿತು ಎಂಬುದಕ್ಕೆ ಸಾಕಷ್ಟು ಆಧಾರಗಳು ದೊರೆಯುತ್ತವೆ. ಪ್ರಾಚೀನ ಭಾರತದಲ್ಲಿಯೂ ಈ ವಿಧಾನವನ್ನೇ ಶಿಕ್ಷಣಕ್ಕೆ ಬಳಸಲಾಗುತ್ತಿದ್ದಿತು ಎಂಬುದಕ್ಕೆ ಸಾಕಷ್ಟು ಆಧಾರಗಳಿವೆ. ಮಕ್ಕಳ ವಿಷಯ ಜ್ಞಾನ ಮತ್ತು ಭಾಷಾ ಜ್ಞಾನವನ್ನು ಬೆಳೆಸಲು ಇದು ಉತ್ತಮವಾದ ವಿಧಾನವಾಗಿದೆ.

ಭಾಷಾಬೋಧನೆ ಹೆಚ್ಚು ಪರಿಣಾಮಕಾರಿಯಾಗಬೇಕಾದರೆ ಬೋಧಿಸುವ ವಿಚಾರಗಳ ಜೊತೆ ಜೊತೆಯಲ್ಲಿಯೇ ಮಕ್ಕಳ ಕಲಿಕೆಯನ್ನು ಪರೀಕ್ಷಿಸುತ್ತಾ ಮುಂದುವರಿಯುವುದು ಅತ್ಯಾವಶ್ಯಕ. ಇದರಿಂದ ಮಕ್ಕಳಿಗೆ ಪಾಠ ಅರ್ಥವಾಗುತ್ತಿದೆಯೇ ಎಷ್ಟು ಅರ್ಥವಾಗಿದೆ, ಯಾವ ಯಾವ ವಿಚಾರಗಳನ್ನು ಯಾವ ಯಾವ ದೃಷ್ಟಿಕೋನಗಳಲ್ಲಿ ಅರ್ಥಮಾಡಿಕೊಂಡಿದ್ದಾರೆ ಎಂಬುದು ತಿಳಿದುಬರುವುದು. ಮಕ್ಕಳನ್ನು ಕಲಿಕೆಯ ಕಡೆಸಿದ್ಧ ಮಾಡಲು, ಮಕ್ಕಳ ಕಲಿಕೆಯ ಆಸಕ್ತಿ ಮತ್ತು ಕುತೂಹಲವನ್ನು ಕೆರಳಿಸಲು, ಕಲಿಕೆಯಲ್ಲಿ ಕಂಡುಬರುವ ಸಮಸ್ಯೆಗಳನ್ನು ಗುರುತಿಸಿ ಅವರ ಕಲಿಕೆಯನ್ನು ಸರಿಪಡಿಸಲು, ಕಲಿಕೆಯ ಕಡೆ ಅವರನ್ನು ತ್ವರಿತಗೊಳಿಸಲು, ಕಲಿತ ವಿಚಾರಗಳನ್ನು ದೃಢಪಡಿಸಿಕೊಳ್ಳಲು, ಕಲಿಕೆಯ ಬಗ್ಗೆ ಮಕ್ಕಳಲ್ಲಿ ಹೊಸಕಲ್ಪನೆ ಮಾಡಿಸಲು ಪ್ರಶ್ನೆಗಳು ಅತ್ಯಗತ್ಯ. ಈ ಕಾರಣದಿಂದ ಬೋಧನೆ ಮತ್ತು ಕಲಿಕೆಯ ನಡುವೆ ಪ್ರಶ್ನೆಗಳು ಪ್ರಮುಖ ಪಾತ್ರವಹಿಸುತ್ತವೆ. ಮಕ್ಕಳ ಅರ್ಥ ಗ್ರಹಿಕೆ

ಬೆಳೆಸಲು, ಅಭಿವ್ಯಕ್ತಿ ಸಾಮರ್ಥ್ಯ ಹೆಚ್ಚಿಸಲು, ಅವರ ಅಭಿಪ್ರಾಯಗಳನ್ನು ತಿಳಿಯಲು, ತಪ್ಪು ಅಭಿಪ್ರಾಯಗಳನ್ನು ತಿದ್ದಲು, ಪ್ರಶ್ನೋತ್ತರ ವಿಧಾನ ಸರಿಯಾದ ಬೋಧನಾ ಕ್ರಮವಾಗಿದೆ. ಈ ವಿಧಾನ ನಿರಂತರ ಮತ್ತು ವ್ಯಾಪಕವಾದ ಮೌಲ್ಯಮಾಪನ ತತ್ವವನ್ನು ಆಧರಿಸಿದೆ. ಇಂತಹ ಹಲವಾರು ಉದ್ದೇಶಗಳನ್ನು ಹೊಂದಿರುವ ಪ್ರಶ್ನೋತ್ತರ ವಿಧಾನ ಮಕ್ಕಳಲ್ಲಿ ಸಂಶೋಧನಾ ಪ್ರವೃತ್ತಿ ಬೆಳೆಯುವಂತೆ ಮಾಡುತ್ತದೆ. ಈ ವಿಧಾನ ಯಶಸ್ವಿಯಾಗಬೇಕಾದರೆ ಕೇಳುವ ಪ್ರಶ್ನೆಗಳು ಸರಳವಾಗಿದ್ದು ಉತ್ತಮವಾಗಿರಬೇಕು.

ಉದ್ದೇಶರಹಿತ ಪ್ರಶ್ನೆಗಳಿಗೆ ಇಲ್ಲಿ ಅವಕಾಶವಿರಬಾರದು. ಕೇಳುವ ಪ್ರಶ್ನೆಗಳು ಮಕ್ಕಳ ವಯಸ್ಸು ಮತ್ತು ಮಾನಸಿಕ ಮಟ್ಟಕ್ಕೆ ಅನುಗುಣವಾಗಿರಬೇಕು. ಪ್ರಶ್ನೆಗಳು ವ್ಯಾಕರಣ ದೋಷಗಳಿಂದ ಕೂಡಿರಬಾರದು, ಪ್ರತಿಯೊಂದು ಪ್ರಶ್ನೆಗೂ ನಿರ್ದಿಷ್ಟ ಉತ್ತರ ಸಿಗುವಂತಿರಬೇಕು. ಕೇಳುವ ಪ್ರಶ್ನೆಗಳಲ್ಲಿ ಉತ್ತರ ಅಡಗಿರಬಾರದು. ಒಂದು ಪ್ರಶ್ನೆಗೆ ಒಂದೇ ಉತ್ತರ ದೊರೆಯುವಂತಿರಬೇಕು. ಪ್ರಶ್ನೆಗಳನ್ನು ಕೇಳುವಾಗ ತೋರುವಷ್ಟು ಜಾಣತನ, ಅನುಭವ ಮತ್ತು ಚತುರತೆಯನ್ನು ಉತ್ತರ ಪಡೆಯುವಾಗಲೂ ತೋರಿಸಬೇಕಾಗುತ್ತದೆ. ಸೌಜನ್ಯ ಹಾಗೂ ಶಾಂತಿಪೂರ್ಣ ಸನ್ನಿವೇಶದಲ್ಲಿ ವ್ಯಾಕರಣಬದ್ಧವಾದ ಭಾಷೆಯಲ್ಲಿ ಉತ್ತರ ಪಡೆಯಬೇಕಾಗುತ್ತದೆ. ಮಕ್ಕಳಿಂದ ಪ್ರಶ್ನೆಗಳಿಗೆ ಸರಿಯಾದ ಉತ್ತರ ಬಾರದೇ ಇದ್ದಾಗ ಅಧ್ಯಾಪಕ ಸರಿಯಾಗಿ ಉತ್ತರಿಸಬೇಕು. ಪುಸ್ತಕಗಳನ್ನು ನೋಡಿ ಯಾಂತ್ರಿಕವಾಗಿ ಉತ್ತರಿಸಲು ಅವಕಾಶ ಕೊಡಬಾರದು. ಮಕ್ಕಳು ತಪ್ಪು ಉತ್ತರ ಹೇಳಿದಾಗ ಅವರನ್ನು ದೂಷಿಸದೆ ಅವರನ್ನು ಸರಿಯಾಗಿ ತಿದ್ದಬೇಕು. ಮಕ್ಕಳು ಸರಿಯಾದ ಉತ್ತರ ಹೇಳಿದಾಗ ಅಧ್ಯಾಪಕನು ಅವರನ್ನು ಪ್ರೋತ್ಸಾಹಿಸಬೇಕು. ಹಿಂದುಳಿದ ಮಕ್ಕಳು ಹೆದರಿಕೆಯಿಂದ ಮತ್ತು ನಾಚಿಕೆಯಿಂದ ಸರಿಯಾದ ಉತ್ತರ ಗೊತ್ತಿದ್ದರೂ ಹೇಳಲು ಹಿಂಜರಿಯಬಹುದು. ಉತ್ತರ ಹೇಳುವಾಗ ಮಕ್ಕಳ ಹಾವಭಾವಗಳನ್ನು ಗಮನಿಸಬೇಕು. ಪ್ರಶ್ನೆಗಳಿಗೆ ಸಾಮೂಹಿಕವಾಗಿ ಉತ್ತರಿಸುವುದನ್ನು ತಪ್ಪಿಸಬೇಕು ಮಕ್ಕಳ ಮಟ್ಟಕ್ಕೆ ಮೀರಿದ ಉತ್ತರವನ್ನು ನಿರೀಕ್ಷಿಸಬಾರದು. ಪ್ರಶ್ನೋತ್ತರಕ್ಕೆ ಬಳಸುವ ಭಾಷೆ ಶುದ್ಧವಾಗಿದ್ದು ಸ್ಪಷ್ಟವಾಗಿರಬೇಕು. ತಪ್ಪು ಉಚ್ಚಾರ, ತಪ್ಪು ವಾಕ್ಯಗಳು, ಉಚ್ಚಾರದಲ್ಲಿ ಅಲ್ಪಪ್ರಾಣ ಮತ್ತು ಮಹಾಪ್ರಾಣ ದೋಷಗಳು, ಕಂಡುಬಂದಲ್ಲಿ ಅವನ್ನು ಕಪ್ಪುಹಲಗೆಯ ಮೇಲೆ ಬರೆದು ತಿದ್ದಲು ಯತ್ನಿಸಬೇಕು. ಪದೇ ಪದೇ ತಪ್ಪು ಉತ್ತರಗಳನ್ನು ಮಕ್ಕಳಿಂದ ಹೇಳಿಸಬಾರದು. ದೋಷಪೂರ್ಣ ಉತ್ತರ ದೊರೆತಾಗ ಮಕ್ಕಳನ್ನು ಹೆದರಿಸಬಾರದು. ಆಗ ಭಾಷಾಬೋಧಕನು ತಿದ್ದಬೇಕು. ಈ ಎಲ್ಲಾ ದೃಷ್ಟಿಯಿಂದ ಪ್ರಶ್ನೋತ್ತರ ವಿಧಾನ ಭಾಷಾಬೋಧನೆಗೆ ಹೆಚ್ಚು ಸಮಂಜಸ ಹಾಗೂ ಹೆಚ್ಚು ಉಪಯುಕ್ತವಾದ ವಿಧಾನವಾಗಿ ಕಾಣಿಸಿಕೊಳ್ಳುತ್ತದೆ.

ಕಥೆ ಅಥವಾ ಜೀವನ ಕಥೆಗಳಲ್ಲಿ ಬರುವ ವಿಷಯಗಳ ವಿವರಣೆಗಳನ್ನು ಭಾಷಾ

ಬೋಧನೆಯಲ್ಲಿ ಸಂಭಾಷಣೆಗೆ ತಕ್ಕ ಪಾತ್ರಗಳೊಡನೆ ಸಂದರ್ಭಕ್ಕೆ ತಕ್ಕ ಹಾವಭಾವಗಳ ಮೂಲಕ ಬೋಧಿಸುವ ಕ್ರಮವನ್ನು ರೂಪಿಸಿಕೊಳ್ಳಬಹುದಾದ ವಿಧಾನವನ್ನೇ ನಾಟಕಾಭಿನಯ ವಿಧಾನ (Actor Acting method) ಎನ್ನುವರು. ವಿಚಾರಗಳನ್ನು, ಭಾಷೆಯ ವಿವಿಧ ಅಂಶಗಳನ್ನು ನಾಟಕದ ಮೂಲಕ ಬೋಧಿಸುವುದು ಇದರ ಮುಖ್ಯ ಉದ್ದೇಶ. ನಾಟಕಾಭಿನಯ ಮುಖ್ಯವಾಗಿ ಶ್ರವ್ಯ ಮತ್ತು ದೃಶ್ಯ ಬೋಧನಾ ವಿಧಾನಕ್ಕೆ ಸಂಬಂಧಿಸಿದ್ದು. ಇದು ಭಾಷಾಬೋಧನೆಯನ್ನು ಜೀವಂತವಾಗಿ ರೂಪಿಸುತ್ತದೆ. ಈ ವಿಧಾನದಲ್ಲಿ ಮಕ್ಕಳು ಸಹಜ ಹಾಗೂ ಸ್ವಾಭಾವಿಕವಾಗಿ ಭಾಷೆಯನ್ನು ಕಲಿಯಬಲ್ಲರು. ಮಕ್ಕಳು ಹೆಚ್ಚು ಆಸಕ್ತಿಯಿಂದ ಆಡುತ್ತಾ ಆನಂದದಾಯಕ ಸನ್ನಿವೇಶದಲ್ಲಿ ಭಾಷೆ ಕಲಿಯುವುದರಿಂದ ಅಂತಹ ಭಾಷೆ ಹೆಚ್ಚು ಪರಿಣಾಮಕಾರಿಯಾದದ್ದು. ನಾಟಕದಲ್ಲಿ ಭಾವಪೂರ್ಣವಾದ ಸಂಭಾಷಣೆಗಳಿರುವುದರಿಂದ ಮಕ್ಕಳು ಭಾವಪೂರ್ಣವಾದ ಮಾತುಗಾರಿಕೆಯನ್ನು ಕಲಿಯುತ್ತಾರೆ. ನಾಟಕಾಭಿನಯ ವಿಧಾನ ಪೂರ್ಣವಾಗಿ ಸಂಭಾಷಣೆಯ ಮೇಲೆ ನಿಂತಿರುವುದರಿಂದ ಮಕ್ಕಳು ವಾಕ್ ಚಾತುರ್ಯ, ಸ್ಪಷ್ಟವಾದ ಉಚ್ಚಾರಣೆ, ಕ್ರಿಯಾತ್ಮಕವಾದ ಮಾತುಗಾರಿಕೆ ಕಲಿಯಲು ಸಾಧ್ಯವಿದೆ. ಮಕ್ಕಳು ನಾಟಕ ಆಡುವುದರಿಂದ ರಂಗದ ಮೇಲೆ ನಿಂತು ಸ್ವತಂತ್ರವಾಗಿ ಮಾತನಾಡುವುದರಿಂದ ಸಭಾಕಂಪನ ಮರೆಯಾಗುತ್ತದೆ. ನಾಟಕದಲ್ಲಿ ಸಂಭಾಷಣೆಯನ್ನು ಅನುಸರಿಸಿ ಮಕ್ಕಳು ಮಾತನಾಡುವುದನ್ನು ಕಲಿಯುವುದರಿಂದ ಮಾತುಗಾರಿಕೆ ಬೆಳೆಯುತ್ತದೆ ಅಲ್ಲದೆ ಇದರಿಂದ ಸ್ವಾಭಾವಿಕವಾಗಿ ಭಾಷೆಯನ್ನು ಕಲಿಯಲು ಸಾಧ್ಯವಿದೆ. ನಾಟಕಾಭಿನಯ ವಿಧಾನದಿಂದ ಸರಳವಾಗಿ, ನೇರವಾಗಿ, ಹೆಚ್ಚು ಆಕರ್ಷಕವಾಗಿ, ಮನಸ್ಸಿಗೆ ನಾಟುವಂತೆ ಭಾಷೆಯನ್ನು ಬೋಧಿಸಬಹುದು. ಇದರಿಂದ ಮಕ್ಕಳ ತಿಳಿವಳಿಕೆ ಪಕ್ವವಾಗುತ್ತದೆ ಮತ್ತು ಅಭಿವ್ಯಕ್ತಿ ಸಾಮರ್ಥ್ಯ ಬೆಳೆಯುತ್ತದೆ. ಪಠ್ಯಪುಸ್ತಕಗಳಲ್ಲಿ ಬರುವ ಕಥೆ, ಪ್ರಬಂಧಗಳನ್ನು ನಾಟಕದ ರೂಪದಲ್ಲಿ ಬೋಧಿಸಿದರೆ ಮಕ್ಕಳು ಸಮಗ್ರವಾಗಿ ಮಾತೃಭಾಷೆ ಕಲಿಯಬಲ್ಲರು.

ನಾಟಕಾಭಿನಯ ಅತಿನಾಟಕೀಯವಾಗದಂತೆ ನೋಡಿಕೊಳ್ಳಬೇಕು. ಕೆಲವು ವೇಳೆ ಮಕ್ಕಳು ನಾಟಕಗಳಿಂದ ವ್ಯಾಮೋಹಗೊಂಡು ಶಿಕ್ಷಣ ವಿಚಾರದಲ್ಲಿ ವಿಮುಖರಾಗಬಹುದಾದ ಸಾಧ್ಯತೆಗಳಿರುತ್ತವೆ. ಈ ಕಾರಣದಿಂದ ಶಿಕ್ಷಣದ ಉದ್ದೇಶಕ್ಕಾಗಿ ಮಾತ್ರ ನಾಟಕಗಳನ್ನು ರೂಪಿಸಿಕೊಳ್ಳಬೇಕು. ನಾಟಕಕ್ಕೆ ಆಯ್ದುಕೊಳ್ಳುವ ವಿಚಾರಗಳು ಸಂಭಾಷಣೆಗಳು ಮಕ್ಕಳ ಮಟ್ಟಕ್ಕೆ ಅನುಗುಣವಾಗಿರಬೇಕು. ಚಿಕ್ಕ ಪುಟ್ಟ ನಾಟಕಗಳನ್ನು ಮಾತ್ರ ಭಾಷಾಬೋಧನೆಗೆ ಆಯ್ದುಕೊಳ್ಳುವುದು ಉತ್ತಮ. ನಾಟಕದ ಆಯ್ಕೆ, ಪಾತ್ರಗಳ ಹಂಚಿಕೆ, ನಾಟಕದ ಸಿದ್ಧತೆ ಮುಂತಾದುವುಗಳ ಬಗ್ಗೆ ಮಕ್ಕಳಿಗೆ ಸ್ವಾತಂತ್ರ್ಯಕೊಟ್ಟರೆ ಅವರಲ್ಲಿ ಸೃಜನಶೀಲತೆ ಮತ್ತು ಸಂಘಟನಾಶಕ್ತಿ ಬೆಳೆಯುತ್ತದೆ. ಅತಿಗಂಭೀರವಾದ, ಅತಿಭಯಂಕರವಾದ ಸತ್ಯಕ್ಕೆ ದೂರವಾದ ವಿಚಾರಗಳನ್ನು ನಾಟಕದ ವಸ್ತುವನ್ನಾಗಿ ಆಯ್ದುಕೊಳ್ಳಬಾರದು. ನಾಟಕ ಕೆಲವು

ವೇಳೆ ಮಕ್ಕಳಮೇಲೆ ಕೆಟ್ಟ ಪರಿಣಾಮವನ್ನು ಬೀರಬಹುದಾದ ಸಾಧ್ಯತೆಗಳಿವೆ. ಸಮಕಾಲೀನ ವಿಚಾರಗಳನ್ನು, ನೀತಿ ಪ್ರಧಾನವಾದ ಕಥೆಗಳನ್ನು, ಮಕ್ಕಳ ದೈನಂದಿನ ಜೀವನದಲ್ಲಿ ಕಂಡುಬರುವ ವಿವಿಧ ಸಮಸ್ಯೆಗಳನ್ನು, ಜೀವನವರೌಲ್ಯವುಳ್ಳ ವಿಚಾರಗಳನ್ನು, ಶಾಲೆಯ ಸಮಸ್ಯೆಗಳನ್ನು, ಐತಿಹಾಸಿಕ ಘಟನೆಗಳನ್ನು ನಾಟಕಾಭಿನಯಕ್ಕೆ ಆರಿಸಿಕೊಳ್ಳುವುದು ಉತ್ತಮ. ಸಮಾಜ ಸುಧಾರಕರ, ರಾಷ್ಟ್ರನಾಯಕರ, ದೇಶ ಪ್ರೇಮಿಗಳ ಜೀವನ ಚರಿತ್ರೆಗಳನ್ನು ನಾಟಕರೂಪದಲ್ಲಿ ಪರಿವರ್ತಿಸಿಕೊಂಡು ಪ್ರದರ್ಶಿಸಬಹುದು. ನಾಟಕದ ವಸ್ತು, ಪಾತ್ರ, ಸಂಭಾಷಣೆಗಳು, ಸನ್ನಿವೇಶಗಳು ಸ್ವಾಭಾವಿಕವಾಗಿರಬೇಕು. ನಾಟಕಗಳಲ್ಲಿ ಬಳಸುವ ಭಾಷೆ ಸರಳವಾಗಿ ಸ್ಪಷ್ಟವಾಗಿರಬೇಕು. ಇದರಿಂದ ಸಾಂದರ್ಭಿಕ ಮಾತುಗಾರಿಕೆ ಮತ್ತು ಸಂಭಾಷಣೆಯನ್ನು ಕಲಿಸಲು ಸುಲಭವಾಗುತ್ತದೆ. ನಾಟಕದಲ್ಲಿ ಹಿತಮಿತ ಪ್ರಮಾಣದಲ್ಲಿ ಸಂಗೀತವನ್ನು ಬಳಸಬಹುದು. ಇದರಿಂದ ಮಕ್ಕಳಲ್ಲಿ ಹಾಡುಗಾರಿಕೆಯ ಅಭಿರುಚಿ ಬೆಳೆಯುವುದು.

ಪಠ್ಯಪುಸ್ತಕಗಳ ಸಹಾಯವಿಲ್ಲದೆ ಮಕ್ಕಳಿಗೆ ಎಲ್ಲಾ ಭಾಷಿಕ ವಿಚಾರಗಳನ್ನು ಬಾಯಿಮಾತಿನಲ್ಲಿಯೇ ಕಲಿಸಲು ಸಾಧ್ಯವಾಗುವುದಿಲ್ಲ. ಭಾಷಾಬೋಧನೆಗೆ ಶಿಕ್ಷಣದ ಉದ್ದೇಶದಿಂದ ತಯಾರಿಸಿಕೊಂಡ ಪಠ್ಯಪುಸ್ತಕದ ಸಹಾಯ ಅತ್ಯಗತ್ಯ. ಪಠ್ಯಪುಸ್ತಕಗಳನ್ನು ತುಂಬ ಎಚ್ಚರಿಕೆಯಿಂದ ನಿರ್ದಿಷ್ಟ ವಿಚಾರಗಳನ್ನು ನಿರ್ದಿಷ್ಟ ತರಗತಿಗಳಿಗೆ ಅನುಗುಣವಾಗಿ ಸುವ್ಯವಸ್ಥಿತವಾಗಿ ತಯಾರಿಸಿಕೊಳ್ಳಬೇಕಾಗುತ್ತದೆ. ಪುಸ್ತಕಗಳಲ್ಲಿರುವ ವಿಚಾರಗಳನ್ನು ಓದಿ ಅರ್ಥಮಾಡಿಕೊಳ್ಳುವುದಕ್ಕೆ ಪಠ್ಯಪುಸ್ತಕ ವಿಧಾನ (Text book method) ಎನ್ನುವರು. ಪಠ್ಯಪುಸ್ತಕಗಳಲ್ಲಿರುವ ವಿಚಾರಗಳನ್ನು ಬೋಧಕ ಮೊದಲು ಓದಿ ಅರ್ಥಮಾಡಿಕೊಂಡು ಅನಂತರ ಮಕ್ಕಳಿಗೆ ಆ ವಿಚಾರಗಳನ್ನು ಪಠ್ಯಪುಸ್ತಕಗಳ ಸಹಾಯದಿಂದ ಬೋಧಿಸಬೇಕಾಗುತ್ತದೆ. ಇದೇ ಪಠ್ಯಪುಸ್ತಕ ವಿಧಾನದ ಮುಖ್ಯ ಉದ್ದೇಶ. ಈ ವಿಧಾನದಲ್ಲಿ ಬೋಧನಾಕ್ರಮ ಪೂರ್ಣವಾಗಿ ಪಠ್ಯಪುಸ್ತಕಗಳನ್ನೇ ಅವಲಂಬಿಸಿರುತ್ತದೆ. ಪಠ್ಯಪುಸ್ತಕಗಳು ಬೋಧಕ ಮತ್ತು ವಿದ್ಯಾರ್ಥಿ ಇಬ್ಬರಿಗೂ ಉತ್ತಮ ಶಿಕ್ಷಣ ಸಾಧನಗಳಾಗಿವೆ. ಪಠ್ಯಪುಸ್ತಕಗಳು ಇಬ್ಬರ ಶೈಕ್ಷಣಿಕ ಚಟುವಟಿಕೆಗಳನ್ನು ನಿಯೋಜಿಸುತ್ತವೆ. ಅಧ್ಯಾಪಕ ಯಾವ ತರಗತಿಗೆ ಯಾವ ವಿಚಾರವನ್ನು ಕಲಿಸಬೇಕು, ಹೇಗೆ ಕಲಿಸಬೇಕು, ಎಷ್ಟು ಕಲಿಸಬೇಕು ಎಂಬುದನ್ನು ಪಠ್ಯಪುಸ್ತಕಗಳು ನಿರ್ದೇಶಿಸುತ್ತವೆ. ಪಠ್ಯಪುಸ್ತಕಗಳಿಲ್ಲದೆ ಬೋಧನಾಕಾರ್ಯ ಒಂದು ಕ್ರಮದಲ್ಲಿ ಸಾಗಲಾರದು. ಮಕ್ಕಳು ಕಲಿಯಬೇಕಾಗಿರುವ ವಿಚಾರಗಳನ್ನು ಯಾವ ಪ್ರಮಾಣದಲ್ಲಿ ಬೋಧಿಸಬೇಕು ಎಂಬುದನ್ನು ಪಠ್ಯಪುಸ್ತಕಗಳು ತಿಳಿಸುತ್ತವೆ. ಪಠ್ಯಪುಸ್ತಕಗಳಲ್ಲಿ ಭಾಷಿಕ ವಿಚಾರಗಳನ್ನು ಭಾಷಾಸಾಮರ್ಥ್ಯ ವೃದ್ಧಿಪಡಿಸುವ ಉದ್ದೇಶದಿಂದ ಕ್ರಮವಾಗಿ ಅಳವಡಿಸಿಕೊಳ್ಳಬೇಕಾಗುತ್ತದೆ. ಇದರಿಂದ ವಿಷಯಜ್ಞಾನ ಮತ್ತು ಭಾಷಾಸಾಮರ್ಥ್ಯ ಎರಡೂ ಬೆಳೆಯುತ್ತವೆ. ಇದರಿಂದ ಮಕ್ಕಳ ಮಾತುಗಾರಿಕೆ ಮತ್ತು ಓದುಗಾರಿಕೆ ಬೆಳೆಯುತ್ತವೆ.

ಪಠ್ಯಪುಸ್ತಕದಲ್ಲಿ ಕಂಡುಬರುವ ಹೊಸ ಹೊಸ ಶಬ್ದಗಳನ್ನು ವ್ಯಾಕರಣ ವಿಚಾರಗಳನ್ನು ಕಲಿಸಲು ಅನುಕೂಲವಾಗುವಂತೆ ಪಠ್ಯಕ್ರಮವಿರಬೇಕು. ಪದಗಳ ಜೋಡಣೆ, ಬರವಣಿಗೆ ಮುಂತಾದುವುಗಳನ್ನು ಕಲಿಸಲು ಪಠ್ಯಪುಸ್ತಕಗಳಲ್ಲಿ ಅವಕಾಶ ವಿರಬೇಕು. ಪಠ್ಯಪುಸ್ತಕಗಳಲ್ಲಿ ಬರುವ ಕಥೆ, ಕವನ, ನಾಟಕ, ಜೀವನ ಚರಿತ್ರೆಗಳು ಸಾಹಸಮಯ ವಿಚಾರಗಳು ನೋವುನಲಿವು ಮುಂತಾದ ವಿಚಾರಗಳನ್ನು ಮಕ್ಕಳು ಓದುವುದರಿಂದ ಅವರು ಉತ್ತಮ ಗುಣಗಳನ್ನು ಬೆಳೆಸಿಕೊಳ್ಳಲು ಸಹಾಯಕವಾಗುತ್ತದೆ. ಉತ್ತಮವಾದ ಪಠ್ಯಪುಸ್ತಕಗಳು ಮಕ್ಕಳ ಜ್ಞಾನವಿಕಾಸ ಮತ್ತು ವ್ಯಕ್ತಿತ್ವ ಬೆಳವಣಿಗೆಗೆ ಉತ್ತಮವಾದ ನೆಲೆಗಟ್ಟನ್ನು ಒದಗಿಸಿಕೊಡುತ್ತವೆ. ವಿಷಯಗಳನ್ನು ಓದಿ ಅಭ್ಯಾಸಮಾಡಲು ಪರೀಕ್ಷೆಗೆ ಸಿದ್ಧತೆಮಾಡಿಕೊಳ್ಳಲು ಪಠ್ಯಪುಸ್ತಕಗಳು ನೆರವಾಗುತ್ತವೆ. ಪಠ್ಯಪುಸ್ತಕಗಳು ಎಷ್ಟೇ ಪರಿಣಾಮಕಾರಿಯಾಗಿದ್ದರೂ ಪರಿಣತರಲ್ಲದ ಬೋಧಕರ ಕೈಯಲ್ಲಿ ಏನನ್ನೂ ಸಾಧಿಸಲು ಬರುವುದಿಲ್ಲ. ಪಠ್ಯಪುಸ್ತಕಗಳನ್ನು ಬಳಸಿ ಮಕ್ಕಳ ಕಲಿಕೆಯನ್ನು ಹೇಗೆ ಪ್ರೋತ್ಸಾಹಿಸಬೇಕು, ಪಠ್ಯಪುಸ್ತಕಗಳಿಂದ ಬೋಧನೆಯನ್ನು ಹೇಗೆ ಸುಧಾರಿಸಬೇಕು, ಓದುಗಾರಿಕೆ ಮತ್ತು ವ್ಯಾಕರಣಾಂಶಗಳನ್ನು ಹೇಗೆ ಕಲಿಸಬೇಕು, ಪುಸ್ತಕಗಳಲ್ಲಿ ಕಂಡುಬರುವ ಅಕ್ಷರಗಳನ್ನು ಶಬ್ದಗಳನ್ನು ಹೇಗೆ ಹೊಂದಿಸಿ ಓದಬೇಕು, ಲೇಖನ ಚಿಹ್ನೆಗಳನ್ನು ಹೇಗೆ ಗುರುತಿಸಿಕೊಳ್ಳಬೇಕು ಎಂಬ ಅರಿವು ಶಿಕ್ಷಕನಿಗೆ ಇರಬೇಕಾಗುತ್ತದೆ. ಓದಿನ ವೇಗವನ್ನು ಹೆಚ್ಚಿಸಿಕೊಳ್ಳಲು ಬರವಣಿಗೆಯ ಸಾಮರ್ಥ್ಯವನ್ನು ಬೆಳೆಸಿಕೊಳ್ಳಲು ಪಠ್ಯಪುಸ್ತಕ ವಿಧಾನದ ಸಹಾಯ ಅತ್ಯಗತ್ಯ. ಪಠ್ಯಪುಸ್ತಕಗಳು ಹಲವಾರು ರೀತಿಯಲ್ಲಿ ಸಹಾಯಕವಾಗಿದ್ದರೂ ಪಠ್ಯ ಪುಸ್ತಕ ಒಂದು ಸಾಧನವೇ ಹೊರತು ಅದೇ ಸರ್ವಸ್ವವಲ್ಲ.

ಅನುಗಮನ ವಿಧಾನ (Inductive method) ಭಾಷಾಬೋಧನೆಗೆ ತುಂಬ ವೈಜ್ಞಾನಿಕವಾದ ವಿಧಾನವಾಗಿದೆ. ಇದರಲ್ಲಿ ಬೋಧನಾಕ್ರಮ ಒಂದು ನಿರ್ದಿಷ್ಟವಾದ ವಿಚಾರಗಳ ಕಡೆಯಿಂದ ಒಂದು ಸಾಮಾನ್ಯ ತೀರ್ಮಾನದ ಕಡೆಯಿಂದ ಮುಂದುವರಿಯುತ್ತದೆ. ಒಂದು ಸಾಮಾನ್ಯ ತೀರ್ಮಾನವನ್ನು ಪ್ರತಿಪಾದಿಸುವುದಕ್ಕಾಗಿ ಇದರಲ್ಲಿ ಅನೇಕ ಉದಾಹರಣೆಗಳನ್ನು ನಿಯೋಜಿಸಿಕೊಳ್ಳಲಾಗುತ್ತದೆ. ಒಂದು ಸಾಮಾನ್ಯ ತೀರ್ಮಾನವನ್ನು ಪ್ರತಿಪಾದಿಸುವುದು ಈ ವಿಧಾನದ ಮುಖ್ಯ ಉದ್ದೇಶವಾದರೂ ಇದು ನಿರ್ದಿಷ್ಟ ವಿಚಾರಗಳ ಕಡೆಯಿಂದ ಆರಂಭವಾಗಿ ಸಾಮಾನ್ಯ ನಿರೂಪಣೆಯ ಕಡೆಗೆ ನಮ್ಮ ಆಲೋಚನೆಗಳನ್ನು ಸಾಗಿಸುತ್ತದೆ. ವಿದ್ಯಾರ್ಥಿಗಳಿಗೆ ಅಗತ್ಯವಿರುವ ಆಧಾರ ಅಂಶಗಳನ್ನು ಒದಗಿಸಿಕೊಟ್ಟು ಅದರಲ್ಲಿ ಅಡಗಿರುವ ಸತ್ಯಾಂಶಗಳನ್ನು ಹೊರತರಲು ಈ ವಿಧಾನ ಸಹಾಯಮಾಡುತ್ತದೆ. ಬೋಧಕ ಬೋಧಿಸಬೇಕಾಗಿರುವ ವಿಷಯಕ್ಕೆ ಸಂಬಂಧಿಸಿದ ಉದಾಹರಣೆಗಳನ್ನು ಮೊದಲು ವಿದ್ಯಾರ್ಥಿಗಳಿಗೆ ಒದಗಿಸಿಕೊಟ್ಟು ಅನಂತರ ಅವುಗಳ ಸಹಾಯದಿಂದ ಸಾಮಾನ್ಯ ಗುಣ ಲಕ್ಷಣಗಳನ್ನು ಪ್ರತಿನಿಧಿಸುವ ಒಂದು ಸೂತ್ರವನ್ನು ಸುಲಭವಾಗಿ ನಿರೂಪಿಸಬಹುದು. ಅನುಗಮನ

ವಿಧಾನದಲ್ಲಿ ಮಾತೃಭಾಷೆಯನ್ನು ಬೋಧಿಸುವುದರಿಂದ ವಿದ್ಯಾರ್ಥಿಗಳ ತಾರ್ಕಿಕ ಶಕ್ತಿ ಬೆಳೆಯುತ್ತದೆ. ಇದರಿಂದ ಭಾಷಾಕಲಿಕೆ ವಿದ್ಯಾರ್ಥಿಗಳಿಗೆ ಹೊರೆ ಎನಿಸಿಕೊಳ್ಳುವುದಿಲ್ಲ. ವಿದ್ಯಾರ್ಥಿಗಳು ಈ ವಿಧಾನದಲ್ಲಿ ಸುಲಭ ಹಾಗೂ ಹೆಚ್ಚು ಪರಿಣಾಮಕಾರಿಯಾಗಿ ಭಾಷೆಯನ್ನು ಕಲಿಯಬಲ್ಲರು.

ಇದಕ್ಕೆ ಕೊಡುವ ಉದಾಹರಣೆಗಳನ್ನು ವಿದ್ಯಾರ್ಥಿಗಳು ಅರ್ಥಮಾಡಿಕೊಂಡು ಸ್ವತಃ ತಾವೇ ಸಾಮಾನ್ಯ ನಿಯಮವನ್ನು ರೂಪಿಸಿಕೊಳ್ಳುವುದರಿಂದ ಮಕ್ಕಳ ಕಲಿಕೆಯ ಬಗ್ಗೆ ಆತ್ಮವಿಶ್ವಾಸ ಮೂಡುತ್ತದೆ. ಕಲಿತ ವಿಚಾರಗಳು ವಿದ್ಯಾರ್ಥಿಗಳ ಮನಸ್ಸಿನಲ್ಲಿ ಹೆಚ್ಚುಕಾಲ ಉಳಿಯಬಲ್ಲವು. ಒಂದುವೇಳೆ ಸಾಮಾನ್ಯ ನಿಯಮ ಮರೆತುಹೋದರೂ ಕೊಟ್ಟಿರುವ ಉದಾಹರಣೆಗಳು ಅವುಗಳ ಸಾಮಾನ್ಯ ನಿಯಮ ರೂಪಿಸಿಕೊಳ್ಳಲು ಸಹಾಯ ಮಾಡುತ್ತವೆ. ಅನುಗಮನ ವಿಧಾನದಿಂದ ಭಾಷೆಯ ಎಲ್ಲಾ ವಿಚಾರಗಳನ್ನು ವಿದ್ಯಾರ್ಥಿಗಳ ಮನಮುಟ್ಟುವಂತೆ ಯಶಸ್ವಿಯಾಗಿ ಬೋಧಿಸಲು ಸಾಧ್ಯವಿದೆ. ಈ ವಿಧಾನ ಹೆಚ್ಚು ವೈಜ್ಞಾನಿಕ ಮತ್ತು ಹೆಚ್ಚು ಉಪಯುಕ್ತ ವಿಧಾನವಾಗಿರುವುದರಿಂದ ಇದು ವಿದ್ಯಾರ್ಥಿಗಳ ಅಂತಃಕಲಿಕೆಯನ್ನು ಪ್ರಚೋದಿಸಬಲ್ಲದು. ವ್ಯಾಕರಣ ವಿಚಾರಗಳನ್ನು ಇದರಲ್ಲಿ ಹೆಚ್ಚು ಸರಳೀಕರಣ ಮಾಡಿ ಬೋಧಿಸುವುದರಿಂದ ಭಾಷೆಯ ಪೂರ್ಣ ಕಲಿಕೆ ಸಾಧ್ಯವಾಗುತ್ತದೆ. ಮಕ್ಕಳು ಹೆಚ್ಚು ಆಸಕ್ತಿಯಿಂದ ಪ್ರಾಯೋಗಿಕವಾಗಿ ವಿಚಾರಗಳನ್ನು ಇದರಲ್ಲಿ ಕಲಿಯಬಲ್ಲರು. ಇದರಿಂದ ಮಕ್ಕಳ ತಾರ್ಕಿಕ ಶಕ್ತಿ ಮತ್ತು ಕುಶಾಗ್ರಬುದ್ಧಿ ಬೆಳೆಯುತ್ತದೆ. ಹಾಗೆಯೇ ಅದರಲ್ಲಿ ವಿವೇಚನಾಶಕ್ತಿ ಹೆಚ್ಚುತ್ತದೆ. ಪ್ರಾಥಮಿಕ ಮತ್ತು ಮಾಧ್ಯಮಿಕ ಹಂತದ ವರೆಗೆ ಈ ವಿಧಾನದಲ್ಲಿ ಭಾಷೆ ಬೋಧಿಸುವುದು ಹೆಚ್ಚು ಉಪಯುಕ್ತವಾದದ್ದು, ಈ ವಿಧಾನದಲ್ಲಿಯೂ ಕೂಡ ಕೆಲವು ಅನಾನುಕೂಲಗಳು ಇಲ್ಲದೆ ಇಲ್ಲ. ಈ ವಿಧಾನ ಭಾಷಾ ಬೋಧನೆಗೆ ಹೆಚ್ಚು ಸಮಯ ನಿರೀಕ್ಷಿಸುತ್ತದೆ. ಪಠ್ಯಪುಸ್ತಕದ ಎಲ್ಲಾ ವಿಚಾರಗಳನ್ನು ಈ ವಿಧಾನದಲ್ಲಿಯೇ ಬೋಧಿಸಲು ಬರುವುದಿಲ್ಲ. ನಾಲ್ಕಾರು ಉದಾಹರಣೆಗಳ ಸಹಾಯದಿಂದ ಒಂದು ವಿಷಯದ ಎಲ್ಲಾ ವಿಚಾರಗಳನ್ನು ಮಾತ್ರ ರೂಪಕ್ಕೆ ತರುವುದು ಅಷ್ಟೊಂದು ಉಚಿತವಾದುದಲ್ಲ. ಈ ವಿಧಾನದಲ್ಲಿ ಉದಾಹರಣೆಗಳೇ ಪ್ರಮುಖ ಪಾತ್ರ ವಹಿಸುವುದರಿಂದ ಪಾಠದ ಎಷ್ಟೋ ವಿಚಾರಗಳು ಕೈಬಿಟ್ಟು ಹೋಗಬಹುದಾದ ಸಾಧ್ಯತೆಗಳಿವೆ. ಇದರಲ್ಲಿ ಭಾಷಿಕ ವಿಚಾರಗಳನ್ನು ಹೆಚ್ಚು ವೈಜ್ಞಾನಿಕವಾಗಿ ಬೋಧಿಸಬಹುದಾದರೂ ಆಧ್ಯಾತ್ಮಿಕ ವಿಚಾರಗಳನ್ನು ಯಶಸ್ವಿಯಾಗಿ ಬೋಧಿಸಲು ಬರುವುದಿಲ್ಲ.

ಅನುಗಮನ ವಿಧಾನಕ್ಕೆ ವಿರುದ್ಧವಾದ ವಿಧಾನವನ್ನೇ ನಿಗಮನ ವಿಧಾನ (deductive method) ಎನ್ನುವರು. ಅನುಗಮನ ವಿಧಾನದಲ್ಲಿ ಒಂದು ಸಾಮಾನ್ಯ ಸೂತ್ರದೊಡನೆ ಬೋಧನೆ ಆರಂಭವಾಗುತ್ತದೆ. ಕೆಲವು ಸಾಮಾನ್ಯ ನಿಯಮಗಳ ಆಧಾರದಮೇಲೆ ಪ್ರಾರಂಭವಾಗಿ ನಿರ್ದಿಷ್ಟ ವಿಷಯದಕಡೆ ಸಾಗುವುದು ಈ

ಬೋಧನೆಯ ಮುಖ್ಯ ಉದ್ದೇಶ. ವ್ಯಾಕರಣ ಬೋಧನೆಗೆ ಇದು ಅತ್ಯುತ್ತಮವಾದ ಬೋಧನಾ ವಿಧಾನವಾಗಿದೆ. ವ್ಯಾಕರಣ ಬೋಧನೆಯಲ್ಲಿ ಮೊದಲು ಸಂಧಿ, ಸಮಾಸ, ಅಲಂಕಾರಗಳಿಗೆ ಸಂಬಂಧಿಸಿದ ಸೂತ್ರಗಳನ್ನು ಒದಗಿಸಿಕೊಟ್ಟು ಅನಂತರ ಹಲವಾರು ಉದಾಹರಣೆಗಳ ಸಹಾಯದಿಂದ ಅವನ್ನು ವಿದ್ಯಾರ್ಥಿಗಳಿಗೆ ಅರ್ಥವಾಗುವಂತೆ ಹೆಚ್ಚು ವ್ಯವಸ್ಥಿತವಾಗಿ ಈ ವಿಧಾನದಲ್ಲಿ ಬೋಧಿಸಬಹುದು. ಅನುಗಮನ ವಿಧಾನವು ಬೋಧನೆಗೆ ಹೆಚ್ಚು ಸಮಯವನ್ನು ತೆಗೆದುಕೊಂಡರೆ, ನಿಗಮನ ವಿಧಾನವು ಕಡಿಮೆ ಅವಧಿಯನ್ನು ತೆಗೆದುಕೊಳ್ಳುತ್ತದೆ. ಅನುಗಮನ ವಿಧಾನದಲ್ಲಿ ಕಡಿಮೆ ಅವಧಿಯಲ್ಲಿ ಹೆಚ್ಚು ವಿಚಾರಗಳನ್ನು ಬೋಧಿಸಬಹುದಾದ ಸೌಲಭ್ಯವಿದೆ. ಮಾತೃ ಭಾಷೆ ಕಲಿಸಲು ಅನುಗಮನ ವಿಧಾನ ತುಂಬ ಸುಲಭವಾದ ವಿಧಾನ. ಇದರಲ್ಲಿ ಸೂತ್ರಗಳನ್ನು, ಸಾಮಾನ್ಯ ನಿಯಮಗಳನ್ನು ಜ್ಞಾಪಕದಲ್ಲಿರಿಸಿಕೊಳ್ಳುವುದರಿಂದ ವಿದ್ಯಾರ್ಥಿಯ ಸ್ಮರಣಶಕ್ತಿ ಹೆಚ್ಚುತ್ತದೆ. ಪಾಠದ ಪುನರಾವರ್ತನೆಗೆ ಮತ್ತು ಅಭ್ಯಾಸಕ್ಕೆ ಈ ವಿಧಾನ ಹೆಚ್ಚು ಉಪಯುಕ್ತವಾದದ್ದು. ಮೊದಲು ನಿಯಮಗಳನ್ನು ಹೇಳಿ ಅನಂತರ ಉದಾಹರಣೆಗಳನ್ನು ಕೊಡುವುದರಿಂದ ವಿದ್ಯಾರ್ಥಿಗಳ ಆಲೋಚನಾ ಶಕ್ತಿ ಬೆಳೆಯುತ್ತದೆ. ಪ್ರಾಥಮಿಕ ಹಂತದ ಶಿಕ್ಷಣಕ್ಕೆ ಈ ವಿಧಾನ ಸೂಕ್ತವಾದುದಲ್ಲ. ಹೊಸದಾಗಿ ಭಾಷೆ ಕಲಿಯುವ ಮಕ್ಕಳಿಗೆ ಈ ವಿಧಾನದಲ್ಲಿ ಭಾಷೆ ಕಲಿಸುವುದು ತುಂಬ ಕಷ್ಟವಾಗುತ್ತದೆ. ನಿಯಮಗಳ ಆಧಾರದಮೇಲೆ ನಿಂತಿರುವ ನಿಗಮನ ವಿಧಾನ ಅರ್ಥ ಗ್ರಹಿಕೆಗೆ ಸೂಕ್ತವಾದುದಲ್ಲ. ವಿದ್ಯಾರ್ಥಿಗಳು ಹೆಚ್ಚುಕಾಲ ಸೂತ್ರಗಳನ್ನು ನೆನಪಿನಲ್ಲಿಟ್ಟುಕೊಳ್ಳಲಾರರು. ಸೂತ್ರ ಮರೆತರೆ ಎಲ್ಲಾ ವಿಚಾರಗಳೂ ಮರೆತು ಹೋಗುತ್ತವೆ.

ಆಟದ ಮೂಲಕ ಭಾಷೆಯನ್ನು ಬೋಧಿಸಬಹುದಾದ ವಿಧಾನವನ್ನೇ ಕ್ರೀಡಾ ವಿಧಾನ (Playway method) ಎನ್ನುವರು. ಮಕ್ಕಳಲ್ಲಿ ಸಾಮಾನ್ಯವಾಗಿ ಕ್ರೀಡಾ ಮನೋಭಾವ ಹೆಚ್ಚಿಸುತ್ತದೆ. ಆದಕಾರಣ ಆಟದ ಮೂಲಕ ಭಾಷೆಯನ್ನು ಕಲಿಸುವುದು ಬಹಳ ಸುಲಭ. ಆಟದ ಮೂಲಕ ವಿಚಾರಗಳನ್ನು ಹೆಚ್ಚು ಆಕರ್ಷಕ ಮತ್ತು ಹೆಚ್ಚು ಪರಿಣಾಮಕಾರಿಯಾಗಿ ಕಲಿಸಬಹುದು. ಇದು ಮಕ್ಕಳ ಶಾರೀರಿಕ ಮತ್ತು ಮಾನಸಿಕ ವಿಕಾಸಕ್ಕೆ ಸಹಾಯಕವಾಗುತ್ತದೆ. ಅಮೆರಿಕೆಯ ಕಾಲ್ಡ್‌ವೆಲ್‌ಕುಕ್ ಎಂಬಾತನು ಈ ವಿಧಾನವನ್ನು ಮೊತ್ತಮೊದಲು ಪ್ರತಿಪಾದಿಸಿದನು. ಇವನ ಅನಂತರ ಬೇರೆ ಬೇರೆ ವಿದ್ವಾಂಸರು ಈ ವಿಧಾನವನ್ನು ಪ್ರಯೋಗಕ್ಕೆ ತಂದರು. ಕೇವಲ ಓದುವುದರಿಂದ ಬರೆಯುವುದರಿಂದ ಪರಿಣತಿ ಬರುವುದಿಲ್ಲ. ಭಾಷಾಕಲಿಕೆ ಮಕ್ಕಳಲ್ಲಿ ಹೆಚ್ಚು ಪರಿಣಾಮಕಾರಿಯಾಗಬೇಕಾದರೆ ಆಟಗಳ ಮೂಲಕ ವಿಚಾರಗಳನ್ನು ಕಲಿಸಲು ಯತ್ನಿಸಬೇಕು ಎಂಬುದು ಹೆಚ್ಚು ಪ್ರಚಾರಕ್ಕೆ ಬಂದಿತು. ಆಟದ ಮೂಲಕ ಕಲಿಸುವ ಕಲಿಕೆ ಸಾಮಾನ್ಯವಾಗಿ ಪ್ರಾಯೋಗಿಕವಾಗಿರುತ್ತದೆ. ಇದರಿಂದ ಮಕ್ಕಳ ಶಾರೀರಕ ಮತ್ತು ಮಾನಸಿಕ ಬೆಳವಣಿಗೆ ಸಾಧ್ಯವಾಗುತ್ತದೆ. ಆಟದ ಸನ್ನಿವೇಶದಲ್ಲಿ

ಮಕ್ಕಳ ಭಾಷಾಕಲಿಕೆ ಸ್ವಾಭಾವಿಕವಾಗಿರುತ್ತದೆ. ಇದರಿಂದ ಮಕ್ಕಳ ಕಲಿಕೆಯು ಆಸಕ್ತಿ ಮತ್ತು ಉತ್ಸಾಹ ಹೆಚ್ಚುತ್ತದೆ. ಮಕ್ಕಳ ಆಟಪಾಠಗಳು ಅವರ ಸೃಜನಶೀಲ ಸಾಮರ್ಥ್ಯವನ್ನು ಬೆಳೆಸುತ್ತವೆ ಎಂದು ಆವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಆಟದ ಮೂಲಕ ಕಲಿತ ಮಾತೃಭಾಷೆ ಹೆಚ್ಚು ಅರ್ಥಪೂರ್ಣ ಮತ್ತು ಹೆಚ್ಚು ಸ್ಥಿರವಾದದ್ದು, ಇದರಿಂದ ಗುಂಪುಗಾರಿಕೆಯ ಪ್ರವೃತ್ತಿ, ಸಂಘಟನಾಶಕ್ತಿ, ಸಂಯಮ, ಸಹಕಾರ, ಧೈರ್ಯ, ಸಾಹಸ, ಜವಾಬ್ದಾರಿ, ದಕ್ಷತೆ, ಐಕ್ಯತೆ ಬೆಳೆಯುತ್ತವೆ. ಮಕ್ಕಳಲ್ಲಿ ರಚನಾತ್ಮಕ ಪೈಪೋಟಿ, ಸ್ಪರ್ಧಾತ್ಮಕ ಮನೋಭಾವ, ಶಿಸ್ತು ಮೂಡಿ ಬರುತ್ತವೆ. ಈ ವಿಧಾನ ಆಡುತ್ತಾ ಮಾಡುತ್ತಾ ಕಲಿ ಎಂಬ ನಾಣ್ಣುಡಿಗೆ ಅನುಗುಣವಾಗಿರುವ ಕಾರಣ ಇದರಿಂದ ಮಕ್ಕಳ ವಿವಿಧ ಭಾಷಾ ಕೌಶಲಗಳು ಬೆಳೆಯುತ್ತವೆ ಎಂಬುದು ಕುಕ್‌ರವರ ಅಭಿಪ್ರಾಯ

ಸಾಂಸ್ಕೃತಿಕ ಕಾರ್ಯಕ್ರಮಗಳು, ಸಾಹಿತ್ಯಿಕ ಚಟುವಟಿಕೆಗಳು, ಭಾಷಣಗಳು, ಚರ್ಚಾ ಸ್ಪರ್ಧೆಗಳು, ಹಾಡುಗಾರಿಕೆ ಮತ್ತು ಪ್ರವಾಸಗಳು, ಹಬ್ಬ ಹರಿದಿನಗಳು, ನಾಟಕಗಳು ಮಕ್ಕಳ ಭಾಷೆಯನ್ನು ಸ್ವಾಭಾವಿಕವಾಗಿ ಬೆಳೆಸುತ್ತವೆ. ಕಥೆ, ಕವನ, ನಾಟಕ, ಪ್ರಬಂಧ, ಲಾವಣಿ, ಒಗಟು ಮುಂತಾದುವುಗಳನ್ನು ಓದಿಸುವ ಮತ್ತು ಬರೆಸುವ ಸ್ಪರ್ಧೆಗಳು ಮಕ್ಕಳ ಭಾಷಾ ಸಾಮರ್ಥ್ಯವನ್ನು ಬೆಳೆಸುತ್ತವೆ.

ಮಾತೃಭಾಷೆಯನ್ನು ಬೋಧಿಸಲು ಮೇಲೆ ಹೇಳಿದ ಬೇರೆ ಬೇರೆ ವಿಧಾನಗಳ ಜೊತೆಗೆ ಇಟಲಿ, ಜರ್ಮನಿ, ಫ್ರಾನ್ಸ್, ಡೆನ್ಮಾರ್ಕ್ ದೇಶಗಳ ಬೇರೆ ಬೇರೆ ವಿದ್ವಾಂಸರು ತಮ್ಮದೇ ಆದ ಬೇರೆ ಬೇರೆ ಭಾಷಾ ಬೋಧನಾ ವಿಧಾನಗಳನ್ನು ಹೊರ ತಂದರು. ಅವರಲ್ಲಿ ಇಟಲಿ ದೇಶದ ಮಾಂಟೆಸೋರಿ ಮತ್ತು ಫ್ರೆಡ್ರಿಕ್‌ಫ್ರೊಬೆಲ್ ಎಂಬಾತರು ಮುಖ್ಯರೆನಿಸಿಕೊಂಡಿದ್ದಾರೆ. ಇವರು ಪ್ರತಿಪಾದಿಸಿರುವ ಬೋಧನಾ ವಿಧಾನಗಳು ಮಾತೃಭಾಷೆಯನ್ನು ಬೋಧಿಸಲು ಹೆಚ್ಚು ಉಪಯುಕ್ತವಾದ ವಿಧಾನಗಳಾಗಿವೆ. ಮಾಂಟೆಸೋರಿ ಮಕ್ಕಳ ಶಿಕ್ಷಣದ ಬಗ್ಗೆ ಒಂದು ಹೊಸ ಅಧ್ಯಾಯವನ್ನೇ ಆರಂಭಿಸಿದನು. ಇದಕ್ಕಾಗಿ ಇವನು ಒಂದು ವಿಶೇಷ ಶಾಲೆಯನ್ನು ತೆರೆದು ಎಲ್ಲಾ ಶೈಕ್ಷಣಿಕ ಚಟುವಟಿಕೆಗಳನ್ನು ಪ್ರಾಯೋಗಿಕವಾಗಿ ಬಳಕೆಗೆ ತರಲು ಪ್ರಯತ್ನಿಸಿದನು. ಮಕ್ಕಳಲ್ಲಿ ಸುಪ್ತವಾಗಿರುವ ಪ್ರತಿಭೆಗಳು ಸ್ವತಂತ್ರವಾದ ಸನ್ನಿವೇಶದಲ್ಲಿ ಬೇರೆ ಬೇರೆ ಶೈಕ್ಷಣಿಕ ಚಟುವಟಿಕೆಗಳ ಮೂಲಕ ಬೆಳೆಯಬೇಕು. ಮಕ್ಕಳ ದೈಹಿಕ ಮತ್ತು ಮಾನಸಿಕ ವಿಚಾರಗಳು ಸ್ವಾಭಾವಿಕವಾಗಿ ಬೆಳೆದು ಬರಬೇಕಾದರೆ ಅವರಿಗೆ ಅವಶ್ಯವಾದ ಚಟುವಟಿಕೆಗಳನ್ನು ಶಾಲೆಯೇ ಒದಗಿಸಿಕೊಡಬೇಕು ಎಂಬುದು ಮಾಂಟೆಸೋರಿಯ ಅಭಿಪ್ರಾಯ.

ಮಕ್ಕಳ ಶಿಕ್ಷಣವು ಸ್ವತಂತ್ರವಾದ ಸನ್ನಿವೇಶದಲ್ಲಿ ವಿವಿಧ ಚಟುವಟಿಕೆಗಳ ಮೂಲಕ ಯಾವ ನಿರ್ಬಂಧವೂ ಇಲ್ಲದೆ ಸ್ವತಃ ತಾನೇ ಭಾಷೆ ಕಲಿಯುವುದರ ಮೂಲಕ ನಡೆದರೆ ಕಲಿಕೆ ಸುಲಭವಾಗುತ್ತದೆ. ಮಕ್ಕಳು ತಾನಾಗಿಯೇ ಯಾವ ನಿರ್ಬಂಧವೂ

ಇಲ್ಲದೆ ಸ್ವತಂತ್ರ ಸನ್ನಿವೇಶದಲ್ಲಿ ಶೈಕ್ಷಣಿಕ ಚಟುವಟಿಕೆಗಳ ಮೂಲಕ ಆಡುತ್ತಾ ಮಾಡುತ್ತಾ ಭಾಷೆಯನ್ನು ಕಲಿಯಬೇಕು ಎಂಬುದು ಮಾಂಟೆಸೋರಿಯವರ ಅಭಿಪ್ರಾಯ. ಮೂರು ಮತ್ತು ನಾಲ್ಕನೆಯ ವರ್ಷದ ಅವಧಿಯಲ್ಲಿ ಮಕ್ಕಳಲ್ಲಿ ಸಹಜವಾಗಿ ಆಲೋಚನೆಗಳು, ಭಾವನೆಗಳು ಚಿಗುರೊಡೆಯುತ್ತವೆ. ಈ ಅಮೂಲ್ಯವಾದ ಕಾಲವನ್ನು ವ್ಯರ್ಥಮಾಡಬಾರದು. ಈ ಅವಧಿಯಲ್ಲಿ ಮಕ್ಕಳ ಮಾನಸಿಕ ಶಕ್ತಿ, ಸಾಮರ್ಥ್ಯಗಳನ್ನು ಹುಲುಸಾಗಿ ಬೆಳೆಸಲು ಯತ್ನಿಸಬೇಕು ಎಂಬುದು ಮಾಂಟೆಸೋರಿಯ ಅಭಿಪ್ರಾಯವಾಗಿದೆ. ಮಕ್ಕಳನ್ನು ಸ್ವತಂತ್ರವಾದ ಸನ್ನಿವೇಶದಲ್ಲಿ ತೊಡಗಿಸಿ ಆಟಿಕೆಗಳನ್ನು ಮಾದರಿಗಳನ್ನು ಒದಗಿಸಿಕೊಟ್ಟು ಉತ್ತೇಜನ ಮಾಡಿದರೆ ಮಕ್ಕಳು ಯಾವ ಬಗೆಯ ಅಡ್ಡಿ ಆತಂಕಗಳಿಲ್ಲದೆ ತಮ್ಮ ಶಕ್ತಿಸಾಮರ್ಥ್ಯವನ್ನು ಬೆಳೆಸಿಕೊಳ್ಳಬಲ್ಲರು. ಶಿಕ್ಷಣ ಎಳೆವಯಸ್ಸಿನ ಮಕ್ಕಳಮೇಲೆ ಯಾವುದೇ ಬಗೆಯ ಆಘಾತವನ್ನುಂಟುಮಾಡಬಾರದು. ಮಕ್ಕಳಲ್ಲಿ ಆತ್ಮಗೌರವ, ಪ್ರೀತಿ ವಿಶ್ವಾಸಗಳು ಸಕ್ರಿಯವಾಗಿ ಬೆಳೆಯಬೇಕು. ಮಕ್ಕಳಲ್ಲಿ ಮೂಡುವ ಭಾವನೆಗಳನ್ನು ಬೆಳೆಸಲು ಶಿಕ್ಷಕನು ಅನುಕೂಲಮಾಡಿಕೊಡಬೇಕು. ಆ ಗುಣಗಳು ಮಕ್ಕಳಲ್ಲಿ ಸಹಜವಾಗಿ ಬೆಳೆಯಲು ಅನುಕೂಲವಾಗುವ ಸನ್ನಿವೇಶ ಮತ್ತು ಚಟುವಟಿಕೆಗಳನ್ನು ಶಾಲೆಯೇ ಕಲ್ಪಿಸಿಕೊಡಬೇಕು ಎಂದು ಮಾಂಟೆಸೋರಿ ಅಭಿಪ್ರಾಯ ವ್ಯಕ್ತಪಡಿಸಿದ್ದಾನೆ.

ಮಾತಿಗೆ ಮೊದಲು ಕೆಲವು ಚಟುವಟಿಕೆಗಳನ್ನು ಮಕ್ಕಳಿಗೆ ಒದಗಿಸಿಕೊಡಬೇಕು. ಇವು ತಮಗೆ ತಾವೇ ಮಕ್ಕಳು ಭಾಷೆಯನ್ನು ಕಲಿಯಲು ಸಹಾಯ ಮಾಡುತ್ತವೆ. ಮಕ್ಕಳಿಗೆ ಮಾತಿಗಿಂತ ಬರವಣಿಗೆ ಕಲಿಸುವುದು ಉತ್ತಮ. ಬರವಣಿಗೆ ಬೆಳೆಸಲು ಅಕ್ಷರ ಕಲೆಯನ್ನು ಮಕ್ಕಳಿಗೆ ಮನದಟ್ಟು ಮಾಡಿಕೊಡಬೇಕು. ಬರಹವನ್ನು ಕಲಿತ ಮಕ್ಕಳು ಓದುವುದನ್ನು ಸುಲಭವಾಗಿ ಕಲಿಯಬಲ್ಲವು. ಓದು ಮತ್ತು ಬರಹವನ್ನು ಕಲಿಸಲು ವಿವಿಧ ಬಗೆಯ ಸೂಚನಾ ಫಲಕಗಳನ್ನು ಮಕ್ಕಳಿಗೆ ಒದಗಿಸಿಕೊಡಬೇಕು. ಇದಕ್ಕೆ ಅಕ್ಷರಗಳನ್ನು ಬರೆದಿರುವ ಚಾರ್ಟುಗಳು ಮತ್ತು ಬೋರ್ಡುಗಳನ್ನು ಪ್ರದರ್ಶಿಸಬಹುದು. ಇದರಿಂದ ಮಕ್ಕಳು ಸ್ಪಷ್ಟವಾದ ಉಚ್ಚಾರವನ್ನು ಕಲಿಯಬಲ್ಲರು. ಬರಹವನ್ನು ನೋಡಿ ಓದುವುದನ್ನು ಕಲಿಯಬಹುದು. ಇದರಿಂದ ಲಿಪಿಗೂ ಧ್ವನಿಗೂ ಇರುವ ಸಂಬಂಧವು ತಿಳಿದುಬರುವುದು. ಅನಂತರ ಯಾವ ಮಾದರಿ ಲಿಪಿಗಳ ಸಹಾಯವಿಲ್ಲದೆ ಪುಸ್ತಕಗಳ ಮೂಲಕ ಓದುವುದು ಅಭ್ಯಾಸವಾಗುತ್ತದೆ. ಪ್ರಾಥಮಿಕ ಹಂತದಲ್ಲಿ ಸರಿಯಾದ ಚಟುವಟಿಕೆಗಳನ್ನು ಒದಗಿಸಿಕೊಟ್ಟರೆ ಮಕ್ಕಳು ಮುಕ್ತವಾತಾವರಣದಲ್ಲಿ ಮಾತುಗಾರಿಕೆ, ಓದುಗಾರಿಕೆ ಮತ್ತು ಬರವಣಿಗೆಯನ್ನು ಕಲಿಯುವರು ಮಾಂಟೆಸೋರಿಯ ಭಾಷಾ ಬೋಧನಾ ವಿಧಾನ ಎಷ್ಟೇ ಚಟುವಟಿಕೆಗಳಿಂದ ಕೂಡಿದ್ದರೂ ಮಕ್ಕಳು ಭಾಷೆಯನ್ನು ತಮಗೆ ತಾವೇ ಕಲಿಯುತ್ತವೆ ಎಂದು ಹೇಳಲು ಬರುವುದಿಲ್ಲ. ಈ ವಿಧಾನ ಅಕ್ಷರ ಮತ್ತು ಮಾತುಗಳನ್ನು ಕಲಿಸಲು

ಉತ್ತಮವಾದ ವಿಧಾನವಾಗಿ ತೋರಿಬಂದರೂ ಇದರಿಂದ ಮಕ್ಕಳಿಗೆ ಮಾತುಗಾರಿಕೆ, ಓದುಗಾರಿಕೆ ಮತ್ತು ಬರವಣಿಗೆಯನ್ನು ಕಲಿಸಲು ಹೆಚ್ಚು ಸಮಯ ಬೇಕಾಗುತ್ತದೆ. ಮಕ್ಕಳ ಆ ವಿವಿಧ ಚಟುವಟಿಕೆಗಳಿಗೆ ವಿವಿಧ ಆಟಿಕೆಗಳನ್ನು ಸಾಧನಗಳನ್ನು ಒದಗಿಸಿ ಕೊಡಲು ಎಲ್ಲಾ ಶಾಲೆಗಳು ಶಕ್ತವಾಗಿಲ್ಲ. ಪ್ರತಿಭಾವಂತ ಮಕ್ಕಳಿಗೆ ಈ ವಿಧಾನ ಹೆಚ್ಚು ಸೂಕ್ತವಾದುದಲ್ಲ. ಇಷ್ಟಾದರೂ ಪ್ರಾಥಮಿಕ ಹಂತದಲ್ಲಿ ಮಾತು ಮತ್ತು ಲಿಪಿಯನ್ನು ಕಲಿಸಲು ಮಾಂಟಿಸೋರಿಯ ಬೋಧನಾ ವಿಧಾನವನ್ನು ಯಾರೂ ಕಡೆಗಣಿಸುವಂತಿಲ್ಲ.

ಮಕ್ಕಳನ್ನು ಜೀವಂತ ಸನ್ನಿವೇಶದಲ್ಲಿ ಬೆಳೆಸಿದರೆ ಅವರು ಭಾಷೆಯನ್ನು ಸ್ವಾಭಾವಿಕವಾಗಿ ಕಲಿಯಬಲ್ಲರು ಎಂಬುದು ಇಟಲಿ ದೇಶದ ಹೆಸರಾಂತ ವಿದ್ವಾಂಸ ಫ್ರೆಡ್ರಿಕ್ ಫ್ರೋಬೆಲ್‌ನ ಅಭಿಪ್ರಾಯವಾಗಿದೆ. ಪ್ರಕೃತಿ ಆರಾಧಕನಾದ ಫ್ರೋಬೆಲ್‌ನು ಮಕ್ಕಳು ಸಹಜ ಹಾಗೂ ಸುಂದರವಾದ ವಾತಾವರಣದಲ್ಲಿ ಬೆಳೆಸಿದರೆ ಮಕ್ಕಳಲ್ಲಿ ಸುಪ್ತವಾಗಿರುವ ಪ್ರತಿಭೆಗಳು ಬೆಳೆಯ ಬಲ್ಲವು ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾನೆ. ಮಕ್ಕಳು ಸುಂದರವಾದ ತೋಟದ ಪುಷ್ಪವಿದ್ದಂತೆ, ಎಳೆವಯಸ್ಸಿನ ಮಕ್ಕಳು ಸಸಿಗಿಡ ಮರಗಳ ನಡುವೆ ಚೈತನ್ಯಶೀಲರಾಗಿ ಕುಣಿದು ಕುಪ್ಪಳಿಸುತ್ತಾ ಭಾಷೆ ಕಲಿಯಬೇಕು. ಮಕ್ಕಳಿಗೆ ಬೋಧಿಸುವ ಶಾಲೆ ಒಂದು ಸುಂದರವಾದ ಉದ್ಯಾನವನದಂತಿರಬೇಕು. ಸಣ್ಣ ಬೀಜದಲ್ಲಿ ದೊಡ್ಡಮರವನ್ನು ಕಾಣುವಂತೆ ಸುಪ್ತವಾಗಿರುವ ಪ್ರತಿಭೆಗಳು ಪ್ರತಿಯೊಂದು ಮಗುವಿನಲ್ಲಿಯೂ ಬೆಳೆಯಲು ಯೋಗ್ಯವಾದ ವಾತಾವರಣ ಕಲ್ಪಿಸಿ ಕೊಡಬೇಕು. ಉದ್ಯಾನವನದಲ್ಲಿ ಸಸಿಗಳು ಸ್ವತಂತ್ರವಾಗಿ ಬೆಳೆಯುವಂತೆ ಯಾವ ನಿರ್ಬಂಧವೂ ಇಲ್ಲದೆ ಮುಕ್ತವಾತಾವರಣದಲ್ಲಿ ಚಟುವಟಿಕೆಗಳ ಮೂಲಕ ಮಕ್ಕಳನ್ನು ಬೆಳೆಸಬೇಕು ಎಂಬುದು ಫ್ರೋಬೆಲ್‌ನ ಅಭಿಪ್ರಾಯ.

ಪ್ರಾಥಮಿಕ ಹಂತದಲ್ಲಿ ಮಕ್ಕಳ ಶಿಕ್ಷಣವು ಮಾತು ಮತ್ತು ಅಕ್ಷರಗಳಿಂದ ಆರಂಭವಾಗುವುದರಿಂದ ಮಕ್ಕಳ ಇಂದ್ರಿಯಗಳ ಅಭ್ಯಾಸ ಮತ್ತು ಚಟುವಟಿಕೆಗಳು ಮೊಟಕಾಗುತ್ತವೆ. ಈ ಕಾರಣದಿಂದ ಕ್ರೀಡಾವಿಧಾನದಲ್ಲಿ ಕೈಕೆಲಸಗಳ ಚಟುವಟಿಕೆಗಳ ಮೂಲಕ ಕಲಿಕೆಯನ್ನು ಆರಂಭಿಸಬೇಕು. ಇದಕ್ಕೆ ವಿವಿಧ ಚಟುವಟಿಕೆಗಳ ಸಾಧನ ಸಾಮಗ್ರಿಗಳನ್ನು ಒದಗಿಸಿಕೊಡುತ್ತಾ ಹಂತಹಂತವಾಗಿ ಚಟುವಟಿಕೆಗಳನ್ನು ಹೆಚ್ಚಿಸುತ್ತಾ ಹೋದರೆ ಮಕ್ಕಳ ಆಲೋಚನಾಶಕ್ತಿ ಮತ್ತು ಕೌಶಲಗಳು ಬೆಳೆಯುತ್ತಾ ಬರುತ್ತವೆ. ಮಕ್ಕಳಿಗೆ ಪ್ರಕೃತಿ, ಪಶುಪಕ್ಷಿ ಮುಂತಾದುವುಗಳಿಗೆ ಸಂಬಂಧಿಸಿದ ಹಾಡುಗಳನ್ನು ಕಲಿಸಿದರೆ ಮಕ್ಕಳು ತುಂಬ ಉತ್ಸುಕರಾಗಿ ಕಲಿಕೆಯಲ್ಲಿ ಭಾಗವಹಿಸು ವರು. ಈ ರೀತಿಯ ಹಾಡುಗಳನ್ನು ಅಭ್ಯಾಸ ಮಾಡುವುದರಿಂದ ಅವರ ಉಚ್ಚಾರಣೆ, ಧ್ವನಿಗಳ ಏರಿಳಿತಗಳನ್ನು ಕಲಿಸಲು ಸುಲಭವಾಗುತ್ತದೆ. ಆಟಗಳು, ಸಾಂಸ್ಕೃತಿಕ ಕಾರ್ಯಕ್ರಮಗಳು, ನಾಟಕಗಳು, ಸಂಗೀತಕಾರ್ಯಕ್ರಮಗಳು ಮುಂತಾದುವು ಗಳನ್ನು ಅಭ್ಯಾಸ ಮಾಡಿಸುವುದರಿಂದ ಮಕ್ಕಳಲ್ಲಿ ಸಾಮಾಜಿಕ ಸೌಹಾರ್ದತೆ,

ಸಹಕಾರಿ ಜೀವನ ಮುಂತಾದ ಗುಣಗಳು ಬೆಳೆಯಬಲ್ಲವು ಎಂದು ಫ್ರೋಬೆಲ್‌ನು ಅಭಿಪ್ರಾಯ ವ್ಯಕ್ತಪಡಿಸಿದ್ದಾನೆ.

ಮಕ್ಕಳು ಶಾಲೆಯಲ್ಲಿ ಕಲಿಯುವುದಷ್ಟೇ ಅವರ ಸಂಪೂರ್ಣ ವಿಕಾಸಕ್ಕೆ ಸಾಲುವುದಿಲ್ಲ. ಮಕ್ಕಳು ಶಾಲೆಯ ಹೊರಗೆ ಕಲಿಯಲು ಹೆಚ್ಚು ಅವಕಾಶವಿರಬೇಕು. ಮುಕ್ತವಾತಾವರಣದಲ್ಲಿ ಗಿಡಮರಗಳನಡುವೆ ಸ್ವೇಚ್ಛೆಯಾಗಿ ಕಲಿತರೆ ದೈವೀಶಕ್ತಿಗಳು ಮಕ್ಕಳಲ್ಲಿ ಬೆಳೆಯುತ್ತವೆ. ಪ್ರಕೃತಿಯ ಬಗೆಗೆ ಅವರಿಗೆ ಪ್ರೇಮ ಬೆಳೆಯುತ್ತದೆ. ಇದಕ್ಕಾಗಿ ಪಠ್ಯ ಪುಸ್ತಕಗಳಲ್ಲಿ ಅವಕಾಶವಿರಬೇಕು ಎಂಬುದು ಫ್ರೋಬೆಲ್‌ರವರ ಅಭಿಪ್ರಾಯ. ಇದಕ್ಕಾಗಿ ಪ್ರತಿಯೊಂದು ಶಾಲೆಯೂ ಸುಂದರವಾದ ಉದ್ಯಾನವನವನ್ನು ಬೆಳೆಸಬೇಕು ಸುಂದರ ಪರಿಸರ ಮಕ್ಕಳನ್ನು ಆಕರ್ಷಿಸಬೇಕು.

ಕಲಿಯುವ ಅಥವಾ ಕಲಿಸುವ ಶಾಲೆ ಕೇವಲ ಸುಂದರವಾದ ವಾತಾವರಣದಲ್ಲಿದ್ದರೆ ಅಷ್ಟೇ ಸಾಲದು. ಮಕ್ಕಳ ವಿವಿಧ ಕೌಶಲಗಳು ಸಮರ್ಥವಾಗಿ ಬೆಳೆಯಲು ಅನುಕೂಲವಾಗುವ ಅವಕಾಶಗಳು ಶಾಲೆಯಲ್ಲಿರಬೇಕಾಗುತ್ತದೆ. ಶಾಲೆ ಒಂದು ಪುಟ್ಟ ಸಮಾಜದಂತಿದ್ದು ಅಲ್ಲಿ ಮಕ್ಕಳ ಸರ್ವಾಂಗೀಣ ವಿಕಾಸಕ್ಕೆ ಅವಕಾಶವಿರಬೇಕು. ಇಲ್ಲಿ ಜ್ಞಾನಕ್ಕಿಂತ ಹೆಚ್ಚಾಗಿ ಮಕ್ಕಳ ಕ್ರಿಯಾಶೀಲ ಚಟುವಟಿಕೆಗಳಿಗೆ ಹೆಚ್ಚಿನ ಆದ್ಯತೆ ಕೊಡಬೇಕಾಗುತ್ತದೆ. ಚಟುವಟಿಕೆಗಳ ಮೂಲಕ ಮೂಡಿಬಂದ ಅವರ ಜ್ಞಾನ ಹೆಚ್ಚು ಸ್ಥಿರವಾಗಿರುತ್ತದೆ. ಶಾಲೆ ಮಕ್ಕಳನ್ನು ಸಾಮಾಜಿಕ ಜೀವನಕ್ಕೆ ಸಿದ್ಧಗೊಳಿಸಬೇಕಾಗಿರುವುದರಿಂದ ಶಾಲೆಯ ವಾತಾವರಣವು ಸಮಾಜದ ವಾತಾವರಣದಂತೆಯೇ ಇರಬೇಕಾದ್ದು ಅತ್ಯಗತ್ಯ ಎಂದು ಫ್ರೋಬೆಲ್‌ನು ಅಭಿಪ್ರಾಯ ವ್ಯಕ್ತಪಡಿಸಿದ್ದಾನೆ.

ನಾಗಣ್ಣ

ಅಪ್ರತಿಮ ಸಂಶೋಧಕ : ಆನಂದ ಕೆ. ಕುಮಾರಸ್ವಾಮಿ

ಒಂದು ಸಂಕ್ಷಿಪ್ತ ಪರಿಚಯ

ಆನಂದ ಕೆಂಟಿಷ್ ಕುಮಾರಸ್ವಾಮಿ ೧೮೭೭ ನೆಯ ಆಗಸ್ಟ್ ೨೨ ರಂದು ಸಿಂಹಳದ [ಈಗಿನ ಶ್ರೀಲಂಕಾ] ಕೊಲಂಬೋದಲ್ಲಿ ಜನಿಸಿದರು. ಅವರ ತಂದೆ ಸರ್. ಮುತ್ತುಕುಮಾರಸ್ವಾಮಿ ಮತ್ತು ತಾಯಿ ಕೆಂಟ್ [ಇಂಗ್ಲೆಂಡ್]ನ ಲೇಡಿ ಎಲಿಜಬೆತ್ ಕ್ಲೇ ಬೀಬಿ ಕುಮಾರಸ್ವಾಮಿ ಅವರು. ಆನಂದ ಕುಮಾರಸ್ವಾಮಿಯವರ ಹೆಸರಿನಲ್ಲಿ 'ಕೆಂಟಿಷ್' ಬಂದಿರುವುದು ಅವರ ತಾಯಿಯವರ ತವರೂರಿನ ನೆನಪಿಗಾಗಿ.

ಸರ್ ಮುತ್ತುಕುಮಾರಸ್ವಾಮಿ ಮೊದಲಿಯಾರರು ಸಿಂಹಳದ ಪ್ರಸಿದ್ಧ ತಮಿಳು ಕುಟುಂಬವೊಂದರಿಂದ ಬಂದವರು [ಇವರು ಮೂಲತಃ ಸಿಂಹಳದವರೆಂದು ಅನೇಕರು ತಪ್ಪಾಗಿ ಭಾವಿಸಿದ್ದಾರೆ]. ೧೮೭೪ ರಲ್ಲಿ, ಬ್ರಿಟಿಷ್ ಚಕ್ರಾಧಿಪತ್ಯ ಮುತ್ತುಕುಮಾರಸ್ವಾಮಿಯವರಿಗೆ 'ನೈಟ್‌ಹುಡ್' ಪದವಿಯಿತ್ತು ಸನ್ಮಾನಿಸಿದಾಗ ಸಿಂಹಳದಲ್ಲಷ್ಟೇ ಅಲ್ಲ ಇಡಿ ಏಷ್ಯಾದಲ್ಲಿ ಈ ಪುರಸ್ಕಾರವನ್ನು ಪಡೆದವರಲ್ಲಿ ಅವರೇ ಮೊದಲಿಗರು. ೧೮೬೩ ರ ವಿಕ್ಟೋರಿಯಾ ರಾಣಿ ಯುಗದಲ್ಲಿ 'ಬಾರ್' ಪ್ರವೇಶ ಮಾಡಿದ ಪ್ರಪ್ರಥಮ ಹಿಂದು ಇವರು. ಪಾಲಿಭಾಷೆಯ ಬೌದ್ಧಧರ್ಮ ಗ್ರಂಥವೊಂದನ್ನು ಮೊಟ್ಟಮೊದಲ ಬಾರಿಗೆ ಆಂಗ್ಲಭಾಷೆಗೆ ಭಾಷಾಂತರ ಮಾಡಿದರು. ಮುತ್ತುಕುಮಾರಸ್ವಾಮಿ ೧೮೭೬ ರಲ್ಲಿ ಪ್ರಸಿದ್ಧ ಆಂಗ್ಲ ಮನೆತನಕ್ಕೆ ಸೇರಿದ ಎಲಿಜಬೆತ್ ಕ್ಲೇ ಬೀಬಿಯವರನ್ನು ಲಗ್ನವಾದರು.

ಬ್ರಿಟನ್ನಿನ ಪ್ರಧಾನಿ ಮತ್ತು ಪ್ರಸಿದ್ಧ ಕಾದಂಬರಿಕಾರ ಬೆಂಜಮಿನ್ ಡಿಸ್ರೇಲಿ ಅಪೂರ್ಣವಾಗಿರುವ ತಮ್ಮ ಕಡೆಯ ಕಾದಂಬರಿಯ ಬೌದ್ಧ ಭಿಕ್ಷುವಿನ ಪಾತ್ರವೊಂದನ್ನು ಮುತ್ತುಕುಮಾರಸ್ವಾಮಿಯವರಿಂದ ಸ್ಫೂರ್ತಿ ಪಡೆದು ರಚಿಸಿರುವುದಾಗಿ ಹಲವರು ಅಭಿಪ್ರಾಯಪಡುತ್ತಾರೆ. ಈ ಅಭಿಪ್ರಾಯಕ್ಕೆ ಪುಷ್ಟಿಕೊಡುವಂತೆ

ಸರ್ ಮುತ್ತುಕುಮಾರಸ್ವಾಮಿಯವರ ದಾಯಾದಿ ಸರ್ ಪೊನ್ನಂಬಾಲಮ್ ಅರುಣಾಚಲಮ್‌ರವರು ೧೯೦೫ ರಲ್ಲಿ ಲಂಡನ್ನಿನ ಟೈಮ್ಸ್ ಪತ್ರಿಕೆಗೆ ಬರೆದಿರುವ ಲೇಖನದಲ್ಲಿ ಸರ್ ಮುತ್ತು ಒಬ್ಬ ಸುವಿಖ್ಯಾತ ಬೌದ್ಧ ಪಂಡಿತರೆಂದೂ, ಬೌದ್ಧ ತತ್ವಜ್ಞಾನವನ್ನು ಆಳವಾಗಿ ಅಧ್ಯಯನ ಮಾಡಿರುವವರೆಂದೂ ಮತ್ತು ಅವರು ಲಾರ್ಡ್ ಬೀಕನ್ಸ್‌ಫೀಲ್ಡ್ [ಡಿಸ್ರೇಲಿ] ಅವರ ಆಪ್ತ ಸ್ನೇಹಿತರು ಎಂಬುದಾಗಿ ತಿಳಿಸಿರುತ್ತಾರೆ.

ಲೇಡಿ ಕುಮಾರಸ್ವಾಮಿಯವರು ಸಿಂಹಳದಲ್ಲಿ ಇದ್ದದ್ದು ಸ್ವಲ್ಪಕಾಲ ಮಾತ್ರ. ಅವರು ಅನಾರೋಗ್ಯಕ್ಕೆ ತುತ್ತಾದ ತರುಣದಲ್ಲಿ ೧೮೭೮ ರಲ್ಲಿ ತಮ್ಮ ಒಂದು ವರ್ಷದ ಮಗನನ್ನು ಕರೆದುಕೊಂಡು ಇಂಗ್ಲೆಂಡಿಗೆ ವಾಪಸ್ಸಾದರು. ಸರ್ ಮುತ್ತು ಅವರೂ ಕೂಡ ತಮ್ಮ ಹೆಂಡತಿ ಮತ್ತು ಮಗುವಿನೊಡನೆ ಇಂಗ್ಲೆಂಡಿಗೆ ಪ್ರಯಾಣಿಸಬೇಕಾಗಿತ್ತು—ಆದರೆ ಅವರೂ ಖಾಯಿಲೆಬಿದ್ದು ೧೮೭೯ನೇ ಮೇ ೪ ರಂದು ಸಿಂಹಳದಲ್ಲೇ ಕಾಲವಾಗಿ ಹೋದರು. ವಿಚಿತ್ರವೆಂದರೆ ಅವರು ಅಸುನೀಗಿದ ದಿನದಂದೇ ಅವರು ಇಂಗ್ಲೆಂಡಿಗೆ ಹಡಗಿನಲ್ಲಿ ಪ್ರಯಾಣಿಸಬೇಕಿತ್ತು. ಹಾಗಾಗಿ ತಮ್ಮ ಪತ್ನಿ ಮತ್ತು ತಮ್ಮ ಹಸುಗೂಸನ್ನು ಅವರು ಮತ್ತೊಮ್ಮೆ ನೋಡಲಿಲ್ಲ.

ಆನಂದರನ್ನು ಅವರ ತಾಯಿ ಇಂಗ್ಲೆಂಡಿನಲ್ಲಿ ಬೆಳೆಸಿದರು. ಅವರ ಬಾಲ್ಯ ಜೀವನದ ವ್ಯಾಸಂಗ ಬಹುಪಾಲು ಮನೆಪಾಠದಲ್ಲೇ ನಡೆಯಿತು. ಹನ್ನೆರಡುವರ್ಷ ವಯಸ್ಸಿನಲ್ಲಿ ಅವರು ಗ್ಲಸ್ಟರ್‌ಶೈರ್‌ನ ವಿಕ್ಲಿಫ್ ಕಾಲೇಜಿಗೆ ಸೇರಿಕೊಂಡರು; ಅಲ್ಲಿ ಆರುವರ್ಷಗಳ ಕಾಲ ಇದ್ದರು. ತರುವಾಯ ಪದವಿಗಾಗಿ ಭೂಗರ್ಭಶಾಸ್ತ್ರ ಮತ್ತು ಸಸ್ಯಶಾಸ್ತ್ರಗಳನ್ನು ತೆಗೆದುಕೊಂಡು ಲಂಡನ್ ವಿಶ್ವವಿದ್ಯಾನಿಲಯದಲ್ಲಿ ಅಭ್ಯಾಸ ಮಾಡಿದರು. ಅದರ ಫಲವಾಗಿ ೧೯೦೦ ರಲ್ಲಿ ಪ್ರಥಮಸ್ಥಾನ ಗಳಿಸುವುದರ ಮೂಲಕ ಪದವಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರು.

ಶಾಲಾ ಬಾಲಕನಾಗಿ ಮತ್ತು ಅದರ ನಂತರ ಸ್ವಲ್ಪಕಾಲದವರೆಗೆ ಕುಮಾರಸ್ವಾಮಿಯವರು ಯಾವ ಬಗೆಯಾದ ಶಿಕ್ಷಣ ಪಡೆದರು ಎಂಬ ಬಗ್ಗೆ ಸ್ಪಷ್ಟವಾದ ಮಾಹಿತಿ ಇಲ್ಲದಿರುವುದು ವಿಷಾದನೀಯ. ಆನಂದಕುಮಾರಸ್ವಾಮಿಯವರು ಜ್ಞಾನದ ಅನೇಕ ವಿಭಾಗಗಳಲ್ಲಿ ಗಳಿಸಿಕೊಂಡ ಅಗಾಧವಾದ ಪಾಂಡಿತ್ಯವನ್ನು ಮತ್ತು ಪಾಶ್ಚಾತ್ಯ, ಪೌರ್ವಾತ್ಯ ಭಾಷೆಗಳ ಮೇಲೆ ಅವರು ಸಾಧಿಸಿದ ಪ್ರಭುತ್ವವನ್ನು ಗಮನಿಸಿದರೆ ಪ್ರಾಯಶಃ ಜಾನ್‌ಸ್ಟುವರ್ಟ್ ಮಿಲ್‌ರವರ ವಿದ್ಯಾಭ್ಯಾಸ ನೆನಪಿಗೆ ಬರುತ್ತದೆ.

ಪದವೀಧರರಾದ ಮೇಲೆ ಅವರು ಸಿಂಹಳಕ್ಕೆ ಮರಳಿದರು. ೧೯೦೦ ರಲ್ಲಿ ಕ್ವಾರ್ಟರ್ಲಿ ಜರ್ನಲ್ ಆಫ್ ಜಿಯಾಲಾಜಿಕಲ್ ಸೊಸೈಟಿ ಎಂಬ ತ್ರೈಮಾಸಿಕದಲ್ಲಿ ತಮ್ಮ ಮೊದಲ ಪ್ರಬಂಧ ("ಸಿಲೋನಿನ ಬಂಡೆಗಳು ಮತ್ತು ಗ್ರಾಫೈಟ್") ವನ್ನು ಅವರು ಪ್ರಕಟಿಸಿದಾಗ ಅವರಿಗೆ ಇಪ್ಪತ್ಮೂರು ವರ್ಷ. ತಮ್ಮ ಇಪ್ಪತ್ತಾರನೆಯ ವಯಸ್ಸಿನಲ್ಲಿ ಅವರು "ಮಿನರಲಾಜಿಕಲ್ ಸರ್ವೆ ಆಫ್ ಸಿಲೋನ್" ಇಲಾಖೆಗೆ ನಿರ್ದೇಶಕರಾಗಿ ನೇಮಕಗೊಂಡರು. ಕುಮಾರಸ್ವಾಮಿಯವರು ನಿರ್ದೇಶಕರಾಗಿದ್ದ

ಮೂರುವರ್ಷಗಳ ಅವಧಿಯಲ್ಲಿ (೧೯೦೩–೧೯೦೬) ''ಮಿನರಲಾಜಿಕಲ್ ಸರ್ವೆ ಆಫ್ ಸಿಲೋನ್'' ಕುರಿತಾಗಿ ಎರಡು ಮಹತ್ವದ ಗ್ರಂಥಗಳನ್ನು ಪ್ರಕಟಿಸಿದರು.

ಈ ಸರ್ವೇಕ್ಷಣದ ಸಂಬಂಧವಾಗಿ ದ್ವೀಪದಲ್ಲಿ ಅವರು ಸಂಚರಿಸುವಾಗ ಐರೋಪ್ಯ ಕೈಗಾರಿಕೀಕರಣದ ಹೊಡೆತ ಮತ್ತು ಆಳುವವರ ಪ್ರೋತ್ಸಾಹದ ಕೊರತೆ ಇವೆರಡರಿಂದ ಮೂಲೆಗುಂಪಾಗಿದ್ದ ಸಿಂಹಳದ ಸಾಂಪ್ರದಾಯಿಕ ಕಲೆ ಮತ್ತು ಕುಶಲಕಲೆಯ ದರ್ಶನವಾಯಿತು. ಆ ಸಮಯದಲ್ಲೇ ಕುಮಾರಸ್ವಾಮಿಯವರು ಹೆಚ್ಚು ಸಾಪೇಕ್ಷ ಸಾಂದ್ರತೆಯುಳ್ಳ ಖನಿಜವೊಂದನ್ನು ಕಂಡುಹಿಡಿದು—ಅದಕ್ಕೆ ಥೋರಿಯನೇಟ್ ಎಂದು ನಾಮಕರಣ ಮಾಡಿದರು.

ಲಾರ್ಡ್ ಕರ್ಜನ್ ಬಂಗಾಳವನ್ನು ವಿಭಜಿಸಿ ಭಾರತದಲ್ಲಿ ರಾಷ್ಟ್ರೀಯ ಆಂದೋಳನ ಪ್ರಾರಂಭವಾಗಿದ್ದ ಕಾಲ—ಕುಮಾರಸ್ವಾಮಿಯವರ ಬದುಕಿನ ಆರಂಭದಕಾಲವೂ ಕೂಡ. ಭಾರತೀಯ ರಾಷ್ಟ್ರೀಯತೆಯ ಸಮಸ್ಯೆಯ ಬಗ್ಗೆ ಕುಮಾರಸ್ವಾಮಿ ಹೆಚ್ಚು ಆಲೋಚಿಸಿದರು ಮತ್ತು ಭಾರತವಷ್ಟೇ ಅಲ್ಲದೆ ಇಡೀ ಏಷ್ಯಾಖಂಡದ ರಾಜಕೀಯ ಸ್ವಾತಂತ್ರ್ಯದ ಅಗತ್ಯತೆಯ ಅರಿವು ಅವರಿಗಾಯಿತು. ಅವರು ಸಿಲೋನಿನ 'ಮಿನರಲಾಜಿಕಲ್ ಸರ್ವೆ'ಯ ಮುಖ್ಯಸ್ಥರಾಗಿ ದುಡಿದದ್ದರ ಜೊತೆಗೆ ಸಿಲೋನ್ 'ನ್ಯಾಷನಲ್ ರಿವ್ಯೂ' ಪ್ರಾರಂಭಿಸಿದರು ಮತ್ತು 'ಸಿಂಹಳ ಸಮಾಜ ಸುಧಾರಣ ಸಂಘ'ವನ್ನು ತೆರೆದರು. ಅದರ ಅಧ್ಯಕ್ಷರಾಗಿ ರಾಷ್ಟ್ರೀಯತಾ ಆಂದೋಳನದ ಮುಂದಾಳತ್ವವನ್ನು ವಹಿಸಿದರು. ಸಿಂಹಳದ ಭಾಷೆ ಮತ್ತು ತಮಿಳು ಭಾಷೆಗಳನ್ನು ಎಲ್ಲ ಶಾಲೆಗಳಲ್ಲಿ ಬೋಧಿಸುವುದು; ಸಿಂಹಳದ ಕಲೆ ಮತ್ತು ಕರಕುಶಲತೆಯನ್ನು ಪುನರಾರಂಭಿಸುವುದು ಹಾಗೂ ಸಿಂಹಳ–ಭಾರತ ಸಂಸ್ಕೃತಿಯನ್ನು ಪುನಶ್ಚೇತನಗೊಳಿಸುವುದು—ಇವು ಅವರ ಧ್ಯೇಯಗಳಲ್ಲಿ ಪ್ರಮುಖವಾಗಿದ್ದವು.

ಸಿಂಹಳದಲ್ಲಿ ಅವರು ಭೂಗರ್ಭಶಾಸ್ತ್ರದಲ್ಲಿ ನಡೆಸಿದ್ದ ಸಂಶೋಧನೆಯನ್ನು ಗುರುತಿಸಿ ಲಂಡನ್ ವಿಶ್ವವಿದ್ಯಾನಿಲಯದವರು ಅವರಿಗೆ ಡಾಕ್ಟರ್ ಆಫ್ ಸೈನ್ಸ್ ಪದವಿಯನ್ನು ಕೊಟ್ಟರು. ಇದನ್ನು ಸ್ವೀಕರಿಸಲು ಕುಮಾರಸ್ವಾಮಿಯವರು ೧೯೦೬ರಲ್ಲಿ ಇಂಗ್ಲೆಂಡಿಗೆ ಪ್ರಯಾಣ ಬೆಳೆಸಿದರು. ಮುಂದೆ ಸ್ವಲ್ಪ ವರ್ಷಗಳಕಾಲ ತಮ್ಮ ಸಂಶೋಧನೆ ಮುಂದುವರಿಸಿದರು. ಗ್ಲಸ್ಟರ್‌ಶೈರ್‌ನ ಬ್ರಾಡ್ ಕ್ಯಾಂಬ್ಡನ್‌ನಲ್ಲಿ ಎಸ್ಸೆಕ್ಸ್ ಹೌಸ್ ಪ್ರೆಸ್ ಎಂಬ ಮುದ್ರಣ ಸಂಸ್ಥೆಯ ಜೊತೆ ಅವರು ಸಂಕರ್ಪವನ್ನಿಟ್ಟುಕೊಂಡಿದ್ದರು—ಆ ಸಂಸ್ಥೆಯನ್ನು ಹುಟ್ಟುಹಾಕುವುದರಲ್ಲಿ ಅವರ ಪಾತ್ರವಿತ್ತು. ಆ ಸಂಸ್ಥೆ ಪ್ರಕಟಿಸಿದ ತಮ್ಮ ಗ್ರಂಥಗಳು ಮತ್ತು ಇತರರ ಗ್ರಂಥಗಳ ಅಚ್ಚಿನ ವಿಷಯದಲ್ಲಿ ಕುಮಾರಸ್ವಾಮಿ ಸಲಹೆ, ಸೂಚನೆಗಳನ್ನು ಕೊಡುತ್ತಿದ್ದರು. ಅವರೊಬ್ಬ ಕಲಾ ವಿಮರ್ಶಕ ಮತ್ತು ಕಲಾ ಇತಿಹಾಸಕಾರರಾಗಿದ್ದರಲ್ಲದೆ ಫೋಟೋಗ್ರಫಿಯಲ್ಲೂ ಬಹಳ ನಿಪುಣರಾಗಿದ್ದರು; ರೇಖಾಚಿತ್ರ ರಚನೆ ಮತ್ತು ನಕ್ಷೆ ಬರೆಯುವುದರಲ್ಲೂ ಅವರದು ಪಳಗಿದ ಹಸ್ತ.

ನಂತರದ ದಶಕವನ್ನು ಕುಮಾರಸ್ವಾಮಿ ಭಾರತ ಮತ್ತು ಇಂಗ್ಲೆಂಡ್‌ಗಳ ನಡುವೆ ಸಂಚರಿಸುತ್ತಾ ಕಳೆದರು. ಭಾರತದ ಜನರಲ್ಲಿ ಅವರ ಕಲಾತ್ಮಕ, ಸಾಹಿತ್ಯಕ ಮತ್ತು ಸಾಂಸ್ಕೃತಿಕ ಪರಂಪರೆಯ ಹಿರಿಮೆಯ ಬಗ್ಗೆ ಅರಿವು ಮೂಡಿಸಲು ಬಹಳ ಶ್ರಮಿಸಿದರು. ಈ ಬಗೆಯ ಶ್ರಮ ತುಂಬಾ ಅನಿವಾರ್ಯವೆಂದು ಭಾರತದ ರಾಷ್ಟ್ರೀಯ ಆಂದೋಳನದ ಸಂದರ್ಭದಲ್ಲಿ ಅವರಿಗೆ ಮನವರಿಕೆಯಾಗಿತ್ತು. ಕಲಾತ್ಮಕವಾಗಿ, ಬೌದ್ಧಿಕವಾಗಿ ಭಾರತವನ್ನು ಅರ್ಥಮಾಡಿಕೊಳ್ಳುವ ಅಪೇಕ್ಷೆಯಿಂದ ಭಾರತಾದ್ಯಂತ ಸುತ್ತಿದರು. ಪ್ರವಾಸಕಾಲದಲ್ಲಿ ಅಧ್ಯಯನಮಾಡುತ್ತಲೇ ಭಾರತೀಯ ರೇಖಾಚಿತ್ರಗಳು, ತೈಲಚಿತ್ರಗಳು ಮತ್ತು ರಜಪೂತ ಮಿನಿಯೇಚರ್‌ಗಳು ಹಾಗೂ ಹಿತ್ತಾಳೆ ವಿಗ್ರಹಗಳನ್ನು ಸಂಪಾದಿಸಿದರು. ೧೯೧೦ ರಲ್ಲಿ ಇತರರೊಡಗೂಡಿ ಲಂಡನ್‌ನಲ್ಲಿ ರಾಯಲ್ ಇಂಡಿಯನ್ ಸೊಸೈಟಿಯನ್ನು ಸ್ಥಾಪಿಸಿದರು. ಅದೇ ವರ್ಷ ಅವರು ಅಲಹಾಬಾದ್‌ನಲ್ಲಿ ನಡೆದ ಸಂಯುಕ್ತ ಸಂಸ್ಥಾನ ವಸ್ತುಪ್ರದರ್ಶನದಲ್ಲಿ ಕಲಾ ವಿಭಾಗದ ಮುಖ್ಯಸ್ಥರಾಗಿದ್ದರು.

೧೯೦೬ ರಿಂದ ೧೯೧೬ ರ ವರೆಗೆ ಆನಂದಕುಮಾರಸ್ವಾಮಿಯವರು ಕಲೆಗಳು ಮತ್ತು ಕರಕುಶಲಕಲೆಗಳಿಂದ ಹಿಡಿದು ಭಾರತ ಮತ್ತು ಸಿಂಹಳದ ರಾಷ್ಟ್ರೀಯತೆ ಹಾಗೂ ರಾಜಕೀಯ ಪರಿಸ್ಥಿತಿಯವರೆಗೆ—ಅನೇಕ ವಿಷಯಗಳ ಬಗ್ಗೆ ಬರೆದರು. ಅವರ ಬದುಕಿನ ಕಡೆಯ ಮೂವತ್ತು ವರ್ಷಗಳಲ್ಲಿ ಅವರು ಬರೆದ ಬರೆಹಗಳಲ್ಲಿ ಕಂಡುಬರುವ ಪ್ರೌಢಿಮೆ ಮತ್ತು ಗಹನತೆ ಈಗ ಉಲ್ಲೇಖಿಸಿದ ಬರೆಹಗಳಲ್ಲಿ ಕಾಣದಿದ್ದರೂ ಆ ಘಟ್ಟದಲ್ಲಿ ಅವರು ಬರೆದದ್ದು ವೈಪುಲ್ಯತೆಯಿಂದಾಗಿ ಬೆರಗುಗೊಳಿಸುತ್ತದೆ.

೧೯೦೮ ರಲ್ಲಿ ಕುಮಾರಸ್ವಾಮಿಯವರು "ಸಿಂಹಳದ ಮಧ್ಯಯುಗೀನ ಕಲೆ" ಎಂಬ ಗ್ರಂಥವನ್ನು ಪ್ರಕಟಿಸಿದರು; ೧೯೦೯ ರಲ್ಲಿ "ರಾಷ್ಟ್ರೀಯ ಆದರ್ಶದ ವ್ಯಾಖ್ಯಾನ" ಎಂಬ ಹೊತ್ತಗೆ ಹೊರಬಂತು. ಅವರ ಗ್ರಂಥಗಳಲ್ಲಿ ವಿಶಿಷ್ಟ ಸ್ಥಾನವನ್ನು ಗಳಿಸಿರುವ "ಬುದ್ಧ ಮತ್ತು ಬೌದ್ಧಧರ್ಮಸಾರ" ಎಂಬ ಕೃತಿ ೧೯೧೬ ರಲ್ಲಿ ಬೆಳಕುಕಂಡಿತು. ಅದೇ ವರ್ಷ ರಜಪೂತ ಚಿತ್ರಕಲೆಯ ಎರಡು ಸಂಪುಟಗಳನ್ನು ಪ್ರಕಟಿಸಿದರು. ಕಾಂಗ್ರಾ ಚಿತ್ರಕಲೆಯನ್ನು ಪಾಶ್ಚಾತ್ಯರಿಗೆ ಪರಿಚಯಮಾಡಿಕೊಡುವಲ್ಲಿ ಈ ಕೃತಿ ಒಂದು ಮೈಲಿಗಲ್ಲಾಯಿತು.

ಈ ಮೂರು ಬೃಹದ್ ಗ್ರಂಥಗಳ ಜೊತೆಗೆ ಅವರ ಅಸಂಖ್ಯಾತ ಲೇಖನಗಳು ಭಾರತ, ಸಿಂಹಳ ಮತ್ತು ಇಂಗ್ಲೆಂಡ್ ದೇಶಗಳ ನಿಯತಕಾಲಿಕೆಗಳಲ್ಲಿ ಪ್ರಕಟವಾದವು. ಸಾಕಷ್ಟು ಪ್ರವಾಸ ಮತ್ತು ಸಂಶೋಧನೆಯನ್ನು ನಿರೀಕ್ಷಿಸುವ ಈ ಬಗೆಯ ಬರವಣಿಗೆಯ ಜೊತೆಗೆ ಅವರು ಸೋದರಿ ನಿವೇದಿತಾ [ಮಾರ್ಗರೇಟ್ ನೋಬೆಲ್] ರೊಡಗೂಡಿ ೧೯೧೩ ರಲ್ಲಿ "ಹಿಂದೂಗಳು ಮತ್ತು ಬೌದ್ಧರ ಪುರಾಣ ಕಲ್ಪನೆಗಳು" ಎಂಬ ಗ್ರಂಥವನ್ನು ಸಂಪಾದಿಸಿದರು; ಜೊತೆಗೆ ಕಾಶ್ಮೀರ ಮತ್ತು ಪಂಜಾಬು ಪ್ರಾಂತ್ಯದ ಹಾಡುಗಳನ್ನು ಸಂಗ್ರಹಿಸಿದರು.

೧೯೧೭ರಲ್ಲಿ ಆನಂದಕುಮಾರಸ್ವಾಮಿಯವರು ಅಮೆರಿಕಾ ಸಂಯುಕ್ತ ಸಂಸ್ಥಾನಕ್ಕೆ ತೆರಳಿ ಅಲ್ಲಿ ಬಾಸ್ಟನ್ ವಸ್ತುಸಂಗ್ರಹಾಲಯದ ಲಲಿತಕಲೆಗಳ ವಿಭಾಗದಲ್ಲಿ ಉದ್ಯೋಗಸ್ಥರಾದರು. ಅಲ್ಲಿಂದ ಮುಂದೆ ಅವರ ವೃತ್ತಿಜೀವನ ಮತ್ತು ಬದುಕಿನ ಮೇಲೆ ವಸ್ತುಸಂಗ್ರಹಾಲಯದ ಅನುಭವ ನಿರ್ಣಾಯಕ ಪ್ರಭಾವ ಬೀರಿರುವುದು ವೇದ್ಯವಾಗುತ್ತದೆ. ಕುಮಾರಸ್ವಾಮಿಯವರು ಬಾಸ್ಟನ್‌ಗೆ ಹೊರಡಲು ಹಿನ್ನೆಲೆಯಾಗಿ ಕೂಡಿಬಂದ ಸಂದರ್ಭ ಈ ರೀತಿಯಿದೆ.

ಹಾರ್ವರ್ಡ್ ವಿಶ್ವವಿದ್ಯಾನಿಲಯದಲ್ಲಿ ಪ್ರೊಫೆಸರರಾಗಿದ್ದ ಡಾ. ಡೆನ್‌ಮನ್ ವ್ಯಾಲ್ಡೊರಾಸ್ ತಮ್ಮ ತಂದೆತಾಯಿಗಳಿಗೆ ಒಬ್ಬನೇ ಮಗ ಮತ್ತು ಅಪಾರವಾದ ಸಂಪತ್ತಿಗೆ ಉತ್ತರಾಧಿಕಾರಿ. ಏಷ್ಯನ್ ಕಲೆಯನ್ನು ಬಹುವಾಗಿ ಮೆಚ್ಚಿಕೊಂಡಿದ್ದ ವ್ಯಕ್ತಿ ಈತ. ಅತ್ಯಂತ ಸುಂದರವಾದ ಕಲಾಕೃತಿಗಳನ್ನು ಅವರು ಸಂಗ್ರಹಿಸಿದ್ದರಲ್ಲದೆ ತಾವು ಸಂಗ್ರಹಿಸಿದ್ದ ಕೃತಿಗಳನ್ನು ಮತ್ತು ಆನಂದಕುಮಾರಸ್ವಾಮಿಯವರ ಬಳಿಯಿದ್ದ ಕಲಾಕೃತಿಗಳನ್ನು ಬಾಸ್ಟನ್ ಲಲಿತಕಲಾ ವಸ್ತುಸಂಗ್ರಹಾಲಯಕ್ಕೆ ಮತ್ತು ಹಾರ್ವರ್ಡ್‌ನ ಫಾಗ್ ವಸ್ತುಸಂಗ್ರಹಾಲಯಕ್ಕೆ ಕೊಡುಗೆಯಾಗಿ ಕೊಟ್ಟುಬಿಟ್ಟರು. ಆನಂದಕುಮಾರಸ್ವಾಮಿಯವರ ಸಂಗ್ರಹಿಸಿದ್ದ ಭಾರತೀಯ ಕೃತಿಗಳಲ್ಲಿ ಮೊಗಲ್ ಮತ್ತು ರಜಪೂತ ಚಿತ್ರಗಳು, ಜೈನ ಹಸ್ತಪ್ರತಿಗಳು ಮತ್ತು ಪುಟ್ಟ ಹಿತ್ತಾಳೆ ವಿಗ್ರಹಗಳು ಸೇರಿದ್ದವು.

ಅಧಿಕಾರ ವರ್ಗದವರು ಸರಿಯಾಗಿ ಪ್ರದರ್ಶಿಸಲು ಏರ್ಪಾಡುಮಾಡುವುದಾದರೆ ಮತ್ತು ಭಾರತೀಯ ಕಲೆ ಮತ್ತು ಸಂಸ್ಕೃತಿಪೀಠಕ್ಕೆ ತಮ್ಮನ್ನು ಅಧ್ಯಕ್ಷನನ್ನಾಗಿ ನೇಮಕಮಾಡುವುದಾದರೆ ತಾವು ಸಂಗ್ರಹಿಸಿರುವ ವಸ್ತುಗಳನ್ನು ಬನಾರಸ್ ಹಿಂದು ವಿಶ್ವವಿದ್ಯಾನಿಲಯಕ್ಕೆ ದಾನಕೊಡುವುದಾಗಿ ಮನಸ್ಸುಮಾಡಿದ್ದರೆಂದು ನಂಬಲು ಸಾಕಷ್ಟು ಪುರಾವೆಗಳಿವೆ. ಈ ವಿಷಯವಾಗಿ ಕುಮಾರಸ್ವಾಮಿಯವರು ಶ್ರೀಮತಿ ಅನಿಬೆಸೆಂಟರ ಮಿತ್ರರಾದ ಡಾ. ಭಗವಾನ್‌ದಾಸ್‌ರವರನ್ನು ಭೇಟಿಮಾಡಿದ್ದರಾದರೂ ಏನೂ ಪ್ರಯೋಜನವಾಗಲಿಲ್ಲ. ಇದು ಒಂದುವೇಳೆ ಕೈಗೂಡಿದ್ದರೆ ಪ್ರಾಯಶಃ ಇಂದು ಬಾಸ್ಟನ್‌ನಲ್ಲಿ ಸುರಕ್ಷಿತವಾಗಿರುವ ಸಂಗ್ರಹವೆಲ್ಲಾ ನಷ್ಟವಾಗಿಬಿಡುತ್ತಿತ್ತೋ ಏನೋ ? ಅದಷ್ಟೆಲ್ಲಾ ಒಳ್ಳೆಯದಕ್ಕೆಂದೇ ತಿಳಿಯಬೇಕು. ಈ ರೀತಿ ಭಾವಿಸುವುದಕ್ಕೆ ಕಾರಣವಿದೆ : ಆನಂದಕುಮಾರಸ್ವಾಮಿಯವರಂಥ ರಾಷ್ಟ್ರವಾದಿಗೆ ಬ್ರಿಟಿಷ್ ಆಡಳಿತದವರು ಹಣಕಾಸಿನ ಸಹಾಯಮಾಡಿ ಪ್ರೋತ್ಸಾಹಿಸುತ್ತಿದ್ದರೆಂದು ನಂಬುವುದಕ್ಕಾಗುತ್ತದೆಯೇ ? ಹಾಗೆಯೇ ಬಾಸ್ಟನ್‌ನಲ್ಲಿ ಆ ವಸ್ತುಗಳನ್ನು ಸಂಗ್ರಹಿಸಿರುವಷ್ಟೇ ಜಾಗರೂಕತೆಯಿಂದ ಬನಾರಸ್‌ನಲ್ಲಿ ಕಲಾಕೃತಿಗಳು ರಕ್ಷಿಸಲ್ಪಡುತ್ತಿದ್ದವೆಂದು ತಿಳಿಯಲಾಗದು.

ಕುಮಾರಸ್ವಾಮಿಯವರು ಭಾರತೀಯ ಕಲೆಗಳ ಬಗ್ಗೆ ಅಷ್ಟೊಂದು ಗಾಢವಾಗಿ ಅಧ್ಯಯನ ಮಾಡಿದ್ದರಿಂದ ಬಾಸ್ಟನ್ ವಸ್ತುಸಂಗ್ರಹಾಲಯದವರು ಅವುಗಳ ಕ್ರಮವಾದ

ಸೂಚಿಯನ್ನು ತಯಾರಿಸಲು ಅವರನ್ನೇ ಆಹ್ವಾನಿಸಿದುದು ಔಚಿತ್ಯಪೂರ್ಣವಾಗಿದೆ. ಭಾರತೀಯ ಮತ್ತು ಮಹಮದೀಯ ಕಲೆಯ ರಕ್ಷಕರಾಗಿ ['ಕೀಪರ್'] ಹಂಗಾಮಿಯಾಗಿ ನೇಮಕರಾದ ಕುಮಾರಸ್ವಾಮಿ ತಮ್ಮ ಜೀವನದ ಕೊನೆಯತನಕ ಆ ವಸ್ತುಸಂಗ್ರಹಾಲಯದ ಖಾಯಂ ನೌಕರರಲ್ಲೊಬ್ಬರಾಗಿ ಹೋದರು—ಸುಮಾರು ಮೂರು ದಶಕಗಳಕಾಲ ಅವರು ಅಲ್ಲಿ ಸೇವೆ ಸಲ್ಲಿಸಿದರು. ನಿರಂತರ ಸಂಶೋಧನೆ, ಬರವಣಿಗೆ ಮತ್ತು ಜಗತ್ತಿನ ನಾನಾ ಭಾಗಗಳಲ್ಲಿದ್ದ ತಮ್ಮ ಕ್ಷೇತ್ರದಲ್ಲಿ ಕೆಲಸಮಾಡುತ್ತಿದ್ದ ಸಹ ಸಂಶೋಧಕರೊಡನೆ ಸುದೀರ್ಘವಾದ ಪತ್ರವ್ಯವಹಾರ—ಇವುಗಳಿಗೆ ಅಡ್ಡಿಯಾಗುವುದೆಂದು ತಿಳಿದು ತಮ್ಮನ್ನು ಹುಡುಕಿಬಂದ ಅನೇಕ ಬಡ್ತಿಗಳನ್ನು ಅವರು ನಿರಾಕರಿಸಿದರು. ಭಾರತೀಯ ಮತ್ತು ಮಹಮದೀಯ ಕಲೆಯ ಸಂರಕ್ಷಕರಾಗಿದ್ದ ಕಾಲಕ್ಕೆ ಅತ್ಯಂತ ಯಶಸ್ವಿಯಾಗಿ ಮತ್ತೊಬ್ಬರಿಗೆ ಮಾದರಿಯಾಗಿ ಅವರು ಕೆಲಸಮಾಡಿದರು. ಹಾಗೆಯೇ ಪಾಶ್ಚಾತ್ಯ ಜಗತ್ತು ಅದುವರೆಗೆ ಕಂಡುಕೇಳರಿಯದ ಪ್ರಮಾಣದಲ್ಲಿ ಕಲಾಕೃತಿಗಳನ್ನು ವಸ್ತುಸಂಗ್ರಹಾಲಯಕ್ಕೆ ತಂದು ಸಂಗ್ರಹಿಸಿದರು. ಭಾರತೀಯ ಕಲೆಗೆ ಮತ್ತು ಆ ವಸ್ತುಸಂಗ್ರಹಾಲಯಕ್ಕೆ ಕುಮಾರಸ್ವಾಮಿಯವರ ಸೇವೆಯ ಪ್ರಮಾಣವನ್ನು ಅರಿಯ ಬಯಸುವವರು ಒಮ್ಮೆ ಆ ಸಂಗ್ರಹಾಲಯಕ್ಕೆ ಭೇಟಿ ನೀಡಬೇಕೆಂದು ನೋಡಿರುವವರು ಹೇಳುತ್ತಾರೆ.

ಅವರು ಭಾರತೀಯ ಕಲೆಯ ಸಂರಕ್ಷರಾಗಿದ್ದ ಕಾಲದಲ್ಲಿ ಭಾರತೀಯ ಸಂಗ್ರಹಗಳ ಅನೇಕ ಪಾಂಡಿತ್ಯಪೂರ್ಣ ಕ್ಯಾಟಲಾಗ್‌ಗಳನ್ನು ರಚಿಸಿದರು. ಇವುಗಳಲ್ಲಿ, "ಕ್ಯಾಟಲಾಗ್ ಆಫ್ ಇಂಡಿಯನ್ ಕಲೆಕ್ಷನ್ ಇನ್ ದ ಮ್ಯೂಸಿಯಮ್ ಆಫ್ ಫೈನ್ ಆರ್ಟ್ಸ್", ಬಾಸ್ಟನ್ (೧೯೨೩ ಮತ್ತು ೧೯೨೪) ಎಂಬ ಗ್ರಂಥದ ಎರಡು ಸಂಪುಟಗಳು ಪ್ರಮುಖವಾಗಿ ಹೆಸರಿಸಬೇಕಾದವು. ೧೯೨೫–೩೦ರ ನಡುವೆ ಮತ್ತೆ ಮೂರು ಸಂಪುಟಗಳು ಪ್ರಕಟವಾದವು. ಪ್ರಖ್ಯಾತ ಬ್ರಿಟಿಷ್ ಕಲಾವಿದ ಸರ್ ವಿಲಿಯಮ್ ರೊಥೆನ್‌ಸ್ಟೈನ್‌ರವರು ಒಮ್ಮೆ ಹೀಗೆ ಅಭಿಪ್ರಾಯಪಟ್ಟಿದ್ದಾರೆ: "ಇಂದು ಭಾರತ ಪ್ರಥಮಶ್ರೇಣಿಯ ಕಲಾತ್ಮಕ ಸಾಮರ್ಥ್ಯವನ್ನು ಗಳಿಸಿರಬೇಕಾದರೆ ಇದು ಬಹುಪಾಲು ಕುಮಾರಸ್ವಾಮಿಯವರ ಶ್ರಮದ ಫಲ".

ಒಬ್ಬ ವ್ಯಕ್ತಿ ಐವತ್ತರದಶಕ ಮುಗಿಸುತ್ತಿದ್ದಂತೆಯೇ ಅವನ ಬೌದ್ಧಿಕ ಸಾಮರ್ಥ್ಯ ಕೊನೆಯಾಗುತ್ತದೆ ಎಂಬ ಸಾಮಾನ್ಯ ತಿಳಿವಳಿಕೆಯನ್ನು ಸುಳ್ಳುಮಾಡುವಂತೆ ಕುಮಾರಸ್ವಾಮಿಯವರ ಬದುಕಿನ ಕಡೆಯ ಇಪ್ಪತ್ತೈದು ವರ್ಷಗಳು ಬಹಳ ಸೃಜನಾತ್ಮಕತೆಯಿಂದ ಕೂಡಿದ್ದವು. ೧೯೧೭ ಮತ್ತು ೧೯೪೭ರ ನಡುವೆ ಕುಮಾರಸ್ವಾಮಿ ಸುಮಾರು ನೂರಿಪ್ಪತ್ತಕ್ಕೂ ಹೆಚ್ಚು ಪುಸ್ತಕಗಳನ್ನು [ಮಾನೋಗ್ರಾಫ್‌ಗಳು ಸೇರಿದಂತೆ], ಸುಮಾರು ಮೂರುನೂರು ಪಾಂಡಿತ್ಯಪೂರ್ಣ ಲೇಖನಗಳನ್ನು, ಸುಮಾರು ಐವತ್ತು ಪ್ರೌಢವಾದ ಪುಸ್ತಕ ವಿಮರ್ಶೆಯನ್ನು ಮತ್ತು ಲೆಕ್ಕವಿಲ್ಲದಷ್ಟು ತಾಂತ್ರಿಕ ಟಿಪ್ಪಣಿಗಳು ಹಾಗೂ ಪತ್ರಗಳನ್ನು ಬರೆದರು.

ಕುಮಾರಸ್ವಾಮಿಯವರ ಖಾಸಗಿ ಜೀವನದ ಬಗ್ಗೆ ಜನರಿಗೆ ಏನೇನೂ ತಿಳಿದಿರಲಿಲ್ಲ. ಈಗ ಅಮೆರಿಕಾದಲ್ಲಿ ಪ್ರಚಲಿತವಿರುವ ಒಂದು ಮಾತಿನಂತೆ "ಅವರೊಬ್ಬ ತೀರಾ ಖಾಸಗಿ ವ್ಯಕ್ತಿ''. ಅವರು ನಾಲ್ಕು ಜನ ಮಹಿಳೆಯರನ್ನು ಲಗ್ನವಾದರು. ಆದರೆ ಅವರಲ್ಲಿ ಒಬ್ಬರೂ ಭಾರತೀಯರಾಗಲೀ, ಸಿಂಹಳದವರಾಗಲೀ ಅಲ್ಲ. ಅವರ ಮೊದಲನೆಯ ಪತ್ನಿ ಎಥೆಲ್ ಆಂಗ್ಲ ಮಹಿಳೆ. ಕುಮಾರಸ್ವಾಮಿಯವರೊಡಗೂಡಿ ಸಿಂಹಳದ ಕೆಲವು ಅಭಿಜಾತಕೃತಿಗಳನ್ನು ಇಂಗ್ಲಿಷಿಗೆ ತರ್ಜುಮೆ ಮಾಡಿದರು. ಅವರ ಎರಡನೆಯ ಹೆಂಡತಿ ಆಲೀಸ್ ಕೂಡ ಆಂಗ್ಲಳು. ಗಂಡನ ಸ್ಫೂರ್ತಿಯ ಫಲವಾಗಿ ಭಾರತೀಯ ಶಾಸ್ತ್ರೀಯ ಸಂಗೀತದಲ್ಲಿ ಪ್ರವೀಣೆಯಾಗಿದ್ದ ಆಕೆ ರತನ್‌ದೇವಿಯೆಂಬ 'ರಂಗನಾಮ'ವನ್ನು ಧರಿಸಿದ್ದರು. ಮೂರನೆಯ ಹೆಂಡತಿ ಸ್ಟೆಲ್ಲಾ ಬ್ಲಾಕ್ ಒಬ್ಬ ಪ್ರಸಿದ್ಧ ರಂಗನಟಿ; ನ್ಯೂಯಾರ್ಕಿನ ಥಿಯೇಟರ್ ಗಿಲ್ಡ್‌ನಲ್ಲಿದ್ದ ಈಕೆ ಇಂಡೊನೇಶಿಯನ್ ನೃತ್ಯದಲ್ಲಿ ಪರಿಣತರಾಗಿದ್ದರು. ಅವರ ನಾಲ್ಕನೆಯ ಮತ್ತು ಕೊನೆಯ ಹೆಂಡತಿ ಡೋನಾ ಲೂಸಾ ಅರ್ಜೆಂಟೈನಾದಲ್ಲಿ ಹುಟ್ಟಿ ನಂತರ ಅಮೆರಿಕದ ಪ್ರಜೆಯಾಗಿದ್ದರು. ಕೊಲಂಬಿಯಾ ವಿಶ್ವವಿದ್ಯಾನಿಲಯದಲ್ಲಿ ಶಿಕ್ಷಣಪಡೆದಿದ್ದ ಈಕೆ ಸಂಸ್ಕೃತ ಪಂಡಿತರಾಗಿದ್ದರು. ಡೋನಾ ಲೂಸಾ ಅವರೇ ಶ್ರೀಮತಿ ಕುಮಾರಸ್ವಾಮಿಯೆಂದು ಅನೇಕರಿಗೆ ತಿಳಿದಿರುವುದು. (ಕುಮಾರಸ್ವಾಮಿಯವರು ಕಾಲವಾದ ನಂತರ ಅವರ ಸಮಗ್ರ ಕೃತಿಗಳನ್ನು ಸಂಪಾದಿಸುವ ಕಾರ್ಯದಲ್ಲಿ ತೊಡಗಿದ್ದ ಈಕೆ ಆ ಕೆಲಸ ಪೂರ್ಣಗೊಳ್ಳುವ ಮೊದಲೇ ವಿಧಿವಶರಾದರು).

೧೯೪೭ ರಲ್ಲಿ ಕುಮಾರಸ್ವಾಮಿಯವರು ಮರುವರ್ಷ ತಾವು ವಸ್ತುಸಂಗ್ರಹಾಲಯದಿಂದ ನಿವೃತ್ತಿಹೊಂದಿ ಹಿಮಾಲಯದ ತಪ್ಪಲಲ್ಲಿ ಒಂದು ಕುಟೀರದಲ್ಲಿ ಒಬ್ಬ ನಿಸ್ಸಂಗಿಯ ಹಾಗೆ ಇದ್ದುಬಿಡುವೆನೆಂದು ಘೋಷಿಸಿದ್ದರು. ಈ ಸಂಬಂಧವಾಗಿ ಒಂದು ಔತಣಕೂಟವನ್ನು ಏರ್ಪಡಿಸಿದಾಗ ನೆರೆದ ಅವರ ಅಸಂಖ್ಯಾತ ಗೆಳೆಯರು, ಹಿತೈಷಿಗಳು ಮತ್ತು ಸಹೋದ್ಯೋಗಿಗಳು ಕುಮಾರಸ್ವಾಮಿಯವರ ಬಹುಶ್ರುತತೆ ಮತ್ತು ಅಸಾಧಾರಣ ಪಾಂಡಿತ್ಯವನ್ನು ಬಾಯ್ತುಂಬಾ ಹೊಗಳಿದರು.

೧೯೪೭, ಸೆಪ್ಟೆಂಬರ್ ೯ ರಂದು—ವಸ್ತುಸಂಗ್ರಹಾಲಯದಿಂದ ನಿವೃತ್ತರಾಗಿ ಭಾರತಕ್ಕೆ ವಾಪಸ್ಸಾಗುವ ಕನಸು ನನಸಾಗುವ ಮೊದಲೇ—ಕುಮಾರಸ್ವಾಮಿಯವರು ಬಾಸ್ಟನ್ ಹೊರವಲಯದ ನೀಡಮ್‌ನ ನಿವಾಸದಲ್ಲಿ ಕೊನೆಯುಸಿರೆಳೆದರು. ಜ್ಞಾನಾನ್ವೇಷಣೆಯ ಪ್ರತೀಕವಾಗಿ ಕೊನೆಯ ಘಳಿಗೆಯವರೆಗೂ ಸಂಶೋಧನೆಗೆ ತಮ್ಮನ್ನು ಸಮರ್ಪಿಸಿಕೊಂಡ ಈ ಘನವಿದ್ವಾಂಸ ನಿಜವಾದ ಅರ್ಥದಲ್ಲಿ ಅಪ್ರತಿಮ ಪಂಡಿತ. ಇವರು ಬಿಟ್ಟುಹೋಗಿರುವ ಬೌದ್ಧಿಕ ಆಸ್ತಿಗೆ ಕಲೋಪಾಸಕರೆಲ್ಲರೂ ಹಕ್ಕುದಾರರು.

ಗ್ರಂಥಋಣ

1. ಆನಂದ ಕೆ. ಕುಮಾರಸ್ವಾಮಿ : ಎಸ್. ಚಂದ್ರಶೇಖರ್
2. ರಜಪೂತ ಚಿತ್ರಕಲೆ–ಸಂಪುಟ 1, 2 : ಆನಂದ ಕೆ. ಕುಮಾರಸ್ವಾಮಿ
3. ಭಾರತೀಯ ವಾಸ್ತುಶಿಲ್ಪ : ಆನಂದ ಕೆ. ಕುಮಾರಸ್ವಾಮಿ
4. ಬುದ್ಧ ಮತ್ತು ಬೌದ್ಧ ಧರ್ಮದ ತತ್ವ : ಆನಂದ ಕೆ. ಕುಮಾರಸ್ವಾಮಿ

ಡಾ. ಬಸವರಾಜ ಸಬರದ*

ಅಕ್ಕಮಹಾದೇವಿ ವಚನಗಳಲ್ಲಿ ಪ್ರಕೃತಿ

ಪ್ರಕೃತಿ–ಪರಿಸರದ ಬಗೆಗೆ ಇತ್ತೀಚೆಗೆ ತುಂಬಾ ಕಾಳಜಿ ವಹಿಸುತ್ತಿದ್ದೇವೆ. ವಿಜ್ಞಾನದಲ್ಲಿಷ್ಟೇ ಮುನ್ನಡೆ ಸಾಧಿಸಿದರೂ ಪರಿಸರವನ್ನು ಕೆಡಿಸಿ–ಪ್ರಕೃತಿಯನ್ನು ನಾಶಪಡಿಸಿ ನಾವು ಬದುಕಲಾರೆವೆಂಬ ಸತ್ಯ ನಮಗೀಗ ಸ್ಪಷ್ಟವಾಗಿದೆ. ಅಂತೆಯೇ ಪರಿಸರ ಮಾಲಿನ್ಯದ ಬಗೆಗೆ ಇಂದು ದೊಡ್ಡ ಚಳುವಳಿಯೇ ನಡೆದಿದೆ. ಜಗತ್ತಿನ ಬೇರೆ ಬೇರೆ ಭಾಷೆಗಳಲ್ಲಿ ಕಾವ್ಯ ರಚಿಸಿದ ಕವಿಗಳಲ್ಲಿ ಪ್ರಕೃತಿಯನ್ನು ಬಿಟ್ಟು ಬರೆದವರು ತುಂಬಾ ವಿರಳವೆನ್ನಬಹುದು.

ಪ್ರಾಣಿ ಅಥವಾ ಮನುಷ್ಯಪ್ರಾಣಿ ಇವೆಲ್ಲ ಪ್ರಕೃತಿಯ ಒಂದು ಅಂಗ. ಪ್ರಕೃತಿಯ ಬೆಳವಣಿಗೆ ಮತ್ತು ವಿನಾಶದಲ್ಲಿಯೇ ಮಾನವ ಬದುಕಿನ ಬೆಳವಣಿಗೆ ಮತ್ತು ವಿನಾಶ ಅಡಗಿದೆ. ಇಂತಹ ಒಂದು ದಟ್ಟ ಸತ್ಯವನ್ನು ಹನ್ನೆರಡನೆಯ ಶತಮಾನದಲ್ಲಿಯೇ ಕಂಡುಕೊಂಡ ವಚನಕಾರರು ಪ್ರಕೃತಿಗೆ ಸಂಬಂಧಿಸಿದಂತೆ ಅನೇಕ ಹೊಸ ಮಜಲುಗಳನ್ನು ಪ್ರಕಟಿಸಿದ್ದಾರೆ. ಬಸವಣ್ಣ ಪ್ರಕೃತಿಯ ಸಂರಕ್ಷಣೆ ಕುರಿತು ಹೇಳಿದರೆ, ಅಕ್ಕಮಹಾದೇವಿ ಪ್ರಕೃತಿಯ ಒಳನೋಟಗಳನ್ನು ಕುರಿತು ಹೇಳುತ್ತಾಳೆ.

ಪ್ರಕೃತಿಯ ನಿಗೂಢತೆ, ಅಂತಸ್ಸತ್ವ ಪ್ರಾಮುಖ್ಯತೆ ಕುರಿತು ಅಕ್ಕಮಹಾದೇವಿ ಅಧ್ಯಾತ್ಮದ ಹಿನ್ನೆಲೆಯಲ್ಲಿ ವಿವರಿಸುವ ರೀತಿ ತುಂಬಾ ಕುತೂಹಲಕಾರಿಯಾಗಿದೆ. ಪ್ರಸ್ತುತ ಲೇಖನದಲ್ಲಿ ಅಂತಹ ಎಳೆಗಳನ್ನು ಹಿಡಿದಿಡುವ ಪ್ರಯತ್ನ ಮಾಡಲಾಗಿದೆ.

ಈಳೆ ನಿಂಬೆ ಮಾವು ಮಾದಲಕ್ಕೆ
ಹುಳಿ ನೀರನೆರೆದವರಾರಯ್ಯ ?
ಕಬ್ಬು ಬಾಳೆ ಹಲಸ ನಾರಿವಾಳಕ್ಕೆ
ಸಿಹಿ ನೀರನೆರೆದವರಾರಯ್ಯ ?
ಕಳವೆ ರಾಜಾನ್ನ ಶಾಲ್ಯನ್ನಕ್ಕೆ
ಓಗರದ ಉದಕವನೆರೆದವರಾರಯ್ಯ ?
ಮರುಗ ಮಲ್ಲಿಗೆ ಪಚ್ಚೆ ಮುಡಿವಾಳಕ್ಕೆ
ಪರಿಮಳದುದಕ ನೆರೆದವರಾರಯ್ಯಾ ?

* ಇಲ್ಲಿ ಬಳಸಲಾಗಿರುವ ವಚನಗಳನ್ನು ಡಾ. ಆರ್. ಸಿ. ಹಿರೇಮಠರು ಸಂಪಾದಿಸಿರುವ 'ಮಹಾದೇವಿಯಕ್ಕನ ವಚನಗಳು' ಗ್ರಂಥದಿಂದ ಆರಿಸಿಕೊಳ್ಳಲಾಗಿದೆ.

ಇಂತೀ ಜಲವೂ ಒಂದೆ ನೆಲನು ಒಂದೆ ಆಕಾಶವು ಒಂದೆ
ಜಲವು ಹಲವು ದ್ರವ್ಯಂಗಳ ಕೂಡಿ, ತನ್ನ ಪರಿ ಬೇರಾಗಿಹ ಹಾಗೆ
ಎನ್ನ ದೇವ ಚೆನ್ನಮಲ್ಲಿಕಾರ್ಜುನಯ್ಯನು
ಹಲವು ಜಗಂಗಳ ಕೂಡಿಕೊಂಡಿರ್ದಡೇನು ? ತನ್ನ ಪರಿಬೇರೆ (ಮ-ವ-4)

ಪ್ರಕೃತಿಯಲ್ಲಿ ಬೆಳೆದು ನಿಲ್ಲುವ ಹಣ್ಣುಗಳ ಗುಣ ವಿಶಿಷ್ಟತೆ, ಕಾಳಾಗಿ ಊಟಕ್ಕೆ ಸಲ್ಲುವ ಕಳವೆಗಳ ರುಚಿ ವಿಶಿಷ್ಟತೆ, ಪರಿಮಳ ಬೀರಿ ಮುಡಿಯೇರುವ ಹೂಗಳ ವೈವಿಧ್ಯತೆಯನ್ನು ಅಕ್ಕ ಇಲ್ಲಿ ವಿವರಿಸಿದ್ದಾಳೆ. ಇದಿಷ್ಟೇ ಆಗಿದ್ದರೆ ಇದೊಂದು ಪ್ರಕೃತಿಗೆ ಸಂಬಂಧಿಸಿದ ಒಂದು ಭಾವಗೀತೆ ಮಾತ್ರ ಆಗಬಹುದಿತ್ತು. ಆದರೆ ಇಲ್ಲಿ ಭಾವಗೀತಾತ್ಮಕ ಗುಣದೊಂದಿಗೆ ಒಡೆದು ಕಾಣುವ ಅನೇಕ ಒಳನೋಟಗಳ ವಿಶ್ಲೇಷಣೆ ಇದೆ.

ಕೌಳಿ–ನಿಂಬೆ–ಮಾವು–ಮೊದಲ ಒಂದು ಕಡೆ ; ಕಬ್ಬು-ಬಾಳೆ-ಹಲಸ-ನಾರಿವಾಳ ಮತ್ತೊಂದು ಕಡೆ. ಮೊದಲನೆಯದಕ್ಕೆ ಹುಳಿ ನೀರನೆರೆದವರಾರು ? ಎರಡನೆಯದಕ್ಕೆ ಸಿಹಿ ನೀರನೆರೆದವರಾರು ? ಎಂಬ ಎರಡು ಪ್ರಶ್ನೆಗಳೊಂದಿಗೆ ವಚನ ಪ್ರಾರಂಭವಾಗುತ್ತದೆ. ಇದರ ಜತೆಗೆ ಮತ್ತೆರಡು ಪ್ರಶ್ನೆಗಳು ತಳುಕು ಹಾಕಿಕೊಳ್ಳುತ್ತವೆ. ಅನ್ನವಾಗಬಹುದಾದ ಕಳವೆಗೆ ಓಗರದ ಉದಕವನೆರೆದವರು ಮತ್ತು ಮರುಗ ಮಲ್ಲಿಗೆಗಳಿಗೆ ಪರಿಮಳದುದಕನೆರೆದವರಾರೆಂಬುದನ್ನು ನಂತರದ ಸಾಲುಗಳು ಪ್ರಶ್ನಿಸುತ್ತವೆ. 'ಇಂತೀ ಜಲವೂ ಒಂದೆ ನೆಲನು ಒಂದೆ ಆಕಾಶವು ಒಂದೆ' ಎಂಬ ಸಾಲಿಗೆ ವಚನ ಕೊನೆಗೊಂಡಿದ್ದರೆ ಅಲ್ಲಿ ಬರೀ ಕುತೂಹಲವನ್ನೇ ನೋಡಬಹುದಿತ್ತು. ಒಂದೇ ನೆಲದಲ್ಲಿ ಹುಟ್ಟಿ ಒಂದೇ ರೀತಿಯ ಬೆಳಕನ್ನು ಪಡೆದು, ಒಂದೇ ರೀತಿಯ ನೀರನ್ನುಂಡು ಬೆಳೆದು ನಿಂತ ಈ ಮರಗಳು ಫಲ ಕೊಡುವಲ್ಲೇಕೆ ಭಿನ್ನವಾಗುತ್ತವೆ ? ಎಂಬ ಕುತೂಹಲ ಕೊನೆಯವರೆಗೂ ಉಳಿಯಬಹುದಿತ್ತು. ಆದರೆ ಇಲ್ಲಿ ಅಕ್ಕನಿಗೆ ಕೇವಲ ಕುತೂಹಲ ಹುಟ್ಟಿಸಿ ಕೈಬಿಡುವ ವಿಚಾರವಿಲ್ಲ. ಅಂತೆಯೇ ಆಕೆ ಮುಂದುವರಿದು 'ಜಲವು ಹಲವು ದ್ರವ್ಯಂಗಳ ಕೂಡಿ ತನ್ನ ಪರಿ ಬೇರಾಗಿಹ ಹಾಗೆ' ಎಂದು ಕುತೂಹಲಕ್ಕೆ ಕಾರಣವಾಗಿದ್ದ ಮೂಲವನ್ನು ವಿವರಿಸುತ್ತಾಳೆ. ಅದರೊಂದಿಗೆ ಚನ್ನಮಲ್ಲಿಕಾರ್ಜುನ ಉಳಿದವರಿಗಿಂತ ಹೇಗೆ ಬೇರೆಯೆಂಬುದನ್ನು ತಾದ್ಯಾತ್ಮಗೊಳಿಸುತ್ತಾಳೆ. ಪ್ರಕೃತಿಯ ಅಂಗವಾಗಿಯೇ ಬೆಳೆದ ಈ ಮರ–ಗಿಡ–ಬಳ್ಳಿಗಳು ತಮ್ಮ ಮೂಲ ದ್ರವ್ಯಂಗಳ ಗುಣವನ್ನುಳಿಸಿಕೊಂಡು ವಿಶಿಷ್ಟವಾಗಿ ಬೆಳೆದು ನಿಲ್ಲುವ ಪರಿ ಇಲ್ಲಿ ಒಟ್ಟು ಆಶಯವಾಗಿ ಕಾಣುತ್ತದೆ

ಹಲವು ಜಗಂಗಳ ಕೂಡಿಕೊಂಡಿದ್ದರೂ ಚನ್ನಮಲ್ಲಿಕಾರ್ಜುನನ ಪರಿಯೇ ಬೇರೆ ಎಂದು ಮುಖ್ಯವಾಗಿ ಹೇಳಬೇಕಾಗಿದೆ. ಆದರೆ ಅಕ್ಕ ಅದನ್ನು ಪ್ರಕೃತಿಯ ಮೂಲಕ ಕಾವ್ಯಾತ್ಮಕವಾಗಿ ದಾಖಲಿಸುತ್ತಿರುವುದು ಹೆಚ್ಚು ಪರಿಣಾಮವನ್ನುಂಟು ಮಾಡುತ್ತದೆ. ಇಲ್ಲಿ ಪ್ರಕೃತಿಯ ಮೂಲ ದ್ರವ್ಯಂಗಳು ಮತ್ತು ಚೆನ್ನಮಲ್ಲಿಕಾರ್ಜುನ

ಅಮೂರ್ತವಾಗಿ, ಈಳೆ–ನಿಂಬೆ–ಕಬ್ಬು–ಬಾಳೆ–ಜಗಂಗಳು ಮೂರ್ತವಾಗಿ ಕಾಣಿಸಿಕೊಂಡಿವೆ. ಮೂರ್ತದ ಮೂಲಕ ಅಮೂರ್ತವನ್ನು ಕಾಣಲಿಚ್ಛಿಸುವ ಪ್ರಯತ್ನ ಇಲ್ಲಿ ಕಂಡುಬರುತ್ತದೆ. ಅಮೂರ್ತದ ಗುಣ ವಿಶಿಷ್ಟತೆಯನ್ನುಳಿಸಿಕೊಂಡೇ ಅದು ಮೂರ್ತಗೊಳ್ಳುವ ಪರಿ ತುಂಬಾ ಕುತೂಹಲಕಾರಿಯಾಗಿದೆ.

ಅಕ್ಕ ಒಂದೊಂದು ರೀತಿಯ ಗುಣ–ರುಚಿಗೆ ಸಂಬಂಧಿಸಿದಂತೆ ಒಂದೊಂದು ರೀತಿಯ ಮರ–ಗಿಡ–ಬಳ್ಳಿಗಳನ್ನು ಹೋಲಿಸುತ್ತಾಳೆ. ಅವುಗಳ ಗಂಧ–ಗುಣಗಳಿಗೆ ಸಂಬಂಧಿಸಿದಂತೆ ವರ್ಗೀಕರಣ ಮಾಡುತ್ತಾಳೆ. ಜಲ–ನೆಲ–ಆಕಾಶ ಒಂದೇ ಆಗಿದ್ದರೂ ಕೂಡ ಮೂಲ ದ್ರವ್ಯಂಗಳಲ್ಲಿ ವ್ಯತ್ಯಾಸವಿರುವುದರಿಂದ ಅವು ಭಿನ್ನವಾಗಿ ಬೆಳೆಯುವ ಅಚ್ಚರಿಯನ್ನು ಆಧ್ಯಾತ್ಮದ ಹಿನ್ನೆಲೆಯಲ್ಲಿ ಕಟ್ಟಿಕೊಡುವ ರೀತಿ ನಿಜಕ್ಕೂ ಅರ್ಥಪೂರ್ಣವೆನಿಸುತ್ತದೆ. ಪ್ರಕೃತಿ ಪರಿಸರದ ಬಗೆಗೆ ಪೂರ್ಣ ಜ್ಞಾನ ವಿದ್ದವರಿಂದ ಮಾತ್ರ ಇಂತಹ ತಾಧ್ಯಾತ್ಮ ಸಾಧ್ಯವಾಗುತ್ತದೆ.

ಪ್ರಕೃತಿಯ ಮೂಲ ನೆಲೆಗಳಾದ ನೆಲ ಮತ್ತು ಬಯಲುಗಳನ್ನು ಅಕ್ಕ ಕ್ರಮವಾಗಿ ಕಾಯ ಮತ್ತು ಜೀವಕ್ಕೆ ಹೋಲಿಸುತ್ತಾಳೆ. ಕಾಯವೇ ಮಣ್ಣಾಗಿ ಜೀವವೇ ಬಯಲಾದಾಗ "ಯಾವುದನು ಹಿಡಿಯಲಿ? ಯಾವ ಪರಿಯಲ್ಲಿ ನೆನೆಯಲಿ?" ಎಂದು ಕೇಳುವ ಆಕೆಯ ಪ್ರಶ್ನೆಗಳಿಗೆ ಉತ್ತರಗಳನ್ನು ಮತ್ತೆ ಪ್ರಕೃತಿಯಲ್ಲಿಯೇ ಹುಡುಕಬೇಕಾಗುತ್ತದೆ. ನೆಲ ಮುಗಿಲುಗಳಲ್ಲಿ, ಕಾಯ–ಜೀವಗಳನ್ನು ಕಲ್ಪಿಸಿ ಅಜಗಜಾಂತರವಿದ್ದ ಅಂತರವನ್ನು ಇಲ್ಲವಾಗಿಸಿ ಒಂದು ಮಾಡುವ ಶಕ್ತಿ ಆಧ್ಯಾತ್ಮಕ್ಕಿದೆಯೆಂಬುದನ್ನು ಅಕ್ಕ ತನ್ನ ಅನೇಕ ವಚನಗಳಲ್ಲಿ ವ್ಯಕ್ತಪಡಿಸಿದ್ದಾಳೆ.

> ಚಂದನವ ಕಡಿದು ಕೊರೆದು ತೇದಡೆ
> ನೊಂದೆನೆಂದು ಕಂಪ ಬಿಟ್ಟಿತ್ತೆ?
> ತಂದು ಸುವರ್ಣವ ಕಡಿದೊರೆದಡೆ
> ಬೆಂದು ಕಳಂಕ ಹಿಡಿಯಿತ್ತೆ?
> ಸಂದ ಸಂದ ಕಡಿದ ಕಬ್ಬನು ತಂದು ಗಾಣದಲ್ಲಿಕ್ಕಿ ಅರೆದಡೆ
> ಬೆಂದು ಪಾಕಗೊಳೆ ಸಕ್ಕರೆಯಾಗಿ ನೊಂದೆನೆಂದು ಸಿಹಿಯ ಬಿಟ್ಟಿತ್ತೆ (ಮ.ವ : 127)

ಇಲ್ಲಿ ಪ್ರಕೃತಿಯಲ್ಲಿರುವ ಮೂರು ವಸ್ತುಗಳನ್ನಾಯ್ದುಕೊಂಡು ಅವುಗಳ ಮೂಲ ಗುಣಗಳ ನಿಷ್ಠೆಯನ್ನು ಸ್ಪಷ್ಟಪಡಿಸಲಾಗಿದೆ. 'ಚನ್ನಮಲ್ಲಿಕಾರ್ಜುನ ದೇವಯ್ಯಾ ಕೊಂದಡೆ ಶರಣೆಂಬುದನು ಮಾಣೆ' ಎಂಬ ನುಡಿಗೆ ಪೂರಕವಾಗಿ ಇಡೀ ವಚನ ಬೆಳೆದು ನಿಂತಿದೆ.

ಕಂಪು ಬೀರುವದೇ ಚಂದನದ ವೈಶಿಷ್ಟ್ಯ, ಹೊಳೆಯುವದೇ ಸುವರ್ಣದ ವೈಶಿಷ್ಟ್ಯ, ಸಿಹಿ ನೀಡುವದೇ ಕಬ್ಬಿನ ವೈಶಿಷ್ಟ್ಯ. ಕಡಿದಂತೆಲ್ಲಾ ಚಂದನ ಕಂಪು ಬೀರತೊಡಗುತ್ತದೆ, ಸುವರ್ಣ ಹೊಳೆಯ ತೊಡಗುತ್ತದೆ, ಕಬ್ಬು ಸಿಹಿಯ ಕೊಡ ತೊಡಗುತ್ತದೆ. ಈ ಮೂರು ವಸ್ತುಗಳಿಗೆ ನಡೆಯುವ ಕ್ರಿಯೆ ಮಾತ್ರ ಒಂದೇ.

ಅದು ಕಡಿಯುವುದು, ಕಡಿದಾಗಲೇ ಅದರ ಸತ್ವ ಸ್ಪಷ್ಟವಾಗುವುದು. ಹಾಗೆಯೇ ಶರಣರಾದವರಿಗೆ ಯಾವ ತೊಂದರೆ ಕೊಟ್ಟರೂ ಏನೂ ಆಗದು. ಅವರ ಮೂಲ ಗುಣವಾದ "ಶರಣು" ಎಂಬುದನ್ನವರು ಬಿಡರು—ಎಂಬ ಅಂಶವನ್ನು ಇಲ್ಲಿ ಸ್ಪಷ್ಟ ಪಡಿಸಲಾಗಿದೆ.

ಅಕ್ಕ ಇಲ್ಲಿ ಆಯ್ದುಕೊಂಡ ವಸ್ತುಗಳೇ ವಿಶಿಷ್ಟವಾಗಿವೆ ಪ್ರಕೃತಿಯಲ್ಲಿಯೇ ಇಂತಹ ವಸ್ತುಗಳಿಗೆ ಕೆಲ ವಿಶಿಷ್ಟ ಗುಣವಿರುವಂತೆ, ಜನಜಂಗುಳಿಯಲ್ಲಿಯೇ ವಿಶಿಷ್ಟರಾಗಿ ಕಾಣುವ ಶರಣರಿಗೆ ಹೋಲಿಸಲಾಗಿದೆ ಕೊಂದರೂ 'ಶರಣು' ಎಂಬುದನ್ನು ಬಿಡಲಾರೆ ಎನ್ನುವಂತಹ ಮಾತು ನಿಷ್ಠೆಯನ್ನು ಪ್ರಕಟಿಸುತ್ತಲೇ ಪ್ರಕೃತಿಯಲ್ಲಿಯೇ ಇಂತಹ ನಿಷ್ಠೆಗಿರುವ ಒಂದು ಪರಂಪರೆಯನ್ನೇ ಸೂಚಿಸುತ್ತದೆ. ಹೀಗಾಗಿ ಅಕ್ಕ ಇಲ್ಲಿ ಪ್ರಕೃತಿಯ ವಸ್ತುಗಳನ್ನು ಬಳಸಿಕೊಳ್ಳುವ ರೀತಿಯೇ ತುಂಬಾ ಕುತೂಹಲಕಾರಿಯಾಗಿ ಕಾಣುತ್ತದೆ.

ಇದೇ ರೀತಿಯ ಭಾವವನ್ನು ಇನ್ನೊಂದು ವಚನದಲ್ಲಿ ನೋಡಬಹುದು.

> ಗಿರಿಯಲ್ಲಲ್ಲದೆ ಹುಲ್ಲು ಮೊರಡಿಯಲ್ಲಾಡುವದೇ ನವಿಲು ?
> ಕೊಳಕ್ಕಲ್ಲದೆ ಕಿರುವಳ್ಳಕ್ಕೆಳಸುವದೇ ಹಂಸೆ ?
> ಮಾಮರ ತಳಿತಲ್ಲದೆ ಸ್ವರಗೈವುದೆ ಕೋಗಿಲೆ ?
> ಪರಿಮಳವಿಲ್ಲದ ಪುಷ್ಪಕ್ಕೆಳಸುವುದೆ ಭ್ರಮರ ?
> ಎನ್ನ ದೇವ ಚೆನ್ನಮಲ್ಲಿಕಾರ್ಜುನಂಗಲ್ಲದೆ ಅನ್ಯಕ್ಕೆಳಸುವದೆ
> ಎನ್ನ ಮನ ? ಎನ್ನ ಕೆಳದಿಯರಿರಾ ! (ಮ.ವ. 285)

ಮೊದಲಿನ ವಚನದಲ್ಲಿ ಚಂದನ, ಸುವರ್ಣ, ಕಬ್ಬು ಇಂತಹ ವಸ್ತುವನ್ನಾಯ್ದುಕೊಂಡು ಅವುಗಳ ಗುಣ ನಿಷ್ಠೆಯ ಮೂಲಕ "ಶರಣರ ಏಕ ನಿಷ್ಠೆ"ಯನ್ನು ಪ್ರಕಟಿಸಿದರೆ, ಈ ವಚನದಲ್ಲಿ ನವಿಲು, ಹಂಸೆ, ಕೋಗಿಲೆ, ಭ್ರಮರದಂತಹ ಪಕ್ಷಿಗಳ ಮೂಲಕ "ಶರಣರ ಮನದಿಂಗಿತ"ವನ್ನು ಸ್ಪಷ್ಟಪಡಿಸಲಾಗಿದೆ. ಇಲ್ಲಿ ಬಳಕೆಯಾಗಿರುವ ಗಿರಿ, ಕೊಳ, ಮಾಮರ, ಪರಿಮಳದ ಪುಷ್ಪ—ಇವು ಶ್ರೇಷ್ಠತೆಯ ಸಂಕೇತವಾಗಿ ಹುಲ್ಲು, ಮೊರಡಿ, ಕಿರುವಳ್ಳ, ಒಣಮರ, ಪರಿಮಳವಿಲ್ಲದ ಪುಷ್ಪ—ಕನಿಷ್ಠತೆಯ ಸಂಕೇತವಾಗಿ ಬಳಕೆಯಾಗಿವೆ. ಅಂದರೆ ಪ್ರಕೃತಿಯಲ್ಲಿಯೇ ಇಂತಹ ವೈವಿಧ್ಯತೆ ಇದೆ. ಇವು ಶ್ರೇಷ್ಠ, ಇವು ಕನಿಷ್ಠ ಎಂದು ಗುರುತಿಸುವ ಕ್ರಿಯೆ ಕೂಡಾ ಪ್ರಕೃತಿಯಲ್ಲಿ ಬೆಳೆದು ಬಂದ ಪಕ್ಷಿಗಳಿಂದಲೇ ನಡೆಯುತ್ತದೆ. ನವಿಲು-ಹಂಸೆ-ಕೋಗಿಲೆ-ಭ್ರಮರಗಳು ಈ ಗುಣವಿಶಿಷ್ಟತೆಯನ್ನು ಕಂಡುಕೊಂಡಿವೆ. ಅಂತೆಯೇ ಅವು ತಮಗೆ ಶ್ರೇಷ್ಠತಮವೆಂದೆನಿಸಿದ ತಾಣಗಳಲ್ಲಿ ಇರುತ್ತವೆಯೇ ಹೊರತು, ಬೇರೆ ತಾಣಗಳಲ್ಲಿರಲಾರವೆಂಬುದನ್ನು ಹೇಳುವದರ ಮೂಲಕ "ಚನ್ನಮಲ್ಲಿಕಾರ್ಜುನಂಗಲ್ಲದೆ ಅನ್ಯಕ್ಕೆಳಸುವದೆ ಎನ್ನಮನ?" ಎಂಬ ನುಡಿಗೆ ಒತ್ತು ಬೀಳುತ್ತದೆ. ಪ್ರಕೃತಿಯಲ್ಲಿರುವ ಈ ಪಕ್ಷಿಗಳ ತಾಣಗಳನ್ನು ಸರಿಯಾಗಿ ಗುರುತಿಸುವ ಅಕ್ಕ ಅದನ್ನು ತನ್ನ ಬದುಕಿನ

ಮೂಲಕ ಬಿಚ್ಚಿ ತೋರಿಸುವ ಪರಿ ನಿಜಕ್ಕೂ ಸೃಜನಶೀಲವಾಗಿದೆ. ನವಿಲು, ಗಿರಿಯನ್ನು ಬಿಟ್ಟು ಹುಲ್ಲು ಮೊರಡಿಯಲ್ಲಿ ಎಂದಿಗೂ ಆಡುವದಿಲ್ಲ. ಹಂಸೆ, ಕೊಳ ಬಿಟ್ಟು ಯಾವ ಹಳ್ಳದಲ್ಲಿಯೂ ಕೇಲುವದಿಲ್ಲ. ಕೋಗಿಲೆ, ಮಾಮರ, ತಳಿರನ್ನು ಬಿಟ್ಟು ಹೋಗುವದಿಲ್ಲ. ಭ್ರಮರ, ಪರಿಮಳ ತುಂಬಿದ ಪುಷ್ಪವಿದ್ದರೆ ಮಾತ್ರ ಬಿಡುವದಿಲ್ಲ. ಈ ಕ್ರಿಯೆ ಭೂತ–ವರ್ತಮಾನ–ಭವಿಷತ್ತುಗಳಿಗೂ ಒಂದೇಯಾಗಿದೆ. ಇಂತಹ ಒಂದು ಚಿರಂತನವಾಗಿರುವ ಕ್ರಿಯೆಯ ಮೂಲಕ ಅಕ್ಕ ತನ್ನ ಮನಸ್ಸನ್ನು ತೆರೆದು ತೋರಿಸುವದು ಆ ಮೂಲಕ ಶರಣರ ಮನಸ್ಸೆಂದರೆ ಹೇಗೆ ಇರುತ್ತದೆಂಬುದನ್ನು ಸ್ಪಷ್ಟಪಡಿಸುವದು ಇಲ್ಲಿ ನಿಖರವಾಗಿ ನಮೂದಿಸಲ್ಪಟ್ಟಿದೆ.

ಗಿರಿ, ಹುಲ್ಲು–ಮೊರಡಿ, ಶ್ರೇಷ್ಠ–ಕನಿಷ್ಠ ಎನ್ನುವದಕ್ಕಿಂತ ನವಿಲು ಇಷ್ಟಪಡುವ ತಾಣವೆಂದು ಮಾತ್ರ ಹೇಳಬೇಕಾಗುತ್ತದೆ. ಹಾಗೆಯೇ ಶರಣರ ಮನ ಯಾವಾಗಲೂ ಚನ್ನಮಲ್ಲಿಕಾರ್ಜುನನಂತಹ ದೇವರಿಗೆಳಸುತ್ತದೆಂಬುದನ್ನು ವಿವರಿಸಲಾಗಿದೆ. ಇದರೊಂದಿಗೆ ಗಿರಿಯ ವಿಶಾಲತೆ, ಕೊಳದ ಸೌಂದರ್ಯ, ಮಾಮರದ ಚಿಗುರಿನ ರುಚಿ, ಪುಷ್ಪದ ಪರಿಮಳ, ಈ ಗುಣಗಳು ದಾಖಲಾಗುತ್ತವೆ.

> ಕಳವಳದ ಮಾನ ತಲೆ ಕೆಳಗಾದುದವ್ವಾ
> ಸುಳಿದು ಬೀಸುವ ಗಾಳಿ ಉರಿಯಾದುದವ್ವಾ
> ಬೆಳುದಿಂಗಳು ಬಿಸಿಯಾಯಿತ್ತು, ಕೆಳದಿ
> ಹೊಳಲ ಸೊಂಕಿಗನಂತೆ ತೊಳಲುತ್ತಿದ್ದೆನವ್ವಾ...." (ಮ ವ : 254)

ಈ ಮೊದಲು ವಿಶ್ಲೇಷಿಸಿದ ವಚನಗಳಿಗಿಂತ ತುಂಬಾ ಭಿನ್ನವಾಗಿ ಈ ವಚನ ಬೆಳೆದು ನಿಂತಿದೆ. ಇಲ್ಲಿನ ಆಶಯ ಮೊದಲ ವಚನಗಳಲ್ಲಿ ಕಾಣಿಸಿಕೊಂಡ ಆಶಯಕ್ಕೆ ವಿರುದ್ಧವಾಗಿದೆ. ತನ್ನ ಮನಸ್ಸು ಸಂತುಷ್ಟವಾಗಿದ್ದರೆ ಕಾಣುವ ಪ್ರತಿ ವಸ್ತುವೂ ನೂತನವಾಗಿ ಕಾಣುತ್ತದೆ. ಮನಸ್ಸು ಯಾವುದೇ ಕಾರಣದಿಂದ ಅತೃಪ್ತಿಗೊಂಡರೆ, ನಿರಾಶೆಯಾದರೆ, ನೋವಾದರೆ ಆಗ ಪ್ರಕೃತಿಯಲ್ಲಿನ ವಸ್ತುಗಳು ಕೂಡಾ ಅಪಾಯದ ಸಂಕೇತವಾಗಿ ಕಾಣುತ್ತವೆ. ಇದು ಸಾಮಾನ್ಯವಾಗಿ ಮನಸ್ಸಿನ ಪ್ರಕ್ರಿಯೆಗೆ ಸಂಬಂಧಿಸಿದ ಸಹಜ ವಿಷಯ. ಇಲ್ಲಿ ಅಕ್ಕನಿಗೆ ನೋವಾಗಿರುವದು ತನ್ನ ಬದುಕಿನ ಆಗು–ಹೋಗುಗಳ ಬಗೆಗಲ್ಲ. ಚೆನ್ನಮಲ್ಲಿಕಾರ್ಜುನ ಮುನಿಸುಗೊಂಡಿದ್ದರಿಂದ ಆಕೆಗೆ ಸುಳಿದುಬೀಸುವ ಗಾಳಿ–ಉರಿಯಾಗಿ, ಬೆಳದಿಂಗಳು ಬಿಸಿಯಾಗಿ ಕಾಣುತ್ತದೆ.

ಸುಳಿದು ಬೀಸುವ ಗಾಳಿ ಉರಿಯಾಗುವ, ಬೆಳದಿಂಗಳು ಬಿಸಿಯಾಗುವ ಕಲ್ಪನೆಯೇ ತುಂಬಾ ಅದ್ಭುತವಾದದ್ದು. ತದ್ವಿರುದ್ಧವಾದ ವಸ್ತುಗಳು ಒಂದಾಗುವ ಕ್ರಿಯೆ ಆಶ್ಚರ್ಯವನ್ನುಂಟುಮಾಡುತ್ತದೆ. ಇಲ್ಲಿನ ಕ್ರಿಯೆಯನ್ನು ಲಕ್ಷ್ಯಗೊಟ್ಟು ನೋಡಿದಾಗ ಒಂದುಮಾತು ಸ್ಪಷ್ಟವಾಗುತ್ತದೆ. ಪ್ರಕೃತಿಯಲ್ಲಿಯ ಪ್ರತಿಯೊಂದು ಸೃಷ್ಟಿಗೂ ಒಂದಕ್ಕೊಂದು ರೀತಿ ಸಂಬಂಧವಿದೆ. ಚನ್ನಮಲ್ಲಿಕಾರ್ಜುನನ ಮುನಿಸು,

ಅಕ್ಕನ ಮೇಲೆ ಪರಿಣಾಮವನ್ನುಂಟುಮಾಡುವದು ಆ ಪರಿಣಾಮದಿಂದ ಪ್ರಕೃತಿಯಲ್ಲಿ ಕಾಣುವ ವಸ್ತುಗಳ ಗುಣ ವಿಶಿಷ್ಟತೆಯೇ ತದ್ವಿರುದ್ಧವಾಗಿ ಕಂಡುಬರುತ್ತದೆ. ಹೊಳಲ ಸುಂಕಿಗನಂತೆ ತೊಳಲಲಿಕ್ಕೆ ಮುಖ್ಯಕಾರಣ ಕಳವಳದ ಮನ ತಲೆಕೆಳಗಾದುದರಿಂದ. ಈ ಎಲ್ಲ ಕಾರ್ಯ–ಕಾರಣಗಳ ಹಿನ್ನೆಲೆಯಲ್ಲಿ ನಡೆಯುವ ಮನಸ್ಸಿನ ಕ್ರಿಯೆ ಇಲ್ಲಿ ಅತಿ ಮುಖ್ಯವಾಗುತ್ತದೆ. ಆದುದರಿಂದ ಬೆಳದಿಂಗಳಾಗಲಿ, ಬಿಸಿಲಾಗಲಿ, ತಂಗಾಳಿಯಾಗಲಿ, ಉರಿಯಾಗಲಿ ಮೊದಲು ಕಾಣುವದು ಒಳಗಣ್ಣಿಗೆ, ಅಂತರಂಗಕ್ಕೆ. ಅಂತರಂಗದಲ್ಲಿ ಸುಡುವ ಸೂರ್ಯನನ್ನಿಟ್ಟುಕೊಂಡು ಬೆಳದಿಂಗಳದಲ್ಲಿಡ್ಡಾಡಿದರೆ ಬಿಸಿ ತಟ್ಟುವುದೇ ಹೊರತು ತಂಪಲ್ಲ. ಈ ಮಾತನ್ನು ಅಕ್ಕ ತನ್ನ ಬದುಕಿನ ಅನುಭವದ ಮೂಲಕ ಹೇಳಿರುವುದು ಹಾಗೂ ಪ್ರಕೃತಿ ಮತ್ತು ಮನಸ್ಸುಗಳ ನಡುವೆ ಅರ್ಥಪೂರ್ಣ ಸಂಬಂಧ ಕಟ್ಟಿಕೊಂಡಿರುವುದು ಬಹಳ ಮುಖ್ಯವೆನಿಸುತ್ತದೆ. 'ಬುದ್ಧಿ ಹೇಳಿ ಕರೆತಾರ' ಎನ್ನುವ ಮಾತು ಆಂತರಿಕ ಹೊಯ್ದಾಟವನ್ನು ಕಡಿಮೆಗೊಳಿಸಿ ಮುನಿಸನ್ನು ಶಮನಮಾಡುವುದೇ ಆಗಿದೆ.

ಅದೇ ಮನಸ್ಸು ಮುದಗೊಂಡಾಗ ವನವೆಲ್ಲಾ ಕಲ್ಪತರುವಾಗಿ ಕಾಣುತ್ತದೆ. ಗಿಡವೆಲ್ಲಾ ಮರುಜವಣಿಯಾಗಿ ಕಾಣುತ್ತದೆ. ಶಿಲೆಗಳೆಲ್ಲಾ ಪರುಷವಾಗಿ ನೆಲವೆಲ್ಲಾ ಅವಿಮುಕ್ತಿ ಕ್ಷೇತ್ರವಾಗಿ ಕಾಣುತ್ತದೆ. ಎಡಹುವ ಹರಳೆಲ್ಲಾ ಚಿಂತಾಮಣಿಯಾಗಿ ಕಾಣಲು ಮುಖ್ಯ ಕಾರಣ ಮಾನಸಿಕ ಸಂತೃಪ್ತಿ. ಹೀಗೆ ಅಕ್ಕ ತನ್ನ ವಚನಗಳಲ್ಲಿ ಪ್ರಕೃತಿಯ ಮೂಲಕ ಆಧ್ಯಾತ್ಮದ ಪರಿ, ಮನಸ್ಸಿನೊಳಗಿನ ಘರ್ಷಣೆಗಳು, ಅದರಿಂದುಂಟಾಗುವ ಪರಿಣಾಮಗಳು, ಅವುಗಳ ಪರಸ್ಪರ ಸಂಬಂಧ ಇವೆಲ್ಲವುಗಳ ಬಗೆಗೂ ಕೂಲಂಕಷವಾಗಿ ವಿಶ್ಲೇಷಿಸಿದ್ದಾಳೆ.

ತಾನು ನೆಚ್ಚಿದ್ದ; ಮೆಚ್ಚಿದ್ದ ಚನ್ನಮಲ್ಲಿಕಾರ್ಜುನನ ಹುಡುಕಾಟವನ್ನು ಆಕೆ ಪ್ರಕೃತಿಯ ಮೂಲಕವೇ ಪ್ರಾರಂಭಿಸುವದು ತುಂಬಾ ಅರ್ಥಪೂರ್ಣವಾಗಿದೆ. ಯಾವುದು ಚರಾಚರ ಜೀವಜಂತುಗಳ ಸೃಷ್ಟಿಗೆ ಕಾರಣವೋ ಆ ಪ್ರಕೃತಿಯನ್ನೇ ಆಕೆ ಅಚಲವಾಗಿ ನಂಬುತ್ತಾಳೆ ಗಿರಿಗಳಲ್ಲಿ, ವನಗಳಲ್ಲಿ ಗಿಡ–ಗಿಡಗಳಲ್ಲಿ 'ದೇವ ಬಾರಯ್ಯಾ ಕರುಣೆಯ ತೋರಯ್ಯಾ' ಎಂದು ಕರೆಯುತ್ತಾಳೆ. 'ನೀನಡಗುವ ತಾವ ಹೇಳಾ?' ಎಂದು ಹಂಬಲಿಸುತ್ತಾಳೆ. ಇಡೀ ಪ್ರಕೃತಿಯಲ್ಲಿಯೇ ಚನ್ನಮಲ್ಲಿಕಾರ್ಜುನನನ್ನು ಕಾಣುವ ಬಗೆ ಉಳಿದ ವಚನಕಾರರಿಗಿಂತ ಅಕ್ಕನಲ್ಲಿ ವಿಶಿಷ್ಟವಾಗಿದೆ. ಪ್ರಕೃತಿಯ ವಸ್ತುಗಳನ್ನೇ ಸಾಕ್ಷಿಯಾಗಿರಿಸಿಕೊಂಡು ಮಾತನಾಡುವ ವಚನವಂತೂ ತುಂಬಾ ಅರ್ಥಪೂರ್ಣವಾಗಿದೆ.

ಚಿಲಿಮಿಲಿ ಎಂದು ಓದುವ ಗಿಳಿಗಳಿರಾ, ನೀವು ಕಾಣಿರೆ, ನೀವು ಕಾಣಿರೆ
ಸ್ವರವೆತ್ತಿ ಪಾಡುವ ಕೋಗಿಲೆಗಳಿರಾ, ನೀವು ಕಾಣಿರೆ, ನೀವು ಕಾಣಿರೆ
ಎರಗಿ ಬಂದಾಡುವ ತುಂಬಿಗಳಿರಾ, ನೀವು ಕಾಣಿರೆ, ನೀವು ಕಾಣಿರೆ

ಕೊಳನ ತಡಿಯಾಡುವ ಹಂಸೆಗಳಿರಾ, ನೀವು ಕಾಣಿರೆ, ನೀವು ಕಾಣಿರೆ
ಗಿರಿಗಹ್ವರದೊಳಾಡುವ ನವಿಲುಗಳಿರಾ, ನೀವು ಕಾಣಿರೆ, ನೀವು ಕಾಣಿರೆ
ಚನ್ನಮಲ್ಲಿಕಾರ್ಜುನನೆಲ್ಲಿದ್ದಹನೆಂದು ಹೇಳಿರೆ (ಮ. ವ : 274)

ಪ್ರಕೃತಿಯು ಈ ಪಕ್ಷಿಗಳ ಮೂಲಕ ಚನ್ನಮಲ್ಲಿಕಾರ್ಜುನನ್ನರಸುವ ಪರಿಯೇ ತುಂಬಾ ಮಹತ್ವದ್ದೆನಿಸುತ್ತದೆ. ಚಿಲಿಮಿಲಿ ಎಂದೋದುವ, ಸ್ವರವೆತ್ತಿ ಹಾಡುವ, ಎರಗಿ ಬಂದಾಡುವ, ಕೊಳ ಗಿರಿಗಹ್ವರದಲ್ಲಾಡುವ ಕ್ರಿಯೆ ಆಯಾ ಪಕ್ಷಿಗಳ ಗುಣಸೂಚಕವಾಗಿ ಬಂದು ಚನ್ನಮಲ್ಲಿಕಾರ್ಜುನನೇ ಆ ರೂಪದಲ್ಲಿ ಬಂದು ನಿಂತಂತಾಗುತ್ತದೆ. ನಿಷ್ಕ್ರಿಯವಾದ ವಸ್ತುಗಳನ್ನು ಆಕೆ ಇಲ್ಲಿ ಉದಾಹರಿಸುವದಿಲ್ಲ. ಹೀಗಾಗಿ ಕ್ರಿಯೆಮೂಲವಾಗುವ, ಜಂಗಮದ ಚಲನಶೀಲಗುಣವನ್ನೊಳಗೊಂಡಿರುವ ಪ್ರಕೃತಿಯಲ್ಲಿ ಕೂಡಿ ಬದುಕುವ ಈ ಪಕ್ಷಿಗಳ ಸಮೂಹದಲ್ಲಿ ಚನ್ನಮಲ್ಲಿಕಾರ್ಜುನನನ್ನು ಹುಡುಕುವುದು ಹೆಚ್ಚು ಅರ್ಥಪೂರ್ಣವೆನಿಸುತ್ತದೆ. ನೀವು ಕಾಣಿರೆ? ನೀವು ಕಾಣಿರೆ? ಎನ್ನುವ ಪ್ರಶ್ನೆ ಪುನರಾವರ್ತನಗೊಂಡು ನೀವು ಕಂಡಿದ್ದೀರಿ ಎನ್ನುವ ನಿರ್ಣಾಯಕ ಹಂತವನ್ನು ತಲುಪುತ್ತದೆ. ಹೀಗೆ ಪ್ರಕೃತಿಯಲ್ಲಿಯೇ ದೇವರನ್ನು ಕಾಣುವ ಅಕ್ಕಮಹಾದೇವಿ, ಪ್ರಕೃತಿಯ ಅದ್ಭುತ ಸತ್ಯಗಳನ್ನು ಕಂಡುಕೊಂಡಿರುವದು ಇಂದಿಗೂ ಪ್ರಸ್ತುತವಾಗುತ್ತದೆ.

ಮೈಸೂರು ಕೃಷ್ಣಮೂರ್ತಿ

ಕನ್ನೆಯ ಹಾಡು

ಹತ್ತು ಹಲವು ವ್ಯಾಧಿಗಳೊಡನೆ
ನಲವತ್ತರ ಕನ್ನೆಯೊಬ್ಬಳು ವಾಸವಿದ್ದಳೊಮ್ಮೆ
ಅಹರ್ನಿಶಿ ಹಾಡುತ್ತಿದ್ದಳವಳು
ದುಃಖದ ಹಾಡು ಮತ್ತೆ ಶೋಕದಗೀತೆ
ಒಂದು ದಿನ ಆಕೆ ನೆರೆಯೂರಿನ
ಹಮ್ಮೀರ ನೋರ್ವನನ್ನು ಮದುವೆಯಾದಳು
ಓಹ್ ! ಅವಳ ಕಿವುಡುತನವೀಗ ಕಾಣದಾಗಿದೆ.
ಅವಳ ಕುಂಟುಕಾಲ್ಗಳಿಗೀಗ ಎಂಟುಕುದುರೆ ಬಲಬಂದಿದೆ
ಹೆಚ್ಚಿನ್ನೇನು ಹತ್ತು ತಿಂಗಳ ತರುವಾಯ
ಮುತ್ತಿನಂಥ ಮಗನೊಬ್ಬ ಹುಟ್ಟಿ
ಶೂರನಾಗಿ ಬೆಳೆದಿದ್ದಾನೆ

—ಮೂಲ : ಅಜ್ಞಾತ ಕೊರಿಯನ್ ಕವಿ
ಆಂಗ್ಲ ಆವೃತ್ತಿ : ಪೀಟರ್ ಹ್ಯೂನ್

ಮಂಜುನಾಥ ಬೇವಿನಕಟ್ಟಿ

ಹೆಣ್ಣುಗಳ ನಾಡಿನಲ್ಲಿ ?

ಪ್ರಪಂಚದ ಯಾವುದೇ ಮೂಲೆಯಲ್ಲಿ ಜನಿಸಿದ ಮನುಷ್ಯಜೀವಿ ಮನುಷ್ಯಾಕೃತಿಯ ಒಂದು ಮುದ್ದೆ ಮಾತ್ರ. ಅಲ್ಲದೆ ಹುಟ್ಟಿದ ಮಗು ಕೆಲ ಅವಧಿಯವರೆಗೆ ಯಾವುದೇ ರೀತಿಯ ಮೇಲು, ಕೀಳು, ಬಡವ, ಬಲ್ಲಿದ ಎಂಬ ಭಾವನೆಗಳನ್ನು ಹೊಂದಿರುವುದಿಲ್ಲ. ಇಂತಹ ಮಾನವಜೀವಿ ಸಮಾಜೀಕರಣಕ್ಕೊಳಪಟ್ಟಾಗ ಮೇಲಿನ ಭಾವನೆಗಳನ್ನು ಬೆಳೆಸಿಕೊಳ್ಳುತ್ತಾ ತಾನೂ ಸಮಾಜದ ಸದಸ್ಯನಾಗುತ್ತಾನೆ.

ಋಗ್ವೇದ ಕಾಲದ ಸ್ತ್ರೀ ಶಕ್ತಿಶಾಲಿನಿಯಾಗಿದ್ದಳು. ಆಕೆಯನ್ನು ನೋಡಿದರೆ ಗೌರವದ ಭಾವನೆ ಮೂಡುತ್ತದೆ. ಬಹುಬೇಗ ಅಂದರೆ, 'ಮಹಾ ಭಾರತ'ದ ಕಾಲದ ಹೊತ್ತಿಗೆ ಆಕೆಯ ಅಧೋಗತಿ ಮೊದಲಿಟ್ಟಿತು. ಸೀತೆಯಾದರೇನು, ದ್ರೌಪದಿಯಾದರೇನು—ಎಲ್ಲರೂ ವ್ಯವಸ್ಥೆಯ ಚಕ್ರಕ್ಕೆ ಸಿಲುಕಿ ನುಚ್ಚು ನೂರಾಗುತ್ತಾರೆ. ನಾರಿಯರು ಅನುಭವಿಸಿದ ಅಧೋಗತಿ ಸತತವಾಗಿ ಮುಂದುವರಿದುಕೊಂಡು ಹೋಯಿತು. ಅವಳನ್ನು ಜೂಜಿನಲ್ಲಿ ಪಣವಾಗಿ ಒಡ್ಡುವುದು ಸಾಮಾನ್ಯ ಸಂಗತಿಯಾಗಿ ಬಿಟ್ಟಿತು. ನಳನ ಪರಂಪರೆಯನ್ನು ಪಾಂಡವರು ಮುಂದುವರಿಸಿಕೊಂಡು ಬಂದರು. ಆದರೆ ಸ್ವಾಭಿಮಾನಿಯಾಗಿದ್ದರೂ ದ್ರೌಪದಿ ಇದರ ಪರಿಣಾಮಗಳನ್ನು ಅನುಭವಿಸಬೇಕಾಗಿ ಬಂತು. ರಾಮಾಯಣ ಮಹಾಭಾರತಗಳ ಕಾಲದ ನಾರಿಗೆ ಹಿರಿಮೆ ಏನಾದರೂ ಸಂದಿದ್ದರೆ, ಅದು ಅವಳು ತನ್ನ ಗಂಡನಿಗೆ ನೆರಳಾಗಿದ್ದಳು ಎಂಬ ಕಾರಣಕ್ಕಾಗಿ. ರಾಮನ ನೆರಳಿನಂತೆ ಇದ್ದ ಕಾರಣದಿಂದಾಗಿಯೇ ಸೀತೆಗೆ ದೊಡ್ಡವಳೆಂಬ ಪಟ್ಟವನ್ನು ನೀಡಲಾಗಿದೆ. ತನ್ನ ಗಂಡನಾದ ಧೃತರಾಷ್ಟ್ರ ಕಾಣಲಾಗದೆ ಇದ್ದ ಜಗತ್ತಿನ ಸೌಂದರ್ಯವನ್ನು ತಾನೂ ನೋಡಬಾರದೆಂದು ಕಣ್ಣಿಗೆ ಪಟ್ಟಿ ಕಟ್ಟಿಕೊಂಡದ್ದರಿಂದಲೇ ಗಾಂಧಾರಿ ಆದರಣೀಯಳಾಗಿದ್ದಾಳೆ. ಅನೇಕ ಮಂದಿ ಪ್ರೇಯಸಿಯರನ್ನು ಹೊಂದಿದ್ದ ತಮ್ಮ ಪತಿಗಳಿಗೆ ವಿರುದ್ಧವಾಗಿ ಶಕುಂತಲೆ ಮತ್ತು ದ್ರೌಪದಿ ಅವರುಗಳು ಎತ್ತಿದ್ದ ಪ್ರತಿಭಟನೆಯ ಧ್ವನಿ ತುಂಬ ದುರ್ಬಲವಾಗಿಯೇ ಉಳಿದು ಹೋಯಿತು.

ಯಾವುದೇ ಜಾತಿಯ ಸ್ತ್ರೀಯಾಗಲಿ, ಧರ್ಮಶಾಸ್ತ್ರಗಳ ಪ್ರಕಾರ ವಿದ್ಯೆಯ ಹಕ್ಕಿನಿಂದ ವಂಚಿತಳಾದವಳು. ಅಷ್ಟೇ ಅಲ್ಲ ಅವಳು ತಯಾರಿಸಿದ ಆಹಾರವನ್ನು ನೈವೇದ್ಯವಾಗಿಡಬಾರದು. ಪವಿತ್ರ ಗ್ರಂಥಗಳ ತಂಟೆಗೆ ಬರಬಾರದು. ಸ್ವಗೃಹದಲ್ಲೇ ಆದರೂ ಬಾಲಕಿಯಾಗಲೀ, ಕನ್ಯೆಯಾಗಲೀ, ವಯಸ್ಸಾದ ಹೆಂಗಸಾಗಲೀ ಸ್ವತಂತ್ರವಾಗಿ ಏನನ್ನೂ ಮಾಡಕೂಡದು. ಅವಳು ಜೀವನದ ವಿವಿಧ ಹಂತಗಳನ್ನು ಹಾದು ಬಂದಂತೆಲ್ಲ ತಂದೆಯನ್ನು, ಗಂಡನನ್ನು ನಂತರ ಮಕ್ಕಳನ್ನು ಆಶ್ರಯಿಸಿ ಜೀವಿಸಬೇಕು ಎಂಬ ಕಟ್ಟುಪಾಡುಗಳನ್ನು ಧರ್ಮಶಾಸ್ತ್ರದಲ್ಲಿ ವಿಧಿಸಿ, ಅದರಂತೆ ನಡೆಸಿಕೊಂಡರು. ಮುಂದುವರೆದು ಇಂದ್ರಿಯಗಳು ನಿಗ್ರಹಾತೀತವೂ, ಜ್ಞಾನಿಗಳನ್ನು ಕೂಡಾ ವಿಹ್ವಲಗೊಳಿಸಬಲ್ಲ ಶಕ್ತಿಯನ್ನುಳ್ಳವೂ ಆಗಿರುವುದರಿಂದ ಪುರುಷನು ತಾಯಿಯಾಗಲಿ, ಸಹೋದರಿಯಾಗಲಿ, ಮಗಳಾಗಲಿ ಅವಳೊಂದಿಗೆ ಏಕಾಂತದಲ್ಲಿರಬಾರದು ಎನ್ನುವಂಥ ವಿಚಾರಗಳು ಮೂಡಿಬಂದವು. ಮೇಲ್ಜಾತಿಯ ಸ್ತ್ರೀಯರಿಗೂ ಸಂಸ್ಕೃತ ಜ್ಞಾನ ನಿಷೇಧವಾಗಿತ್ತು. ಸಂಸ್ಕೃತ ನಾಟಕಗಳಲ್ಲಿ ಬರುವ ಮಹಾರಾಣಿ ಅಥವಾ ರಾಜಕುಮಾರಿಗಳಂತಹ ಸ್ತ್ರೀ ಪಾತ್ರಗಳೂ ಕೂಡ ಪ್ರಾಕೃತ ಮತ್ತಿತರ ಅಪಭ್ರಂಶ ಭಾಷೆಗಳಲ್ಲಿ ಸಂಭಾಷಣೆಯನ್ನು ನಿರ್ವಹಿಸಬೇಕಾಗಿತ್ತು.

ಪುರುಷ ಪ್ರಧಾನವಾದ ಭಾರತೀಯ ಸಮಾಜದಲ್ಲಿ ಮದುವೆಯಂಥ ಜೀವನ ನಿರ್ಣಾಯಕ ಸಂದರ್ಭಗಳಲ್ಲಿ ಹುಡುಗನದು ಅಥವಾ ಹೆಚ್ಚಾಗಿ ಆತನ ತಂದೆ ತಾಯಿಯರದು ಕೊನೆಯ ನಿರ್ಧಾರವಾಗುತ್ತದೆ. ಮದುವೆಯಾದ ಮೇಲೆ ಗಂಡುಮಗು ಜನಿಸಲಿಲ್ಲ ಎಂಬ ಏಕೈಕ ಕಾರಣವನ್ನು ಮುಂದೊಡ್ಡಿ ಎರಡನೇ ವಿವಾಹವಾಗುತ್ತಾರೆ. ಆದರೆ ವಾಸ್ತವವಾಗಿ ಹುಟ್ಟುವ ಜೀವಿಯ ಲಿಂಗ ನಿರ್ಧರಿಸುವ ಕ್ರೋಮೋಸೋಮುಗಳನ್ನು X ಮತ್ತು Y ಕ್ರೋಮೋಸೋಮುಗಳೆಂದು ಕರೆಯಲಾಗುತ್ತದೆ. ಗಂಡಿನಲ್ಲಿ XY ಕ್ರೋಮೋಸೋಮುಗಳು ಜೊತೆಯಾಗಿದ್ದರೆ, ಹೆಣ್ಣಿನಲ್ಲಿ XX ಕ್ರೋಮೋಸೋಮುಗಳು ಜೊತೆಯಾಗಿರುತ್ತವೆ. ಆದ್ದರಿಂದ ಮಿಟಾಸಿಸ್ ಹಾಗೂ ಮಿಯಾಸಿಸ್ ವಿಭಜನೆಗಳಿಂದಾಗಿ ಈ ಕ್ರೋಮೋಸೋಮುಗಳು ಈ ಕೆಳಗಿನಂತೆ ಜೋಡಣೆಯಾಗುತ್ತವೆ. ಆದ್ದರಿಂದ ಪ್ರತಿ ಜನನದಲ್ಲಿ ಗಂಡು ಅಥವಾ ಹೆಣ್ಣು ಆಗುವ ಸಂಭವ ಸಮನಾಗಿರುತ್ತದೆ. ಇದು ಪ್ರಕೃತಿ ನಿಯಮ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ Y ಕ್ರೋಮೋಸೋಮನ್ನು ದಾನ ಮಾಡುವ ತಂದೆಯೇ ತನ್ನ ಮಗುವಿನ ಲಿಂಗವನ್ನು ನಿರ್ಧರಿಸುವವನು. ನಾವೆಲ್ಲ ಕಲ್ಪಿಸಿಕೊಂಡಂತೆ ಮಗುವಿನ ಲಿಂಗವನ್ನು ನಿರ್ಧಾರ ಮಾಡುವವಳು ತಾಯಿಯಲ್ಲ.

ಭಾರತೀಯ ಸಮಾಜದಲ್ಲಿ ಕೆಲವೊಂದು ಕ್ರೂರ ಸಂಪ್ರದಾಯಗಳಿವೆ. ಜಾತ್ರೆಯ ಸಂದರ್ಭದಲ್ಲಿ ಹರಕೆ ಕಟ್ಟಿಕೊಂಡ ಹೆಣ್ಣು ಮಕ್ಕಳು ಬೆತ್ತಲೆ ಮೈಗೆ ಸೊಪ್ಪು ಸುತ್ತಿಕೊಂಡು ಗುಡಿ ಸುತ್ತುವುದು. ಹುಡುಗಿಯರು ಮೈನೆರೆದಾಗ ಊರ ಹೊರಗೆ ಗುಡಿಸಿಲಿನಲ್ಲಿ ಇಡುವುದು, ಹೀಗೆ ದೈಹಿಕವಾಗಿ ಮತ್ತು ಮಾನಸಿಕವಾಗಿ ತುಂಬಾ

ಬಳಲಿರುವಾಗ ಸಮಾಜದ ಇಂತಹ ಸಂಪ್ರದಾಯಗಳಿಂದ ಅವಳಿಗೆ ಮತ್ತಷ್ಟು ಮಾನಸಿಕ ನೋವನ್ನುಂಟುಮಾಡುವುದುಂಟು.

ಇನ್ನು ಕೆಲವು ಬುಡಕಟ್ಟುಗಳಲ್ಲಿ ಹೆರಿಗೆ ಆದಾಗ ಕೆಲವು ಸಂಪ್ರದಾಯಗಳಿವೆ. ಹೆರಿಗೆ ಆಗುವಾಗ ಹೆಣ್ಣು ಇನ್ನೊಂದು ಜೀವದ ಉತ್ಪತ್ತಿಗೆ ಕಾರಣವಾಗಿ, ಆ ಮೂಲಕ ಅವಳು ತನ್ನ ಪ್ರತಿ ಹೆರಿಗೆಯಲ್ಲಿಯೂ ಮತ್ತೊಮ್ಮೆ ಜೀವ ಪಡೆಯುತ್ತಾಳೆ. ಹೆರಿಗೆ ನೋವು ಕೆಲವು ಸಾರಿ ಜೀವವನ್ನು ತೆಗೆದುಕೊಳ್ಳುತ್ತದೆ. ಹೀಗೆ ಆದ ನಂತರ ಕಾಡುಗೊಲ್ಲರಲ್ಲಿ ತಾಯಿಯನ್ನು ಮಗುವಿನ ಸಮೇತ ಹೊರಕ್ಕೆ ಹಾಕಿ ಹನ್ನೊಂದು ದಿನಗಳಾದ ಮೇಲೆ ಸೂತಕ ಕಳೆದು ಕೊಳ್ಳುತ್ತಾರೆ. ಸೂತಕ ಕಳೆಯುವ ದಿನ ತಾಯಿ ಮಗುವಿಗೆ ದೇವರಿಗೆ ಬಿಟ್ಟ ಕುರಿ ಹಾಲನ್ನು ಕುಡಿಸಿ ಗಂಜಳದಲ್ಲಿ ಕೈ ತೊಳೆಸುತ್ತಾರೆ. ಮನೆಬಾಗಿಲಲ್ಲಿ ಒಂದು ಗುಂಡಿ ತೆಗೆದು ಕೈ ತೊಳೆಸಿ ಬಿದ್ದ ನೀರು ಕಾಲಿಗೆ ಸೋಕ ಬಾರದೆಂದು ಮಣ್ಣು ಮುಚ್ಚುತ್ತಾರೆ. ಈ ಒಂದು ಸಂಸ್ಕಾರವಿಲ್ಲದೆ ಮಗು ಬಾಣಂತಿಯರಿಗೆ ಮನೆಯೊಳಗೆ ಪ್ರವೇಶವಿಲ್ಲ. ಇದಕ್ಕೆ 'ಜನಿಗೆ' ಹಾಕುವುದು ಎನ್ನುತ್ತಾರೆ. ಹೆರಿಗೆಯಾದಾಗ ದೈಹಿಕವಾಗಿ ಅಶಕ್ತರಾಗಿರುವ ಸ್ತ್ರೀಯನ್ನು ಮತ್ತು ಮಗುವನ್ನು ಹೊರಗೆ ಗುಡಿಸಿಲಿನಲ್ಲಿ ಬಿಡುತ್ತಾರೆ. ಗಾಳಿ ಮಳೆಗೆ ಅವಳು ತಡೆದುಕೊಳ್ಳುವ ಸ್ಥಿತಿಯಲ್ಲಿರುವುದಿಲ್ಲ. ಇಂತಹ ಸಂದರ್ಭದಲ್ಲಿ ಈ ಅನಿಷ್ಟ ಸಂಪ್ರದಾಯಗಳಿಂದ ಮಗು ಮತ್ತು ಬಾಣಂತಿಯು ಸಾಯುವುದಕ್ಕೂ ಕಾರಣವಾಗಬಹುದು.

ಭಾರತೀಯ ಸಮಾಜದಲ್ಲಿ ದೇವದಾಸಿಯಂಥ ಪದ್ಧತಿಯನ್ನು ಕಾಣಬಹುದು. ದೇವದಾಸಿಯಾಗುವ ಮುನ್ನ ಆಚರಿಸುವ ಆಚರಣೆಗಳು ಇನ್ನೂ ಕ್ರೂರವಾಗಿವೆ. ಕನ್ಯೆಯೊಬ್ಬಳು ದೇವದಾಸಿಯಾಗುವ ಮುನ್ನ ಆಕೆಗೆ ನೆರವೇರಿಸುತ್ತಿದ್ದ ಶಾಸ್ತ್ರದ ವಿವರಣೆಯನ್ನು ಬಾರ್ಬೋಸಾ ಕೊಡುತ್ತಾನೆ. ದೇವದಾಸಿಯಾಗುತ್ತಿದ್ದವರಿಗೆಲ್ಲಾ ಮೊದಲು ಈ ವಿಧಿಯನ್ನು ನೆರವೇರಿಸುತ್ತಿದ್ದರು. ಬಂಧು ಬಳಗದವರೆಲ್ಲ ಕೂಡಿ ಹತ್ತು ವರ್ಷದ ಬಾಲೆಯನ್ನು ದೇವಾಲಯದ ಕಡೆಗೆ ಕರೆದೊಯ್ಯುತ್ತಿದ್ದರು. ಗುಡಿಯ ಬಾಗಿಲಲ್ಲಿ ಒಂದಾಳೆತ್ತರದ ಕಲ್ಲಿನ ಬೋದಿಗೆ ಇರುತ್ತಿತ್ತು. ಅದರ ಸುತ್ತ ಪರದೆ. ಕನ್ಯೆಯೊಡನೆ ತಾಯಿ ಅಲ್ಲಿಗೆ ಪ್ರವೇಶ ಮಾಡಬೇಕು. ಪೂಜೆ ನಡೆದಾದ ಮೇಲೆ ಬೋದಿಗೆಗೆ ಸಿಕ್ಕಿಸಿದ ಉದ್ದನೆಯ ಕಡ್ಡಿಯ ತುದಿಗೆ ಹೆಣ್ಣು ಮಗಳು ಜನನಾಂಗವನ್ನು ಇಡುತ್ತಿದ್ದಂತೆ ರಕ್ತ ಸೋರಲು ಆರಂಭವಾಗುತ್ತಿತ್ತು. ಕಡ್ಡಿಯ ಮೂಲಕ ನೆತ್ತರು ಬೋದಿಗೆಯನ್ನು ಮುಟ್ಟುತ್ತಿತ್ತು. ದೇವರು ಆಕೆಯನ್ನು ಉಪಭೋಗಿಸಿದ ಎಂದು ಎಲ್ಲರೂ ತಿಳಿಯುತ್ತಿದ್ದರು. ಅಲ್ಲಿಂದ ಮುಂದೆ ಆಕೆ ದೇವದಾಸಿ ಅರ್ಥಾತ್ ದೇವಾಲಯಕ್ಕೆ ಸಂಬಂಧಿಸಿದ ಎಲ್ಲ ಪುರುಷರ ದಾಸಿ.

ಬಂಜೆತನಕ್ಕೆ ಕಾರಣಗಳು ಹಲವಾರಿರುತ್ತವೆ. ಬಂಜೆತನಕ್ಕೆ ಕೆಲವು ಸಾರಿ ಗಂಡಸೂ ಸಹ ಕಾರಣವಾಗಬಹುದು. ಆದರೆ ಇಡೀ ಸಮಾಜವೇ ಬಂಜೆತನಕ್ಕೆ

ಹೆಣ್ಣು ಕಾರಣವೆಂದು ದೂಷಿಸಿ ಅವಳನ್ನು ಅನಾದರದಿಂದ ಕಾಣುತ್ತಾರೆ. ಬಂಜೆಯ ದೃಷ್ಟಿ ಮಕ್ಕಳಿಗೆ ತಾಗಿದರೆ ಕೇಡು ಎಂದು ಬಗೆಯಲಾಗುತ್ತದೆ.

ಗಂಡಾದಿರು ದಾರಿ ತಪ್ಪಿದಾಗ ಅಥವಾ ಅನ್ಯ ಸ್ತ್ರೀಯರ ಸಂಗ ಮಾಡಿದಾಗಲೂ, ಹೆಂಡತಿಯಾದವಳು ತನ್ನ ಸಂಸಾರವನ್ನು ಸರಿದೂಗಿಸಿಕೊಂಡು ಹೋಗಬೇಕು.

> " ಹೂತವಿಲ್ಲದ ಬಾವಿ, ಜಂಕವಿಲ್ಲದ ಸೀರೆ
> ಸಂತೋಷವಿಲ್ಲದ ಸತಿ
> ಪುರುಷ್ನ ಕೈಹಿಡಿದು ಚಿಂತೆ ಮಾಡಿದರೆ ಫಲವೇನು ? "

ಇಂತಹ ಸಂದರ್ಭದಲ್ಲಿ ಸತಿಯಾದವಳು ಗಂಡನೆಂಬುವನಿಗೆ ಸರಿಯಾಗಿರಲು ಹೇಳ ಬೇಕಾಗುತ್ತದೆ.

ಹೆಣ್ಣಾಗಿ ಹುಟ್ಟಿ ಅವಳು ಮುಂದೆ ಪಡಬಹುದಾದ ಕಷ್ಟ, ಅನುಭವಿಸಬೇಕಾದ ಅಪಾರ ಅಳಲಿನ ಬಗ್ಗೆ ಯೋಚಿಸುತ್ತಾಳೆ. ಹಾಗೆಯೇ ತಾಯಿಯಾದವಳು ತನ್ನ ಮಗಳನ್ನು ಬೇರೆ ಮನೆಗೆ ಕಳಿಸುವಾಗಲೂ ದುಃಖ ಪಡುತ್ತಾಳೆ. ಅಂತಹ ಸಂದರ್ಭ ದಲ್ಲಿ ಮಗಳು ತಾಯಿಯನ್ನು ಸಂತೈಸುತ್ತಾಳೆ.

> " ಹೆಣ್ಣು ಹಡಯಲಿಬ್ಯಾಡ ಹೆರವರಿಗೆ ಕೊಡಬ್ಯಾಡ
> ಹೆಣ್ಣು ಹೋದಾಗ ಹಡೆದವ್ವ ನೀ ಸಿಟ್ಟಾಗಿ
> ಶಿವಗೆ ಬೈಬ್ಯಾಡ "

ಹೆಣ್ಣು ತಾನು ಬೇರೆ ಮನೆಗೆ ಹೋಗುವುದು ಮತ್ತು ತನ್ನ ಸಹೋದರರು ಅದೇ ಮನೆಯಲ್ಲಿ ಇರುವುದನ್ನು ತಿಳಿದು, ತನ್ನನ್ನು ಗಿಡಕ್ಕಿಂತಲೂ ಕಡೆಯದಾಗಿ ವರ್ಣಿಸಿಕೊಂಡಿದ್ದಾಳೆ.

> " ತಾವರೆಯು ಗಿಡಹುಟ್ಟಿ ದೇವರಿಗೆ ನೆರಳಾಯ್ತು,
> ನಾ ಹುಟ್ಟಿ ಮನೆಗೆ ಎರವಾದೆ, ಅಣ್ಣಯ್ಯ
> ನೀ ಹುಟ್ಟ ಮನೆಗೆ ಹೆಸರಾದೆ "

ಹೆಣ್ಣು ತನ್ನನ್ನು ಸಮಾಜ ನಡೆಸಿಕೊಳ್ಳುವ ರೀತಿಗಳಿಂದ ನೊಂದು ಕೊಂಡಿದ್ದಾಳೆ. ಜೀವನದ ಪ್ರತಿ ಹಂತದಲ್ಲೂ ಹೆಣ್ಣನ್ನು ಕೀಳಾಗಿ ಕಾಣಲಾಗುತ್ತದೆ. ಗಂಡು ಹುಟ್ಟಿದಾಗ ಸಂಭ್ರಮ ಸುಖ ಪಡುತ್ತಾರೆ. ಅದೇ ಹೆಣ್ಣು ಮಗು ಜನಿಸಿದಾಗ ಅನಾಸಕ್ತಿಯಿಂದಿರುತ್ತಾರೆ. ಯಾವುದೇ ರೀತಿಯ ವಿಶೇಷತೆಯನ್ನು ತೋರುವುದಿಲ್ಲ. ಸ್ತ್ರೀಯರೂ ಸಹ ಗಂಡು ಹುಟ್ಟಿದಾಗ ಸಂತೋಷಪಡುವಳು, ಹಿಗ್ಗುವಳು.

> " ಹೆಣ್ಣು ಹುಟ್ಟಿದ ಮನೆ ಹೆಗ್ಗಣ ಹತ್ತಿದ್ಹಾಂಗೆ
> ಗಂಡು ಮಗ ಗಜಭೀಮ ಜನಿಸಿದರೆ
> ಚಿಲಕಿ ಚಿತ್ತರ ಕೂಡ ನಗುತಾವ "

ಹೆಣ್ಣು ಮಕ್ಕಳು ಹುಟ್ಟಿದರೆ ದರಿದ್ರವೆಂಬಂತೆ ಕಾಣುವ ಈ ಸಮಾಜದಲ್ಲಿ ಹೇಗಾದರೂ ಮಾಡಿ ಅವಳಿಗೆ ಮದುವೆ ಮಾಡಿದರೆ ನಮ್ಮ ಕರ್ತವ್ಯ ಮುಗಿಯಿತು ಎಂದುಕೊಂಡ ತಂದೆ, ತಾಯಿ, ಅಣ್ಣ ತಮ್ಮಂದಿರು ಅವಳನ್ನು ವಯಸ್ಸಾದ ಗಂಡನಿಗೆ ಕೊಡುವುದನ್ನು ಪ್ರತಿಭಟಿಸಿ ತನ್ನ ತಾಯಿಯೊಡನೆ ತನಗೆ ಯಾವ ಐಶ್ವರ್ಯವೂ ಬೇಡ, ಚಿಕ್ಕ ವಯಸ್ಸಿನ ಗಂಡ, ಸೌಭಾಗ್ಯ ಸೂಚಕಗಳಾದ ಕರಿಮಣಿ, ಬಿಚ್ಚೋಲೆ ಸಾಕು ಎಂದು ಹೇಳಿಕೊಳ್ಳುವ ದೃಶ್ಯ ಹೃದಯ ವಿದ್ರಾವಕವಾದುದು.

> " ದುಡ್ಡು ದ್ರವ್ಯ ಬ್ಯಾಡ ಗದ್ದೆ ತೋಟ ಬೇಡ ।
> ಕರಿಮಣಿ ಬಿಚ್ಚೋಲೆ ಸಾಕವ್ವ—ಹಡದವ್ವ ॥
> ಬಾಲ ಪ್ರಾಯದ ಗಂಡ ಬೇಕವ್ವ"

ಇನ್ನು ವಿಧವೆಯರ ಪಾಡು ತೀರಾ ಶೋಚನೀಯವಾದುದು. ಮದುವೆ ಮುಂತಾದ ಮಂಗಳ ಕಾರ್ಯದಲ್ಲಿ ವಿಧವೆ ಹೊರ ಸುಳಿಯಬಾರದು. ಎಷ್ಟೇ ಚಿಕ್ಕ ವಯಸ್ಸಿನ ವಿಧವೆಯಾದರೂ ತಲೆ ಕೂದಲನ್ನು ತೆಗೆಯಿಸಿ ರೂಪವನ್ನು ವಿಕೃತಗೊಳಿಸುವ ಪದ್ಧತಿ ಇದೆ. ವಿಧವೆಯರನ್ನು ಎಷ್ಟು ಕೀಳಾಗಿ ಕಾಣುತ್ತಿದ್ದರು ಎಂಬುದಕ್ಕೆ ಕೆಳಗಿನ ಜನಪದ ಗೀತೆಗಳು ಸಾಕ್ಷಿಯಾಗಿವೆ.

> " ಪುರುಷರಿಲ್ಲದ ಸತಿಯರು ವುಂಡುಟ್ಟು ಭೋಗಿಸಿ
> ಹಿಂಡು ಕಂಕಣ ಸರಿಗೆಯ । ನಿಟ್ಟಾರೆ
> ಕಂಡವರ್ ನಗೊರು ಯಮರಾಯ "

> " ಪುರುಷಳ ಸತಿ ಬಂದಾರೆ ಅರುಶಿನ ಕಿವುರೆಂದ
> ಪುರುಷನಿಲ್ಲಾದ ಬಡವೆಯು । ಬಂದಾರೆ
> ಯಿಂಗು ಸಾಂಬಾರ ಅರಿಯೆಂದ "

> " ಮದುವೆಯ ಮನೆಯಲ್ಲಿ ಅಡಿಗೆಯ ಮಾಡೆಂಬ
> ಮದುವೆಯ ಮನೆಯಲ್ಲಿಯೆದುರಾಗಿ । ಬಂದರೆ
> ವಿಧವೆ ನೀನತ್ತ ನಿಲ್ಲುಯೆಂಬ "

ಹೀಗೆ ವಿಧವೆಯರನ್ನು ಕೀಳಾಗಿ ಕಾಣುವ ಪ್ರವೃತ್ತಿ ಇದೆ. ಶುಭ ಕಾರ್ಯಕ್ಕೆ ಹೋಗುವಾಗ ವಿಧವೆ ಎದುರಿಗೆ ಬಂದರೆ ಅಪಶಕುನ ಎಂದು ಅಪವಾದಗಳನ್ನು ಹೊರಿಸುತ್ತಾರೆ; ಒಟ್ಟಿನಲ್ಲಿ ಸಮಾಜದ ಯಾವ ಶುಭ ಕಾರ್ಯದಲ್ಲಿಯೂ ಭಾಗವಹಿಸುವುದು ವಿಧವೆಗೆ ನಿಷೇಧ.

> ' ರಂಡಿಗ್ಯಾಕ ಹೂವಿನ ದಂಡೆ '

ಎಂದು ಅವಳು ಹೂ ಮುಡಿಯುವುದು ಸಹ ಬೇಡವಾಗಿದೆ. ಹಾಗೆಯೇ ಅವಳು ಸಾಕುವ ಮಕ್ಕಳೂ ಸಹ ಸಮಾಜದ ಸತ್ಪ್ರಜೆಯಾಗಲಾರರು ಎಂಬ ನಂಬಿಕೆಯನ್ನು ತಳೆದಿದ್ದಾರೆ.

'ರಂಡಿ ಮುಂಡಿ ಮಕ್ಕಳು
ಮುಗುದಾಣಿಲ್ಲದ ಎತ್ತು'

ಜನಪದರ ದೃಷ್ಟಿ ಹೆಣ್ಣಿನ ಬಗ್ಗೆ ಯಾವ ರೀತಿ ಇದೆ ಎಂಬುದನ್ನು ಈ ಕೆಳಗಿನ ಗಾದೆಗಳೂ ಸಹ ನಮಗೆ ತಿಳಿಸುತ್ತವೆ.

'ಹೆಣ್ಣು ಹುಟ್ಟಿದರೆ ಹುಣ್ಣು ಹುಟ್ಟಿದಾಂಗ'
'ಹೆಂಗಸರ ಬುದ್ಧಿ ಮೊಣಕಾಲ ಕೆಳಗ'
'ಹೆಂಗಸು ತಿರುಗ್ಯಾಡಿ ಕೆಟ್ಟಿತಂತ
ಗಂಡಸು ಮನ್ಯಾಗ ಕುಂತ ಕೆಟ್ಟಿತಂತ'

ಹೀಗೆ ಹೇಳುವ ಮುಖಾಂತರ ಹೆಂಗಸರು ಸಮಾಜದ ಯಾವುದೇ ಕಾರ್ಯ ಕ್ರಮದಲ್ಲಿ ಭಾಗವಹಿಸದಂತೆ ನೋಡಿಕೊಂಡಿದ್ದಾರೆ. ಕಾರಣ ಹೆಂಗಸು ಕೀಳು ಮಟ್ಟದವಳು ಎಂಬ ಕಾರಣಕ್ಕಾಗಿ. ಆದರೆ ಜೀವ ವಿಜ್ಞಾನದ ರೀತ್ಯಾ ಸ್ತ್ರೀ ಪುರುಷನಿಗಿಂತಲೂ ಹೆಚ್ಚು ಕಾಲ ಬದುಕಲು ಸಾಧ್ಯವಾಗುವಂತಹ ಶಾರೀರಿಕ ರಚನೆಯನ್ನು ಹೊಂದಿದ್ದಾಳೆ. ಸ್ತ್ರೀಯರನ್ನು ಪುರುಷರೊಡನೆ ಹೋಲಿಸಿದಾಗ ಸ್ತ್ರೀಯಲ್ಲಿರುವ ರೋಮ ರಹಿತತೆ, ರೂಪು ಲಾವಣ್ಯ, ಸುಲಭ ಉಚ್ಚಾರಣೆ, ಮಾತುಗಾರಿಕೆ, ಜಾಣ್ಮೆ, ಕೈಚಳಕ, ತಾಳ್ಮೆ, ಕರುಣೆ ಮೊದಲಾದ ಗುಣಗಳು ಆಕೆಗೆ ವಿಕಾಸವಾದಕ್ಕನುಗುಣವಾಗಿ ಇರುವಂತಹ ಸ್ಥಾನಕ್ಕಿಂತ ಇನ್ನೂ ಹೆಚ್ಚಿನ ಸ್ಥಾನವು ಇರಬೇಕೆಂಬುದನ್ನು ಸೂಚಿಸುತ್ತದೆ.

ಯಾವ ದೇಶದಲ್ಲಿ ಸ್ತ್ರೀಯರ ಹೆಸರನ್ನು ದೇವತೆಗಳಿಗೆ ನದಿಗಳಿಗೆ ಕರೆದು ಪೂಜಿಸಲಾಗುತ್ತದೆಯೋ ಅಂತಹ ದೇಶದಲ್ಲಿ ಸ್ತ್ರೀಯರನ್ನು ಕಸಕ್ಕಿಂತ ಕಡೆಯಾಗಿ ಈಗಲೂ ಕಾಣುತ್ತೇವೆ. ವರದಕ್ಷಿಣೆಯಂತಹ ಪದ್ಧತಿಯಿಂದ ಅವಳನ್ನು ಕೀಳು ಮಟ್ಟದಲ್ಲಿ ಕಾಣುತ್ತೇವೆ, ಸುಟ್ಟು ಸಾಯಿಸಲಾಗುತ್ತದೆ. ಮಹಿಳೆಯನ್ನು ಸಾರ್ವಜನಿಕವಾಗಿ ಕಂಬಕ್ಕೆ ಕಟ್ಟಿ ಸೀರೆ ಬಿಚ್ಚಿ ಅವಮಾನ ಮಾಡಲಾಗುತ್ತದೆ. ಅವರ ಮೇಲೆ ಸಾಮೂಹಿಕ ಅತ್ಯಾಚಾರ ಮಾಡಲಾಗುತ್ತದೆ. ಆದರೆ ಮಹಿಳೆಯರು ಮನುಷ್ಯರೇ ಆಗಿದ್ದಾರೆ, ಅವರಿಗೂ ಮಾನವೀಯ ಹಕ್ಕುಗಳನ್ನು ಕೇಳುವುದಕ್ಕೆ ಮೊದಲೇ ಕೊಡಬೇಕಾದುದು ನಾಗರೀಕ ಮನುಷ್ಯನ ಲಕ್ಷಣ. ಅವರಿಗೆ ಬದುಕುವ ಕನಿಷ್ಠ ಹಕ್ಕನ್ನಾದರೂ ಕೊಡಿ, ಅವರು ನಮ್ಮಂತಹ ಮನುಷ್ಯರೇ ಹೊರತು ಪ್ರಾಣಿಗಳಲ್ಲ.

ನಾವು ಸಾಕಿದ ನಮಗಿಂತ ಕೆಳಸ್ತರದ ಪ್ರಾಣಿಗಳಾದ ನಾಯಿ, ಹಸು, ಮುಂತಾದ ಪ್ರಾಣಿಗಳನ್ನು ತುಂಬಾ ಮುತುವರ್ಜಿಯಿಂದ ನೋಡಿಕೊಳ್ಳುತ್ತೇವೆ. ಆದರೆ ನಮ್ಮಂತೆಯೇ ಇರುವ ಮನುಷ್ಯರನ್ನು ಏಕೆ ಈ ರೀತಿ ಅಮಾನವೀಯವಾಗಿ ನಡೆಸಿಕೊಳ್ಳುತ್ತೇವೆಂಬುದನ್ನು ಗಂಭೀರವಾಗಿ ಆಲೋಚಿಸಬೇಕಾಗಿದೆ.

ಭಾಷೆ, ಪ್ರಾಂತ್ಯಗಳನ್ನು ಉಳಿಸಿಕೊಳ್ಳಲು ತುಂಬಾ ಹೋರಾಡುವ ನಾವು ಇವಕ್ಕೆಲ್ಲಾ ಏಕೆ ಸುಮ್ಮನೆ ಕೈಕಟ್ಟಿ ಕುಳಿತಿದ್ದೇವೆ. ಭಾಷೆಯಾಗಲಿ, ಪ್ರಾಂತ್ಯ ವಾಗಲಿ ಬರೀ ಹೋರಾಟದಿಂದ ಪಡೆಯುವಂತಹವಲ್ಲ, ಅಲ್ಲಿರುವ ಜನಗಳನ್ನು ಅಭಿವೃದ್ಧಿಸುವುದರಿಂದ ಮತ್ತು ಅವರ ಮೂಲಭೂತ ಸಮಸ್ಯೆಗಳನ್ನು ಪರಿಹರಿಸಿ ಅವರಿಗೆ ನಾಗರೀಕ ಹಕ್ಕುಗಳನ್ನು ಒದಗಿಸುವುದರಿಂದ ಅವರು ಸಹ ನಮ್ಮಂತಹ ಮನುಷ್ಯರೇ ಎಂದು ತಿಳಿದುಕೊಂಡು ಆ ರೀತಿ ನಡೆದಾಗ ಮಾತ್ರ ಭಾಷೆ ಮತ್ತು ಪ್ರಾಂತ್ಯಗಳು ಉಳಿಯಲು ಸಾಧ್ಯ ಇಲ್ಲದಿದ್ದರೆ ಸಾಧ್ಯವೇ ಇಲ್ಲ.

ಆಧಾರ ಗ್ರಂಥಗಳು

1. ಕತ್ತಾಲ ದಾರಿ ದೂರ—ಸಂ. ಕೃಷ್ಣಮೂರ್ತಿ ಹನೂರು
2. ಉತ್ತರ ಕರ್ನಾಟಕದ ಗಾದೆಗಳು — ಸಂ. ಡಾ. ಬಿ. ಬಿ. ಹೆಂಡಿ, ಡಾ. ಎಂ. ಎಸ್. ಲಠ್ಠೆ
3. ಗ್ರಾಮೀಣ—ಡಾ. ಎಂ. ಚಿದಾನಂದಮೂರ್ತಿ
4. ಮಾತಾಡು ಮಲ್ಲಿಗೆ—ಸಂ. ಬಿ. ಸಿದ್ದಗಂಗಯ್ಯ
5. ಉತ್ತರ ಕನ್ನಡ ಜಿಲ್ಲೆಯ ಹವ್ಯಕರ ಹಾಡುಗಳು —ಸಂ. ಶಾಲಿನಿ ರಘುನಾಥ
6. ಜನಪದ ಸಾಹಿತ್ಯದರ್ಶನ—ವ್ಯೆ. ಸು. ಶೇಷಗಿರಿರಾವ್
7. ಭಾರತೀಯ ಸಮಾಜದ ಐತಿಹಾಸಿಕ ವಿಶ್ಲೇಷಣೆ —ಭಗವತ್ ಶರಣ ಉಪಾಧ್ಯಾಯ
8. ಭಾರತೀಯ ಸಂಸ್ಕೃತಿಯ ಜಾತಿ ಲಕ್ಷಣ—ವಿ. ಆರ್. ನಾರ್ಲ

ಮೈಸೂರು ಕೃಷ್ಣಮೂರ್ತಿ

ಬೆಂಕಿ–ನೀರು

ವಸಂತ ಬೆಂಕಿಯು ತರುತ್ತಾನೆ ಪರ್ವತಕ್ಕೆ
ಅರಳುತ್ತಿರುವ ಹೂಗಳು ಉರಿದುಹೋಗುತ್ತವೆ
ಪರ್ವತದಲ್ಲಿ ನೀರಿದೆ
ಬೆಂಕಿಯನ್ನಾರಿಸಲು
ಆದರೆ
ನನ್ನೆದೆಯೊಳಗೆ ಹೊಗೆಯಿಲ್ಲದುರಿಯುತ್ತಿರುವ
ಬೆಂಕಿಯನ್ನಾರಿಸಲು ಎಲ್ಲದೆ ನೀರು ?

—ಮೂಲ : ಕಿಮ್ ಟೊಕ್‌ನ್ಯಾಂಗ್
ಆಂಗ್ಲ ಆವೃತ್ತಿ : ಪೀಟರ್‌ಹ್ಯೂಸ್

ಎಂ. ಎಸ್. ಪುಟ್ಟಣ್ಣ
ಸಂಗ್ರಹ : ಡಾ. ಎಚ್. ಎಸ್. ಸುಜಾತಾ

ಹಾತಿಂ ತಾಯ್

(ಕಳೆದ ಸಂಚಿಕೆಯಿಂದ ಮುಂದುವರೆದಿದೆ)

6ನೇ ಸಂಪುಟ
1ನೇ ಅಧ್ಯಾಯ
ಮೌಕ್ತಿಕಾನ್ವೇಷಣ

ಹಿಂದೆ ನಡೆದ ವಿಷಯಗಳನ್ನು ಕುರಿತು ಕಥೆಯನ್ನು ಹೇಳತಕ್ಕವರು ಹೇಳಿರುವುದೇನೆಂದರೆ ; ಹತೀಮನು ತನ್ನ ಆರನೇ ಸಾಹಸಕಾರ್ಯವನ್ನು ನಿರ್ವಹಿಸಲು ಷಾಹಾಬಾದನ್ನು ಬಿಟ್ಟುಹೊರಟು ಒಂದು ಮರಳಕಾಡಿಗೆ ಬಂದನು. ಆ ಕಾಡಿನಲ್ಲಿ ಎರಡು ಹರದಾರಿ ಹೋದ ಮೇಲೆ ಒಂದು ಒಂಟಿಮರ ಸಿಕ್ಕಿತು. ಅದರ ಕೆಳಗೆ ಕಲ್ಲಿನಲ್ಲಿ ಮಾಡಿದ ವರಟಾದ ಆಸನವಿತ್ತು. ಸಾಯಂಕಾಲದ ಸಮಯವಾಗುತಾ ಬಂದದರಿಂದ ಅವನು ಅಲ್ಲಿ ಕೂತುಕೊಂಡನು. ಮುಂಡಿಯ ಕಡೆಗೆ ತಲೆಯನ್ನು ಬಗ್ಗಿಸಿಕೊಂಡು ಏನೋ ಆಲೋಚನೆ ಮಾಡುತಾ ಸ್ವಲ್ಪಹೊತ್ತನ್ನು ಕಳೆಯುತಾ ಇರುವಾಗ ರಾತ್ರಿ ಎಂಬ ಹೊದಿಕೆಯು ಪ್ರಪಂಚದ ಮೇಲೆಲ್ಲಾ ಹರಡಿಕೊಳ್ಳಲು ಆರಂಭವಾಯಿತು. ಈ ಮಧ್ಯೆ ಒಂದು ಜೊತೆ ಕೋಳಿಗಳು ಏಳು ಬಂಣಗಳ ಅಟ್ಟಹಾಸದಿಂದ ಕಂಣು ಕೊಕ್ಕರಿಸುವ ಹಾಗೆ ಮಾಡುತಾ ಹತೀಮ ಕೆಳಗೆ ಕೂತಿದ್ದ ಮರದ ಮೇಲೆ ಕೂತು ಕೊಂಡವು. ಆ ಹಕ್ಕಿಗಳು ನಾಟಿಕ* ಎಂಬ ಪಕ್ಷಿಜಾತಿಗೆ ಸೇರಿದ್ದವು. ಇವು ಕಹರ್ಮಾನ್ ಸಮುದ್ರತೀರಕ್ಕೆ ಆಗಾಗ್ಯೆ ಸಾಧಾರಣವಾಗಿ ಬರುವುದುಂಟು, ದೈವ ನಿಯಾಮಕದಿಂದ ಆ ದಿವಸ ರಾತ್ರಿ ಆ ಮರದ ಮೇಲೆ ಬಂದು ಕೂತುಕೊಂಡವು. ಆಗ ಗಂಡುಹಕ್ಕಿಯನ್ನು ಕುರಿತು

---

* ನಾಟಿಕ = ಮಾತನಾಡತಕ್ಕವು.

ಹೆಂಣುಹಕ್ಕಿ—ನಾವು ಇಳಿದುಕೊಂಡಿರುವ ಈ ಪ್ರಾಂತದ ಗಾಳಿಯನ್ನು ಕಂಡರೆ ನನಗೆ ಆಗದು. ನಮ್ಮ ದೇಶದಲ್ಲಿಯೇ ನಾವು ಸುಖವಾಗಿದ್ದುಕೊಂಡಿದ್ದರಾಗಿತ್ತು.

ಗಂಡು—ನೀವು ಹೇಳಿದ್ದಕ್ಕೆ ನಾನು ಒಪ್ಪಿದೆ. ಇಲ್ಲಿ ಕೆಲವು ದಿವಸ ಇರಬೇಕೆಂದು ನನಗೆ ಇಷ್ಟವಿದ್ದಾಗ್ಯೂ, ಈ ಸ್ಥಳ ನಿನಗೆ ಇಷ್ಟವಿಲ್ಲದ ಕಾರಣ ನಾವು ಬೆಳಗಿನ ಜಾವಕ್ಕೇ ಹೊರಟುಹೋಗೋಣ.

ಹೆಂಣು—ಒಳ್ಳೆಯದು, ನೀನು ಮಾಡಿದ ನಿಷ್ಕರ್ಷೆ ಪ್ರಕಾರ ನೀನು ನಡೆದು, ನಾಳೆಯ ಸೂರ್ಯನು ನಾವು ದೂರವಾಗಿ ಹೊರಟುಹೋದ ತರುವಾಯ ನಮ್ಮ ಮೇಲೆ ಪ್ರಕಾಶಿಸಿದರಾದೀತು.

ಗಂಡು—ಈ ಯೋಚನೆಯೆಲ್ಲಾ ಯಾತಕ್ಕೆ? ನಾನು ನಿಶ್ಚಯವನ್ನು ಹೊರತು ಮತ್ತೇನನ್ನೂ ಆಡುವುದಿಲ್ಲವೆಂದು ನೀನು ಬಲ್ಲೆ.

ಹೆಂಣು—(ಸ್ವಲ್ಪಹೊತ್ತಿನ ಮೇಲೆ) ನನ್ನ ಪ್ರಿಯನೆ ಹೇಳು, ಮನುಷ್ಯರನ್ನು ಬಿಟ್ಟು ಅಲೆದುಕೊಂಡು ಬಂದು, ಈ ಕೆಳಗೆ ಕಲ್ಲಿನಮೇಲೆ ಕೂತುಕೊಂಡು ಚಿಂತೆಯ ಸೆರಗಿನಲ್ಲಿ ತಲೆಯನ್ನು ಮುಚ್ಚಿಕೊಂಡು, ಹುಬ್ಬಿನ ಮೇಲೆ ವ್ಯಸನದ ಮುದ್ರೆಯನ್ನು ಹಾಕಿಕೊಂಡು, ಕೂತಿರತಕ್ಕವ ಯಾರು?

ಗಂಡು—ಅವನು ಮನುಷ್ಯ ವರ್ಗದಲ್ಲಿ ಸರ್ವೋತ್ತಮನಾದವನು. ಮುರ್‌ಘಾಜ್ ಎಂಬ ಬಾತುವಿನ ಮೊಟ್ಟೆಯ ಗಾತ್ರ ಇರುವ ಮುತ್ತನ್ನು ಹುಡುಕಿಕೊಂಡು ಯಾವ ಕಡೆಗೆ ಹೋಗಬೇಕೋ ಗೊತ್ತಿಲ್ಲವಲ್ಲಾ ಎಂದು ಚಿಂತಾಕ್ರಾಂತನಾಗಿದಾನೆ. ಈ ಮುತ್ತು ಸಿಕ್ಕುವ ಸ್ಥಳಕ್ಕೂ ಮುರ್‌ಘಾಜ್ ಎಂತ ಹೆಸರು. ಈ ಮನುಷ್ಯನು ಹತೀಮತಾಯಿ, ಗಂಭೀರನಾದ ಉದಾರಿಯಾದ ಯೆಮೆನ್ ರಾಜ್ಯದ ದೊರೆಮಗ. ಇವನು ಈಗ ಈ ಮುತ್ತನ್ನು ಹುಡುಕಿಕೊಂಡು ಬಂದಿದಾನೆ; ತನಗೋಸ್ಕರ ಅಲ್ಲ, ಬೇರೊಬ್ಬನ ಉಪಯೋಗಕ್ಕೋಸ್ಕರ ತನ್ನ ಅರಮನೆಯನ್ನು ಬಿಟ್ಟು, ಪ್ರೀತಿಯುಳ್ಳ ಮಾತಾಪಿತೃಗಳನ್ನು ಬಿಟ್ಟು; ಪರಪ್ರಾಣಿಗೆ ಸೌಖ್ಯವನ್ನು ವೃದ್ಧಿಮಾಡಬೇಕೆಂಬುದೇ ಅವನ ಮುಖ್ಯೋದ್ದೇಶ್ಯ.

ಹೆಂಣು—ಹತೀಮನು ಅನನುಭವಿ, ಅಂಥಾ ಮುತ್ತು ಅವನಿಗೆ ಯಾವಾಗ ಸಿಕ್ಕೀತು?

ಗಂಡು—ನಿನಗೆ ಇಷ್ಟವಿದ್ದರೆ ನಾನು ಅವನಿಗೆ ಮಾರ್ಗ ತೋರಿಸುತೇನೆ. ಅದರಿಂದ ನಮಗೆ ಹೆಚ್ಚಾಗಿ ಕ್ಷೇಮ ಉಂಟಾಗದಿದ್ದರೂ ಚಿಂತೆಯಿಲ್ಲ.

ಹೆಂಣು—ಪರರಿಗೆ ಉಪಕಾರ ಮಾಡುವುದಕ್ಕಿಂತಲೂ ಇನ್ನೂ ಘನವಾದ ಕಾರ್ಯವಿಲ್ಲ. ಖಂಡಿತವಾಗಿಯೂ ಅದರ ಪ್ರಯೋಜನ ನಮಗೆ ಕೊನೆಯಿಲ್ಲದ್ದೇ ಇರುವುದು.

ಗಂಡು—ಹಾಗಾದರೆ ಕೇಳು ಪ್ರಿಯಳೆ, ಮುರ್‌ಘಾಜ್ ಎಂಬ ಅಪೂರ್ವವಾದ ಮುತ್ತು ದೊರೆಯುವ ರೀತಿಯನ್ನು ಹೇಳುತೇನೆ, ಪ್ರಪಂಚ ಸೃಷ್ಟಿಯಾದಾಗಿನಿಂದ ಕಹರ್ಮಾನ್ ಸಮುದ್ರತೀರದಲ್ಲಿ ನಮ್ಮ ಜಾತಿಯ ಪಕ್ಷಿಗಳು ವಾಸವಾಗಿದ್ದ

ದನ್ನು ನೀನು ಬಲ್ಲೆಯಷ್ಟೆ. ಮೂವತ್ತು ವರುಷಕ್ಕೆ ಒಂದುಸಾರಿ ನಮ್ಮ ಹೆಣ್ಣು ಹಕ್ಕಿಗಳು ಇಂಥಾ ಮೊಟ್ಟೆಹಾಕುವುದನ್ನು ನೀನು ಬಲ್ಲೆಯಷ್ಟೆ. ಕೆಲವುಕಾಲದಿಂದೀಚೆಗೆ ಇಂಥಾ ಮುತ್ತನ್ನು ಉತ್ಪತ್ತಿಮಾಡುವ ಶಕ್ತಿ ನಮಗೆ ಹೋಗಿಬಿಟ್ಟಿತು. ಪೂರ್ವದಲ್ಲಿ ಆದ ಮುತ್ತುಗಳು ಸಮುದ್ರದಲ್ಲಿ ಆಳವಾದ ಪ್ರದೇಶದಲ್ಲಿ ಹೂಳಿಕೊಂಡುಹೋದವು. ಅವುಗಳಲ್ಲಿ ಎರಡು ಮಾತ್ರ ಭೂಮಂಡಲದಲ್ಲಿವೆ. ಮೊದಲು ಇವು ಕಹರ್ಮಾನ್ ದೊರೆಯಾದ ಚಂಚಾನನ ಕೈಗೆ ಸಿಕ್ಕಿದವು. ಅವನು ಅವುಗಳಲ್ಲಿ ಒಂದನ್ನು ಅಪೂರ್ವವಾದ ಪದಾರ್ಥವೆಂದು ಅವನ ಕಾಲದಲ್ಲಿ ಬಹಳ ಐಶ್ವರ್ಯದಿಂದಲೂ ಅಟ್ಟಹಾಸ ದಿಂದಲೂ ಬಾಳುತಾ ಇದ್ದ ನೆರೆರಾಜ್ಯದ ದೊರೆಯಾದ ಷಂಷಾಸನಿಗೆ ಕೊಟ್ಟನು. ಷಂಷಾನನು ಮಕ್ಕಳಿಲ್ಲದೇ ಸತ್ತುಹೋದ, ಅವನ ಮಹದೈಶ್ವರ್ಯ ಉಳ್ಳ ರಾಜಧಾನಿಯು ಒಂದು ಪ್ರಾಣಿಯೂ ಇಲ್ಲದ ಹಾಗೆ ಕೂಡಲೆ ಹಾಳಾಯಿತು. ಅವನ ಐಶ್ವರ್ಯವೆಲ್ಲಾ ಅನ್ಯದೇಶದವರ ಪಾಲಾಯಿತು. ಆ ಮುತ್ತು ಅನೇಕರ ಕೈತಟ್ಟಿ ಈಗ ವರ್ತಕನಾದ ಬರ್‌ಸಾಕ್‌ನ ಮಗಳು ಹಸನ್‌ಬನುವಿನ ಬಳಿಯಲ್ಲಿ ಸೇರಿದೆ.

ಇನ್ನೊಂದು ಮುತ್ತು ಏನಾಯಿತೆಂದರೆ; ಕಹರ್‌ಮಾನ್ ದೊರೆಯಾದ ಚಂಚಾನನು ಚಿಕ್ಕವಯಸ್ಸಿನಲ್ಲಿಯೇ ಸತ್ತುಹೋದನು. ಅವನ ಕಿರೀಟವು ಮತ್ತೊಬ್ಬನ ವಶವಾಯಿತು. ಅವನ ಹೆಂಡತಿಯು ಆಗ ಪ್ರಥಮ ಗರ್ಭವನ್ನು ಧರಿಸಿದ್ದಳು. ಅವಳು ತನ್ನ ಪ್ರಾಣವನ್ನು ಉಳಿಸಿಕೊಳ್ಳುವುದಕ್ಕೋಸ್ಕರ ಓಡಿ ಹೋದಳು. ಅವಳ ಆಸ್ತಿಯಲ್ಲೆಲ್ಲಾ ಮರ್‌ಫಾಜ್‌ನ ಮುತ್ತನ್ನು ಮಾತ್ರ ಜೋಪಾನ ಮಾಡಿಕೊಳ್ಳುವ ಮಟ್ಟಿಗೆ ಅವಳಿಗೆ ಸಮಯ ದೊರೆಯಿತು. ಇಂಥಾ ಅಪೂರ್ವವಾದ ರತ್ನವನ್ನು ತೆಗೆದುಕೊಂಡು ತನ್ನ ಅರಮನೆಯನ್ನು ಬಿಟ್ಟು ಹೊರಟುಹೋದಳು. ಆಗ ಆ ರಾಣಿಯು ಪ್ರಥಮ ಗರ್ಭವನ್ನು ತಾಳಿದ್ದಳು. ಅಲ್ಲಿಂದ ಮರಳಕಾಡಿಗೆ ಬಿದ್ದು ಕಹರ್ಮಾನ್ ಸಮುದ್ರತೀರವನ್ನು ಸೇರಿದಳು. ಅವಳು ಯಾವ ಕಡೆಗೆ ಹೋಗಬೇಕೋ ಗೊತ್ತಿಲ್ಲದೆ ಆಯಾಸಪಟ್ಟು ಅಲ್ಲಿ ಕೂತುಕೊಂಡಳು. ಸಿಹಿನೀರನ್ನು ತುಂಬಿಕೊಳ್ಳುವುದಕ್ಕಾಗಿ ಒಬ್ಬ ವರ್ತಕನು ಅಲ್ಲಿಗೆ ತನ್ನ ಹಡಗನ್ನು ತಂದನು. ಅದನ್ನು ಕಂಡು—ನನಗೆ ಸಹಾಯಮಾಡಿ, ಎಂದ ಆ ರಾಣಿಯು ಗಟ್ಟಿಯಾಗಿ ಕೂಗಿ ಕೊಂಡಳು. ಅದನ್ನು ಕೇಳಿ ಆ ವರ್ತಕನೇ ಒಂದು ದೋಣಿಯಲ್ಲಿ ಬಂದು ಅವಳನ್ನು ಅದರೊಳಕ್ಕೆ ಕರೆದುಕೊಂಡನು.

ಆ ವರ್ತಕನ ಹೆಸರು ಸಿಂಬಾರ್ ಎಂದು. ಅವನು ಬಹಳ ದಯಾರಸ ಉಳ್ಳವನು. ಪ್ರಪಂಚ ಧರ್ಮವನ್ನು ಚೆನ್ನಾಗಿ ಬಲ್ಲವನು. ಅವನು ಆ ರಾಣಿಯನ್ನು ಕೇವಲ ದಯದಿಂದ ಕಂಡು ಅವಳ ಕಷ್ಟದಶೆಯನ್ನೆಲ್ಲಾ ಅವಳಿಂದ ತಿಳಿದುಕೊಂಡು ಅವಳನ್ನು ತನ್ನ ಮಗಳಾಗಿ ಮಾಡಿಕೊಂಡು, ಅವಳನ್ನು ತನ್ನ ದೇಶಕ್ಕೆ ಕರೆದುಕೊಂಡು

ಹೋದನು. ಅವಳು ದಿನತುಂಬಿ ಒಬ್ಬ ಗಂಡುಮಗನನ್ನು ಹೆತ್ತಳು. ಆ ಸಿಂಬಾರನಿಗೆ ಸ್ವಂತ ಮಕ್ಕಳಿಲ್ಲದ ಕಾರಣ, ತನ್ನ ವಿಶೇಷವಾದ ಐಶ್ವರ್ಯಕ್ಕೆಲ್ಲಾ ಆ ಮಗುವನ್ನೇ ಬಾಧ್ಯನಾಗಿ ಮಾಡಿದನು. ಆ ಮಗು ದೊಡ್ಡದಾಯಿತು. ರಾಜಯೋಗ್ಯವಾದ ಗುಣಗಳೆಲ್ಲಾ ಅವನಲ್ಲಿದ್ದವು; ಅವನು ಪ್ರಾಯಸಮರ್ಥನಾಗುವುದರೊಳಗಾಗಿ ಅವನ ಪೋಷಕನಾದ ಸಿಂಬಾರನು ತೀರಿಹೋದನು.

ಸ್ವಲ್ಪ ದಿವಸದ ಮೇಲೆ ಈ ರಾಜಪುತ್ರನು ಆ ರಾಜ್ಯಕ್ಕೆ ಅಧಿಕಾರಿಯಾದನು. ಆ ತರುಣನು ವಿಶೇಷವಾಗಿ ಬುದ್ಧಿಶಾಲಿಯಾಗಿದ್ದದರಿಂದಲೂ, ಅವನು ಆ ದೇಶಕ್ಕೂ ಮತ್ತು ಸಮೀಪದಲ್ಲಿದ್ದ ದ್ವೀಪಗಳಿಗೂ ಜಾಗ್ರತೆಯಾಗಿ ದೊರೆಯಾದನು, ಅವನ ತರುವಾಯ ಅವನ ಸಂತತಿಯವರು ಅನೇಕ ತಲೆಗಳವರೆಗೂ ಅಲ್ಲಿ ಆಳಿದರು. ಅವರು ಸುಲೇಮಾನನ ಉತ್ತಮವಾದ ಶಕೆ ಬರುವ ತನಕ ಆಳುತ್ತಿದ್ದರು. ಈ ದೊರೆಗಳು ತೋಹಿತಾಫ್ ಮತ್ತು ಕುಲ್‌ಸುಂ ಸಮುದ್ರದ ತೀರ, ಇವುಗಳನ್ನು ಜೈಸಿ ತಮ್ಮ ಸ್ವಾಧೀನ ಮಾಡಿಕೊಂಡರು. ಈ ಸಂತತಿಯವರು ಸುಲೇಮಾನನ ಆಳಿಕೆವರೆಗೂ ಆ ಪ್ರಾಂತದಲ್ಲಿ ಆಳಿಕೊಂಡಿದ್ದರು. ಆಗ ಅವರಿಗೆ ಈ ಮರ್ತ್ಯಲೋಕದವರ ಸಂಬಂಧವು ನಿಂತುಹೋಯಿತು. ಅವರು ಈಗ ಮನುಷ್ಯವರ್ಗಕ್ಕೆ ಸೇರಿಲ್ಲ. ಇನ್ನೂ ಮೇಲಿನ ವರ್ಗಕ್ಕೆ ಸೇರಿದವರಾಗಿದಾರೆ. ಅವರ ರಾಜ್ಯವನ್ನು ನೋಡಲು ಆದಂನ ವಂಶೀಯರು ಯಾರಿಗೂ ಧೈರ್ಯವಿಲ್ಲ.

ಕಾಲಕ್ರಮದಲ್ಲಿ ಆ ಮುತ್ತು ಒಬ್ಬ ಖಚರಿಯ ಕೈಗೆ ಸಿಕ್ಕಿತು. ಈಗ ಅದು ಅವಳ ಮಗನ ಸ್ವಾಧೀನದಲ್ಲಿದೆ. ಅವನ ಹೆಸರು ಮಹ್ಯಾರ್ ಸುಲೇಮಾನಿ. ಅವನ ತಂದೆಯು ಆದಂನ ವಂಶಸ್ಥ (ಮನುಷ್ಯ ವರ್ಗಕ್ಕೆ ಸೇರಿದವನು). ಅವನು ಮನುಷ್ಯ ವರ್ಗಕ್ಕೂ ಪರಿಗಳ ವರ್ಗಕ್ಕೂ ಸೇರಿದವನು. ಇವನು ಬಾಸ್ರಾಕ್ ದ್ವೀಪದಲ್ಲಿ ಆಳುತ್ತಿದಾನೆ. ಭೂತಗಳೊಡನೆ ಸ್ನೇಹಭಾವದಲ್ಲಿಯೇ ಇದಾನೆ. ಭೂತಗಳ ರಾಜ್ಯವು ಇವನ ರಾಜ್ಯಕ್ಕೆ ಗಡಿ ಕೂಡಿದೆ. ಬಲವಾದ ಸುಲೇಮಾನ್ ಮಂತ್ರವು ಅವನಿಗೆ ತಿಳಿಯುವುದು ಯಾವ ಭೂತವೂ ಅವನಿಗೆ ಕೆಟ್ಟದ್ದನ್ನು ಮಾಡಲಾರದು.

ಮಹ್ಯಾರ್ ಸುಲೇಮಾನನಿಗೆ ಒಬ್ಬಳೇ ಒಬ್ಬ ಮಗಳಿದ್ದಾಳೆ. ಆ ಮಗಳಿಗೆ ಈಗ ಏಳುವರ್ಷ ವಯಸ್ಸು. ಆ ಮುತ್ತಿನ ಅನುಪೂರ್ವಿಯನ್ನು ಯಾವ ಮನುಷ್ಯ ಹೇಳುತ್ತಾನೆಯೋ ಅವನಿಗೆ ಆ ಮಗಳನ್ನು ಕೊಟ್ಟು ಮದುವೆಮಾಡಿ ಆ ಮುತ್ತನ್ನು ಬಳುವಳಿಯಾಗಿ ಕೊಡುತಾರೆ. ಮಹ್ಯಾರ್ ಸುಲೇಮಾನಿಯು ಒಳ್ಳೆ ವಿದ್ವಾಂಸ. ಇವನ ಸ್ವಾಧೀನದಲ್ಲಿ ಆ ವಂಶದ ಮೂಲಪುರುಷರಾದ ದೊಡ್ಡ ಸುಲೇಮಾನನ ಪುಸ್ತಕಗಳಿವೆ. ಈ ಪುಸ್ತಕಗಳಲ್ಲಿ ಅಪೂರ್ವವಾದ ಅನೇಕ ರಹಸ್ಯಗಳಿವೆ. ಆ ರಹಸ್ಯಗಳಲ್ಲಿ ಆ ಮರ್‌ಘಾಜ್ ಮುತ್ತು ಹೋಗಿಬಿಟ್ಟರೆ, ಅದನ್ನು ಪುನಃ ತರಿಸುವ ರಹಸ್ಯವೂ ಇದೆ. ಸುಲೇಮಾನ್‌ನನ ಆಳಿಕೆ ಆದಾಗಿನಿಂದ ನಮ್ಮ ಪಕ್ಷಿ ಸಂತತಿಯು ಒಂದು ಮುತ್ತನ್ನೂ ಉತ್ಪತ್ತಿಮಾಡಿಲ್ಲ. ಮಹ್ಯಾರ್ ಒಬ್ಬನಿಗೆ ಮಾತ್ರ ತಿಳಿದಿರತಕ್ಕಂಥಾ

ಈಗ ನಾನು ನಿನಗೆ ಹೇಳಿದ ರಹಸ್ಯವನ್ನು ಮತ್ತೆ ಯಾರಲ್ಲಿಯಾದರೂ ಹೇಳ ತಕ್ಕದ್ದು ನ್ಯಾಯವಲ್ಲ. ಆದರೆ ಪರಪ್ರಯೋಜನಕ್ಕಾಗಿ ವರುಷಗಟ್ಟಲೆ ಶ್ರಮಪಡುತ್ತಾ ಇರುವ ಉದಾರ ಮನಸ್ಸುಳ್ಳ ಈ ತರುಣನಿಗೆ ಈಗ ಅವನು ಯೋಚಿಸುತ್ತಾ ಇರುವ ಈ ವಿಷಯವನ್ನು ಕುರಿತು ಇಷ್ಟರಮಟ್ಟಿಗೆ ನಾವು ಹೇಳತಕ್ಕದ್ದು ಯುಕ್ತವಾಗಿದೆ.

ಹೆಂಣು—ಕಹರ್ಮಾನ್ ಸಮುದ್ರಕ್ಕೆ ಹತೀಮನು ದಾರಿ ತಿಳಿದುಕೊಳ್ಳುವುದು ಹೇಗೆ? ಆ ಸಮುದ್ರದ ದಡದಲ್ಲಿ ಆಕಡೆ ಇರತಕ್ಕ ಭೂತಗಳ ಕಾಟ ಉಂಟು, ಅವನಿಗೆ ಅಪಾಯಗಳೂ ಬಹಳವಾಗಿವೆ.

ಗಂಡು—ದೇವರೇ ಅವನಿಗೆ ಕ್ಷೇಮವನ್ನುಂಟುಮಾಡಬೇಕು. ಅವನಿಗೆ ಆಯುಸ್ಸು ಮಾಗಿಯದೇ ಇದ್ದರೆ ಪ್ರತಿ ಅಪಾಯವನ್ನು ಅನುಭವಿಸಿಕೊಂಡು ಕ್ಷೇಮವಾಗಿ ತಿರುಗಿಬರಬಹುದು. ಈ ಮಧ್ಯೆ ಅವನು ದಕ್ಷಿಣ ಪ್ರಾಂತಕ್ಕೆ ಹೋಗಬೇಕು. ನಮ್ಮ ಗರಿಯಲ್ಲಿ ಕೆಲವನ್ನು ಅವನು ಸಂಗಡ ತೆಗೆದು ಕೊಂಡು ಹೋಗಬೇಕಾದ್ದು ಅಗತ್ಯವಾಗಿದೆ. ಕಾಫ್ ಪರ್ವತದ ಮೇರೆಯನ್ನು ತಲಪಿದ ಕೂಡಲೆ, ಒಂದುದೊಡ್ಡ ಮರಳಕಾಡು ಸಿಕ್ಕುವುದು. ಆ ಕಾಡಿಗೆ ಪ್ರವೇಶಮಾಡುವುದಕ್ಕೆ ಮುಂಚೆ, ಈ ಕೆಳಗೆ ಕಾಣುವ ರೀತಿಯಲ್ಲಿ ಜಾಗರೂಕನಾಗಿರಬೇಕು. ಹಸರುಗರಿಯನ್ನು ಸುಡಲಿ ಅದರ ಬೂದಿಯನ್ನು ನೀರಿಗೆ ಹಾಕಲಿ. ಆ ನೀರಿನಲ್ಲಿ ಅವನು ಸ್ನಾನಮಾಡಬೇಕು. ಇದರ ವಾಸನೆ ಬಹು ಬಲವಾಗಿ, ಕಾಡುಮೃಗ ಯಾವುದೂ ಅವನ ಬಳಿಗೆ ಹೊದ್ದಲಾರವು. ಅವನ ರೂಪು ಶುದ್ಧಾಂಗವಾಗಿ ಭೂತದ ರೂಪಾಗುವುದು. ಅವನ ಬಂಣವು ಕತ್ತಲೆಯ ಹಾಗೆ ಕಪ್ಪಾಗುವುದು. ಅವನ ಕೈಕಾಲುಗಳು ವಿಪರೀತವಾಗಿ ದಪ್ಪನಾಗುವವು. ಭೂತಗಳ ಭಾಷೆಯನ್ನು ಅವನು ಮಾತನಾಡುವನು.

ಆ ಕಾಡನ್ನು ತಟಹಾದು ಹೋಗಿ ಬಾರ್‌ಸಾಖ್ ಎಂಬ ದ್ವೀಪಕ್ಕೆ ಬಂದಾಗ, ಅವನು ಬಿಳೀಗರಿಗಳನ್ನು ಸುಡಬೇಕು. ಆ ಬೂದಿಯನ್ನು ಮೊದಲಿನಂತೆ ನೀರಿಗೆ ಹಾಕಿ ಆ ನೀರಿನಲ್ಲಿ ಸ್ನಾನಮಾಡಲಿ. ಅವನ ದೇಹ ಪೂರ್ವದಂತೆಯೇ ಆಗುವುದು. ಮುಹ್ಯಾರ್ ಸುಲೇಮಾನಿಯ ರಾಜ್ಯಕ್ಕೆ ಪ್ರವೇಶಮಾಡಿದಾಗ ಅಲ್ಲಿನ ಪರಿಗಳು ಅವನನ್ನು ಹಿಡಿದುಕೊಂಡು ತಮ್ಮ ದೊರೆಯ ಬಳಿಗೆ ಕರೆದುಕೊಂಡು ಹೋಗುವರು. ಆಗ ಹತೀಮನು ಧೈರ್ಯವಾಗಿ ತಾನು ಬಂದ ಕಾರ್ಯವನ್ನು ಹೇಳಲಿ. ಆ ದೊರೆಯು ಆ ಮುತ್ತಿನ ವರ್ಣನೆಯನ್ನು ಹೇಳು ಎನ್ನುತಾನೆ. ಅದರ ಮೇಲೆ ಆ ಮುತ್ತು ದೊರೆಯುವುದು. ದೊರೆಮಗಳೂ ದೊರೆಯುತಾಳೆ. ನಾನು ಹೇಳಿದ್ದನ್ನೆಲ್ಲಾ ಹತೀಮ ಹೇಳಲಿ. ಮುಹ್ಯಾರನು ಅತ್ಯಂತ ಘನವಾದ ನಡತೆಯುಳ್ಳ ಮನುಷ್ಯನಾಗಿಯೂ ನಿಷ್ಕರ್ಷೆಯಾಗಿ ಪ್ರಾಮಾಣಿಕನಾಗಿಯೂ ಇರುವುದರಿಂದ, ತನ್ನ ಮಗಳನ್ನೂ ಆ ಮುತ್ತನ್ನೂ ಖಂಡಿತವಾಗಿ ಕೊಡುತಾನೆ.

ಈ ಮಾತನ್ನು ಹೇಳಿ ಗಂಡುಪಕ್ಷಿಯು ತನ್ನ ರೆಕ್ಕೆಯನ್ನು ಬಡಿಯಿತು. ಆಗ ಹಕ್ಕೀಗರಿಯು ಹಕೀಮನ ಸುತ್ತಲೂ ಮಳೆ ಬಿದ್ದಹಾಗೆ ಬಿತ್ತು. ಅವನು ಆಗಲೇ ಎದ್ದು ಆ ಗರಿಗಳನ್ನು ಜಾಗರೂಕನಾಗಿ ಆರಿಸಿಕೊಂಡನು.

ಹೆಂಣು—(ಇದನ್ನು ಕಂಡು) ನೀನು ಹೇಳಿದ ಮಾತನ್ನು ತಿಳಿದುಕೊಂಡವನ ಹಾಗೆ ಅವನು ಗರಿಗಳನ್ನು ಆರಿಸಿಕೊಳ್ಳುತಿದಾನೆ. ಇಂಥಾ ಮುಖ್ಯವಾದ ಕೆಲಸ ಮಾಡತಕ್ಕದ್ದೇ ಹಕೀಮನ ಹಣೆಯಲ್ಲಿ ಬರೆದಿದೆ. ಆ ಮುತ್ತುಗಳ ಸಂದರ್ಭ ಗಳನ್ನೆಲ್ಲಾ, ನೀನು ಹೇಗೆ ಜ್ಞಾಪಿಸಿಕೊಂಡೆ?

ಗಂಡು—ಈ ಎರಡು ಮುತ್ತುಗಳ ಚರಿತ್ರೆಯೂ ನಮ್ಮ ಜಾತಿಯ ಪಕ್ಷಿಗಳಲ್ಲಿ ತಲತಲಾಂತರದಿಂದಲೂ ಬಂದು ಇದೆ. ಹೆಂಣು ಜಾತಿಯವರಾದ ನೀವು ಇಂಥಾ ದೊಡ್ಡ ವಿಚಾರಕ್ಕೆ ಹೋಗುವುದಿಲ್ಲ. ಬರೀ ಹರಟೆ ಬಡಿಯುವುದಕ್ಕೆ ಹೊರತು ಇನ್ನು ಯಾವುದಕ್ಕೂ ನೀವು ಉಪಯೋಗವಿಲ್ಲ. ನಮ್ಮ ಜಾತಿಯೇ ನಿರ್ಮೂಲವಾಗಿ ಹೋಗುವ ಕಾಲ ಬರುವುದು. ನಮ್ಮಲ್ಲಿ ಒಂದೇ ಒಂದುಪಕ್ಷಿ ಒಂಟಿಯಾಗಿ ಉಳಿದು ಪ್ರಪಂಚವೆಲ್ಲಾ ನಾಶವಾಗುವಾಗ ಅದೂ ನಾಶವಾಗು ವುದು. ಆದರೆ ಅಂಥಾಕಾಲ ಬಹಳ ದೂರ ಇದೆ. ವರ್ತಮಾನದಲ್ಲಿ ದೇವರ ನಮಗೆ ಕೊಟ್ಟಿರತಕ್ಕದ್ದನ್ನು ಅನುಭವಿಸೋಣ. ದೇವರು ತನ್ನ ಔದಾರ್ಯ ವನ್ನು ಮನುಷ್ಯ ಒಬ್ಬನಿಗೆ ಹೊರತು ಮತ್ತೆ ಯಾರಿಗೂ ಕೊಟ್ಟಿಲ್ಲ. ನಮಗೆ ದಯಪಾಲಿಸಿರುವಷ್ಟು ಮತ್ತೆ ಯಾರಿಗೂ ಕೊಟ್ಟಿಲ್ಲ. ಮನುಷ್ಯನ ಹಾಗೆಯೇ ನಮಗೆ ಮಾತನಾಡುವ ಶಕ್ತಿಯನ್ನು ಕೊಟ್ಟಿದಾನೆ. ಸಾಧಾರಣವಾಗಿ ನಮ್ಮ ಆಯುಸ್ಸು ಮನುಷ್ಯನ ಆಯುಸ್ಸಿಗಿಂತಲೂ ಹೆಚ್ಚು. ನಾವಿಬ್ಬರೂ ಒಟ್ಟಿಗೆ ಇನ್ನೂ ನೂರು ವರುಷ ಇರಬೇಕೆಂದು ವಿಧಿಯಾಗಿದೆ.

ಇಷ್ಟು ಹೊತ್ತಿಗೆ ಪೂರ್ವದಿಕ್ಕಿನಲ್ಲಿ ಬೆಳಕಿನ ಬಾಗಿಲು ತೆರೆಯಲ್ಪಟ್ಟಿತು, ಆ ಎರಡು ಪಕ್ಷಿಗಳೂ ಆ ಮರದಮೇಲಿನಿಂದ ಹಾರಿ ಹೊರಟುಹೋದವು. ಅದೇ ಹೊತ್ತಿಗೆ ಹಕೀಮನೂ ಎದ್ದು ದಕ್ಷಿಣದಿಕ್ಕಿಗೆ ಪ್ರಯಾಣ ಹೊರಟ. ಒಂದು ದಿವಸ ರಾತ್ರೆ ಒಂದು ಮರದ ಕೆಳಗೆ ಮಲಗಿರುವಾಗ, ಯಾತನೆಯನ್ನು ಅನುಭವಿಸುತಾ ಇರುವ ಒಂದು ಜಂತು ಅಳುವ ಧ್ವನಿಯನ್ನು ಕೇಳಿದ. "ಅಯ್ಯೋ ದೇವರ ಮೇಲೆ ದೃಷ್ಟಿ ಇಟ್ಟು ನನಗೆ ಸಹಾಯ ಮಾಡತಕ್ಕವರು ಸಮೀಪದಲ್ಲಿ ಯಾರೂ ಇಲ್ಲವೆ?" ಎಂದು ಕೂಗು ಕೇಳಿತು. ಆರ್ತರಾದವರಿಗೆ ಯಾವಾಗಲೂ ಸಹಾಯಮಾಡಲು ಸಿದ್ಧವಾಗಿರ ತಕ್ಕ ಹಕೀಮನು ಜಾಗ್ರತೆಯಾಗಿ ಎದ್ದು ಆ ಸದ್ದು ಹೊರಡುವ ದಿಕ್ಕಿಗೆ ಓಡಿ ಹೋದನು. ಅಲ್ಲಿ ಒಂದು ಹೆಂಣು ನರಿಯು ನೆಲದಮೇಲೆ ಬಿದ್ದಿತ್ತು. ಅದು ಒಂದು ಗಟ್ಟಿಯಾದ ಬಂಡೆಯ ಮೇಲೆ ತಲೆಯನ್ನು ಹೊಡದುಕೊಳ್ಳುತಿತ್ತು. ಆಗ

ಹಕೀಮ—ನಿನಗೆ ದುಃಖವನ್ನುಂಟು ಮಾಡಿದವರು ಯಾರು ಹೇಳು.

ನರಿ—ಒಬ್ಬ ಬೇಟೆಗಾರನು ನನ್ನ ಗಂಡನನ್ನೂ ನನ್ನ ಮಕ್ಕಳನ್ನೂ ತನ್ನ ಬಲೆಯಲ್ಲಿ ಹಿಡಿದುಕೊಂಡು, ಅವುಗಳನ್ನು ಕೊಂದುಹಾಕುವುದಕ್ಕೆ ಹೊತ್ತುಕೊಂಡು ಹೋಗುತ್ತಿದಾನೆ. ಅವರೂ ನಾನೂ ಹೀಗೆ ಅಗಲಿಹೋದ ದುಃಖವೇ ನನ್ನ ಹೃದಯವನ್ನು ಸೀಳುತಾ ಇದೆ.

ಹತೀಮು—ಆ ಬೇಟೆಗಾರನು ಎಲ್ಲಿದಾನೆ, ಬಲ್ಲೆಯಾ ?

ನರಿ—ಅವನ ಮನೆಯು ಇಲ್ಲಿಂದ ಎರಡು ಹರಿದಾರಿ ಇದೆ.

ಹತೀಮು—ಅಲ್ಲಿಗೆ ದಾರಿ ತೋರಿಸು. ನಿನ್ನ ಗಂಡನ, ಮಕ್ಕಳ ಪ್ರಾಣವನ್ನು ಉಳಿಸಲು ನಾನು ಯತ್ನ ಮಾಡುತೇನೆ.

ನರಿ—(ಅನುಮಾನ ಪಟ್ಟು) ಅಯ್ಯಾ ಮನುಷ್ಯ, ನಿನ್ನನ್ನು ನಾನು ಹೇಗೆ ನಂಬಲಿ ? ನನ್ನ ಹೃದಯವನ್ನು ಯಾವನು ಛೇದಿಸಿದನೋ ಅಂಥವ ನೀಚರಿಗಕ್ಕೆ ಪರಪ್ರಾಣ ಘಾತಕವಾದ ಮನುಷ್ಯವರ್ಗಕ್ಕೆ ನೀನು ಸೇರಿದವನಲ್ಲವೇ ? ನನ್ನನ್ನು ಜಾಲಕ್ಕೆ ಸಿಕ್ಕಿಸುವುದು ನಿನಗೆ ಸಂತೋಷವಲ್ಲವೆ ? ನಿಜವಾಗಿಯೂ ನನ್ನ ಅದೃಷ್ಟವು ಕಪಿಯ ಅದೃಷ್ಟದ ಹಾಗಾಯಿತು. ಅದರ ಕಥೆಯು ಈಗ ಒಂದು ನಾಮತಿ ಯಾಗಿದೆ.

ಹತೀಮು—ಕಪಿಗೆ ಏನಾಯಿತು ಹೇಳು.

ಹೆಣ್ಣು ನರಿ—ಒಂದಾನೊಂದು ಕಾಲದಲ್ಲಿ ಒಂದು ಕಪಿಯೂ ಅದರ ಹೆಣ್ಣು ಸಹಾ ದಾಮಘಾನ್ ಎಂಬ ಮರಳುಕಾಡಿನ ನಿರ್ಮಾನುಷ್ಯವಾದ ಪ್ರದೇಶದೊಳು ವಾಸವಾಗಿದ್ದವು. ಅಲ್ಲಿ ಅದರ ಸಂಸಾರ ವೃದ್ಧಿಯಾಯಿತು. ಒಬ್ಬ ಬೇಟೆಗಾರನು ಆಕಡೆ ಹೋಗುತಾ ಇರುವಾಗ ತಾಯಿ ಕಪಿಯನ್ನು ಹೊರತು ಉಳಿದ ಕಪಿಗಳೆಲ್ಲವನ್ನೂ ಹಿಡಿದುಕೊಂಡು ತಲೆತಪ್ಪಿಸಿಕೊಂಡು ಓಡಿಹೋಗಿ ಗಂಡುಕಪಿಯನ್ನೂ ಮರಿಕಪಿಗಳನ್ನೂ ತೆಗೆದುಕೊಂಡು ಒಬ್ಬ ದೊಡ್ಡಮನುಷ್ಯನ ಮನೆಗೆ ಹೋದ. ಅಲ್ಲಿ ಅವುಗಳನ್ನು ಭಾರಿಯಾದ ಬೆಲೆಗೆ ಮಾರಿದ. ತಾಯಿಕಪಿಯು ದಿಕ್ಕುಗೆಟ್ಟು ಆಶಾಭಂಗವಾಗಿ ಮರಳಕಾಡಿನಲ್ಲಿ ಸುತ್ತುತಾ ಇತ್ತು. ಕಡೆಗೆ ಅದು ಪ್ರಾಣದ ಮೇಲೆ ಆಶೆ ಇಲ್ಲದೆ, ಮನುಷ್ಯರಿರುವ ಕಡೆಗೆ ನುಗ್ಗಿ, ಆ ದೇಶದ ದೊರೆಯ ಬಳಿಗೆ ಹೋಗಿ ತನ್ನ ದುಃಖಕ್ಕೆ ಉಂಟಾದ ಕಾರಣವನ್ನು ಹೇಳಿಕೊಂಡು, ನ್ಯಾಯವನ್ನು ತೀರಿಸೆಂಬದಾಗಿ ಹೇಳಿಕೊಂಡಿತು ; ಹೇಗೆಂದರೆ :—ದೊರೆಯು, ದೇವರು ನಿನಗೆ ಕಾರುಣ್ಯವನ್ನು ತೋರಿಸಲಿ ಎಂದು ನೀನು ಕೋರುವ ಹಾಗೆಯೇ, ನನ್ನ ದುಃಖದ ವಿಷಯದಲ್ಲಿ ಕನಿಕರವುಳ್ಳವನಾಗು ಎಂದು ಬೇಡುತೇನೆ. ಈ ಸ್ಥಳದ ಒಬ್ಬ ಬೇಟೆಗಾರನು ನಿಷ್ಕರುಣೆಯಾಗಿ ನನ್ನ ಗಂಡನನ್ನೂ ಮಕ್ಕಳನ್ನೂ ಹೊತ್ತುಕೊಂಡುಹೋದ, ಎಂದು ಹೇಳಿಕೊಂಡಿತು.

ಆ ಬೇಟೆಗಾರನು ಆ ದೊರೆಗೇ ಆ ಕಪಿಗಳನ್ನು ಮಾರಿದ್ದನು. ಇದು ದೊರೆಗೆ ಗೊತ್ತಿರಲಿಲ್ಲ. ಅವನು ಆ ಕಪಿಯನ್ನು ಕುರಿತು— ನನ್ನ ಚಾರರನ್ನು ಆ ಬೇಟೆಗಾರರ

ಮನೆಗೆ ಕರೆದುಕೊಂಡು ಹೋಗು. ಇದಕ್ಕೆ ಸಂಬಂಧಪಟ್ಟವರನ್ನು ನನ್ನ ಬಳಿಗೆ ಕರೆದುತರಲು ನಾನು ಅವರಿಗೆ ಅಪ್ಪಣೆ ಕೊಟ್ಟಿದೇನೆ, ಎಂದನು. ಆ ಹೆಂಣು ಕಪಿಯು ಆ ಜನರನ್ನು ಆ ಬೇಟೆಗಾರನ ಮನೆಗೆ ಕರೆದುಕೊಂಡುಹೋಯಿತು. ಆ ಬೇಟೆಗಾರನು ತತ್‍ಕ್ಷಣ ಅಪ್ಪಣೆಯಾದಂತೆ ನಡೆದುಕೊಂಡನು. ಅವರೆಲ್ಲರೂ ದೊರೆಯ ಬಳಿಗೆ ಬಂದರು. ಆಗ ದೊರೆಯು—ಎಲೆ ಬೇಟೆಗಾರ, ಈ ಹೆಂಣು ಕಪಿಯ ಗಂಡನನ್ನೂ ಮಕ್ಕಳನ್ನೂ ನೀನು ಹೊತ್ತುಕೊಂಡು ಬಂದದ್ದು ನಿಜವೇ ? ಹಾಗಿದ್ದರೆ ಅವುಗಳನ್ನು ಏನುಮಾಡಿದೆ ? ಎಂದು ಕೇಳಿದನು

ಆಗ ಬೇಟೆಗಾರನು—ಸ್ವಾಮಿ ಇದೆಲ್ಲಾ ನಿಜ, ನಾನು ಅವುಗಳನ್ನು ಹಿಡಿದು ಕೊಂಡ ದಿವಸವೇ ತಮಗೆ ಅವುಗಳೆಲ್ಲವನ್ನೂ ಮಾರಿಬಿಟ್ಟೆ ; ಆ ಹೆಂಣು ಕಪಿಯ ದುಃಖವನ್ನು ನೀವು ನೋಡಲಾರದೆ ಹೋದರೆ, ಈ ಹೆಂಣಿನ ಪ್ರೀತಿಗೆ ಪಾತ್ರವಾದ ಕಪಿಗಳನ್ನು ಅದರ ವಶಕ್ಕೆ ಕೊಟ್ಟುಬಿಡಬೇಕೆಂದು ಅಪ್ಪಣೆಮಾಡಿದಲ್ಲಿ, ಅವುಗಳಿಗೆ ಕೊಟ್ಟ ಕ್ರಯವನ್ನು ನಾನು ತಮಗೆ ಕೊಟ್ಟುಬಿಡುತೇನೆ ; ಎಂದನು. ಆಗ ದೊರೆಯು ಆ ಬೇಟೆಗಾರನನ್ನು ಕುರಿತು—ನೀನು ಹೇಳುವುದು ನ್ಯಾಯವಾಗಿದೆ. ಆದಾಗ್ಯೂ ಅದು ನನಗೆ ಯುಕ್ತವಾಗಿ ತೋರುವುದಿಲ್ಲ ಈ ವಿಷಯವನ್ನು ನಾನು ಚೆನ್ನಾಗಿ ಯೋಚಿಸಿದೆ. ಈ ಹೆಂಣುಕಪಿಯನ್ನು ಅದರ ಗಂಡನೂ ಮರಿಗಳೂ ಇರುವ ಬೋನಿಗೇ ಸೇರಿಸಿಬಿಡುವುದು ಉತ್ತಮವಾಗಿ ತೋರುತಿದೆ. ನೀನು ನನಗೆ ಮಾರಿಬಿಟ್ಟ ಕಪಿಗಳನ್ನು ಹಿಂದಕ್ಕೆ ಹಣ ತೆಗೆದುಕೊಂಡು ನಾನು ಹಿಂತಿರುಗಿ ಕೊಡಲಾರೆ, ಎಂದು ಅಪ್ಪಣೆ ಕೊಟ್ಟನು.

ಹೆಂಣು ಕಪಿಯ ಕಷ್ಟ ಅಲ್ಲಿಗೆ ತೀರಲಿಲ್ಲ. ಅದರ ಮರಿಗಳ ಜೊತೆಯಲ್ಲಿ ಆ ಹೆಂಣನ್ನೂ ಒಂದೇ ಬೋನಿನಲ್ಲಿ ಕೂಡಿದರು. ಕೆಲವು ದಿವಸವಾದಮೇಲೆ ಈ ದೊರೆಯ ಬಳಿಯಲ್ಲಿ ಕಪಿ ಮರಿಗಳಿವೆ ಎಂದು ದಾಮಫೋನ್ ರಾಜಕುಮಾರನಿಗೆ ತಿಳಿಯಿತು. ಅವನು ತನ್ನ ಅರಮನೆಯಲ್ಲಿ ಅವುಗಳನ್ನು ಇರಿಸಿಕೊಳ್ಳಬೇಕೆಂದು ಅಪೇಕ್ಷಿಸಿದನು. ಹೀಗೆ ಆ ಭಾಗ್ಯಹೀನವಾದ ಹೆಂಣು ಕೋತಿಗೆ ಮರಿಗಳು ಪುನಃ ಅಗಲಿ ಹೋದವು. ತನಗೂ ನಿರ್ಬಂಧ ಪ್ರಾಪ್ತವಾಯಿತು. ಗಂಡು ಕಪಿಯು ಮೊದಲೇ ಸತ್ತುಹೋಗಿತ್ತು. ಹೆಂಣು ಕಪಿಯು ಒಂಟಿಯಾಗಿ ನಿಂತು ಅನ್ನ ನೀರುಗಳನ್ನು ಬಿಟ್ಟು ಕೆಲವು ದಿವಸದಲ್ಲಿ ದುಃಖದಿಂದ ಮರಣವೆಂಬ ಬಾಗಿಲ ಮೂಲಕ ತಪ್ಪಿಸಿಕೊಂಡು ಹೋಯಿತು.

ಹೀಗೆ ನರಿಯು ಕಪಿಯ ಕಥೆಯನ್ನು ಹೇಳಿ ಮುಗಿಯಿಸಿ ಹತೀಮನನ್ನು ಕುರಿತು

ನರಿ—ಈ ಪ್ರಕಾರ ನೀನು ನನ್ನನ್ನು ಹೆಚ್ಚಾದ ಕಷ್ಟಕ್ಕೆ ಗುರಿಮಾಡಿಬಿಡುತೀಯೆ ಎಂದು ಊಹಿಸುವುದು ಸಹಜವಾಗಿದೆ.

ಹತೀಮ—ಎಲ್ಲಾ ಜನರೂ ನೀನು ಹೇಳಿದಂಥಾ ಮನುಷ್ಯರಷ್ಟು ದ್ರೋಹಿಗಳಲ್ಲ ಭೀತಿ ಬೇಡ.

ಕಡೆಗೆ ಕತ್ತಲೆಯಲ್ಲಿ ನರಿಯು ಬೇಟೆಗಾರನ ಮನೆಗೆ ಮುಂದುಗಡೆ ಹೋಯಿತು, ಹತೀಮನು ಅದರ ಹಿಂದೆ ಹೋದನು. ಇವರಿಬ್ಬರೂ ರಾತ್ರೆ ಮೂರನೇ ಯಾಮದಲ್ಲಿ ಅವನ ಮನೆಗೆ ಹೋಗಿ ಸೇರಿದರು. ಬೆಳಗಾಗುವವರೆಗೆ ಹತೀಮನು ಒಂದು ಮರದ ಕೆಳಗೆ ಮಲಗಿಕೊಂಡನು. ಸಮೀಪದಲ್ಲಿದ್ದ ನರಿಯು ಕಾಡಿನಲ್ಲಿ ಅವಿತುಕೊಂಡಿತು. ಪೂರ್ವ ದಿಕ್ಕಿನಲ್ಲಿ ಸೂರ್ಯೋದಯವಾದಾಗ, ಹತೀಮನು ಬೇಟೆಗಾರನ ಮನೇಬಾಗಿಲಿಗೆ ಹೋಗಿ ಕದವನ್ನು ತಟ್ಟಿ, ಒಳಕ್ಕೆ ಬರಬೇಕೆಂದು ಕೇಳಿಕೊಂಡನು. ಬೇಟೆಗಾರನು ಬಾಗಿಲನ್ನು ತೆಗೆದು ಸುಂದರನಾಗಿ, ಗಂಭೀರನಾಗಿ ನಿಷ್ಕಪಟವಾದ ಮುಖಭಾವ ಉಳ್ಳಂಥಾ ಒಬ್ಬ ವಿದೇಶಿಯನ್ನು ಕಂಡು ಆಶ್ಚರ್ಯಪಟ್ಟು,

ಬೇಟೆಗಾರ—ಹೇಳೈ, ನೀನು ಯಾರು? ಎಲ್ಲಿಂದ ಬಂದೆ? ನೀನು ವಿದೇಶಿಯಾಗಿ ಕಾಣುತೀಯೆ. ಯಾವ ಕೆಲಸದ ಮೇಲೆ ನನ್ನ ಬಳಿಗೆ ಬಂದೆ?

ಹತೀಮ—ಅಯ್ಯಾ ಯೋಗ್ಯನೆ, ನಾನು ಹುಟ್ಟುತಾ ಅರಬ್ ದೇಶದವನು. ಇಷ್ಟು ಹೊತ್ತಿನಲ್ಲಿ ನಿನ್ನನ್ನು ನಾನು ತೊಂದರೆ ಮಾಡುವುದಕ್ಕೆ ಕಾರಣವೇನೆಂದರೆ ನನ್ನ ದೇಹದ ಕೀಲುಕೀಲುಗಳಲ್ಲೆಲ್ಲಾ ಏನೋ ಯಾತನೆ ಉಂಟಾಗಿದೆ. ನರಿಯು ಬಿಸಿಬಿಸಿ ರಕ್ತವನ್ನು ಮೈಗೆಲ್ಲಾ ಸವರಿದರೆ ಪೂರ್ತಿಯಾಗಿ ಗುಣವಾಗುವುದೆಂದು ವೈದ್ಯರು ಹೇಳಿದಾರೆ. ನಿನ್ನಲ್ಲಿ ಕೆಲವು ಜೀವದ ನರಿಗಳಿವೆ ಎಂತಲೂ ಅವುಗಳನ್ನು ನೀನು ಬೇಟೆಯಲ್ಲಿ ಹಿಡಿದೆ ಎಂತಲೂ ನನಗೆ ತಿಳಿಯಿತು. ಅವುಗಳೆಲ್ಲವನ್ನೂ ನನಗೆ ಕೊಡು; ನೀನು ಹೇಳಿದ ಕ್ರಯವನ್ನು ಅವುಗಳಿಗೆ ಕೊಡುತ್ತೇನೆ.

ಬೇಟೆಗಾರ—ನರಿಗಳನ್ನು ನಿನಗೆ ನಾನು ಸಂತೋಷನಾಗಿ ಕೊಡುತೇನೆ. ಒಂದು ದೊಡ್ಡದೂ ಆರು ಮರಿಗಳೂ ಸೇರಿ ಏಳಿವೆ, ಅವೆಲ್ಲಾ ಜೀವದ ನರಿಗಳು. ಅವುಗಳನ್ನು ತೆಗೆದುಕೋ, ನೀನು ಕೊಟ್ಟದ್ದನ್ನು ಕೊಡು. ಅವುಗಳನ್ನು ಕೊಂಡುಕೊಂಡದ್ದಕ್ಕೆ ನಿನಗೆ ಸೌಖ್ಯವಾದರೆ ಸಾಕು.

ಹೀಗೆ ಹೇಳಿ ಆ ಬೇಟೆಗಾರನು ನರಿಗಳನ್ನು ಹೊರಕ್ಕೆ ತೆಗೆದುಕೊಂಡು ಬಂದ. ದೊಡ್ಡ ನರಿಯ ನಾಲ್ಕು ಕಾಲೂ ಕಟ್ಟಿಹಾಕಿತ್ತು. ಮರಿಗಳು ಒಂದು ಗೂಡೆಯಲ್ಲಿರಿಸಿತ್ತು. ಹತೀಮನು ಅವುಗಳಿಗಾಗಿ ಬೇಟೆಗಾರ ನಿರೀಕ್ಷಿಸಿಕೊಂಡಿದ್ದದಕ್ಕಿಂತಲೂ ಹೆಚ್ಚಾಗಿಯೇ ಕೊಟ್ಟು ಕಾಡಿಗೆ ಹೋದನು. ಅಲ್ಲಿ ಗೂಡೆಯನ್ನು ತೆಗೆದ, ಮರಿಗಳನ್ನು ಬಿಟ್ಟುಬಿಟ್ಟ. ದೊಡ್ಡ ನರಿಗೆ ಕಟ್ಟಿದ್ದ ಕಟ್ಟನ್ನು ಬಿಚ್ಚಿದ. ಆ ಬಡ ಪ್ರಾಣಿಗೆ ಅಲ್ಲಾಡುವುದಕ್ಕೂ ತ್ರಾಣವಿರಲಿಲ್ಲ. ಆ ಬೇಟೆಗಾರನು ಅದನ್ನು ಅಷ್ಟು ಬಲವಾಗಿ ಕಟ್ಟಿಹಾಕಿ ಅನ್ನ ನೀರಿಲ್ಲದೆ ಕೆಡವಿದ್ದದರಿಂದ ಅದರ ಪ್ರಾಣವು ಹೋಗುವ ಸಮಯವಾಗಿತ್ತು.

ಹತೀಮನು—ನಿನ್ನ ಆಯುಸ್ಸು ಇಲ್ಲಿಗೆ ತೀರಿತು, ದೇವರ ಚಿತ್ತದಲ್ಲಿದ್ದದ್ದಾಯಿತು ಎಂದು, ಆ ನರಿಯನ್ನು ಬಿಟ್ಟುಬಿಡಬೇಕೆಂದು ಇದ್ದ. ಆ ಹೆಣ್ಣು ನರಿಯು ಅವನ ಸಮೀಪಕ್ಕೆ ಬಂದು—ಉದಾರಿಯಾದ ಹತೀಮನ, ಆದಕ್ಕೆ ತ್ರಾಣ

ಬಗಬೇಕಾದರೆ, ಒಂದು ಚಿಕಿತ್ಸೆ ಇದೆ, ಎಂದು ಹೇಳಿತು. ಆಗ ಹತೀಮನು—ಅದೇನು ಹೇಳು, ಸಾಧ್ಯವಾದರೆ ಅದನ್ನು ನಾನು ಸಂಪಾದಿಸುತೇನೆ, ಎಂದನು. ಅದಕ್ಕೆ ಆ ನರಿಯು-ಹೊಸದಾಗಿ ಬಿಸಿಬಿಸಿಯಾಗಿ ತೆಗೆದ ಮನುಷ್ಯನ ರಕ್ತವು ಒಂದು ಬಟ್ಟಲ ತುಂಬ ದೊರೆತರೆ, ಅದರಿಂದ ನರಿಗೆ ಪೂರ್ತಿಯಾಗಿ ಗುಣವಾಗುವುದು, ಎಂದು ಹೇಳಿತು. ಇದನ್ನು ಕೇಳಿ ಹತೀಮನು ತನ್ನ ಎಡದ ರಟ್ಟೆಯಲ್ಲಿ ಒಂದು ನರವನ್ನು ಕತ್ತರಿಸಿ ಒಂದುಬಟ್ಟಲ ತುಂಬ ತನ್ನ ರಕ್ತವನ್ನೇ ತೆಗೆದು ಸಾಯುತಾ ಬಿದ್ದಿದ್ದ ನರಿಗೆ ಹಾಕಲು, ಅದಕ್ಕೆ ಪೂರ್ತಿಯಾಗಿ ಗುಣವಾಯಿತು. ತರುವಾಯ ಹತೀಮನು ಆ ಗಾಯವನ್ನು ಕಟ್ಟಿಕೊಂಡನು. ಆಗ ಆ ಜಂತುಗಳು ಅವನು ಮಾಡಿದ ಪ್ರಾಣದಾನಕ್ಕಾಗಿ ಕೃತಜ್ಞತೆಯನ್ನು ತೋರಿಸಲು, ಹತೀಮನ ಕಾಲಿಗೆ ನಮಸ್ಕಾರ ಮಾಡಿದವು.

2ನೇ ಅಧ್ಯಾಯ

ತರುವಾಯ ಹತೀಮನು ಮೊದಲಿನಂತೆ ದಕ್ಷಿಣ ದಿಕ್ಕಿಗೆ ಹೊರಟನು. ಕೆಲವು ದಿವಸದ ಮೇಲೆ ವಿಶೇಷವಾಗಿ ಕಾದಿರುವ ಒಂದು ಮರಳಕಾಡ ಬೈಲಿಗೆ ಬಂದನು. ಮಧ್ಯಾಹ್ನದಲ್ಲಿ ನೆತ್ತಿಯ ಮೇಲೆ ಸೂರ್ಯನ ಕಿರಣಗಳು ಬಿದ್ದು ಸೂರ್ಯನ ವೇಗ ಸುಡುತಾ ಇದ್ದುದರಿಂದ, ಹತೀಮನು ನೀರನ್ನು ಹುಡುಕಿಕೊಂಡು ಅಲೆಯುತಾ ಹೋದ. ದೂರದಲ್ಲಿ ಹಸರಾದ ಒಂದು ಪ್ರದೇಶ ಕಾಣಿಸಿ ಅವನಿಗೆ ಅಪ್ಯಾಯನವಾಯಿತು. ಅದರಿಂದ ಅಲ್ಲಿ ಒಂದು ಸರೋವರವಿದೆ ಎಂದು ಸೂಚನೆಯಾಯಿತು. ಅಲ್ಲಿಗೆ ಆಯಾಸದಿಂದ ಕಾಲನ್ನು ಎಳೆದುಕೊಂಡುಹೋದ. ಆ ಸರೋವರದಲ್ಲಿ ನೀರು ಮೇಲಕ್ಕೆ ಉಕ್ಕುತಾ ಇತ್ತು. ಆದರೇನು ಭಾಗ್ಯ! ಆ ಚಿಲುಮೆಯ ಸುತ್ತಲೂ ಸುತ್ತಿಕೊಂಡು ಮಲಗಿದ್ದ ಒಂದು ದೊಡ್ಡ ಸರ್ಪವು ತನ್ನ ಸುತ್ತನ್ನು ಬಿಚ್ಚುವುದಕ್ಕೆ ಮೊದಲು ಮಾಡಿತು. ಹತೀಮ ಗಾಬರಿಯಾಗಿ ನಿಂತುಕೊಂಡ. ಆ ಹಾವು ತನ್ನನು ಜೀವ ಸಹಿತ ನುಂಗಿಕೊಳ್ಳುವುದೆಂದು ತಿಳಿದುಕೊಂಡ. ಆದರೆ ಆ ಸರ್ಪವು ಅವನ ತಂಟೆಗೆ ಹೋಗುವುದಕ್ಕೆ ಬದಲಾಗಿ ಮೃದುವಾದ ಧ್ವನಿಯಲ್ಲಿ—ಯೆಮನ್ ದೇಶದ ಧೀರನಾದ ರಾಜಪುತ್ರನೆ, ಮುಂದಕ್ಕೆ ಬಂದು ನೀರುಕುಡಿ, ಯಾಕೆ ಸಂದೇಹ ಪಡುತೀಯೆ? ಎಂದು ಹೇಳಿತು. ಈ ಮಾತು ಹಾವಿನಿಂದ ಹೊರಟದ್ದನ್ನು ಕೇಳಿ ಹತೀಮನಿಗೆ ಇನ್ನೂ ಆಶ್ಚರ್ಯವಾಯಿತು; ಸ್ವಲ್ಪ ಹೊತ್ತು ಅವನು ಸುಮ್ಮನೆ ನಿಂತ ಕಡೆಯಲ್ಲಿಯೇ ನಿಂತು ಕೊಂಡನು. ಪುನಃ ಸರ್ಪವು—ನನ್ನ ದೆಸೆಯಿಂದ ಯಾವ ಭಯವೂ ಬೇಡ. ಈ ಸರೋವರದ ನೀರು ನಿನ್ನ ಉಪಯೋಗಕ್ಕಾಗಿ ಚೊಕ್ಕಟವಾಗಿದೆ. ಕುಡಿ, ನನ್ನ ಹಿಂದೆ ಬಾ, ಎಂಬುದಾಗಿ ನುಡಿಯಿತು.

ಕೊನೆಗೆ ಹತೀಮನು ಧೈರ್ಯಮಾಡಿ ಆ ಚಿಲುಮೆಯಲ್ಲಿ ದಾಹವನ್ನು ಆರಿಸಿಕೊಂಡು ಆದ ವಿಧಿಯಾಗಲಿ ಎಂದು ಮರಳ ಕಾಡಿನಲ್ಲಿ ಸರ್ಪದ ಹಿಂದೆ ಹೋದನು. ಸ್ವಲ್ಪ

ಹೊತ್ತಿನಲ್ಲಿ ಒಂದು ಸುಂದರವಾದ ವನ ಸಿಕ್ಕಿತು. ಅದರ ಮಧ್ಯಭಾಗದಲ್ಲಿ ನೆರಳಾದ ಕಡೆ ಸಾಲಾಗಿ ಉತ್ತಮವಾದ ಆಸನಗಳನ್ನು ಹಾಕಿತ್ತು. ಹಾವು ಹತೀಮನನ್ನು ತಂಪಾಗಿ ಮನೋಹರವಾಗಿರುವ ಆ ಸ್ಥಳಕ್ಕೆ ಕರೆದುಕೊಂಡುಹೋಗಿ ಅವನನ್ನು ಕುರಿತು—ಅಯ್ಯಾ ಗಂಭೀರವಾದ ಅರಬ್ ದೇಶೀಯನೆ, ಈ ಆಸನದಮೇಲೆ ಕೂತುಕೋ. ಅಪಾಯವೇನೂ ಇಲ್ಲ. ಆಯಾಸ ಪರಿಹಾರ ಮಾಡಿಕೊ, ಎಂದು ಹೇಳಿ ಆ ಸರ್ಪವು ಆ ವನಕ್ಕೆ ಆಭರಣಪ್ರಾಯವಾಗಿದ್ದ ಒಂದು ಸರೋವರದಲ್ಲಿ ಮುಳುಗಿಕೊಂಡಿತು.

ಹತೀಮನು ಹೊತ್ತುಮೀರಿ ಪ್ರಯಾಣ ಮಾಡಿದನಾದ್ದರಿಂದ ಆಯಾಸಪಟ್ಟು ಒಂದು ಆಸನದ ಮೇಲೆ ಕುಳಿತು ತನ್ನ ಮುಂದೆ ನಡೆದ ಸಂಗತಿಯನ್ನು ನೋಡಿ ಆಶ್ಚರ್ಯಪಡುತಾ ಇದ್ದನು. ಅವನು ಸುತ್ತಲೂ ಆ ವನವನ್ನು ನೋಡಿ ಬೆರಗಾಗಿ ಸ್ವಲ್ಪಹೊತ್ತು ಅಲ್ಲಿರಲು, ದೇವಕನ್ನಿಕೆಗಳ ಹಾಗೆ ಸುಂದರಿಯರಾದಂಥಾ ನಾಗಕನ್ನಿಕೆಗಳ ಒಂದು ಗುಂಪು ಆ ಸರೋವರದಿಂದ ಎದ್ದು ಈಚೆಗೆ ಬಂತು ಅವರಲ್ಲಿ ಒಬ್ಬೊಬ್ಬಳೂ ಚಿನ್ನದ ತಟ್ಟೆಯಲ್ಲಿ ಪಚ್ಚೆಯನ್ನು ತುಂಬಿ ಹಿಡಿದುಕೊಂಡು ಬಂದು ಹತೀಮನಿಗೆ ನಮಸ್ಕಾರಮಾಡಿ ಆವನ ಅಪ್ಪಣೆ ಏನಾಗುವುದೆಂದು ಕಾದುಕೊಂಡು ನಿಂತುಕೊಂಡರು.

ಹತೀಮ—ನೀವು ಯಾರು ? ನನ್ನಲ್ಲಿ ನಿಮಗೇನು ಕೆಲಸ?

ನಾಗಕನ್ನಿಕೆಗಳು—ನಿಮ್ಮನ್ನು ಇಲ್ಲಿಗೆ ಕರೆದುತಂದ ಶೇಷರಾಜನ ಪ್ರಜೆಗಳು. ಈ ರತ್ನಗಳನ್ನು ಆತನು ನಿಮಗೆ ಕಾಣಿಕೆಯಾಗಿ ಕಳುಹಿಸಿದಾನೆ. ಅವುಗಳನ್ನು ನೀವು ಅಂಗೀಕರಿಸಬೇಕೆಂದು ಕೇಳಿಕೊಳ್ಳುತಾನೆ.

ಹತೀಮ—ಈ ರತ್ನಗಳನ್ನು ಕಳುಹಿಸಿದಾತನಿಗೆ ನನ್ನ ಕೃತಜ್ಞತೆಯನ್ನು ಅರಿಕೆ ಮಾಡಿ; ನಾನು ಇದನ್ನು ಅಂಗೀಕಾರ ಮಾಡುವುದಿಲ್ಲವೆಂದು, ಅಥವಾ ಅಂಗೀಕರಿಸಿದರೂ ನಾನು ಒಂಟಿಯಾಗಿರುವ ಕಾರಣ ಅವುಗಳನ್ನು ನಾನು ಹೊತ್ತುಕೊಂಡು ಹೋಗಲಾರನೆಂತಲೂ ಅರಿಕೆಮಾಡಿ.

ಹತೀಮನು ಹೀಗೆ ಹೇಳಿ ಮುಗಿಸುವಷ್ಟರೊಳಗಾಗಿ ನಾಗಕನ್ನಿಕೆಗಳ ಇನ್ನೊಂದು ಗುಂಪು ಅದಕ್ಕಿಂತಲೂ ಅಮೋಘವಾದ ರತ್ನಗಳ ತಟ್ಟೆಗಳನ್ನು ಹಿಡಿದು ಕೊಂಡು ನೀರಿನಿಂದ ಹತ್ತಿ ಈಚೆಗೆ ಬಂತು. ಹತೀಮನು—ನೀವು ಯಾರು ? ಈ ತಟ್ಟೆಗಳಲ್ಲಿ ಏನು ತಂದಿದ್ದೀರಿ ? ಎಂದು ಕೇಳಿದನು. ಅದಕ್ಕೆ ಅವರು—ಇವು ದೊರೆತದ್ದರಲ್ಲಿ ಅತ್ಯಂತ ಅಮೋಘವಾದ ರತ್ನಗಳು. ನೀವು ಇವುಗಳನ್ನು ಅಂಗೀಕರಿಸ ಬೇಕೆಂದು ನಮ್ಮ ದೊರೆ ಕಳುಹಿಸಿದಾರೆ, ಎಂದರು.

ಹತೀಮನು—ನಿಮ್ಮ ದೊರೆಗೆ ನಾನು ಕೃತಜ್ಞನಾಗಿದೇನೆ; ಆದರೆ ಬಂಗಾರವೂ ರತ್ನಗಳೂ ನನಗೆ ಈಗ ಉಪಯೋಗವಿಲ್ಲ, ಎಂಬದಾಗಿ ಹೇಳಿದನು. ಕೂಡಲೇ ನಾಗಕನ್ನಿಕೆಯರ ಇನ್ನೊಂದು ಗುಂಪು ಚಿನ್ನಬೆಳ್ಳಿ ತಟ್ಟೆಗಳಲ್ಲಿ ಬಗೆ ಬಗೆಯಾದ ಆಹಾರಗಳನ್ನೂ ಹಣ್ಣುಗಳನ್ನೂ ಇರಿಸಿಕೊಂಡು ನೀರಿನೊಳಗಿಂದ ಈಚೆಗೆ ಎದ್ದು

ಬಂದರು. ಹಶೀಮನು ಬಹಳ ಹೊತ್ತು ಉಪವಾಸವಾಗಿದ್ದರಿಂದ ಆಹಾರವನ್ನು ಕಂಡಕೂಡಲೇ ಸಂತೋಷವಾಯಿತು. ಆ ಪದಾರ್ಥಗಳನ್ನು ಕೂಡಲೆ ಭುಂಜಿಸಲಿಲ್ಲ, ಮೊದಲು ಅತಿಥಿಗಳ ವಿಷಯದಲ್ಲಿ ಅಷ್ಟು ದಯಾಳುವಾಗಿರುವ ದೊರೆ ಯಾರೆಂದು ವಿಚಾರಿಸಿ ತರುವಾಯ ಆತನ ಜೊತೆಯಲ್ಲಿ ಭೋಜನ ಮಾಡುವ ಸಂತೋಷವನ್ನು ಹೊಂದಬೇಕೆಂದು ಸುಮ್ಮನಿದ್ದ. ಇವನು ಮಾತನಾಡಿ ಮುಗಿಸುವಷ್ಟರೊಳಗಾಗಿ ಸುಂದರವಾದ ಒಬ್ಬ ಯೌವನಸ್ಥನು ನಾಗಕನ್ನಿಕೆಯರ ಇನ್ನೊಂದು ಗುಂಪನ್ನು ಕರೆದುಕೊಂಡು ಅದೇ ನಿರ್ಮಲವಾದ ಸರೋವರದಿಂದ ಈಚೆಗೆ ಎದ್ದು ಬಂದನು. ಹಶೀಮನು ಈ ಸುಂದರಾಂಗನನ್ನು ನೋಡಿ ಈತ ಯಾರಿರಬಹುದು, ಅದೇ ಸರೋವರದಿಂದ ಇವರೆಲ್ಲಾ ಎದ್ದು ಬಂದ ರಹಸ್ಯವೇನಿರಬಹುದು ಎಂದು ಆಶ್ಚರ್ಯಪಡುತಿದ್ದನು. ಆಗ ಆ ಸರೋವರದಲ್ಲಿದ್ದ ರಾಜನು ಹಶೀಮನ ಬಳಿಗೆ ಬಂದು ನಿಂತು ಕೊಂಡನು. ಅವರಿಬ್ಬರೂ ನಮಸ್ಕಾರ ಪ್ರತಿನಮಸ್ಕಾರಗಳನ್ನು ಮಾಡಿದ ತರುವಾಯ ಇಬ್ಬರೂ ಒಂದೇ ಆಸನದ ಮೇಲೆ ಕೂತುಕೊಂಡರು. ಆ ದೊರೆಯು ಹಶೀಮನನ್ನು ಕುರಿತು

ದೊರೆ—ಅಯ್ಯಾ ಗಂಭೀರವಾದ ಹಶೀಮನೆ, ನನ್ನ ಗುರುತು ನಿನಗೆ ಇದೆಯೆ? ನಾವು ಒಬ್ಬರನ್ನು ಒಬ್ಬರು ಕಂಡದ್ದು ಇದೇ ಮೊದಲಲ್ಲ.

ಹಶೀಮ—ನಿಮ್ಮನ್ನು ಮೊದಲು ನಾನು ನೋಡಿದ ಜ್ಞಾಪಕ ನಿಜವಾಗಿಯೂ ನನಗಿಲ್ಲ.

ದೊರೆ—ಕಾಡಿನಲ್ಲಿದ್ದ ಸರೋವರದಿಂದ ಇಲ್ಲಿಗೆ ಕರೆದುತಂದ ಹಾವು ನಾನೇಯೆ.

ಹಶೀಮ—ಅಂಥಾ ಭಯಂಕರವಾದ ರೂಪಿನಿಂದ ಇಂಥಾ ಮನೋಹರವಾದ ರೂಪಿಗೆ ಇಷ್ಟು ಜಾಗ್ರತೆಯಾಗಿ ಬಂದ ಬಗೆ ಹೇಗೆ?

ದೊರೆ—ಆ ಕಥೆ ದೊಡ್ಡದಾಗಿದೆ. ನಾವು ಭೋಜನ ಮಾಡಿಬಿಡುವ ತನಕ ಆ ಕಥೆ ಹೇಳುವುದನ್ನು ನಿಲ್ಲಿಸುತೇನೆ.

3ನೇ ಅಧ್ಯಾಯ

ಹಾವಿನ ಕಥೆ

ಅವರಿಬ್ಬರೂ ಒಟ್ಟಿಗೆ ಭೋಜನಮಾಡಿ ಸುವರ್ಣದ ಪಾತ್ರೆಯಿಂದ ಕೈಗೆ ನೀರ ಹಾಕಿ ತೊಳೆದುಕೊಂಡ ತರುವಾಯ ಸೇವಕರು ವಾಸನಾ ದ್ರವ್ಯಗಳನ್ನು ಒಪ್ಪಿಸಲು ಅವುಗಳನ್ನು ಆ ಉಭಯರೂ ಕೈಗೆ ಸವರಿಕೊಂಡರು. ಆ ದೊರೆಯನ್ನು ಕುರಿತು ಹಶೀಮನು

ಹಶೀಮ—ನಾನು ನಿಮ್ಮನ್ನು ಇದಕ್ಕೆ ಮುಂಚೆ ಸರ್ಪರೂಪವಾಗಿ ನೋಡಿ ಈ ಮನುಷ್ಯ ರೂಪದಲ್ಲಿ ನೋಡುವುದರ ರಹಸ್ಯವನ್ನು ಕೇಳಲಪೇಕ್ಷಿಸುತೇನೆ.

ಖಚರರಾಜ—(ನಗುತಾ) ಅಯ್ಯಾ ಹತೀಮ್, ನಾನು ಪರಿಸಂತತಿಗೆ ಸೇರಿದವನು. ನಾನು ಸರ್ಪರೂಪವನ್ನು ಹೊಂದುವುದಕ್ಕೆ ಮುಂಚೆ ನನ್ನ ಹೆಸರು ಷಾಂಷಹ ಎಂತ ಇತ್ತು. ಸುಲೇಮಾನನ ಆಳಿಕೆಯಲ್ಲಿ ನಮ್ಮ ಪರಿರಾಜ್ಯದ ಒಂದು ತೋಟದಲ್ಲಿ ಒಂದು ದಿವಸ ನಾನು ಕೂತಿದ್ದೆ. ಆಗ ಅತ್ಯಂತ ಹೀನ ಯೋಚನೆ ತೋರಿತು. ಸುಲೇಮಾನನಿಗೆ ನಮ್ಮ ಜಾತಿಯವರೆಲ್ಲಾ ವಿಧೇಯರಾಗಿರುವ ವಿಚಾರದಲ್ಲಿ ನನಗೆ ಸಹನ ಕಡಮೆಯಾಯಿತು. ಆದ್ದರಿಂದ ನನ್ನ ರಾಜ್ಯದ ಎಲ್ಲಾ ಕಡೆಯಿಂದಲೂ ಸೇನೆಯನ್ನು ಸೇರಿಸಿ ಮರುದಿವಸ ಭೂಮಿಯ ಮೇಲಿಳಿದು ಆದಂನ ವಂಶೀಯರಾದ ಮನುಷ್ಯವರ್ಗದವರೆಲ್ಲರನ್ನೂ ಕೊಂದು ಹಾಕಬೇಕೆಂದು ನಿಶ್ಚಯ ಮಾಡಿಕೊಂಡೆ. ತರುವಾಯ ಈ ಭೂಮಂಡಲ ವನ್ನೆಲ್ಲಾ ನನಗೋಸ್ಕರವಾಗಿಯೂ ನನ್ನ ಪ್ರಜೆಗಳಿಗೋಸ್ಕರವಾಗಿಯೂ ಹಿಡಿದುಕೊಂಡು ನಾನು ಏಕಛತ್ರಾಧಿಪತ್ಯವನ್ನು ಮಾಡಬೇಕೆಂದು ನನ್ನ ಉದ್ದೇಶ್ಯವಿತ್ತು.

ಹೀಗೆ ನಿಶ್ಚಯ ಮಾಡಿಕೊಂಡು ನನ್ನ ರಾಜ್ಯದ ಕೊನೇ ಗಡಿಯವರೆಗೂ ರೆಕ್ಕೆಯುಳ್ಳ ಚಾರರನ್ನು ಕಳುಹಿಸಿ, ಅಪಾಯಕರವಾದ ವಿಜಯಯಾತ್ರೆಗಾಗಿ ನಮ್ಮ ಉತ್ತಮವಾದ ಶೂರರೆಲ್ಲರೂ ಸಿದ್ಧಮಾಡಿಕೊಳ್ಳಬೇಕೆಂದೂ ಮಾರನೇ ದಿವಸ ಬೆಳಗ್ಗೆ ಆಯುಧ ಸಮೇತರಾಗಿ ಎಲ್ಲರೂ ಅರಮನೆಯ ಬಾಗಿಲಲ್ಲಿ ಕಾದಿರಬೇಕೆಂತಲೂ ಅಪ್ಪಣೆ ಮಾಡಿದೆ. ಸಾಯಂಕಾಲದ ಮೇಲೆ ನಾನು ವಾಡಿಕೆಪ್ರಕಾರ ನಿದ್ರೆಮಾಡಿ ಬೆಳಗಾದ ಮೇಲೆ ಎದ್ದು, ನನ್ನ ಸೇನೆಯನ್ನು ನೋಡಬೇಕೆಂದು ಹೋದೆ. ನಾನು ಅಪ್ಪಣೇ ಮಾಡಿದ್ದ ಪ್ರಕಾರ ಆಯುಧಪಾಣಿಗಳಾಗಿ ನಮ್ಮ ದಳವೆಲ್ಲಾ ಸೇರಬೇಕೆಂದು ಗೊತ್ತಾಗಿದ್ದ ಸ್ಥಳಕ್ಕೆ ದಂಡಿನವರು ಹೋಗಿದ್ದರು. ಆದರೆ ನಮ್ಮವರಿಗೆ ರೆಕ್ಕೆ ಇರಲಿಲ್ಲ. ನನಗೆ ಇದನ್ನು ಕಂಡು ಆಶ್ಚರ್ಯವಾಯಿತು. ಆ ಕ್ಷಣದಲ್ಲಿಯೇ ನನಗೆ ಸರ್ಪದ ರೂಪು ಬಂತು. ಆಗಿನಿಂದ ನಾನು ಭೂಮಿಯ ಮೇಲೆ ಹರದಾಡುತಾ ನನ್ನನ್ನು ಕಂಡ ಪ್ರಾಣಿಗಳಿಗೆಲ್ಲಾ ಅತ್ಯಂತ ಭಯಂಕರವಾಗಿ ಕಾಣಿಸುತಾ ಇದ್ದೆ. ಹಗಲು ರಾತ್ರಿಯೂ ನಾನು ದೇವರ ಧ್ಯಾನವನ್ನೂ, ಪ್ರಾರ್ಥನೆಯನ್ನೂ ಮಾಡುತಾ ಕಾಲವನ್ನು ಕಳದೆ. ಪ್ರಯೋಜನವಾಗಲಿಲ್ಲ. "ಮಾತಿಗೆ ತಪ್ಪಿದವರ ಹಣೇ ಬರಹವೆಲ್ಲಾ ಇಂಥಾದ್ದೇ", ಎಂದು ನನ್ನ ಕಿವಿಗೆ ಅಶರೀರವಾಕ್ಕು ಕೇಳುತ್ತಲೇ ಇತ್ತು. ಈ ಘೋರವಾದ ಶಬ್ದವು ನನಗೆ ನನ್ನ ಅಪರಾಧ ಜ್ಞಾಪಕಕ್ಕೆ ಬಂದು ನಾನು ನಡುಗುವ ಹಾಗೆ ಮಾಡಿತು. ಇಂಥಾ ದುಷ್ಟ ಯೋಚನೆ ನನ್ನ ಮನಸ್ಸಿಗೆ ಬಾರದಂತೆ ಕಾಪಾಡಬೇಕೆಂದು ಆ ಪರಾತ್ಪರ ವಸ್ತುವನ್ನು ಬೇಡಿಕೊಂಡು ಹರಕೆ ಹೊತ್ತುಕೊಂಡೆ. ಕಡೆಗೆ ಪುನಃ ಅಶರೀರವಾಕ್ಕಾಯಿತು. "ನಿನ್ನ ವಿಧಿ ಗೊತ್ತಾಯಿತು. ಯೆಮೆನ್ ದೇಶದ ರಾಜ ಪುತ್ರನಾದ ಹತೀಮು ಬರುವ ತನಕ ಈ ಕಾಡಿನಲ್ಲಿ ನೀನು ತಾಳ್ಮೆಯಿಂದ ಕಾದಿರು. ಅವನು ಬಂದಾಗ ಅವನಿಗೆ ಬೇಕಾದ್ದನ್ನು ಒದಗಿಸಿಕೊಡಬೇಕೆಂದು ಜ್ಞಾಪಕದಲ್ಲಿರಿಸಿ

ಕೊಂಡಿರು. ಪುನಃ ಪೂರ್ತಿಯಾಗಿ ಅವನ ಸೇವೆಮಾಡು. ಆಗ ನಿನಗೆ ಮೊದಲಿದ್ದ ಜನ್ಮ ಬರುವುದು. ಆ ಅಖಿಳಾಂಡ ಕೋಟಿ ಬ್ರಹ್ಮಾಂಡ ನಾಯಕನ ಪಾದಪಲ್ಲಿ ನಿನಗಾಗಿ ಅವನು ಹರಕೆ ಹೊತ್ತುದಕ್ಕಿಲ್ಲಾ ದೇವರ ಕಟಾಕ್ಷ ಉಂಟಾಗಿ ಅದರಂತೆ ನಡೆಯುವುದು ".

ಈ ಪ್ರಕಾರ ಅಗೋಚರವಾದ ವ್ಯಕ್ತಿಯಿಂದ ಧ್ವನಿ ಕೇಳಿ ಬಂತು.

ಹೀಗೆ ಸುಲೇಮಾನನ ಕಾಲದಿಂದ ಈ ಹೇಯವಾದ ಸರ್ಪದ ಜನ್ಮದಲ್ಲಿ ನಾನು ಕಾಲವನ್ನು ಕಳೆಯುತ್ತಿರಬೇಕೆಂದು ವಿಧಾಯಕವಾಯಿತು. ಈ ಕಾಡಿಗೆ ನಾನು ಬಂದು ಮೂವ್ವತ್ತು ವರುಷವಾಯಿತು. ಹಗಲೂರಾತ್ರಿಯೂ ನಿನ್ನ ಆಗಮನವನ್ನೇ ಕಾದಿದ್ದೆ. ಈ ದಿವಸ ನಿನ್ನನ್ನು ಕಂಡ ಕ್ಷಣದಲ್ಲಿಯೇ ನೀನೇ ಆ ಮಹಾ ಪ್ರಖ್ಯಾತನಾದ ಯೆಮೆನ್ ರಾಜಕುಮಾರನೆಂದು ತಿಳಿದುಕೊಂಡೆ. ಈಗ ನನಗೋಸ್ಕರ ನೀನು ದೇವರಲ್ಲಿ ಬೇಡಿಕೋ ಎಂದು ನಿನ್ನನ್ನು ನಾನು ಬೇಡಿಕೊಳ್ಳುತೇನೆ.

ಹತೀಮ—ಅಗತ್ಯವಾಗಿ ಆಗಲಿ. ಆದರೆ ಹೇಳು, ನೀನು ನಡಿಸದೇ ತಪ್ಪಿ ಹೋದ ವಾಗ್ದಾನ ಎಂಥಾದ್ದು ?

ಖಚರರಾಜ—ಸುಲೆಮಾನನ ಆಳಿಕೆಯಲ್ಲಿ ನಮ್ಮ ತಾತನು ಆ ದೊಡ್ಡ ದೊರೆಯಲ್ಲಿ ಪ್ರಮಾಣ ಪುರಸ್ಸರವಾಗಿ ಒಂದು ಮಾತನ್ನು ಗೊತ್ತುಮಾಡಿಕೊಂಡನು. ಅದೇನೆಂದರೆ: ನಮ್ಮ ವರ್ಗದವರು ಯಾರೂ ಮನುಷ್ಯ ವರ್ಗದವರು ಯಾರನ್ನೂ ಎಂದಿಗೂ ಬಾಧಿಸಕೂಡದು; ಅವರ ರಾಜ್ಯವನ್ನು ಯಾವ ಕಾರಣದಿಂದಲೂ ಬಂದು ಮುತ್ತಕೂಡದು; ಹಾಗೆ ಮಾಡಿದ್ದೇಯಾದರೆ ನಮ್ಮ ವರ್ಗದವರ ರೂಪು ಪಕ್ಷಿರೂಪಿಗೆ ತಿರುಗಿಸಲ್ಪಡುವುದು ಎಂಬುದಾಗಿ ಗೊತ್ತಾಯಿತು. ಆ ದಿವಸದಿಂದ ನನ್ನ ಆಳಿಕೆವರೆಗೆ ಖಂಡಿತವಾಗಿ ಈ ಸಮಯ ಬಂಧದಂತೆ ನಡೆದುಕೊಂಡು ಬಂತು. ಆದರೆ ನಾನು ಹಿಂದೆ ಹೇಳಿದ ಹಾಗೆ ದುಷ್ಟಗ್ರಹವು ನನ್ನ ಮನಸ್ಸನ್ನು ಹೊಕ್ಕಿತು. ಈಗ ಧೀರನಾದ ಹತೀಮನೆ, ನೀನು ನಿಮ್ಮ ವರ್ಗದವರ ಕಡೆ ಪ್ರತಿನಿಧಿಯಾಗಿ ಯಾವ ಶಿಕ್ಷೆಯನ್ನು ವಿಧಿಸಿದಾಗ್ಯೂ ನಾನು ಸಿದ್ಧವಾಗಿದೇನೆ. ನನಗೋಸ್ಕರ ನೀನು ದೇವರಲ್ಲಿ ಬೇಡಿಕೊಳ್ಳಬೇಕು ".

ಈ ಮಾತನ್ನು ಕೇಳಿ ಹತೀಮನು ಬಹುಭಕ್ತಿಯಿಂದ ಎದ್ದು ನಿಂತುಕೊಂಡು ಕೈಕಾಲುಗಳನ್ನು ತೊಳೆಯಿಸಿಕೊಂಡು ಬೇರೆ ಬಟ್ಟೆಯನ್ನು ಹಾಕಿಕೊಂಡು ಗುಜ್ಜ*ದ ಮೇಲೆ ಕೂತು ಕಿಬ್ಲ**ದ ಕಡೆಗೆ ತಿರುಗಿಕೊಂಡು ದೈವಾಗ್ರಹಕ್ಕೆ ಪಾತ್ರನಾದ

---

* ಮುಸಲ್ಮಾನರು ನವಾಸುಮಾಡುವುದಕ್ಕಾಗಿ ಹಾಸಿಕೊಂಡು ಕೂತುಕೊಳ್ಳುತಕ್ಕ ಶುದ್ಧವಾದ ಜಮುಖಾನ ಅಥವಾ ಚಾಪೆ.

** ಮಕ್ಕದಲ್ಲಿರತಕ್ಕ ಗುಡಿ. ಮುಸಲ್ಮಾನರು ಎಲ್ಲಿದ್ದಾಗ್ಯೂ ಇದರ ಕಡೆಗೆ ತಿರುಗಿಕೊಂಡೇ ನವಾಸುಮಾಡುತಾರೆ.

ಪುರುಷನಿಗೆ ಕಾರುಣ್ಯವನ್ನು ತೋರಿಸಬೇಕೆಂದು ಪ್ರಾರ್ಥನೆಮಾಡಿದನು. ತನ್ನ ಭಕ್ತನಾದ ಹಶೀಮನು ಮನಸ್ಸಿಟ್ಟುಮಾಡಿದ ಸ್ತೋತ್ರಕ್ಕೆ ದೇವರು ಪ್ರಸನ್ನನಾದನು. ಈ ಹಶೀಮನು ಯಹೂದಿಯುವರ ಮತಕ್ಕೆ ಸೇರಿದ್ದಾಗ್ಯೂ ಅವನು ಏಕದೇವಾರಾಧಕನಾಗಿದ್ದನು. ಆ ದೇವರನ್ನೇ ಹಶೀಮನು ಸ್ತುತಿಸಿ ಪೂಜಿಸುತಿದ್ದದು ಅವನ ಸೇವೆಯನ್ನೇ ಹಗಲು ರಾತ್ರಿಯು ಮಾಡುತಿದ್ದದು, ಹಶೀಮನು ಭಕ್ತಿಮಾರ್ಗವನ್ನು ಕುರಿತು ಒಂದು ಪುಸ್ತಕವನ್ನು ಬರೆದಿದಾನೆ. ಅದರಲ್ಲಿ ವಿಗ್ರಹಾರಾಧಕರು ಮಾಡುವ ಪೂಜಾದಿ ಕರ್ಮಗಳನ್ನು ತಿರಸ್ಕರಿಸಿದಾನೆ.

ಹಶೀಮನಿಗೆ ಅವಸಾನಕಾಲ ಪ್ರಾಪ್ತವಾದಾಗ ತನ್ನ ಸಮೀಪಬಂಧುಗಳಲ್ಲಿ ಹೆಂಗಸರು ಗಂಡಸರು ಎಲ್ಲರನ್ನೂ ಕರೆಯಿಸಿ ಅವರಿಗೆ ತನ್ನ ಕೊನೇ ಬುದ್ಧಿವಾದವನ್ನು ಹೇಳಿದನು: "ಅಯ್ಯಾ ಮಿತ್ರರೆ, ನಮ್ಮ ತಂದೆ ತಾತ ಮೊದಲಾದ ವಿಶಿಷ್ಟ ಪೂರ್ವಿಕರೂ ನಿಜವಾದ ದೇವರನ್ನು ಅರಿಯದೇ ಬಾಳಿದರು. ನಮಗೂ ಕೂಡ ಏನೂ ತಿಳಿಯದು. ಆದರೆ ಜಾಗ್ರತೆಯಾಗಿ ಒಬ್ಬ ಪುರುಷಶ್ರೇಷ್ಠ ಹುಟ್ಟುತಾನೆ. ಇವನೇ ಕೊನೇ ಮತೋದ್ಧಾರಕ, ಎಲ್ಲರಿಗಿಂತಲೂ ಶ್ರೇಷ್ಠವಾದವನು. ನನಗಿರುವ ಭವಿಷ್ಯತ್ ಜ್ಞಾನದಿಂದ ನಾನು ಇದನ್ನು ಹೇಳುತೇನೆ. ನನ್ನ ಕಾಲಜ್ಞಾನ ನಿಜವಾಗಿ ನಡೆಯುವ ತನಕ ನಿಮ್ಮಲ್ಲಿ ಅನೇಕರು ಬದುಕಿರುತೀರಿ. ನಾನು ಹೇಳುವ ಪುರುಷನು ದೇವರಿಂದ ದತ್ತವಾದ ನಿಜವಾದ ಧರ್ಮವನ್ನು ಲೋಕಕ್ಕೆ ಬೋಧಿಸುತಾನೆ. ಅವರು ಪ್ರಪಂಚದಲ್ಲಿ ಅವತರಿಸಿದಾಗ ಅದುವರೆಗೆ ಈ ಲೋಕವನ್ನು ಬಿಟ್ಟು ಹೊರಟುಹೋಗಿರತಕ್ಕ ಹಶೀಮನ ಪರವಾಗಿ ಒಂದು ಮಾತನ್ನು ಹಾಕಿ ನನ್ನನ್ನು ಹರಿಸಬೇಕೆಂದು ಹೇಳುವರಾಗಿ, ಎಂದನು. ಇದನ್ನು ಕೇಳಿ ಹಶೀಮನ ಸ್ನೇಹಿತರು—ಅಂಥ ಒಳ್ಳೇಕಾಲ ಬರುವವರೆಗೆ ನಮ್ಮಲ್ಲಿ ಯಾರಾದರೂ ಬದುಕಿರುವುದು ನೀನು ಉತ್ಕ್ರಮಣ ಕಾಲದಲ್ಲಿ ಹೇಳಿದ್ದನ್ನು ಅವನಿಗೆ ನಾವು ಹೇಳುವುದೂ ಸಹ ನಿಶ್ಚಯವೆ? ಎಂದು ಹೇಳಲು, ಹಶೀಮನು—ನಮ್ಮ ಬಾಳು ಅಸ್ಥಿರವಾದ್ದು; ನಾನು ಕೇಳಿಕೊಂಡದ್ದನ್ನು ನಿಮ್ಮ ಮಕ್ಕಳಿಗೆ ತಿಳಿಸಿ, ಅವರು ಅವರ ಮಕ್ಕಳಿಗೆ ತಿಳಿಸಲಿ, ಈ ಕೊನೇದೇ ನಾನು ಕೇಳಿಕೊಳ್ಳುವ ಉಪಕಾರ, ಎಂದು ನುಡಿದನು.

ಪೈಗಂಬರನಾದ ಮೊಹಮ್ಮದನ ದಿವಸದಲ್ಲಿ ಹಶೀಮನ ಮಗಳನ್ನೂ ಆ ಸಂಗಡದ ಜನರನ್ನೂ ಸೆರೆಹಿಡಿದುಕೊಂಡು ಮೊಹಮ್ಮದನ ಮುಂದೆ ಕರೆದುಕೊಂಡು ಹೋದರು. ಮೊಹಮ್ಮದನು ನಿಜವಾದ ಮತವನ್ನು ತಾಯಿ ಸಂಗಡದವರು ಅಂಗೀಕಾರ ಮಾಡಿದರೆ ಅವರನ್ನು ಬಿಡುಗಡೆಮಾಡುವುದೆಂದು ಅಪ್ಪಣೇ ಮಾಡಿದನು. ತಾಯಿ ಸಂಗಡದವರು ಆ ಮಾತನ್ನು ಅಲಕ್ಷ್ಯವಾಗಿ ಕಂಡು ತಮ್ಮ ಪೂರ್ವಿಕರ ಮತವನ್ನು ತಾವು ಬಿಡುವುದಿಲ್ಲವೆಂದು ಹೇಳಿದರು. ಅದರ ಮೇಲೆ ಅವರೆಲ್ಲರಿಗೂ ಶಿರಚ್ಛೇದನ ಮಾಡುವುದು ಎಂದು ಅಪ್ಪಣೆಕೊಟ್ಟನು. ವಧ್ಯಸ್ಥಳಕ್ಕೆ ತಾಯಿ ಜನರನ್ನು ಕರೆದುಕೊಂಡುಹೋದರು. ಆಗ ಹಶೀಮನ ಮಗಳು ತಮ್ಮ ತಂದೆ

ಹೇಳಿದ ಮಾತನ್ನು ಜ್ಞಾಪಿಸಿಕೊಂಡು ಮೊಹಮ್ಮದನ ಸಂಗಡದವರನ್ನು ಕುರಿತು— ನಿಮ್ಮ ಕೆಲಸವನ್ನು ಸ್ವಲ್ಪಹೊತ್ತು ನಿಧಾನಿಸಿ, ದೈವಸೃಷ್ಟಿಯಲ್ಲಿ ಸರ್ವಶ್ರೇಷ್ಠನಾದ ಮೊಹಮ್ಮದನ ಬಳಿಗೆಹೋಗಿ, ಹತೀಮನ ಮಗಳು ತನ್ನ ಜನರ ವಿಚಾರವಾಗಿ ಅರಿಕೆ ಮಾಡಿಕೊಳ್ಳುವ ಕೆಲವು ವಿಷಯವನ್ನು ಕೇಳಬೇಕೆಂದು ವಿನಯವಾಗಿ ಬೇಡಿಕೊಳ್ಳು ತ್ತಾಳೆ; ಎಂದು ಹೇಳಿ ಎಂಬದಾಗಿ ಉಸುರಿದಳು. ಪೈಗಂಬರನು ಈ ವರ್ತಮಾನ ವನ್ನು ಕೇಳಿ, ಆಕೆ ಔದಾರ್ಯಕ್ಕೆ ಶಾಶ್ವತವಾದ ಕೀರ್ತಿಯನ್ನು ಹೊಂದಿದಂಥಾ ಪುರುಷನ ಮಗಳೆಂತಲೂ ಆದ್ದರಿಂದ ಅವಳನ್ನು ಬಿಡುಗಡೆಮಾಡುವುದೆಂತಲೂ ಅಪ್ಪಣೆ ಕೊಟ್ಟನು. ಚಾರನು ಹಿಂದಕ್ಕೆ ಬಂದು ಅವಳನ್ನು ಕುರಿತು—ನಿನ್ನನ್ನು ಈ ಕ್ಷಣವೇ ಬಿಡುಗಡೆಮಾಡಿ ನಿಮ್ಮ ದೇಶಕ್ಕೆ ಕರೆದುಕೊಂಡುಹೋಗಿಬಿಡಬೇಕೆಂತಲೂ ವಿರೋಧಿ ಗಳಾಗಿರತಕ್ಕ ಜನರು ಮರಣ ಹೊಂದಬೇಕೆಂತಲೂ ಅಪ್ಪಣೆಯಾಗಿದೆ ಎಂದು ಹೇಳಿದನು. ಈ ಶಿಕ್ಷೆಯ ಸಂಗತಿಯನ್ನು ಕೇಳಿ ಹತೀಮನ ಮಗಳು ಮೊಹಮ್ಮದನನ್ನು ಕುರಿತು, "ಈ ನಿನ್ನ ಕ್ರೌರ್ಯಕ್ಕೆ ನನ್ನ ಮಿತ್ರರನ್ನು ಗುರಿಮಾಡಿ ಬಿಡುಗಡೆಯನ್ನಾಗಲಿ ತುಚ್ಛವಾದ ಜೀವಿತವನ್ನಾಗಲಿ, ಅಂಗೀಕರಿಸುವ ಮಟ್ಟಿಗೆ ನಮ್ಮ ತಂದೆಯ ಉದಾರವಾದ ಬುದ್ಧಿಯು ನನ್ನಲ್ಲಿ ಅಷ್ಟು ಕಡಮೆಯಾಗಿದೆ ಎಂದು ತಿಳಿಯಬೇಡೈ, ನನ್ನ ಜೊತೆಯವರಿಗಾದ ವಿಧಿಯೇ ನನಗೂ ಆಗಲಿ," ಎಂದು ಘೀಳರಿಸಿ ಹೇಳಿದಳು. ಆ ವಧಕರು ಹೋಗಿ— ಹತೀಮನ ಮಗಳು ಏನು ಮಾಡಿದಾಗ್ಯೂ ತನ್ನ ಜನರನ್ನು ಬಿಟ್ಟುಕೊಡುವುದಿಲ್ಲವೆಂದು ಮೊಹಮ್ಮದನಿಗೆ ಅರಿಕೆ ಮಾಡಿದರು ಆ ಪೈಗಂಬರನು ಅವಳ ಉದಾರವಾದ ನಡತೆ ಯನ್ನು ನೋಡಿ ಆಶ್ಚರ್ಯಪಟ್ಟು, ಆ ತಂದೆಗೋಸ್ಕರವೂ ಆ ಮಗಳಿಗೋಸ್ಕರವೂ ತಾಯಿ ಜನರೆಲ್ಲರನ್ನೂ ಬಿಡುಗಡೆಮಾಡುವುದೆಂದು ಅಪ್ಪಣೆ ಮಾಡಿದನು.

ಹತೀಮನ ಮಗಳಿಗೂ ಅವಳಕಡೆ ಜನರಿಗೂ ಬಿಡುಗಡೆಯಾದ ಮೇಲೆ, ಮರಣಕಾಲದಲ್ಲಿ ತಂದೆಯು ಮಗಳಿಗೆ ಹೇಳಿದ ಮಾತು ಜ್ಞಾಪಕಕ್ಕೆ ಬಂತು. ಮೊಹಮ್ಮದನ ಭೇಟಿಯಾಗಬೇಕೆಂದು ಆಕೆ ಕೇಳಿಕೊಂಡಳು. ಅವನು ಆಗಲೆಂದು ಒಪ್ಪಿದ. ಆಗ ತಮ್ಮ ತಂದೆಯು ಉತ್ಕ್ರಮಣ ಕಾಲದಲ್ಲಿ ಹೇಳಿದ ಭವಿಷ್ಯತ್ ಸಂಗತಿಯನ್ನು ಹೇಳಿ ಅವಳೂ ಅವಳ ಜನರೂ ಸಹಾ ಮುಸಲ್ಮಾನ್ ಮತವನ್ನು ಅವಲಂಬಿಸಿದರು.

4ನೇ ಅಧ್ಯಾಯ

ನಾಗಲೋಕದವರ ಚರಿತ್ರೆ (ಸಾಗಿದ್ದು)

ಇದು ಹಾಗಿರಲಿ, ನಾಗಲೋಕದ ಪರಿದೊರೆಯ ವಿಚಾರವನ್ನು ಮುಂದಕ್ಕೆ ಸಾಗಿಸೋಣ. ಹತೀಮನು ನಾಗಲೋಕದವರ ಕ್ಷೇಮಕ್ಕಾಗಿ ದೇವರನ್ನು ಪ್ರಾರ್ಥಿಸಿ

ಬೇಡಿಕೊಳ್ಳಲು, ದೊರೆಗೂ ಪ್ರಜೆಗಳಿಗೂ ಪೂರ್ವದ ಸ್ಥಿತಿ ಬಂತು. ಆ ನಾಗಲೋಕದ ಪರಿಗಳು ಹತೀಮನಿಗೆ ತಮ್ಮ ಕೃತಜ್ಞತೆಯನ್ನು ತಿಳಿಸಿದ ತರುವಾಯ

ದೊರೆ—ನಮ್ಮ ಜನರ ಕಷ್ಟವನ್ನು ನೀನು ನಿವಾರಣಮಾಡಬೇಕೆಂದು ಆಗಿದ್ದ ಈಶ್ವರ ನಿಯಾಮಕದ ಛಾಯೆ ಬಹಳ ಕಾಲಕ್ಕೆ ಗೊತ್ತಿತ್ತು. ನೀನು ಇಷ್ಟು ಕಷ್ಟ ಪಟ್ಟುಕೊಂಡು ಇಷ್ಟುದೂರ ಬರಲು ಕಾರಣವೇನು? ನೀನು ಎಲ್ಲಿಗೆ ಹೋಗುತೀಯೆ ?

ಹತೀಮು—ಬಾರ್‌ಸಾಕ್ ದ್ವೀಪವನ್ನು ನೋಡಬೇಕೆಂಬುದು ನನ್ನ ಕೋರಿಕೆ. ಇದರ ಹಾಗೆ ಇರುವ ಒಂದು ಮುತ್ತನ್ನು ಸಂಪಾದಿಸಬೇಕೆಂದಿದೇನೆ.

ಹೀಗೆ ಹೇಳಿ ಹಸನ್‌ಬನುವಿನಲ್ಲಿದ್ದ ಮುತ್ತಿನಮಾದ್ರಿಯ ಹಾಗೆ ಬೆಳ್ಳಿಯಲ್ಲಿ ತಾನು ಮಾಡಿಸಿ ತಂದಿದ್ದನ್ನು ತೋರಿಸಿದ. ಷಾಮುಸ್‌ಷಹನು ಅದನ್ನು ಸ್ವಲ್ಪಹೊತ್ತು ನೋಡಿ ಹತೀಮನನ್ನು ಕುರಿತು

ದೊರೆ—ಬಾರ್‌ಸಾಕ್ ರಾಜಪುತ್ರನಲ್ಲಿ ಸರಿಯಾಗಿ ಇಷ್ಟುಗಾತ್ರ ಇರುವ ಮೌಕ್ತಿಕ ಇರುವುದು ನಿಜ. ಅದು ಅವನಿಂದ ದೊರೆಯಬೇಕಾದರೆ, ಒಂದು ಕೆಲಸವಾಗ ಬೇಕು. ಆ ಮುತ್ತಿನ ಪೂರ್ವವೃತ್ತಾಂತವನ್ನು ಯಾರು ಹೇಳುತಾನೆಯೋ ಅವನಿಗೆ ಆ ಮುತ್ತನ್ನೂ ತನ್ನ ಮಗಳನ್ನೂ ಕೊಡುತಾನೆ. ಆದರೆ ಆ ದ್ವೀಪಕ್ಕೆ ನೀನು ಹೇಗೆ ಹೋಗುತೀಯೆ? ಅದು ಬಹಳ ದೂರವಾಗಿದೆ. ದಾರಿ ಅಪಾಯದ್ದು

ಹತೀಮು—ಕೆಟ್ಟದೇನಾದರೂ ಅದಕ್ಕೆ ನಾನು ಸಿದ್ಧನಾಗಿದೇನೆ. ಅದೃಷ್ಟದಲ್ಲಿದ್ದ ಹಾಗಾಗಲಿ.

ದೊರೆಯಾದ ಷಾಮುಸ್‌ಷಾ—ಆ ದಾರಿಯಲ್ಲಿ ಮನುಷ್ಯರನ್ನು ನುಂಗಿಕೊಳ್ಳುವ ರಾಕ್ಷಸರಿದ್ದಾರೆ. ಜೀವಸಹಿತ ತಪ್ಪಿಸಿಕೊಂಡು ಹೋಗುವುದು ಕಷ್ಟ.

ಹತೀಮು—ದೇವರು ನನ್ನನ್ನು ಕಾಪಾಡುತಾನೆ.

ಷಾಮುಸ್‌ಷಾ—ನಿಜ, ನಿನ್ನ ಕ್ಷೇಮಾರ್ಥವಾಗಿ ನಮ್ಮ ಪ್ರಜೆಗಳಲ್ಲಿ ಅತ್ಯಂತ ಧೈರ್ಯಶಾಲಿಗಳಾದವರು ನಿನ್ನ ಸಂಗಡ ಮಾರ್ಗದರ್ಶಿಗಳಾಗಿ ಬರುತಾರೆ.

ದೊರೆಯು ಆ ಪ್ರಕಾರ ಹೇಳಿ, ಸುತ್ತಲೂ ಇದ್ದ ತನ್ನ ಜನರನ್ನು ಕರೆದು ಷಾಮುಸ್‌ಷಾ—ಮಿತ್ರರ ಈ ಪುಣ್ಯಾತ್ಮನ ದೆಸೆಯಿಂದ ನಮಗೆ ಬಂಧನ ವಿಮೋಚನೆ ಯಾಯಿತು. ಈಗ ಆತನು ಬಹು ಕಷ್ಟಕರವಾದ ಪ್ರಯಾಣವನ್ನು ಮಾಡ ಬೇಕೆಂದಿದಾನೆ. ಆತನ ಕೆಲಸವೋ ಬಹು ದೊಡ್ಡದು, ದಾರಿಯೋ ಅಪಾಯದಿಂದ ತುಂಬಿರತಕ್ಕದ್ದು. ನಿಮ್ಮ ದೊರೆಯಲ್ಲಿ ನಿಮಗೆ ಅಭಿಮಾನವಿರುವುದರಿಂದ ನಾನು ಹೇಳುತೇನೆ. ನಿಮ್ಮಲ್ಲಿ ಅತ್ಯಂತ ಧೈರ್ಯಶಾಲಿಗಳಾದವರು ಈ ರಾಜಕುಮಾರನೊಡನೆ ಹೋಗಬೇಕು. ದಾರಿಯಲ್ಲಿ ಆತನನ್ನು ಕ್ಷೇಮವಾಗಿ ಕರೆದುಕೊಂಡುಹೋಗಬೇಕು.

ಆಗ ಪರಿಗಳು ತಾವಾಗಿ ಬಂದು

ಪರಿಗಳು—ಬುದ್ಧಿ, ಈ ರಾಜಕುಮಾರನಿಗೆ ಸಂಭವಿಸುವ ಕಷ್ಟಗಳು ಎಂಥಾವು ? ಹೇಳಬೇಕು. ಅವುಗಳನ್ನು ನಾವು ಮನಃಪೂರ್ತಿಯಾಗಿ ನಿವಾರಣ ಮಾಡಲು ಯತ್ನ ಮಾಡುತೇವೆ.

ಆಗ ಆ ನಾಗಲೋಕದ ದೊರೆಯು ಹತೀಮು ಪ್ರಯಾಣಮಾಡಿ ಬಂದಿರುವ ಉದ್ದೇಶ್ಯವನ್ನು ವಿಶದವಾಗಿ ವಿವರಿಸಿ ಹೇಳಲು, ಅದನ್ನು ಕೇಳಿ ಭಯಭ್ರಾಂತವಾಗಿ

ಪರಿಗಳು—ಆ ರಾಕ್ಷಸರೊಡನೆ ಯುದ್ಧ ಪ್ರಮೇಯ ಸಂಭವಿಸಿದರೆ ಅನುಭವಶಾಲಿಗಳಾದ ಸೇನಾನಾಯಕರು ಒಬ್ಬರಿರಬೇಕು, ಹಾಗಿರುವ ರೀತಿಯಲ್ಲಿ ನಮ್ಮೊಡನೆ ತಮ್ಮ ಸವಾರಿ ದಯಮಾಡಿಸುವುದಾದರೆ, ಈ ಕ್ಷಣ ನಾವು ಹೊರಡುವುದಕ್ಕೆ ಸಿದ್ಧವಾಗಿದೇವೆ. ಇಲ್ಲವಾದರೆ ನಮ್ಮನ್ನು ಕ್ಷಮಿಸಿಬಿಡಬೇಕು.

ಷಾಮಸ್‌ಷಾ—ಒಳ್ಳೆಯದು, ಯೆಮೆನ್ ದೇಶದ ರಾಜಕುಮಾರನ ಸೇವೆಗಾಗಿ ನನ್ನ ಕೈಲಾದ್ದನ್ನೆಲ್ಲಾ ಮಾಡಬೇಕಾದ್ದು ನ್ಯಾಯವೆ. ಆದ್ದರಿಂದ ಆತನ ಕ್ಷೇಮಕ್ಕಾಗಿ ದಾರಿಯಲ್ಲಿ ಅವನಿಗೆ ಯಾವ ಅಪಾಯವೂ ಇಲ್ಲದ ಹಾಗೆ ನಾನು ಸ್ವಲ್ಪ ದೂರದಲ್ಲಿ ಬರುತೇನೆ.

ಆ ಕ್ಷಣದಲ್ಲಿಯೇ ಆ ದೊರೆಯು ಸಿದ್ಧಮಾಡಿಕೊಂಡು ಮುದ್ದಾದ ಅಂಗಿಯನ್ನು ತೊಟ್ಟುಕೊಂಡು, ಹತೀಮುನನ್ನು ಒಂದು ಚಿನ್ನದ ಪಲ್ಲಕ್ಕಿಯಲ್ಲಿ ಕೂರಿಸಿ ನಾಲ್ಕು ಜನ ತಮ್ಮ ಹೆಗಲಮೇಲೆ ಹೊತ್ತುಕೊಂಡು ಹೋಗುವಂತೆ ಅಪ್ಪಣೇ ಮಾಡಿದನು. ಆ ಅಪ್ಪಣೇ ಪ್ರಕಾರ ನಡಿಸಿದರು. ಅತಿವೇಗವಾಗಿ ಹಾರುವ ರಕ್ಕೆಗಳನ್ನುಳ್ಳ ಪರಿಗಳು ಮಂಚದ ಕಾಲನ್ನು ಒಬ್ಬೊಬ್ಬರು ಒಂದೊಂದರ ಪ್ರಕಾರ ಹೊತ್ತುಕೊಂಡು ಅಂತರಿಕ್ಷಕ್ಕೆ ಹಾರಿದರು. ಮೂರು ಹಗಲು ಮೂರು ರಾತ್ರೆ ಹಾರಿಹೋಗುತ್ತಲೇ ಇದ್ದರು. ಆಗ ತಮ್ಮ ವಶದಲ್ಲಿರುವ ಪುರುಷನಿಗೆ ಅನ್ನ ಪಾನಗಳನ್ನು ಒದಗಿಸುವುದಕ್ಕಾಗಿ ಕೆಳಕ್ಕೆ ಇಳಿದರು. ಅವರು ಇಳಿದ ಸ್ಥಳವು ರಾಕ್ಷಸರ ರಾಜ್ಯವಾಗಿತ್ತು. ಈ ಸಂಗತಿಯು ಆ ಪರಿಗಳಿಗೆ ಗೊತ್ತಿರಲಿಲ್ಲ. ಇಬ್ಬರು ಪರಿಗಳು ಆಹಾರವನ್ನು ಹುಡುಕಿಕೊಂಡು ಹೋದರು. ನಿಂತ ಇಬ್ಬರು ಹತೀಮುನನ್ನು ಕಾದುಕೊಂಡಿದ್ದರು. ಆಗ ರಾಕ್ಷಸರ ಒಂದು ಗುಂಪು ಬೇಟೆಗೆ ಹೋಗಿದ್ದು ಈ ದಾರಿಯಲ್ಲಿ ಬಂತು. ಅಲ್ಲಿ ಮನುಷ್ಯವರ್ಗದ ಒಬ್ಬನು ಬಂಗಾರದ ಮಂಚದ ಮೇಲೆ ಮಲಗಿರುವುದನ್ನೂ, ಇಬ್ಬರು ಪರಿಗಳು ಅವನ ಪಕ್ಕದಲ್ಲಿ ನಿಂತಿರುವುದನ್ನೂ ಕಂಡು ಪೂರ್ವಭಾವಿಯಾಗಿ ಮಾಡಬೇಕಾದ ಮತ್ತೆ ಯಾವ ಕೆಲಸವೂ ಇಲ್ಲದೆ ಅವರುಗಳನ್ನು ಹಿಡಿದುಕೊಂಡರು. ರಾಕ್ಷಸರು ಸಂಖ್ಯೆಯಲ್ಲಿ ವಿಶೇಷವಾಗಿಯೂ, ಬಂದವರಲ್ಲಿ ಅಕಸ್ಮಾತ್ತಾಗಿಯೂ ಇದ್ದ ಕಾರಣ, ಆ ಇಬ್ಬರು ಪರಿಗಳಿಗೂ ಗಾಬರಿಯಾಗಿ ಅವರು ಸ್ವಲ್ಪವೂ ಎದುರಿಸಲಾರದೆ ಹೋದರು. ಮೊದಲು ಅವರು ಓಡಿಹೋಗುವುದಕ್ಕೆ ತೊಡಗಿದರು. ಆದರೆ ನಿರಾಶೆಯಿಂದ ಧೈರ್ಯ ಹುಟ್ಟಿತು. ತರುವಾಯ ಅವರು ಕೈಲಾದ ಮಟ್ಟಿಗೂ ಶತ್ರುಗಳನ್ನು ಹೊಡೆಯಲು ಆರಂಭಿಸಿದರು. ಶತ್ರುಗಳಲ್ಲಿ ಅನೇಕರು ಸತ್ತುಹೋದರು. ಕೊನೆಗೆ ರಾಕ್ಷಸರೇ

ಜಯ ಹೊಂದಿದರು. ಆ ಇಬ್ಬರು ಪರಿಗಳನ್ನೂ ಹತೀಮನನ್ನೂ ಸೆರೆಯಾಗಿ ಹಿಡಿದು ಕೊಂಡು ರಾಕ್ಷಸ ಪ್ರಭುವಿನ ಮನೆಗೆ ಕರೆದುಕೊಂಡು ಹೋದರು.

ರಾಕ್ಷಸ ಪ್ರಭು—(ಪರಿಗಳನ್ನು ಕುರಿತು ಮೊದಲು) ಈ ಮನುಷ್ಯ ಯಾರು ? ಇವನನ್ನು ಎಲ್ಲಿಂದ ಕರೆದು ತಂದಿರಿ ?

ರಾಕ್ಷಸರು—ಇವನು ಯೆಮೆನ್ ರಾಜ್ಯದ ದೊರೆಮಗನಾದ ಹತೀಮ ; ಈತನ ದಯ ದಿಂದ ನಮಗೂ ನಮ್ಮ ದೊರೆಯಾದ ಪಾಮಸ್ ಷಹನಿಗೂ ಪ್ರಾಣ ಬಂತು. ಅಯ್ಯಾ ರಾಕ್ಷಸೇಂದ್ರನೆ, ಧೀರನಾದ ಈ ಪುರುಷನಿಗೋಸ್ಕರ ನಮ್ಮನ್ನು ಪ್ರಾಣ ಸಹಿತ ಬಿಡು. ಆತನಿಗೆ ಯೇನಾದರೂ ಲೇಶ ಕುಂದಕವಾದಾಗ್ಯೂ ನಿನ್ನ ಪರಿಣಾಮವಾಗಲಾರದು.

ರಾಕ್ಷಸೇಂದ್ರ—(ಇದನ್ನು ಕೇಳಿ) ಇದೇನು ವರ್ತಮಾನ ? ಅನೇಕ ಶತಮಾನಗಳಿಂದ ಪಾಮಸ್‌ಷಹನ ಸುದ್ದಿಯೇ ಇರಲಿಲ್ಲ. ಅವನು ಈಗ ಜೀವಂತನಾಗಿದಾನೆಂದು ನೀವು ಹೇಗೆ ಹೇಳಬಲ್ಲಿರಿ ?

ಆಗ ಪರಿಗಳು ತಮ್ಮ ದೊರೆಗೆ ಸಂಬಂಧಪಟ್ಟ ಸಂಗತಿಗಳನ್ನೆಲ್ಲಾ ವಿಸ್ತಾರವಾಗಿ ಹೇಳಿದರು. ಇದನ್ನು ಕೇಳಿ ತರುವಾಯ ಮುಂದೆ ಯಾವ ದಾರಿ ಹುಡುಕಬೇಕೆಂದು ಯೋಚಿಸುವವನ ಹಾಗೆ ರಾಕ್ಷಸ ರಾಜನು ಬಹಳ ಹೊತ್ತು ಸುಮ್ಮನೆ ಮೌನ ವಾಗಿದ್ದನು. ಕೊನೆಗೆ ಒಂದು ನಿಷ್ಕರ್ಷೆ ಮಾಡಿಕೊಂಡು—ಈ ಮನುಷ್ಯನನ್ನು ಇಬ್ಬರು ಪರಿಗಳನ್ನು ಅತ್ಯಂತವಾಗಿ ಆಳವಾದ ನಮ್ಮ ಗುಹೆಗೆ ಕರೆದುಕೊಂಡು ಹೋಗಿ, ಅಲ್ಲಿ ನಾಳೆ ಬೆಳಗಿನವರೆಗೂ ಭದ್ರವಾಗಿ ಇಟ್ಟಿರಿ. ಆಮೇಲೆ ಇವರನ್ನು ನುಂಗಿ ಕೊಳ್ಳೋಣ, ಎಂದು ಅಪ್ಪಣೆ ಮಾಡಿದನು. ಅದರಂತೆ ಹತೀಮನನ್ನೂ ಅವನ ಜೊತೆ ಯಲ್ಲಿದ್ದ ಇಬ್ಬರನ್ನೂ ಕತ್ತಲೆಯಾಗಿ ಅಸಹ್ಯವಾಗಿರುವ ಗುಹೆಗೆ ಕೂಡಿದರು.

ಅತ್ತ ಆಹಾರದ ಸಾಮಾನುಗಳನ್ನು ಹುಡುಕಿಕೊಂಡು ಹೋಗಿದ್ದ ಇಬ್ಬರು ಪರಿಗಳು ಹಿಂದಕ್ಕೆ ಬಂದು ಹತೀಮನನ್ನು ತಾವು ಬಿಟ್ಟಿದ್ದ ಕಡೆ ನೋಡಲಾಗಿ ಅಲ್ಲೆಲ್ಲಾ ರಕ್ತ ಚೆಲ್ಲಾಡಿರತಕ್ಕದ್ದನ್ನೂ ಶವಗಳು ಬಿದ್ದಿರುವುದನ್ನೂ ಕಂಡು ಆಶ್ಚರ್ಯಪಟ್ಟು ಹತೀಮನನ್ನೂ ಅವನನ್ನೂ ಕಾಯುಕೊಂಡಿದ್ದವರನ್ನೂ ಹುಡುಕಿದರು. ಯಾರೂ ಸಿಕ್ಕಲಿಲ್ಲ, ಆಗ ಅವರಿಬ್ಬರು ತಮ್ಮೊಳಗೆ—ಈ ರಾಕ್ಷಸರು ಯಾವ ಸಂತತಿಯವರು ? ಇವರನ್ನೂ ಇಲ್ಲಿ ಕೊಂದುಹಾಕಿರುವ ಬಗೆ ಹೇಗೆ ? ಹತೀಮನೂ ಅವನ ಜೊತೆ ಗಾರರೂ ಯೇನಾದರು ? ಈ ಪ್ರಾಂತ ಓಡಿಯಾಡಿ ಹಾವಳಿ ಮಾಡತಕ್ಕ ಅಸುರರು ಇವರನ್ನು ಹೊಡೆದಿರಬಹುದು. ನಿಶ್ಚಯವನ್ನು ತಿಳಿದುಕೊಂಡು ನಮ್ಮ ದೊರೆಗೆ ವರ್ತಮಾನ ಕೊಡೋಣ, ಎಂದು ಮಾತನಾಡಿಕೊಂಡರು. ಈ ಪ್ರಕಾರ ನಿಷ್ಕರ್ಷೆ ಮಾಡಿಕೊಂಡು ತಮ್ಮ ಜೊತೆಗಾರರ ಶವಗಳು ಸಿಕ್ಕಬಹುದೆಂದು ನಿರೀಕ್ಷಿಸಿಕೊಂಡು ಆ ಸ್ಥಳದ ಸಮೀಪಕ್ಕೆ ಹೋದರು. ಹೀಗೆ ಹುಡುಕುತಾ ಹೋಗುವಾಗ ಒಬ್ಬ ರಾಕ್ಷಸನು ಬಲವಾಗಿ ಪೆಟ್ಟು ತಗಲಿ ಪ್ರಾಣ ಹೋಗದೆ ಬಿದ್ದಿದ್ದನು ; ಆತನಿಗೆ ಜಾಗ್ರತೆಯಾಗಿ

ನೀರನ್ನು ತಂದುಕೊಟ್ಟು ಅವನ ಗಾಯಕ್ಕೆ ಚಿಕಿತ್ಸೆ ಮಾಡಲು ಅದು ಜಾಗ್ರತೆಯಾಗಿ ಗುಣವಾಯಿತು. ಅವನನ್ನು ಕುರಿತು

ಪರಿಗಳು—ನೀವು ಯಾರು ? ಯಾವ ಕುಲಕ್ಕೆ ಸೇರಿದವರು ?

ರಕ್ಕಸ—ಮುಕರ್ಣನೆಂಬುವನು ಅಧಿಪತಿಯಾಗಿರತಕ್ಕ ಕುಲಕ್ಕೆ ಸೇರಿದವರು. ನಾವು ನಮ್ಮವರು ಕೆಲವರು ಸಮೀಪದಲ್ಲಿ ಬೇಟೆಯಾಡುತಿದ್ದವು. ಆಗ ಅಕಸ್ಮಾತ್ತಾಗಿ ಇಬ್ಬರು ಪರಿಗಳನ್ನೂ ಒಬ್ಬ ಮನುಷ್ಯನನ್ನೂ ಕಂಡೆವು. ಅವರಿಗೂ ನಮಗೂ ಜಗಳವಾಯಿತು. ಆಗ ನನಗೆ ಈ ರೀತಿ ಪೆಟ್ಟಾಯಿತು. ರಾಕ್ಷಸರು ಜೈಶೀಲ ರಾದರು. ಇದುವರೆಗೆ ತಮ್ಮ ಶತ್ರುಗಳಾದ ಪರಿಗಳನ್ನೂ ಮನುಷ್ಯನನ್ನೂ ಹಿಡಿದು ತಿಂದು ಹಬ್ಬ ಮಾಡಿಕೊಳ್ಳುತಾ ಇರಬಹುದು.

ಪರಿಗಳು ಇದನ್ನು ಕೇಳಿ ಜಾಗ್ರತೆಯಾಗಿ ಆ ರಕ್ಕಸನನ್ನು ಎತ್ತಿಕೊಂಡು ತಮ್ಮ ದೇಶಕ್ಕೆ ಮೂರುದಿನದಲ್ಲಿ ಹೋಗಿ ತಲಪಿ ಏದುತಾ ಷಾಮುಸ್‌ಷಹನ ಮುಂದೆ ಹೋಗಿ ನಿಂತುಕೊಂಡರು. ಆಗ ಆ ದೊರೆಯು—ಇದೇನು ? ಯೆಮೆನ್ ರಾಜ್ಯದ ದೊರೆ ಮಗನೊಡನೆ ನಿಮ್ಮನ್ನು ಚಾರ್‌ಸಾಖ್‌ಗೆ ನಾನು ಕಳುಹಿಸಲಿಲ್ಲವೆ ? ಇಲ್ಲಿ ಬಂದು ಮುಖ ತೋರಿಸುವುದಕ್ಕೆ ನಿಮಗೆ ಎಷ್ಟು ಧೈರ್ಯ ? ಎಂದು ಕೇಳಿದನು.

ಪರಿಗಳು ನಡುಗುತಾ—ಬುದ್ಧಿ, ಚಾರ್‌ಸಾಖಿನ ಕಡೆಗೆ ಮೂರು ಹಗಲು ಮೂರು ರಾತ್ರೆ ಪ್ರಯಾಣ ಮಾಡಿದೆವು. ನಮಗೂ ಆ ರಾಜಕುಮಾರನಿಗೂ ಹಸಿವು ಬಾಯಾರಿಕೆ ಹೆಚ್ಚಾಗಿ ಆಯಿತು. ಪಲ್ಲಕ್ಕಿಯನ್ನು ಒಂದು ಮರದ ನೆರಳಲ್ಲಿರಿಸಿ, ಏನಾದರೂ ಆಹಾರವನ್ನು ಹುಡುಕಿಕೊಂಡು ಬರಲು ನಾವಿಬ್ಬರೂ ಹೋದೆವು. ನಾವು ತಿರುಗಿಬಂದು ನೋಡುವಲ್ಲಿ ಆ ಸ್ಥಳವೆಲ್ಲಾ ಹೆಣಗಳಿಂದ ತುಂಬಿಹೋಗಿತ್ತು. ಆ ದೊರೆ ಮಗನೂ ನಮ್ಮ ಕಡೆ ಇಬ್ಬರೂ ಸೆರೆ ಹಿಡಿಯಲ್ಪಟ್ಟರೆಂದು ಪೆಟ್ಟು ತಿಂದಿದ್ದ ಒಬ್ಬನಿಂದ ತಿಳಿಯಿತು. ಆ ಸ್ಥಳದಲ್ಲಿ ಅಷ್ಟು ಅಪಾಯ ಉಂಟೆಂದು ಗೊತ್ತಿದ್ದರೆ, ನಾವು ಅಲ್ಲಿ ಇಳಿಯುತಾ ಇರಲಿಲ್ಲ. ಆದರೆ ದೈವ ನಿಯಾಮಕ ಹಾಗಿತ್ತು. ಪೆಟ್ಟು ತಿಂದಿದ್ದ ರಕ್ಕಸನನ್ನೂ ವಿಚಾರಿಸಿದೆವು. ಅವನು ಮುಕರ್ಣನೆಂಬುವನಿಗೆ ಆ ದೇಶ ಸೇರಿದ್ದು, ಅವನ ಸನ್ನಿಧಿಗೆ ಯೆಮೆನ್ ರಾಜಕುಮಾರನನ್ನೂ ಆ ಇಬ್ಬರು ಪರಿಗಳನ್ನೂ ಕರೆದು ಕೊಂಡು ಹೋದರು ಎಂಬದಾಗಿ ಹೇಳಿದನು. ಹೀಗೆಂದು ಆ ಪರಿಗಳು ದೊರೆಗೆ ಅರಿಕೆ ಮಾಡಿದರು.

ಷಾಮುಸ್‌ಷಹನು ಬಹಳ ವ್ಯಸನಪಟ್ಟು ಪೆಟ್ಟು ತಿಂದಿದ್ದ ರಕ್ಕಸನನ್ನು ಕರೆದು ತರುವಂತೆ ಅಪ್ಪಣೆ ಮಾಡಿದನು, ಅವ ಬಂದ ಮೇಲೆ (ಅವನನ್ನು ಕುರಿತು)—ನನ್ನ ಪ್ರಜೆಗಳ ಮೇಲೆ ಕೈಮಾಡುವ ಮಟ್ಟಿಗೆ ನಿಮ್ಮ ದೊರೆ ಮುಕರ್ಣನಿಗೆ ಹೇಗೆ ಧೈರ್ಯ ಉಂಟಾಯಿತು ? ನಿಜವಾಗಿಯೂ ಅವನ ಸ್ಥಿತಿ ಅವನಿಗೆ ಮರೆತುಹೋಯಿತು. ನನ್ನ ಕೋಪದ ಫಲವನ್ನು ಅವನು ಅನುಭವಿಸಿಯಾನು ಎಂದು ಹೇಳಿದನು ಅದಕ್ಕೆ

ಆ ರಕ್ಕಸನು—ಬುದ್ಧಿ, ತಾವು ತೀರಿಹೋಗಿ ಎಷ್ಟೋ ಶತಮಾನವಾಯಿತೆಂದು ನಮ್ಮ ದೊರೆಗೆ ಖಂಡಿತವಾದ ವರ್ತಮಾನ ಬಂದಿತ್ತು. ಹಾಗಲ್ಲವೆಂದು ಇಬ್ಬರು ಪರಿಗಳೂ ಅವರ ಸಂಗಡ ಬಂದಿದ್ದ ಮನುಷ್ಯನೂ ಎಷ್ಟೋ ಹೇಳಿದರು. ಆ ಕಥೆಯು ವಿಪರೀತ ವಾಗಿ ಕಂಡದ್ದರಿಂದ ಅವನು ನಂಬಲಿಲ್ಲ, ಎಂದು ಅರಿಕೆ ಮಾಡಿದರು. ಆಗ ಷಾಮುನ್‌ಷಹನು ತನ್ನ ಅಧಿಕಾರಿಗಳ ಕಡೆಗೆ ತಿರುಗಿ—ಕೂಡಲೆ ವಿಜಯಯಾತ್ರೆ ಹೊರಡುವುದಕ್ಕೆ ನಮ್ಮ ಸೇನೆಯಲ್ಲಾ ಸಿದ್ಧವಾಗಲಿ, ಎಂದು ಅಪ್ಪಣೆ ಕೊಟ್ಟನು.

ಅವನ ಆಜ್ಞೆಗೆ ಜಾಗ್ರತೆಯಾಗಿ ಎಲ್ಲರೂ ವಿಧೇಯರಾದರು. ಮುವ್ವತ್ತು ಸಾವಿರ ದಂಡಿನವರು ಆಯುಧಪಾಣಿಗಳಾಗಿ ಅರಮನೇ ಬಾಗಿಲಲ್ಲಿ ಸಿದ್ಧರಾದರು. ದೊರೆಯೇ ಅವರಿಗೆಲ್ಲಾ ಸೇನಾಪತಿಯಾದನು, ಸಿಡಲಿನ ಹಾಗೆ ಎಲ್ಲರೂ ಅತಿ ಜಾಗ್ರತೆ ಯಾಗಿ ಆಕಾಶಮಾರ್ಗದಲ್ಲಿ ರಕ್ಕೆಯನ್ನು ಬೀಸಿಕೊಂಡು ಹೊರಟರು. ಅವರು ಮೂರು ದಿವಸದಲ್ಲಿ ಮುಕರ್ಣನ ರಾಜ್ಯವನ್ನು ಸೇರಿ ಅಲ್ಲಿ ಇಳಿದುಕೊಂಡರು. ಶತ್ರುಗಳ ಸ್ಥಿತಿ ಕುರಿತು ಸಮಾಚಾರವನ್ನು ತಂದು ತಿಳಿಸುವುದಕ್ಕಾಗಿ ದೊರೆಯು ಬೇಹುಗಾರ ನನ್ನು ಕುರಿತು—ಜಾಗರೂಕರಾಗಿರಿ, ರಾಕ್ಷಸ ಪ್ರಭುವು ಎಲ್ಲಿ ತನ್ನ ಒಡ್ಡೋಲಗವನ್ನು ಮಾಡುತಾನೆ, ಅವನು ಏನು ಮಾಡುತಿದಾನೆ ಎಂಬ ವಿಚಾರದಲ್ಲಿ ಜಾಗ್ರತೆಯಾಗಿ ವರ್ತಮಾನವನ್ನು ತರಬೇಕು, ಎಂದು ಹೇಳಿ ಅವರನ್ನು ಕಳುಹಿಸಿದನು.

ಬೇಹುಗಾರರು ಬೇಗ ಹೋಗಿ ಬಂದು—ಮುಕರ್ಣನು ತನ್ನ ಸೇನೆಯೊಡನೆ ಬೇಟೆಯಾಡುವುದಕ್ಕೆ ಹೋಗಿದ್ದ; ತಾವು ಹೋಗಿದ್ದ ಸ್ಥಳ ಇಂಥಾದ್ದೆಂದು ಗೊತ್ತಾಯಿತು, ಎಂದು ಅರಿಕೆಮಾಡಿದರು. ಷಾಮುನ್‌ಷಹನು ಸೇನೆಯವರಿಗೆ ಬುದ್ಧಿಯನ್ನು ಹೇಳಿ, ತಾವು ಶತ್ರುಗಳನ್ನು ಬಲವಾಗಿ ಮುತ್ತಿ ಅವರನ್ನು ಹೊಡೆದು ಯಾರ ಪ್ರಾಣವನ್ನೂ ಉಳಿಸದೆ ನಿಷ್ಕರುಣಿಗಳಾಗಿ ಒಬ್ಬರನ್ನೂ ಬಿಡದ ಹಾಗೆ ಅವರನ್ನು ಕೊಲ್ಲುತೇವೆಂಬದಾಗಿ ಸುಲೇಮಾನನ ಮುದ್ರೆಯನ್ನು ಮುಟ್ಟಿಸಿ ಅವರಿಂದ ಪ್ರಮಾಣಮಾಡಿಸಿದನು. ಆ ಪರಿಗಳು ಒಬ್ಬೊಬ್ಬನೂ ಪ್ರಮಾಣಮಾಡಿದನು ಮತ್ತು ತಮ್ಮ ದೊರೆಯ ಸಂಜ್ಞೇ ಪ್ರಕಾರ ಥಟ್ಟನೆ ಹೋಗಿ ಬೇಟೆಯಾಡುತಾ ಇದ್ದ ರಕ್ಕಸ ರನೇಕರನ್ನು ಕೊಂದು ಮುಕರ್ಣನನ್ನೂ ಉಳಿದಿದ್ದ ರಕ್ಕಸರನ್ನೂ ಸೆರೆಹಿಡಿದುಕೊಂಡರು. ಅವರೆಲ್ಲರನ್ನೂ ಶಿರಚ್ಛೇದನಮಾಡುವುದೆಂದು ಷಾಮುನ್‌ಷಹನು ಅಪ್ಪಣೇಮಾಡಿದನು. ಆದರೆ ಮೊದಲು ಮುಕರ್ಣನನ್ನು ತನ್ನೆದುರಿಗೆ ಕರೆಯಿಸಿ ಷಹನ್‌ಷಹ—ಎಲೆ ಖೂಳನಾದ ರಾಕ್ಷಸನೆ, ನೀನು ನನ್ನನ್ನು ಮರೆತುಬಿಟ್ಟೆಯಾ? ನಾನು ಇನ್ನೂ ಜೀವಂತನಾಗಿದೇನೆಂದು ನಿನಗೆ ಇನ್ನೂ ಚೆನ್ನಾಗಿ ತಿಳಿಯಲಿಲ್ಲವೇ ನಮ್ಮ ಪ್ರಜೆಗಳನ್ನೂ ನಮ್ಮ ವಶದಲ್ಲಿದ್ದ ಒಬ್ಬ ಪುರುಷನನ್ನೂ ಹಿಡಿಸಿ ಹಿಂಸೆಮಾಡಿಸಿದ್ದೀಯೆ, ನಾನು ಇದಕ್ಕೆ ತಕ್ಕದ್ದನ್ನು ಮಾಡಿಯೇನೆಂಬ ಯೋಚನೆಯು ನಿನ್ನ ಹೃದಯವನ್ನು ನಡುಗಿಸಲಿಲ್ಲವೊ? ಈ ಕ್ಷಣ ಹೇಳು. ಯೆಮನ್ ರಾಜಪುತ್ರನನ್ನೂ ಅವನಿಗೆ ದಾರಿ ತೋರಿಸಲು ಬಂದಿದ್ದವರನ್ನೂ ಏನು ಮಾಡಿದೆ?

ಮುಕರ್ಣ—ಅವರನ್ನೂ ನನ್ನೆದುರಿಗೆ ಕರೆದುತಂದ ನಿಮಿಷದಲ್ಲಿಯೇ ನಾನೂ ನನ್ನ ಮಿತ್ರರೂ ಅವರನ್ನು ತಿಂದುಬಿಟ್ಟೆವು.

ಷಹನ್‌ಷಹ—ಮೋಸಗಾರನಾದ ರಾಕ್ಷಸನೆ, ನಿನ್ನ ಪೂರ್ವಿಕರು ಸುಲೇಮಾನನ ಎದುರಿಗೆ ಪ್ರಮಾಣಮಾಡಿ, ತಾವಾಗಲಿ ತಮ್ಮ ಸಂತತಿಯವರು ಯಾರೇ ಆಗಲಿ ಮನುಷ್ಯವರ್ಗದವರ ಒಬ್ಬನನ್ನೂ ತೊಂದರೆಮಾಡುವುದಿಲ್ಲವೆಂದು ಹೇಳಲಿಲ್ಲವೆ ?

ಮುಕರಣ—ಆ ಸುಲೇಮಾನ ಈಗ ಎಲ್ಲಿದಾನೆ ? ಅವನಿಗೆ ನಾನು ಅಧೀನನಾಗಿರುತೇನೆಂದು ನಮಸ್ಕರಿಸಿದ್ದು ಯಾವಾಗ ?

ಆಗ ಷಮನ್‌ಷಹನು ಯಾವ ಮಾತನ್ನೂ ಆಡದೆ ಮೌನವಾಗಿ ಒಣಗಿದ ಸೌದೆಯನ್ನು ರಾಶಿ ಹಾಕಿಸಿ ಅದಕ್ಕೆ ಬೆಂಕಿ ಹತ್ತಿಸಿ, ಎಲ್ಲಾ ಹತ್ತಿಕೊಂಡು ಚೆನ್ನಾಗಿ ಉರಿಯುವಾಗ ಆ ಅಗ್ನಿಗೆ ಆ ರಾಕ್ಷಸನನ್ನು ಹಾಕಿಬಿಡುವುದೆಂದು ಅಪ್ಪಣೇಮಾಡಿದನು. ಮುಕರ್ಣನು ತಪ್ಪಿಸಿಕೊಂಡುಹೋಗುವುದಕ್ಕೆ ಮಾರ್ಗಾಂತರವೇನೂ ಇಲ್ಲವೆಂದು ತಿಳಿದು,

ಮುಕರ್ಣ—ನಾನು ಆ ಮನುಷ್ಯನನ್ನು ತಂದುಕೊಟ್ಟರೆ ನನಗೆ ಪ್ರಾಣದಾನ ಮಾಡುತೀಯ ?

ಷಹನ್‌ಷಹ—ಆ ಪುರುಷನನ್ನು ಕ್ಷೇಮವಾಗಿ ಕರೆದುತಂದರೆ, ನಮಗೆ ನಿನಗೆ ಯಾವ ಶತ್ರುತ್ವವೂ ಇರಲಾರದು.

ಆಗ ಆ ರಾಕ್ಷಸನು ನಾಗಲೋಕದ ಹರಿದೊರೆಯಾದ ಸುಲೆಮಾನನ ಹೆಸರಿನ ಮೇಲೆ ಪ್ರಮಾಣಮಾಡಿಸಿ,

ಮುಕರ್ಣ—ನಿಮ್ಮ ಕಡೆಯವರನ್ನೂ ನಮ್ಮ ಕಾರಾಗೃಹಕ್ಕೆ ಕಳುಹಿಸಬೇಕು. ಅಲ್ಲಿ ಆ ಮನುಷ್ಯನೂ ಅವರ ಜೊತೆಯವರೂ ಜೀವಂತರಾಗಿದಾರೆ.

ಅದೇ ಪ್ರಕಾರ ನಾಗಲೋಕದ ಹರಿಗಳು ಹೋಗಿ ಕಾರಾಗೃಹದ ಬಾಗಿಲನ್ನು ಒಡೆದು ತೆಗೆದು, ಹತೀಮನನ್ನೂ ಅವನ ಜೊತೆಯವರನ್ನೂ ಬಿಡುಗಡೆಮಾಡಿ ದೊರೆಯ ಸಮ್ಮುಖಕ್ಕೆ ಅವರನ್ನು ಕರೆದುತಂದರು.

ಷಹನ್‌ಷಹನಿಗೆ ಹತೀಮನನ್ನು ಕಂಡು ಅತ್ಯಾನಂದವಾಯಿತು. ಅವರಿಬ್ಬರೂ ಕೂತು ಭೋಜನಮಾಡಿದರು.

ಷಹನ್‌ಷಹ—(ತನ್ನ ಪರಿವಾರದವರನ್ನು ಕುರಿತು) ಇಂಥಾ ರಾಕ್ಷಸನನ್ನು ಪ್ರಾಣ ಸಹಿತವಾಗಿ ಬಿಡುವುದು ತಪ್ಪು, ಕೂಡಲೆ ಇವನನ್ನು ಅಗ್ನಿಗೆ ಹಾಕತಕ್ಕದ್ದು.

ಮುಕರ್ಣ—ನೀನು ಪ್ರಮಾಣಮಾಡಿಕೊಟ್ಟ ಮಾತು ಏನಾಯಿತು, ಅದಕ್ಕೆ ವಿರೋಧವಾಗಿ ಹೇಗೆ ನಡೆಯುತೀಯೆ ?

ಷಮನ್‌ಷಹ—ನಿನಗೂ ಪ್ರಮಾಣಕ್ಕೂ ಸಂಬಂಧವೇನು? ನಿನ್ನ ಬಾಳಿಲ್ಲಾ ಸುಳ್ಳೇ. ನಾನು ನಿನಗೆ ಕೊಟ್ಟಮಾತಿಗೆ ಲೋಕದ ಕ್ಷೇಮಕ್ಕಾಗಿ ತಪ್ಪಿಹೋದರೆ, ಆಕ್ಷೇಪಿಸತಕ್ಕವರು ಯಾರು?

ಈ ಪ್ರಕಾರ ಹೇಳಿ ನಾಗಲೋಕದ ಪರಿದೊರೆಯು ರಾಕ್ಷಸರನ್ನೆಲ್ಲಾ ನಾಶಮಾಡಿ ತನ್ನ ಕಡೆಯಿಂದ ಒಬ್ಬ ಅಧಿಕಾರಿಯನ್ನು ಹೊಸದಾಗಿ ಜಯಿಸಿಕೊಂಡು ರಾಜ್ಯಕ್ಕೆ ನೇಮಿಸಿ ಹತೀಮನನ್ನು ಕುರಿತು—ಈಗ ಏನಮಾಡಬೇಕೆಂದು ಇದ್ದೀಯೆ? ಎನಲು

ಷಮನ್‌ಷಹನು—ಅಯ್ಯಾ ಸ್ನೇಹಿತನೆ, ಮೊದಲು ನೀನು ಹೊರಟುಹೋದಾಗ ನಾನು ಯಾವ ವಿಧವಾದ ನಿಷ್ಕರ್ಷೆಯನ್ನು ಮಾಡಿಕೊಂಡಿದ್ದೇನೋ ಈಗಲೂ ಅದಕ್ಕೆ ನಾನು ಬದ್ಧನಾಗಿದ್ದೇನೆ, ಎಂದು ಉತ್ತರ ಹೇಳಿದನು. ಆಗ ಪರಿದೊರೆಯು ತನ್ನ ಸೇನೆಯಲ್ಲಿ ಅನುಭವಶಾಲಿಗಳಾಗಿ ಧೈರ್ಯಶಾಲಿಗಳಾಗಿ ಯುಕ್ತಿವಂತರಾದಂಥಾ ಜನರನ್ನು ಆರಿಸಿಕೊಂಡು ಹತೀಮನು ಕಡೇವರೆಗೆ ಹೋಗುವತನಕ ಅವನ ಜೊತೆಯಲ್ಲಿ ಹೋಗಬೇಕೆಂದು ಆಜ್ಞಾಪಿಸಿದನು. ಹತೀಮನನ್ನು ಬಂಗಾರದ ಚೌಕಿಯ ಮೇಲೆ ಕೂರಿಸಿ ಅದರ ಒಂದೊಂದು ಕಾಲನ್ನೂ ಒಬ್ಬೊಬ್ಬ ಹೊತ್ತುಕೊಂಡು ಆ ಪರಿಗಳು ಆಕಾಶಕ್ಕೆ ಹಾರಿ ಹಗಲೆನ್ನದೆ ರಾತ್ರೆ ಎನ್ನದೆ ಯಾವಾಗಲೂ ಹಾರುತಾ ಅನ್ನ ನೀರಿಗಾಗಿ ಅನುಕೂಲವಾದ ಕಡೆ ಇಳಿಯುತಾ ಹೋದರು. ಹೀಗೆ ಹೋಗುತಿರುವಾಗ ಒಂದು ಪರ್ವತಾಗ್ರದ ಮೇಲೆ ಇಳಿದರು. ಅಲ್ಲಿ ಬಹು ಸುಂದರನಾದ ಒಬ್ಬ ಪರಿರಾಜ ಕುಮಾರನು ವಾಸಮಾಡುತ್ತಿದ್ದನು. ಇವನು ತೂಮಾರ್ ದ್ವೀಪದ ರಾಜಕುಮಾರ, ಇವನು ದೊರೆಯಾದ ಬಾರ್‌ಸಾಖಿನ ಮಗಳನ್ನು ವಿಶೇಷವಾಗಿ ಮೋಹಿಸಿದ್ದನು. ತಾನು ದುಃಖಪಟ್ಟು ಅಳುವುದಕ್ಕೆ ಅನುಕೂಲವಾಗಿರುವಂತೆ ಆ ನಿರ್ಮಾನುಷ್ಯವಾದ ಪ್ರದೇಶಕ್ಕೆ ಹೋಗಿದ್ದನು. ಅವನು ಅಳುವ ಸದ್ದು ಹತೀಮನಿಗೆ ಕೇಳಿಸಿತು. ಆ ತನ್ನ ಸಂಗಡ ಇದ್ದವರನ್ನು ಕುರಿತು ಹತೀಮನು—ಅಯ್ಯಾ, ಸಮೀಪದಲ್ಲಿ ಯಾರೋ ದುಃಖಪಡುತಿದಾರೆ, ಅವನ ವ್ಯಸನಕ್ಕೆ ಕಾರಣವೇನೆಂದು ಕೇಳೋಣ, ಎಂದು ತಟ್ಟನೆ ತನ್ನ ಆಸನದಿಂದ ಎದ್ದು ಆ ಸದ್ದು ಕೇಳುವ ದಿಕ್ಕನ್ನು ಹಿಡಿದು ಕಾಮಪೀಡಿತನಾದ ಆ ರಾಜಕುಮಾರನಿದ್ದ ಕಡೆಗೆ ಬಂದು ಅವನನ್ನು ಕುರಿತು

ಹತೀಮ—ಅಯ್ಯಾ, ನೀನು ಯಾರು? ನಿನ್ನ ಶೋಕದ ಧ್ವನಿಗೆ ಈ ಬಂಡೆಗಳು ಹೊಳಲುಕೊಡುವಂತೆ ಯಾಕೆ ಮಾಡುತೀಯೆ? ಪರಿರಾಜ ಪುತ್ರ—(ಕಂಣೆತ್ತಿ ಗಂಭೀರವಾದ ಆಕೃತಿಯನ್ನೂ ಮನೋಹರವಾದ ಮುಖವನ್ನೂ ನೋಡಿ ಅವನನ್ನು ಕುರಿತು) ಅಯ್ಯಾ ಮನುಷ್ಯ ಮೊದಲು ನೀನು ಹೇಳು, ನೀನು ಯಾರು? ನಿನಗೆ ಇಲ್ಲಿ ಏನು ಕೆಲಸ?

ಹತೀಮ—ನಾನು ಈ ಸ್ಥಳವನ್ನು ನೋಡಬೇಕೆಂದು ದೇವರ ಚಿತ್ತಕ್ಕೆ ಬಂತು.

ಪರಿರಾಜಪುತ್ರ—ಯಾರ ಕೋರಿಕೆಯಿಂದ ನೀನು ಈಕಡೆಗೆ ಬಂದೆ ?

ಹತೀಮ—ಮರ್‌ಫಾಜ್ ಎಂಬ ಮುತ್ತನ್ನು, ಹುಡುಕಿಕೊಂಡು ನಾನು ಇಷ್ಟುದೂರ ಬಂದೆ. ಈ ಮುತ್ತು ಬಾರ್‌ಸಾಖನ ವಶದಲ್ಲಿರುವ ಹಾಗೆ ತಿಳಿಯಬಂದಿದೆ. ಆ ಮುತ್ತನ್ನು ಹುಡುಕಿಕೊಂಡು ಬಂದವರಿಗೆಲ್ಲಾ ಒಂದು ಪ್ರಶ್ನೆಯನ್ನು ಹಾಕುತಾನೆ. ಅದಕ್ಕೆ ಇದುವರೆಗೆ ಯಾರೂ ಉತ್ತರ ಹೇಳಿಲ್ಲ.

ಪರಿರಾಜ ಪುತ್ರ—ನೀನು ಹೇಳುವುದು ನಿಜ. ಪರಿಜಾತಿಗೆ ಸೇರಿದ ನಮಗೆ ಕೂಡ ಆ ಮುತ್ತಿನ ಕಥೆಯನ್ನು ಹೇಳುವುದಕ್ಕೆ ಸಾಮರ್ಥ್ಯವಿಲ್ಲ. ಹೀಗಿರುವಲ್ಲಿ ಸಾಧಾರಣ ಮನುಷ್ಯನಾದ ನಿನ್ನ ಕೈಲಾಗುವುದೆಂದು ನೀನು ಹೇಗೆ ತಾನೆ ಊಹಿಸುತೀಯೆ?

ಹತೀಮ—ನನ್ನ ಮಟ್ಟಿಗೆ ಹೇಳುತೇನೆ. ನನಗೆ ದೇವರಲ್ಲಿ ನಂಬಿಕೆ ಇದೆ. ಆದರೆ ನೀನು ಹೇಳು, ನಿನ್ನ ದುಃಖಕ್ಕೆ ಕಾರಣವೇನು ? ಈ ನಿರ್ಮಾನುಷ್ಯವಾದ ಪರ್ವತವನ್ನು ನಿನ್ನ ವಾಸಸ್ಥಳವಾಗಿ ಮಾಡಿಕೊಂಡಿದ್ದೀಯಲ್ಲಾ ಯೇಕೆ?

ಪರಿರಾಜಪುತ್ರ—ಬಾರ್‌ಸಾಖ್ ದ್ವೀಪದ ದೊರೆಯಾದ ಮಹ್ಯಾರ್ ಎಂಬುವನ ರೂಪವತಿಯಾದ ಮಗಳನ್ನು ಕಂಡು ನಾನು ಮೋಹಿಸಿದೆ. ಒಂದು ದಿವಸ ನಮ್ಮ ತಂದೆಯ ಸಭೆಯಲ್ಲಿ ಈ ಕನ್ಯಾರತ್ನದ ಅನುಪಮವಾದ ಸೌಂದರ್ಯವನ್ನು ಕುರಿತು ಕೆಲವರು ಶ್ಲಾಘನೆಮಾಡಿದ್ದನ್ನು ನಾನು ಕೇಳಿದೆ. ಅದರಿಂದ ನನ್ನ ಹೃದಯವು ನನ್ನ ವಶತಪ್ಪಿ ಹೋಯಿತು. ಆ ಕ್ಷಣವೇ ಮಹ್ಯಾರನ ಅರಮನೆಗೆ ಹೋಗಿ ಅವನ ಮಗಳನ್ನು ಮದುವೆಯಾಗಲು ನನಗೆ ಇಷ್ಟವಿದೆ ಎಂದು ಹೇಳಿ ಕಳುಹಿಸಿದೆ. ಅವನು ನನ್ನನ್ನು ಕರೆಯಿಸಿ ಮರ್‌ಫಾಜ್ ಮುತ್ತನ್ನು ತೋರಿಸಿ ಅದರ ಕಥೆಯನ್ನು ಹೇಳಬಲ್ಲೆಯ ಎಂದು ಕೇಳಿದ. ಇಂಥಾ ಪ್ರಶ್ನೆಗೆ ಉತ್ತರಹೇಳಲು ನಾನು ಸಿದ್ಧವಾಗಿರಲಿಲ್ಲ. ಆ ಮುತ್ತಿನ ಸ್ವಭಾವ ಇಂಥಾದ್ದೆಂದು ನನಗೆ ಶುದ್ಧಾಂಗವಾಗಿ ಗೊತ್ತೂ ಇರಲಿಲ್ಲ. ಆದ್ದರಿಂದ ಯಾವ ಉತ್ತರ ಹೇಳುವುದಕ್ಕೂ ನನಗಂತೂ ಆಗಲಿಲ್ಲ. ಆ ಸ್ಥಾನದಿಂದ ನನ್ನನ್ನು ಆಚೆಗೆ ಕಳುಹಿಸಿಬಿಡಬೇಕೆಂದು ಅಪ್ಪಣೆಮಾಡಿದರು. ನಾನು ಬಾಗಿಲಿನಿಂದ ಬರುತಾ ಇದ್ದೆ. ಆ ಸ್ತ್ರೀರತ್ನವು ಒಂದು ಕಿಟಿಗಿ ಬಳಿಯಲ್ಲಿ ಬಾಲಾಖಾನೆಯಲ್ಲಿ ನಿಂತಿದ್ದಳು. ಅವಳನ್ನು ಕಂಡ ಕೂಡಲೆ ನನ್ನ ಹೃದಯದಲ್ಲಿ ಚುಚ್ಚಿದಂತಾಯಿತು. ನಾನು ಹುಚ್ಚನ ಹಾಗಾದೆ. ನನಗೆ ನಿರಾಶೆಯಾಗಿ ಸಂಕಟದಲ್ಲಿ ನಾನು ಈ ಪರ್ವತಕ್ಕೆ ಓಡಿಬಂದೆ. ಇಲ್ಲಿ ಹಗಲೂರಾತ್ರಿಯೂ ದುಃಖಪಡುತಾ ನಿಟ್ಟುಸಿರುಬಿಡುತಾ ಕಾಲಾಕಳೆಯುತೇನೆ. ನನ್ನ ಹೃದಯದಲ್ಲಿ ನಾಟಿರುವ ಪ್ರತಿಮೆ ನನಗೆ ದೊರೆಯತಕ್ಕದ್ದಲ್ಲವಾದ ಕಾರಣ ನನ್ನ ದುಃಖವನ್ನು ನಿವಾರಣಮಾಡಲ ಮರಣ ಸಂಭವಿಸಬಾರದೆ, ಎಂದು ಪೇಚಾಡಿದನು.

ಹತೀಮನು ಆ ರಾಜಕುಮಾರನ ಕಥೆಯನ್ನು ಕೇಳಿ, ಅವನನ್ನು ಕುರಿತು

ಹತೀಮ—ಅಯ್ಯಾ, ಆಶಾಭಂಗನಾಗಬೇಡ. ನಾನು ಅದನ್ನು ಜೈಸಿಕೊಡುತೇನೆ. ನಮಗೆ ಜಯವಾದರೆ, ಆ ಹೆಂಣುಮಗಳು ನಿನಗೆ, ಮುತ್ತು ನನಗೆ.

ಪರಿರಾಜಪುತ್ರ—ನೀನು ಹೇಳಿದ್ದು ಉತ್ತಮವಾದ ಮಾತು. ಆದರೆ ನಾನು ಒಂದು ಮಾತನ್ನು ಹೇಳುತೇನೆ, ಕ್ಷಮಿಸು, ನಿನ್ನ ಪ್ರಯತ್ನ ಸಫಲವಾಗುವುದು ಅನುಮಾನ.

ಹತೀಮ—ಕೇಳು, ಆ ಮುತ್ತಿನ ಸ್ವಭಾವವನ್ನು ಹೇಳುತೇನೆ. ಅದು ಮುರ್ಘಾಜ್‌ನ ಮೊಟ್ಟೆಯನ್ನು ಹೋಲುವುದು ಮಾತ್ರವೇ ಅಲ್ಲ. ಅದರ ಮೊಟ್ಟೆಯೇ ಆಗಿದೆ. ಮೊದಲು ಬರ್‌ಸಾಖ್ ದ್ವೀಪದಲ್ಲಿ ಮನುಷ್ಯಜಾತಿಯವರಿದ್ದರು. ಆ ಕಥೆ ದೊಡ್ಡದು ಆದರೆ ಇನ್ನೊಂದು ಸಾರಿ ನನ್ನ ಸಂಗಡ ಮುಹ್ಯಾರನ ಆಸ್ಥಾನಕ್ಕೆ ಬರುವನಾಗು.

ಆಗ ಪರಿರಾಜಪುತ್ರನು ತಟ್ಟನೆ ಎದ್ದು ಹತೀಮನ ಒಳ್ಳೇತನಕ್ಕಾಗಿ ಕೃತಜ್ಞತೆಯನ್ನು ಹೇಳಿ ಅವನ ಸಂಗಡ ಪಲ್ಲಕ್ಕಿಯ ಮೇಲೆ ಕೂತುಕೊಳ್ಳಬೇಕೆಂದನು. ಅವರಿಬ್ಬರೂ ಅದರಲ್ಲಿ ಕೂತುಕೊಂಡರು. ಆಗ ಹತೀಮನು—ಬಾರ್‌ಸಾಕ್ ದ್ವೀಪಕ್ಕೆ ನಮ್ಮಿಬ್ಬರನ್ನೂ ಹೊತ್ತುಕೊಂಡು ಹೋಗಬಲ್ಲಿರ? ಎಂದು ಕೇಳಲು, ಆ ಜನರು—ನಿಮ್ಮಂಥಾ ನಾಲ್ಕು ಜನವಾದರೂ ಸುಲಭವಾಗಿ ಹೊತ್ತುಕೊಂಡು ಹೋಗಬಲ್ಲೆವು, ಎಂದು ಹೇಳಿ ಸಾವಕಾಶಮಾಡದೆ ಪರಿಗಳು ಆ ಕುರಚಿಯನ್ನು ಹೊತ್ತುಕೊಂಡು ಮೇಘಮಂಡಲಕ್ಕೆ ಹಾರಿದರು.

ಅವರು ಇನ್ನೊಬ್ಬ ಭೂತರಾಜನ ದೇಶದ ಮೇಲೆ ಹಾರಿಹೋಗಬೇಕಾಗಿ ಬಂತು. ಆ ರಾಜನ ಹೆಸರು ಮುಹೈಕಾಲ್ ಎಂತ. ಇವನು ಅಲ್ಲಿಗೆ ಇವರು ಬಂದ ವಾಸನೆಯನ್ನು ತಿಳಿದುಕೊಂಡು ತನ್ನ ಪರಿವಾರದವರನ್ನು ಕುರಿತು—ಪರಿವರ್ಗದವರು ಕೆಲವರು ತಮ್ಮ ರಾಜ್ಯದೊಳಕ್ಕೆ ಬಂದಿದಾರೆ. ಅವರನ್ನು ಈ ಕ್ಷಣದಲ್ಲಿ ಹಿಡಿದು ನನ್ನ ಮುಂದೆ ಕರದುತನ್ನಿ, ಎಂದು ಆಜ್ಞಾಪಿಸಿದನು. ಒಡನೆಯೇ, ಆ ಭೂತಗಳು ಮೇಲಕ್ಕೆ ಹಾರಿದವು. ನಾಲ್ಕೂ ದಿವಸ ಹಿಂದಟ್ಟಿಹೋಗಿ ಹತೀಮನೂ ಅವನ ಗೆಳೆಯನೂ ಕೂತುಕೊಂಡಿದ್ದ ಚಿನ್ನದಪಲ್ಲಕ್ಕಿಯೊಡನೆ ವಾಹಕರಾಗಿದ್ದ ಪರಿಗಳ ಸಮೇತ ಹಿಡಿದು ತಮ್ಮ ದೊರೆಯ ಮುಂದೆ ಹಾಕಿತಂದು ನಿಲ್ಲಿಸಿದರು. ಆಗ

ಮುಹೈಕಾಲ್—ನೀವು ಯಾರು ? ಈ ಮನುಷ್ಯನನ್ನು ಎಲ್ಲಿಂದ ಕರೆದುತಂದಿರಿ ?

ಪರಿಗಳು—ನಾವು ಷಮುಸ್‌ಷಹನ ಪ್ರಜೆಗಳು.

ಭೂತರಾಜ—ಅಸಾಧ್ಯ. ಷಮುಸ್‌ಷಹನ ವರ್ತಮಾನವನ್ನು ಕೇಳಿ ಇಲ್ಲಿಗೆ ಒಂದು ಸಾವಿರ ವರುಷದ ಮೇಲಾಯಿತು. ಅವನು ವಾಸವಾಗಿದ್ದ ಸ್ಥಳದಲ್ಲೆಲ್ಲಾ ಹಾವುಗಳು ತುಂಬಿಕೊಂಡಿವೆ.

ಪರಿಗಳು—ನಿಶ್ಚಯ, ನಮಗೆ ಸರ್ಪದರೂಪು ಬಂದಿತ್ತು. ಈ ಪುಣ್ಯಾತ್ಮನ ಹರಕೆಯಿಂದ ನಮಗೆ ಪೂರ್ವದಜನ್ಮ ಬಂತು.

ಭೂತರಾಜ—ಒಳ್ಳೇದು, ಈಗ ಹೇಳಿ, ಈ ಮನುಷ್ಯನನ್ನು ಎಲ್ಲಿಗೆ ಹೊತ್ತುಕೊಂಡು ಹೋಗುತೀರಿ ?

ಪರಿಗಳು—ಬಾರ್‌ಸಾಕ್ ದ್ವೀಪಕ್ಕೆ.

ಭೂತ—ಇನ್ನೊಬ್ಬ ಯಾರು ?

ಪರಿರಾಜ—ಸ್ವತಃ ಮೈಕೈಕಲ್ಲನು ನನ್ನನ್ನು ಅರಿಯದವನಲ್ಲ. ನಮ್ಮ ಮನೆಯವರಿಗೂ ಅವನಿಗೂ ದೂರದ ಸಂಬಂಧವಿದೆ.

ಭೂತ—ನನಗೆ ಬಹಳ ಆಶ್ಚರ್ಯವಾಗುವುದ್ಯೆ, ರಾಜಕುಮಾರ, ನೀನು ಆದಂನ ಸಂತತಿಯವರಲ್ಲಿ ಬಳಕೆ ಇಟ್ಟುಕೊಂಡಿರುವುದನ್ನು ನೋಡಿದರೆ. ಯದರೆ ನನ್ನ ದೆಸೆಯಿಂದ ನಿನಗೆ ಯಾವ ಭೀತಿಯೂ ಬೇಡ. ನಿನ್ನ ಸಂಗಡ ಇರತಕ್ಕವ ಉಂಟು ನೀನುಂಟು.

ಹೀಗೆಂದು ಆ ಭೂತವು ಹತೀಮನ್ನು ಅವ ಕೂತಿದ್ದ ಚೌಕಿಯಿಂದ ಮೇಲಕ್ಕೆ ಎತ್ತಿದನು. ಆಗ

ಪರೀರಾಜ—ಮೈಕೈಕಲ್, ಎಚ್ಚರಿಕೆ, ಆದಂನ ವಂಶೀಯರು ಯಾರನ್ನೂ ಬಾಧಿಸುವುದಿಲ್ಲವೆಂದು ಸುಲೇಮಾನನಿಗೆ ನೀನು ಮಾತ ಕೊಟ್ಟಿಲ್ಲವೇ ?

ಭೂತ—(ಪಿಶಾಚಿಯ ಹಾಗೆ ನಗುತಾ) ಆ ಸುಲೇಮಾನನಿಗೆ ನಾನು ಕೊಟ್ಟ ಮಾತಿನ ಮೇಲೆ ದೃಷ್ಟಿ ಇಡಲು ಅವನು ಈಗ ಎಲ್ಲಿದಾನೆ ? ಆದಂನ ವಂಶೀಯನಾದ ಈ ಮನುಷ್ಯನನ್ನು ನಾನು ನುಂಗಿಕೊಳ್ಳತೀನೆ. ಮಾತನಾಡಿ ಆಡಿ ಯಾಕೆ ಉಸಿರನ್ನು ವೆಚ್ಚಮಾಡಿಕೊಳ್ಳುತೀಯೆ ?

ಈ ಭೂತದ ದ್ರೋಹ ಸ್ವಭಾವವು ಪರೀರಾಜನಿಗೆ ಗೊತ್ತಿತ್ತು. ಅದ್ದರಿಂದ ಭೂತದ ಮಾತಿನಿಂದಲೇ ಅವನನ್ನು ಕಟ್ಟಿಹಾಕಬೇಕೆಂದು ನಿಷ್ಕರ್ಷೆ ಮಾಡಿಕೊಂಡು ಅವನನ್ನು ಕುರಿತು ಪರೀರಾಜ—ದೊರೆಯೆ, ಒಬ್ಬ ಮನುಷ್ಯನನ್ನು ನುಂಗಿಕೊಳ್ಳಲು ಯತ್ನಿಸುವುದು ನಿನ್ನ ಗೌರವಕ್ಕೆ ಹಾನಿ, ಅವನಿಂದ ನನ್ನ ಕೆಲಸ ಕೈಗೂಡಬೇಕಾಗಿದೆ. ಅವನಿಗೆ ಬದಲಾಗಿ ಹತ್ತು ಜನ ಮನುಷ್ಯರನ್ನು ನಾನು ಕೊಡುತೀನೆ.

ಭೂತ—(ಈ ಮಾತಿಗೆ ಭೂತನು ಒಪ್ಪಿ) ಅಯ್ಯಾ ಗಾಂಭೀರ್ಯಉಳ್ಳ ಪರಿಯೆ ನಾವು ಸ್ವಲ್ಪಮಟ್ಟಿಗೆ ಸಂಬಂಧಿಗಳಾದ್ದರಿಂದ ನಿನ್ನ ಮಾತಿನಂತೆ ನಡೆಯಲು ನಾನು ಒಪ್ಪುತೀನೆ. ಈ ಮಧ್ಯೆ ನೀನು ಹೇಳಿದ ಹತ್ತು ಜನರನ್ನು ಕರೆದುತರುವ ತನಕ ಈ ಮನುಷ್ಯನು ನಮ್ಮ ಕೋಟೆಯಲ್ಲಿ ಭದ್ರವಾಗಿರಲಿ, ಅವರು ಬಂದ ಮೇಲೆ ಇವನನ್ನು ನಿನ್ನ ವಶ ಮಾಡುತೀನೆ.

ಪರಿದೊರೆ—ಒಪ್ಪಿದೆ. ನನ್ನ ಏರ್ಪಾಡಿಗಾಗಿ ನಾಲ್ಕು ದಿವಸದ ಗಡುವು ಬೇಕು. ನಿನ್ನ ಕಾರಾಗೃಹದಲ್ಲಿ ಇವನನ್ನು ಇರಿಸಿ ಮುಚ್ಚುವುದಕ್ಕೆ ನಾನು ಒಪ್ಪುವುದಿಲ್ಲ.

ಭೂತ—ನೀನು ಎಲ್ಲಿ ಬೇಕಾದರೂ ಇರಿಸಿಕೊ. ಆದರೆ ನಮ್ಮ ಪ್ರಜೆಗಳು ಅವನ ಮೇಲೆ ಬಲವಾಗಿ ಕಾವಲಿರಲಿ.

ಆ ಸ್ಥಳಕ್ಕೆ ಸಮೀಪವಾಗಿ ಒಂದು ಮನೋಹರವಾದ ವನವಿತ್ತು. ಪರಿದೊರೆ ಮಗ ಅಲ್ಲಿಲ್ಲದೇ ಇರುವಾಗ ಹತೀಮನನ್ನು ಭೂತಗಳು ಕಾದುಕೊಂಡಿರಬೇಕೆಂದು ಗೊತ್ತಾಯಿತು. ಆ ದೊರೆಯು ಹತೀಮನನ್ನು ಕರೆದುತಂದ ನಾಲ್ಕು ಜನ ಪರಿಗಳೂ ಸಹ ರಹಸ್ಯವಾದ ಒಂದು ಸ್ಥಳಕ್ಕೆ ಹೋದರು ಮುಂದೆ ಏನುಮಾಡಬೇಕೆಂದು ಅವರೈವರೂ ಆಲೋಚನೆಮಾಡಲು ಆರಂಭಿಸಿದರು. ಆಗ ರಾಜನು—ನಿಮ್ಮ ದೊರೆಯು ಸನ್ನಿಧಿಗೆ ಹೋಗಿ ಅವನು ತನ್ನ ದುಡಿನೊಡನೆ ನಮಗೆ ಒತ್ತಾಸೆಯನ್ನು ಕೊಡಬೇಕೆಂದು ಕೇಳಿಕೊಂಡರೆ, ನಾವು ಹಿಂದಕ್ಕೆ ಬರುವುದಕ್ಕೆ ಮುಂಚೆಯೇ ಗಡಬ ಮೀರಿ ಹೋಗುವುದು ; ಭೂತವು ನಮ್ಮ ಮಿತ್ರನಾದ ಹತೀಮನನ್ನು ನುಂಗಿಕೊಳ್ಳುವುದು ಖಂಡಿತ. ಆದ್ದರಿಂದ ನಾವು ಇಲ್ಲಿಯೇ ಅವಿತುಕೊಂಡಿರೋಣ. ಭೂತಗಳು ಅಜಾಗರೂಕರಾಗಿರುವ ಸಮಯವನ್ನು ಕಾದಿದ್ದು ವನವನ್ನು ಪ್ರವೇಶಮಾಡಿ, ಯೆಮನ್ ದೇಶದ ರಾಜಕುಮಾರನಾದ ಹತೀಮನನ್ನು ಎತ್ತಿಕೊಂಡು ನಮ್ಮ ರಕ್ಕೆಯ ಭರವಸೆಯಿಂದ ಮೇಲಕ್ಕೆ ಹಾರೋಣ, ಎಂದು ನುಡಿದನು.

ಆ ದೊರೆ ಹೇಳಿದ ಮಾತಿಗೆ ನಾಲ್ಕು ಜನ ಪರಿಗಳೂ ಒಪ್ಪಿ ಶ್ಲಾಘನೆಮಾಡಿ, ಅರ್ಧರಾತ್ರಿಯ ಸಮಯದಲ್ಲಿ ಭೂತಗಳೆಲ್ಲಾ ವನದ ಬಾಗಿಲನ್ನು ಹಾಕಿಕೊಂಡು ನಿದ್ರೆಮಾಡಲು ಹೊರಟುಹೋದ ಮೇಲೆ ಪರಿಗಳು ಚಿನ್ನದ ಪಲ್ಲಕ್ಕಿಯನ್ನು ಎತ್ತಿಕೊಂಡು ಮೆಲ್ಲಗೆ ಪೌಳೀಗೋಡೆಯ ಮೇಲೆ ಹಾರಿ ಕೂತುಕೊಂಡು ಸುತ್ತಲೂ ಚೆನ್ನಾಗಿ ನೋಡಿದರು. ಭೂತಗಳೆಲ್ಲಾ ಗಾಢನಿದ್ರೆಯಲ್ಲಿ ಮಗ್ನರಾಗಿದ್ದರು. ಹತೀಮನು ನಿರಾಶೆಯಾಗಿ ಚಿಂತಾಕ್ರಾಂತನಾಗಿ ಒಂದು ಮರದ ನೆರಳಲ್ಲಿ ಮಲಗಿಕೊಂಡನು. ನಿದ್ರೆ ಬಂತು. ಪರಿಗಳು ಅವನ್ನು ಮೆಲ್ಲಗೆ ಮೇಲಕ್ಕೆ ಎತ್ತಿಕೊಂಡು ಪರಿದೊರೆಯ ಹತ್ತಿರ ಅವನನ್ನು ಮಲಗಿಸಿ ವಾಯುವೇಗದಲ್ಲಿ ಹಾರುವುದಕ್ಕೆ ಮೊದಲು ಮಾಡಿದರು. ಬೆಳ್ಳನ ಬೆಳಗೂ ಜಾಗ್ರತೆಯಾಗಿ ಹಾರಿಹೋಗಿ ಉದಯ ಕಾಲಕ್ಕೆ ಭದ್ರವಾದ ಒಂದು ಸ್ಥಳವನ್ನು ತಲಪಿ ಅನ್ನ ನೀರಿಗಾಗಿ ಅಲ್ಲಿ ಇಳಿದುಕೊಂಡರು.

ಇತ್ತ ಭೂತಗಳು ಬೆಳಗಾದ ಮೇಲೆ ಎದ್ದುನೋಡುವಾಗ್ಗೆ ಬಾಗಿಲು ಮುನ್ನಾ ದಿವಸ ಸಾಯಂಕಾಲದಲ್ಲಿ ಹಾಕಿದ್ದ ಹಾಗೆಯೇ ಬಲವಾಗಿ ಹಾಕಿತ್ತು. ಹೀಗಿದ್ದದರಿಂದ ತಮ್ಮ ಕಾರಾಗೃಹವಾಸಿಯು ಒಳಗೆ ತಪ್ಪಿಗಿದಾನೆಂದು ನಿಷ್ಕರ್ಷೆಮಾಡಿಕೊಂಡು, ಗೊತ್ತಾಗಿದ್ದ ಪ್ರಕಾರ ನಾಲ್ಕು ದಿವಸ ಕಾವಲುಕಾದಿದ್ದರು. ಕೊನೇ ದಿವಸ ಮಹೈಕಲ್ಲನು ಹಿಂತಿರುಗಿ ಪರಿದೊರೆ ಬರಬಹುದೆಂದು ಕಾತರನಾಗಿ ಎದುರು ನೋಡುತ್ತಿದ್ದನು ಆ ದಿವಸ ಮಧ್ಯಾಹ್ನ ಮೀರಿತು. ಆಗ ಅವನು ತನ್ನ ಆಶ್ರಿತರನ್ನು ಕುರಿತು—ಈ ಪರಿಗಳು ತಮ್ಮ ಮಾತಿನಂತೆ ನಡೆದುಕೊಳ್ಳತಕ್ಕದ್ದು ಯುಕ್ತವೆಂದು ತಿಳಿಯದೆ, ಆ ಮನುಷ್ಯನ ಹಣೇಬರಹ ಹೇಗಾದರೂ ಆಗಿಹೋಗಲಿ ಎಂದು ಅವನನ್ನು ಕೈಬಿಟ್ಟರು. ಆ ಮನುಷ್ಯನನ್ನು ಈಗಲೇ ಕರೆದುಕೊಂಡು ಬನ್ನಿ, ತಿಂದುಬಿಡೋಣ

ಎಂದು ಆಜ್ಞಾಪಿಸಿದನು. ಭೂತಗಳು ಆ ಬಲವಾದ ಬಾಗಿಲುಗಳನ್ನು ತೆಗೆದು ತೋಟದೊಳಕ್ಕೆ ಪ್ರವೇಶಮಾಡಿ ನೋಡುವಲ್ಲಿ ಅವರಿಗಾದ ಆಶಾಭಂಗವನ್ನು ಏನೆಂದು ಹೇಳೋಣ! ತಮ್ಮ ವಶದಲ್ಲಿದ್ದ ಕಾರಾಗೃಹವಾಸಿ ಇರಲಿಲ್ಲ. ಅವನನ್ನು ಹಾರಿಸಿ ಬಿಟ್ಟರು. ಅವರು ತಮ್ಮ ದೊರೆಯ ಬಳಿಗೆ ಹೋಗಿ ಈ ಸಂಗತಿಯನ್ನು ತಿಳಿಸಿದರು. ಇದನ್ನು ಕೇಳಿದ ಕೂಡಲೇ ಮಹೈಕಲ್ಲನಿಗೆ ಅತ್ಯಂತ ಆಗ್ರಹ ಬಂತು. ಆ ಕಾವಲುಗಾರರನ್ನು ಚಾವಟಿಯಿಂದ ಹೊಡೆದು ಶಿಕ್ಷಿಸಿ ಅವರನ್ನು ಸೆರೆಮನೆ ಕೂಡತಕ್ಕದ್ದೆಂದು ಅಪ್ಪಣೆ ಮಾಡಿದ. ಆ ಭೂತಗಳು ಸುಲೇಮಾನನ ಹೆಸರಿನ ಮೇಲೆ ಆಣೆಯನ್ನು ಇಟ್ಟುಕೊಂಡು, ಹತೀಮನು ತಪ್ಪಿಸಿಕೊಂಡು ಓಡಿಹೋಗಲು ತಾವು ಒಳಸಂಚು ಮಾಡಿದವರಲ್ಲವೆಂದು ಎಷ್ಟು ಬಗೆಯಲ್ಲಿ ಹೇಳಿದರೂ ಅವರ ದೊರೆ ನಂಬಲಿಲ್ಲ. ಅವರನ್ನು ಹಿಂಸೆಮಾಡುವುದಕ್ಕಾಗಿ ಎಳೆದುಕೊಂಡು ಬಂದರು.

ಇತ್ತ ಪರಿಗಳು ಕಹ್ರಮಾನ್ ಕಾಡಿನ ಮೇರೆಯನ್ನು ಪ್ರವೇಶಮಾಡುವಷ್ಟರಲ್ಲಿ, ಹತೀಮನನ್ನು ಹಿಡಿದುಕೊಂಡ ದಿವಸ ಮಹೈಕಲ್ಲನ ಸಭೆಯನ್ನು ಬಿಟ್ಟು ಹೊರಟು ಹೋಗಿದ್ದ ಒಬ್ಬ ಭೂತನು ಆ ಪರಿಗಳನ್ನು ಕಂಡ. ಕ್ಷಣಮಾತ್ರದಲ್ಲಿ ಅವನು ಪರಿಗಳ ಗುರುತು ತಿಳಿದುಕೊಂಡು ಸಂಗತಿಯನ್ನೆಲ್ಲಾ ಗೊತ್ತುಮಾಡಿಕೊಂಡ. ಆ ಮನುಷ್ಯನನ್ನು ತಿನ್ನುವುದಕ್ಕಾಗಿ ತಮ್ಮ ದೊರೆಯಾದ ಮಹೈಕಲ್ಲನು ತನ್ನ ಹಲ್ಲುಗಳನ್ನು ತಿಕ್ಕಿಸಿಕೊಂಡು ಮೊನೆಯಾಗಿ ಮಾಡಿಸಿಕೊಂಡ ಸಂಗತಿಯನ್ನು ತಿಳಿದುಕೊಂಡವನಾಗಿ, ಮೇಲೆಬಿದ್ದು ಹತೀಮನನ್ನು ಬಲವಂತವಾಗಿ ಎಳೆದುಕೊಂಡು ಹೋಗಬೇಕೆಂದು ಯತ್ನಮಾಡಿದ, ಇದನ್ನು ತಿಳಿದುಕೊಂಡು ಪರಿದೊರೆಯು ತನ್ನ ಕತ್ತಿಯನ್ನು ಕ್ಷಣಮಾತ್ರದಲ್ಲಿ ಹಿಡಿದುಕೊಂಡು ಆ ಭೂತನ ಬಲಗೈಯನ್ನು ಕತ್ತರಿಸಿದ, ಆಗ ಆ ರಾಕ್ಷಸನಾದ ಭೂತನು ಪರಿದೊರೆಯನ್ನು ಕುರಿತು—ಬಹು ರೋಷದಿಂದ ಎಲವೊ, ಒಳ್ಳೆಯದು, ಇರಲಿ. ನೀನು ಮಾಡಿದ ಕೆಲಸಕ್ಕೆ ತಕ್ಕ ಪ್ರಾಯಶ್ಚಿತ್ತವಾದೀತು. ನಾನು ಸ್ವಾಮಿಕಾರ್ಯಾರ್ಥವಾಗಿ ಉದ್ಯುಕ್ತನಾಗಿರುವಾಗ ನನ್ನ ಹಸ್ತವನ್ನು ಛೇದಿಸಿದ್ದೀಯೆ, ನಿನ್ನ ಮೋಸವನ್ನೂ ದುರುಳುತನವನ್ನೂ ನಮ್ಮ ಕುಲದವರಿಗೆಲ್ಲಾ ಹೇಳಿ ನಿನ್ನನ್ನು ಮೂಲೋತ್ಪಾಟನಮಾಡಿ ಮತ್ಸರವನ್ನು ಸಾಧಿಸಿಕೊಳ್ಳುತೇನೆ, ಎಂದು ಹೇಳಿದನು. ಆ ಸಮಯದಲ್ಲಿ ಅತ್ತ

ಪರಿಗಳು—(ಹತೀಮನನ್ನು ಕುರಿತು) ಅಯ್ಯಾ ಧೀರನಾದ ರಾಜಪುತ್ರನೆ, ನಮ್ಮ ಖಚರ ಸಂಸ್ಥಾನಕ್ಕೂ ರಾಕ್ಷಸರ ಪ್ರದೇಶಕ್ಕೂ ಮಧ್ಯೆ ಇರುವ ಗಡಿಯ ಬಳಿಗೆ ಬಂದಿದೇವೆ. ಇದರಾಚೆ ನಾವು ಬರಲಾರೆವು.

ಹತೀಮ—ಮಿತ್ರರ, ಹಾಗೇ ಆಗಲೀ, ಉಳಿದ ಪಯಣವನ್ನು ನಾನೇ ಮಾಡಿಕೊಳ್ಳಬಲ್ಲೆ.

ಪರಿಗಳು ಹತೀಮನನ್ನು ಇಲ್ಲಿ ಬಿಟ್ಟರು. ಕೂರ್ಮದೇಶದ ರಾಜಕುಮಾರನೂ ಉಳಿದುಕೊಂಡ. ಇವನೂ ಈ ಸಾಹಸದಲ್ಲಿ ಹತೀಮನ ಸಂಗಡ ಸೇರಿಕೊಂಡಿದ್ದ.

ಭೂತಗಳ ಪ್ರಾಂತಕ್ಕೆ ಬೇರೆಯಾಗಿದ್ದ ಮರಳಕಾಡನ್ನು ಇವರು ಹೊಗಲು, ಹಶೀಮನು ಆ ಸಂಗತಿಯನ್ನು ಕುರಿತು—ಮುಂದಕ್ಕೆ ನಾವು ಕ್ಷೇಮವಾಗಿ ಪ್ರಯಾಣ ಮಾಡಬಹುದೆ ಎಂದು ಪ್ರಶ್ನೆ ಮಾಡಿದ. ಆಗ

ದೊರೆಮಗ—ಅಯ್ಯಾ, ಯೆಮನ್ ರಾಜಪುತ್ರನೆ, ಭೂತಗಳು ಹೊರತು ಈ ಪ್ರಾಂತಕ್ಕೆ ಇನ್ನು ಯಾರೂ ಬರುವುದು ಕಷ್ಟ.

ಹಶೀಮ—ಪರೀವರ್ಗಕ್ಕೆ ಸೇರಿದವರೂ ಬರಕೂಡದೆ?

ದೊರೆಮಗ—ಪರಿಗಳು ಇಲ್ಲಿಗೆ ಬರುವುದು ಅಪಾಯವೇ ಆದಾಗ್ಯೂ, ಅವರಿಗೇನೂ ಭಯವಿಲ್ಲ. ಭೂತಗಳಿಗೂ ಖಚರರಿಗೂ ಈ ಮೈದಾನದಲ್ಲಿ ದೊಡ್ಡ ಯುದ್ಧ ನಡೆದು ಈಗ ಸಮಾಧಾನ ಮಾಡಿಕೊಳ್ಳುವುದಕ್ಕಾಗಿ ಕದನ ನಿಂತಿದೆ. ಅಯಾ ಕಡೆ ದೊರೆಗಳು ತಂತಮ್ಮ ವಿಶಿಷ್ಟ ಸೇನೆಯೊಡನೆ ಯುದ್ಧ ಮಾಡಿದರು. ಅನೇಕರು ಸತ್ತುಹೋದರು. ಯಾವ ಕಡೆಗೂ ಜಯವಾಗಲಿಲ್ಲ. ಕಡೆಗೆ ಸಮಾಧಾನವಾಯಿತು. ಖಚರರ ಗೋಜಿಗೆ ಇತಃ ಪರ ತಾವು ಹೋಗುವುದಿಲ್ಲ ವೆಂದು ಭೂತಗಳು ಸುಲೇಮಾನನ ಮೇಲೆ ಆಣೆಯನ್ನು ಇಟ್ಟುಕೊಂಡು ಪ್ರಯಾಣಮಾಡಿ ಮುಂದಕ್ಕೆ ಖಚರರಿಗೆ ಯಾವ ತೊಂದರೆಯನ್ನು ಕೊಡುವು ದಿಲ್ಲವೆಂದು ಮಾತ ಕೊಟ್ಟರು. ಆದರೆ ಅವರಿಗೆ ಆ ಕಟ್ಟಿಗೆ ತಪ್ಪಿಹೋದೇವಲ್ಲಾ ಎಂಬ ಭೀತಿ ಯೇನೂ ಇಲ್ಲ. ಮನುಷ್ಯ ವರ್ಗದವರಿಗಂತೂ ಅವರೇ ದೊಡ್ಡ ಶತ್ರುಗಳು.

ಹಶೀಮ—ಸಾಕು ನಾನಾ ರೂಪವನ್ನು ಬದಲಾಯಿಸಿ ಮರಸಿಕೊಂಡು ಭೂತದ ರೂಪವನ್ನು ತಾಳಿ ಅವರ ಸೀಮೆಯ ಮಾರ್ಗವಾಗಿ ಹೋದರೆ, ನನ್ನ ಸಂಗಡ ನೀನೂ ಧೈರ್ಯವಾಗಿ ಬರುತೀಯಾ?

ಪರಿದೊರೆಮಗ—ಹಾಗೆ ಬಹಿರಂಗವಾಗಿ ಮಾಡಲು ಆಗಲಾರದು. ಆದರೆ ನಾನು ಸುಲಭವಾಗಿ ಕಾರ್ಯಸಾಧನೆಯನ್ನು ಮಾಡಬಲ್ಲೆ. ಹಗಲು ಮೇಘಮಂಡಲದಲ್ಲಿ ಹಾರಾಡಿ, ರಾತ್ರಿ ನೀನು ಇಳಿದುಕೊಂಡ ಕಡೆಗೆ ಇಳಿಯುತೇನೆ.

ಆ ಕ್ಷಣದಲ್ಲಿಯೇ ಹಶೀಮನು ಒಂದು ಪಾತ್ರೆ ತುಂಬ ನೀರನ್ನು ತಂದು ನಾಟಿಕದ ಬಂಣದ ಗರಿಗಳನ್ನು ಸುಟ್ಟು ಮೊದಲು ಹೇಳಿಕೊಟ್ಟಿದ್ದ ಮೇರೆ ನೀರಿನಲ್ಲಿ ಕದರಿದನು. ತರುವಾಯ ತನ್ನ ಉಡುಪನ್ನೆಲ್ಲಾ ತೆಗೆದುಬಿಟ್ಟು ಆಪಾದತಲ ಮಸ್ತಕಕ್ಕೂ ಆ ನೀರನ್ನು ಸವರಿದನು. ಕೂಡಲೆ ಅವನ ಕೈಯಲ್ಲಾ ಕಪ್ಪಗಾಯಿತು. ಅವನ ಆಕೃತಿಯು ಭಯಂಕರವಾದ ಭೂತದ ಹಾಗಾಯಿತು. ಪರಿರಾಜನು ಇದನ್ನು ನೋಡಿ ಆಶ್ಚರ್ಯಪಟ್ಟು

ಪರಿರಾಜ—ಎಲ, ವಿಚಿತ್ರವಾದ ಪುರುಷನೆ, ಈ ಬಲವತ್ತರವಾದ ಗುಣ ಉಳ್ಳ ಈ ಗರಿ ಯಾವ ಪಕ್ಷಿಯದು, ಹೇಳುವನಾಗು.

ಹಶೀಮು—ನಾಟಿಕನೆಂಬ ಅಪೂರ್ವವಾದ ಪಕ್ಷಿಯಿಂದ ನಾನು ಇದನ್ನು ಸಂಪಾದಿಸಿದೆ.
ಅದರ ಮೊಟ್ಟೆಗಳು ಬಾಸ್ಸಾರ್ಕ್ ದೇಶದ ಮಹ್ಯಾರನ ಸ್ವಾಧೀನದಲ್ಲಿರುವ ಮೊಟ್ಟೆಗಳ ಹಾಗಿವೆ.

ಆಗ ಹಶೀಮನು ಮರದ ಮೇಲಿದ್ದ ಪಕ್ಷಿಗಳು ಆಡಿಕೊಂಡ ಮಾತುಗಳ ಸಂವಿಧಾನವನ್ನು ವಿವರಿಸಿದನು. ಆದರೆ ಮಹ್ಯಾರನ ಆಸ್ಥಾನಕ್ಕೆ ಬರುವ ತನಕ ಆ ಮುತ್ತಿನ ಕಥೆಯನ್ನು ಮಾತ್ರ ಹೊರಪಡಿಸದೆ ಬುದ್ಧಿವಂತಿಕೆಯಿಂದ ಸುಮ್ಮನಾದನು.

ಹಶೀಮನ ಯುಕ್ತಿಯಲ್ಲಿಯೂ ಬುದ್ಧಿವಂತಿಕೆಯಲ್ಲಿಯೂ ಪರಿದೊರೆಗೆ ಬಹಳ ನಂಬಿಕೆ ಹುಟ್ಟಿತು. ತನಗೆ ಜಯವಾಗುದೆಂದು ನಂಬಿಕೆ ಹೆಚ್ಚಿತು. ಈ ಉಭಯ ಮಿತ್ರರೂ ಒಡಗೂಡಿ ಹೊರಟರು. ಹಶೀಮನು ಭೂತಗಳ ಸೀಮೆಯನ್ನು ಪ್ರವೇಶ ಮಾಡಿದನು. ಅವನಿಗೆ ಯಾವ ಅಡ್ಡಿಯೂ ಸಂಭವಿಸಲಿಲ್ಲ. ಇವನೂ ತಮ್ಮ ಕೂಟಕ್ಕೆ ಸೇರಿದವನೆಂದು ಭೂತಗಳೆಲ್ಲಾ ಭಾವಿಸಿಕೊಂಡರು. ಈ ಪ್ರಕಾರ ಕೆಲವು ದಿವಸ ಕಳೆದಮೇಲೆ ಹಶೀಮನೂ ಇವನ ಸ್ನೇಹಿತನಾದ ಪರಿಯೂ ರಾತ್ರಿ ಮಲಗಿ ಕೊಳ್ಳುವ ಸ್ಥಳದಲ್ಲಿ ಸಂಧಿಸಿದರು. ಇದನ್ನು ಒಬ್ಬ ಭೂತ ಕಂಡನು. ಇವನು ಹೋಗಿ ತನ್ನ ನೆರೆಹೊರೆಯವರನ್ನು ಕಂಡು ಒಂದಾನೊಂದು ಸ್ಥಳದಲ್ಲಿ ಒಬ್ಬ ಭೂತ ಮಲಗಿದಾನೆಯೆಂತಲೂ, ಒಬ್ಬ ಪರಿಯು ಪೂರ್ವಭಾವಿಯಾಗಿ ಕೃತಸಂಕೇತದಿಂದಲೇ ಎನ್ನುವಾಗ ಅದೇ ಕಾಲದಲ್ಲಿ ಇಂದು ಇಳಿದನೆಂತಲೂ ತಿಳಿಸಿದನು. ಆಗ ಭೂತಗಳೆಲ್ಲಾ ಜಾಗ್ರತೆಯಾಗಿ ಅವರಿಬ್ಬರ ಸುತ್ತಿಕೊಂಡು ಇವರಿಬ್ಬರೂ ಪರಸ್ಥಳದವರು, ಇವರಲ್ಲಿ ಒಬ್ಬನು ಖಚರ. ಇವರಿಬ್ಬರನ್ನೂ ನಮ್ಮ ದೊರೆಯ ಬಳಿಗೆ ಕರೆದುಕೊಂಡು ಹೋಗೋಣ, ಇವರು ತಮ್ಮ ಸಂಗತಿಯನ್ನೆಲ್ಲಾ ಅಲ್ಲಿಯೇ ಹೇಳಿಕೊಳ್ಳಲಿ, ಎಂಬುದಾಗಿ ತಮ್ಮೊಳಗೆ ಒಬ್ಬರಿಗೊಬ್ಬರು ಮಾತನಾಡಿಕೊಂಡರು. ಈ ಮಾತಿಗೆ ಒಬ್ಬ ಭೂತ ಒಪ್ಪದೆ—ಅಯ್ಯಾ ಮಿತ್ರರ, ನಿರಪರಾಧಿಗಳಾದ ಈ ಮಾರ್ಗಸ್ಥರನ್ನು ಬರೀ ಸಂಶಯದ ಮೇಲೆ ಯಾಕೆ ಭಾಧಿಸಬೇಕು? ಅವರಲ್ಲಿ ಒಬ್ಬ ನಮ್ಮ ಕೂಟಕ್ಕೇ ಸೇರಿದವನು, ಇನ್ನೊಬ್ಬ ಪರಿಯಾಗಿದಾನೆ, ಪರಿಗಳಿಗೂ ನಮಗೂ ದ್ವೇಷವೇನೂ ಇಲ್ಲ, ಎಂದು ಹೇಳಿದನು.

ಹೀಗೆ ಮಾತು ನಡೆಯುತಿರುವಾಗ ಕೂಮರ್ಾ ದೊರೆಯು ಎಚ್ಚರವಾಗಿಯೇ ಇದ್ದ. ಅವರು ಆಡುವ ಮಾತನ್ನೆಲ್ಲಾ ಕೇಳುತ್ತಲೇ ಇದ್ದ. ಆ ಭೂತಗಳು ಮಾಡುತ್ತಿದ್ದ ಸಂಭಾಷಣೆಯಲ್ಲಿ ಅವರಿಬ್ಬರನ್ನೂ ಸೆರೆಹಿಡಿದುಕೊಂಡು ಹೋಗತಕ್ಕದ್ದೆಂದು ಸಿದ್ಧಾಂತವಾಯಿತು. ಕೂಮರ್ಾ ದೊರೆಯು ಹಶೀಮನನ್ನು ಎಬ್ಬಿಸಿದ. ಆಗ ಹಶೀಮನು ಆ ಭೂತಗಳನ್ನು ಕುರಿತು ಅವರ ಭಾಷೆಯಲ್ಲಿಯೇ ಹೇಳಿದ್ದು ಹೇಗೆಂದರೆ,

ಹಶೀಮು—ಅಯ್ಯಾ, ನಾವು ಬಹುದೂರದಿಂದ ಬಂದಿದೇವೆ. ಆಯಾಸದಿಂದ
ಮಲಗಿದೇವೆ. ನಮ್ಮನ್ನು ಯಾಕೆ ಎಬ್ಬಿಸಿದಿರಿ, ನಮ್ಮಿಂದ ನಿಮಗೆ ಯೇನು ಕೆಲಸವಿದೆ?

ಭೂತಗಳು—ನೀವು ಯಾರು ?

ಹತೀಮು—ನಾನು ಸಹಾಯರಹಿತನಾದ ವಿದೇಶಿ, ಎಲ್ಲೆಲ್ಲಿಯೋ ಕಾಣದ ಕಡೆಯು ಲ್ಲೆಲ್ಲಾ ತಿರುಗಿ ನೋಡಿದೇನೆ. ಪರಿದೊರೆಯಾದ ಷಮುಸ್ ಷಹನು ಮುಕರ್ಣ ಜಾತಿಯು ಹುಟ್ಟನ್ನೇ ಕಿತ್ತುಹಾಕಿಬಿಟ್ಟ. ಅವರ ಮನೆಗೆ ಬೆಂಕಿ ಹಾಕಿ ಸುಟ್ಟುಬಿಟ್ಟ. ಆದಕಾರಣ ನಾನು ಇಲ್ಲಿಗೆ ಬಂದೆ. ಒಬ್ಬಾನೊಬ್ಬ ಮನುಷ್ಯ ವರ್ಗದವನಿಗೋಸ್ಕರ ಹೀಗೆಲ್ಲಾ ಮಾಡಿದರು. ಆ ಮನುಷ್ಯನು ಬಾರ್ ಸಾಕ್ ದ್ವೀಪಕ್ಕೆ ಈಗ ಹೋಗುತಾ ಇದಾನೆ. ನಿಮ್ಮ ದೊರೆಗೋಸ್ಕರ ರಾಜ್ಯಕಾರ್ಯ ನಿರ್ವಾಹವನ್ನು ಮಾಡಬೇಕಾದರೆ ಯಾವ ಮನುಷ್ಯನಿಗಾಗಿ ಈ ಹಗರಣವೆಲ್ಲಾ ಆಯಿತೋ ಅವನನ್ನು ನೀವು ಹೋಗಿ ಹುಡುಕಿಕೊಳ್ಳಿ. ನನ್ನಂಥಾ ಬಡ ದಾರಿ ಹೋಕರನ್ನು ನಮ್ಮ ದಾರಿ ಹಿಡಿದುಕೊಂಡು ಹೋಗಲಿ ಎಂದು ಬಿಟ್ಟುಬಿಡಿ.

ಭೂತಗಳು—ನಿಮ್ಮ ಕೂಟದವರಿಗೆ ಇಷ್ಟು ಕೋಟಲೆಯಾಗಿದ್ದರೆ, ನೀನು ಪರಿಗಳ ಸಂಗಡ ಸೇರಿಕೊಂಡಿರುವುದು ಹೇಗೆ? ನಿಮ್ಮ ಜೊತೆಗಾರ ಯಾವ ಬಗೆಯುವನು, ಹೇಳು,

ಹತೀಮು—ಅವನು ಕೂಮರ್ಾ ರಾಜ್ಯದ ದೊರೆಮಗ ಮತ್ತು ನಮಗೆ ಸ್ನೇಹಿತ.

ಭೂತಗಳು—ನೀನು ಹೇಳಿದಷ್ಟು ಸಾಕು. ನೀನು ನಿರ್ಬಾಧಕವಾಗಿ ನಿದ್ರೆಮಾಡು. ನಾವು ಯಾರೂ ನಿನಗೆ ತೊಂದರೆ ಮಾಡುವುದಿಲ್ಲ. ನೀನು ಹೇಳಿದ ಮನುಷ್ಯ ನನ್ನು ನಾವು ಹಿಡಿಯುತಕ್ಕದ್ದೇ ನಮಗೆ ಸಾಕಾದಷ್ಟು ಕೆಲಸವಾಗುವುದು.

ಹೀಗೆ ಹೇಳಿ ಭೂತಗಳು ಹೊರಟು ಹೋದರು. ಆಗ ಪರಿದೊರೆಯುನ್ನು ಕುರಿತು

ಹತೀಮು—ನಾವು ಜಾಗ್ರತೆಯಾಗಿ ಎದ್ದು ಹೊರಡೋಣ. ಭೂತಗಳ ಜಾತಿಯನ್ನು ನಂಬಕೂಡದು.

ಹೀಗೆ ನಿಷ್ಕರ್ಷೆಮಾಡಿಕೊಂಡು ಅವರಿಬ್ಬರೂ ಮುಂದಕ್ಕೆ ಪ್ರಯಾಣ ಮಾಡಿ ವಿರಾಮವೇ ಇಲ್ಲದೆ ಮೂರನೇ ದಿವಸ ಸಾಯಂಕಾಲದವರೆಗೂ ದಾರಿ ನಡೆದು ಸಮುದ್ರ ತೀರಕ್ಕೆ ಬಂದು ಸೇರಿದರು.

ಪರಿದೊರೆ—ಇದು ಕಹರ್ಮಾನ್ ಸಮುದ್ರ. ಇದರಲ್ಲಿಯೇ ಬಾರ್ ಸಾಕ್ ದ್ವೀಪ ಇರತಕ್ಕದ್ದು.

ಹತೀಮು—ಇದನ್ನು ದಾಟುವುದು ಹೇಗೆ? ಆ ವಿಸ್ತಾರವಾದ ಸಮುದ್ರದ ಮೇಲೆ ಕಂಣಿಗೆ ಕಾಣುವವರೆಗೂ ಒಂದು ದೋಣಿಯೂ ಗೋಚರವಾಗುವುದಿಲ್ಲವಲ್ಲಾ.

ಪರಿದೊರೆ—ಈ ಸಮುದ್ರ ದಾಟಲು ನಾನು ಉಪಾಯಮಾಡುತೇನೆ, ಇಲ್ಲಿಂದ ಒಂಭತ್ತು ಹರದಾರಿ ದೂರದಲ್ಲಿ, ಒಂದು ಸೀಮೆ ಇದೆ. ಅಲ್ಲಿ ರೆಕ್ಕೆಯುಳ್ಳ ಕುದುರೆಗಳನ್ನು ಸಾಕುತಾರೆ. ಈ ಜಂತುಗಳು ಅತಿ ವಿಸ್ತಾರವಾದ ಸಮುದ್ರದ ಮೇಲೆ ಎಷ್ಟುದೂರ ಬೇಕಾದರೂ ಹಾರಿಹೋಗುವವು. ಎಷ್ಟು ತುಫಾನ್

ಬಂದಾಗ್ಯೂ ಅವುಗಳಿಗೆ ಅಡ್ಡಿಯಾಗುವುದಿಲ್ಲ. ನಾನು ಇಲ್ಲಿಲ್ಲದೇ ಇರುವಾಗ ನೀನು ಇಲ್ಲಿರುತೀಯ ? ನಾನು ಕೂಡಲೇ ಹೋಗಿ ರಕ್ಕೆ ಕುದುರೆಗಳೆರಡನ್ನು ಸಂಪಾದಿಸುತೇನೆ. ಇದರಿಂದ ನಮ್ಮ ಸಾಹಸವು ಜಯಪ್ರದವಾಗುವುದು.

ಹೀಗೆ ಹೇಳಿ ಕೂವರ್ಮಾ ರಾಜಪುತ್ರನು ಹತೀಮನನ್ನು ಸಮುದ್ರದ ತಡಿಯಲ್ಲಿ ಬಿಟ್ಟು ಕೂಡಲೆ ತನ್ನ ರೆಕ್ಕೆಗಳಿಂದ ವಾಯುಮಂಡಲವನ್ನು ಕತ್ತರಿಸಿಕೊಂಡು ರಕ್ಕೆ ಕುದುರೆಗಳಿರುವ ಕಡೆಗೆ ಬಂದನು. ಆ ರಾಜ್ಯದ ದೊರೆಯು ಇವನಿಗೆ ಪರಮಾಪ್ತನಾದ್ದರಿಂದ ಇವನನ್ನು ಆತನ ಭೇಟಿಗೆ ಒಳಕ್ಕೆ ಬಿಟ್ಟುಕೊಂಡರು. ಅವರವರಿಗೆ ನಮಸ್ಕಾರ ಪ್ರತಿನಮಸ್ಕಾರಗಳಾದ ಮೇಲೆ ಖಚರರಾಜನು ತಾಬಂದ ಕಾರ್ಯವನ್ನು ವಿವರಿಸಿದನು.

ಖಚರರಾಜ—ಬಾರ್ ಸಾಕಿಗೆ ಹೋಗಲು ಸಮುದ್ರವನ್ನು ದಾಟುವುದಕ್ಕಾಗಿ ನಿಮ್ಮಲ್ಲಿರುವ ಅತ್ಯಂತ ವೇಗವಾದ ಎರಡು ಅಶ್ವಗಳು ನನಗೆ ಬೇಕು. ಈ ಉಪಕಾರವನ್ನು ನೀವು ನನಗೆ ಮಾಡಿದರೆ, ಯಾವಾಗ ಬೇಕಾದರೂ ನನ್ನ ಸೇವೆಯನ್ನು ನೀವು ಅಪೇಕ್ಷಿಸಬಹುದು, ಎಂದನು.

ಈ ಮಾತನ್ನು ಕೇಳಿ ರಕ್ಕೆ ಕುದುರೆ ಸೀಮೆಯ ದೊರೆಯು—ನಿಮಗೆ ಬೇಕಾದ ಕುದುರೆಗಳನ್ನು ತೆಗೆದುಕೊಳ್ಳಬಹುದೆಂದು ಹೇಳಿದನು. ಕಾವರ್ಮಾ ರಾಜಪುತ್ರನು ಉತ್ತಮವಾದ್ದೆಂದು ತನಗೆ ತೋರಿದ ಎರಡು ಕುದುರೆಗಳನ್ನು ಚುನಾಯಿಸಿಕೊಂಡು ತನ್ನ ಸ್ನೇಹಿತನಾದ ಹತೀಮನು ಇದ್ದೆಡೆಗೆ ಹಿಂತಿರುಗಿ ಬಂದನು.

ಅವರಿಬ್ಬರೂ ಆ ಘೋಟಕಗಳನ್ನೇರಿಕೊಂಡರು. ಆ ಕುದುರೆಗಳು ರೆಕ್ಕೆಗಳನ್ನು ಪಸರಿಸಿಕೊಂಡು ಹದ್ದುಗಳ ಹಾಗೆ ವಾಯುಮಂಡಲಕ್ಕೆ ಹಾರಿಹೋದ್ದನ್ನು ಕಂಡು ಹತೀಮನಿಗೆ ಅತ್ಯಾಶ್ಚರ್ಯವಾಯಿತು. ಅವುಗಳ ವೇಗವು ಅತಿಯಾದ್ದರಿಂದ ಅವನು ಅದರ ಮೇಲೆ ಬಲವಾಗಿ ಕೂತುಕೊಳ್ಳುವುದೇ ಕಷ್ಟವಾಯಿತು. ಕೆಲವು ದಿನಗಳಲ್ಲಿ ಅರ್ಧದಾರಿ ಸಾಗಿ ಹೋಯಿತು. ಆದರೆ ಹತೀಮನಿಗೆ ಹಸಿವು ನಿದ್ರೆ ಬಾಯಾರಿಕೆ ವಿಶೇಷವಾದ ಕಾರಣ ಮುಂದಕ್ಕೆ ಹೋಗುವುದು ಅಸಾಧ್ಯವಾಯಿತು. ಇವನು ತನ್ನ ಕಷ್ಟವನ್ನು ಪರಿರಾಜನ ಸಂಗಡ ಹೇಳಿಕೊಂಡನು.

ಆಗ ಆ ಖಚರಾಧಿಪನು ಒಂದು ವಿಧವಾದ ಚಿಕ್ಕ ಹಣ್ಣುಗಳನ್ನು ಹತೀಮನ ಕೈಗೆ ಕೊಟ್ಟು—ಅಪೂರ್ವವಾದ ಈ ಹಣ್ಣಿನಲ್ಲಿ ಸ್ವಲ್ಪಮಟ್ಟಿಗೆ ತಿನ್ನು, ನಿನ್ನ ಆಯಾಸವೆಲ್ಲಾ ಪರಿಹಾರವಾಗುವುದು ಎಂದನು. ಆ ಕೂಡಲೆ ಹತೀಮನು ಅದನ್ನು ಸ್ವಲ್ಪ ಬಾಯಿಗೆ ಇಟ್ಟುಕೊಳ್ಳಲು ಅದರ ಪ್ರಯೋಜನವು ಅತ್ಯದ್ಭುತವಾಗಿ ತೋರಿತು. ಮೊದಲಿನ ಹಾಗೆ ಶಕ್ತಿ ಬಂತು ಮತ್ತು ಮುಂದಿನ ಪ್ರಯಾಣದಲ್ಲಿ ಅವನಿಗೆ ಲೇಶವೂ ಆಯಾಸವಾಗಲಿಲ್ಲ.

ಕೆಲವು ದಿವಸದ ಮೇಲೆ ಆ ಅಶ್ವಗಳು ಕಹರ್ ಮಾನ್ ಸಮುದ್ರದ ಆಚೆ ತಡಿಯನ್ನು ಸೇರಿದವು. ಕ್ಷೇಮವಾಗಿ ಭೂಮಿಯ ಮೇಲೆ ಇಳಿದ ಕೂಡಲೆ ಹತೀಮನಿಗೆ ಬಹಳ ಸಂತೋಷವಾಯಿತು. ಆಗ ತನ್ನ ಸಂಗಾತಿಯನ್ನು ಕುರಿತು

ಹತೀಮು—ಅಯ್ಯಾ ಮಿತ್ರ, ಬಾರ್‌ಸಾಖ್ ದ್ವೀಪವನ್ನೇನೋ ನಾವು ದಾಟಿ ಬಿಟ್ಟೆವು. ಅದು ಸಮುದ್ರದ ಮಧ್ಯದಲ್ಲಿದೆ ಎಂದು ನಾನು ಕೇಳಿಬಲ್ಲೆ.

ಪರಿದೊರಿ—ಘನವಾದ ಪುರುಷನೆ, ನಾವು ಇಳಿದುಕೊಂಡಿರತಕ್ಕದ್ದು ಆ ದ್ವೀಪದ ಒಂದು ಭಾಗ, ನಾವು ರಾಜಧಾನಿಯನ್ನು ಸೇರಬೇಕಾದರೆ ಇನ್ನೂ ಹತ್ತು ದಿವಸ ಬೇಕು. ಈಗ ನನಗೆ ಜ್ಞಾಪಕ ಬಂತು. ನಾನು ಹೋಗಿ ನಮ್ಮ ಸೇನೆಯನ್ನು ಜೊತೆಮಾಡಿಕೊಂಡು ಬರುತೇನೆ. ಅವರು ನಮ್ಮ ಸಂಗಡ ಅಲ್ಲಿಗೆ ಬರಬೇಕಾಗುವುದು.

ಹತೀಮು—ಚೆನ್ನಾಗಿ ಈ ವಿಷಯವನ್ನು ಯೋಚಿಸು. ಮಹಾರ್ಯ ಸುಲೇಮಾನಿಯ ಮೇಲೇನಾದರೂ ಯುದ್ಧಮಾಡಬೇಕಾಗಿದೆಯೆ?

ಪರಿದೊರಿ—ಇಲ್ಲ. ಆದರೆ ನಾವು ಮುಂಚಿತವಾಗಿ ಜಾಗರೂಕರಾಗಿರಬೇಕು. ಇಲ್ಲವಾದರೆ, ಅನೇಕ ಅಡ್ಡಿಗಳು ಪ್ರಾಪ್ತವಾಗುವವು, ಅದೂ ಜಾಗ್ರತೆಯಾಗಿಯೇ.

ಹತೀಮು—ನಿನ್ನ ಸೇನೆಯನ್ನು ಜೊತೆಮಾಡಿಕೊಂಡು ಇಲ್ಲಿಗೆ ಬರಲು ಎಷ್ಟು ದಿವಸ ಬೇಕಾದೀತು?

ಪರಿದೊರಿ—ಏಳು ದಿವಸದೊಳಗಾಗಿ ನಾನು ಹಿಂತಿರುಗಿ ಬಂದೇನು.

ಈ ಪ್ರಕಾರ ಪರಿದೊರಿಯು ಹತೀಮನ ಅನುಮತಿಯನ್ನು ಹೊಂದಿ ಹೊರಟನು. ಹೀಗೆ ಒಂಟಿಯಾಗಿ ಉಳಿದುಕೊಂಡ ಯಮೆನ್ ರಾಜಕುಮಾರನು ಅಲ್ಲಿ ಸುತ್ತ ಇರುವ ಪ್ರಾಂತವನ್ನು ನೋಡುತಾ ಹೋದ. ಒಳ್ಳೇ ವಾಸನೆಯುಳ್ಳಂಥಾ ಒಂದು ತೋಟ ಸಿಕ್ಕಿತು. ಅದರ ಬಾಗಿಲು ತೆರೆದಿತ್ತು. ಅದರೊಳಕ್ಕೆ ಪ್ರವೇಶಮಾಡಿದ. ಅವನು ಅದುವರೆಗೆ ಕಂಡದ್ದರಲ್ಲಿ ಬಗೆಬಗೆ ಬಂಣಗಳನ್ನುಳ್ಳಂಥಾ ಹಂಣುಗಳು ಜಗಿಯುತ್ತಿರುವಂಥ ಮರಗಳು ಕಂಣಿಗೆ ಬಿದ್ದು ಬಹಳ ಆನಂದವಾಯಿತು. ಈ ಆನಂದದಲ್ಲಿ ಒಂದು ವಾರ ಕಳೆಯಿತು. ಆ ದೊಡ್ಡ ತೋಟದಲ್ಲಿ ಯಾವ ನಿರ್ಬಂಧವೂ ಇಲ್ಲದೆ ಓಡಿಯಾಡುತಿದ್ದನು. ಕುದುರೆಗಳು ಬಹು ಸಾಧುವಾಗಿದ್ದವು ಅವು ಇವನಿಗೆ ಹೆಚ್ಚಾಗಿ ಒಗ್ಗಿಕೊಂಡಿದ್ದವು. ಹಗಲು ಮೇಯುವುದಕ್ಕೆ ಸಮುದ್ರತೀರಕ್ಕೆ ಬರುತಿದ್ದವು, ರಾತ್ರಿ ತೋಟಕ್ಕೆ ತಾವಾಗಿ ಬರುತಿದ್ದವು.

ಅತ್ತ ರಾಜಪುತ್ರನು ಪಿತ್ರಾರ್ಜಿತವಾದ ತನ್ನ ರಾಜ್ಯಕ್ಕೆ ಹೋದ, ಅಲ್ಲಿ ಇವನ ಪ್ರಜೆಗಳು ಈ ಸಂತೋಷಕರವಾದ ವರ್ತಮಾನವನ್ನು ಜಾಗ್ರತೆಯಾಗಿ ಕೊಂಡು ಹೋಗಿ ಅವನ ತಂದೆತಾಯಿಗಳಿಗೆ ತಿಳಿಸಿದರು. ಈ ವೃದ್ಧ ಮಾತಾಪಿತೃಗಳು ಮಗನನ್ನು ಕಾಣಲು ಇಸ್ತಂಬಾಲ್‌ಗೆ ಹೋಗಿ ಮಗನನ್ನು ಕಂಡು—ಪುತ್ರನೆ, ಬಾರ್‌ಸಾಖ್ ದ್ವೀಪಕ್ಕೆ ವಿಜಯಾರ್ಥವಾಗಿ ಹೊರಟ ನಿನ್ನ ಸೇನೆಯ ಮೇಲ್ವಿಚಾರಣೆಗಾಗಿ ನಮ್ಮನ್ನು ಬಿಟ್ಟು ಹೊರಟುಹೋಗಿ ಬಹಳ ದಿವಸವಾಯಿತು. ನಿನ್ನ ಸೇನೆಯನ್ನು ಬಿಟ್ಟು ನೀನು ಓಡಿಹೋಗುವಂಥಾ ಸಂದರ್ಭವೇನು ಬಂತು? ನಿನ್ನನ್ನು ಆಗಲಿರುವ ನಮಗೆ ಉಂಟಾಗುವ ಕಷ್ಟವನ್ನೂ ದುಃಖವನ್ನೂ ನೀನು ಯೋಚಿಸ

ಲಿಲ್ಲವೇ? ಮಗುವೆ ಇದಕ್ಕಾಗಿ ನಿನ್ನನ್ನು ಆಕ್ಷೇಪಿಸಲಿಲ್ಲ. ನಿನ್ನ ಇಷ್ಟ ನೆರವೇರಿತೆ ಜಾಗ್ರತೆಯಾಗಿ ಹೇಳು, ಎಂದು ಕೇಳಿದರು.

ಆಗ ಮಗನು ಕಂಣಿನಲ್ಲಿ ನೀರ ತಂದುಕೊಂಡು—ನನ್ನ ಅಪರಾಧವನ್ನು ಕ್ಷಮಿಸ ಬೇಕು, ತಮ್ಮ ವಿಷಯದಲ್ಲಿ ಇಷ್ಟು ಅಲಕ್ಷ್ಯವಾಗಿ ನಡೆದುಕೊಂಡ ನಾನು ಜಯ ಉಂಟಾಗಲಿ ಎಂದು ಹೇಗೆ ನಿರೀಕ್ಷಿಸಲಿ? ನಾನು ಹೊರಟು ಹೋದಾಗಿನಿಂದ ಹಿಂಸೆ ನಿರಾಶೆ ಇದೇ ನನ್ನ ಭಾಗಕ್ಕೆ ಬಂತೇ ಹೊರತು ಮತ್ತೆ ಯಾವುದೂ ಇಲ್ಲ. ಈಚೀಚಿಗೆ ನನ್ನ ಅದೃಷ್ಟ ಸ್ವಲ್ಪ ಅನುಕೂಲಿಸಿತು. ಮನುಷ್ಯ ವರ್ಗದಲ್ಲಿ ಸರ್ವೋತ್ತಮನಾದ ಒಬ್ಬ ಪುರುಷನ ಸ್ನೇಹ ನನಗೆ ದೊರೆಯಿತು. ಅರಬಸ್ಥಾನದ ರಾಜಪುತ್ರನಾದ ಹತೀಮು ತಾಯಿ ಎಂಬವನು ಷಹಾಬಾದಿನಿಂದ ಮರ್‌ಘಾಜ್ ಎಂಬ ಮುತ್ತನ್ನು ಹುಡುಕಿಕೊಂಡು ಹೋಗುತಿದಾನೆ ಆ ಮುತ್ತು ಮಹ್ಯಾರನ ಬಳಿಯಲ್ಲಿದೆ. ನಾನು ಒಂದು ಪರ್ವತದ ಗುಹೆಯಲ್ಲಿ ಒಂಟಿಯಾಗಿ ಕೂತು ದುಃಖಪಡುತಾ ಇದ್ದದನ್ನು ಅವನು ಕಂಡು ನನ್ನ ರೋದನಕ್ಕೆ ಕಾರಣವನ್ನು ನನ್ನಿಂದ ತಿಳಿದುಕೊಂಡು ಕೇವಲ ದಯಾ ರಸವನ್ನು ತೀರಿಸುವ ಧ್ವನಿಯಿಂದ—ನಿರಾಶೆಯಾಗಬೇಡೈ; ನನ್ನ ಕಾರ್ಯ ಜಯಪ್ರದ ವಾಗುವುದೆಂದು ನನಗೆ ನಂಬಿಕೆ ಇದೆ. ನನಗೆ ಮುತ್ತು ಮಾತ್ರ ಬೇಕಾಗಿದೆ, ಆ ಸ್ತ್ರೀರತ್ನವನ್ನು ನಿನಗೆ ಕೊಡುತೇನೆ ಎಂದ. ಇದು ಬರೀ ಮಾತಲ್ಲ. ಹತೀಮನು ನಿಷ್ಕಲ್ಮಷಹೃದಯನಾಗಿಯೂ ನಿಷ್ಕಪಟವಾದ ವಾಕ್ಕುಳ್ಳವನಾಗಿಯೂ ಇದಾನೆ, ಎಂಬುದಾಗಿ ಹೇಳಿದ.

ಆ ತಾಯಿತಂದೆಗಳು ಈ ಮಾತನ್ನು ಕೇಳಿ ಆ ರಾಜಪುತ್ರನ ಹೋಕೆಯರಿಯದ ಸ್ವಭಾವಕ್ಕೆ ನಕ್ಕರು. ತಂದೆ (ಮಗನನ್ನು ಕುರಿತು)—ನಾನು ತಿಳಿದುಕೊಂಡಿದ್ದದ ಕ್ಕಿಂತಲೂ ಹೆಚ್ಚಾದ ಭೋಳೆತನವೂ ಅನನುಭವವೂ ನಿನ್ನಲ್ಲಿದೆ. ನಮ್ಮಲ್ಲಿ ಅತ್ಯಂತ ಬುದ್ಧಿವಂತರು ಕೂಡ ಆ ಮೌಕ್ತಿಕವನ್ನು ಪಡೆಯಬೇಕೆಂದು ಹೋಗಿ ಭಗ್ನಮನೋ ರಥರಾದರು ಒಬ್ಬ ಸಾಧಾರಣ ಮನುಷ್ಯಮಾತ್ರದವನು, ನಮ್ಮ ರಹಸ್ಯಗಳನ್ನರಿಯ ದವನು ಅದನ್ನು ಹೇಗೆ ಸಾಧಿಸಿಯಾನು? ಇಂಥಾ ಅಲ್ಪವಾದ ಆಧಾರದ ಮೇಲೆ ನಿನ್ನ ಆಸೆಯನ್ನು ನಿಲ್ಲಿಸಿಕೊಳ್ಳತಕ್ಕ ಅಲ್ಪಬುದ್ಧಿಯೂ ನಿನಗಿದೆಯೋ?

ರಾಜಪುತ್ರ—ಅಪ್ಪಾಜಿ, ಬುದ್ಧಿಯಲ್ಲಿ ಹತೀಮನನ್ನು ಮೀರಿಸಿದವರಿಲ್ಲ. ಆವನು ಬಹಳವಾಗಿ ದೇಶಾಟನೆ ಮಾಡಿದವನು. ಈ ಭೂಮಂಡಲದಲ್ಲಿರುವ ಅನೇಕ ರಹಸ್ಯ ಸ್ಥಳಗಳನ್ನೆಲ್ಲಾ ಬಲ್ಲವನು. ಈ ಕೋರಿಕೆಯಿಂದ ಕಹರ್‌ಮಾನ್ ಸಮುದ್ರಕ್ಕೆ ನನ್ನ ಸಂಗಡ ಬಂದಿದ್ದ ಈಗ ಬಾರ್‌ಸಾಖ್ ಸಮುದ್ರತೀರದಲ್ಲಿ ಕಾದಿದಾನೆ

ತಂದೆಯಾದ ದೊರೆ—ಹೇಗಾದರಾಗಲೀ, ಮಗನೆ, ಅವನನ್ನು ಬಿಟ್ಟು ನೀನು ಇಲ್ಲಿಗೆ ಬರಲು ಕಾರಣವೇನು ಹೇಳು.

ರಾಜಪುತ್ರ—ನಮ್ಮ ಉತ್ತಮವಾದ ಸೇನೆಯನ್ನು ತೆಗೆದುಕೊಂಡು ಕ್ಷೇಮದಿಂದ ಮಹ್ಯಾರನ ಆಸ್ಥಾನಕ್ಕೆ ಹೋಗಿ ತಲುಪುವುದು

ಆ ದೊರೆಯು ಮಗನ ಮಾತನ್ನು ಕೇಳಿ ಸ್ವಲ್ಪ ಹೊತ್ತು ಯೋಚಿಸಿ ತನ್ನ ಆಯಪಾಣಿಯಾದ 12,000 ಸೇನೆಯನ್ನು ಕರೆಯಿಸಿ ತನ್ನ ಮಗನ ಕೈಕೆಳಗೆ ಇರಬೇಕೆಂದು ನೇಮಕಮಾಡಿದನು. ಅದನ್ನು ಕಂಡು ರಾಜಪುತ್ರನು ಮಾತಾಪಿತೃ ಗಳಿಗೆ ಬೀಳ್ಕೊಂಡು ಸೇನೆಯೊಡನೆ ಬಾರ್‌ಸಾಖ್ ದ್ವೀಪಕ್ಕೆ ಹೊರಟನು. ದೊರೆಯು ಹೊರಟು ಹೋದ ಸೈನ್ಯಕ್ಕೆ ಬದಲಾಗಿ ಬೇರೆ ನೇಮಕ ಮಾಡಿಕೊಂಡನು. ಸುಮಾರು ಗೊತ್ತುಮಾಡಿಕೊಂಡಿದ್ದ ಗಡಬಡೊಳಗಾಗಿ ಆ ರಾಜಪುತ್ರನು ಬಾರ್‌ಸಾಖ್ ದ್ವೀಪ ವನ್ನು ತಲುಪಿ, ತನ್ನ ಸೇನೆಯವರಿಂದ ಅವೃತನಾಗಿ ಹತೀಮು ಇದ್ದ ಉದ್ಯಾನವನದಲ್ಲಿ ರಾತ್ರಿಯನ್ನು ಕಳೆದು, ಮಾರನೇದಿನ ಉದಯಕಾಲಕ್ಕೆ ಎದ್ದು ರಾಜಧಾನಿಗೆ ಹೊರಟನು. ಈ ಮಧ್ಯ ಆ ದ್ವೀಪದ ಒಂದು ಕೊನೆಯಲ್ಲಿ ಆ ಕಾಡಿನಲ್ಲಿ ಮರಳ ಕಣಗಳೆಷ್ಟಿವೆಯೊ ಅಷ್ಟೊಂದು ಜನ ಪರಿಗಳ ದೊಡ್ಡ ಗುಂಪು ಜಾಗ್ರತೆಯಿಂದ ಹೊರಟಿತೆಂದು ಮಹ್ಯಾರನಿಗೆ ವರ್ತಮಾನ ಬಂತು. ಶತ್ರುಗಳ ಅಭಿಮತವು ವಿರೋಧ ವನ್ನು ಬೆಳಿಸತಕ್ಕದ್ದಾಗಿದ್ದರೆ ಅವರಿಗೆ ಯುದ್ಧ ಕೊಡಲು ಅನುವಾಗಬೇಕೆಂದು ತನ್ನ ಸೇನೆಯನ್ನು ಅವನು ಸಜ್ಜು ಮಾಡಿದನು.

ಹತೀಮನೂ ಪರಿರಾಜ ಕುಮಾರನೂ ತಮ್ಮ ಆಯಪಾಣಿಯಾದ ದಂಡಿನೊಡನೆ ಬಾರ್‌ಸಾಖ್‌ನ ಪಟ್ಟಣದ ಸಮೀಪಕ್ಕೆ ಹೋಗಲು ತಮ್ಮಲ್ಲಿದ್ದದಕ್ಕಿಂತಲೂ ಬಲವಾದ ದಂಡು ಯುದ್ಧಕೊಡುವುದಕ್ಕೆ ಸಿದ್ಧವಾಗಿದ್ದದನ್ನು ಕಂಡು ಅವರಿಬ್ಬರಿಗೂ ಆಶ್ಚರ್ಯ ವಾಯಿತು. ಇವರು ಈ ದಂಡು ಕೇವಲ ಜಾಗರೂಕನಾದ ಮಹ್ಯಾರನದೆಂದು ತಿಳಿದು ಅವನ ಅಭಿಮತವನ್ನು ಅರಿಯಬೇಕೆಂದು ಸಿದ್ಧಾಂತ ಮಾಡಿಕೊಂಡರು ಆಗ ಪರಿರಾಜ ಪುತ್ರನು—ಸಮಾಧಾನವನ್ನೂ ಸಖ್ಯವನ್ನೂ ಬೆಳಿಸುವುದು ತನ್ನ ಅಭಿಮತವೇ ಹೊರತು ಜಗಳವನ್ನು ಹೂಡಿ ಪ್ರಾಣಹತವನ್ನು ಮಾಡುವುದು ತನಗೆ ಇಷ್ಟವಿಲ್ಲ, ತಾನು ಬಾರ್‌ಸಾಖ್ ದೊರೆಯ ಭೇಟಿ ಮಾಡುವುದಕ್ಕಾಗಿ ಮಾತ್ರ ಬಂದಿದೇನೆ, ಎಂದು ದೂತರ ಮುಖಾಂತರ ಹೇಳಿ ಕಳುಹಿಸಿದನು. ಆಗ ಯೋಗ್ಯನಾದ ಮಹ್ಯಾರನು—ಮಿತ್ರಭಾವದಲ್ಲಿ ಬರತಕ್ಕ ಅವನ ಗೋಜಿಗೆ ಯಾರೂ ಬರುವುದಿಲ್ಲ, ತನ್ನ ಆಗಮನವು ನಮಗೆ ಬಹಳ ಸಂತೋಷಕರವಾದ್ದು ಎಂದು ಕೂರ್ಮಾ ದೊರೆಗೆ ಪ್ರತಿ ರಾಯಭಾರಿಗಳ ಮೂಲಕ ಹೇಳಿಕಳುಹಿಸಿದನು.

ಆಗ ಹತೀಮು ಅವನ ಮಿತ್ರ ಮತ್ತು ಇವರ ಅನುಚರರು ಸಹ ಪುರಪ್ರವೇಶ ಮಾಡಲು ಅಪ್ಪಣೆಯಾಯಿತು. ಅವರಿಗೆ ಬೇಕಾದ ಉಪಚಾರಗಳನ್ನು ಮಾಡಿಸಿದ ತರುವಾಯ, ಅವರು ಬಂದ ರಾಜಕಾರ್ಯವೇನೆಂದು ತಿಳಿದುಕೊಂಡು ಬರಲು ಮಹ್ಯಾರನು ಚಾರರ ಮುಖಾಂತರ ಹೇಳಿ ಕಳುಹಿಸಿದನು, ಆಗ

ಪರಿರಾಜ ಪುತ್ರ—ಹೋದ ಸಾರಿ ನಾನು ಇಲ್ಲಿಗೆ ಬಂದಿದ್ದಾಗ, ನನ್ನ ಮನಸ್ಸಿಗೆ ಖೇದ

ಉಂಟಾಗುವಂತಾಯಿತು. ಈಗ ಮನುಷ್ಯ ವರ್ಗದವರಲ್ಲಿ ಸರ್ವೋತ್ತಮವಾದ ಪುರುಷನನ್ನು ಕರೆದು ತಂದಿದ್ದೇನೆ. ಅದೇ ಕಾರ್ಯಕ್ಕಾಗಿ ಆತನು ಬಹಳ ದೂರದಿಂದ ಬಂದಿದಾನೆ.

ಮಹ್ಯಾರ—(ಅವರನ್ನು ಒಳಕ್ಕೆ ಬಿಡುವುದೆಂದು ಹೇಳಿ ಕರೆಯಿಸಿ) ಅಯ್ಯೋ ಯೆಮನ್ ರಾಜಕುಮಾರರೆ, ಯಾವ ಕಾರ್ಯಗೌರವದಿಂದ ನಮ್ಮ ಸೀಮೆಗೆ ದಯ ಮಾಡಿದಿರಿ ?

ಹತೀಮ—(ತಾನು ಬೆಳ್ಳಿಯಲ್ಲಿ ಮಾಡಿಸಿ ತಂದಿದ್ದ ಮರ್‌ಘಾಜ್ ಮುತ್ತಿನ ಮಾದರಿಯನ್ನು ತಗೆದು ಹಸನ್‌ಬನು ಮತ್ತು ಮುನೀರನ ಪ್ರಣಯ ವಿಚಾರವನ್ನು ತಿಳಿಸಿ) ಹಸನ್‌ಬನುವು ಈ ಮಾದರಿ ಮುತ್ತನು ತಂದುಕೊಡಬೇಕೆಂದು ಒಂದು ಸಮಯಬಂಧ ಮಾಡಿದಾಳೆ. ಇದು ಅವಳ ಇಷ್ಟಾನುಸಾರ ನಡೆಸಬೇಕಾದ ಆರನೇ ಸಾಹಸವಾಗಿದೆ.

ಮಹ್ಯಾರ—ಅವಳಲ್ಲಿರತಕ್ಕ ಮುತ್ತಿನಂಥಾ ಮುತ್ತು ಎಲ್ಲಿದೆ ?

ಹತೀಮ—ಪ್ರಪಂಚದಲೆಲ್ಲಾ ಇದಕ್ಕೆ ಸಮಾನವಾದ ಮುತ್ತು ನಿಮ್ಮಲ್ಲಿದೆ ಎಂದು ತಿಳಿದುಬಂದಿದೆ. ಅದಕ್ಕಾಗಿ ನಾನು ಇಲ್ಲಿಗೆ ಬಂದೆ.

ಮಹ್ಯಾರ—ನನ್ನ ಅರಮನೆಯಲ್ಲಿ ಇಂಥಾ ಮುತ್ತು ಇರುವುದು ನಿಜ. ನನ್ನ ಮಾತನ್ನು ನಡೆಸಿಕೊಟ್ಟರೆ ಆ ಮೌಕ್ತಿಕವೂ ನನ್ನ ಮಗಳು ತಮ್ಮದೇಯೆ.

ಈ ಮಾತಿಗೆ ಹತೀಮನು ಯಾವ ಮಾತನ್ನೂ ಆಡದೆ ಸ್ವಲ್ಪ ಹೊತ್ತು ಸುಮ್ಮನಿದ್ದು, ಚೆನ್ನಾಗಿ ಮಾಡಿದ ಆಲೋಚನೆಯಿಂದ ಹೇಳಿದ್ದೇನೆಂದರೆ,

ಹತೀಮ—ಆ ಮುತ್ತು ಮಾತ್ರ ನನಗೆ ಉಪಯೋಗವಾಗುವುದು. ಆದರೆ ತಮ್ಮ ಪುತ್ರಿಯನ್ನು ನಾನು ಅಂಗೀಕರಿಸಲು ಇಷ್ಟವಿಲ್ಲ.

ಮಹ್ಯಾರ—ಮುತ್ತು ತಮಗೆ ದೊರೆತಮೇಲೆ, ನನ್ನ ಮಗಳನ್ನು ನೀವು ಬೇಕಾದರೆ ಅಂಗೀಕಾರಮಾಡಬಹುದು ಅಥವಾ ಬಿಡಬಹುದು, ಅದು ನಿಮ್ಮ ಇಷ್ಟ. ಆದರೆ ಅವಳು ನಿಮ್ಮ ಸ್ವಾಧೀನದಲ್ಲಿರುತಾಳೆ, ಅವಳನ್ನು ನೀವು ಬೇಕಾದವರಿಗೆ ಕೊಡಬಹುದು.

ತರುವಾಯ ಹತೀಮನು ಮಹ್ಯಾರನ ಇಷ್ಟಪ್ರಕಾರ ಆ ಮುತ್ತಿನ ಕಥೆಯನ್ನೆಲ್ಲಾ ಕಾಡಿನಲ್ಲಿ ನಾಟಿಕ ಪಕ್ಷಿಯಿಂದ ತಾನು ಕೇಳಿದ್ದುದನ್ನೆಲ್ಲಾ ಹೇಳಿದನು. ಅವನು ಹೇಳಿದ ವಿವರವನ್ನೆಲ್ಲಾ ಮಹ್ಯಾರನು ಚೆನ್ನಾಗಿ ಕಿವಿಗೊಟ್ಟು ಕೇಳಿ ತನ್ನ ರಹಸ್ಯವಾದ ಭಂಡಾರಕ್ಕೆ ಹೋಗಿ ಆ ಮುತ್ತನ್ನು ತಂದು—ಧೀರನಾದ ಹತೀಮ, ನೀವು ನ್ಯಾಯವಾಗಿ ಹೊಂದಿರತಕ್ಕ ಈ ಮೌಕ್ತಿಕವನ್ನು ತೆಗೆದುಕೊಳ್ಳಿ. ಆದರೆ ನನ್ನ ಮಗಳ ವಿನಿಯೋಗ ಹೇಗೆ ?

ಕೂಡಲೆ ಹತೀಮನು ಕುಮಾರ್ಗಾನಿನ ಪರಿರಾಜಪುತ್ರನಿಗೆ ಆ ರಾಜಕನ್ನಿಕೆಯನ್ನು ಕೊಟ್ಟು ವಿವಾಹ ಮಾಡಿಸಿದನು. ಈ ಶುಭಕಾರ್ಯಕ್ಕೆ ಆ ಕನ್ನೆಯ ತಂದೆಯೂ

ಸಮ್ಮತಿಸಿದನು. ಸುಮಾರು ಒಂದು ತಿಂಗಳ ತರುವಾಯ ಹಕೀಮನು ಮುಹ್ಯಾರನ ಅನುಮತಿ ಹೊಂದಿ ತನ್ನ ಪರಿರಾಜಪುತ್ರ ಅವನ ವಧು ಇವರುಗಳೊಡಗೂಡಿ ಕಹರ್ಮಾನ್ ಸಮುದ್ರತೀರಕ್ಕೆ ಬಂದು ಪರಿರಾಜ ಕುಮಾರನು ಅವನ ರಾಜ್ಯಕ್ಕೆ ಹೋಗಬಹುದೆಂತಲೂ ತಾನು ಷಹಬಾದಿಗೆ ಹೋಗುತ್ತೇನೆಂತಲೂ ಹೇಳಲು,

ಪರಿರಾಜಪುತ್ರ—ಕಡೇಪಕ್ಷ ನನ್ನ ಪ್ರಜೆಗಳನ್ನು ಷಾಮುಸ್‌ಷಹ ರಾಜ್ಯದವರೆಗೂ ಮೈಗಾವಲಿಗೋಸ್ಕರ ಕಳುಹಿಸುತ್ತೇನೆ.

ಹೀಗೆ ಹೇಳಿದ ಮಾತಿಗೆ ಹಕೀಮ ಒಪ್ಪಿ ರಕ್ಕೆ ಕುದುರೆಯ ಮೇಲೆ ಕೂತು ಕೊಂಡು ಅಯುಪಾಣಿಯಾದ ಮೈಗಾವಲಿನವರೊಡಗೂಡಿ ಸಮುದ್ರವನ್ನು ದಾಟಿ ಭೂತಗಳ ರಾಜ್ಯದಲ್ಲಿ ಇಳಿದು ಸ್ವಲ್ಪದೂರ ಹೋಗುವಷ್ಟರಲ್ಲಿಯೇ ಭೂತ ಸೇವಕರು ಕಂಡು ಮುಂದಕ್ಕೆ ಬಿಡುವುದಿಲ್ಲವೆಂದು ಅಡ್ಡಿ ಮಾಡಿದರು. ಪರಿಗಳು ಸ್ವಲ್ಪ ಜನರೇ ಇದ್ದದರಿಂದ ಅವರನ್ನು ಎದುರಿಸಲು ಸಾಮರ್ಥ್ಯ ಸಾಲದೆ ಆ ಭೂತಗಳನ್ನು ಕುರಿತು ಹೇಳಿದ್ದೇನೆಂದರೆ—ಮಿತ್ರರೆ, ನಾವು ನಾವು ಏಕವಂಶೋತ್ಪನ್ನರು; ನಿಮ್ಮ ಮೇಲೆ ನಮಗೇನೂ ದ್ವೇಷವಿಲ್ಲ. ನಿಮ್ಮ ದೇಶದಲ್ಲಿ ಹಾದುಹೋಗುತ್ತೇವೆ, ಷಾಮುಸ್‌ಷಹನು ಬಹು ದೀರ್ಘಕಾಲ ಕಷ್ಟಕ್ಕೆ ಗುರಿಯಾಗಿದ್ದು ಈಚೆಗೆ ಸೌಖ್ಯ ಉಂಟಾದ್ದಕ್ಕಾಗಿ ನನಗೆ ಉಂಟಾದ ಸಂತೋಷವನ್ನು ಅರಿಕೆ ಮಾಡಲು ನಮ್ಮ ದೊರೆಯು ನಮಗೆ ಅಪ್ಪಣೆ ಕೊಟ್ಟು ಕಳುಹಿಸಿದಾನೆ, ಎಂದು ಹೇಳಿದರು.

ಈ ಮಾತನ್ನು ಕೇಳಿ ಭೂತಗಳು ಮುಂದೆ ಯಾವ ಅಡ್ಡಿಯನ್ನೂ ಮಾಡದೆ ಸುಮ್ಮನಾಗಲು, ಹಕೀಮನೂ ಅವನ ಕಡೆಯವರೂ ಕ್ಷೇಮವಾಗಿ ಷಾಮುಸ್‌ಷಹನ ದೇಶಕ್ಕೆ ಬಂದು ತಲಪಿದರು. ಈ ದೊರೆಯು ವಿದೇಶಿಯರ ಆಗಮನದ ವರ್ತಮಾನ ವನ್ನು ಕೇಳಿ, ತನ್ನ ಅಶ್ವವನ್ನೇರಿ ಅವರನ್ನೆದುರುಗೊಳ್ಳಲು ಬಂದನು. ಹಕೀಮನು ಆ ವಿದೇಶಿಗಳ ಜೊತೆಯಲ್ಲಿದ್ದದನ್ನು ಕಂಡು ವಿಶೇಷವಾದ ಆನಂದ ಉಂಟಾಯಿತು. ಆ ರಾಜನು ಪ್ರೀತಿಯಿಂದ ಹಕೀಮನನ್ನು ಆಲಿಂಗನ ಮಾಡಿಕೊಂಡು ಅವನ ಮೈಗಾವಲಿನವರನ್ನು ಕುರಿತು—ಸರ್ವೋತ್ತಮನಾದ ಯೆಮೆನ್‌ರಾಜ್ಯದ ದೊರೆ ಮಗನನ್ನು ಕ್ಷೇಮವಾಗಿ ಕರೆದು ತಂದು ಬಿಟ್ಟ ಮಹೋಪಕಾರಕ್ಕಾಗಿ ದೇವರು ತಕ್ಕ ಒಳ್ಳೇ ಫಲವನ್ನು ನಿನಗೀಯಲಿ ಎಂದು ಹೇಳಿ ಹಕೀಮ ಮೊದಲಾದವರೆಲ್ಲರನ್ನೂ ಕರೆದುಕೊಂಡುಹೋಗಿ ನಲವತ್ತು ದಿವಸ ಇರಿಸಿಕೊಂಡಿದ್ದು ಅವರೆಲ್ಲರಿಗೂ ಆತಿಥ್ಯ ಮಾಡಿದನು.

ಆಗ ಹಕೀಮನು ಪ್ರಯಾಣ ಸನ್ನದ್ಧನಾಗಿ ಪರಿದೊರೆಯ ಅಪ್ಪಣೆಯನ್ನು ಕೇಳಲು ಆ ರಾಜನು ಅವನ ದಾರಿಗೆ ಬೇಕಾದ ಸಾಮಗ್ರಿಗಳನ್ನು ಸಿದ್ಧಮಾಡಿಸಿ, ಹಕೀಮನನ್ನು ಒಂದು ಪಲ್ಲಕ್ಕಿಯಲ್ಲಿ ಕೂರಿಸಿಕೊಂಡು ಷಹಬಾದಿಗೆ ಕರೆದುಕೊಂಡು ಹೋಗುವಂತೆ ತನ್ನ ಕಡೆ ನಾಲ್ಕು ನರರನ್ನು ನೇಮಿಸಿದನು. ಕೆಲವು ದಿವಸದೊಳಗಾಗಿ ಅವನನ್ನು ಅಲ್ಲಿಗೆ ಬೇಗ ಕರೆದುಕೊಂಡು ಹೋದರು. ಊರಬಾಗಿಲ ಈಚೆಗೆ

ಅವರೆಲ್ಲಾ ಗಗನದಿಂದ ಇಳಿದರು. ಹತೀಮನು ಅವರ ದೊರೆಗೆ ಅವರು ಕೇಳಿಕೊಂಡ ಪ್ರಕಾರ ಕಾಗದವನ್ನು ಬರೆದುಕೊಟ್ಟು ಅವರನ್ನು ಊರಿಗೆ ಕಳುಹಿಸಿಕೊಟ್ಟು ಪುರ ಪ್ರವೇಶ ಮಾಡಲು ಅಲ್ಲಿನ ಜನರು ಕೂಡಲೆ ಇವನ ಗುರುತನ್ನು ಕಂಡುಹಿಡಿದು ತಮ್ಮ ರಾಣಿಗೆ ಅರಿಕೆ ಮಾಡಿದರು. ಆಗ ಹಸನ್‌ಬನುವು ತನ್ನ ಮುಖಕ್ಕೆ ಗೌಸನ್ನು ಹಾಕಿಕೊಂಡು, ಆ ಪುರದ ಬುದ್ಧಿವಂತರೆಲ್ಲರೂ ಸೇರಿ ಮಾತನಾಡುತಿರುವಾಗ, ಹತೀಮನನ್ನು ಒಳಕ್ಕೆ ಬಿಡುವಂತೆ ಹೇಳಿ ಕಳುಹಿಸಿದಳು. ಹತೀಮನು ಒಳಕ್ಕೆ ಪ್ರವೇಶಮಾಡಿದನು ; ಪರಸ್ಪರ ಮರ್‍ಯಾದೆ ಜರಗಿದ ತರುವಾಯ ಆ ಸಭಾಮಧ್ಯದಲ್ಲಿ ಮರ್‌ಘಾಜ್ ಮುತ್ತನ್ನು ಇರಿಸಿ ತಾನು ಮಾಡಿದ ಸಾಹಸವನ್ನೆಲ್ಲಾ ವಿಸ್ತಾರವಾಗಿ ಹೇಳಿದನು.

ಹಸನ್‌ಬನುವು ಆ ಮುತ್ತನ್ನು ನೋಡಿ ಬಹು ಸಂತೋಷ ಪಟ್ಟಳು. ಆ ಸಭೆಯಾದ ಸಭೆಯೆಲ್ಲಾ ಹತೀಮನನ್ನು ಹೊಗಳಿದರು. ಅವನು ಮೆಹಮಾನ್‌ಸಿರೈಗೆ ಹೋಗಲು ಅಲ್ಲಿ ಆಸ್ಸಿರಿಯ ದೊರೆಮಗ ಮುನೀರನು ಇದ್ದನು. ಅಲ್ಲಿ ಅವನನ್ನು ಕುರಿತು—ಅಯ್ಯಾ ಮಿತ್ರನೆ, ಸೌಖ್ಯ ಇನ್ನೇನು ನಿನ್ನ ಕರಗತವಾಯಿತೆಂದು ತಿಳಿ ; ಒಂದು ಮಾತಿಗೆ ಮಾತ್ರ ಉತ್ತರ ಹೇಳಬೇಕಾದ್ದು ಉಳಿದಿದೆ, ಎಂದು ನುಡಿದನು. ತರುವಾಯ ಕೆಲವು ದಿವಸ ವಿಶ್ರಮಿಸಿಕೊಂಡು, ಹಸನ್‌ಬನುವಿನ ಸೌಧಕ್ಕೆ ಹೋಗಿ ಅವಳನ್ನು ಕುರಿತು—ಅಮ್ಮ, ನಿನ್ನ ಏಳನೇ ಮಾತು ಯಾವುದು ಹೇಳುವಳಾಗು, ಬೇಗನೆ ಅದನ್ನು ಪೂರೈಸುತೇನೆ ಎಂದನು. ಅದಕ್ಕೆ ಆ ಕನ್ನೆಯು—ಬದಗಾರ್ಡು ಸ್ನಾನದ ವಿಚಾರವನ್ನು ತಂದು ಹೇಳತಕ್ಕದ್ದು ಎಂದಳು. ಹತೀಮನು ಅದನ್ನು ಕೇಳಿ ಹಸನ್‌ಬನು ಮತ್ತು ಮುನೀರ್ ಇವರ ಅಪ್ಪಣೆಯನ್ನು ಹೊಂದಿ, ಮುಂದಕ್ಕೆ ಹೊರಡಲು ಸಿದ್ಧನಾದನು.

ಡಾ. ಮೋಹನ್ ಕುಮಾರ್

ಮಾತಂಗ ತಪಸ್ವಿನಿ

(ಮಹಾಕವಿ ಕುವೆಂಪು ರಚಿತ 'ಶ್ರೀ ರಾಮಾಯಣ ದರ್ಶನಂ' ಆಧಾರಿತ ಪೌರಾಣಿಕ ನಾಟಕ)

ಪಾತ್ರಧಾರಿಗಳು :

೧. ರಾಮ

೨. ಲಕ್ಷ್ಮಣ

೩. ಶಬರಿ [ಮಾತಂಗಿನಿ]

ದೃಶ್ಯ–೧

[ಕಾಡಿನ ದೃಶ್ಯ. ರಾತ್ರಿಯ ಸಮಯ. ರಾತ್ರಿಯ ಕೀಟಗಳ ಧ್ವನಿ ಕೇಳಿ ಬರುತ್ತಿರುವುದು. ಮಂಗಟ್ಟೆ ಹಕ್ಕಿಯ ಉಲಿಯು ಕೇಳಿಸುತ್ತಿರುತ್ತದೆ. ರಾಮ ಲಕ್ಷ್ಮಣರು ಬರುವರು. ರಂಗದಲ್ಲಿ ಸಂಪೂರ್ಣವಾಗಿ ಕತ್ತಲು ಇದ್ದು, ರಾಮ ಲಕ್ಷ್ಮಣರ ಪಾತ್ರಗಳ ಮೇಲಷ್ಟೇ ಬೆಳಕು ಇರುವುದು.]

ರಾಮ—ನಲ್ಮೆಯ ಸೌಮಿತ್ರಿ, ಹೀಗೆ ನಾವು ಯಾವಕಾರಣದಿಂದ ಸಾಗುತ್ತಿರುವೆವು ? ಅಹುದು ಸಹೋದರ, ಹೋಗುತ್ತಿರುವುದಾದರೂ ಎಲ್ಲಿಗೆ ?

ಲಕ್ಷ್ಮಣ—ಎಂಥ ಪ್ರಶ್ನೆ ಅಣ್ಣಾ ? ನಾವು ಹೊರಟಿರುವುದು ಅತ್ತಿಗೆ ದೇವಿಯ ಅನ್ವೇಷಣೆಗೆ ಅಲ್ಲವೆ ?

ರಾಮ—ದೇವಿಯೇ, ಯಾವ ದೇವಿ ? [ನಗುವನು. ಸೌಮಿತ್ರಿಯ ಮುಖವನ್ನು ನೋಡುವನು]

ಲಕ್ಷ್ಮಣ—ಮನದದುಗುಡ ನಿನ್ನನ್ನು ಆಂತು ಆಡಿಸುತ್ತಿದೆ. ಬೇಡ, ಬೇಡ ಅಣ್ಣಾ, ನೀನು ಆತ್ಮವಂಚನೆಯನ್ನು ಮಾಡಿಕೊಳ್ಳಬೇಡ. ಅಚಲ ಧೈರ್ಯ ಸಾಕು ನಿರಾಶನಾಗದಿರು.

[ಲಕ್ಷ್ಮಣ ನಾಲ್ಕು ಹೆಜ್ಜೆ ರಾಮನನ್ನು ಹಿಂಬಾಲಿಸಿ] ಅಂದು ಹಾರಿತ ಮುನಿಯ ಗುರುಗಳಾದ ಭಾರದ್ವಾಜ ಯತಿಗಳು ನಿನ್ನಲ್ಲಿ ಹೇಳಿದ ಮಾತನ್ನು ಮರೆತೆಯಾ ? ಚಿತ್ರಕೂಟದಲ್ಲಿದ್ದ ವಜ್ರರೋಮ ಮುನಿಗಳ ಸಂದೇಶವು ಏನಾಯಿತು ?

ಅತ್ರಿ ಮುನಿ, ಅನಸೂಯೆಯರನ್ನು ಮರೆತೆಯಾ?

ಅಣ್ಣಾ, ಅಗಸ್ತ್ಯ ಮಹರ್ಷಿಗಳು ಹೇಳಿದುದನ್ನು ಮನಸ್ಸಿಗೆ ತಂದುಕೊಳ್ಳ ಬಾರದೆ? ವಿಶ್ವಾಮಿತ್ರರ ಮಂತ್ರವನ್ನು ಸ್ಮರಿಸಿಕೊಳ್ಳಬಾರದೆ?

ಅಗ್ರಜ, ನಿನ್ನ ಮಹಿಮೆಯನ್ನು ನೀನೇ ಮರೆಯುವೆಯಾ?

ಅಣ್ಣಾ, ನಿನ್ನನು ನೀನೇ ಆತ್ಮವಿಡಂಬನೆ ಮಾಡಿಕೊಂಡಲ್ಲಿ, ಅದು ಆತ್ಮಹತ್ಯೆ ಯಲ್ಲವೆ? ನನ್ನಾಣೆ ಮತ್ತೆ ನೀನು ನಿನ್ನನ್ನೇ ನಿಂದಿಸಿಕೊಂಡು ಮಾತನ್ನಾಡಿ ದರೆ ನನ್ನನ್ನೇ ಕೊಂದಂತೆ.

ಸಹೋದರ, ನಿನ್ನ ಮಹಿಮೆಯ ಸ್ಮರಣೆಯೇ ನನ್ನಲ್ಲಿ ಉತ್ಸಾಹವನ್ನೂ ಧೈರ್ಯವನ್ನೂ ತುಂಬಿದೆ ನೀನು ವೃಥಾ ದುಃಖಿತನಾಗಿ ನಿರಾಶೆಯ ಕಮರಿಯಲ್ಲಿ ಜಾರಬಹುದೆ?

ರಾಮ—[ನಿಟ್ಟುಸಿರು ಬಿಡುವನು]

ಲಕ್ಷ್ಮಣಾ, ನೀನು........

ಲಕ್ಷ್ಮಣ—ನಾನು...ಏನು? ಏಕೆ ಮಾತನ್ನು ಅಲ್ಲಿಗೆ ತಡೆಯುತ್ತಿರುವೆ? ಹೇಳಣ್ಣಾ, ನಾನು ಆಡಿದುದು ಸುಳ್ಳು ಅಲ್ಲವಷ್ಟೇ?

ಆತ್ಮಬಂಧುವೇ, ನೀನು ಶಿವಧನುವನ್ನು ಭಂಗಿಸಿ ಜನಕಾತ್ಮಜೆಯನ್ನು ಪರಿಣಯ ಗೊಂಡ ಜಗತಲ ಪ್ರತಾಪ.

ಅವತಾರ ಪುರುಷನಾಗಿಯೂ ನೀನಾಡುವ ಮಾತುಗಳು...

[ಸೌಮಿತ್ರಿಯು ಅರ್ಧದಲ್ಲಿ ಮಾತನ್ನು ನಿಲ್ಲಿಸುವನು. ಲಕ್ಷ್ಮಣನು ಮಾತನ್ನಾಡುತ್ತಿದ್ದರೂ ರಾಮ ತದೇಕ ಚಿತ್ತನಾಗಿ ಏನನ್ನೋ ವೀಕ್ಷಿಸುತ್ತಿರು ವನು].

ರಾಮ—ಲಕ್ಷ್ಮಣಾ, ಓ ಲಕ್ಷ್ಮಣಾ ನೋಡಿದೆಯಾ ಆ ಅದ್ಭುತವನ್ನು?

ಭಯಂಕರ, ಬೃಹದಾಕಾರದ ಉದರವಿರುವ ಸರ್ಪದಾಕೃತಿಯ ರಾಕ್ಷಸನನ್ನು,

[ಲಕ್ಷ್ಮಣನೂ ರಾಮನ ಬೆನ್ನು ಹಿಂದೆ ನಿಂತು ವೀಕ್ಷಿಸುವನು.]

ಲಕ್ಷ್ಮಣ—ಎಂಥ ವಿಚಿತ್ರ ಆಕೃತಿ ಆ ರಕ್ಕಸನದು. ಕೈಕಾಲು ಇಲ್ಲದೆ ಹೊಟ್ಟೆಯೇ ತಲೆಯಾದಂತೆ ಇದೆ.

ರಾಮ—ಅದೋ ನೋಡು ಸೌಮಿತ್ರಿ, ಐದು ಮೊನಚು ಉಗುರುಗಳಿಂದ ಕೂಡಿದ್ದ ಆ ಬಾಹುಗಳು ಯೋಜನ ದೂರ ಚಾಚಿಕೊಂಡಿವೆ.

[ರಾಮ ರಾಕ್ಷಸನತ್ತ ಧಾವಿಸುವನು. ಲಕ್ಷ್ಮಣ ಮಾತ್ರ ರಂಗದಲ್ಲಿ ಇರುವನು].

ಲಕ್ಷ್ಮಣ—ಅಣ್ಣಾ, ಆ ರಾಕ್ಷಸನನ್ನು ಸಂಹರಿಸು ಬಿಡಬೇಡ. ಆ ಹಾಗೆ, ಹಿಡಿ ಆ ಬೃಹದಾಕಾರನನ್ನ.

ಹಾ! ಇದೇನು ಅನ್ಯಾಯ? ಅಣ್ಣಾ, ಹಿಡಿದೇಬಿಟ್ಟನೇ ಆ ರಕ್ಕಸ ನಿನ್ನ ದೇವಸದೃಶ ಕೋಮಲ ಶರೀರವನ್ನು

ಬಿಡು ಮಹಾಪಾತಕನೇ ಬಿಡು.

ರಾಮ—ಓ ಲಕ್ಷ್ಮಣಾ ಕೆಟ್ಟೆ!
ಈ ರಕ್ಕಸನ ಕೈಗೆ ಸಿಕ್ಕಿಬಿದ್ದೆ
ಖಡ್ಗವನ್ನು ಎತ್ತಲು ಕೈಯೇ ಬಾರದಾಗಿದೆ

ಲಕ್ಷ್ಮಣ—ಅಣ್ಣಾ, ಬಂದೇ

ರಾಮ—ಬೇಡ, ಬರಬೇಡ ದೂರ ಓಡು, ಓಡು ಲಕ್ಷ್ಮಣಾ
ನಡೆ...ನಡೇ...ನಿನ್ನನ್ನು ಹಿಡಿಯುವನು ರಕ್ಕಸ
ನೀನಾದರೂ ಹೋಗಿ ಅಯೋಧ್ಯೆಯನ್ನು ಸೇರು
ಸೀತೆಯಿಲ್ಲದ ಬದುಕು ನನಗೆ ಸಾವೇ
ಹಾ! ಲಕ್ಷ್ಮಣ, ವೈದೇಹಿ!
[ಆಕ್ರಂದನ ಮಾಡುವನು.]

ಲಕ್ಷ್ಮಣ—ಇದೋ ಬಂದೇ ಪಾತಕನನ್ನು ಸಂಹರಿಸಿಯೆ ಬಿಡುವೆನು.
[ಲಕ್ಷ್ಮಣ ರಂಗದಿಂದ ಮರೆಯಾಗುವನು, ಒಂದು ಕ್ಷಣ ರಂಗದಲ್ಲಿ ಕತ್ತಲಾಗುವುದು. ಕೂಡಲೇ ಅದೇ ದೃಶ್ಯದಲ್ಲಿ ರಾಮ ಲಕ್ಷ್ಮಣರು ಇಬ್ಬರೂ ಕಾಣಿಸಿಕೊಳ್ಳುವರು.]

ರಾಮ—[ರಾಮ ಮೂರ್ಛೆಯಿಂದ ತಿಳಿದು ಏಳುವನು.]
ಸೌಮಿತ್ರಿ, ನೀನು ಸಾಹಸವನ್ನು ತೋರದೆ ಹೋಗಿದ್ದರೆ ಇಂದು ನಾನು ಆ ರಾಕ್ಷಸನಿಗೆ ಬಲಿಯಾಗುತ್ತಿದ್ದೆ.

ಲಕ್ಷ್ಮಣ—ತಿಳಿದವನು ತನ್ನ ಛಾಯೆಗೆ ತಾನೇ ಬೆದರುವನೆ?

ರಾಮ—ತಿಳಿದ ನಂತರವೇ ಅಲ್ಲವೇ ತಿಳಿದವನಾಗುವುದು.

ಲಕ್ಷ್ಮಣ—ಅಣ್ಣಾ, ಭೂಮಿಗೆ ರಾಹು ಬೇರೆ ಉಂಟೆ? ತನ್ನ ನೆಳಲ್ಲದೆ?

ರಾಮ—ಭೂಮಿ ಕಂಪಿಸಲು ಪರ್ವತವೂ ಅಲುಗಲೇಬೇಕಲ್ಲವೇ ಸಹೋದರ? ಅದೇ ಬಗೆಯಲ್ಲಿ ರಾಮನ ಧೈರ್ಯವೂ ಕಂಪಿಸಿದೆ.
ಸೌಮಿತ್ರಿ, ಮೈಥಿಲಿಗಾಗಿ ಈ ದಾಶರಥಿಯ ಧೈರ್ಯ ನಡುಗುತ್ತಿದೆ.
ಸಹೋದರ, ನಿನ್ನ ಸಹಾಯದಿಂದ ಅಚಲವೂ (ಪರ್ವತ) ಸ್ಥಿರವಾಗಿ ನಿಲ್ಲುತ್ತದೆ.
ನಿನ್ನ ಕಾರಣ ಕಬಂಧ ರಕ್ಕಸನನ್ನು ಜಯಿಸಿದಂತೆ ಆಯಿತು.
ಇನ್ನು ಈ ಪರಿಸರದಿಂದ ಹೊರಟು ಹೋಗೋಣ ನಡೆ ಸೌಮಿತ್ರಿ.

ಲಕ್ಷ್ಮಣ—ಅಣ್ಣಾ, [ರಾಮನನ್ನು ಆಲಂಗಿಸುವನು]

ರಾಮ—ಸೌಮಿತ್ರಿ, ಬಿಂಬ ನೆಳಲನ್ನು ತೊರೆವುದುಂಟೆ?

ಲಕ್ಷ್ಮಣ—ಆ ನೆಳಲು ನಾನಲ್ಲವೇ ಅಣ್ಣಾ, ತೊರೆದಿರಲು ಸಾಧ್ಯವಿಲ್ಲ

ರಾಮ—ಸಾಕಷ್ಟು ಕಾರ್ಯವಾಗಬೇಕಾಗಿದೆ ಲಕ್ಷ್ಮಣಾ

ಲಕ್ಷ್ಮಣ—ಹೇಳಿದೆನಲ್ಲವೇ ಅಣ್ಣಾ, ನಾನು ನಿನ್ನ ನೆಳಲೆಂದು. [ರಾಮ ಮುಂದೆ ನಡೆವನು. ರಾಮನ ಹಿಂದೆ ಲಕ್ಷ್ಮಣ ನಡೆಯುವನು. ರಂಗದಲ್ಲಿ ಕತ್ತಲಾಗುವುದು.]

ದೃಶ್ಯ–೨

[ವನದ ಹಿನ್ನೆಲೆ. ಗುಡಿಸಲೊಂದು ಕಾಣಿಸುವುದು. ಚಂದ್ರನ ಬೆಳದಿಂಗಳು ಹರಡಿರುತ್ತದೆ. ಈ ಪ್ರಸಂಗದಲ್ಲಿ ಸೈಕ್ಲೋರಮ ಬಳಸಬಹುದು. ಚಂದ್ರನ ಬಿಂಬವನ್ನು ತೋರಿಸಿ ಚಂದ್ರೋದಯವಾಗಿರುವ ಚಿತ್ರಣವನ್ನು ಮೂಡಿಸಬಹುದು].

ಮಾತಂಗಿನಿ—[ಗುಡಿಸಲಿನ ಬಾಗಿಲನ್ನು ತೆರೆದು ಹೊರಬರುವಳು. ಹೊರಗೆ ನಾಲ್ಕು ಹೆಜ್ಜೆ ಮುಂದೆ ಬಂದು ತಾನು ನಿರೀಕ್ಷಿಸಿದ ಅತಿಥಿಯ ಬಗ್ಗೆ ಕಾತರ ಉಳ್ಳವಳಾಗಿರುತ್ತಾಳೆ. ಅವಳ ಕಣ್ಣುಗಳು ತಾನು ಕಾಣ ಹಂಬಲಿಸಿರುವ ಅತಿಥಿಯನ್ನೂ ಹುಡುಕುತ್ತಿರುತ್ತವೆ. ಸಂಪೂರ್ಣ ಬೇಡತಿಯ ವೇಷದಲ್ಲಿ ಇರುತ್ತಾಳೆ.] [ತನ್ನಲ್ಲಿಯೆ.]

ಈ ಮುದಿ ಕಂಗಳಿಗೆ ನಿದ್ರೆ ಬಾರದಾಗಿದೆ. ನಾನು ಕನಸಿನಲ್ಲಿ ಕಂಡ ನೀಲಮೇಘ ಶ್ಯಾಮ ಎಂದು ಬರುವನೋ ?
[ಪ್ರಕಾಶ]

ನೀನು ಬರುವುದಾದರು ಎಂದು ಕಂದ ! ಓ ನನ್ನಯ್ಯ, ರಾಮಚಂದ್ರಯ್ಯ !
ನನ್ನ ಗುರುದೇವ ಮತಂಗ ಮುನಿಯ ಮಾತು ಸುಳ್ಳಾಗುವುದೇ ?
ನನ್ನ ಹೃದಯವಾಸಿ ನಿನಗಾಗಿ ನಾನು ಹತ್ತುವರ್ಷಗಳಿಂದಲೂ ಕಾದಿರುವೆನು.
[ಸಮೀಪವಿದ್ದ ಗಿಡಮರಗಳ ಬಳಿ ಬಂದು]

ಈ ಗಿಡಮರಗಳೂ ನಿನಗಾಗಿ ಕಾಯುತ್ತಿವೆ. ಹಣ್ಣು, ಗೆಡ್ಡೆ ಇವುಗಳನ್ನು ಬೆಳೆದು ನಿನಗೆ ಉಣಿಸಲು ಹಂಬಲಿಸುತ್ತಿರುವೆನು ರಾಮಯ್ಯ.
ಈ ಆಶ್ರಮ ನಿನಗಾಗಿ ಕಾತರಿಸಿದೆ. ವಯಸ್ಸಿನಿಂದ ಈ ದೇಹ ಮಾಗಿಹೋಗಿದೆ.
[ನಿಟ್ಟುಸಿರು ಬಿಡುವಳು.] ಇನ್ನೆಷ್ಟು ದಿನಗಳು ನಾನು ಬದುಕಬಲ್ಲೆ ?
ನಿನ್ನ ದರುಶನವಿಲ್ಲದೆ ಈ ದೇಹ ಇದ್ದರೂ ನಿರರ್ಥಕ. ಕಾತರಿಸಿ ಕಾತರಿಸಿ ಕಂಗಳೆರಡೂ ಮಬ್ಬಾಗಿ, ಮಂಜಾಗಿ ಹೋಗಿವೆ ಕಂದಾ.
ನಿನ್ನ ಕಾಣುವಹಂಬಲ ಇನ್ನೂ ಉಳಿದಿದೆ ರಾಮಯ್ಯ.
[ನಿರಾಶೆಯಿಂದ ಬಾಗಿದ ಮುದುಕಿ ಗದ್ದಕ್ಕೆ ಕೈ ಇಟ್ಟು.]

ನನ್ನ ದಿಟ್ಟಿ ಇಂಗಿಹೋದ ಮೇಲೆ ನೀನು ಬಂದರೇನಾಯಿತು ಪ್ರೇಮಮೂರ್ತಿ? ನಿನ್ನ ದರುಶನ ಭಾಗ್ಯ ಲಭಿಸುವುದೇ ? ನಾನು ನಿನ್ನನ್ನು ಹೇಗೆ ನೋಡಲಿ ? ಹೇಗೆ ನೋಡಲಿ ?

[ನಾಲ್ಕು ಹೆಜ್ಜೆ ಮುಂದೆ ಬಂದು ತಲೆಯಾಡಿಸಿ]
ಕೈಯಿಂದ ನಿನ್ನ ಮೈ ತಡವಿ ಆನಂದಿಸಬಲ್ಲೆನೆ ಅಯ್ಯಾ ?
[ನಿಟ್ಟುಸಿರು ಬಿಟ್ಟು]
ಆದರೆ ಏನಾಯಿತು ಕಂದಾ ? ಕಣ್ಣಿನ ದಾಹ ತೀರದು . . ತೀರದು. [ನಿರಾಶೆ ವ್ಯಕ್ತಪಡಿಸುವಳು. ಕಂಬನಿ ಮಿಡಿದು]
ಬಾರಾ, ಓ ಕಂದಯ್ಯ, ಕಣ್ಣು ಕೆಡುವ ಮೊದಲೇ ಬಾರಯ್ಯ, ನನ್ನಯ್ಯ, ರಾಮಯ್ಯ ನನ್ನ ಬಾಳು ಮುಗಿವ ಮೊದಲೇ ನನ್ನ ಈ ಮನಕೆ ಶಾಂತಿಯನ್ನು ತಾರಯ್ಯ.
[ಶಬರಿ ದುಃಖದಿಂದ ಈ ಮಾತುಗಳನ್ನು ಆಡುವಳು. ದೃಷ್ಟಿ ಹೋಗುವ ವರೆವಿಗೂ ನೋಡುವಳು. ಬರಲಿಲ್ಲವೆನ್ನುವಂತೆ ನಿರಾಶೆಯಿಂದ ತಲೆ ಆಡಿಸಿ, ಕೈ ಆಡಿಸಿ ಗುಡಿಸಲಿನ ಒಳಹೋಗುವಳು. ಕತ್ತಲಾಗುವುದು.]

ದೃಶ್ಯ–೩

[೨ನೆಯ ದೃಶ್ಯದಲ್ಲಿ ತೋರಿಸಿದಂತೆಯೇ ಕಾಡಿನ ಹಿನ್ನೆಲೆಯಲ್ಲಿ ಮಾತಂಗಿನಿಯ ಗುಡಿಸಲು ಇರುತ್ತದೆ. ಬೆಳಗಾದಂತೆ ಹಕ್ಕಿಗಳ ಚಿಲಿಪಿಲಿಯನ್ನು ತರಬೇಕು. ಸೂರ್ಯೋದಯವಾದಂತೆ ತೋರಿಸಬೇಕು.]

ಮಾತಂಗಿನಿ—[ಗುಡಿಸಲಿನ ಬಾಗಿಲನ್ನು ತೆರೆದು ಹೊರಬರುವಳು. ಬಿಚ್ಚಿದ್ದ ಮುಡಿಯನ್ನು ಸರಿಯಾಗಿ ಕಟ್ಟಿಕೊಳ್ಳುವಳು. ಮತ್ತೆ ಒಳಹೋಗುವಳು. ಕೂಡಲೇ ಹೊರ ಬರುವಳು. ಗುಡಿಸಲಿನ ಇದಿರು ಬಿದ್ದಿದ್ದ ತರಗು ಎಲೆಗಳನ್ನು ಪೊರಕೆಯಿಂದ ಗುಡಿಸಿಹಾಕುವಳು. ಪುನಃ ಸೊಂಟದ ಮೇಲೆ ಕೈ ಇಟ್ಟು ಕೊಳ್ಳುವಳು. ಸ್ವಲ್ಪದೂರ ಬಂದು ಕೈಯನ್ನು ಮರೆಮಾಡಿ ಕಾಡಿನ ಬಯಲನ್ನು ದಿಟ್ಟಿಸುವಳು.]
[ನಿಟ್ಟುಸಿರು ಬಿಟ್ಟು ತನ್ನಲ್ಲಿಯೆ !]
ಬಂದಾನೋ ಬಾರನೊ ? ನನ್ನ ರಾಮಯ್ಯ. ಈ ಮಾತಂಗಿನಿಯ ತಪವು ಫಲಿಸದೋ ? ಫಲಿಸುವುದೋ ?
ವರುಷಗಳು ಹೀಗೆ ಕಳೆದುಹೋದುವು. ಸಾವಿನ ಹೊಸ್ತಿಲಲ್ಲಿ ಇರುವ ಈ ಮಾತಂಗಿನಿಯ ವ್ರತಭಂಗವಾದಂತೆಯೆ.

ಮಾಡುವುದಾದರೂ ಏನು ? ನತದೃಷ್ಟೆ ಈ ಮಾತಂಗಿನಿ.

[ನೊಂದುಕೊಂಡು ಶಬರಿ ಗುಡಿಸಿಲಿನ ಬಾಗಿಲತ್ತ ನಡೆವ ಅನಿತರಲ್ಲಿ ರಾಮ ಲಕ್ಷ್ಮಣರು ರಂಗ ಪ್ರವೇಶಮಾಡುವರು.

ರಾಮನಾಗಲೀ, ಲಕ್ಷ್ಮಣನಾಗಲೀ ಜಟೆಯನ್ನು ಕಟ್ಟಿರುವುದಿಲ್ಲ. ಕೂದಲು ಕೆದರಿರುತ್ತದೆ. ಅವರು ಉಟ್ಟ ಉಡುಗೆಯೂ ಮಲಿನವಾಗಿರುತ್ತದೆ. ಕೈಯಲ್ಲಿ ಬಾಣಗಳಿರುತ್ತವೆ. ದೇಸಿಗರಂತೆಯೂ, ಬೇಡರಂತೆಯೂ ಕಾಣಿಸಿಕೊಳ್ಳು ತ್ತಾರೆ.]

ಲಕ್ಷ್ಮಣ—[ರಾಮನನ್ನು ಕುರಿತು.]

ಅಣ್ಣಾ, ನಿನಗೆ ಬಹಳ ಆಯಾಸವಾಗಿರಬಹುದು. ನನಗೂ ಬಳಲಿಕೆಯಾಗಿದೆ. ಇಲ್ಲಿ ಗುಡಿಸಿಲೊಂದು ಕಾಣಿಸುತ್ತಿದೆ. ಮುದುಕಿಯೊಬ್ಬಳು ಗುಡಿಸಿಲಿನತ್ತ ಸಾಗುತ್ತಿದ್ದಾಳೆ ವೇಷ ನೋಡಿದರೆ ಬೇಡತಿಯಂತೆ ಕಾಣಿಸುತ್ತಿದ್ದಾಳೆ.

ರಾಮ—ಬೇಡತಿಯೆ ?

ಲಕ್ಷ್ಮಣ—ಅಹುದು ಅಣ್ಣಾ, ಮಾತಂಗಿನಿಯೆ. ನೀನು ಇಲ್ಲಿಯೇ ನಿಂತಿರು. ನಾನು ಆ ಅಜ್ಜಿ ಆಶ್ರಯವನ್ನ ಕೊಡುವಳೇನೋ ಕೇಳುತ್ತೇನೆ. ನೀನು ವಿಶ್ರಾಂತಿ ಪಡೆಯಲು ಇದೇ ತಾಣ ಸರಿಯಾಗಿದೆ.

ರಾಮ—ಹೋಗಿ ಬಾ ತಮ್ಮ.

ಲಕ್ಷ್ಮಣ—[ಮುಂದೆ ಸಾಗಿ]

ಅಜ್ಜೀ, ಅಜ್ಜೀ, [ಮಾತಂಗಿನಿಯನ್ನು ಕರೆಯುವನು]

ಮಾತಂಗಿನಿ—ಯಾರು ? ... ಯಾರದು ?

[ಹಿಂದಿರುಗಿ ನೋಡುವಳು. ಒಂದೆರಡು ಹೆಜ್ಜೆ ಮುಂದೆ ಬರುವಳು. ಅಶ್ಚರ್ಯ ವನ್ನು ವ್ಯಕ್ತಪಡಿಸುವಳು]

ಯಾರು ನನ್ನನ್ನು ಕರೆದವರು ?

[ಹುಬ್ಬೇರಿಸಿ ನೋಡುವಳು]

[ತನ್ನಲ್ಲಿಯೇ] ಯಾರು ಈ ಕಾಡಿಗೆ ಹೊಸಬರು ? ಯಾರ ದನಿ ? ಯಾರು ಯಾರೋ ದಾರಿಹೋಕರು.

(ಕೇಳಿಸುವಂತೆ)

ಯಾರಯ್ಯ ನೀನು ?

ಲಕ್ಷಣ—ದಣಿದು ಬಂದಿರುವೆವು ಅಜ್ಜಿ, ಹಸಿವಾಗುತ್ತಿದೆ. ಬಿಸಿಲು ಸುಡುತ್ತಿದೆ. ನೀನು ದಯೆ ತೋರಿಸಿ ನಮಗೆ ಗುಡಿಸಿಲಲ್ಲಿ ತಂಗಲು ಅವಕಾಶ ಕೊಡು ಅಜ್ಜಿ.

[ಇವರಿಬ್ಬರೂ ಮಾತನ್ನಾಡುವ ಸಂದರ್ಭದಲ್ಲಿ ಬಹಳ ಬಳಲಿದ ರಾಮ ಬಂಡೆಯ ಮೇಲೆ ಕುಳಿತಿರುತ್ತಾನೆ. ಎಷ್ಟೋ ದಿನಗಳಿಂದ ರೋಗ ಪೀಡಿತನಂತೆ ಮುಖಚರ್ಯೆ ಉಳ್ಳವನಾಗಿರುತ್ತಾನೆ.]

ಮಾತಂಗಿನಿ—[ತನ್ನಲ್ಲಿಯೆ] ಯಾರೋ ?

[ಕೇಳಿಸುವಂತೆ] ಯಾರಯ್ಯ ನೀನು ಹೋಗು...ಹೋಗು. ಕಂಡ ಕಂಡ ವರಿಗೆಲ್ಲಾ ದಾರಿಹೋಕರಿಗೆಲ್ಲಾ, ಬರುವ ಮಾತಂಗರಿಗೆಲ್ಲಾ ಉಣಿಸುಕೊಟ್ಟು, ಬೀಡುಇತ್ತು, [ಬಿಡದಿಗೆ] ಅವಕಾಶ ಮಾಡಿಕೊಟ್ಟು ಮೆದುವಾದ ಹಾಸುಗೆ ಯನ್ನೂ ಮಲಗಲು ಕೊಡಲು ನನ್ನನ್ನು ಏನೆಂದು ತಿಳಿದೆ ? ನಾನು ಅಡಗೂಳು ಅಜ್ಜಿ ಅಲ್ಲ ಕಾಣಯ್ಯ ! ನಡೆನಡೆ.

[ಗದರಿ ಹಿಂದಿರುಗಿ ಗುಡಿಸಿಲಿನತ್ತ ಹೋಗಲು ಅನುವಾಗುವಳು. ಮತ್ತೆ ಮನಸ್ಸಿನಲ್ಲಿ ಏನೋ ಭಾವನೆ ಮೂಡಿ ಲಕ್ಷ್ಮಣನತ್ತ ನೋಡುತ್ತಾ.]

ಬೇಡತಿ ನಾನು ಕೊಡುವುದೇನು ? ಹೂಂ...ಇರುವುದನ್ನು ಕೊಡುತ್ತೇನೆ ಬನ್ನಿ. ಅಹುದು ಆಗಲಿಂದಲೂ ನೋಡುತ್ತಿದ್ದೇನೆ. ನಾವು .. ನಾವೂ ಎನ್ನುತ್ತಿರುವೆ ಅಲ್ಲ ನಿನ್ನೊಡನೆ ಇನ್ನೂ ಯಾರಿದ್ದಾರೆ ?

ಲಕ್ಷ್ಮಣ—ನನ್ನ ಅಣ್ಣನೂ ನನ್ನೊಂದಿಗೆ ಇದ್ದಾನೆ ಅಜ್ಜಿ, ರುಜೆಯಾಗಿ ಬಹಳ ಒಳಲಿ ಅದೋ ಆ ಬಂಡೆಯ ಮೇಲೆ ಕುಳಿತ್ತಿರುವನು ಅಜ್ಜಿ.

[ಲಕ್ಷ್ಮಣ ಬೆರಳು ಮಾಡಿದ ಕಡೆ ಶಬರಿ ನೋಡುವಳು.]

ಮಾತಂಗಿನೀ—ಇರಲಿ, ಇರಲಿ. ಯಾವಕಡೆಯಿಂದ ಬಂದಿರಿ ನೀವು ? ಯಾರಯ್ಯ ನೀವು ಕಂದಮ್ಮಗಳು ? ನನ್ನ ಈ ಕಣ್ಣುಗಳು ಮಂಕು [ಉಜ್ಜಿಕೊಳ್ಳುವಳು) ಹೂಂ ಕಣ್ಣೊಂದೇ ಅಲ್ಲಾ ನನ್ನ ಈ ಮನಸ್ಸಿಗೂ ಮಂಜುಕವಿದಿದೆ. [ಎದೆಯನ್ನು ಮುಟ್ಟಿಕೊಳ್ಳುವಳು] ನನಗೇನೂ ತಿಳಿಯುವುದಿಲ್ಲ. ಬನ್ನಿ ಒಳಗೆ [ಗುಡಿಸಿಲಿನ ಒಳಗೆ ಹೋಗುವಳು].

ಲಕ್ಷ್ಮಣ—ಬಾರಣ್ಣಯ್ಯ, ಹೀಗೆ ಬಾ, [ಲಕ್ಷ್ಮಣ ರಾಮನನ್ನೂ ಕರೆಯುವನು ರಾಮ ಲಕ್ಷ್ಮಣನನ್ನು ಹಿಂಬಾಲಿಸುವನು.]

ಮಾತಂಗಿನಿ—[ಅವರನ್ನೇ ನೋಡುತ್ತಾ ನಿಲ್ಲುವಳು]

ಲಕ್ಷ್ಮಣ—ಅಜ್ಜಿ, ನಮ್ಮನ್ನೇ ಏಕೆ ಹಾಗೆ ನೋಡುವೆ ? ನಮಗೆ ಮನೆಯಿಲ್ಲ ಮಾರಿಲ್ಲ ಮನೆಗೆಟ್ಟು ನೆಲಗೆಟ್ಟು ವನವಾಸಿಗಳಾಗಿದ್ದೇವಮ್ಮ ಅಜ್ಜಿ. ಈ ಸಮೀಪದಲ್ಲಿ ಎಲ್ಲಿಯಾದರೂ ಸ್ನಾನಕ್ಕೆ ಬಾವಿ ಇದೆಯೆ ?

ಮಾತಂಗಿನಿ—[ನಕ್ಕು] ಸ್ನಾನವೆ ? ಬೇಡರಿಗೇಕಯ್ಯ ಸ್ನಾನ ? ಇಲ್ಲಿಯೇ ಬಳಿಯಲ್ಲಿ ಒಂದು ಪೇರಳೆ ಮರವಿದೆ. ಆ ಮರದ ಕೆಳಗೆ ಒಂದು ಕೊಳವಿದೆ.

[ತನ್ನಲ್ಲಿಯೆ] ಯಾರೋ ? ಏನೊ ?

[ಕೇಳಿಸುವಂತೆ]

ಪಾಪ, ಈ ನಾಡಿನಲ್ಲಿ ನಿಮ್ಮಂತೆ ಬಿಡದಿ ಇಲ್ಲದೆ ನೆಲೆಗೆಟ್ಟು ತೊಳಲುತ್ತಿರು ವವರು ಎಷ್ಟು ಜನರು ಇರುವರೊ ?

ಏನು ಕೇಡುಗಾಲವೊ ? ಧರ್ಮವಿಲ್ಲ, ಭಯವಿಲ್ಲ, ಪಾತಕಿಗಳು ಯಾರನ್ನೂ ನಂಬುವಂತೆ ಇಲ್ಲ. ಯಾವನ ಹೆಂಡತಿಯನ್ನು ಮತ್ತೆ ಯಾವನೋ ಬಯಸುವರು ಛಿ....ಛಿ...ಸಹಿಸಲಾಗದು.

ರಾಮ—ಯಾರ ಹೆಂಡತಿಯನ್ನು ಯಾರು ಮೋಹಿಸಿದರು ಅಜ್ಜಿ ?

ಲಕ್ಷ್ಮಣ—ಹೌದು ಹೇಳಬಾರದೇ ಅಜ್ಜಿ

ರಾಮ—[ತನ್ನಲ್ಲಿಯೇ]

ಈ ರಾಮಕತೆ ಈ ಮಾತಂಗಿನಿಗೂ ತಿಳಿದಿದೆಯೇ ?

[ಪ್ರಕಾಶ]

ಹೇಳು ಅಜ್ಜಿ ಯಾರ ಹೆಂಡತಿಯನ್ನು ಯಾರು ಬಯಸಿದರು ?

ಮಾತಂಗಿನಿ—[ನಿಡುದಾಗಿ ಉಸಿರನ್ನು ಬಿಟ್ಟು]

ಏನು ಹೇಳುವುದೋ ? [ತನ್ನಲ್ಲಿಯೇ]

[ಕೇಳಿಸುವಂತೆ]

ಹೋಗು, ಮಗು, ಮಿಂದು ಬಾ, ನೀವು ಉಂಡಮೇಲೆ ಆ ಹೊಲಸು ಕತೆಯನ್ನು ಹೇಳುತ್ತೇನೆ ಇನ್ನು ನಡೆಯಿರಿ ಕೊಳಕ್ಕೆ

[ರಾಮ ಲಕ್ಷ್ಮಣರಿಬ್ಬರೂ ಗುಡಿಸಿಲಿನಿಂದ ಹೊರಬರುವರು]

ದೃಶ್ಯ-೪

[ಮಾತಂಗಿನಿಯ ಗುಡಿಸಲು. ಗುಡಿಸಲಿನಲ್ಲಿ ಮಾತಂಗಿನಿ ಮಾತ್ರ ಇರುತ್ತಾಳೆ. ರಾಮ ಲಕ್ಷ್ಮಣರು ತಂದಿದ್ದ ಬಿದಿರಿನ ಪೆಟ್ಟಿಗೆಯ ಬಳಿ ನಿಂತಿರುತ್ತಾಳೆ]

ಮಾತಂಗಿನಿ—ಯಾರೋ ಏನೊ ? ಪಾಪವೆನಿಸಿ ಅವರನ್ನು ಗುಡಿಸಿಲ ಒಳಗೆ ಬರಮಾಡಿರುವೆನು. ಏನೇನು ಇಟ್ಟುಕೊಂಡಿರುವರೋ ಏನು ಹಾಳೊ ?

[ಬಾಗಿ ಮಾತಂಗಿನಿ ಬಿದಿರಿನ ಪೆಟ್ಟಿಗೆಯನ್ನು ತೆಗೆಯುವಳು]

ಏನಿದು ? ಬಿಲ್ಲುಗಾರರು ಉಡುವ ಅರಿವೆ ಇದಲ್ಲ. ನಾರು ಉಡೆ. ಇದೆಂಥ ಉಡೆ ?

[ಸೀರೆಯನ್ನು ಪೆಟ್ಟಿಗೆಯಿಂದ ತೆಗೆದು]

ನಾರು ಸೀರೆ. ಯಾರದಿದು ?

ನಾರುಡೆ ಉಡುವನು ನನ್ನ ಪ್ರೇಮಮೂರುತಿ ರಾಮಯ್ಯನು. ಅವನ ಮಡದಿಯೂ ನಾರು ಸೀರೆಯೇ ಉಡುವಳು.

ಇವರು ಯಾರು ? ಇಬ್ಬರೇ ಇರುವರು. ರಾಮಯ್ಯನ ತಮ್ಮ ಲಕ್ಷ್ಮಣನೂ ಯಾವಾಗಲೂ ಸಂಗಾತವೇ ಇರುವನಲ್ಲವೆ ? ಹಾಗಾದರೇ ! [ಯೋಚಿಸುವಳು ತನ್ನಲ್ಲಿಯೇ ನಗುವಳು ಮತ್ತೆ ಕಣ್ಣುಗಳೆರಡನ್ನೂ ಮುಚ್ಚಿಕೊಂಡು ರಾಮಮೂರ್ತಿಯನ್ನು ಚಿತ್ರಿಸಿಕೊಳ್ಳುವಳು]

[ಕಣ್ಣೊರೆದು]
ಆ ನನ್ನ ರಾಮಯ್ಯ ಗಗನನೀಲ ರಾಮ. ಜಟೆಯನ್ನು ಧರಿಸಿರುವವನು. ತೇಜಸ್ವಿ. ನಾನು ಕನಸಿನಲ್ಲಿ ಕಂಡ ಆ ಘನಶ್ಯಾಮ ಸುಂದರನೆಲ್ಲಿ ?
ಈ ಬಿಲ್ಲನೆಲ್ಲಿ ?
[ರಾಮನಲ್ಲ ಎನ್ನುವಂತೆ ತಲೆ ಆಡಿಸುವಳು. ಮತ್ತೆ ಬಾಣ ಬಿಲ್ಲುಗಳನ್ನು ಮುಟ್ಟಿ ನೋಡುವಳು]
ಈ ಬಿಲ್ಲು, ಬಾಣಗಳು. [ಏನನ್ನೋ ಯೋಚಿಸಿದಂತೆ]
ಅಯ್ಯೋ ! [ನಿಟ್ಟುಸಿರು ಬಿಟ್ಟು]
ಮಂದಮತಿ ನಾನು. ಭ್ರಮೆ ನನ್ನದು. ಯಾವಾಗಲೂ ರಾಮ ರಾಮನೆಂದೇ ಚಿಂತಿಸಿ ನನಗೆ ಎಲ್ಲವೂ ರಾಮಮಯವೆನಿಸುವುದು.
[ಮತ್ತೆ ಏಳುವಳು. ನಾಲ್ಕಾರು ಹೆಜ್ಜೆ ಮುಂದೆ ಬರುವಳು. ಗದ್ದದ ಮೇಲೆ ಕೈಯಿರಿಸಿ ಚಿಂತಿಸುವಳು]
ಈ ಜನುಮದಲ್ಲಿ ನನಗೆ ರಾಮಯ್ಯನ ದರುಶನವಾಗುವುದೇ ?
ಆಗುವುದೋ ಇಲ್ಲವೊ ? (ನಿಟ್ಟುಸಿರು ಬಿಡುವಳು)
ಪಾಪ ಗುಡಿಸಿಲಿಗೆ ಬಂದ ಅತಿಥಿಗಳನ್ನು ಸತ್ಕರಿಸಬೇಕು. ಇನ್ನೇನು ಕೊಳ ದಿಂದ ಹಿಂದಿರುಗುವರು. ಅಯ್ಯೋ ನಾನೆಂಥ ಬೆಪ್ಪು. ಹಸಿವು ಎಂದ ಆ ಹುಡುಗ ಉಂಡು ಎಷ್ಟು ದಿನಗಳಾಯಿತೊ ?
ರಾಮನಿಗಾಗಿ ಬೇಯಿಸಿದ್ದ ಗೆಣಸನು,
ಆ ಹಣ್ಣುಗಳನ್ನು ಬಂದವರಿಗೆ ಉಣಬಡಿಸಿದರೇನಾಯಿತು ?
ಬಡಿಸುವೆನು ಪಾಪ ಉಂಡು ಹೋಗಲಿ.
[ಗುಡಿಸಿಲಲ್ಲಿ ಇದ್ದ ಬಾಳೆ ಎಲೆಯನ್ನು ಹಾಸುವಳು. ಆ ಮೊದಲು ಸೀಳಿದ ಕಡ್ಡಿಯ ಚಾಪೆಯನ್ನು ಹಾಸುವಳು. ಬಿದಿರಿನ ಬಟ್ಟಲಲ್ಲಿ ನೀರಿಡುವಳು. ಅಷ್ಟರಲ್ಲಿ ರಾಮ ಲಕ್ಷ್ಮಣರು ಗುಡಿಸಿಲನ್ನು ಪ್ರವೇಶಿಸುವರು]

ಮಾತಂಗಿನಿ—[ಇಬ್ಬರನ್ನೂ ಬರಮಾಡುತ್ತಾ]
ಬನ್ನಿರಿ ಕಂದರಿರಾ, ಕುಳಿತುಕೊಳ್ಳಿ.
[ರಾಮ ಲಕ್ಷ್ಮಣ ಇಬ್ಬರು ಕುಳಿತುಕೊಳ್ಳುವರು. ಮಾತಂಗಿನಿ ಗೆಣಸು ಬೇಯಿಸಿದ್ದ ಮಡಕೆಯನ್ನು ತಂದು ಅವರಿಬ್ಬರ ಮುಂದೆ ಇರಿಸಿ, ಗೆಣಸನ್ನು ಬಾಳೆಯ ಎಲೆಯಲ್ಲಿ ಇಡುವಳು]
ಮಕ್ಕಳೆ, ಉಂಡು ಹಸಿವನ್ನು ನೀಗಿಕೊಳ್ಳಿರಿ.
[ರಾಮ ಲಕ್ಷ್ಮಣರು ಗೆಣಸಿನ ಸಿಪ್ಪೆಯನ್ನು ಸುಲಿದು ತಿನ್ನ ತೊಡಗುವರು. ಮಾತಂಗಿನಿ ಎದ್ದು ಬಿದಿರಿನ ಕೊಳವೆಯಂತಿದ್ದ ಪಾತ್ರೆಯಲ್ಲಿ ಮೊಸರು ಇಟ್ಟಿದ್ದು, ಅದನ್ನು ತಂದು ರಾಮಲಕ್ಷ್ಮಣರ ಎಲೆಯ ಮುಂದೆ ಇರಿಸುವಳು]

ಮೊಸರು ಇದೆ. ಸಾವಧಾನವಾಗಿ ಉಣ್ಣಿರಿ. ಯಾರ ಉಣಿಸು ಯಾರಿಗೋ ಕೊಡಲು ಉಂಟೇ ? ಯಾರ ಉಣಿಸು ಯಾರದ್ದೋ ಅವರೇ ಉಣಬೇಕಾಗಿದೆ. ನಿಮ್ಮ ಪುಣ್ಯವಿರಲು ಅವರಿಗೆ ನಾನು ಬಡಿಸಲು ಸಾಧ್ಯವೇ ?
ಹೊಟ್ಟೆಯ ತುಂಬ ಉಣ್ಣಿರಿ. ಬಂದ ಅತಿಥಿ ಯಾರಾದರೇನಂತೆ ? ನಿಮ್ಮ ಸಂಪದ ಇದಾಗಲು ಅವರಿಗೆ ನಾನು ಹೇಗೆ ನೀಡಲಿ ?
[ಈ ಮಾತನ್ನು ಆಡುತ್ತಾ ಮಾತಂಗಿನಿ ಬಾಳೆಯಹಣ್ಣನ್ನು ಸುಲಿದು ಅತಿಥಿಗಳ ಎಲೆಯಲ್ಲಿ ಇಡುವಳು.]

ಲಕ್ಷ್ಮಣ—ಯಾರ ಸಂಪತ್ತು ಯಾರಿಗೆ ಹೇಳು ಅಜ್ಜಿ ? ನಾವು ಉಣ್ಣುತ್ತಿರುವ ಈ ಉಣಿಸು ಯಾರದು ? ಎಂಥಾ ಪುಣ್ಯವಂತನಜ್ಜಿ ನೀನು ಕಾತರಿಸುವ ಆ ಅತಿಥಿ.

ಮಾತಂಗಿನಿ—ಯಾರೆಂದು ಹೇಳಲಿ ?

ರಾಮ—ಆ ಭಾಗ್ಯನಿಧಿಯ ಹೆಸರನ್ನು ನಾವೂ ಕೇಳುವೆವು ಹೇಳಬಾರದೇ ಅಜ್ಜಿ ?

ಮಾತಂಗಿನಿ—ನನ್ನ ಆ ಅತಿಥಿ ಸಾಮಾನ್ಯನಲ್ಲ. ಅತನು ಈ ಧರೆಯನ್ನು ಆಳುವ ಅರಸ ದಶರಥ ಪ್ರಭುವಿನ ಪ್ರಾಣ ಪ್ರಿಯ ಮಗ.
[ಕಂಬನಿ ತುಂಬಿ ನಿಡುದಾಗಿ ಉಸಿರನ್ನು ಬಿಟ್ಟು.]
ಆ ಭಾಗ್ಯ ಈ ಮುದಿಯ ಮಾತಂಗಿನಿಗೆ ಇದೆಯೋ ಇಲ್ಲವೊ ?
ಸೀತಾಪತಿ ಅವನು.
[ರಾಮ ಲಕ್ಷ್ಮಣರು ಪರಸ್ಪರ ಮುಖವನ್ನು ನೋಡಿಕೊಳ್ಳುವರು. ಶಬರಿ ಕಣ್ಣುಗಳಲ್ಲಿ ಕಂಬನಿ ಬರುವುದು.]

ರಾಮ—ಆಹಾ ! ನಿಜವಾಗಿಯೂ ಆ ರಾಮನ ಜನ್ಮ ಸಾರ್ಥಕವಾಯಿತು ಅಜ್ಜಿ.

ಮಾತಂಗಿನಿ—ಹೀಗೇ ರಾಮ ಲಕ್ಷ್ಮಣರಿಗಾಗಿ ದಿನವೂ ಅಡಿಗೆ ಮಾಡಿಟ್ಟುಕೊಂಡು ಹತ್ತು ವರ್ಷಗಳಿಂದಲೂ ಕಾಯುತ್ತಲೇ ಬಂದಿದ್ದೇನೆ.
[ನಿರಾಶೆಯಿಂದ.] ಆದರೆ ಏನಾಯಿತು ?
ಈ ಕಂಗಳಿಗೆ ಆ ಪುಣ್ಯವಿಲ್ಲ ಈ ಬಾಳಿಗೆ ಲಭ್ಯವಿಲ್ಲ. ಯಾರುಯಾರಿಗೆಷ್ಟೋ ಅಷ್ಟೇ.
[ನಿಟ್ಟುಸಿರನ್ನೂ ಬಿಡುವಳು.]

ಲಕ್ಷ್ಮಣ—ನೀನು ಧನ್ಯಳು ಅಜ್ಜಿ. ನಿನ್ನಂಥ ಪುನೀತ ಪ್ರೇಮಭಾವನೆ ಉಳ್ಳ ವ್ಯಕ್ತಿಯನ್ನು ಕಂಡ ನಾವೂ ಧನ್ಯರು ಅಜ್ಜಿ.

ಮಾತಂಗಿನಿ—ನಿಮ್ಮಿಬ್ಬರನ್ನು ಕಂಡು ಅವರಿಬ್ಬರನ್ನೇ ಕಂಡಂತೆ ಆಯಿತು.
ಒಂದು ಮಾತು ಕೇಳಲೆ ?

ರಾಮ—ಕೇಳು ಅಜ್ಜಿ.

ಮಾತಂಗಿನಿ—ಬ್ರಹ್ಮ ಋಷಿಗಳು ಆಡಿದ ಮಾತು ಅವರ ಭವಿಷ್ಯ ವಾಣಿ ಸುಳ್ಳಾಗದು ಅಲ್ಲವೆ ?

ಲಕ್ಷ್ಮಣ—ಎಂದಿಗೂ ಸುಳ್ಳಾಗದು ಅಜ್ಜಿ. ನೀನು ಯಾವ ಋಷಿಯನ್ನು ಕುರಿತು ಹೇಳುವೆ? ನಿನಗೂ ಬ್ರಹ್ಮ ಋಷಿಗಳಾರಾದರೂ ಭವಿಷ್ಯವನ್ನು ನುಡಿದರೆ?

ಮಾತಂಗಿನಿ—ನುಡಿದರು.

ರಾಮ—ಯಾವ ಬ್ರಹ್ಮ ಋಷಿ?

ಮಾತಂಗಿನಿ—ಋಷ್ಯಮೂಕ ಪರ್ವತದ ಬಳಿಯಲ್ಲಿ ತಪಸ್ಸು ಮಾಡಿಕೊಂಡಿದ್ದ ಮತಂಗಮುನಿ. ಮಹಾ ತೇಜೋವಂತರು.

[ಮಾತಂಗಿನಿ ಎರಡೂ ಕೈಗಳನ್ನು ಜೋಡಿಸಿ ನಮಸ್ಕರಿಸುವಳು.]

ಲಕ್ಷ್ಮಣ—ಅವರು ನುಡಿದ ಭವಿಷ್ಯವೇನು?

ಮಾತಂಗಿನಿ—ರಾಮ, ಸೀತಾರಮಣ, ದರ್ಶನವನ್ನು ಕೊಡುವನೆಂದು ಆ ಅತಿಥಿಗಾಗಿ ನಾನು ಕಾತರಿಸಿ ಕಾದಿರುವೆನು.

ರಾಮ—ನಿನ್ನದು ನಿರೀಕ್ಷಣೆಯನೋಂಪಿ ಅಜ್ಜಿ. ನಿನಗೆ ಅತಿಥಿಯಾದ ರಾಮ ಧನ್ಯನಲ್ಲವೇ?

ಲಕ್ಷ್ಮಣ—ನಿನ್ನ ತಪಸ್ಸು ಈಡೇರಿತೆಂದುಕೋ.

ರಾಮ—ನಿಜವಾಗಿಯೂ ನೀನು ಪ್ರೇಮ ತಪಸ್ವಿನಿ. ಮಾತಂಗಿನಿಯಾದರೂ ನಿನ್ನದು ಸಂಸ್ಕಾರಯುತ ಹೃದಯ.

ಮಾತಂಗಿನಿ—ಈ ಬೇಡತಿಯದೂ ಒಂದು ತಪಸ್ಸೆ?

ಲಕ್ಷ್ಮಣ—ಮಾತಂಗಿನಿಯಾದರೇನಾಯಿತು ಅಜ್ಜಿ ನೀನು ನಿಜವಾಗಿಯೂ ತಪಸ್ವಿನಿಯೇ.

ಮಾತಂಗಿನಿ—ಏನು ತಪಸ್ಸೋ ಏನೊ? ನನ್ನಾಸೆ ಈಡೇರದೇನೊ? [ದುಃಖಿಸುವಳು] ನಿಮ್ಮನ್ನು ನೋಡಿದರೆ ಉತ್ತರದ ಕಡೆಯವರೆಂದು ಕಾಣಿಸುವಿರಿ. ನೀವೇನಾದರು ರಾಮ ಎಲ್ಲಿ ಇರುವನೆಂದು ಕೇಳಿರುವಿರಾ? ಆ ರಾಮನನ್ನು ನೋಡಿರುವಿರಾ ಮಕ್ಕಳೆ?

[ನಿಟ್ಟುಸಿರು ಬಿಟ್ಟು. ಕುಳಿತಲ್ಲಿಂದ ಏಳುವಳು.]

ಎಂದು ಬರುವನೋ ಆ ರಾಮ? ಬರುವನೋ ಬಾರನೋ? ಈ ಜೀವ ಹೋಗುವ ಮೊದಲಾದರು ಬಂದರೆ ....

[ತಲೆ ಆಡಿಸುವಳು ಬರುವುದಿಲ್ಲ ವೆನ್ನುವಂತೆ]

ಆ ರಾಮನ ಸಿರಿಮುಗದ ದರ್ಶನ ಈ ಬೇಡತಿಗೆ ಇದೇ ಜನ್ಮದಲ್ಲಿ ದೊರಕುವುದೇ? ಶಾಂತಿನಿಧಿಯಾದ ರಾಮನನ್ನು ಕಾಣುವುದೇ ಪರಮ ಶಾಂತಿ.

[ಮಾತಂಗಿನಿ ಮಾತನ್ನಾಡುತ್ತಿರಲು ರಾಮ ಲಕ್ಷ್ಮಣರು ಉಣುವುದನ್ನು ಬಿಟ್ಟು ಅವಳನ್ನೇ ನೋಡುತ್ತಿರುತ್ತಾರೆ. ರಾಮನ ಕಣ್ಣುಗಳಲ್ಲಿ ಹನಿಮೂಡುವುದು. ರಾಮನು ಎದ್ದು ಮಾತಂಗಿನಿ ಬಳಿಗೆ ಬಂದು.]

ರಾಮ—ಶಾಂತಿನಿಧಿಯಾದ ಆ ರಾಮನಿಗೆ ಶಾಂತಿ ಇಲ್ಲದೆ ತೊಳಲುತ್ತಿರುವನಲ್ಲವೇ ? ಮನೆಯನ್ನು ತೊರೆದು ವನವನ್ನು ಸೇರಿದ. ಅಂಥ ರಾಮನನ್ನು ಶಾಂತಿನಿಧಿ ಎಂದು ಕರೆಯುವೆಯಾ ?

[ಈ ಮಾತನ್ನು ರಾಮ ಆಡುತ್ತಿರಲು ಲಕ್ಷ್ಮಣನೂ ಕುಳಿತವನು ಏಳುವನು]

ಆ ಸಾಮಾನ್ಯ ರಾಮನನ್ನು ದೇವತ್ವಕ್ಕೆ ಏರಿಸುವೆ ಏಕೆ ಅಜ್ಜಿ ? ನಿನ್ನ ಪ್ರೀತಿಯ ಕಲ್ಪನೆ ರಾಮನನ್ನು ಆ ಎತ್ತರಕ್ಕೆ ಏರಿಸಿದೆ.

ಮಾತಂಗಿನಿ—ಹಾಗೆ ತೆಗಳದಿರು ಬಿಲ್ಲುಗಾರ. ನನ್ನ ರಾಮನ ನಿಲವು ನಿನ್ನಂಥ ಬೇಡರಿಗೆ ಎಲ್ಲಿ ಅರ್ಥವಾಗುವುದು.

ಲಕ್ಷ್ಮಣ—ನನ್ನ ಅಣ್ಣ ಮಾತಂಗನಲ್ಲ. ನನ್ನ ಅಣ್ಣನಿಗಿಂತಲೂ ರಾಮನನ್ನು ಬಲ್ಲವರು ಯಾರು ?

ಮಾತಂಗಿನಿ—[ರಾಮನ ಮುಖ ನೋಡುತ್ತಾ.]

ನೀನು ... ನೀನು ... ನನ್ನ ರಾಮನ ಬಲ್ಲೆಯಾ ?

ರಾಮ—ನಾನು ಬಲ್ಲೆ. ನನ್ನನ್ನೇ ನಾನು ತಿಳಿದಿಲ್ಲವೆಂದು ನಿನ್ನ ಅಭಿಪ್ರಾಯವೇ ಅಜ್ಜಿ ?

[ಮಾತಂಗಿನಿ ರಾಮನನ್ನೇ ನೋಡುವಳು. ರಾಮನ ಕಣ್ಣಲ್ಲಿ ಕಂಬನಿಯನ್ನೂ ಗುರುತಿಸುವಳು. ಎಚ್ಚೆತ್ತವಳಂತೆ ಕಣ್ಣೊರಸಿಕೊಂಡು.]

ಮಾತಂಗಿನಿ—ನಡೆಯಿರಿ ... ನಡೆಯಿರಿ. ಊಟಕ್ಕೆ ಕುಳಿತ ನೀವು ಎದ್ದಿರೇಕೆ ? ಅಯ್ಯೋ! ನಾನು ಎಂಥ ಬೆಪ್ಪು. ಅತಿಥಿಗಳ ಮುಂದೆ ರಾಮ ಕಥೆಯನ್ನು ಪ್ರಾರಂಭಿಸಿ ಸತ್ಕರಿಸುವುದನ್ನೇ ಮರೆತೆ.

ಕುಳಿತುಕೊಳ್ಳಿ ಉಣಿರಿ. ಇದೋ ಹಸಿರಕ್ಕಿಯ ಅನ್ನವನ್ನು ಬಡಿಸುವೆನು.

[ರಾಮ ಲಕ್ಷ್ಮಣರು ಎಲೆಗಳ ಮುಂದೆ ಕುಳಿತುಕೊಳ್ಳುವರು. ಅಜ್ಜಿ ಸವಿಸಾಹ ವಿದ್ದ ಮಡಕೆಯನ್ನು ತಂದಿರಿಸುವಳು. ರಂಗದಲ್ಲಿ ಕತ್ತಲಾಗುವುದು.]

ದೃಶ್ಯ-೫

[ಮಧ್ಯಾಹ್ನದ ವಿಶ್ರಾಂತಿಗಾಗಿ ಮಾತಂಗಿನಿಯ ಗುಡಿಸಿಲಿನಲ್ಲಿ ರಾಮ ಕಂಬಳಿ ಯೊಂದರ ಮೇಲೆ ಮಲಗಿರುತ್ತಾನೆ. ಲಕ್ಷ್ಮಣ ಶಬರಿ ಇಬ್ಬರೂ ರಂಗದಲ್ಲಿ ಇರುವುದಿಲ್ಲ.]

ರಾಮ—[ಅಂಗಾತ ಮಲಗಿರುವನು. ತನ್ನಲ್ಲಿಯೇ ಕನವರಿಸುವನು.]

ಸೀತೆ, ಬಾ ಇಲ್ಲಿ ;

ಬಾ ಪ್ರಿಯೆ, ಜಾನಕಿ !

ಆದೇಕೆ ದೂರನಿಂತೆ ಬಳಿಬರಬಾರದೆ ಮೈಥಿಲಿ.

[ತನ್ನಲ್ಲಿಯೇ ಮುಗುಳು ನಗೆ ಬೀರುತ್ತಿರುತ್ತಾನೆ. ಬಿದಿರಿನ ಪಾತ್ರೆ ಹಿಡಿದು ಮಾತಂಗಿನಿ ಪ್ರವೇಶಿಸುವಳು. ರಾಮ ಮಲಗಿರುವ ಎಡೆ ನಿಲ್ಲುವಳು.]

ಮಾತಂಗಿನಿ—ಏನು ? ಸೀತೆಯೇ ? ಸೀತೆಯನ್ನು ಕರೆದವರು ಯಾರು ?
ಜಾನಕಿ ಹಾಗೆಂದವರು ಯಾರು ?
ಈ ಬೇಡರ ಹುಡುಗ ಕನವರಿಸುತ್ತಿರುವನೇ. ಸೀತೆಯ ಹೆಸರು ಇವನ ನಾಲಗೆಯಲ್ಲಿ ?
[ರಾಮನನ್ನೇ ನೋಡುವಳು. ಮಾತಂಗಿನಿಯ ಮುಖ ಅರಳುವುದು]
ಹಾಗೆಂದರೆ ... ಹಾಗಾದರೆ ...
ನಿಜ ... ನಿಜ ... ಇವನು ಬೇಡನಲ್ಲ ... ಮತ್ತೆ !
ನನ್ನ ... ನನ್ನಾ ಅತಿಥಿ ದೇವರು ... ರಾ ...
[ಇನ್ನೇನು ಮಾತು ಪೂರ್ಣ ಮಾಡುವ ಅನಿತರಲ್ಲಿ ರಾಮ ಕನವರಿಸಿ ಜಾಗೃತಗೊಳ್ಳುವನು.]

ರಾಮ—ನಿಲ್ಲು, ನಿಲ್ಲು ರಾಕ್ಷಸಾಧಮ ... ನಿಲ್ಲು ! ಹೇಳು ಎಲ್ಲಿಗೆ ಕೊಂಡು ಹೋಗುತ್ತಿರುವೆ ನನ್ನ ಸೀತೆಯನ್ನು
[ಹುಬ್ಬು ಗಂಟಿಕ್ಕಿಕೊಂಡು ನಿದ್ರೆಯಿಂದ ಎಚ್ಚೆತ್ತು ಕೊಳ್ಳುವನು.]

ಮಾತಂಗಿನಿ—ಅಬ್ಬಾ ! [ಭಯ ಭೀತಿಯಿಂದ ನಡಗುವಳು. ದಿಗ್ಭ್ರಮಿತಳಾಗಿ ರಾಮನನ್ನೇ ನೋಡುತ್ತಾ ನಿಲ್ಲುವಳು. ರಾಮ ಮಾತಂಗಿನಿಯನ್ನು ಕಂಡು ನಾಚಿಕೊಂಡವನಂತೆ ತಲೆಯನ್ನು ತಗ್ಗಿಸುವನು.]

ರಾಮ—[ಬೇಡತಿಯ ಮುಖವನ್ನು ಕಂಡು]
ಶಬರಜ್ಜಿ ಭಯ ಪಟ್ಟೆಯಾ ? ಕಂಡ ಕನಸನ್ನು ನಿಜವೆಂದುಕೊಂಡು ಗದ್ದಲ ಮಾಡಿದೆ. ಕ್ಷಮಿಸು ಅಜ್ಜಿ ಕ್ಷಮಿಸು.

ಮಾತಂಗಿನಿ—ರಾಮಯ್ಯಾ, ನನ್ನಯ್ಯಾ [ಬಿದಿರು ಪಾತ್ರೆಯನ್ನು ಬದಿಗಿಟ್ಟು ರಾಮನನ್ನು ಅಪ್ಪುವಳು.] ಈ ಮೂಢಳಾದ ಶಬರಿಗೆ ರಾಮನ ಗುರುತು ಸಿಗದೆ ಹೋಯಿತೆ ?
ಅಯ್ಯೋ ! ಅಯ್ಯೋ ! ಹೇಳು ರಾಮಯ್ಯ ಸೀತಮ್ಮ ಎಲ್ಲಿ ? ಏನಾಯಿತು ಆ ಮಹಾತಾಯಿಗೆ ? ಏನು ಹಾನಿ ಆಯಿತು ? ಮಂಜು ಕಣ್ಣುಗಳಿಗೆ ಕಾಣದಾಯಿತೆ ?
ಹಾಗಾದರೆ ... ಹಾಗಾದರೇ ... ನಾನು ಅಗಲೆ ನೋಡಿದಾ ಆ ಸೀರೆ ...
[ನಡುವೆ ಮಾತು ನಿಲ್ಲಿಸುವಳು.]

ರಾಮ—ನಿಜ ಶಬರಜ್ಜಿ ನಿಜ, ಆ ಸೀರೆ ನನ್ನ ಸಂಗಾತಿ ಸೀತೆಯದೇ. ನೀನು ಪರಿತಪಿಸುತ್ತಿದ್ದ ಆ ಅತಿಥಿ ರಾಮ ನಾನೇ ಅಜ್ಜಿ ನಾನೇ.
ನನ್ನ ಅರ್ಧಾಂಗಿನಿ ಸೀತೆ ಪುನೀತೆ, ರಾಕ್ಷಸನಿಂದ ಅಪಹರಣಳಾದಳು. ಆ ಪಾತಕಿಯನ್ನು ಹುಡುಕುತ್ತಾ ಹುಡುಕುತ್ತಾ ನಾನು ಲಕ್ಷ್ಮಣನೂ ಇಲ್ಲಿಗೆ ಬಂದೆವು.

[ದುಃಖದಿಂದ ಮಾತಂಗಿನಿಯಲ್ಲಿ ನುಡಿಯುವನು ; ನುಡಿಯುತ್ತಾ ಕುಸಿಯು ವನು]

ಮಾತಂಗಿನಿ—ಅಯ್ಯೋ ! ರಾಮಚಂದ್ರಯ್ಯ, ರಾಮಚಂದ್ರಯ್ಯ ಏನಾಯಿತು ಏನಾಯಿತು ? ಹೇಗೆ ಸಂತೈಸಲಿ ನಾನು ನಿನ್ನ ? ಶಬರಿ ನಾನು. ನಿನ್ನನು ಹೇಗೆ ನೋಡಿಕೊಳ್ಳಲಿ ? ನನ್ನ ನಿನ್ನ ಸಮಾಗಮ ಹೀಗಾಗಬೇಕಾಯಿತಾ ?
ಅಯ್ಯೋ ! [ತಲೆ ಚಚ್ಚಿಕೊಳ್ಳುತ್ತಾ] ಮಂಕು ನಾನು ನಿನ್ನನ್ನು ಗುರುತಿಸದೆ ಹೋದೆನೇನು ?
[ಬಿಕ್ಕಿ ಬಿಕ್ಕಿ ಅಳುವಳು.] ಈ ಸಂದರ್ಭದಲ್ಲಿಯೇ ನಿನ್ನ ತಮ್ಮನೂ ಇಲ್ಲ ನಾನೇನು ಮಾಡಲಿ ? ನಾನೇನು ಮಾಡಲಿ ?
[ಗಾಳಿ ಬೀಸತೊಡಗುವಳು. ರಂಗದಲ್ಲಿ ಕತ್ತಲಾಗುವುದು.]

ದೃಶ್ಯ–೬

[ಮಾತಂಗಿನಿಯ ಗುಡಿಸಲು ರಾಮ ಮಲಗಿರುವನು. ಬದಿಗೆ ಮಾತಂಗಿನಿ ಕುಳಿತಿರುವಳು. ರಾಮನಿಗೆ ಎಲೆಯಿಂದ ಗಾಳಿಯನ್ನು ಬೀಸುತ್ತಿರುವಳು. ಲಕ್ಷ್ಮಣನೂ ರಾಮನ ಕಾಲುಗಳನ್ನು ಒತ್ತುತ್ತಿರುವನು. ಈ ದೃಶ್ಯದಲ್ಲಿ ಬೆಳಕಿನ ಸಹಾಯದಿಂದ ಅನೇಕ ದಿನಗಳು ಕಳೆದಂತೆ ತೋರಿಸಬಹುದು. ಪ್ರೇಕ್ಷಕರಲ್ಲಿ ರಾಮ ಅನೇಕ ದಿನಗಳಿಂದಲೂ ಖಾಯಿಲೆ ಬಿದ್ದಿದ್ದಾನೆಂಬ ಅಂಶ ವನ್ನೂ ವ್ಯಕ್ತಪಡಿಸಬೇಕು.]

ಮಾತಂಗಿನಿ—[ನರಳುವ ರಾಮನ ಹಣೆಯನ್ನು ಮುಟ್ಟಿ] ಹಣೆಯು ಸುಡುತಿದೆ. ಏಕೆ ರಾಮಚಂದ್ರಯ್ಯ. ಬಹಳ ಆಯಾಸವಾಗುತ್ತಿರುವುದೇ ?
[ರಾಮ ' ಅಹುದು ' ಎನ್ನುವಂತೆ ತಲೆ ಆಡಿಸುವನು. ಲಕ್ಷ್ಮಣ ಮೌನವಾಗಿ ಕಂಬನಿ ಮಿಡಿಯುವನು]
ಜಲಪಾನ ಮಾಡುವೆಯಾ ? ಇದೋ ಬಂದೆ,
[ಮೆಲ್ಲನೆ ಮೇಲೆದ್ದು ನೀರು ತರಲು ಹೋಗುವಳು. ಲಕ್ಷ್ಮಣ ರಾಮನತ್ತ ನೋಡಿ]
ಈಗ ಹೇಗಿದೆ ? ನಾಲ್ಕು ದಿನಗಳಿಗೆ ಎಷ್ಟೊಂದು ಬಡವಾಗಿ ಹೋದೆ. ಚಿಂತಿಸದಿರು ಅಣ್ಣಾ ಶೀಘ್ರ ಗುಣಮುಖನಾಗುವೆ.
[ರಾಮ ಲಕ್ಷ್ಮಣನ ಮಾತುಗಳಿಗೆ ಮಂದಹಾಸವನ್ನೂ ಬೀರುವನು] ಅಷ್ಟರಲ್ಲಿ ಬಿದಿರಿನ ಪಾತ್ರೆಯಲ್ಲಿ ನೀರನ್ನು ತಂದ ಮಾತಂಗಿನಿ ರಾಮನನ್ನು ತನ್ನ ತೊಡೆಯ ಮೇಲೆ ಮಲಗಿಸಿಕೊಳ್ಳುವಳು. ಎಲೆಯೊಂದನ್ನು ಹಿಡಿಯುವಳು. ಬೊಂಬಿನಲ್ಲಿದ್ದ ನೀರನ್ನು ಮೆಲ್ಲನೆ ಲಕ್ಷ್ಮಣ ಸುರಿಯುವನು. ರಾಮ ನಿಧಾನ

ವಾಗಿ ನೀರನ್ನು ಕುಡಿಯುವನು. ನೀರು ಕುಡಿದ ನಂತರ ಮಾತಂಗಿನಿ ಹಾಗೂ ಲಕ್ಷ್ಮಣ ಇಬ್ಬರೂ ಹಾಸಿನ ಮೇಲೆ ಮಲಗಿಸುವರು. ರಾಮ ಮಲಗುವನು. ಲಕ್ಷ್ಮಣ ದೈನ್ಯವಾಗಿ ಮಾತಂಗಿನಿಯ ಮುಖ ನೋಡುವನು.]

ಮಾತಂಗಿನಿ—ನಡೆ ಲಕ್ಷ್ಮಣ, ರಾಮಯ್ಯ ನಿದ್ರೆ ಮಾಡಲಿ. ನಾನು ಕೊಳಕ್ಕೆ ಹೋಗಿ ನೀರನ್ನು ತರುವೆನು.

[ಗುಡಿಸಲಲ್ಲಿ ಇದ್ದ ಗಡಿಗೆಯನ್ನು ಕೈಗೆ ತೆಗೆದುಕೊಂಡು ಸೊಂಟಕ್ಕೆ ಇಟ್ಟು ಕೊಳ್ಳುವಳು.]

ಲಕ್ಷ್ಮಣ—ನಡೆ ಶಬರಜ್ಜಿ, ನಾನೂ ನಿನ್ನೊಡನೆ ಬರುವೆನು. ಕಾಡಿನಲ್ಲಿ ಸ್ವಾದುಫಲ ವನ್ನು ತಿರಿದು ತರುವೆನು. ಹಣ್ಣಿನ ರಸವನ್ನು ಅಣ್ಣನಿಗೆ ಕುಡಿಸಬೇಕಾಗಿದೆ.

[ಮತ್ತೆ ಮತ್ತೆ ರಾಮನತ್ತ ತಿರುಗಿ ನೋಡುವನು. ಮಾತಂಗಿನಿಯೂ ಹಾಗೆ ಮಾಡುವಳು. ಇಬ್ಬರೂ ಗುಡಿಸಿಲಿನ ಹೊರಗೆ ಬರುವರು. ಅವರಿಬ್ಬರೂ ರಂಗ ತುದಿಗೆ ಬರುವ ಅನಿತರಲ್ಲಿ ರಂಗದಲ್ಲಿ ಕತ್ತಲಾಗುವುದು.]

ದೃಶ್ಯ-೭

[ಮಾತಂಗಿನಿಯ ಗುಡಿಸಿಲಿನ ಹೊರಭಾಗ. ಸಮಯ ರಾತ್ರಿಯಾಗಿದೆ. ಕಲ್ಲೊಂದರ ಮೇಲೆ ಲಕ್ಷ್ಮಣನೊಬ್ಬನೇ ಕುಳಿತಿದ್ದಾನೆ. ಗದ್ದಕ್ಕೆ ಕೈ ಕೊಟ್ಟು ಚಿಂತಾಕ್ರಾಂತನಾಗಿದ್ದಾನೆ. ಈ ಸನ್ನಿವೇಶದಲ್ಲಿಯೂ ಲಕ್ಷ್ಮಣನ ಮುಖದ ಮೇಲಷ್ಟೇ ಬೆಳಕನ್ನು ಚೆಲ್ಲಬಹುದು.]

ಲಕ್ಷ್ಮಣ—[ನಿಡಿದಾಗಿ ಉಸಿರು ಬಿಟ್ಟು]

[ತನ್ನಲ್ಲಿಯೇ] ಅಣ್ಣನಿಗೆ ಎಂಥ ವಿಚಿತ್ರವಾದ ರುಜೆ ಬಂದಿದೆ. ದಿನ ದಿನಕ್ಕೂ ಬಡವಾಗುತಿಹುದು ಅಣ್ಣನ ಶರೀರ. ನನಗೂ ಏಕೋ ಮನೋಧೈರ್ಯ ಕುಸಿಯತೊಡಗಿದೆ. ಅಣ್ಣನಿಗೇನಾದರು ಆದರೆ .... ಇಲ್ಲ ಹಾಗೆ ಸಾಧ್ಯವೇ ಇಲ್ಲ ನಾನು ಯಾವ ಮುಖವನ್ನು ಹೊತ್ತು ಅಯೋಧ್ಯೆಗೆ ಹೋಗಲಿ ? ಅಣ್ಣ ! ಅಣ್ಣ ! ಏನಾಯಿತು ನಿನಗೆ ? [ಲಕ್ಷ್ಮಣ ಬಿಕ್ಕಿ ಬಿಕ್ಕಿ ಅಳುವನು. ಮಾತಂಗಿನಿ ಲಕ್ಷ್ಮಣನ ಅಳು ಕೇಳಿ ಗುಡಿಸಿಲಿನ ಹೊರ ಬರುವಳು. ಲಕ್ಷ್ಮಣನ ಹೆಗಲ ಮೇಲೆ ಕೈ ಇಡುವಳು. ಈ ಸನ್ನಿವೇಶದಲ್ಲಿಯೂ ಮಾತಂಗಿನಿಯ ಮುಖದ ಮೇಲಷ್ಟೇ ಬೆಳಕನ್ನು ಚೆಲ್ಲಬಹುದು.]

ಲಕ್ಷ್ಮಣ—[ಬೆಚ್ಚಿ] 'ಹಾಃ' ....

ಮಾತಂಗಿನಿ—ಹೀಗೇಕೆ ಬೆಚ್ಚಿದೆ ಕಂದ ? ಅಪರಾತ್ರಿಯಲ್ಲಿ ಇಲ್ಲೇಕೆ ಕುಳಿತಿರುವೆ ? ನಿದ್ರೆ ಬರಲಿಲ್ಲವೆ ? ಚಿಂತೆ ಏತಕೆ ಮಗು ? ನಡೆ ಗುಡಿಸಿಲಿನ ಒಳಗೆ. [ಶಂಬನಿಯನ್ನು ಒರೆಸುವಳು.]

[ಮಾತಂಗಿನಿಯನ್ನು ಕಂಡು ಇನ್ನೂ ಬಿಕ್ಕುವನು.]

ಮಾತಂಗಿನಿ—ಕೊಡದು ಮಗು, ಕೂಡದು ಇಷ್ಟೊಂದು ನಿರಾಶನಾಗಬೇಡ. ಎಲ್ಲವೂ ಒಳ್ಳಿತಾಗುವುದು.

ಲಕ್ಷ್ಮಣ—ಇಲ್ಲ ಶಬರಜ್ಜಿ, ನನಗೆ ಯಾವ ಆಸೆಯೂ ಉಳಿದಿಲ್ಲ.

ಮಾತಂಗಿನಿ—ಹಾಗೆ ಹತಾಶನಾಗದಿರು ಕಂದ.

ಲಕ್ಷ್ಮಣ—ಅತ್ತಿಗೆಯ ಸ್ಥಿತಿಯಂತೂ ಹಾಗಾಯಿತು. ಅಣ್ಣನ ಸ್ಥಿತಿ ಹೀಗಾಯಿತು. ನಾನು ಯಾರಿಗಾಗಿ ಬದುಕಿರಲಿ ?

ಮಾತಂಗಿನಿ—ಹಾಗೆನ್ನದಿರು, ಹಾಗೆನ್ನದಿರು ಲಕ್ಷ್ಮಣ. ನಮ್ಮ ರಾಮನಿಗೆ ಕೆಡಕು ಆಗುವುದಿಲ್ಲ. ನನಗೆ ಗುರುಕೃಪೆ ಇದೆ. ನನ್ನ ಪ್ರಾಣವನ್ನು ಪಣವಿಟ್ಟು ರಾಮನನ್ನು ಉಳಿಸುವೆನು ವತ್ಸ. ಉಳಿಸುವೆನು, ನೋಡುವೆಯಂತೆ ರಾಮನ ಖಾಯಿಲೆ ಎಲ್ಲವೂ ಮಾಯವಾಗಿ ರಾಮ ಮೊದಲಿನಂತೆಯೇ ಆಗುವನು. ಮೇಲೇಳು.

[ಲಕ್ಷ್ಮಣ ಮಾತಂಗಿನಿಯ ಮುಖ ನೋಡುತ್ತಾ ಆಶೆಯಿಂದ ಮೇಲೇಳುವನು. ನಡೆಯುತ್ತಾ] ಮನೋರೋಗಕ್ಕೆ ಪ್ರೇಮವೇ ಮದ್ದು ಲಕ್ಷ್ಮಣ. ರಾಮ ಮೊದಲಿನಂತಾಗುವನೆಂಬ ನಂಬಿಕೆ ನನಗಿದೆ. ನಡೆ ಗುಡಿಸಿಲಿನ ಒಳಗೆ.

[ಇಬ್ಬರೂ ಗುಡಿಸಿಲಿನ ಒಳಗೆ ಬರುವರು.]

[ಗುಡಿಸಿಲಿನಲ್ಲಿ ರಾಮನು ನಿಸ್ತೇಜನಾಗಿ ಅಂಗಾತ ಮಲಗಿರುವನು. ಲಕ್ಷ್ಮಣ ಒಂದೆಡೆ ನಿಂತಿರುವನು. ಮಾತಂಗಿನಿ ಲಕ್ಷ್ಮಣನ ಮುಖವನ್ನು ನೋಡುವಳು. ಲಕ್ಷ್ಮಣ ಮಂದಹಾಸವನ್ನು ಬೀರುವನು. ಎರಡೂ ಕೈ ಜೋಡಿಸಿದ ಮಾತಂಗಿನಿ]

ಮಾತಂಗಿನಿ—ಓ ನನ್ನ ಪೂಜ್ಯ ಗುರುದೇವ ಪ್ರೇಮಮೂರ್ತಿ ರಾಮನನ್ನು ಉಳಿಸುವ ಕೃಪೆ ಮಾಡು. ನಾನು ನಿಜವಾಗಿಯೂ ರಾಮನಲ್ಲಿ ಪ್ರೇಮ ಉಳ್ಳವಳಾದಲ್ಲಿ, ತಮಗೆ ನಿಷ್ಠೆಯ ಶಿಷ್ಯೆ ಆದಲ್ಲಿ ಕಾಯಾ, ವಾಚಾ, ಮನಸಾ ಯಾರಿಗೂ ಕೇಡನ್ನು ಬಯಸಿದವಳು ಅಲ್ಲವಾದಲ್ಲಿ ರಾಮ ಮೊದಲಿನಂತೆಯೇ ಚೇತನ ವನ್ನೂ ಪಡೆಯಲಿ.

[ಮಾತಂಗಿನಿ ಹೀಗೆ ಹೇಳಿ ಮೂರು ಪ್ರದಕ್ಷಿಣೆಯನ್ನು ಮಾಡಿ ರಾಮನ ಕಾಲುಗಳಿಗೆ ವಂದಿಸುವಳು. ಲಕ್ಷ್ಮಣನು ಕೈ ಮುಗಿದು ಮೌನವಾಗಿ ನಿಂತಿರುತ್ತಾನೆ.]

ಗುರುದೇವ, ಕಣ್‌ಕಂಡ ಪ್ರತ್ಯಕ್ಷ ದೇವರೇ ರಾಮನ ರುಜೆಯು ನನಗೆ ಬರಲಿ. ರಾಮ ಬದುಕಿ ಉಳಿಯಲಿ. ರಾಮನಲ್ಲಿ ನನ್ನ ನಿಜವಾದ ಪ್ರೇಮವಿದ್ದರೆ, ರಾಮ ಎಚ್ಚೆತ್ತುಕೊಳ್ಳಲಿ. ಗುರುದೇವಾ ! ಇನ್ನು ಸಾಕು ನನಗೆ ಈ ಜಗದ ಬಯಕೆಗಳು ಈ ಅಂತಿಮ ಕೋರಿಕೆಯನ್ನು ಕರುಣಿಸು ಗುರು.

[ಎರಡೂ ಕೈ ಜೋಡಿಸಿ ನಿಲ್ಲುವಳು.]

[ಲಕ್ಷ್ಮಣನತ್ತ ತಿರುಗಿ]

ಕಂದಾ ಲಕ್ಷ್ಮಣ, ಇನ್ನು ನಿನ್ನ ಅಣ್ಣನಿಗೆ ಯಾವ ಭಯವೂ ಇಲ್ಲ. ಇನ್ನು ಸುರಕ್ಷಿತ ಅವನು. ದುಃಖವನ್ನು ಬಿಡು, ನನ್ನ ಗುರುಕೃಪೆ ಆದ ಮೇಲಾಯಿತು.

[ಮಾತಂಗಿನಿ ಹೀಗೆ ಹೇಳುತ್ತಿರಲು ರಾಮ ಚೇತರಿಸಿಕೊಂಡವನಂತೆ ಮಗ್ಗುಲು ತಿರುಗುವನು.]

ಲಕ್ಷ್ಮಣ—ಅಜ್ಜಿ ! ಅಜ್ಜಿ ! ನಿನ್ನ ಪ್ರಾರ್ಥನೆ ಫಲಿಸಿತು.

ಅಣ್ಣಾ ! ಅಣ್ಣಾ !

[ಮೊಳಕಾಲೂರಿ ಕೂರುವನು.]

ಮಾತಂಗಿನಿ—ರಾಮಚಂದ್ರಯ್ಯ, ನನ್ನಯ್ಯ [ಎಂದು ಉಲ್ಲಾಸದಿಂದ ತಾನೂ ಮಂಡಿ ಊರಿ ಕೂರುವಳು. ರಂಗದಲ್ಲಿ ಕತ್ತಲಾಗುವುದು.]

ದೃಶ್ಯ-೮

[ಮಾತಂಗಿನಿಯ ಗುಡಿಸಲು, ಮಾತಂಗಿನಿ ಮಲಗಿರುತ್ತಾಳೆ. ರಾಮನು ಎಲೆಯ ಬೀಸಣಿಕೆಯಿಂದ ಗಾಳಿ ಬೀಸುತ್ತಿರುತ್ತಾನೆ. ಲಕ್ಷ್ಮಣನು ಎಲೆಯ ದೊನ್ನೆಯೊಂದರಲ್ಲಿ ಹಾಲನ್ನು ತರುತ್ತಾನೆ.]

ರಾಮ—[ಲಕ್ಷ್ಮಣನನ್ನು ನೋಡಿ]

ಬಂದೆಯಾ ಸೌಮಿತ್ರಿ ? ಶಬರಜ್ಜಿ ಮೂರು ನಾಲ್ಕು ದಿನಗಳಿಂದ ಉಪವಾಸ ವಿರುವಳು. ಎಲ್ಲಿ ಹಾಲಿನ ದೊನ್ನೆಯನ್ನು ಕೊಡು ಅಜ್ಜಿಗೆ ಕುಡಿಸೋಣ.

ಲಕ್ಷ್ಮಣ—ಅಣ್ಣಾ, ನೀನು ಬಳಿಯೇ ಕುಳಿತಿರುವೆ. ನಿನ್ನನ್ನು ನೋಡಿ, ನೋಡಿ ಅಜ್ಜಿ ತನ್ನ ಹಸಿವನ್ನು ತೀರಿಸಿಕೊಳ್ಳುವಳು. [ಮಾತಂಗಿನಿ ಅತ್ತ ನೋಡಿ] ಅಹುದೇ ಅಜ್ಜಿ ?

[ಮಾತಂಗಿನಿ ರಾಮನ ಮುಖವನ್ನು ನೋಡಿ ನಗುವಳು.]

ರಾಮ—ಅಜ್ಜಿ ! ಸ್ವಲ್ಪ ಹಾಲನ್ನು ಕುಡಿ.

[ತಲೆಯನ್ನು ಸವರುವನು.]

ಮಾತಂಗಿನಿ—[ಬೇಡವೆನ್ನುವಂತೆ ತಲೆಯನ್ನು ಆಡಿಸುವಳು.]

ಲಕ್ಷ್ಮಣ—ಹಾಲನ್ನು ಕುಡಿ ಅಜ್ಜಿ.

ರಾಮ—[ಅಜ್ಜಿಯ ಕಾಲುಗಳನ್ನೊತ್ತುವನು.]

ಅಜ್ಜಿ ಬೇನೆಯಾಗುತ್ತಿದೆಯೆ ?

ಮಾತಂಗಿನಿ—ಇದು ಅನ್ಯಾಯ ರಾಮಚಂದ್ರಯ್ಯ ನೀನೇಕೆ ಈ ಶಬರಿಯ ಕಾಲು ಗಳನ್ನು ಒತ್ತುವೆ. ನೀನು ನನ್ನನ್ನು ಉಪಚರಿಸಬೇಕೆ. ಬೇಡ ... ಬೇಡ.

ರಾಮು—ನೀನು ನನಗೆ ಶುಶ್ರೂಷೆ ಮಾಡಲಿಲ್ಲವೇ ಅಜ್ಜಿ, ನಿನ್ನಂಥ ಪ್ರೇಮ ತಪಸ್ವಿನಿಯ ಸೇವಾಭಾಗ್ಯ ನನಗೆ ದೊರತಿದೆ. ಅದು ನನ್ನ ಸುಕೃತ.

ಮಾತಂಗಿನಿ—ಬಂದ ಅತಿಥಿ ದೇವರುಗಳನ್ನು ಸತ್ಕರಿಸಬೇಕಾದವಳು ನಾನು. ನಿಮ್ಮಿಂದಲೇ ಸೇವೆಮಾಡಿಸಿಕೊಳ್ಳುವಂತಾಯಿತೆ ? ಇನ್ನು ಈ ಲೋಕದ ಸುಖ ನನಗೆ ಸಾಕು ರಾಮಯ್ಯ.

ಲಕ್ಷ್ಮಣ—ಹಾಗೆನ್ನದಿರು ಶಬರಜ್ಜಿ. ಹಗಲೂ ಇರುಳೂ ಅಣ್ಣನನ್ನು ಉಪಚರಿಸಿದೆ.

ರಾಮು—ನಿದ್ದೆಗೆಟ್ಟು ನನ್ನ ಶುಶ್ರೂಷೆಗೆ ತೊಡಗಿ ಬಳಲಿ ನೀನೂ ಹಾಸುಗೆ ಹಿಡಿದಂತಾಯಿತಲ್ಲ ಅಜ್ಜಿ ?

ಮಾತಂಗಿನಿ—ನಿನ್ನ ನೋಡುವ ಭಾಗ್ಯ ನನ್ನದಾಯಿತಯ್ಯ. ಅದೇ ನನ್ನ ಪುಣ್ಯ. ಇನ್ನು ಯಾವ ಸುಖವೂ ನನಗೆ ಬೇಡ.

ಹಸರು ಎಲೆಗೆ ಉಪಚಾರ ಬೇಕು. ಹಣ್ಣೆಲೆಗೇಕೆ ಉಪಚಾರ ?

ಧನ್ಯೆ ನಾನು. ಸಾಕು ಬದುಕಿನ್ನು ನನಗೆ ಸಾಕು. ಬಾಳಬೇಕಾದವರು ನೀವು. ರಾಮಯ್ಯ ನೀನು ಪ್ರೀತಿಯಿಂದ ಸೇವಿಸುತ್ತಿರುವಾಗ ನಾನು ಶಾಂತಿಯಿಂದ ಪರಲೋಕಕ್ಕೆ ಹೋಗುವೆನು. ಇದಕ್ಕಿಂತಲೂ ಬೇರೊಂದು ಪುಣ್ಯವಿದೆಯೆ. ನನಗೆ ನೀನು ಮಾಡಬೇಕಾದ ಕೆಲಸ ಬಹಳವಿದೆ ರಾಮಯ್ಯ ಬಿಟ್ಟದಷ್ಟಿದೆ. ನಾನು ಕನಸೊಂದನ್ನು ಕಂಡೆ.

ಲಕ್ಷ್ಮಣ—ಕನಸೇ ಅಜ್ಜಿ ?

ರಾಮು—ಏನು ಕನಸದು ಅಜ್ಜಿ ?

ಮಾತಂಗಿನಿ—ಕುಬೇರನ ತಮ್ಮ ....

ರಾಮು—ಕುಬೇರನ ತಮ್ಮ. ಯಾರು ಆ ರಾವಣನೇ ?

ಮಾತಂಗಿನಿ—ಅಹುದು ಆ ರಾವಣನೇ. ಅವನ ಉದ್ಯಾನವನದಲ್ಲಿ ನಿನ್ನ ಸತಿ ಸೀತೆ ಬಂಧನದಲ್ಲಿ ಇರುವುದಾಗಿ ಕಂಡೆ.

ಲಕ್ಷ್ಮಣ—ನನ್ನ ಅತ್ತಿಗೆ ಸೀತಮ್ಮನೇ ?

ಮಾತಂಗಿನಿ—ಅಹುದು ಲಕ್ಷ್ಮಣ. ಸೀತಮ್ಮನನ್ನೇ ಕಂಡೆ. ಯಾರ ಮಡದಿಗೆ ಯಾರೋ ಬಯಸುವುದು ಅಂದೆನಲ್ಲವೇ ಅಂದು ನಾನು.

ರಾಮು—ನಿಜ ಅಜ್ಜಿ.

ಮಾತಂಗಿನಿ—ನಿನ್ನಂತೆಯೇ ಮನೆ ಮಡದಿಯರನ್ನು ಬಿಟ್ಟು ಮಿತ್ರರೊಡನೆ ಕಾಡಿನಲ್ಲಿ ಇರುವ ಸುಗ್ರೀವನನ್ನು ಕುರಿತು ಆಡಿದ ಮಾತು.

ಲಕ್ಷ್ಮಣ—ಈಗ ಮಲಗಿಕೋ ಅಜ್ಜಿ, ಬಹಳ ಆಯಾಸವಾದಂತಿದೆ. ಹೆಚ್ಚು ಮಾತನ್ನಾಡಿ ಬಳಲಬೇಡ.

ರಾಮ—ಅಹುದು ಶಬರಜ್ಜಿ, ವಿಶ್ರಾಂತಿಯನ್ನ ಪಡೆ.

ಮಾತಂಗಿನಿ—ಇನ್ನು ಎಲ್ಲಿಯ ವಿಶ್ರಾಂತಿ ? ಋಷ್ಯಮೂಕ ಪರ್ವತವಿದೆಯಲ್ಲ ?

ಲಕ್ಷ್ಮಣ—ಇದೆ

ಮಾತಂಗಿನಿ—ಆ ಪರ್ವತದ ತಪ್ಪಲಲ್ಲಿ ಮತಂಗ ಮುನಿ ಇರುವ ವನವಿದೆ. ಆ ಕಾಡಿನ ತುದಿಯಲ್ಲಿ ಪಂಪಾ ಸರೋವರವಿದೆ.

ರಾಮ—ಪಂಪಾ ಸರೋವರವೇ ?

ಮಾತಂಗಿನಿ—'ಹೂಂ' ತುಂಗಭದ್ರೆಯ ದಡದ ಹತ್ತಿರದಲ್ಲಿ ಕಿಷ್ಕಿಂದೆ ಎಂಬುದಿದೆ.

ಲಕ್ಷ್ಮಣ—ಕಿಷ್ಕಿಂದೆಯೋ ?

ಮಾತಂಗಿನಿ—ಆ ಕಿಷ್ಕಿಂಧೆಯನ್ನು ಸುಗ್ರೀವನ ಅಣ್ಣ ವಾಲಿ ಆಳುತ್ತಿರುವನು. ವಾಲಿ ಮಾಯಾವಿ ರಾಕ್ಷಸನನ್ನು ಗುಹೆಗೆ ಅಟ್ಟಿಸಿಕೊಂಡುಹೋದ.

ಲಕ್ಷ್ಮಣ—ವಾಲಿ ಮರಳಿ ಬರಲಿಲ್ಲವೆ ?

ಮಾತಂಗಿನಿ—ಬಹಳ ಹೊತ್ತು ಬರಲಿಲ್ಲ.

ಲಕ್ಷ್ಮಣ—ಆಮೇಲೆ ?

ಮಾತಂಗಿನಿ—ವಾಲಿ ಸತ್ತನೆಂದು ಭಾವಿಸಿ ಸುಗ್ರೀವ ...

ಲಕ್ಷ್ಮಣ—ಏನುಮಾಡಿದನಜ್ಜಿ ?

ಮಾತಂಗಿನಿ—ಹಿರಿದೊಂದು ಬಂಡೆಯನ್ನ ಗುಹೆಗೆ ಮುಚ್ಚಿದ. ಅಪರ ಕರ್ಮಗಳನ್ನ ಮಾಡಿದ. ರಾಕ್ಷಸನನ್ನ ಕೊಂದು ವಾಲಿ ಹಿಂದಿರುಗಿದ.

ರಾಮ—ಇನ್ನೇನಿದೆ ? ವಾಲಿ ಸುಗ್ರೀವರ ಸಂಗರ. ಸುಗ್ರೀವನನ್ನು ಓಡಿಸಿ ವಾಲಿ ರಾಜನಾದ ಅಲ್ಲವೇ ಅಜ್ಜಿ ?

ಮಾತಂಗಿನಿ—ನಿಜ ರಾಮ. ರಾಜನಾದ ವಾಲಿ ತಮ್ಮನನ್ನು ಓಡಿಸಿದ. ಆತ ಋಷ್ಯಮೂಕ ಪರ್ವತದ ಗುಹೆ ಒಂದರಲ್ಲಿದ್ದಾನೆ.

ಲಕ್ಷ್ಮಣ—ಮತ್ತೇನು ಅಜ್ಜಿ.

ಮಾತಂಗಿನಿ—ಇನ್ನೇನು ? ರಾಮಚಂದ್ರ ನೀ .... ನೀನು ಸುಗ್ರೀವನ ಸ್ನೇಹ ಪಡೆ. ಸೀತೆಯನ್ನು ಸೇರಲು ಅವನು ಸಹಾಯ ಮಾಡುವನು. ದುಃಖಿಗೆ ಸಹಾಯಕ ದುಃಖಿ. ನಿನ್ನ ಬಯಕೆ ಈಡೇರಲಿ.

ಲಕ್ಷ್ಮಣ—ಅಜ್ಜಿ, ಅಜ್ಜೀ.

ಮಾತಂಗಿನಿ—ರಾ .... ರಾ ... ರಾಮ ಚ .... ಂದ್ರಯ್ಯ. ನಿನ್ನ ಬಯಕೆ ....ಈ .... ಡೇರಲಿ.

ರಾಮ—ಶಬರಿ ಅಜ್ಜಿ, ಅಜ್ಜಿ ...

[ರಾಮ ತನ್ನ ತೊಡೆಯ ಮೇಲೆ ಶಬರಿಯ ತಲೆಯನ್ನು ಇಟ್ಟುಕೊಳ್ಳುತ್ತಾನೆ. ಶಬರಿ ಪ್ರಾಣವನ್ನು ಬಿಡುತ್ತಾಳೆ]

ರಾಮ—ಶಬರಜ್ಜ ... ಕೊನೆಗೆ ಹೊರಟೇ ಹೋದೆಯಾ. ಮಾತಂಗಿನಿ ಅಲ್ಲ ತಾಯಿ ನೀನು ಮಾತಂಗ ತಪಸ್ವಿನಿ ಮಹಾತಪಸ್ವಿನಿ.

[ಲಕ್ಷ್ಮಣ ಎರಡೂ ಕೈ ಜೋಡಿಸುವನು. ರಾಮ ಲಕ್ಷ್ಮಣರಿಬ್ಬರೂ ಕಂಬನಿಯನ್ನು ಮಿಡಿಯುವರು]

[ರಂಗದಲ್ಲಿ ಕತ್ತಲಾಗುವುದು]

ಸಿ. ಜಿ. ವೆಂಕಟೇಶಯ್ಯ

ಬಿ. ಶಾಮಸುಂದರ ಅವರ ಕಥಾಸಾಹಿತ್ಯ : ಒಂದು ಅವಲೋಕನ

ನಮ್ಮ ಕಾಲದ ಅತ್ಯಂತ ಜನಪ್ರಿಯ ಸಾಹಿತ್ಯ ಪ್ರಕಾರವಾಗಿ ಸಣ್ಣಕತೆ ರೂಪುಗೊಂಡಿದೆ. ಸಣ್ಣಕತೆ ಮತ್ತು ಕಾದಂಬರಿಗಳ ನಡುವೆ ಅನೇಕ ಸಾಮ್ಯಗಳಿವೆ. ಕಥೆ, ವಸ್ತು, ಪಾತ್ರಗಳು, ಸಂಭಾಷಣೆ, ಹಿನ್ನೆಲೆ, ನಿರೂಪಣೆಯ ದೃಷ್ಟಿಕೋನ, ಜೀವನ ದೃಷ್ಟಿ ಇತ್ಯಾದಿ ಮೂಲಭೂತ ಅಂಶಗಳು ಎರಡರಲ್ಲೂ ಕಂಡುಬರುತ್ತವೆ. ಕನ್ನಡದಲ್ಲಿ ನವೋದಯ ಕಾಲದ ಎಲ್ಲ ಮಹತ್ವದ ಲೇಖಕರೂ ಸಣ್ಣಕತೆಗಳನ್ನು ಬರೆದಿದ್ದಾರೆ. ಪ್ರಗತಿಶೀಲರಿಗೆ ಸಣ್ಣಕತೆಯೇ ಮುಖ್ಯ ಮಾಧ್ಯಮವಾಯಿತು. ಜೀವನದ ವಿವಿಧ ಮುಖಗಳ ಅನುಭವಗಳು ಮತ್ತು ಮನಸ್ಥಿತಿಗಳು ಬದಲಾವಣೆಯ ಹಂತದಲ್ಲಿ ಹೆಚ್ಚು ವ್ಯಾಪಕವಾಗಿರುವುದೇ ಸಣ್ಣಕತೆ ನಮ್ಮಲ್ಲಿ ಇಷ್ಟು ಕ್ರಿಯಾಶೀಲವಾಗಿರಲು ಕಾರಣವಾಗಿರಬೇಕು. ಈ ಹಿನ್ನೆಲೆಯಲ್ಲಿ ಬಿ. ಶಾಮಸುಂದರ ಅವರ ಕಥಾಸಾಹಿತ್ಯದ ಒಂದು ಅವಲೋಕನವೇ ಈ ಲೇಖನದ ಉದ್ದೇಶ. ಶಾಮಸುಂದರ ಅವರ ಅನೇಕ ಸಣ್ಣಕತೆಗಳಲ್ಲಿ ಹಾಗೂ ಕಾದಂಬರಿಗಳಲ್ಲಿ ವಿಶೇಷವಾಗಿ ಸಮಾಜದ ಬಲಿಪಶುಗಳು, ದುರ್ದೈವಿಗಳು, ನೊಂದವರು, ಅನಾಥರು- ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಬದುಕಿನಲ್ಲಿ ಬರುವ ವ್ಯಕ್ತಿಸಂಬಂಧಗಳ ಬಗ್ಗೆ ಅಪಾರ ಕಾಳಜಿ ಇವರ ಕತೆ–ಕಾದಂಬರಿಗಳಲ್ಲಿ ವ್ಯಕ್ತವಾಗಿದೆ.

ಅವರ ಹಲವಾರು ಕತೆ–ಕಾದಂಬರಿಗಳು ಕೇವಲ ದುರಂತದಲ್ಲಿ ಮುಕ್ತಾಯವಾಗದೆ, ಬದುಕಿನಲ್ಲಿ ಆಶಾಭಾವನೆಯನ್ನೂ, ಲವಲವಿಕೆಯನ್ನೂ ಹುಟ್ಟಿಸುವಂಥಾಗಿವೆ. ೧೯೭೩ ರಿಂದ ೧೯೮೭ರ ವರೆಗೆ ಶಾಮಸುಂದರ ಅವರು ಆರು ಕಥಾಸಂಕಲನಗಳನ್ನೂ, ಮೂರು ಕಾದಂಬರಿಗಳನ್ನೂ ಮತ್ತು ಹಲವು ಐತಿಹಾಸಿಕ ಹಾಗೂ ಸಾಮಾಜಿಕ ನಾಟಕಗಳನ್ನು ರಚಿಸಿದ್ದಾರೆ.

I ಕಥಾಸಂಕಲನಗಳು : ಚಿತಿಥ್ಯ, ಕೊರವ ಮತ್ತು ಕರಿಯನ ನಾಯಿ, ಕೆಂಡ ಸಂಪಿಗೆ, ಒಂದು ಬಣ್ಣದ ಅಂಗಿ, ಬಂದಿ, ಜೇನುಗೂಡು.

II ಕಾದಂಬರಿಗಳು : ದರ್ಶಿ, ಎಲ್ಲಿ ಒಮ್ಮೆ ಕಣ್ಣು ತೆರೆ, ಮತ್ತು ಅಂಚೆಯಿಂದ ಬಂದದ್ದು.

III ನಾಟಕಗಳು : ಅಲ್ಲಾಉದ್ದೀನ್ ಖಿಲ್ಜಿ, ಕುವರಲಕ್ಷ್ಮಿ, ಜಾತಿಗೆ ಜೈ, ಮತ್ತು ಅನಿವಾರ್ಯ.

ಇಷ್ಟೇ ಅಲ್ಲದೆ 'ಕರಿನಾಗರ ನೆರಳು' ಕವನ ಸಂಕಲನ, ಅನೇಕ ಮಕ್ಕಳ ಪುಸ್ತಕಗಳು, 'ರಸ್ತೆಗಳು ಮತ್ತು ಇತರ ಪ್ರಬಂಧಗಳು', ಮುಖಗಳು, ಮತ್ತು ವಿಷಯಾತ್ಮಕ ಪ್ರಬಂಧಗಳು ಇವು ಈ ಲೇಖಕರ ಇನ್ನಿತರ ಪ್ರಕಟಣೆಗಳು. ಸಾಹಿತ್ಯ ಅಕಾಡೆಮಿಯವರು ಹೊರತಂದ 'ಕಥೆಗಳು' 1980. ಎಂಬ ಕೃತಿಯು ಇವರ ಸಂಪಾದಕತ್ವದಲ್ಲಿ ಸಿದ್ಧವಾದದ್ದು.

ಆತಿಥ್ಯ :

ಈ ಕಥಾಸಂಕಲನವು ಒಟ್ಟು 16 ಕಥೆಗಳನ್ನೊಳಗೊಂಡಿದೆ. ನಮ್ಮ ಬುದ್ಧಿ ಮತ್ತು ಅಂತಃಕರಣ ಎರಡನ್ನೂ ಆಕರ್ಷಿಸುವ ಗುಣ ಉತ್ತಮ ಸಣ್ಣಕತೆಗಳ ವೈಶಿಷ್ಟ್ಯ. ಈ ದಿಕ್ಕಿನಲ್ಲಿ ಶಾಮಸುಂದರ ಅವರ 'ಆತಿಥ್ಯ' ಕಥಾಸಂಕಲನದ ಹಲವು ಕಥೆಗಳು ಆ ಉದ್ದೇಶವನ್ನು ಸಮರ್ಥವಾಗಿ ಈಡೇರಿಸುತ್ತವೆ. ಈ ಸಂಕಲನದ ಕಥೆಗಳು ಈಗಾಗಲೇ ಕರ್ನಾಟಕದ ಪ್ರಸಿದ್ಧ ದಿನಪತ್ರಿಕೆಗಳಲ್ಲಿ ಹಾಗೂ ಮಾಸಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಕಥಾಸಂಕಲನ ಶೀರ್ಷಿಕೆಯನ್ನು ಪಡೆದಿರುವ 'ಆತಿಥ್ಯ' ಕತೆಯೇ ನಮ್ಮೆಲ್ಲರ ಮನಸ್ಸನ್ನು ಸೆಳೆಯುತ್ತದೆ. ಡಂಭಾಚಾರದ ಆಧುನಿಕ ಸಂಸ್ಕೃತಿಯ ಗಂಧವಿಲ್ಲದ ನಮ್ಮ ಗ್ರಾಮೀಣ ಜನತೆಗೆ ಭಾರತೀಯ ಸಂಸ್ಕೃತಿಯ ಹಿರಿಮೆಯ ಅರಿವಿದೆ, ಎಂಬುದನ್ನು 'ಆತಿಥ್ಯ' ಕತೆ ಕಟ್ಟಿಕೊಡುತ್ತದೆ. ಈ ಕಥೆಯಲ್ಲಿ ಲೇಖಕರು ಗ್ರಾಮೀಣ ಬದುಕಿನ ಸುಂದರ ಚಿತ್ರಣವನ್ನು ನಮ್ಮ ಮುಂದೆ ಇಡುತ್ತಾರೆ. ಹಳ್ಳಿಯ ಜನತೆಯ ನಿಷ್ಕಳಂಕ, ಮುಗ್ಧ, ನಿರಾಡಂಬರ ಬದುಕಿಗೂ ಸಣ್ಣತನ, ಸ್ವಾರ್ಥ, ಕುಟಿಲತೆ, ಕೃತ್ರಿಮತೆ ತುಂಬಿದ ಪಟ್ಟಣದ ಸೋಗಿನ ಬದುಕಿಗೂ ಇರುವ ಅಂತರವನ್ನು ಕಥೆ ಸಮರ್ಥರೀತಿಯಲ್ಲಿ ಚಿತ್ರಿಸುತ್ತದೆ. ೧೨ ಪುಟಗಳ ಸೀಮಿತ ಅವಕಾಶದಲ್ಲಿ ಈ ಕಥೆ ಮನುಷ್ಯ ಸ್ವಭಾವದ ಸಣ್ಣತನವನ್ನೂ, ತಾತ್ಸಾರಮನೋಭಾವವನ್ನೂ ಬಿಚ್ಚಿ ನಮ್ಮ ಮುಂದಿರಿಸಿದೆ. ಸನ್ನಿವೇಶ ಚಿತ್ರಣ, ಘಟನಾವಳಿಗಳ ಹೊಂದಿಕೆ ಪರಸ್ಪರ ನಿರೂಪಣೆ ಸಹಜವಾಗಿ ಮೂಡಿಬಂದಿದೆ. ಕಥೆಯ ಅಂತ್ಯದಲ್ಲಿ ತನಗೆ ತುಂಬುಹೃದಯದ ಆತಿಥ್ಯ ನೀಡಿದ ರಂಗೇಗೌಡನಿಗೆ ಕಥಾನಾಯಕ ಕೈಮುಗಿದು "ನಿನಗಿಂತ ದೊಡ್ಡವನು ನಾನಲ್ಲ" ಎಂದು ಹೇಳಿ ಬಸ್ಸಿನಲ್ಲಿ ಕುಳಿತಾಗ ಮನುಷ್ಯ ಸ್ವಭಾವದ ಒಂದು ಪ್ರಮುಖ ಎಳೆಯಾದ ಮಾನವೀಯ ಅಂತಃಕರಣ ಪ್ರಕಟಗೊಳ್ಳುತ್ತದೆ. 'ಯಾರಿಗೆ ಯಾರುಂಟು ಪುರಂದರ ವಿಠಲಾ' ಎಂಬ ದಾಸರ ಕೀರ್ತನೆಯನ್ನು ನೆನಪು ಮಾಡಿಕೊಡುತ್ತದೆ, 'ಪ್ರವಾಸ' ಎಂಬ ಕಥೆ. ಈ ಕಥೆ

ಯಲ್ಲಿ ನಾವು, ನಮ್ಮವರು, ಬಂಧುಗಳು, ಇಷ್ಟಮಿತ್ರರು ಎಂದು ಭಾವಿಸಿಕೊಂಡವರು ಸಹಾಯ ಮಾಡಬೇಕಾದ ಪ್ರಸಂಗಗಳಲ್ಲಿ ಪ್ರೀತಿ ಆತ್ಮೀಯತೆಯನ್ನು ವ್ಯಾಪಾರದ ಸರಕುಗಳಂತೆ ಅಳೆದು ತೂಗಿ ಲೆಕ್ಕಚಾರ ಹಾಕುವ ಹೇಯ ಮನೋವೃತ್ತಿಯನ್ನು ಇಲ್ಲಿ ಕಾಣುತ್ತೇವೆ. ಪ್ರವಾಸ ಕಾಲದಲ್ಲಿ ದಂಪತಿಗಳು ವಸತಿ ಅವಕಾಶಕ್ಕಾಗಿ ಪಡುವ ಕಷ್ಟವನ್ನೂ ಆ ಮೂಲಕ ಇಂದು ಮಧ್ಯಮ ವರ್ಗ ಅನುಭವಿಸುತ್ತಿರುವ 'ತ್ರಿಶಂಕು' ಸ್ಥಿತಿಯನ್ನು ಈ ಕಥೆ ಪರಿಚಯಿಸುತ್ತದೆ.

ದೃಷ್ಟಿ :

ಈ ಕಥಾಸಂಕಲನದ ಉತ್ತಮ ಕಥೆಗಳ ಪೈಕಿ ಒಂದು. ಅಲ್ಪ ಆದಾಯದಲ್ಲಿ ಜೀವನನಿರ್ವಹಣೆ ಮಾಡುವ ಮಧ್ಯಮ ವರ್ಗದ ನಗರ ಜೀವನದ ವಾಸ್ತವ ಚಿತ್ರವನ್ನು ಇಲ್ಲಿ ಕಾಣಬಹುದು. ಆದಾಯ ಕಡಿಮೆ ಇದ್ದರೂ ಆಡಂಬರದ ಜೀವನ ಬಯಸುವ ಪತ್ನಿ. ಸ್ವಾಭಿಮಾನವನ್ನು ಕಳೆದುಕೊಳ್ಳಲಿಚ್ಛಿಸದ ಗಂಡ. ಈ ಎರಡೂ ವ್ಯಕ್ತಿಗಳ ದೃಷ್ಟಿಕೋನಕ್ಕೆ, ಜೀವನ ವಿಧಾನಕ್ಕೆ ಇರುವ ಅಂತರವನ್ನು ಕಥೆ ನೈಜವಾಗಿ ನಿರೂಪಿಸುತ್ತದೆ. ನಮ್ಮ ಆದರ್ಶಗಳಿಗೂ, ಬದುಕಿನ ವಾಸ್ತವ ಸಮಸ್ಯೆಗಳಿಗೂ ಘರ್ಷಣೆ ಉಂಟಾದಾಗ ಕೊನೆಯಲ್ಲಿ ಗೆಲ್ಲುವುದು ಅಂತಃಕರಣವೇ ಎಂಬ ಸತ್ಯವನ್ನು ಮನಗಾಣಿಸುತ್ತದೆ ಈ ಕಥೆ.

ಸಾವು ಮತ್ತು ನಾವು :

ಎಂಬ ಕಥೆ ಪರಿಣಾಮಕಾರಿಯಾದುದು. ಸತ್ತವನ ಆಸ್ತಿಗಾಗಿ ಕಚ್ಚಾಡುವ ಮಕ್ಕಳು. ಸೊಸೆ–ಅಳಿಯಂದಿರು. ಇವರ ಸ್ವಭಾವದ ಓರೆಕೋರೆಗಳನ್ನು ಚಿತ್ರಿಸುವಲ್ಲಿ ಭಾಷೆ ಮತ್ತಷ್ಟು ಹರಿತವಾಗಿದ್ದಿದ್ದರೆ ಕಥೆಯ ಒಟ್ಟು ಪರಿಣಾಮ ಇನ್ನೂ ಹೆಚ್ಚಾಗುತ್ತಿತ್ತು. ಆದರೆ 'ಮಾನವನೆಂಬ ಪ್ರಾಣಿ ಎಷ್ಟು ವಿಚಿತ್ರ'? ಎನ್ನುವ ಒಂದೇ ವಾಕ್ಯದಲ್ಲಿ ಕಥೆಯ ಅಂತರಾರ್ಥ ಅಡಗಿದೆ. ಕಥೆ ಸಂಸಾರ ಬಂಧನದ ಇನ್ನೊಂದು ವಿಡಂಬನಾತ್ಮಕ ಒಳಗುಟ್ಟಿನತ್ತ ಬೆರಳು ಮಾಡಿ ತೋರಿಸುತ್ತದೆ. ಮನುಷ್ಯ ಸಾವಿಗೆ ಸ್ಪಂದಿಸುವುದಕ್ಕಿಂತ ಹೆಚ್ಚಾಗಿ ಬದುಕಿಗಾಗಿ ಸ್ಪಂದಿಸುತ್ತಾನೆ ಇದು ಮಾನವ ಸಹಜ ಗುಣ ತಾನೇ?

ಬಂದ್ :

ಎಂಬ ಕಥೆ ಕಾನೂನು ಕಟ್ಟಳೆಗಳ ನಿಷ್ಕ್ರಿಯ ಸ್ಥಿತಿಯನ್ನು ಕುರಿತಾದದ್ದು. ಪಟ್ಟಭದ್ರ ಹಿತಾಸಕ್ತಿಗಳು, ಧನಪಿಶಾಚಿಗಳು ತಮ್ಮ ಸ್ವಾರ್ಥಸಾಧನೆಗಾಗಿ 'ಬಂದ್' ಆಚರಿಸುವ ಮುಖೇಣ ಅಮಾಯಕ ಜನರನ್ನು ಬಲಿಪಶುಗಳನ್ನಾಗಿ ಮಾಡುವ ವಸ್ತುವನ್ನೊಳಗೊಂಡಿದೆ. ರಾಜಕೀಯ ಚುನಾವಣೆಗಳಲ್ಲಿ 'ಬಂದ್'ಗಳಲ್ಲಿ ಲಂಚದ ಮಹಿಮೆಯನ್ನು ಸೂಚ್ಯವಾಗಿ ತಿಳಿಸಿಕೊಡುವಲ್ಲಿ ಕಥೆ ಯಶಸ್ವಿಯಾಗಿದೆ.

ಆಕ್ಟೋಪಸ್ :

ಎಂಬ ಕಥೆ ಪ್ರಚಲಿತ ಸಮಸ್ಯೆಗಳನ್ನು ಪ್ರತಿಬಿಂಬಿಸುತ್ತದೆ. ಜಾತಿ, ಹಣ, ಗುಂಪುಗಾರಿಕೆ, ಪ್ರಭಾವ, ಸುಲಿಗೆ, ವಂಚನೆ, ಆಸೆ–ಅಮಿಷಗಳು, ದಮನಗಳು ಅಷ್ಟಪಾದಗಳ ಆಕ್ಟೋಪಸ್‌ನಂತೆ ವ್ಯಕ್ತಿಯನ್ನು ಬಿಗಿದಿರುವ ಶಕ್ತಿಗಳು. ಇವುಗಳ ಒತ್ತಡಕ್ಕೆ ತತ್ತರಿಸುವ ಅಸಹಾಯಕತೆ, ಬಿರಿದು ಭಗ್ನವಾಗುವ ಯುವಜನತೆಯ ಆಸೆ ಆಕಾಂಕ್ಷೆಗಳನ್ನು ಅರ್ಥಪೂರ್ಣವಾಗಿ ನಿರೂಪಿಸಿದ್ದಾರೆ. 'ಓಟಿನ ಬೇಟೆ' ಕಥೆಯು ರಾಜಕೀಯ ಹಾಗೂ ಚುನಾವಣೆಯ ಸಂದರ್ಭದ ಅವ್ಯವಹಾರಗಳನ್ನು ಪರಿಚಯಿಸುತ್ತದೆ. ಇಂದು ಚುನಾವಣೆಯಲ್ಲಿ ಹೆಂಡಕ್ಕೆ, ಹಣಕ್ಕೆ, ಹೆಣ್ಣಿಗೆ ಇರುವಷ್ಟು ಪ್ರಾಮುಖ್ಯ ನೀತಿ, ತತ್ವ ಹಾಗೂ ಪ್ರಾಮಾಣಿಕತೆಗಳಿಗಿಲ್ಲ ಎಂಬ ಕಟು ಸತ್ಯವನ್ನು ಈ ಕಥೆಯಲ್ಲಿ ಕಾಣಬಹುದು.

ಒಂದು ಬಣ್ಣದ ಅಂಗಿ :

ಚಲನಚಿತ್ರವಾಗುತ್ತಿರುವ ಒಂದು ಸುಂದರ ಕಥೆ ಬೀದಿ ಮಕ್ಕಳ ದಾರುಣ ಬದುಕೇ ಈ ಕಥೆಯ ವಸ್ತು. ಗಿಡ್ಡ, ಸಾಬು, ಬೋರ, ಮುನಿಸ್ವಾಮಿ, ಚೆನ್ನಿ, ಪುಟ್ಟ ಇವರೆಲ್ಲಾ ಬೀದಿಮಕ್ಕಳು. ಕಸದತೊಟ್ಟಿಯಲ್ಲಿ ಎಸೆದ ಎಂಜಲೆಲೆಗಳಲ್ಲಿ ಇರುವ ತಿಂಡಿತಿನಿಸುಗಳೇ ಇವರ ಹೊಟ್ಟೆತುಂಬಿಸುವ ಮೃಷ್ಟಾನ್ನಗಳು. ಹರಿದ ಬಟ್ಟೆಗಳೇ ಇವರ ಮಾನ ಮುಚ್ಚುವ ಸಾಧನಗಳು. ಬಾಲ್ಯ ಸಹಜ ಆಸೆ–ಆಕಾಂಕ್ಷೆಗಳು ಬಡವ–ಶ್ರೀಮಂತ ಎಂಬ ಬೇಧಭಾವಗಳನ್ನು ಮೆಟ್ಟಿ ನಿಲ್ಲುತ್ತವೆ. ಶ್ರೀಮಂತ ಹುಡುಗನೊಬ್ಬ ತೊಟ್ಟ ಬಣ್ಣದ ಅಂಗಿಯಿಂದ ಆಕರ್ಷಿತನಾಗುತ್ತಾನೆ ಗಿಡ್ಡ. ನನಗೂ ನನ್ನ ಅಪ್ಪ ಅಮ್ಮ ಇದ್ದಿದ್ದರೆ? ಎಂಬ ಪ್ರಶ್ನೆಯೂ ಅವನ ಮುಂದೆ ನಿಲ್ಲುತ್ತದೆ. ದುರಾದೃಷ್ಟವಶಾತ್ ಬಣ್ಣದ ಅಂಗಿಯ ಗುಂಗಿನಲ್ಲಿಯೇ ಅಪಘಾತಕ್ಕೆ ಈಡಾಗಿ ಸಾಯುವ ಗಿಡ್ಡ. ಇಂದು ನಮ್ಮ ದೇಶದ ಅಸಂಖ್ಯಾತ ಅನಾಥಮಕ್ಕಳ ಕೊರಗಿಗೆ ದನಿಯಾಗಿದ್ದಾನೆ. ಹೀಗೆ ಕಥೆಯ ಗಮನ ಒಂದು ಪ್ರಚಲಿತ ಸಮಸ್ಯೆಯ ಕಡೆಗೆ ಹರಿದಿದೆ. ಹೊಟ್ಟೆಬಿರಿಯ ತಿಂದು ಅಜೀರ್ಣದಿಂದ ನರಳುವ ವರ್ಗ ಒಂದುಕಡೆ, ಹೊಟ್ಟೆಗಿಲ್ಲದೆ ಹಸಿವನ್ನು ಹಿಂಗಿಸಿಕೊಳ್ಳಲು ಪರದಾಡುವ ವರ್ಗ ಮತ್ತೊಂದು ಕಡೆ. ಸಾಮಾಜಿಕ ವೈರುಧ್ಯಗಳನ್ನು ಶಕ್ತವಾಗಿ ಚಿತ್ರಿಸುತ್ತದೆ ಈ ಕಥೆ

ನಂಬಿಕೆ :

ಈ ಕಥೆ ವ್ಯಕ್ತಿ ವ್ಯಕ್ತಿಗಳ ಸಂಬಂಧವನ್ನು ಕುರಿತದ್ದು. ದೈನಂದಿನ ಬದುಕಿನಲ್ಲಿ ವ್ಯಕ್ತಿಗಳ ಪರಸ್ಪರ ಸಂಬಂಧಕ್ಕೆ ಪೂರಕವಾಗುವ ಅಂಶಗಳೆಂದರೆ ಪ್ರೀತಿ, ವಿಶ್ವಾಸ ಹಾಗೂ ನಂಬಿಕೆಗಳೇ ಹೊರತು ಕಾಗದಪತ್ರಗಳಲ್ಲ. 'ತಾನುಕಳ್ಳ ಪರರ ನಂಬ' ಎಂಬ ಗಾದೆಯಂತೆ ಕಿಟ್ಟಪ್ಪ ತನ್ನ ಸಂಬಂಧಿಯಾದ ರಾಜಣ್ಣನ ಮಗಳ

ಮದುವೆಗೆ ಹಣಸಹಾಯ ಮಾಡಲು ಅಪನಂಬಿಕೆ ವ್ಯಕ್ತಪಡಿಸುತ್ತಾನೆ. ಒಮ್ಮೆ ಕಿಟ್ಟಪ್ಪ ತನಗರಿವಿಲ್ಲದೆ ತಾನೇ ಹೋಗಿ ಮಾರವಾಡಿ ಚಂಪಾಲಾಲ್‌ನ ಇಕ್ಕಳಕ್ಕೆ ಸಿಕ್ಕಿಕೊಳ್ಳುತ್ತಾನೆ. ತನ್ನ ಕೈಗೆ ಗಂಟು ಸಿಕ್ಕಿದಮೇಲೆ ಚಂಪಾಲಾಲ್ ಒಂದು ರಾತ್ರಿ ಪರಾರಿಯಾಗುತ್ತಾನೆ. ಆಗ ಕಿಟ್ಟಪ್ಪನಿಗೆ ತಾನು ಮಾಡಿದ ತಪ್ಪಿನ ಅರಿವಾಗುತ್ತದೆ. ದಿನನಿತ್ಯದ ಬದುಕಿನಲ್ಲಿ ಜರುಗುವ ಒಂದು ಸಾಮಾನ್ಯ ಘಟನೆಯೂ ಅಪಾರ ಪರಿಣಾಮವನ್ನುಂಟುಮಾಡುವಂತೆ ಚಿತ್ರಿಸುವುದು ಈ ಕಥೆಗಾರರ ವೈಶಿಷ್ಟ್ಯ. 'ಚಂಪಲಾಲ್ ಪ್ರಾಣಿಹಿಂಸೆ ಮಾಡುತ್ತಿರಲಿಲ್ಲ. ಆದರೆ ಮನುಷ್ಯರ ಹಿಂಸೆ ಸುಲಿಗೆ ಅವನ ವ್ಯಾಪಾರದಿಂದ ಆಗುತ್ತಿತ್ತು' ಎಂದು ಮಾರ್ಮಿಕವಾಗಿ ಹೇಳಿದ್ದಾರೆ.

"ದೂರದಬೆಟ್ಟ ನುಣ್ಣಗೆ" ಎಂಬ ಗಾದೆ ಮಾತನ್ನು ನೆನಪಿಗೆ ತರುವ ಕಥೆ "ಫಾರಿನ್ ರಿಟರ್ನ್ಡ್". ವಿದೇಶದಲ್ಲಿರುವವರ ಬಗ್ಗೆ, ವಿದೇಶದಿಂದ ವಾಪಸ್ಸು ಬಂದವರ ಬಗ್ಗೆ ಹಾಗೂ ವಿದೇಶಿ ವಸ್ತುಗಳ ಬಗ್ಗೆ ಅಪಾರವಾದ ಆಸಕ್ತಿ ಹಾಗೂ ವ್ಯಾಮೋಹಗಳು ಜನಸಾಮಾನ್ಯರಲ್ಲಿ ಕಂಡುಬರುತ್ತದೆ. ಈ ಕಥೆಯ ಕೇಂದ್ರ ಪಾತ್ರ ಸುಬ್ರಾಯ, ಕಡುಬಡವ ಹಾಗೂ ನಿರುದ್ಯೋಗಿ. ಜಂಜಾಟದ ಬದುಕಿನಿಂದ ಬೇಸತ್ತ ಈತ ಆತ್ಮಹತ್ಯೆಮಾಡಿಕೊಳ್ಳಲು ಸಮುದ್ರಕ್ಕೆ ಹಾರುತ್ತಾನೆ. ಆದರೆ ಅದು ಅವನ ಪಾಲಿಗೆ ಸಾವಾಗದೆ, ಬದುಕಾಗಿ ಪರಿಣಮಿಸುತ್ತದೆ. ಇಲ್ಲಿಂದ ಮುಂದೆ ಕಥೆ ಹಲವು ಹಂತಗಳಲ್ಲಿ ಬೆಳವಣಿಗೆ ಕಂಡುಕೊಳ್ಳುತ್ತದೆ. ಸುಬ್ರಾಯ ವಿದೇಶಕ್ಕೂ ಹೋಗಿ ವಾಪಸ್ಸಾಗುತ್ತಾನೆ. ಅದುವರೆಗೆ ಎಲ್ಲರಿಂದ ತಿರಸ್ಕಾರಕ್ಕೆ ಒಳಗಾಗಿದ್ದ ಸುಬ್ರಾಯನನ್ನು ಆಪ್ತರು, ನಂಟರು, ಇಷ್ಟರು ಮುತ್ತುತ್ತಾರೆ. ಈಗ ಆತ ಎಲ್ಲರಿಗೂ ಬೇಕಾದ ವ್ಯಕ್ತಿ. ಹೀಗೆ ಸಮಾಜದಲ್ಲಿ ತುಂಬಿರುವ ಸ್ವಾರ್ಥಸಾಧಕತನವನ್ನು ವಿಡಂಬಿಸಿದ್ದಾರೆ, ಲೇಖಕರು. 'ಹೆತ್ತತಾಯಿ, ಹುಟ್ಟಿದನಾಡು ಸ್ವರ್ಗಕ್ಕಿಂತ ಮಿಗಿಲು ಎಂಬ ಆಶಯಕ್ಕೂ ಈ ಕಥೆ ಹೆಚ್ಚು ಒತ್ತುಕೊಟ್ಟಿದೆ.

ಮರೆತವರು :

ಇಂದಿನ ರಾಜಕೀಯ ಪುಡಾರಿಗಳು ಮಾಡುತ್ತಿರುವ ದಬ್ಬಾಳಿಕೆ, ಅಧಿಕಾರ ದುರುಪಯೋಗ ಇವೇ ಮೊದಲಾದ ಅಂಶಗಳು ಬ್ರಿಟೀಷರ ಕಾಲಕ್ಕಿಂತಲೂ ಹೆಚ್ಚಾಗಿವೆ. ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿ ತಮ್ಮ ಸರ್ವಸ್ವವನ್ನೂ ಕಳೆದುಕೊಂಡವರು ಇಂದು ಬೀದಿ ಪಾಲಾಗಿದ್ದಾರೆ. ಅವರಿಗೆ ಒಪ್ಪತ್ತಿನ ಕೂಳಿಗೂ ಗತಿಯಿಲ್ಲ. ಆದರೆ ಸ್ವಾತಂತ್ರ್ಯ ಬಂದ ಬಳಿಕ ದೇಶದ ಗದ್ದುಗೆ ಏರಿದ ಮಹನೀಯರು ತಮ್ಮ ದರ್ಬಾರು ಚಲಾಯಿಸಲು ಪ್ರಾರಂಭಿಸಿದರು. ಇದು ಅಪರಾಧವಲ್ಲವೇ ? ಎಂಬ ಪ್ರಶ್ನೆ ಸಹಜವಾಗಿ ಮೂಡುತ್ತದೆ. ಸ್ವಾತಂತ್ರ್ಯ ಭಾರತದ ಜನ ಬಯಸಿದ್ದು ನೆಮ್ಮದಿ. ಆದರೆ ಇಂದು ಶಾಂತಿಯ ಬದಲು ಅಶಾಂತಿಯ ವಾತಾವರಣವೇ ಎಲ್ಲೆಲ್ಲೂ ತುಂಬಿದೆ. ಹೀಗೆ ಸ್ವಾತಂತ್ರ್ಯೋತ್ತರ ಭಾರತದ ಅವಸ್ಥೆಯನ್ನು ಪ್ರತಿಬಿಂಬಿಸುತ್ತದೆ ಈ ಕಥೆ.

ಡೈರಿ :

ಈ ಕಥೆಯಲ್ಲಿ ಹೆಣ್ಣುಗಂಡಿನ ನಡುವೆ ಇರುವ ವಿಶಾಲ ಮನೋಭಾವದ ಸಂಬಂಧವನ್ನು ಹೇಳಿದ್ದಾರೆ. ಗಂಡು ಹೆಣ್ಣು ಒಟ್ಟಿಗೆ ಓಡಾಡಲು ಪ್ರಾರಂಭಿಸಿದರೆ ಸಹಜವಾಗಿ ಅವರು ಸಮಾಜದ ಕಾಕದೃಷ್ಟಿಗೆ ಒಳಗಾಗುತ್ತಾರೆ. ಆದರೆ 'ಡೈರಿ' ಕಥೆಯು ಶಂಕರ ಮತ್ತು ವಿಜಯರ ಸಂಬಂಧ ಸಮಾಜದ ಜನರ ಕಲ್ಪನೆಗೆ ವಿರುದ್ಧವಾಗಿತ್ತು. ಹೆಣ್ಣು ಗಂಡಿನ ಸಂಬಂಧ ಕೇವಲ ಒಮ್ಮುಖವಲ್ಲ, ದೈಹಿಕ ಸಂಬಂಧದ ಆಚೆಗೂ ಹೆಣ್ಣು ಗಂಡಿನ ಸಂಬಂಧವಿದೆ ಎಂಬ ಸತ್ಯವನ್ನು ಶಕ್ತವಾಗಿ ತಿಳಿಸಿಕೊಡುತ್ತದೆ ಈ ಕಥೆ. ಮನುಷ್ಯ ಸ್ವಭಾವದ ಓರೆಕೋರೆಗಳನ್ನು ನಿರುದ್ವಿಗ್ನವಾಗಿ ಭಾವವೇಷ ರಹಿತವಾಗಿ ಚಿತ್ರಿಸಿರುವುದು ಇಲ್ಲಿನ ಕಥೆಗಳ ಮುಖ್ಯ ಗುಣ. ಪ್ರತಿಮೆ ಸಂಕೇತಗಳಿಲ್ಲದೆಯೇ ವಿಚಾರಗಳನ್ನು ಬದುಕಿನ ಮೌಲ್ಯಗಳನ್ನು ನೇರವಾಗಿ ಸರಳವಾಗಿ ಮನಮುಟ್ಟುವಂತೆ ನಿರೂಪಿಸಲು ಸಾಧ್ಯ ಎನ್ನುವುದಕ್ಕೆ ಇಲ್ಲಿಯ ಕಥೆಗಳು ನಿದರ್ಶನವಾಗಿವೆ.

ಬಂದಿ :

ಈ ಕಥಾಸಂಕಲನದಲ್ಲಿ ಹನ್ನೆರಡು ಕಥೆಗಳಿವೆ. ಮನುಷ್ಯನ ದೌರ್ಬಲ್ಯಗಳು ಮತ್ತು ಸೋಲುವಿಕೆ ಈ ಎಲ್ಲಾ ಕತೆಗಳಿಗೂ ಸಾಮಾನ್ಯವಾದ ವಸ್ತು. ಈ ಕಥಾಸಂಕಲನದ ಶೀರ್ಷಿಕೆಯನ್ನು ಹೊಂದಿರುವ 'ಬಂದಿ' ಕಥೆ ಪ್ರಜಾಮತ ವಾರಪತ್ರಿಕೆ ಏರ್ಪಡಿಸಿದ್ದ ಕಥಾಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದುದೇ ಅಲ್ಲದೇ, ಚಲನಚಿತ್ರವಾಗಿದ್ದು ಸಧ್ಯದಲ್ಲಿಯೇ ಬಿಡುಗಡೆಯಾಗುವುದರಲ್ಲಿದೆ. ಅನಿರೀಕ್ಷಿತವಾಗಿ ನಡೆದ ಕೊಲೆ, ಆ ಕೊಲೆಮಾಡಿದ ವ್ಯಕ್ತಿಯ ಆದರ್ಶ ಗುಣಗಳು, ಆತನನ್ನು ಸೆರೆಯಿಂದ ತಪ್ಪಿಸಿದ ಸ್ನೇಹಿತ, ತಾನೇ ಕೈದಿಯಾಗಿ ಕೊಲೆ ತಾನು ಮಾಡಿದುದಾಗಿ ಜೈಲುಶಿಕ್ಷೆ ಅನುಭವಿಸುವುದೂ, ತನ್ನ ಆತ್ಮಸಾಕ್ಷಿಗೆ ಮಣಿದ ಕಥಾನಾಯಕ ಸ್ನೇಹಿತನನ್ನು ಬಂಧನದಿಂದ ಬಿಡಿಸಲು ನಿಜ ಹೇಳಿದರೂ ನಂಬದೇ ಹೋಗುವ ಜನ ಮತ್ತು ಸಾಕ್ಷಿ ಆಧಾರದಿಂದ ನ್ಯಾಯ ತೀರ್ಮಾನ ನೀಡುವ ನ್ಯಾಯಾಲಯ ಹೀಗೆ ಕಥೆಯಲ್ಲಿ ಬರುವ ಘಟನೆಗಳು, ಸನ್ನಿವೇಶಗಳು ಕುತೂಹಲವನ್ನು ಹುಟ್ಟಿಸುತ್ತಾ ಹೋಗುತ್ತವೆ. ಬಂದಿಯಾಗಿ 'ಬಂದಿಖಾನೆ' ಯೊಳಗಿದ್ದ ಗೆಳೆಯ ಆನಂದದಿಂದಲೇ ಇರುವುದು. ಬಂಧನದಿಂದ ಹೊರಗಿದ್ದರೂ ಕಥಾನಾಯಕ ಪಾಪ ಪ್ರಜ್ಞೆಯಿಂದ ತನ್ನ ಆತ್ಮವಿಮರ್ಶೆ ಮಾಡಿಕೊಳ್ಳುವಲ್ಲಿ, ತನ್ನ ಪಾಪಕ್ಕೆ ಪ್ರಾಯಶ್ಚಿತ್ತಮಾಡಿಕೊಳ್ಳಲು ಬಂದಿಯಂತೆಯೇ ಜೀವನಸಾಗಿಸುವುದು, ಇವೆಲ್ಲಾ ಓದುಗನ ಆಸಕ್ತಿಯನ್ನು ಕೆರಳಿಸುತ್ತವೆ. ಇದೇ ಸಂಕಲನದ "ಸಿಡಿಲು" ಕಥೆಯ ನಾಯಕ ಲಂಪಟನಾದರೂ ಕುರುಡಿ ಹೆಂಡತಿ ಚಿನ್ನವ್ವನಿಗೆ ಎರಡು ಬಗೆಯುವುದಿಲ್ಲ. ಆದರೆ ನಂಜವ್ವನನ್ನು ಕೆಡಿಸಿ ಚಿನ್ನದೊಡನೆ ಪರಾರಿಯಾದ ಜೊತೆಗಾರ ಆಚಾರಿಯ ಪಾಪಕ್ಕೆ ಆತ ಹೊಣೆಗಾರನಾಗಬೇಕಾಗುತ್ತದೆ.

ಆ ಹೊಣೆಗಾರಿಗೆ ಅವನ ಸ್ವಇಚ್ಛೆಯಿಂದ ಬರಲಿಲ್ಲವಾದ್ದರಿಂದ ಅದಕ್ಕೆ ಯಾವುದೇ ರೀತಿಯ ನೈತಿಕ ಹೊಣೆಗಾರಿಕೆಯೂ ಇಲ್ಲ ಎನಿಸುತ್ತದೆ. 'ಬಂದಿ ಮತ್ತು ಸಿಡಿಲು' ಈ ಕಥೆಗಳಲ್ಲಿ ಅಪರಾಧ ಮತ್ತು ಅದರ ಹೊಣೆಗಾರಿಕೆಯ ಸೂಕ್ಷ್ಮ ಸಂಬಂಧವನ್ನು ಕಾಣುತ್ತೇವೆ. 'ಬಂದಿ' ಅಪರಾಧಿ ಮನೋಭಾವದ ಮಾನಸಿಕ ತೊಳಲಾಟವನ್ನು ದಟ್ಟವಾಗಿ ಸೂಕ್ಷ್ಮವಾಗಿ ಹಿಡಿದಿಡುವ ಉತ್ತಮ ಕಥೆ.

'ಬೋಳು'

ಸಂಪ್ರದಾಯವಾದಿಗಳ ಕಪಿಮುಷ್ಟಿಯಲ್ಲಿ ಈ ಕಥೆಯು ನಾಯಕನಾದ ಗುರುರಾಜ ಸಿಕ್ಕಿಹಾಕಿಕೊಳ್ಳುತ್ತಾನೆ. ಮಠಾಧಿಪತಿಯಾಗುವುದು ತನಗೆ ಬೇಕಿಲ್ಲವಾದರೂ ಗಣೇಶಭಟ್ಟನಂಥವರ ತಂತ್ರಕ್ಕೆ ಒಳಗಾಗಿ ಮಣಿಯುತ್ತಾನೆ. ಹೀಗೆ ಕಥೆ ಸಂಪ್ರದಾಯ ಹಾಗೂ ಆಧುನಿಕ ವಿಚಾರಗಳ ಘರ್ಷಣೆಗೆ ಬಲವಾದ ಸಾಮಗ್ರಿಯನ್ನು ಒದಗಿಸುತ್ತದೆ.

'ಶುದ್ಧಿ'

ಕಥೆ ಸಮಾಜದಲ್ಲಿರುವ ದೌರ್ಬಲ್ಯಗಳನ್ನು ನಿವಾರಣೆಮಾಡುವ ನಿಟ್ಟಿನಲ್ಲಿ ರೂಪಿತವಾದದ್ದು. ರಮೇಶ ತನ್ನ ಶುದ್ಧಿಕಾರ್ಯವನ್ನು ಪ್ರಾರಂಭಿಸಲು ತನ್ನ ಕುಲದವರ ವಿರುದ್ಧ ಬಂಡೇಳುತ್ತಾನೆ. ಆದರೆ ಈ ಬಂಡು ಕಥೆಗಾರರಿಗೆ ಇಷ್ಟವಾದಂತೆ ಕಂಡುಬಂದಿಲ್ಲ. ಆದ್ದರಿಂದಲೇ ಅದು ದುರಂತದಲ್ಲಿ ಮುಕ್ತಾಯವಾಗುತ್ತದೆ. 'ಹಾವು ಮತ್ತು ಹುತ್ತ' ಕಥೆ ಚಲನಚಿತ್ರವಾಗಿದೆ. ಪ್ರಜಾಮತ ವಾರಪತ್ರಿಕೆಯ ಕಥಾಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದಿದೆ. ಹಾವುಗಳು ಕೇವಲ ಹುತ್ತದಲ್ಲಿ ಮಾತ್ರವಲ್ಲ! ತನ್ನ ಸುತ್ತಮುತ್ತಲಿನ ಪರಿಸರವನ್ನೇ ಆವರಿಸಿವೆ ಎನ್ನುವುದು ಈ ಕಥೆಯ ತಿರುಳು. ಈ ಕಥೆಯ ಕೇಂದ್ರಪಾತ್ರವಾದ 'ಕಾಳ' ಮನುಷ್ಯರಲ್ಲಿಯೇ ಹಾವುಗಳನ್ನು ಕಂಡವನು, ವಿಶ್ವಾಸ ಕಳೆದುಕೊಂಡವನು. ಇಂಥಹ ಮಾನಸಿಕ ಸ್ಥಿತಿಯಲ್ಲಿಯೂ ರಾಯರೊಬ್ಬರಲ್ಲಿ ಮಾತ್ರ ಆತ ವಿಶ್ವಾಸವಿಡುತ್ತಾನೆ. ಆದರೆ ಅದೇ ರಾಯರು ಕಾಳನ ಹೆಂಡತಿ ಗಂಗಿಯೊಡನೆ ದೈಹಿಕ ಸಂಬಂಧವನ್ನು ಬೆಳೆಸಿ ಅವನ ನಂಬಿಕೆಯನ್ನು ತಲೆಕೆಳಗುಮಾಡುತ್ತಾರೆ. ಇಂದು ವ್ಯಕ್ತಿವ್ಯಕ್ತಿಗಳ ಸಂಬಂಧ ಶಿಥಿಲವಾಗುತ್ತಿರುವ ದುರಂತವನ್ನು ಈ ಕಥೆ ಅನಾವರಣಗೊಳಿಸುತ್ತದೆ.

ಪ್ರತಿಷ್ಠೆ :

ಕಥೆ ಜಾತಿಸಮಸ್ಯೆಯನ್ನು ಕುರಿತದ್ದು. ಲಲಿತೆ ಮತ್ತು ಭೀಮ ಜಾತಿ ವ್ಯವಸ್ಥೆಯ ವಿರುದ್ಧ ಬಂಡೇಳುತ್ತಾರೆ. ಸಂಪ್ರದಾಯವಾದಿಗಳಿಗೆ ಸವಾಲು ಹಾಕುತ್ತಿದ್ದಾರೋ ಎನ್ನುವ ಧೋರಣೆಯಲ್ಲಿ ಲಲಿತೆ ಮತ್ತು ಭೀಮ ಇಬ್ಬರೂ ಲೈಂಗಿಕಸಂಬಂಧ ಬೆಳೆಸುತ್ತಾರೆ. ತಾವು ಬದುಕುತ್ತಿದ್ದ ಜಡ್ಡುಗಟ್ಟಿದ ಸಮಾಜ

ವನ್ನು ತಮ್ಮ ಕ್ರಾಂತಿಯ ಮೂಲಕ ಎಚ್ಚರಿಸಲು ಹೆಣಗಾಡುತ್ತಾರೆ. ಆದರೆ ಇವರ ಕ್ರಾಂತಿ ಸಫಲವಾಗದೆ ಅವರಿಬ್ಬರ ಸಾವಿನಲ್ಲಿಯೇ ಪರ್ಯಾವಸಾನಗೊಳ್ಳುತ್ತದೆ. ಹೀಗೇಕೆ ಎಂಬ ಪ್ರಶ್ನೆ ಓದುಗರನ್ನು ಕಾಡಿಸುತ್ತದೆ. ಕ್ರಾಂತಿಗೆ, ಪರಿವರ್ತನೆಗೆ ಸಾವೇ ಪರಿಹಾರವೆ ? ಇದನ್ನು ಬಿಟ್ಟು ಬೇರೆಯ ಮಾರ್ಗಗಳೇ ಇಲ್ಲವೆ ? ಎನಿಸುತ್ತದೆ. ಈ ಎಲ್ಲ ಕಥೆಗಳ ಮುಖ್ಯ ಉದ್ದೇಶ ಮನುಷ್ಯ ಸ್ವಭಾವದಲ್ಲಿಯ ದೌರ್ಬಲ್ಯಗಳನ್ನು ಎತ್ತಿ ತೋರಿಸುವುದೇ ಆಗಿದೆ

ಮೇಲೆ ಹೇಳಿದ ಕಥೆಗಳಿಗಿಂತ ವಿಭಿನ್ನವಾದ ವಸ್ತುವನ್ನೊಳಗೊಂಡಿದೆ 'ಸೇಡು' ಎಂಬ ಕಥೆ. ಲೈಂಗಿಕ ಅಸೂಯೆ ಅದರಿಂದ ಹುಟ್ಟಿಕೊಳ್ಳುವ ಕ್ರೌರ್ಯ, ಪ್ರತೀಕಾರದ ಭಾವನೆಗಳು ಈ ಕಥೆಗೆ ವಸ್ತುವನ್ನೊದಗಿಸಿವೆ. ವಿಜಯ ಮತ್ತು ಪ್ರಕಾಶರ ಸಂಬಂಧವನ್ನು ಸಹಿಸದ ಜಗದೀಶ ಸೇಡಿನ ಮನೋಭಾವದಿಂದ ವಿಜಯ ಳನ್ನು ಹಿಂಸಿಸುವ ಕ್ರಿಯೆ ವಾಸ್ತವ ರೀತಿಯಲ್ಲಿ ಚಿತ್ರಿತವಾಗಿದೆ. ಲೈಂಗಿಕತೆಯ ವಿವಿಧ ಮುಖಗಳು ಅವರ ಉಳಿದ ಕಥೆಗಳಲ್ಲಿಯೂ ಕಂಡುಬರುತ್ತದೆ. ಖಚಿತವಾದ ಸಾಮಾಜಿಕ ಸಂದರ್ಭ, ಮಾನವ ದೌರ್ಬಲ್ಯಗಳ ಅರಿವು, ಮಾನಸಿಕ ವಿಶ್ಲೇಷಣೆಗೆ ಬೇಕಾದ ಭಾಷೆ ಇವು ಈ ಕಥೆಯ ಒಳ್ಳೆಯ ಗುಣಗಳು. ಆದರೆ ಅನವಶ್ಯಕವಾದ ವಿವರಗಳು, ಸಡಿಲಾದ ಬಂಧ ಆಗಾಗ ತಲೆದೋರುವ ನೈತಿಕ ಅನಿಶ್ಚತತೆ ಇಂಥ ದೋಷಗಳು ಅಲ್ಲಲ್ಲಿ ಕಂಡುಬಂದರೂ ಇವು ಕಥೆಯ ಒಟ್ಟು ಬಂಧಕ್ಕೆ ಬಾಧಕಗಳಾಗಿಲ್ಲ.

ಜೇನುಗೂಡು :

ಇದು ಉತ್ತಮ ಕಥೆಗಳ ಸಂಕಲನ. ' ಜೇನುಗೂಡು ' ಕಥೆ ಮಯೂರದಲ್ಲಿ ತಿಂಗಳಕಥೆಯಾಗಿ ಪ್ರಕಟವಾಗಿದ್ದು ಅಪಾರ ಜನಪ್ರಿಯತೆಗಳಿಸಿದೆ. ನಿಸ್ವಾರ್ಥ ಸಾಹಿತ್ಯ ಸೇವಕರು ಸೇರಿ ಸ್ಥಾಪಿಸುವ ಸಾಹಿತ್ಯ ಸಂಘ ಹಲವು ನಿಟ್ಟಿನಲ್ಲಿ ತನ್ನ ಕಾರ್ಯ ವ್ಯಾಪ್ತಿಯನ್ನು ವಿಸ್ತಾರಗೊಳಿಸಿಕೊಳ್ಳುತ್ತದೆ. ಈ ಸಾಹಿತ್ಯ ಸಂಘದ ಕಾರ್ಯ ವೈಖರಿಯಿಂದ ಅದಕ್ಕೆ ಹೆಚ್ಚು ಪ್ರಸಿದ್ಧಿ ಸಿಕ್ಕಿ ಆರ್ಥಿಕವಾಗಿಯೂ ಅದು ಸಬಲವಾಗು ತ್ತದೆ. ಈ ಬೆಳವಣಿಗೆ ಹಲವು ಸ್ವಾರ್ಥಿಗಳ ಕಣ್ಣು ಕುಕ್ಕುತ್ತದೆ. ಸಾಮಾನ್ಯವಾಗಿ ಯಾವುದೇ ಒಂದು ಸಂಸ್ಥೆಯನ್ನು ಕಟ್ಟುವ ವ್ಯಕ್ತಿಗಳಿಗಿಂತ ಅದನ್ನು ಹಾಳಾಗಿಸುವ ವ್ಯಕ್ತಿಗಳೇ ಇಂದು ಹೆಚ್ಚು. ಆ ಸಾಹಿತ್ಯ ಸಂಘದ ಬೆಳವಣಿಗೆಯಲ್ಲಿ ತಮ್ಮ ಬೇಳೆ ಬೇಯಿಸಿಕೊಳ್ಳುವ, ಅಲ್ಲಿರುವುದನ್ನು ಲಪಟಾಯಿಸಿ ತಿನ್ನುವ ಸ್ವಾರ್ಥಸಾಧಕರೇ ಸೇರಿ ಆ ಸಂಘವನ್ನು ಹಾಳು ಮಾಡುತ್ತಾರೆ. ಗೆದ್ದಲು ಹುತ್ತವನ್ನು ಕಟ್ಟುತ್ತದೆ. ಹಾವು ಬಂದು ಅಲ್ಲಿ ಸೇರಿಕೊಳ್ಳುತ್ತದೆ, ಎಂಬಂತೆ ಆಗುತ್ತದೆ.

ಕ್ರಾಂತಿ ಬರಿಯ ಭ್ರಾಂತಿ :

ಕಥೆಯು ವಿವಿಧ ವೇದಿಕೆಗಳಿಂದ ಕ್ರಾಂತಿಯ ಬಗ್ಗೆ ಉದ್ದುದ ಭಾಷಣ ಮಾಡುವವರ ಸ್ವಾರ್ಥ ಹಾಗೂ ಸಮಯ ಸಾಧಕತನವನ್ನು ತೋರಿಸಿಕೊಡುತ್ತದೆ.

ಸ್ವಾರ್ಥಸಾಧನೆಗೆ ಈ 'ಕ್ರಾಂತಿ' ಒಂದು ಮುಖವಾಡ ಅಷ್ಟೇ ಎಂಬುದನ್ನು ಕಥೆಗಾರರು ಸಮರ್ಥವಾಗಿ ಹೇಳಿದ್ದಾರೆ.

ಬದುಕುವ ಮಾರ್ಗ ಮತ್ತು ನಿರೀಕ್ಷೆ:

ಈ ಎರಡು ಕಥೆಗಳೂ ಶ್ರೀಮಂತಿಕೆಯ ಅಟ್ಟಹಾಸವನ್ನು ಚಿತ್ರಿಸುತ್ತವೆ. 'ಬದುಕುವ ಮಾರ್ಗ' ಎಂಬ ಕಥೆಯು ಖಾದಿಧಾರಿಗಳೆಲ್ಲ, ಗಾಂಧಿವಾದಿಗಳಲ್ಲ ಎಂಬುದನ್ನು ಸಮರ್ಥಿಸುತ್ತದೆ. ಖಾದಿಯ ಮುಸುಕಿನಲ್ಲಿ ನಡೆಯುವ ಅವ್ಯವಹಾರಗಳು ಅಸಂಖ್ಯಾತ. ಜನಕಲ್ಯಾಣದ ಹೆಸರಿನಲ್ಲಿ ನಡೆಯುವ ಅವ್ಯವಹಾರಗಳು ಅಸಂಖ್ಯಾತ. ಜನ ಕಲ್ಯಾಣದ ಹೆಸರಿನಲ್ಲಿ ಕೆಲವು ರಾಜಕೀಯ ಮುಖಂಡರು ಎಸಗುವ ಭ್ರಷ್ಟಾಚಾರದಮೇಲೆ 'ಕ್ಷಕಿರಣ' ಬೀರುತ್ತದೆ. ಇಲ್ಲಿ ಸಮಾಜದ ಕ್ರೌರ್ಯವನ್ನು ಖಂಡಿಸಿರುವ ಕಥೆಗಾರರು ನ್ಯಾಯ ನೀತಿಗಳೆಂಬ ಜೀವನ ಮೌಲ್ಯಗಳಿಗೆ ಹೆಚ್ಚು ಒತ್ತುಕೊಟ್ಟಿದ್ದಾರೆ. ಶ್ರೀಮಂತಿಕೆಯ ಅಟ್ಟಹಾಸದ ಇನ್ನೊಂದು ಮತ್ತೊಂದು ರೂಪವೇ ನಿರೀಕ್ಷೆಯ ಕಥಾವಸ್ತು. ಬಡವರನ್ನು ಕಂಡರೆ 'ಬಿಲ್ವಪತ್ರೆಯೂ ಬುಸ್' ಅಂತು ಅನ್ನೊಹಾಗೆ ಬಡತನದ ಬದುಕು ಎಷ್ಟೊಂದು ಕಷ್ಟಕರ, ಬಡತನದಲ್ಲಿ ಅವರು ಅನುಭವಿಸುವ ಮಾನಸಿಕ ಹಿಂಸೆ ತೊಳಲಾಟ ಮೊದಲಾದವುಗಳನ್ನು ಈ ಕಥೆಯಲ್ಲಿ ಚಿತ್ರಿಸಿದ್ದಾರೆ.

ನೀನ್ಯಾರಿಗಾದೆಯೋ ಎಲೆಮಾನವ:

ಈ ಕಥೆಯಲ್ಲಿ ಭಾರತೀಯ ಸಂಸ್ಕೃತಿಯಲ್ಲಿ ಗೋವಿಗಿರುವ ಸ್ಥಾನವನ್ನೂ ಅದರ ಮಹತ್ವವನ್ನೂ ಪರಿಚಯಮಾಡಿಕೊಟ್ಟಿದ್ದಾರೆ. ಹಿಂದೂಸಂಪ್ರದಾಯದಲ್ಲಿ ಗೋವಿಗೆ ಪೂಜನೀಯ ಸ್ಥಾನವಿದೆ. ಆದರೆ ಸ್ವಾರ್ಥಿಗಳು ಈ ಮೂಕ ಪ್ರಾಣಿಯನ್ನು ಶೋಷಿಸುವುದನ್ನೂ ಬಿಟ್ಟಿಲ್ಲ. ಈ ಕಥೆಯಲ್ಲಿ ಚಿತ್ರಿತವಾಗಿರುವ ಮೂಕ ಪ್ರಾಣಿಯ ಬಲಿ ನಮ್ಮ ಜನರ ಕುತಂತ್ರಕ್ಕೆ, ದುಷ್ಟತನಕ್ಕೆ ಸಾಕ್ಷಿಯಾಗಿದೆ. ಈ ಕೆಲಸದಲ್ಲಿ ತೊಡಗಿರುವ ವ್ಯಕ್ತಿ ತನ್ನ ಆತ್ಮವಿಮರ್ಶೆ ಮಾಡಿಕೊಳ್ಳಬೇಕಾಗಿದೆ ಎಂಬ ಧ್ವನಿಯನ್ನು ಹೊರಡಿಸಿದೆ ಕಥೆ.

ಕೊರವ ಮತ್ತು ಕರಿಯನ ನಾಯಿ:

ಈ ಕಥಾಸಂಕಲನ ಹದಿನೈದು ಕಥೆಗಳನ್ನೊಳಗೊಂಡಿದೆ. 'ಕೊರವ ಮತ್ತು ಕರಿಯನ ನಾಯಿ' ಉತ್ತಮ ವಸ್ತುವನ್ನು ಒಳಗೊಂಡ ಕಥೆ. ನ್ಯಾಯ ದೇವತೆಯ ಬಾಯಿಮುಚ್ಚಿಸುವ ಏಕೈಕ ಶಕ್ತಿ ಎಂದರೆ ಹಣ, "ಹಣ ಕಂಡ್ರೆ ಹೆಣನೂ ಬಾಯಿ ಬಿಡ್ತಂತೆ" ಎಂಬಂತೆ ಇಂದಿನ ಎಲ್ಲಾ ಅನ್ಯಾಯ ಅವ್ಯವಹಾರ ಹಾಗೂ ಅನೈತಿಕತೆಗಳನ್ನು ಹಣ ಮುಚ್ಚಿಹಾಕಿದೆ. ಈ ಸಾರ್ವಕಾಲಿಕ ಸತ್ಯವನ್ನು ಕಥೆ ಎತ್ತಿ ಹಿಡಿದಿದೆ. ಸಮಾಜದಲ್ಲಿರುವ ಆಷಾಢಭೂತಿತನ, ಮೋಸ,

ಕ್ರೌರ್ಯ ಮೊದಲಾದುವನ್ನು ಈ ಕಥಾಸಂಕಲನದ ಕಥೆಗಳ ಮೂಲಕ ಸಮರ್ಥವಾಗಿ ಬಯಲಿಗೆಳೆದಿದ್ದಾರೆ.

ಯಾವುದೇ ಕಥೆ, ಕಾದಂಬರಿಯಲ್ಲಿ ವಸ್ತುವೇ ಅದರ ಜೀವನಾಡಿಯಲ್ಲ. ಉತ್ತಮ ಕಥೆಯಾಗುವಲ್ಲಿ ಬಳಸುವ ಭಾಷೆ, ತಂತ್ರ, ನಿರ್ವಹಣೆಯೂ ಸಮಪಾಲು ಪಡೆದುಕೊಳ್ಳುತ್ತದೆ. ಹಾಗೆ ನೋಡಿದರೆ ಸದ್ದಿಲ್ಲದೆ ತಮ್ಮ ಪರಿಸರವನ್ನು ವೀಕ್ಷಿಸುವ ಲೇಖಕರು ಅದರ ಒಳ–ಹೊರಗನ್ನು ನಮಗೆ ಕಾಣಿಸಿದ್ದಾರೆ. ಈ ಕಥಾಸಂಕಲನದ ಕಥೆಗಳಲ್ಲಿ ವಸ್ತುವೈವಿಧ್ಯತೆ ಮತ್ತು ಜೀವನಾನುಭವದ ಹರಹು ಯಥೇಚ್ಛವಾಗಿ ಕಂಡು ಬರುತ್ತವೆ ಸಮಾಜದ ಹಲವು ಸ್ತರಗಳ ವ್ಯಕ್ತಿಗಳು, ವ್ಯಕ್ತಿತ್ವಗಳ ಪ್ರಚಲಿತ ಸಮಸ್ಯೆಗಳು ಈ ಕಥೆಗಳಲ್ಲಿ ವ್ಯಕ್ತವಾಗಿವೆ ಓದುಗರ ಮನಸ್ಸನ್ನು ಆಕರ್ಷಿಸುವಂತೆ ಕಥೆ ಹೇಳುವ ಕಲೆ ಕಥೆಗಾರರಿಗೆ ಸಿದ್ಧಿಸಿದೆ ಹೀಗಾಗಿ ಇವರ ಹಲವಾರು ಕಥೆಗಳು ವಿವಿಧ ಕಥಾಸ್ಪರ್ಧೆಗಳಲ್ಲಿ ಬಹುಮಾನಗಳಿಸಿವೆ. ಹಾಗೂ ಚಲನಚಿತ್ರಗಳೂ ಆಗಿವೆ. ಆದರೆ ಇಲ್ಲಿಯ ಬಹುಪಾಲು ಕಥೆಗಳಲ್ಲಿ ಲೇಖಕರು ವ್ಯಕ್ತಿ, ಘಟನೆ, ಹಾಗೂ ಸಮಸ್ಯೆಗಳ ಮೇಲ್ಪದರದಲ್ಲೇ ಕೈ ಆಡಿಸಿ ತೃಪ್ತರಾಗಿದ್ದಾರೆಯೇ ಹೊರತು ಬದುಕಿನ ಆಳಗಳಿಗೆ, ನಿಗೂಢಗಳಿಗೆ ಇಳಿಯುವ, ಇಳಿದು ಕಥೆಗಳನ್ನು ಸಾಂದ್ರ, ಸಂಕೀರ್ಣಗೊಳಿಸುವ ಸಾಹಸಕ್ಕೆ ಕೈ ಹಾಕಿಲ್ಲ ಎನಿಸುತ್ತದೆ. ಆದರೆ ತಮ್ಮ ಕಥಾತಂತ್ರ, ಕಥಾನಾವೀನ್ಯತೆ, ಭಾಷೆಯ ಅಚ್ಚುಕಟ್ಟು, ಹಾಗೂ ಚಕಿತಗೊಳಿಸುವ ಲವಲವಿಕೆ ದೃಷ್ಟಿ ಇವೇ ಮೊದಲಾದ ಅಂಶಗಳಿಂದ ಅವರ ಅನೇಕ ಕಥೆಗಳು ಓದುಗರ ಗಮನ ಸೆಳೆಯುತ್ತವೆ.

ಕೆಂಡ ಸಂಪಿಗೆ :

ಶಾಮಸುಂದರರ ಯಶಸ್ವಿ ಕಥಾಸಂಕಲನ. ಇಲ್ಲಿ ಕಂಡುಬರುವ ಕಥೆಗಳಿಗೆ ಮಹತ್ವಾಕಾಂಕ್ಷೆ ಇಲ್ಲದಿರಬಹುದು, ಆದರೆ ಅಪ್ರಾಮಾಣಿಕತೆ ಇಲ್ಲ. ಬದುಕಿನ ಆಳವಾದ ಅನುಭವದಿಂದ ಈ ಕಥೆಗಳ ಗಾಢವಾದ ಪರಿಣಾಮವನ್ನುಂಟುಮಾಡುತ್ತವೆ. ಈ ಕಥಾಸಂಕಲನದ ಕಥೆಗಳನ್ನು ಸ್ಥೂಲವಾಗಿ ಎರಡು ದೃಷ್ಟಿಕೋನಗಳಿಂದ ಗಮನಿಸುವುದು ಯುಕ್ತ.

೧. ಆಪ್ತವಾದ ಅನುಭವಗಳ, ಕೋಮಲ ಮುಗ್ಧಗಳ ಭಾವಪೂರ್ಣ ನಿರೂಪಣೆ; ಇದರಲ್ಲಿ ಕೆಂಡಸಂಪಿಗೆ, ಸ್ವಾರ್ಥ, ಕಿಟ್ಟಿಯತಾತ, ಈ ಕಥೆಗಳ ಕ್ಷೇತ್ರ ಕೌಟುಂಬಿಕ ಚೌಕಟ್ಟೇ ಆದರೂ ಅವು ಹೊರಡಿಸುವ ಧ್ವನಿ ಅರ್ಥಪೂರ್ಣವಾದ್ದು.

೨. ಸಮಾಜದ ಡಾಂಭಿಕತೆ, ಕ್ರೌರ್ಯ, ಮೂಢನಂಬಿಕೆಗಳನ್ನು ಬಯಲಿಗೆಳೆಯುವ ಸ್ವರೂಪದ್ದು. ಈ ವಿಭಾಗದಲ್ಲಿ ಕಾಗೆಗಳು, ಕಳ್ಳ–ಗುಟ್ಟು, ಎಲ್ಲಾ ಸ್ವಾಮಿಚಿತ್ತ—ಈ ಬಗೆಯ ಕಥೆಗಳು.

'ಸಾಯಲಾರದವನು, ಕಳ್ಳ, ಕಿಟ್ಟಿಯ ತಾತ'— ಈ ಕಥೆಗಳು ಸೆಂಟಿಮೆಂಟಲ್ ಎನಿಸಿದರೂ ಓದಿಸಿಕೊಂಡು ಹೋಗುವ ಗುಣವನ್ನು ಮೈಗೂಡಿಸಿಕೊಂಡಿವೆ.

'ಸಾಯಲಾರದವನು' ಕಥೆಯ ಮೂಲಕ ಲೇಖಕರು ದೇಶದ ಇಂದಿನ ಪ್ರಚಲಿತ ಸಮಸ್ಯೆಯನ್ನು ನಮ್ಮ ಮುಂದಿಟ್ಟಿದ್ದಾರೆ ಎನಿಸುತ್ತದೆ. ನಿರುದ್ಯೋಗ ಸಮಸ್ಯೆಯಿಂದ ನರಳುತ್ತಿರುವ ಯುವಸಮಾಜದ ಮುಂದೆ ಭವಿಷ್ಯದ ಪ್ರಶ್ನೆ ತಲೆಎತ್ತಿ ನಿಂತಿದೆ. ಇದರ ಹೊಣೆಗಾರಿಕೆಯ ಅನಿವಾರ್ಯತೆಯನ್ನು ಕಥೆಗಾರರು ಇಲ್ಲಿ ಗುರುತಿಸಿದ್ದಾರೆ.

ಕಿಟ್ಟಯ ತಾತ, ತಿರುಮಲ್ಲಯ್ಯ, ಕಳ್ಳ ಕಥೆಯ ಚಿಕ್ಕಯ್ಯ ಕಣ್ಣು ಕಳೆದುಕೊಂಡ ಬೆಟ್ಟವ್ವ, ಸ್ವಾರ್ಥಿ ಅನಂತ ಇವರೆಲ್ಲರೂ ಒಂದಲ್ಲ ಒಂದು ವಿಧದಲ್ಲಿ ಶೋಷಣೆಗೆ ಒಳಗಾದವರು. ಕಾಲಕಾಲಾಂತರದಿಂದ ತುಳಿಸಿಕೊಂಡವರು. ಹೀಗಾಗಿ ಜೀವಂತ ಅನುಭವಗಳ ಪ್ರತೀಕವಾದ ಈ ಪಾತ್ರಗಳು ಸಹಜವಾಗಿ ಓದುಗರ ಗಮನವನ್ನು ತಮ್ಮ ಕಡೆಗೆ ಸೆಳೆಯುತ್ತವೆ. 'ಕಾಗೆಗಳು' ಈ ಕಥೆಯಲ್ಲಿ ಪಟ್ಟಭದ್ರಹಿತಾಸಕ್ತಿಗಳು ಹೇಗೆ ಸಮಾಜವನ್ನು ತಮ್ಮ ಹಿಡಿತದಲ್ಲಿ ಇಟ್ಟುಕೊಂಡಿವೆ ಎಂಬುದನ್ನು, ಆ ಮೂಲಕ ತಮ್ಮ ಸ್ವಾರ್ಥಸಾಧನೆಯನ್ನು ಮಾಡಿಕೊಳ್ಳುತ್ತಿವೆ ಎಂಬ ಅಂಶಗಳನ್ನು ಪರಿಣಾಮಕಾರಿಯಾದ ರೀತಿಯಲ್ಲಿ ಚಿತ್ರಿಸಿದೆ ಈರೇಗೌಡನ ಸಾವು, ಅದರ ಸುತ್ತ ಘಟನೆಗಳ ಸುರುಳಿ ಬಿಚ್ಚಿಕೊಳ್ಳುತ್ತಾ ಹೋಗುವುದು. ನಿಸ್ಸಹಾಯಕ ಮುದುಕ ಮಾದೇಗೌಡನ ಶೋಷಣೆ, ಕಾಗೆಗಳಂತೆ ಕಂಡುಬರುವ ಹೆಂಡದಂಗಡಿಯ ಗಂಗಣ್ಣ, ಊರಿನ ಮುಖ್ಯನಾದ ವೆಂಕಟೇಗೌಡ, ಊರಿನ ಜೋಯಿಸ ಇವರೆಲ್ಲರ ಕುತಂತ್ರ ಕಪಟತನ, ಇವರಿಂದ ಊರಿನ ಅಮಾಯಕ ಜನ ಹೇಗೆ ಮೋಸ ಹೋಗುತ್ತಿದ್ದರು. ಇವೇ ಮೊದಲಾದ ವಿಷಯಗಳು ವಾಸ್ತವ ನೆಲೆಗಟ್ಟಿನಲ್ಲಿ ಮೂಡಿಬಂದಿವೆ. ಊರಿನವರ ಅಜ್ಞಾನವನ್ನು ತಿದ್ದಲು ಪ್ರಾಮಾಣಿಕವಾಗಿ ಪ್ರಯತ್ನಿಸುವ ನಾರಾಯಣರಾಯರು ಓದುಗರ ಸಹಾನುಭೂತಿಯನ್ನು ಪಡೆದುಕೊಳ್ಳುತ್ತಾರೆ. ಸತ್ತವನ ಹೆಸರಿನಲ್ಲಿ ಜೀವಂತ ವ್ಯಕ್ತಿಗಳನ್ನೇ ಕಿತ್ತುತಿನ್ನುವ ಕಾಗೆಗಳಿಂದ ಸಮಾಜ ತುಂಬಿಹೋಗಿರುವುದು ದುರಂತವೇ ಸರಿ.

'ಕ್ಷೇತ್ರ ದರ್ಶನ'

ಈ ಕಥೆಯ ಮೂಲಕ ಇಂದು ಸಮಾಜದಲ್ಲಿ ತುಂಬಿರುವ ಅನೈತಿಕತೆ ಹಾಗೂ ಆಷಾಡಭೂತಿತನವನ್ನು ನಿದರ್ಶನಗಳ ಮೂಲಕ ಹೊರಗೆಡಹಿದ್ದಾರೆ. ಪವಿತ್ರ ಕ್ಷೇತ್ರವೊಂದರ ದರ್ಶನ ಈ ಕಥೆಯ ವಸ್ತು. ಇಂದು ಪವಿತ್ರ ಕ್ಷೇತ್ರಗಳು ತಮ್ಮ ಮೂಲದ ಪಾವಿತ್ರ್ಯತೆಯನ್ನು ಬದಿಗಿಟ್ಟು ಕೇವಲ ವ್ಯಾಪಾರಿ ಕೇಂದ್ರಗಳಾಗಿವೆ. ಇಂಥ ಹಲವಾರು ಪುಣ್ಯಕ್ಷೇತ್ರಗಳನ್ನು ಸಂದರ್ಶಿಸುವ ಜನ ಹೆಚ್ಚಿನ ಸೌಕರ್ಯಗಳನ್ನು ನಿರೀಕ್ಷಿಸಿಹೋದರೆ ಅವರಿಗೆ ನಿರಾಶೆ ಕಟ್ಟಿಟ್ಟಬುತ್ತಿ. ನಮ್ಮ ದೇಶದ ಪುಣ್ಯಕ್ಷೇತ್ರಗಳಲ್ಲಿ ದೇವರ ದರ್ಶನಮಾಡುವುದೆಂದರೆ ಮಾನವ ಚಂದ್ರಲೋಕಕ್ಕೆ ಹೋಗಿ ಬಂದಹಾಗೆ. ದೇವಾಲಯದ ಪೂಜಾರಿಗಳಲ್ಲಿ ಹಲವರು ತೀರ್ಥಕೊಡುವುದರ

ಜೊತೆಗೆ ' ತೀರ್ಥ ' ಹಾಕುವ ಅಭ್ಯಾಸವನ್ನೂ ರೂಢಿಸಿಕೊಂಡಿದ್ದಾರೆ ! ಉದಾಹರಣೆಗೆ ಈ ಕಥೆಯಲ್ಲಿ : "ಏನ್ಮಾಡೋದು ರಾಯರೆ ದಿನವೂ ತೀರ್ಥಕೊಟ್ಟೂಕೊಟ್ಟೂ ನಮಗೆ ಬಿಸಿ ಏರಿರುತ್ತೆ. ಇಲ್ಲಿ ಸ್ವಲ್ಪ ತಣ್ಣಗಾಗುತ್ತೆ" ಎನ್ನುವ ಪೂಜಾರಿಗಳೇ ಎಲ್ಲ ದೇವಾಲಯಗಳಲ್ಲೂ ಇದ್ದರೆ ಆದೆಷ್ಟು ಚೆನ್ನ ? ಪೂಜಾರಿಯ ಮಾತಿಗೆ ರಾಯರು ; "ತಂಪುಮಾಡಿಕೊಳ್ಳಿ ಸ್ವಾಮಿ, ಯಾರು ಬೇಡ ಅಂದ್ರು, ಎಲ್ಲಿವರ್‍ಗೆ ನಮ್ಮ ದೇಶದಲ್ಲಿ ಬಡತನ, ಅಜ್ಞಾನ, ಮೂಢನಂಬಿಕೆಗಳು ಇರುತ್ತಾವೆಯೋ, ಅಲ್ಲಿಯತನಕ ದೇವರೂ ಇರ್‍ತಾನೆ, ನಿಮಗೆ ಭಕ್ತರ ಕಾಣಿಕೆಗಳೂ ಧಾರಾಳವಾಗಿ ಸಿಗುತ್ತವೆ" ಎನ್ನುತ್ತಾರೆ. ಇದು ಕಥೆಗಾರರಿಗಿರುವ ಅಪಾರವಾದ ಸಾಮಾಜಿಕ ಕಳಕಳಿಯನ್ನು ವ್ಯಕ್ತಪಡಿಸುತ್ತದೆ.

ಶಾಮಸುಂದರರು ಆಕರ್ಷಕವಾಗಿ ಕಥೆ ಹೇಳುವ ತಮ್ಮ ಪ್ರತಿಭೆಯನ್ನು ಒಂದು ನಿರ್ದಿಷ್ಟ ಕ್ರಿಯಾತ್ಮಕ ನೆಲೆಯಲ್ಲಿ ದುಡಿಸಿಕೊಳ್ಳಲು ಸಾಧ್ಯವಾದರೆ ಅವರಿಂದ ಇನ್ನಷ್ಟು ಒಳ್ಳೆಯ ಕತೆಗಳನ್ನು ನಿರೀಕ್ಷಿಸಬಹುದು. ಸರಳ ಭಾಷೆ, ಸರಳ ನಿರ್ವಹಣೆಯಲ್ಲಿ ತಾಳ್ಮೆಯಿಂದ ಹೆಜ್ಜೆ ಇಡುವ ಲೇಖಕರು ತಮ್ಮ ಮಿತಿಯಲ್ಲಿಯೇ ಕಥಾಪಾತ್ರಗಳಿಗೆ ಜೀವತುಂಬಿದ್ದಾರೆ. ಹೀಗಾಗಿ ಅವರ ಪಾತ್ರಗಳು ಲವಲವಿಕೆಯಿಂದ ಕೂಡಿವೆ. ಸಾಮಾಜಿಕ ಕಳಕಳಿಯನ್ನು ಹೊಂದಿರುವ ಇವರು ತಮ್ಮ ಕತೆಗಳಲ್ಲಿ ಮಾನವೀಯ ಗುಣಗಳಿಗೆ ಹೆಚ್ಚು, ಒತ್ತುಕೊಟ್ಟಿದ್ದಾರೆ. ಕಥಾವಸ್ತುವಿನ ಆಯ್ಕೆಯಲ್ಲಿ ಹೊಸ ದೃಷ್ಟಿ, ಹೊಸ ಆಯಾಮಗಳು ಕಂಡುಬಂದರೆ ಶಾಮಸುಂದರರು ಇನ್ನೂ ಉತ್ತಮ ಮಟ್ಟದ ಸಾಹಿತ್ಯ ಕೃತಿಗಳನ್ನು ನೀಡಬಲ್ಲರು. ಆ ಪ್ರತಿಭೆ, ವಿದ್ವತ್ತು ಹಾಗೂ ಜೀವನಾನುಭವ ಅವರಿಗಿದೆ, ಎಂಬುದನ್ನು ಅವರ ಕೃತಿಗಳು ಸಾದರಪಡಿಸುತ್ತವೆ.

' ಎಲ್ಲಿ ಒಮ್ಮೆ ಕಣ್ಣುತೆರೆ '

ಒಂದು ಕಿರುಕಾದಂಬರಿ. ದೇಶ ರಕ್ಷಣೆಗಾಗಿ ಹಗಲುರಾತ್ರಿ ಸತತವಾಗಿ ದುಡಿಯುತ್ತಿರುವ ವೀರಯೋಧರ ಬದುಕು, ಈ ಕಾದಂಬರಿಯ ವಸ್ತು. ದೇಶಕ್ಕಾಗಿ ಕೊರೆವ ಚಳಿಗಾಳಿಯಲ್ಲಿ ನಿಂತು ಗಡಿಕಾಯುವ, ತಮ್ಮ ಕೈಕಾಲು ಬೆರಳುಗಳನ್ನೇ ಹಿಮವ್ರಣಕ್ಕೆ ಒಡ್ಡಿ ದೇಶದ ರಕ್ಷಣೆಮಾಡುವ ಸೈನಿಕರ ಬದುಕು ಅನಿಶ್ಚಿತತೆಯಿಂದ ಕೂಡಿರುತ್ತದೆ. ಅವರ ಕಠಿಣ ಪರಿಶ್ರಮ, ಜೀವನ ವಿಧಾನ ಒಂದೆಡೆಯಾದರೆ ಅದಕ್ಕೆ ವಿರುದ್ಧವಾಗಿ ಕೆಲವು ದೇಶದ್ರೋಹಿಗಳ ಚಟುವಟಿಕೆಯನ್ನೂ ಈ ಕಾದಂಬರಿ ಚಿತ್ರಿಸುತ್ತದೆ. ನಾಡ ರಕ್ಷಣೆಯಲ್ಲಿ ನಾಗರೀಕರ, ವಿದ್ಯಾವಂತರ ಪ್ರಾಮಾಣಿಕ ಪ್ರಯತ್ನ ಹಾಗೂ ಕರ್ತವ್ಯದ ಬಗ್ಗೆ ಈ ಕಾದಂಬರಿ ಹೆಚ್ಚು ಒತ್ತುಕೊಡುತ್ತದೆ. ಈ ಕಾದಂಬರಿಯ ಮುಖ್ಯ ಉದ್ದೇಶ, ದೇಶದ ತರುಣರನ್ನು ಸೈನ್ಯಕ್ಕೆ ಸೇರುವಂತೆ ಉತ್ತೇಜಿಸುವುದೂ ಆಗಿದೆ. ಈ ಉದ್ದೇಶ ಸಾಧನೆಗಾಗಿ ಕಾದಂಬರಿಯಲ್ಲಿ ಸೈನಿಕ ಜೀವನದ ಹಿರಿಮೆಯನ್ನು ಕುರಿತು ವಿವರವಾದ ತಿಳಿವಳಿಕೆಯನ್ನು ಕಾಣಬಹುದು. ಕಾದಂಬರಿಯಲ್ಲಿ ಬರುವ ಘಟನೆಗಳು, ಸನ್ನಿವೇಶಗಳು ಪ್ರತಿಯೊಬ್ಬ ಭಾರತೀಯನ

ನ್ಯೈತಿಕ ಹೊಣೆಗಾರಿಕೆಯನ್ನೂ, ಭಾರತೀಯತೆಯನ್ನೂ ಜಾಗೃತಗೊಳಿಸುವ ದಿಕ್ಕಿನಲ್ಲಿ ಕೆಲಸಮಾಡಿರುವುದು ಮೆಚ್ಚತಕ್ಕ ಅಂಶ. ಈ ಕಾದಂಬರಿಯ ಪ್ರತಿಗಳನ್ನು ಭಾರತದ ರಕ್ಷಣಾ ಇಲಾಖೆ ಕೊಂಡುಕೊಂಡು ತನ್ನ ಅಪಾರ ಮೆಚ್ಚುಗೆಯನ್ನು ವ್ಯಕ್ತಪಡಿಸಿದೆ.

ರೂಪದರ್ಶಿಗಳ ಬದುಕನ್ನು ವಸ್ತುವನ್ನಾಗಿಸಿಕೊಂಡಿರುವ ಕಾದಂಬರಿ 'ದರ್ಶಿ'. ವಸ್ತುವಿನ ಹೊಸತನದಿಂದಾಗಿ ಓದುಗರ ಕುತೂಹಲವನ್ನು ಹೆಚ್ಚಿಸುತ್ತಾ ಹೋಗುತ್ತದೆ. ಶಶಿಧರನ 'ರೂಪದರ್ಶಿ' ಜೀವನದ ನಿರೂಪಣೆಯಲ್ಲಿ ಸ್ವಭಾವಿಕತೆಯಿದ್ದು ಆಕರ್ಷಕವಾಗಿದೆ. ರೂಪದರ್ಶಿಗಳಾಗಿ ಕೆಲಸಮಾಡುವ ಹರೀಶ-ಶ್ರೀದೇವಿ ಇಬ್ಬರೂ ಸಂಯಮದಿಂದ ಸಭ್ಯರಾಗಿ ವರ್ತಿಸಿ ತಮಗೆ ಎದುರಾದ ಎಲ್ಲ ಅಡ್ಡಿ ಆತಂಕಗಳನ್ನು ಧೈರ್ಯವಾಗಿ ಎದುರಿಸಿ ಮದುವೆಯಾಗುತ್ತಾರೆ.

'ರೂಪದರ್ಶಿಗಳು' ಎಂದರೆ ಮೂಗುಮುರಿಯುವ, ಹಲವು ಬಗೆಯಲ್ಲಿ ಅರ್ಥೈಸುವ ಸಮಾಜದಲ್ಲಿ ಹರೀಶ-ಶ್ರೀದೇವಿ ಧೃತಿಗೆಡದೆ ತಮ್ಮನ್ನು ಕಾಯ್ದುಕೊಂಡು ತಮ್ಮ ರೀತಿನೀತಿಗಳಿಂದಲೇ ನಿಂದಕರೆಲ್ಲರ ಮೆಚ್ಚುಗೆಗಳಿಸಿ, ಪರಸ್ಪರ ಒಲಿದು ಒಂದುಗೂಡುತ್ತಾರೆ. ಪ್ರಚಲಿತ ಸಮಾಜದಲ್ಲಿ ಹಣಕ್ಕಿರುವ ಪ್ರಾಮುಖ್ಯವನ್ನು ಪರಿಚಯಮಾಡಿಕೊಟ್ಟು ಹಣ ಹೇಗೆ ವ್ಯಕ್ತಿಯೊಬ್ಬನ ಗುಣವನ್ನು ಕೆಡಿಸಿ ಎಷ್ಟೆಲ್ಲ ಅನರ್ಥಕ್ಕೆ ದಾರಿಯಾಗುತ್ತದೆ ಎಂಬ ಅಂಶವನ್ನು ಅತ್ಯಂತ ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ. ರೂಪದರ್ಶಿಯಾದ ಶಶಿಧರ 'ದರ್ಶಿ' ಆಗಲು ಹೊರಟಾಗ ಅತಿ ಭಾವುಕತೆ ತಲೆಹಾಕಿ ಕತೆಯನ್ನು ಆದರ್ಶದ ತುಟ್ಟತುದಿಯಲ್ಲಿ ನಿಲ್ಲಿಸಿಬಿಡುತ್ತದೆ. ಬರವಣಿಗೆಯ ಅಚ್ಚುಕಟ್ಟುತನ ಕಾದಂಬರಿಯ ವಿಶಿಷ್ಟ ಅಂಶಗಳ ಪೈಕಿ ಒಂದು.

ಶಾಮಸುಂದರ ಅವರ ಕಥಾಸಾಹಿತ್ಯದಲ್ಲಿ ಎದ್ದುಕಾಣುವ ಅಂಶವೆಂದರೆ ಸಂಸ್ಕೃತಿಯ ವಿವರಗಳು ಬದಲಾದರೂ ಮಾನವನ ಮೂಲಭೂತ ಗುಣ, ಸ್ವಭಾವ ಒಂದೇ ರೀತಿಯಾಗಿದೆ ಎಂಬುದು. ಸಮಕಾಲೀನ ಬದುಕಿನಲ್ಲಿ ಕುಟಿಲತನ ಕುತಂತ್ರಗಳಲ್ಲಿ ತೊಡಗಿರುವ ವ್ಯಕ್ತಿಗಳು ಪ್ರಾಮಾಣಿಕ ವ್ಯಕ್ತಿಗಳಿಗಿಂತ ಸುಖವಾಗಿದ್ದರೂ ಅಂತ್ಯದಲ್ಲಿ ಜಯುಸಿಕ್ಕುವುದು ಒಳ್ಳೆಯ ವ್ಯಕ್ತಿಗಳಿಗೇ ಎಂಬ ಆಶಯವೂ ಅವರ ಕಥೆಗಳಲ್ಲಿ ವ್ಯಕ್ತವಾಗಿದೆ. ಆದರೆ ಸಧ್ಯದ ಪರಿಸ್ಥಿತಿಯಲ್ಲಿ ಯಾವುದೇ ಆಶಾವಾದಕ್ಕೂ ಆಧಾರವೇ ಇಲ್ಲದಷ್ಟು ಮಟ್ಟಿಗೆ ವ್ಯಕ್ತಿ ಅಧೋಗತಿಯತ್ತ ಸಾಗುತ್ತಿದ್ದಾನೆ ಎಂಬ ಸತ್ಯವನ್ನು ಮರೆಯುವಂತಿಲ್ಲ. ಶಾಮಸುಂದರ ಅವರ ಎಲ್ಲ ಕಥೆ ಕಾದಂಬರಿಗಳಲ್ಲಿ ಸರಳತೆ ಜೀವ ದ್ರವ್ಯವಾಗಿ ಹರಿದಿದೆ. ತಮ್ಮ ವೈಚಾರಿಕ ನಿಲುವಿಗೆ ಅನುಗುಣವಾಗಿ ವಿಷಯ ವಿಗ್ರಹವನ್ನು ಚೊಕ್ಕವಾಗಿ ಚಿಕ್ಕದಾಗಿ ಕಡೆಯುವ ಕುಶಲಗಾರಿಕೆಯೂ ಅವರಿಗೆ ಸಿದ್ಧಿಸಿದೆ. ನಿರಾಯಾಸಶೀಲವಾದ ರಚನಾಶಕ್ತಿ, ಮಿತಿಯಲ್ಲೇ ಮನಸೆಳೆಯುವ ಕಲೆಗಾರಿಕೆ, ಭಾಷೆಯಲ್ಲಿರುವ ಲವಲವಿಕೆಯ ಗುಣ ಅವರ ಕಥಾಸಾಹಿತ್ಯದ ವೈಶಿಷ್ಟ್ಯವೆನ್ನಬಹುದು.

ಕೆ. ಗೋವಿಂದರಾಜು

ಚಿನ್ನದ ಕೊನೆಗೆ ಬೆಳ್ಳಿಯ ಮೊನೆ

ತೂಗು ಬಿದ್ದಿವೆ ಹೆಗಲ ಮೇಲೆ ಎರಡು ಕಡೆ
ಇಳಿಬಿದ್ದ ಮುಖದ ತೆಂಗಿನಕಾಯಿಗಳ ಪಡೆ
ಬೆತ್ತಲೆ ದೇಹಕೆ ಮಸಿಯಲಿ ಕಳ್ಳನ ಹೆಸರು
ಬೋಳಿಸದ ತಲೆಗೆ ಪಂಗನಾಮವು ನೂರಾರು
ಜನರ ಮುಂದೆಲ್ಲಾ ಮೆರಸಿ
ಭಜನೆಮಠದ ಮರಕ್ಕೆ ಕಟ್ಟಿ
ಬೆಳಕಿನ ಕಂಬಕ್ಕೆ ಬಿಗಿದು, ಉಳಿದ
ಬಟ್ಟೆಗಳನು ಒಂದೊಂದಾಗಿ ಕಳಚತೊಡಗಿದಾಗ
ವಿಮರ್ಶೆಗೆ ಒಪ್ಪದ ವಿಪ್ಲವಗಳು
ಕಣ್ಣುಗಳಿಗೆ ಬಟ್ಟೆ ಕಟ್ಟಿಕೊಂಡವು ;

ಹೆಣದ ಕೈಯಲ್ಲಿ ಕರ್ಪೂರ ಉರಿದು
ಮಂತ್ರಿಸಿದ ಕಾಯಿ ಕುಣಿದು ಕುಡಿಕೆಯು ತಡಬಿರಿದು
ತಗಡಿನ ಹೊಟ್ಟೆಯಲ್ಲಿ ಅಕ್ಷರಗಳನು ಕೊರೆದು
ತಟವಟನೆ ಹಣೆಯಲ್ಲಿ ಅಂಟಿಸಿ ಬಿಟ್ಟಾಗ
ಸಪ್ಪೆನೂಲಿನ ಚಕ್ರದೊಳಗೆ ಬಂಧನ
ಹಿಡಿಯಲಾಗದ ಪಾದರಸದ ಸ್ಪಂದನ;

ಬೆಂಕಿಯನ್ನು ಬೇಡಲಿಲ್ಲ ನೀರನ್ನು ಕುಡಿಯಲಿಲ್ಲ
ಬೆದರಿದವು ಬೆಚ್ಚಿದವು ಅದಿರುಗಳಾದವು
ಮೂಗು ಮುಂದೆಲೆಯು ಕುಯ್ಸಿಕೊಂಡವೆಲ್ಲಾ
ಬಿದಿರುಗಳಾಗಿ ಬೆಳೆದು ಬುಟ್ಟಿಗಳಾಗಿ ನಿಂತವು
ಕಂಟವು ಉರಿದು ಮೂರು ಕಾಸಿನ ಚಿತೆಯಾಗಿ
ರತ್ತ್ನೀರಾಗಿ ಇಳಿದಾಗ ಕರುಣೆಯು ಕಂಡಿತಲ್ಲಿ
ಚಿನ್ನದ ಕೊನೆಯಲ್ಲಿ ಬೆಳ್ಳಿಯ ಮೊನೆಯಲ್ಲಿ
ದೇವರ ದೀಪದಲ್ಲಿ ಚಿಟಿಕಿಯ ಹಾಕಿದವರು
ತುದಿನಾಲಗೆಯ ಸುಟ್ಟವರು ಸುಡುಗಾಡಾದರು
ಏರುವವರಿಗೆ ಏಣಿಯಾಗಿ ನಡೆವವರಿಗೆ ದಾರಿಯಾದರು.

ಸುಧಾಕರ

ಕನಕದಾಸರ ಇತಿವೃತ್ತ ಮತ್ತು ಸಾಹಿತ್ಯ ಕುರಿತ ವಿಮರ್ಶೆಯ ವಿವೇಚನೆ

ಸಾಮಾನ್ಯವಾಗಿ ಸಾಧುಸಂತರ, ಮಹಾತ್ಮರ ಪೂರ್ವಜೀವನದ ವಿವರ ತಿಳಿದು ಬರುವುದು ಅತ್ಯಲ್ಪ. ಪರಂಪರಾಗತ ಕಥೆ, ಐತಿಹ್ಯಗಳಿಂದ ಹಾಗೂ ಅವರ ಕೃತಿಗಳಲ್ಲಿ ಸಿಗುವ ಸುಳಿವುಗಳಿಂದ ಪೂರ್ವೇತಿಹಾಸವನ್ನು ಪುನರ್ರಚಿಸಬೇಕಾಗುತ್ತದೆ.

ಕನಕದಾಸರ ಕೀರ್ತನೆಗಳಿಂದ ಹಾಗೂ ಕೃತಿಗಳಿಂದ ಅವರು ಬಾಡ, ಬಂಕಾಪುರ, ಕಾಗಿನೆಲೆಗಳ ಪರಿಸರದಲ್ಲಿ ಬಾಳಿ ಬದುಕಿದವರು ಎಂಬುದು ವಿದಿತವಾಗುತ್ತದೆ. ಏಕೆಂದರೆ ಅವರ ಕೀರ್ತನೆಗಳಲ್ಲಿ 'ಕಾಗಿನೆಲೆಯಾದಿಕೇಶವ' 'ಬಾಡದಾದಿಕೇಶವ' ಎಂಬ ಅಂಕಿತಗಳು ಕಂಡುಬರುತ್ತವೆ. ಅವರ 'ಮೋಹನ ತರಂಗಿಣಿ' ಕಾವ್ಯ ಕಾಗಿನೆಲೆಯಲ್ಲಿಯೇ ರಚಿತವಾಗಿರಬಹುದೆಂಬುದಕ್ಕೆ ಆಧಾರಗಳು ದೊರಕುತ್ತವೆ. ಹಾಗೆಯೇ ಅವರ 'ನೃಸಿಂಹಸ್ತವ' ಕೂಡ ಕಾಗಿನೆಲೆಯ ನರಸಿಂಹನ ಸಮಕ್ಷಮದಲ್ಲೇ ರಚನೆಗೊಂಡಿರಬೇಕು. ಆದರೆ ಉಳಿದ ಮೂರು ಕಾವ್ಯಗಳಾದ 'ನಳಚರಿತ್ರೆ', 'ಹರಿಭಕ್ತಿಸಾರ', 'ರಾಮಧ್ಯಾನ ಚರಿತ್ರೆ'ಗಳು ಬೇಲೂರಿನಲ್ಲಿ ರಚಿತವಾದವು ಎಂಬುದು ಬಹುಜನ ವಿದ್ವಾಂಸರ ಅಭಿಮತ. ಏಕೆಂದರೆ ಅವುಗಳಲ್ಲಿ 'ವರಪುರದ ಚೆನ್ನಿಗರಾಯ' ಎಂದೂ 'ಸುರಪುರದ ಚೆನ್ನಿಗರಾಯ' ಎಂದೂ ಉಕ್ತವಾಗಿರುವುದರಿಂದ ವರಪುರ ಅಥವಾ ಸುರಪುರ ಎಂದರೆ ಬೇಲೂರು ಎಂದು ಭಾವಿಸಿದ್ದಾರೆ. ಕನಕದಾಸರು ಬೇಲೂರಿನಲ್ಲಿದ್ದ ವೈಕುಂಠದಾಸರ ಜೊತೆಯಲ್ಲಿ ಹಲವು ಕಾಲ ತಂಗಿದ್ದರು ಎಂಬ ಪರಂಪರೆಯ ನಂಬಿಕೆ ಇದಕ್ಕೆ ಕಾರಣವಾಗಿರಬೇಕು. ಆದರೆ ಬಾಡ ಕಾಗಿನೆಲೆಗಳ ಮಧ್ಯೆ ಇರುವ ಚೆನ್ನಾಪುರದಲ್ಲಿ ಚೆನ್ನಿಗರಾಯನ ದೇವಸ್ಥಾನವಿದೆ ಎಂದು ಕಲಮದಾನಿ ಗುರುರಾಯರು ಹೇಳುತ್ತಾರೆ. ಆದ್ದರಿಂದ ವರಪುರ ಎಂದರೆ ಆ ಚೆನ್ನಾಪುರ ಇರಬಹುದೆ? ವರ ಎಂದರೆ ಶ್ರೇಷ್ಠ, ಚೆನ್ನ ಎಂಬ ಅರ್ಥ ಬರುತ್ತದೆ. ಮುಸ್ಲಿಂ ದಾಳಿಯಿಂದ ಬಾಡದಾದಿಕೇಶವನನ್ನು ಬಚಾವು ಮಾಡಲು ಕಾಗಿನೆಲೆಗೆ ತಂದು ಪ್ರತಿಷ್ಠಾಪಿಸಿದಂತೆ ಚೆನ್ನಾಪುರದ ಚೆನ್ನಕೇಶವನನ್ನು

ತಂದು ಇಂಗಳಗೊಂದಿಯಲ್ಲಿ ಪ್ರತಿಷ್ಠಾಪಿಸಿರಬಹುದೆ ? ಈ ನಿಟ್ಟಿನಲ್ಲಿ ವಿದ್ವಾಂಸರು ಚಿಂತನೆ ನಡೆಸಬೇಕಾಗಿದೆ.

ಹರಿದಾಸ ಮನೆತನದವರು ಪರಂಪರಾಗತವಾಗಿ ಉಳಿಸಿಕೊಂಡು ಬಂದಿರುವ ಕನಕದಾಸರ ಸಾಹಿತ್ಯ ಹಾಗೂ ಜೀವನ ವಿವರ ಈಗಾಗಲೇ ಎಲ್ಲರಿಗೂ ತಿಳಿದ ವಿಷಯ : "ಹಾಲುಮತದ ಅಂಡೆಕುರುಬ ಬೆಡಗಿಗೆ ಸೇರಿದ ಬೀರಪ್ಪ ಬಾಡಕ್ಕೆ ಸೇರಿದ ಎಪ್ಪತ್ತೆಂಟು ಗ್ರಾಮಗಳಿಗೆ ನಾಡಗೌಡ ಅಥವಾ ದಣ್ಣಾಯಕನಾಗಿದ್ದ. ಅವನ ಹೆಂಡತಿ ಬಚ್ಚಮ್ಮ. ಆನೆಗೊಂದಿ ಸಂಸ್ಥಾನಕ್ಕೆ ಸೇರಿದ್ದ ಬಾಡಬಂಕಾಪುರ ಕಾಗಿನೆಲೆ ಪ್ರದೇಶಕ್ಕೆ ನಾಯಕನಾಗಿದ್ದರೂ ಕೊರಗು ಅವನ ನಿತ್ಯದ ಉಣಿಸಾಗಿತ್ತು. ಕಾರಣ ಮಕ್ಕಳಿಲ್ಲದ್ದು. ವಿಜಯನಗರದ ಅರಸರು ವೈಷ್ಣವಮತ ಸ್ವೀಕರಿಸಿದ್ದರಿಂದ, ಈ ಸಾಮ್ರಾಜ್ಯದ ಒಂದು ಪ್ರದೇಶದ ಆಡಳಿತಾಧಿಕಾರಿಯಾದ ಬೀರಪ್ಪ, ಪ್ರಭುಗಳನ್ನನು ಸರಿಸಿ, ತಾನೂ ವೈಷ್ಣವ ಮತವನ್ನು ಸ್ವೀಕರಿಸಿ ತಿರುಪತಿಯ ತಿಮ್ಮಪ್ಪನನ್ನು ಮನೆ ದೇವರಾಗಿ ಮಾಡಿಕೊಂಡ. ಮಕ್ಕಳಾಗದಿದ್ದಾಗ ಆ ದೇವರಿಗೆ ಹರಕೆ ಹೊತ್ತು ಪಡೆದ ಮಗನಿಗೆ 'ತಿಮ್ಮಪ್ಪ' ಎಂದು ದೇವರ ಹೆಸರನ್ನೇ ಇಟ್ಟ. ಸಿಕ್ಕಿದ ನಿಧಿಯನ್ನು ಜನರಿಗೆ ಹಂಚಿದ್ದರಿಂದ ಕನಕ ಎನ್ನಿಸಿಕೊಂಡ ; ದಂಡನಾಯಕ ಪದವಿ ದೊರಕಿದ್ದರಿಂದ ಕನಕನಾಯಕ ಎನ್ನಿಸಿಕೊಂಡ ; ಹರಿದಾಸ ವೃತ್ತಿಗಿಳಿದು ಕನಕದಾಸ ಎನ್ನಿಸಿಕೊಂಡ."

ಪರಂಪರಾಗತವಾಗಿ ಹರಿದಾಸ ಮನೆತನಗಳಲ್ಲಿ ಉಳಿಸಿಕೊಂಡು ಬಂದ ಕನಕದಾಸರ ಈ ಜೀವನ ವಿಚಾರವನ್ನು ಪಾವಂಜೆ ಗುರುರಾಯರು, ಕಲಮುದಾನಿ ಗುರುರಾಯರು, ಸುಬೋಧರಾಮರಾಯರು, ಬೇಲೂರು ಕೇಶವದಾಸರು, ಎಸ್. ಕೆ. ರಾಮಚಂದ್ರರಾಯರು, ಬಿ. ಶಿವಮೂರ್ತಿ ಶಾಸ್ತ್ರಿಗಳು ಮೊದಲಾದವರೆಲ್ಲ ತಮ ಕೃತಿಗಳಲ್ಲಿ ದಾಖಲಿಸಿದ್ದಾರೆ. ಅಷ್ಟೇ ಅಲ್ಲದೆ ಶಾಲಿವಾಹನ ಶಕ 1834ರಲ್ಲಿ (ಕ್ರಿ ಶ. 1912) ಬ್ರಹ್ಮಶ್ರೀ ರಾಮಲಿಂಗಕವಿ ಯಕ್ಷಗಾನ ರೂಪದಲ್ಲಿ ಬರೆದಿರುವ 'ಸಚಿತ್ರ ಕನಕದಾಸರ ಚರಿತ್ರೆ' ಎಂಬ ಗ್ರಂಥದಲ್ಲೂ, 1926ರಲ್ಲಿ ಪ್ರಕಟವಾದ ದಿ|| ವಿ. ಆರ್ ಹನುಮಂತಯ್ಯ ಅವರ "ಕುರುಬರ ಚರಿತ್ರೆ" ಎಂಬ ಗ್ರಂಥದಲ್ಲೂ ಕನಕದಾಸರ ಜೀವನ ಮಾಹಿತಿ ಉಕ್ತವಾಗಿದೆ.

ಹೀಗೆ ಕನಕದಾಸರು ಹಾಲುಮತದ ಅಂಡೆಕುರುಬ ಜಾತಿಗೆ ಸೇರಿದವರು ಎಂಬ ವಿಷಯ ಈ ಎಲ್ಲ ಗ್ರಂಥಗಳಲ್ಲಿ ದಾಖಲಾಗಿದ್ದರೂ 1930ರ ಸುಮಾರಿಗೆ "ಅವರು ಕುರುಬ ಜಾತಿಗೆ ಸೇರಿದವರು ಎಂದೂ ಹೇಳುತ್ತಾರೆ; ಕೆಲವರು ಬೇಡ ಜಾತಿಗೆ ಸೇರಿದವರು ಎಂದೂ ಹೇಳುತ್ತಾರೆ" (ಕರ್ಣಾಟಕ ಕವಿಚರಿತೆ) ಎಂಬಂತಹ ದ್ವಂದ್ವ ಹೇಳಿಕೆ ಮಾಡಲು ಕಾರಣವೇನು ಎಂದು ಯೋಚಿಸಬೇಕಾಗಿದೆ. ಅಕ್ಷರ ಜ್ಞಾನವಿದ್ದ ವರ್ಗದವರು, ಸಮಾಜ ಬೆಳವಣಿಗೆಯ ಸಮಗ್ರ ಅರಿವಿಲ್ಲದಿದ್ದರೂ, ತಾವು ಸರ್ವಜ್ಞರೆನ್ನುವಂತೆ, ಕನಕನಾಯಕ ಎಂಬ ಹೆಸರಲ್ಲಿರುವ ನಾಯಕ ಶಬ್ದದ ಆಧಾರದ ಮೇಲೆ ಅವರು ನಾಯಕ (ಬೇಡ)ರಿರಬೇಕು ಎಂಬ ಊಹೆಯನ್ನು ತೇಲಿಬಿಟ್ಟದ್ದು

ಕಾರಣವಿರಬೇಕು. ಉದಾಹರಣೆಗೆ ಪೆಂಕಟರಂಗೋ ಕಟ್ಟಿಯವರು ಬಾಂಬೆ ಗೆಜೆಟಿಯರ್‌ನಲ್ಲಿ ಕುರುಬ ಜಾತಿಯ ಸಂಗೊಳ್ಳಿರಾಯ ನಾಯಕನನ್ನು 'ನಾಯಕ' ಎಂಬ ಶಬ್ದದ ಆಧಾರದ ಮೇಲೆ ಅವನು 'ಬೇಡರವನು' ಎಂದು ದಾಖಲಿಸಿರುವುದನ್ನು ಗಮನಿಸಬಹುದು. ಹೀಗೆಯೇ ಸಮಗ್ರ ಜನಾಂಗೀಯ ಅಧ್ಯಯನದ ಆಧಾರ ವಿಲ್ಲದೆಯೇ 'ಕುರುಬರು ಅಪ್ಪಟ ಶೈವರು; ಆದರೆ ಕನಕದಾಸರ ಹುಟ್ಟು ಹೆಸರು ವೈಷ್ಣವ ಮತಸೂಚಕ ತಿಮ್ಮಪ್ಪ ಎಂದಿರುವುದರಿಂದ ಅವರು ಬೇಡರಿರಬೇಕು' ಎಂಬ ಕೆಲವರ 'ಕಣಿ ಹೇಳಿಕೆ' ಕಾರಣವಾಗಿರಬೇಕು. ಉದಾಹರಣೆಗೆ ಜಿಟಗೇರಿ ಕೃಷ್ಣಶರ್ಮ ಹಾಗೂ ಹುಚ್ಚೂರಾವ್ ಬೆಂಗೇರಿಯವರು ತಮ್ಮ 'ಕನಕದಾಸರ ಭಕ್ತಿಗೀತೆಗಳು' ಗ್ರಂಥದ ಪ್ರಸ್ತಾವನೆಯಲ್ಲಿ ಇಂಥ ನಿರ್ಧಾರಕ್ಕೆ ಬಂದಿರುವುದನ್ನು ಗಮನಿಸಬಹುದು.

ಕನಕದಾಸರ ಚತುಶ್ಶತಮಾನೋತ್ಸವ ಸಂದರ್ಭದ ಹೊತ್ತಿಗೆ ಪುಸ್ತಕವನ್ನು ಹೊರತರಬೇಕೆಂಬ ತರಾತುರಿಯಲ್ಲಿ ಜಿಟಗೇರಿ ಕೃಷ್ಣಶರ್ಮರಂಥ ಘನವಿದ್ವಾಂಸರು ಖುದ್ದಾಗಿ ಕ್ಷೇತ್ರಕಾರ್ಯ ಮಾಡಿ ವಿಷಯ ಸಂಗ್ರಹ ಮಾಡಲು ಸಾಧ್ಯವಾಗದೆ, ಶಿರಸ್ತೇದಾರ್ ಎಲ್. ಜಿ. ಹಾವನೂರರ ಪತ್ರದ ಎರವಲು ಅಭಿಪ್ರಾಯದ ಆಧಾರದ ಮೇಲೆ ಇಂಥ ನಿರ್ಣಯಕ್ಕೆ ಬಂದದ್ದು ದುರ್ದೈವ. ಏಕೆಂದರೆ ಕುರುಬರಲ್ಲಿ ಶಿವನ ಆರಾಧಕರು ಹಾಗೂ ವಿಷ್ಣುವಿನ ಆರಾಧಕರು ಹೆಚ್ಚುಕಡಿಮೆ ಸಮಸಮ ವಾಗಿದ್ದಾರೆ ಎಂಬ ಸತ್ಯವನ್ನು ಪ್ರತ್ಯಕ್ಷ ಕ್ಷೇತ್ರಕಾರ್ಯದಿಂದಾಗಲೀ ಅಥವಾ 'ಕುರುಬರ ಚರಿತ್ರೆ' ಎಂಬ ಗ್ರಂಥದ ಅಧ್ಯಯನದಿಂದಾಗಲೀ ಕಂಡುಕೊಳ್ಳದೆ ಹೋದದ್ದು ಇಂಥ ಅಚಾತುರ್ಯಕ್ಕೆ ಅವಕಾಶವಾಯಿತು ಎನ್ನಬಹುದು.

ಐತಿಹಾಸಿಕವಾಗಿ ನೋಡಿದರೂ ಕನಕದಾಸರು ಬಾಳಿದ ಪ್ರದೇಶ ರಾಮಾನುಜ ಮತದ ಪ್ರಭಾವದಿಂದ ತಪ್ಪಿಸಿಕೊಂಡಿಲ್ಲ. ಕಾಗಿನೆಲೆಯ ಸೋಮೇಶ್ವರ ದೇವಸ್ಥಾನದ ಬಳಿ ನೆಟ್ಟಿರುವ ಶಿಲಾಫಲಕದ ಶಾಸನದಲ್ಲಿ (ಕ್ರಿ.ಶ. 1072) ಜಕ್ಕಗಾವುಂಡ ಎಂಬುವವನು ಗದ್ದೆಯನ್ನು "ದೇಸಿಗ ಛಾತ್ರರು, ಮಠದ ಜೀಯರು"ಗಳಿಗೆ ದಾನವಾಗಿ ಕೊಟ್ಟಿದ್ದರ ಪ್ರಸ್ತಾಪವಿದೆ ಛಾತ್ರರು ಎಂದರೆ ಶಿಷ್ಯರು, ಜೀಯರು ಎಂದರೆ ಸ್ವಾಮಿಗಳು. 'ಜೀಯರು' ಎಂಬ ಹೆಸರು ರಾಮಾನುಜರ ವಿಶಿಷ್ಟಾದ್ವೈತ ಮತದಲ್ಲಿ ಕಂಡುಬರುತ್ತದೆಯೇ ವಿನಾ ಶಂಕರಾಚಾರ್ಯರ ಅದ್ವೈತ ಮತದಲ್ಲಾಗಲೀ ಮಧ್ವಾಚಾರ್ಯರ ದ್ವೈತ ಮತದಲ್ಲಾಗಲೀ ಕಂಡುಬರುವುದಿಲ್ಲ. ವಿಶಿಷ್ಟಾದ್ವೈತ ಮತದಲ್ಲೂ 'ಜೀಯರು' ಎಂಬ ಶಬ್ದಪ್ರಯೋಗ ವಿಶಿಷ್ಟವಾಗಿ ಬಳಕೆಯಾಗುತ್ತದೆ. 8–9ನೇ ಶತಮಾನದ ಆಳ್ವಾರರು ರಚಿಸಿದ ವೈಷ್ಣವ ಭಕ್ತಿಯ ಗ್ರಂಥಗಳಿಗೆ 'ನಾಲಾಯಿರ' ಎಂದು ಹೆಸರು. ಆಳ್ವಾರರ ನಂತರ ಬಂದ ರಾಮಾನುಜಾಚಾರ್ಯರು ವಿಶಿಷ್ಟಾದ್ವೈತ ಮತವನ್ನು ಸ್ಥಾಪಿಸಿ ಶ್ರೀವೈಷ್ಣವ ಸಂಪ್ರದಾಯವನ್ನು ಬಳಕೆಗೆ ತಂದರು; ಆಳ್ವಾರರ 'ನಾಲಾಯಿರ' ಪ್ರಬಂಧಕ್ಕೆ ಮಹತ್ವಕೊಟ್ಟರು. ಆದರೆ ರಾಮಾನುಜ ಸಂಪ್ರದಾಯದಲ್ಲಿ ಎರಡು ಬಣಗಳಿವೆ. ಒಂದು ತೆಂಗಲೈ ಮತ್ತೊಂದು

ವಡಗಲ್ಯೈ. ತೆಂಗಲೆಯವರು ದೇಸಿ ನುಡಿಯಾದ ತಮಿಳಿನಲ್ಲಿರುವ ನಾಲಾಯಿರ ಪ್ರಬಂಧವನ್ನು ಮುಖ್ಯ ಶಾಸ್ತ್ರವೆಂದು ತಿಳಿಯುವವರು ಮತ್ತು ದೇಶಿನುಡಿಯಲ್ಲೇ ಬರೆದು ವ್ಯವಹರಿಸುವವರು. ವಡಗಲೆಯವರು ದೇವಭಾಷೆಯಾದ ಸಂಸ್ಕೃತದಲ್ಲಿರುವ ವೇದಶಾಸ್ತ್ರಗಳನ್ನು ಮುಖ್ಯವೆಂದು ತಿಳಿಯುವವರು ಮತ್ತು ಆ ದೇವಭಾಷೆಯಲ್ಲೇ ಬರೆದು ವ್ಯವಹರಿಸುವವರು. ವಡಗಲ್ಯೈ ಬಣದವರು ಮಠದ ಅಧಿಪತಿಗಳನ್ನು 'ಸ್ವಾಮಿಗಳ್' ಎನ್ನುವರು. ತೆಂಗಲ್ಯೈ ಬಣದವರು ಮಠದ ಅಧಿಪತಿಗಳನ್ನು 'ಜೀಯರ್' ಎನ್ನುವರು. ಆದ್ದರಿಂದ ಕಾಗಿನೆಲೆಯಲ್ಲಿ ಅಂದು ಇದ್ದದ್ದು ತೆಂಗಲ್ಯೈ ಬಣದ ಮಠ. ಕನಕದಾಸರಿಗೆ ಈ ಮತ–ಮಠದ ಸಂಪರ್ಕ ಸುಲಭವಾಗಿ ಸಿಲುಕಿರುವುದು ಸಹಜ. ಆದ್ದರಿಂದಲೇ ಮೋಹನತರಂಗಿಣಿಯಲ್ಲಿ ರಾಮಾನುಜಾಚಾರ್ಯರನ್ನೂ ತಾತಾಚಾರ್ಯರನ್ನೂ ನೆನೆದಿದ್ದಾರೆಯೇ ಹೊರತು ವ್ಯಾಸರಾಯರನ್ನಲ್ಲ. ಇದರಿಂದ ಅವರಿಗೆ ದೀಕ್ಷೆ ದೊರಕಿರುವುದು ರಾಮಾನುಜ ಮತದವರಿಂದಲೇ ವಿನಾ ಮಾಧ್ವಮತದವರಿಂದಲ್ಲ ಎಂಬುದೂ ವೇದ್ಯವಾಗುತ್ತದೆ. ವ್ಯಾಸರಾಯರು ರಾಮಾನುಜ ಮತದ ವಡಗಲ್ಯೈ ತೆಂಗಲ್ಯೈ ಮಾದರಿಯಲ್ಲಿ ವ್ಯಾಸಕೂಟದ ಜೊತೆಗೆ ದಾಸಕೂಟವನ್ನು ಕಟ್ಟಿ ಬೆಳೆಸಬೇಕೆಂದು ಕನಕದಾಸರ ಮಾರ್ಗದರ್ಶನ ಪಡೆದಿದ್ದಾರೆ ಎಂಬುದು ಹೆಚ್ಚು ಸಂಭವನೀಯವಾಗಿ ತೋರುತ್ತದೆ. ಅವರ ಆಗಮನವನ್ನೇ ಸಹಿಸದ ಕರ್ಮಠ ಮಾಧ್ವಮತ ನಿಷ್ಠ ಶಿಷ್ಯರು ಹಾಗೂ ಭಕ್ತರು, ಇನ್ನು ದೀಕ್ಷೆ ಹಾಗೂ ಅಂಕಿತ ನೀಡಲು ವ್ಯಾಸರಾಯರಿಗೆ ಅವಕಾಶ ನೀಡಿಯಾರೆ? ಕನಸು ಮನಸ್ಸಿನಲ್ಲೂ ಸಾಧ್ಯವಿಲ್ಲ. ಆದ್ದರಿಂದ ಕಾಗಿನೆಲೆಯ ಈ ರಾಮಾನುಜಮತದ ಮಠ ಕನಕದಾಸರ ಭಕ್ತಿಜೀವನದ ಗೊತ್ತುಗುರಿಗಳ ಮೇಲೆ ಬೆಳಕು ಚೆಲ್ಲುವ ಬೆಳಕಿಂಡಿಯಾಗಿರುವುದನ್ನು ಬೆಟಗೇರಿಯವರು ಗಮನಿಸದಿರುವುದು ಆಶ್ಚರ್ಯವನ್ನು ಉಂಟುಮಾಡುತ್ತದೆ. ಇಷ್ಟೇ ಅಲ್ಲ, 1108 ರಲ್ಲಿ ತನ್ನ ಅಣ್ಣನಾದ ಬಲ್ಲಾಳ ತೀರಿಹೋದಾಗ ಸಿಂಹಾಸನವೇರಿದ ವಿಷ್ಣುವರ್ಧನ 1136 ರಲ್ಲಿ ಬಂಕಾಪುರವನ್ನೂ 1141 ರಲ್ಲಿ ಹಾನುಗಲ್ಲನ್ನೂ ವಶಪಡಿಸಿಕೊಂಡದ್ದು ಮಾತ್ರವಲ್ಲ, ಬಂಕಾಪುರವನ್ನು ತನ್ನ ಉಪರಾಜಧಾನಿಯನ್ನಾಗಿ ಮಾಡಿಕೊಂಡು ಅಲ್ಲಿ ಹೆಚ್ಚು ಕಾಲ ಇರುತ್ತಿದ್ದ ಎಂದು ಇತಿಹಾಸದಿಂದ ತಿಳಿದು ಬರುತ್ತದೆ. ವೈಷ್ಣವ ಮತಾವಲಂಬಿಯಾದ ವಿಷ್ಣುವರ್ಧನನ ಆಡಳಿತ ಕಾಲದಲ್ಲಿ ಜನಸಾಮಾನ್ಯರಲ್ಲದಿದ್ದರೂ ಅಧಿಕಾರವರ್ಗದಲ್ಲಿ ಕೆಲವರಾದರೂ ವೈಷ್ಣವಮತ ಸ್ವೀಕರಿಸುವುದಿಲ್ಲವೆ?

ವಿಜಯನಗರದ ಸಂಗಮವಂಶದ ವಿರೂಪಾಕ್ಷ ಶ್ರೀವೈಷ್ಣವ ಮತವನ್ನು ಸ್ವೀಕರಿಸಿದ ಮೇಲೆ, ಮುಂದಿನವರು ಅದನ್ನೇ ಮುಂದುವರಿಸಿಕೊಂಡು ಹೋದಾಗ ವಿಜಯನಗರ ಸಾಮ್ರಾಜ್ಯದ ಮಾಂಡಲಿಕ-ದಣ್ಣಾಯಕ ಬೀರಪ್ಪ ತಾನೂ ವೈಷ್ಣವ ಮತ ಸ್ವೀಕರಿಸಿ ತನ್ನ ಮಗನಿಗೆ ತಿಮ್ಮಪ್ಪನ ಹೆಸರಿಟ್ಟಿದ್ದರಲ್ಲಿ ನಂಬಲಾರದಂಥದು ಏನಿದೆ? ಪ್ರಭು ಮರ್ಜಿಯನ್ನು ಕೈಕೆಳಗಿನ ಅಧಿಕಾರಿಗಳು ಅನುಸರಿಸುವುದಿಲ್ಲವೆ?

'ಕನಕದಾಸರ ಜೀವನ ಚರಿತ್ರೆ ಮತ್ತು ಪದಗಳು' ಗ್ರಂಥಕರ್ತರಾದ ಕಲಮದಾನಿ ಗುರುರಾಯರು ಪ್ರಸ್ತಾವನೆಯಲ್ಲಿ (ಪು 18) ಹೇಳಿರುವ ಕೆಳಗಿನ ಮಾತುಗಳು ಗಮನಾರ್ಹ : "ವಿಜಯನಗರದ ಅರಸರು ರಾಮಾನುಜ ಮತವನ್ನು ಸ್ವೀಕರಿಸಿದ ಮೇಲೆ ಬಾಡದ ಬೀರಪ್ಪನು ಮೊದಲು ಶೈವಪಂಥೀಯನಾಗಿದ್ದರೂ ವೈಷ್ಣವ ತತ್ತ್ವ ಪ್ರಣಾಲಿಗೆ ಮನಸೋತು ತಿರುಪತಿಯ ಶ್ರೀನಿವಾಸದೇವರ ಭಕ್ತನಾದನು.... ಕನಕದಾಸರ ವಂಶಜರೆಂದೂ ಅವನಿಗೆ ಸಂಬಂಧಿಕರೆಂದು ಹೇಳಿಕೊಳ್ಳುವ ಕುರುಬ ಜಾತಿಯ ಮನೆತನಗಳೆಲ್ಲವೂ ಈಗಲೂ ಕಾಗಿನೆಲ್ಲಿ, ಕದರ ಮಂಡಲಗಿ, ಕನಕಗಿರಿ ಸುತ್ತಲೂ ಹಳ್ಳಿಗಳಲ್ಲಿ ಇದ್ದಾರೆ. ಅವರೆಲ್ಲರೂ ಊರ್ಧ್ವಪುಂಡ್ರ ನಾಮವನ್ನು ಧರಿಸುವರು, ರಾಮಾನುಜಾಚಾರ್ಯ ಮಠದ ಪೀಠಸ್ಥರಿಂದ ಮುದ್ರೆಯನ್ನು ಸ್ವೀಕರಿಸುವರು" ಕಲಮದಾನಿ ಗುರುರಾಯರಿಗೆ ಗೊತ್ತಾದ ವಾಸ್ತವ ಸತ್ಯ ಬೆಟಗೇರಿಯವರಿಗೂ ಗೊತ್ತಾಗುತ್ತಿತ್ತು ಖುದ್ದು ಕ್ಷೇತ್ರಕಾರ್ಯ ನಡೆಸಿದ್ದರೆ ಎಂಬುದು ಇದರಿಂದ ಸೂಚಿತವಾಗುತ್ತದೆ. ಅಥವಾ 1926ರಲ್ಲೇ ಪ್ರಕಟವಾಗಿದ್ದ 'ಕುರುಬರ ಚರಿತ್ರೆ' ಎಂಬ ಗ್ರಂಥವನ್ನಾದರೂ ಅವರು ಅವಲೋಕಿಸಿದ್ದರೆ, ಕುರುಬರೆಲ್ಲ ಅನಾಮತ್ತು ಶೈವರು ಎಂಬ ತಪ್ಪು ಕಲ್ಪನೆ ಹೋಗುತ್ತಿತ್ತು ; ತಪ್ಪು ತೀರ್ಮಾನ ತಪ್ಪುತ್ತಿತ್ತು. ಆ ಕೃತಿಯಲ್ಲಿ ಕುರುಬರ ಬೆಡಗುಗಳನ್ನು ಹೇಳುವಾಗ ದಾಸ ಅಥವಾ ದಾಸರಿ ಕುರುಬರನ್ನು ಹೆಸರಿಸಿದ್ದಾರೆ. ಅಷ್ಟೇ ಅಲ್ಲ ಕುರುಬರಲ್ಲಿರುವ ವೈಷ್ಣವ ಆಚಾರ ವಿಚಾರಗಳನ್ನು ವಿವರಿಸಿದ್ದಾರೆ. ರಂಗಸ್ವಾಮಿ ಕುರುಬರ ಕುಲದೇವರಾಗಿರುವುದನ್ನು ಅವರು ಹೆಸರಿಸಿದ್ದಾರೆ. ಲಕ್ಷ್ಮೀದೇವಿ ಅವರ ಹೆಣ್ಣು ದೇವರಾಗಿರುವುದನ್ನೂ ಸಹ ಹೆಸರಿಸಿದ್ದಾರೆ.

ಡಾ. ಜಿ. ವರದರಾಜರಾವ್ ಅವರು 'ಕನಕಕರಣ' ಎಂಬ ಗ್ರಂಥದಲ್ಲಿ ಬರೆದಿರುವ 'ಕನಕದಾಸರ ಕಾಲ, ದೇಶ, ಮತ ಮತ್ತು ಜೀವನ' ಎಂಬ ಲೇಖನದಲ್ಲಿ ಪರವಿರುದ್ಧ ಅಭಿಪ್ರಾಯಗಳನ್ನೆಲ್ಲ ಕಲೆ ಹಾಕಿ ಕೊನೆಯಲ್ಲಿ ಹೀಗೆ ಹೇಳಿದ್ದಾರೆ— "ಬೆಟಗೇರಿ ಕೃಷ್ಣಶರ್ಮ ಮತ್ತು ಬೆಟಗೇರಿ ಹುಚ್ಚೂರಾಯರು, ಎಲ್. ಜಿ. ಹಾವನೂರರ ಮೂಲಕ ಕನಕದಾಸರ ಅನುಯಾಯಿಗಳನ್ನು ಕಂಡು, ಅವರು ನಾಯಕರಿರಬಹುದೆಂದೂ, ಅವರು ಒಂದು ಕಾಲಕ್ಕೆ ಶ್ರೀರಾಮಾನುಜ ಸಂಪ್ರದಾಯದ ಪ್ರಭಾವಕ್ಕೆ ಒಳಗಾಗಿರಬಹುದೆಂದೂ ಭಾವಿಸುವ ಸಂಗತಿ ನೂತನವೂ ವಿಚಾರಾರ್ಹವೂ ಆದುದು. ಬೇಲೂರು ಕೇಶವದಾಸರೂ, ಎಸ್. ಕೆ. ರಾಮಚಂದ್ರರಾಯರೂ ಇದೇ ವಿಚಾರವನ್ನು ಪ್ರಸ್ತಾಪಿಸಿದ್ದರೂ, ಅವರು, ಕುರುಬರೂ ಸಹ ಶ್ರೀ ರಾಮಾನುಜ ಸಂಪ್ರದಾಯಕ್ಕೆ ಒಳಗಾದರೆಂದು ನಿರೂಪಿಸಿರುವರು. ಇದಕ್ಕೆ ಏನು ಆಧಾರವೆನ್ನುವುದನ್ನು ಈ ಮಹನೀಯರು ಸ್ಪಷ್ಟವಾಗಿ ಸೂಚಿಸಿದ್ದರೆ, ಪ್ರಕೃತ ಸಮಸ್ಯೆ ಪರಿಹಾರವಾಗಬಹುದಿತ್ತು."

ಈ ವಿದ್ವಾಂಸರು, ಆನೆಯಂಥದೂ ಮುಗ್ಗರಿಸುತ್ತದೆ ಎಂಬ ಗಾದೆ ಮಾತಿಗೆ

ಅನುಗುಣವಾಗಿ, "ಎಲ್. ಜಿ. ಹಾವನೂರರ ಮೂಲಕ ಕನಕದಾಸರ ಅನುಯಾಯಿಗಳನ್ನು ಕಂಡು" ಎಂಬ ತಪ್ಪು ಗ್ರಹಿಕೆಯ ಮಾತಿನಿಂದ ಮುಗ್ಗರಿಸಿದ್ದಾರೆ. ಏಕೆಂದರೆ ಅನುಬಂಧ ಐದರಲ್ಲಿ ಎಲ್. ಜಿ. ಹಾವನೂರರ ಪತ್ರವನ್ನು ಪ್ರಕಟಿಸುವ ಮೊದಲು ಸಂಪಾದಕರು ಬರೆದಿರುವ ಟಿಪ್ಪಣಿ ಹೀಗಿದೆ—"ನಾವು ಕನಕದಾಸರ ಭಕ್ತಿಗೀತೆಗಳ ಸಂಪಾದನೆಯ ಕಾರ್ಯ ನಡೆಯಿಸಿರುವುದನ್ನು ಕೇಳಿ, ತಾವಾಗಿಯೇ ಬಂದು ನಮ್ಮನ್ನು ಕಂಡು, ಕನಕದಾಸರ ಜೀವನಕ್ಕೆ ಸಂಬಂಧಿಸಿದ ಅನೇಕ ಸಂಗತಿಗಳನ್ನು ಒದಗಿಸಿಕೊಟ್ಟರು. ಈ ವಿಷಯದಲ್ಲಿ ಶ್ರೀ ಹಾವನೂರ ಅವರು ಅನೇಕ ಸಲ ನಮ್ಮೊಂದಿಗೆ ಪತ್ರವ್ಯವಹಾರ ನಡೆಯಿಸಿರುವರು. ಕನ್ನಡಿಗರ ಅವಗಾಹನೆಗಾಗಿ ಅವರು ನಮಗೆ ಬರೆದ ಒಂದು ಪತ್ರವನ್ನು ಇಲ್ಲಿ ಪ್ರಕಟಿಸಲಾಗಿದೆ."

ಅಂದರೆ ಪತ್ರದ ಮೂಲಕ ಹಾಗೂ ಹಾವನೂರರ ಮಾತಿನ ಮೂಲಕ ತಿಳಿದ ಸಂಗತಿಗಳನ್ನು ಉಲ್ಲೇಖಿಸಿ ತೀರ್ಮಾನಕ್ಕೆ ಬಂದರೇ ಹೊರತು, ಖುದ್ದಾಗಿ ಕನಕದಾಸರ ಅನುಯಾಯಿಗಳನ್ನು ಕಂಡು ಸತ್ಯಸಂಗತಿಯನ್ನು ತಿಳಿದುಕೊಳ್ಳಲಿಲ್ಲ ಎಂಬುದು ವಿದಿತವಾಗುತ್ತದೆ. ಹೀಗಿರುವಾಗ ವರದರಾಜರಾಯರು ವ್ಯಾಮರೆವಿನ ಮಂಪರದಲ್ಲಿ "ಕನಕದಾಸರ ಅನುಯಾಯಿಗಳನ್ನು ಕಂಡು" ಎಂದು ಬರೆದು ಮುಗ್ಗರಿಸಿದ್ದಾರೆ. ಅಷ್ಟೇ ಅಲ್ಲ ಈ ಮಂಪರದ ಮುಗ್ಗರಿಸುವಿಕೆ ಇನ್ನೂ ಮುಂದುವರಿದಿದೆ— "ನಾಯಕರು ಒಂದು ಕಾಲಕ್ಕೆ ಶ್ರೀ ರಾಮಾನುಜ ಸಂಪ್ರದಾಯದ ಪ್ರಭಾವಕ್ಕೆ ಒಳಗಾಗಿರಬಹುದೆಂದು ಭಾವಿಸುವ ಸಂಗತಿ ನೂತನವೂ ವಿಚಾರಾರ್ಹವೂ ಆದುದು" ಎಂದು ಕೊಂಡಾಡುವ ಇವರಂ, ಬೇಲೂರು ಕೇಶವದಾಸರೂ ಎಸ್. ಕೆ. ರಾಮಚಂದ್ರರಾಯರೂ "ಕುರುಬರೂ ಸಹ ರಾಮಾನುಜ ಸಂಪ್ರದಾಯಕ್ಕೆ ಒಳಗಾದರು" ಎಂದು ಹೇಳಿದ ಸಂಗತಿಯನ್ನು ನೂತನವೂ ವಿಚಾರಾರ್ಹವೂ ಎನ್ನುವುದಿಲ್ಲ; ಬದಲಾಗಿ 'ಇದಕ್ಕೆ ಆಧಾರವೇನು ಎಂಬುದನ್ನು ತಿಳಿಸಿಲ್ಲ' ಎನ್ನುತ್ತಾರೆ. ಇದಕ್ಕೆ ನಗಬೇಕೆ, ಅಳಬೇಕೆ? ನಾಯಕರು ವೈಷ್ಣವರಾದರು ಎಂಬುದಕ್ಕೆ ಆಧಾರ ಬೇಡ? ಕುರುಬರು ವೈಷ್ಣವರಾದರು ಎಂಬುದಕ್ಕೆ ಆಧಾರಬೇಕು! ಬಹುಶಃ ಇದು ವ್ಯಾಮರೆವಿನಿಂದಾದ ಪ್ರಮಾದ ಎಂದು ಸಮಾಧಾನಪಟ್ಟುಕೊಳ್ಳಬೇಕಾಗುತ್ತದೆ ಅಷ್ಟೆ.

೨

'ಕವಿ ಕನಕದಾಸರು' ಎಂಬ ಕೃತಿಯನ್ನು ಬರೆದಿರುವ ಕಟ್ಟಿ ಶೇಷಾಚಾರ್ಯರು ನಿಜಕ್ಕೂ ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಶ್ರೀವೈಷ್ಣವ ಮತದ ಪ್ರಭಾವ ಕನಕದಾಸರ ಮೇಲೆ ಪ್ರಮುಖವಾಗಿದ್ದರೂ, ಕೊನೆಕೊನೆಯಲ್ಲಿ ಮಾಧ್ವಮತದ ಪ್ರಭಾವಕ್ಕೂ ಒಳಗಾಗಿದ್ದಾರೆ ಎಂಬುದನ್ನು ಗ್ರಂಥಾಂತರ್ಗತ ಆಧಾರಗಳಿಂದ ಸಾದರಪಡಿಸಿದ್ದಾರೆ. ಜಾತಿಗೆ ಸಂಬಂಧಪಟ್ಟಂತೆ ಪರಂಪರಾಗತ ನಂಬಿಕೆಯ 'ಅಂಡೆ ಕುರುಬ

ಜಾತಿಗೆ ಸೇರಿದ ಬೀರಪ್ಪ ಬತ್ತ್ಯೆಮ್ಮರ ಮಗ' ಎಂಬುದನ್ನು ಹೇಳಿದ್ದಾರೆ. ಮತ್ತೊಂದು ಕಡೆ "ದಾಸೋ ದಿಗಂಬರನು ತನ್ನ ಸಂತವಿಜಯದಲ್ಲಿ 'ವಿಠ್ಠಲ ಪುರಂದರ (ಪುರಂದರದಾಸ)ರಿಗೆ ಕನಕದಾಸನೆಂಬ ಒಬ್ಬ ಹೊಲೆಯ ಶಿಷ್ಯನಿದ್ದನು" ಎಂದು ಹೇಳಿರುವುದನ್ನು ದಾಖಲಿಸಿದ್ದಾರೆ. ಆದರೆ ಕೆಲವು ಕೀರ್ತನೆಗಳಲ್ಲಿ ಬರುವ 'ಕುರುಬ' ಶಬ್ದದಿಂದ ಕುರುಬರು ಎಂದು ತಿಳಿಯಬಾರದು ಎಂದು ತಾಕೀತು ಮಾಡಿದ್ದಾರೆ. ಅದು ಪೂರ್ವಾಗ್ರಹಪೀಡಿತ ಧೋರಣೆಯಾಗಿ ಕಂಡುಬರುತ್ತದೆ ಉದಾಹರಣೆಗೆ "ದಾಸದಾಸರ ಮನೆಯ ದಾಸಿಯರ ಮಗ ನಾನು! ಸಾಸಿರ ನಾಮದೊಡೆಯ ರಂಗಯ್ಯನ ಮನೆಯ" ಎಂಬ ಕೀರ್ತನೆಯ ಅಂತ್ಯದ ನುಡಿಯನ್ನು—

> ಹಲವು ದಾಸರ ಮನೆಯ ಹೊಲೆಯ ದಾಸ ನಾನಯ್ಯ
> ಕುಲವಿಲ್ಲದ ದಾಸ ಕುರುಬ ದಾಸ
> ಛಲದಿ ನಿನ್ನ ಭಜಿಸುವರ ಮನೆಯಮಾದಿಗ ದಾಸ
> ಸಲೆ ಮುಕ್ತಿ ಪಾಲಿಸೆನ್ನೊಡೆಯ ಕೇಶವನೆ

ಉದಾಹರಿಸಿ, ಅಲ್ಲಿ ಬರುವ 'ಕುರುಬದಾಸ' ಎಂಬುದನ್ನು ಕುರಿತು ಹೀಗೆ ವ್ಯಾಖ್ಯಾನಿಸಿದ್ದಾರೆ—"ಇಲ್ಲಿ ದಾಸರು ತಮಗೆ 'ಕುರುಬದಾಸ' ಎಂದು ಸಂಭೋಧಿಸಿಕೊಂಡಿರುವುದರಿಂದ, ಅವರು, ಕುರುಬ ಕುಲಕ್ಕೆ ಸೇರಿದವರೆಂದು ತಿಳಿಯಕೂಡದು. ಕುರುಬ ಶಬ್ದವನ್ನು ನಾಗರಿಕತೆಯನ್ನರಿಯದ ಹುಂಬ ಎಂಬರ್ಥದಲ್ಲಿ ಉಪಯೋಗಿಸಲಾಗಿದೆ."

ಕೀರ್ತನೆಯನ್ನು—ಅದರ ಎಲ್ಲ ಒಳಪದರುಗಳನ್ನು, ನಾಡಿಮಿಡಿತವನ್ನು ಸೂಕ್ಷ್ಮವಾಗಿ ಕೂಲಂಕಷವಾಗಿ ನೋಡಿ ಪರಿಭಾವಿಸಿದ್ದರೆ ಇಂಥ ಹೇಳಿಕೆಯನ್ನು ನೀಡುವ ಅಗತ್ಯವೇ ಬೀಳುತ್ತಿರಲಿಲ್ಲ ಎಂಬುದು ಸತ್ಯ. ಒಂದನೆಯ ನುಡಿಯಲ್ಲೇ 'ಮಂಕುದಾಸ' 'ಮರುಳುದಾಸ' ಎಂಬ ಮಾತುಗಳ ಮೂಲಕ 'ನಾಗರಿಕತೆಯನ್ನು ಅರಿಯದ ಹುಂಬ' ಎಂಬುದನ್ನು ದಾಖಲಿಸಿರುವಾಗ, ಮತ್ತೊಮ್ಮೆ ಮೂರನೆಯ ನುಡಿಯಲ್ಲಿ ಕನಕದಾಸರು ಅದನ್ನೇ ಹೇಳಿದ್ದಾರೆ ಎನ್ನುವುದು ಸೂಕ್ಷ್ಮವಿಮರ್ಶೆಯ ಅಭಾವದ ಪ್ರತೀಕ.

ಮೊದಲ ಎರಡು ನುಡಿಗಳಲ್ಲಿ ಬರುವ ಮಂಕುದಾಸ, ಮರಳುದಾಸ, ಕೀಳುದಾಸ, ಮೂಳದಾಸ, ಬಡದಾಸ, ಅಡಿದಾಸ ಎಂಬ ಶಬ್ದಗಳು ಜಾತಿಸೂಚಕವಾಗಿಲ್ಲ. ಆದರೆ ಮೂರನೆಯ ನುಡಿಯಲ್ಲಿ ಬರುವ ಹೊಲೆಯದಾಸ, ಕುರುಬದಾಸ, ಮಾದಿಗದಾಸ ಎಂಬ ಶಬ್ದಗಳು ಜಾತಿಸೂಚಕವಾಗಿವೆ ಎಂಬುದನ್ನು ಸೂಕ್ಷ್ಮ ವಿಮರ್ಶನ ಜ್ಞಾನವಿದ್ದವರು ಗಮನಿಸದೆ ಇರುವುದಿಲ್ಲ. ಕುರುಬದಾಸ ಎನ್ನುವುದಕ್ಕೆ ತಮ್ಮ ಮೂಗಿನ ನೇರಕ್ಕೆ ಅರ್ಥ ಕಲ್ಪಿಸಿದ ಕಟ್ಟಿ ಶೇಷಾಚಾರ್ಯರು ಹೊಲೆಯದಾಸ ಹಾಗೂ ಮಾದಿಗದಾಸ ಎಂಬವುಗಳಿಗೆ ಅರ್ಥ ಕಲ್ಪಿಸದಿರುವುದು ಆಶ್ಚರ್ಯ! ಅಷ್ಟೇ ಅಲ್ಲ "ಕುಲವಿಲ್ಲದದಾಸ ಕುರುಬದಾಸ" ಎಂಬ ವಿಶೇಷ ಅಭಿವ್ಯಕ್ತಿ ಗಮನಾರ್ಹ. ಕುಲವಿಲ್ಲದ ದಾಸ ಎಂಬುದನ್ನು ಹೊಲೆಯದಾಸ ಎಂಬುದರ ಜೊತೆಯಾಗಲೀ ಅಥವಾ

ಮಾದಿಗದಾಸ ಎಂಬುದರ ಜೊತೆಯಾಗಲೀ ತರದೆ, ಕುರುಬದಾಸ ಎಂಬುದರ ಜೊತೆ ತಂದಿರುವುದು ಧ್ವನಿಪೂರ್ಣ. ಅಂದರೆ ಆಕಸ್ಮಿಕವಾಗಿ ಕುರುಬಜಾತಿಯಲ್ಲಿ ಹುಟ್ಟಿದ್ದರೂ ನಾನು ಕುಲಾತೀತ ಎಂಬ ಕನಕದಾಸರ ಸ್ಪಷ್ಟ ಧೋರಣೆ ಎದ್ದು ಕಾಣುತ್ತದೆ.

ಇನ್ನು "ನಾವು ಕುರುಬರು, ನಮ್ಮ ದೇವರು ಬೀರಯ್ಯ, ಕಾವ ನಮ್ಮಜ್ಜ ನರಕುರಿ ಹಿಂಡುಗಳ" ಎಂಬ ಕೀರ್ತನೆಯನ್ನು ಉದಾಹರಿಸಿ ಹೀಗೆ ಟಿಪ್ಪಣಿ ಬರೆದಿದ್ದಾರೆ—"ಈ ಪದದಲ್ಲಿ ಮನುಜರನ್ನು ಕುರಿ ಹಿಂಡಿಗೆ ಹೋಲಿಸಿ ದಾಸರು ಹಾಡಿದ್ದಾರೆ. ಇದರಿಂದ ದಾಸರು ಕುರುಬರೆಂದು ಅನ್ನಲಾಗದು. ಬಾಯಿಬಲ್ಲಿನಲ್ಲಿ ಭಕ್ತರಿಗೆ ಕುರಿಗಳೆಂದು ಕರೆದು ಪಾದ್ರಿಗಳಿಗೆ ಕುರಿ ಕಾಯುವವರೆಂದು ಅನ್ನುವುದುಂಟು. ಅದರಂತೆ ಇಲ್ಲಿಯೂ ದಾಸರು ದೇವರನ್ನು ಕುರಿ ಕಾಯುವವನೆಂದು ಆರೋಪಿಸಿ ಜನರು ಕುರಿಗಳೆಂದು ಅನ್ವಯಿಸಿರುವರು."

ತಮ್ಮ ಕೃತಿಯಲ್ಲಿ ಉಳಿದೆಲ್ಲ ವಿಷಯಗಳ ಬಗ್ಗೆ ಮುಕ್ತ ಮನಸ್ಸಿನಿಂದ ಎಲ್ಲ ಮಗ್ಗುಲುಗಳನ್ನು ಹಿಟ್ಟಾಗಿ ಹಿಸುಕಿ ಸತ್ಯಸಂಗತಿಯನ್ನು ಕಾಣಲೆಳಸುವ ಕಟ್ಟಿಶೇಷಾಚಾರ್ಯರು ಈ ಒಂದು ವಿಷಯದಲ್ಲಿ ಮಾತ್ರ ಪೂರ್ವಾಗ್ರಹದಿಂದ ಕೂಡಿ ಬರೆಯುತ್ತಿದ್ದಾರೆ ಎಂಬುದು ವಿದಿತವಾಗುತ್ತದೆ. ಇಲ್ಲದಿದ್ದರೆ ವರ್ತಮಾನ ಕಾಲದಲ್ಲಿ ನಿಂತು ಭೂತಕಾಲದ ಆ ಚಾರಿತ್ರಿಕ ಹಿನ್ನೆಲೆಯಲ್ಲಿ, ಅವರು ಬದುಕಿದ ಕಾಲದೇಶದಲ್ಲಿ, ಮೇಲು ವರ್ಗದವರ ಚುಚ್ಚುಮಾತುಗಳಿಂದ ನೊಂದು ಬೆಂದು ಬಸವಳಿದ ಸನ್ನಿವೇಶ ಸಂದರ್ಭದಲ್ಲಿ ಪ್ರಸ್ತುತ ಕೀರ್ತನೆಯನ್ನಿಟ್ಟು ವಸ್ತುನಿಷ್ಠವಾಗಿ ಅದರ ಉಗಮದ ಹಿನ್ನೆಲೆಯನ್ನು ಅರ್ಥಮಾಡಿಕೊಳ್ಳದೆ ಹೀಗೆ ಮೇಲುಮೇಲಿನ ತೇಲು ವ್ಯಾಖ್ಯಾನಕ್ಕಿಳಿಯುತ್ತಿರಲಿಲ್ಲ. ಸೂಳೆಯೊಬ್ಬಳ ಮಗ ಸ್ಕೂಲಿಗೆ ಹೋದಾಗ ಕಿಡಿಗೇಡಿ ಹುಡುಗರು 'ನಿಮ್ಮಪ್ಪನ ಹೆಸರೇನು?' ಎಂದು ಮತ್ತೆ ಮತ್ತೆ ಕೇಳಿ, ನೋಯಿಸಿ ಖುಷಿಪಡುವಂತೆ, ಕುರುಬರವನು ಎಂದು ಗೊತ್ತಿದ್ದರೂ ಮಡಿವಂತರು "ನೀನು ಯಾತರವನು?" (ಯಾವ ಕುಲದವನು?) ಎಂದು ಮತ್ತೆ ಮತ್ತೆ ಕೇಳಿ ಕಾಡತೊಡಗಿದಾಗ ಕನಕದಾಸರು "ಯಾತರವನೆಂದುಸುರಲಿ ಜಗನ್ನಾಥ ಮಾಡಿದ ಒಂದು ನರರೂಪವಯ್ಯ" ಎಂಬ ಹಾಡಿನ ಮೂಲಕ, ನಿಮ್ಮನ್ನು ಸೃಷ್ಟಿಸಿದ ದೇವರೇ ನನ್ನನ್ನು ಸೃಷ್ಟಿಸಿದ ಎಂದು ಸೂಚ್ಯವಾಗಿ ಹೇಳಿದರು; ಜಾತಿಯನ್ನು ಹೇಳದೆ ಮನುಷ್ಯ ಜಾತಿ ಎಂದರು. ಆದರೆ ಆ ಹಿಂಸಾನಂದ ಶ್ರೇಷ್ಠಸಂಜಾತರಿಗೆ ಅಂಥ ಉತ್ತರ ತೃಪ್ತಿಕೊಡಲಿಲ್ಲ. ಅವರ ಬಾಯಿಂದ 'ಕುರುಬ' ಎಂದು ಹೇಳಿಸಿ, ಬಳಿಕ ದಡ್ಡ ಕುರುಬ, ಹೆಡ್ಡ ಕುರುಬ ಎಂದು ಗೇಲಿ ಮಾಡಿ ಕೇಕೆ ಹಾಕಬೇಕಿತ್ತು. ಆ ಜನರ ಅಂತರಂಗದ ಮರ್ಮವನ್ನರಿತ ಕನಕದಾಸರು 'ಗೌಡ ಮಾಡದ್ದು, ಗೌಡನ ಕರಿಕಂಬಳಿ ಮಾಡ್ತದ?' ಎಂಬ ಗಾದೆ ಮಾತಿನ ಅರ್ಥದಂತೆ, 'ಹುಟ್ಟಿದ ಜಾತಿಯಿಂದ ಒಬ್ಬ ಶ್ರೇಷ್ಠನೂ ಆಗಲಾರ, ಕನಿಷ್ಠನೂ ಆಗಲಾರ; ವ್ಯಕ್ತಿಯು ಸಾಧನೆಸಿದ್ಧಿಯಿಂದ ಶ್ರೇಷ್ಠಕನಿಷ್ಠ ನಿರ್ಧಾರವಾಗುತ್ತದೆ.

ಆದ್ದರಿಂದ ಹೆಡ್ಡ ಗುರುಬ, ದಡ್ಡ ಗುರುಬ ಎಂದು ಆಡಿಕೊಳ್ಳುತ್ತಾರೆ ಎಂದು ನಾನೇಕೆ ಭಯಪಡಬೇಕು ? ಹಣೆವಟ್ಟದ ದಿಣ್ಣೆ ಕಡಿದು, ಆಳುವಟ್ಟದ ಹಳ್ಳವಮುಚ್ಚುವ ತಾಕತ್ತಿರುವ ಗೌಡ ನಾನು ; ಜಾತಿ ಎನ್ನುವುದು ನಾನು ಹೊದ್ದಿರುವ ಕಂಬಳಿ ; ಇದು ದಿಣ್ಣೆಯನ್ನು ಕಡಿಯಲೂ ಆರದು, ಹಳ್ಳವನ್ನು ಮುಚ್ಚಲೂ ಆರದು ; ಆದ್ದರಿಂದ ಆ ಕಂಬಳಿ–ಕರಿಕಂಬಳಿ ಎಂದೋ, ಬಿಳಿಕಂಬಳಿ ಎಂದೋ ಅಥವಾ ಸಣ್ಣಗಂಬಳಿ ಎಂದೋ, ಉಚ್ಚುಗಂಬಳಿ ಎಂದೋ ಹೇಳುವುದರಿಂದ ನನ್ನ ಸತ್ತ್ವಕ್ಕೆ ಧಕ್ಕೆ ಬರುವುದಿಲ್ಲ' ಎಂದು ಸೆಡ್ಡು ಹೊಡೆದು ನಿಂತು ಕಿಡಿಗೇಡಿಗಳ ಸದ್ದಡಗುವಂತೆ ಏರುದನಿಯಲ್ಲೇ ಹಾಡಿದ್ದಾರೆ :

ನಾವು ಕುರುಬರು, ನಮ್ಮ ದೇವರು ಬೀರಯ್ಯ
ಕಾವ ನಮ್ಮಜ್ಜ ನರಕುರಿ ಹಿಂಡುಗಳ ।ಪ।

ಮಡಿವಂತ ಮಾಧ್ವಮತನಿಷ್ಠ ಶಿಷ್ಯರು ತಾವು ಶ್ರೇಷ್ಠರೆಂದೂ, ಕುರುಬನಾದ ತನ್ನನ್ನು ಕನಿಷ್ಠನೆಂದೂ ಹೀಗಳೆದು ಚುಚ್ಚುತ್ತಿದ್ದ ಶೂದ್ರಬ್ರಾಹ್ಮಣ ಸಂಘರ್ಷವನ್ನು ಕನಕದಾಸರು 'ರಾಮಧಾನ್ಯ ಚರಿತ್ರೆ' ಗ್ರಂಥದಲ್ಲಿ ರಾಗಿ ಮತ್ತು ನೆಲ್ಲು ಧಾನ್ಯಗಳ ರೂಪಕದಲ್ಲಿ ಅಡಕಮಾಡಿ ಧ್ವನಿಪೂರ್ಣವಾಗಿ ಹೇಳಿದಂತೆಯೇ, ಇಲ್ಲಿಯೂ ತಮ್ಮ ವೈಯಕ್ತಿ ಜೀವನದ ಎಳೆಯನ್ನು ಥಳುಕು ಹಾಕಿ ಧ್ವನಿಪೂರ್ಣವಾಗಿ ಹಾಡಿರುವ ಸತ್ಯವನ್ನು ಗ್ರಹಿಸುವುದರಲ್ಲಿ ಕಟ್ಟಿಶೇಷಾಚಾರ್ಯರು ಸೋತಿರುವುದು ಸುಸ್ಪಷ್ಟ.

ಅವರೆಂದಂತೆ ಇದು ರೂಪಕನಿಷ್ಠ ಕೀರ್ತನೆಯೇ ; ಅಲ್ಲ ಎಂದು ಯಾರೂ ಹೇಳುವುದಿಲ್ಲ. ಆದರೆ ರೂಪಕಾರ್ಥಕ್ಕೆ ಜನ್ಮಕೊಟ್ಟು, ಅದು ಕುಳಿತುಕೊಳ್ಳಲು ತನ್ನ ಹೊಟ್ಟೆಯಲ್ಲೇ ಜಾಗ ಮಾಡಿಕೊಟ್ಟಿರುವ ಕನಕದಾಸರ ವೈಯಕ್ತಿಕ ಜೀವನದ ಎಳೆಯ ಮಾತೃಮೂಲವನ್ನು ಮರೆತಿದ್ದಾರೆ ಎಂಬುದೇ ಆಕ್ಷೇಪಣೆ. ಕಟ್ಟಿಶೇಷಾಚಾರ್ಯರಿಗೆ ರೂಪಕದ 'ಮರಿ' ಮಾತ್ರ ಕಾಣುತ್ತದೆ. ಆದರೆ ಆ ಮರಿಗೆ ತನ್ನ ಹೊಟ್ಟೆಯಲ್ಲಿ ಜಾಗ ಕೊಟ್ಟಿರುವ ಕಾಂಗರು 'ಮಾತೃ' ಕಾಣುತ್ತಿಲ್ಲ! ಕೀರ್ತನೆಯ 'ಅದ್ವೈತ ಅರ್ಧನಾರೀಶ್ವರಾಕೃತಿ' ಕಟ್ಟಿಶೇಷಾಚಾರ್ಯರ ದ್ವೈತದೃಷ್ಟಿಗೆ ದಕ್ಕಿಲ್ಲ!

ದೇವರು 'ಕುರುಬ' ಎಂಬ ರೂಪಕದಲ್ಲಿ ಅಡಕವಾಗಿದೆ ಎಂದು ಒಪ್ಪಿಕೊಂಡ ಮೇಲೆ, ಮತ್ತೆ 'ನಮ್ಮ ದೇವರು ಬೀರಯ್ಯ' ಬರುವುದು ಅನವಶ್ಯಕ. ಆದರೂ ಬಂದಿದೆ. ಏಕೆ ಎಂದರೆ ಕೀರ್ತನೆಯ ಸಾರ್ವತ್ರಿಕ ಸತ್ಯದ ಎಳೆಗೆ ಕಾರಣವಾದ ಕನಕದಾಸರ ವೈಯಕ್ತಿಕ ಜೀವನದ ಎಳೆಗೆ ಪ್ರತೀಕವಾಗಿ ಪೀಠಸ್ಥವಾಗಿದೆ. ಈ ಅಂಶವನ್ನು ಅರಿಯದ ವಿಮರ್ಶಕ ಸತ್ಯವನ್ನು ಕಾಣಲಾರ. ಕಟ್ಟಿಶೇಷಾಚಾರ್ಯರ ನಿಲುವನ್ನು ಸಮರ್ಥಿಸಲು ಹೊರಟ ಜಿ. ವರದರಾಜರಾಯರು "ಪುರಂದರದಾಸರು ಬುಡುಬುಡುಕೆಯವರು ಕಣಿ ಹೇಳುವ ಧಾಟಿಯಲ್ಲಿ ಒಂದು ಕೀರ್ತನೆಯನ್ನು ರಚಿಸಿರುವುದರಿಂದ ಅವರನ್ನು ಬುಡುಬುಡುಕೆ ಜಾತಿಯವರು ಎಂದು ಕರೆಯಲಾದೀತೆ ?"

ಎಂದು ಪ್ರಶ್ನಿಸಿದ್ದಾರೆ. ಇದು ಒಳನೋಟವಿಲ್ಲದವರ ಮೊಂಡುವಾದ. "ಜಯ ಜಯವಾಗುತದೆ" ಎಂದು ಪ್ರಾರಂಭವಾಗುವ ಪುರಂದರದಾಸರ ಕೀರ್ತನೆಯ ಧಾಟಿಗೂ, "ನಾವು ಕುರುಬರು, ನಮ್ಮ ದೇವರು ಬೀರಯ್ಯ" ಎಂದು ಪ್ರಾರಂಭವಾಗುವ ಕನಕದಾಸರ ಕೀರ್ತನೆಯ ಧಾಟಿಗೂ ರಚನಾವಿಧಾನದಲ್ಲಿ ವ್ಯತ್ಯಾಸ ಇಲ್ಲವೆ? ಒಂದು ಪಕ್ಷ ಪುರಂದರದಾಸರ ಕೀರ್ತನೆ "ನಾವು ಬುಡುಬುಡುಕರು, ನಮ್ಮ ದೇವರು ..." ಎಂಬ ರೀತಿಯಲ್ಲಿ ರಚಿತವಾಗಿದ್ದರೆ ವರದರಾಜರಾಯರ ಪ್ರತಿಷ್ಠಿತ ಪ್ರಶ್ನೆ ಸಮಂಜಸ ಎಂದು ಒಪ್ಪಿಕೊಳ್ಳಬಹುದಾಗಿತ್ತು. ಹಾಗೆ ಕೋಗಿಲೆಗಳನ್ನು ಅಕ್ಕಪಕ್ಕ ಜೋಡಿಯಾಗಿ ನಿಲ್ಲಿಸಿ, ಎರಡೂ ಒಂದೇ ರೀತಿಯಾಗಿವೆ ಎಂದು ಹೇಳುವುದು ಸೂಕ್ತವಲ್ಲ. ಅವುಗಳ "ಧ್ವನಿ" ಮುಖ್ಯ ಮಾನದಂಡ. ಆಗ ಎರಡೂ ಬೇರೆಬೇರೆ, ನಾವು ಊಹಿಸಿದ್ದು ತಪ್ಪು ಎಂಬ ಸತ್ಯ ಗೊತ್ತಾಗುತ್ತದೆ.

ಎರಡನೆಯದಾಗಿ ದೇವರನ್ನು ಕುರುಬ ಎಂಬ ರೂಪಕದಲ್ಲಿ ಹಾಗೂ ನರರನ್ನು ಕುರಿಗಳು ಎಂಬ ರೂಪಕದಲ್ಲಿ ಅಂತರ್ಗತಗೊಳಿಸಿ ಹೇಳಲಾಗಿದೆ ಎಂಬ ಕಟ್ಟೆಶೇಷಾಚಾರ್ಯರ ಅಭಿಪ್ರಾಯವನ್ನು ಕಟ್ಟುನಿಟ್ಟಾಗಿ ಅನ್ವಯಿಸಿದರೆ ನರರಾದ ಕನಕದಾಸರು 'ನಾವು ನರಕುರಿಗಳು' ಎಂದು ಕೀರ್ತನೆಯನ್ನು ಪ್ರಾರಂಭಿಸಬೇಕಾಗಿತ್ತು—ಆದರೆ 'ನಾವು ಕುರುಬರು' ಎಂದು ಪ್ರಾರಂಭವಾಗಿರುವುದರಿಂದ 'ನಾವು ದೇವರುಗಳು' ಎಂಬ ರೂಪಕಾರ್ಥ ಸಂದಾಯವಾಗುತ್ತದೆ. ಆ ಅರ್ಥ ಸಂದಾಯವಾದ ಮೇಲೆ, ಮುಂದೆ ಬರುವ 'ನಮ್ಮ ದೇವರು ಬೀರಯ್ಯ' ಎಂಬುದು ತಲೆಶಿರೋಭಾರವಾಗುತ್ತದೆ. ಆದ್ದರಿಂದ 'ನಾವು ಕುರುಬರು' ಎಂಬ ಅಭಿವ್ಯಕ್ತಿ ನೇರವಾಗಿ ಕನಕದಾಸರ ಜಾತಿಯನ್ನು ಸೂಚಿಸುತ್ತಿರುವುದು ಸೂರ್ಯಪ್ರಕಾಶದಷ್ಟು ಸ್ಪಷ್ಟ. ಇದು ಇನ್ನೂ ಹೆಚ್ಚು ನಿಚ್ಚಳವಾಗುವುದು ಕೀರ್ತನೆಯ ಅಂತ್ಯದ "ಜಲಜಾಕ್ಷ ಕಾಗಿನೆಲೆಯಾದಿ ಕೇಶವನ ಮನ ಒಲಿಸಿ ಭಜಿಸದವನು ಹುಚ್ಚು ಕುರುಬ" ಎಂಬ ಚಾಟಿ ಏಟಿನಂಥ ಅಭಿವ್ಯಕ್ತಿಯಿಂದ! ದಡ್ಡ ಕುರುಬ ಎಂದು ಗೇಲಿ ಮಾಡುವ ಮಡಿವಂತ ಕಿಡಿಗೇಡಿಗಳಿಗೆ 'ಹೌದು, ನಾವು ಕುರುಬರು; ಆದರೆ ಇಂಥ ಕ್ಷುಲ್ಲಕತನದಲ್ಲಿ ಮುಳುಗಿ ದೇವರನ್ನು ಭಜಿಸದ ನೀವು ನಿಜವಾಗಿಯೂ ಹುಚ್ಚು ಕುರುಬರು' ಎಂದು ನೇರವಾಗಿ ಮುಖಕ್ಕೆ ರಾಚುವಂತೆ ಸಂಬಂಧಪಟ್ಟವರು ಬೆಪ್ಪಾಗುವಂತೆ ಅಪ್ಪಳಿಸಿದ್ದಾರೆ ಎಂಬುದು ಕೀರ್ತನೆಯ ಅಂತರಾತ್ಮವನ್ನು ಪರಕಾಯ ಪ್ರವೇಶದಿಂದ ದರ್ಶಿಸಿದ ಎಲ್ಲರಿಗೂ ಸ್ವಯಂವೇದ್ಯ, ಈ ಅಂಶವನ್ನು 'ಕನಕದಾಸರ ಜೀವನ ವಿಚಾರ' ಗ್ರಂಥದಲ್ಲಿ ಜ್ಯೋತಿ ಹೊಸೂರರೂ ಎತ್ತಿತೋರಿಸಿದ್ದಾರೆ. ಆದ್ದರಿಂದ ಕಟ್ಟೆಶೇಷಾಚಾರ್ಯರ ಗ್ರಹಿಕೆ ಶುದ್ಧಾಂಗ ತಪ್ಪು; ಪೂರ್ವಗ್ರಹಪೀಡಿತವಾದದ್ದು ಎಂಬುದು ಸತ್ಯ.

೩

ಡಾ. ದೇ. ಜವರೇಗೌಡ ಅವರ ಸಂಪಾದಕತ್ವದಲ್ಲಿ ಪ್ರಕಟವಾಗಿರುವ 'ಕನಕ ಸಾಹಿತ್ಯ ದರ್ಶನ' ಎಂಬ ಗ್ರಂಥದಲ್ಲಿ ಡಾ. ಬಸವಲಿಂಗ ಸೊಪ್ಪಿಮಠ ಅವರು

' ಕೊಡೇಕಲ್ ಬಸವಣ್ಣನ ಸಂಪ್ರದಾಯ ಮತ್ತು ಕನಕದಾಸ ' ಎಂಬ ಲೇಖನವನ್ನು ಬರೆದಿದ್ದಾರೆ. ಅದರಲ್ಲಿ ಹೀಗೆ ಹೇಳಿದ್ದಾರೆ—"ಬಹುಪಾಲು ವಿದ್ವಾಂಸರು ಅಭಿಪ್ರಾಯ ಪಡುವಂತೆ ಈತ (ಕನಕದಾಸ) ಜಾತಿಯಿಂದ ಕುರುಬನಾಗಿರಲಿಲ್ಲ, ಬೇಡನಾಗಿದ್ದ" ಎಂದೂ, " ' ನಾವು ಕುರುಬರು, ನಮ್ಮ ದೇವರು ಬೀರಯ್ಯ ' ಎಂದು ಆರಂಭವಾಗುವ ಹಾಡು ಕನಕದಾಸನ ಹೆಸರಿನಲ್ಲಿ ಈಗ ದೊರೆಯುತ್ತಿದ್ದರೂ ಮೂಲತಃ ಅದರ ಕರ್ತೃ ಕೊಡೇಕಲ್ ಬಸವಣ್ಣನ ಹಿರಿಯ ಮಗ ರಾಚಪ್ಪಯ್ಯ ಎಂದು ಹಿಂದೆಯೇ ಕಾಣಿಸಲಾಗಿದೆ. ಕನಕದಾಸ ಕೊಡೇಕಲ್‌ಗೆ ಬಂದಾಗ ರಾಚಪ್ಪಯ್ಯನಿಂದ ರಚನೆಗೊಂಡು ಹೇಗೋ ಈತನ ಕೈಸೇರಿ ಕಾಗಿನೆಲೆಗೆ ಬಂದ ಈ ಹಾಡು ಮುಂದೆ ಕನಕದಾಸನ ಭಕ್ತರ ಕೈಸೇರಿ ಅಷ್ಟಿಷ್ಟು ವ್ಯತ್ಯಾಸ ಬದಲಿಸಿಕೊಂಡು ಕಾಗಿನೆಲೆಯಾದಿಕೇಶವನ ಮುದ್ರಿಕೆ ಹೊತ್ತಿದೆ; ಕನಕದಾಸ ಕುರುಬಜಾತಿಯವನು ಎಂಬ ಅವಾಸ್ತವ ನಂಬಿಕೆಗೆ ಪರೋಕ್ಷವಾಗಿ ಕಾರಣವಾಗಿದೆ " ಎಂದೂ ಹೇಳಿದ್ದಾರೆ.

ಲೇಖನದಲ್ಲಿ ಹೇಳಿಕೊಂಡಿರುವಂತೆ ' ಕೋಡೇಕಲ್ ಬಸವಣ್ಣ—ಒಂದು ಅಧ್ಯಯನ ' ಎಂಬ ವಿಷಯದ ಮೇಲೆ ಸಂಶೋಧನಾಧ್ಯಯನವನ್ನು ಮುಗಿಸಿರುವ ಡಾ. ಬಸವಲಿಂಗ ಸೊಪ್ಪಿಮಠ ಅವರ ಮೇಲಿನ ಉದ್ಧೃತ ಭಾಗದ ಹೇಳಿಕೆಗಳಿಗೆ ತಲೆಯೂ ಇಲ್ಲ, ಬುಡವೂ ಇಲ್ಲ; ಕೈಯೂ ಇಲ್ಲ, ಕಾಲೂ ಇಲ್ಲ. ಜನವದಂತಿಯ ತಂತಿಯ ಮೇಲೆ ನಡೆಯುತ್ತಾ ಆಯತಪ್ಪಿ ಊಹೆಯ ಕಸಕಡ್ಡಿ ಸೊಪ್ಪುಸೆದೆಯ ಮೇಲೆ ಬಿದ್ದು ಅದನ್ನೇ ಅಸ್ತವ್ಯಸ್ತವಾಗಿ ಮೈತುಂಬ ಕವುಚಿಕೊಂಡಿದ್ದಾರೆ ಎಂದರೆ ತಪ್ಪಾಗಲಾರದು.

ಕೊಡೇಕಲ್ ಜನವದಂತಿ ಇದು—"ಕನಕದಾಸನಿಗೆ ಮುಂಡಿಗೆಯೊಂದರ ಅರ್ಥ ಬಿಡಿಸುವ ವ್ಯಕ್ತಿಯ ಅಗತ್ಯಬಿತ್ತು. ಕೊಡೇಕಲ್ ಬಸವಣ್ಣನ ಹಿರಿಯ ಮಗ ರಾಚಪ್ಪಯ್ಯ ಇದನ್ನು ಬಿಡಿಸಬಲ್ಲನೆಂದು ಕಿವಿಗೆಬಿದ್ದು ಕನಕದಾಸ ಕೊಡೇಕಲ್ಲಿಗೆ ಬಂದ. ಊರ ಹೊರವಲಯದಲ್ಲಿ ಒಬ್ಬ ದನಕರುಕುರಿಗಳನ್ನು ಮೇಯಿಸುತ್ತ ನಿಂತಿದ್ದ. ರಾಚಪ್ಪಯ್ಯನ ವಿಚಾರವಾಗಿ ಆತನನ್ನು ಕೇಳಿದ ಕನಕದಾಸ. ಅದಕ್ಕೆ ಆ ಕುರುಬ ' ನಾವು ಕುರುಬರು ನಮ್ಮ ದೇವರು ಬೀರಯ್ಯ ' ಎಂಬ ಪದ ಹಾಡುತ್ತಾ ತನ್ನಲ್ಲಿಯೇ ಮಗ್ನನಾದ. ಕನಕದಾಸ ಊರೊಳಗೆ ಬಂದ. ಯಾರೋ ಅವನಿಗೆ ರಾಚಪಯ್ಯನ ಮನೆ ತೋರಿಸಿದರು. ಮನೆಯಲ್ಲಿ ರಾಚಪ್ಪಯ್ಯ ಇರಲಿಲ್ಲ. ಆತನ ತಂದೆ ಕೊಡೇಕಲ್ ಬಸವಣ್ಣ ಹಾಗೂ ಇಬ್ಬರು ತಮ್ಮಂದಿರು (ಸಂಗಪ್ಪಯ್ಯ, ಗುಹೇಶ್ವರ) ಇದ್ದರು.... ಸಾಯಂಕಾಲದ ವೇಳೆಗೆ ರಾಚಪ್ಪಯ್ಯ ಹೊರಗಿನಿಂದ ಬಂದ. ಕನಕದಾಸನಿಗೆ ಆಶ್ಚರ್ಯ ಕಾದಿತ್ತು. ಬಂದಾತ ಬೇರಾರೂ ಆಗಿರದೆ ಊರ ಹೊರಗೆ ತಾನು ಕಂಡು ಮಾತಾಡಿಸಿದ ಕುರುಬನಾಗಿದ್ದ. ಕನಕದಾಸನಿಗೆ ಬಿಡಿಸಲಾಗದ ಮುಂಡಿಗೆಯ ವಿಷಯ ತಿಳಿದು, ಅದನ್ನು ಬಿಡಿಸಲು ತಾನು ಹೋಗುವುದಾಗಿ ರಾಚಪ್ಪಯ್ಯ ಸಿದ್ಧನಾದಾಗ ಅವನ ತಮ್ಮ ಸಂಗಪ್ಪಯ್ಯ ತಾನೇ ಹೋಗುವುದಾಗಿ ನುಡಿದ. ಹಾಗೆ

ಅಂದು ಕನಕದಾಸನೊಂದಿಗೆ ಊರುತೊರೆದ ಸಂಗಪ್ಪಯ್ಯ ಪುನಃ ಕೊಡೇಕಲ್ಲಿಗೆ ಮರಳಲಿಲ್ಲ. ಕಾಗಿನೆಲೆಯಲ್ಲಿಯೇ ಸಮಾಧಿಸ್ಥನಾದ—ಇದಿಷ್ಟೂ ಕೊಡೇಕಲ್ ಸ್ಥಳ ಪುರಾಣ ....ಕನಕದಾಸನ ಕಣ್ಣಿಗೆ ಕುರುಬನಾಗಿ ಕಂಡ ರಾಚಪ್ಪಯ್ಯ ಹಾಡಿದ 'ನಾವು ಕುರುಬರು' ಪದ್ಯ ಈಗ ಕನಕದಾಸನ ಹೆಸರಿನಲ್ಲಿ ಪ್ರಚಲಿತವಾಗಿದ್ದರೂ ಆದರ ನಿಜವಾದ ಕರ್ತೃ ರಾಚಪ್ಪಯ್ಯನೇ ಎನ್ನಲು ಆಧಾರಗಳಿವೆ ".

ಮೇಲಿನ ಜನವದಂತಿಯ ಅತಾರ್ಕಿಕ ಸಂಬಂಧದ ಊಹಾತ್ಮಕ ಹುಚ್ಚು ಪ್ರಪಂಚದ ಬಗ್ಗೆ ವಿಚಾರಮಾಡುವ ಮೊದಲು, ಬರವಣಿಗೆಯ ಎರಡು ಸ್ಯಾಂಪಲ್ಲು ಗಳನ್ನು ನೋಡೋಣ : (೧) "ರಾಚಪ್ಪಯ್ಯನ ವಿಚಾರವಾಗಿ ಆತನನ್ನು ಕೇಳಿದ ಕನಕದಾಸ. ಆ ಕುರುಬ...." ಎಂಬ ನಿರೂಪಣೆಯ ಭಾಗಕ್ಕೂ, ಉದಾಹೃತ ಭಾಗದ ಕೊನೆಯಲ್ಲಿ ಬರುವ "ಕನಕದಾಸನ ಕಣ್ಣಿಗೆ ಕುರುಬನಾಗಿ ಕಂಡ ರಾಚಪ್ಪಯ್ಯ" ಎಂಬ ನಿರೂಪಣೆಯ ಭಾಗಕ್ಕೂ ಇರುವ ಬರವಣಿಗೆಯ ಔಚಿತ್ಯ ಲೇಖನದ ಪರಿಪಕ್ವತೆಗೆ ದಿಕ್ಸೂಚಿಯಾಗಿದೆ. (೨) "ಕನಕದಾಸನಿಗೆ ಬಿಡಿಸಲಾಗದ ಮುಂಡಿಗೆಯ ವಿಷಯ ತಿಳಿದು, ಆದನ್ನು ಬಿಡಿಸಲು ತಾನು ಹೋಗುವುದಾಗಿ ರಾಚಪ್ಪಯ್ಯ ಸಿದ್ಧನಾದಾಗ ಅವನ ತಮ್ಮ ಸಂಗಪ್ಪಯ್ಯ ತಾನೇ ಹೋಗುವುದಾಗಿ ನುಡಿದ" ಎಂಬಲ್ಲಿ, ವಾಕ್ಯದ ಮೊದಲನೆಯ ಭಾಗದ ಪ್ರಬುದ್ಧತೆಯನ್ನು ಗಮನಿಸಬೇಕು. 'ಕನಕದಾಸನಿಗೆ ಬಿಡಿಸಲಾಗದ ಮುಂಡಿಗೆಯ ವಿಷಯ ತಿಳಿದು' ಎಂಬುದಕ್ಕೆ 'ಕನಕದಾಸನಿಗೆ ಬಿಡಿಸ ಲಾಗದ ಮುಂಡಿಗೆಯ ವಿಷಯ ಅರ್ಥವಾಗಿ' ಎಂಬ ಭಾವ ಬಂದುಬಿಡುತ್ತದೆ. ಆದರೆ ಮುಂದಿನ ವಾಕ್ಯಭಾಗದಿಂದ, ಹಿಂದಿನ ವಾಕ್ಯಭಾಗ ಹೀಗಿರಬಾರದು ಎನ್ನಿಸುತ್ತದೆ. ಮುಂದಿನ ವಾಕ್ಯಭಾಗದ ಅಸ್ತಿತ್ವ ಅನಿವಾರ್ಯವಾಗಬೇಕಾದರೆ ಹಿಂದಿನ ವಾಕ್ಯಭಾಗ 'ಕನಕದಾಸನಿಂದ ಬಿಡಿಸಲಾಗದ ಮುಂಡಿಗೆಯೊಂದಿದೆ ಎಂಬ ವಿಷಯ ಕೇಳಿ' ಎಂದಿರಬೇಕು. ಇದೂ ಕೂಡ ಬರವಣಿಗೆಯ ಪರಿಪಕ್ವತೆಗೆ ಮಾರ್ಗಸೂಚಿಯಾಗಿದೆ.

ಈಗ ಜನವದಂತಿಯನ್ನು ಜಾಲಾಡಿ ನೋಡೋಣ. ಸಮುದ್ರವೇ ಉಪ್ಪನ್ನು ತಿರಿಯಲು ಹೋದಂತೆ, ಮುಂಡಿಗೆಯ ಸಾಗರವಾದ ಕನಕದಾಸರೇ, ಮುಂಡಿಗೆಯೊಂದರ ಅರ್ಥ ಹೇಳಬಲ್ಲ ನಿಷ್ಣಾತ ರಾಚಪ್ಪಯ್ಯನೆಂದು ತಿಳಿದು ಅಲ್ಲಿಗೆ ಹೋದಂತೆ! ರಾಚಪ್ಪಯ್ಯನನ್ನು ಹುಡುಕಿಕೊಂಡು ಬಂದವರು ಅವನನ್ನು ಬಿಟ್ಟು ಸಂಗಪ್ಪಯ್ಯ ನನ್ನು ಕರೆದುಕೊಂಡು ಹೋದರಂತೆ! (ಇಲ್ಲದಿದ್ದರೆ ಕಾಗಿನೆಲೆಗೂ ಕೊಡೇಕಲ್ಲಿಗೂ ಸಂಬಂಧ ಕಲ್ಪಿಸುವುದು ಹೇಗೆ? ಸಂಗಪ್ಪಯ್ಯನ ಸಮಾಧಿ ಕಾಗಿನೆಲೆಯಲ್ಲಿದೆ ಎಂದು ನಂಬಿರುವುದರಿಂದ ರಾಚಪ್ಪಯ್ಯ ಹೋದರೆ ಸಂಬಂಧವನ್ನು ಪೋಟಿ ಹಾಕಲು ಸಾಧ್ಯ ವಿಲ್ಲವಲ್ಲ) ಕಾಗಿನೆಲೆಯಲ್ಲಿ ಸಂಗಪ್ಪಯ್ಯನ ಕುದುರೆ 'ಘೋಷಾದವರ' ಮನೆಗೆ ನುಗ್ಗಿತಂತೆ, ಮುಸ್ಲಿಮರಿಂದ ಅವನು ಹತನಾದನಂತೆ (ನಿಜವಾದ ಕುದುರೆ ನುಗ್ಗಿತೋ, ಸಾಂಕೇತಿಕಾರ್ಥದ ಕುದುರೆ ನುಗ್ಗಿತೋ ಎಂಬುದನ್ನು ಲೇಖಕರು ವಿಶ್ಲೇಷಿಸದಿರುವುದು ಓದುಗರು 'ನಿಜದನಿ'ಯನ್ನು ಗ್ರಹಿಸಲು ತೊಡಕಾಗಿದೆ. ಅಂತೂ ಸಂಗಪ್ಪಯ್ಯನ

ಕುದುರೆ, ಕನಕದಾಸರನ್ನು ಹಿಂಬಾಲಿಸದೆ ದಾರಿತಪ್ಪಿ ಸೀದಾ ಘೋಷಾದವರ ಮನೆಗೆ ದೌಡಾಯಿಸಿರುವುದು ನಿಜಕ್ಕೂ ಬಿಡಿಸಬೇಕಾದ ಒಂದು ಮುಂಡಿಗೆಯೆ !)

ಇನ್ನು 'ನಾವು ಕುರುಬರು, ನಮ್ಮ ದೇವರೆ ಬೀರಯ್ಯ' ಎಂಬ ಹಾಡಿನ ಕರ್ತೃ ರಾಚಪ್ಪಯ್ಯ ಎಂಬುದಕ್ಕೆ ಡಾ. ಬಸವಲಿಂಗ ಸೊಪ್ಪಿಮಠ ಕೊಡುವ ಕಾರಣಗಳು ತೀರ ದುರ್ಬಲ ; ಬಾಲಿಶ ಎಂದರೂ ಒಪ್ಪೀತು.

ಬಂಧದ ದೃಷ್ಟಿಯಿಂದ ಕನಕದಾಸರ ಹೆಸರಲ್ಲಿರುವ ಹಾಡು ಶಿಥಿಲವಾಗಿದ್ದರೆ ರಾಚಪ್ಪಯ್ಯನಲ್ಲಿ ಸುಸಂಬದ್ಧವಾಗಿದೆ ಎಂಬುದನ್ನು ಸಾಧಿಸಲು ಉದಾಹರಣೆ ಸಮೇತ ತೌಲನಿಕ ವಿಶ್ಲೇಷಣೆಗಿಳಿದಿರುವ ಡಾ. ಬಸವಲಿಂಗ ಸೊಪ್ಪಿಮಠ ಅವರ ವಾದದ, ಸಾಹಿತ್ಯಾಸ್ವಾದದ ಗುಣಮಟ್ಟವನ್ನು ಒರೆಹಚ್ಚುವ ಬದಲು, ಸಾಚಾವನ್ನು ಖೋಟಾ ಎಂದು ಹೇಳಲು ಹಾಗೂ ಖೋಟಾವನ್ನು ಸಾಚಾ ಎಂದು ಹೇಳಲು ಅಥವಾ ಶ್ರೇಷ್ಠ ಸಾಹಿತ್ಯವನ್ನು ಬೂಸಾ ಸಾಹಿತ್ಯ ಎಂದು ಹೇಳಲು ಹಾಗೂ ಬೂಸಾ ಸಾಹಿತ್ಯವನ್ನು ಶ್ರೇಷ್ಠ ಸಾಹಿತ್ಯವೆಂದು ಹೇಳಲು ಯಾರಾದರೂ ಒಂದು ಸಮಿತಿಯನ್ನು ರಚಿಸಲು ಮುಂದಾದರೆ ಅದರ ಅಧ್ಯಕ್ಷಸ್ಥಾನಕ್ಕೆ ಬೇರಾರನ್ನೂ ಹುಡುಕಬೇಕಾದ ಅಗತ್ಯವಿಲ್ಲ ಎಂದು ಹೇಳಿದರೆ ಸಾಕು.

೪

ದೇವೇಂದ್ರ ಮಾಧವನವರ ಎಂಬುವವರು ಇತ್ತೀಚೆಗೆ ೧೪ ಪುಟಗಳ ಲೇಖನ ಮತ್ತು ಆ ಸಂಬಂಧ ಪತ್ರಿಕೆಯಲ್ಲಿ ಪ್ರಕಟವಾದ ವಾಚಕರವಾಣಿಯ ಉತ್ತರ ಪ್ರತ್ಯುತ್ತರಗಳ ಅನುಬಂಧಗಳೂ ಸೇರಿ 25 ಪುಟಗಳ "ಕನಕದಾಸರು ಬೇಡ ಜನಾಂಗದವರು" (1992) ಎಂಬ ಕೃತಿಯನ್ನು ಹೊರತಂದಿದ್ದಾರೆ. ಅದರಲ್ಲಿ ಕನಕದಾಸರು ಬೇಡರೆಂದು ಸಾಧಿಸಲು ಹಲವಾರು ಆಧಾರಗಳನ್ನು ಮುಂದಿಟ್ಟಿದ್ದಾರೆ. ಅವು ಎಷ್ಟು ಗ್ರಾಹ್ಯಯೋಗ್ಯ ಅಥವಾ ತ್ಯಾಜ್ಯಯೋಗ್ಯ ಎಂಬುದನ್ನು ನೋಡ ಬಹುದು : (೧) ಉಡುಪಿ ದೇವಸ್ಥಾನ ಪ್ರವೇಶದ ಸಂಬಂಧದಲ್ಲಿ ಕನಕದಾಸರನ್ನು ಬ್ರಾಹ್ಮಣರು ತಡೆದ ಪ್ರಸಂಗದ ಓಲೆಗರಿಯ ಪ್ರಸ್ತಾಪಮಾಡಿದ್ದಾರೆ—ಪ್ರೊ. ಸತ್ಯನಾರಾಯಣ ಪ್ರಜಾಮತದಲ್ಲಿ ಬರೆದದ್ದು ; ಡಾ. ಎ. ಎಸ್. ಪುರೋಹಿತರು ಅದರಲ್ಲಿ 'ಬೇಡ' ಶಬ್ದ ಕಂಡದ್ದು—ಇತ್ಯಾದಿ. ಆದರೆ ಬಿ. ಶಿವಮೂರ್ತಿಶಾಸ್ತ್ರಿಗಳು ಮತ್ತು ಕೆ. ಎಂ. ಕೃಷ್ಣರಾವ್ ಸಂಪಾದಕತ್ವದಲ್ಲಿ ಹೊರಬಂದ 'ಕನಕದಾಸರ ಕೀರ್ತನೆಗಳು' (1965) ಗ್ರಂಥದಲ್ಲಿ ಆ ಓಲೆಗರಿಯ ಒಂದು ಪುಟವನ್ನು ಅಚ್ಚು ಮಾಡಿರುವುದನ್ನು ಹಾಗೂ ಅದರಲ್ಲಿ 'ಜಡ' ಎಂದಿರುವುದನ್ನು ದೇವೇಂದ್ರ ಮಾಧವ ನವರು ಗಮನಿಸದಿರುವುದು ಅಥವಾ ಗಮನಿಸಿಯೂ ಪ್ರಸ್ತಾಪಿಸದಿರುವುದು ಆಶ್ಚರ್ಯ. ಆ ಪುಸ್ತಕದಲ್ಲಿ ಓಲೆಗರಿಯ ಪಾಠ ಮುದ್ರಣಗೊಂಡಿದ್ದರೂ, ಕನಕದಾಸರ ಇತಿವೃತ್ತದ ಬಗ್ಗೆ ವಿಚಾರಮಾಡಿದ ಯಾವ ವಿದ್ವಾಂಸರೂ ಅದನ್ನು ಒಂದು ಆಧಾರವೆಂದು ಏಕೆ

ಪರಿಗಣಿಸಿಯೋ ಇಲ್ಲ ಎಂಬುದನ್ನು ಇವರು ವಿಚಾರಮಾಡದಿರುವುದು ಇನ್ನೂ ಸೋಜಿಗ. ಅದರ ಭಾಷಾಶೈಥಿಲ್ಯ, ಅಸ್ತವ್ಯಸ್ತ ವಾಕ್ಯರಚನೆ ಇತ್ಯಾದಿಗಳು ಅದು ಪ್ರಕ್ಷಿಪ್ತವೆಂಬುದನ್ನು ಜಗಜ್ಜಾಹೀರು ಮಾಡುವಂತಿವೆ. ಹರಿದಾಸ ಸಾಹಿತ್ಯ ವಿಭಾಗದಲ್ಲಿ ಕೆಲಸಮಾಡಿದ ಡಾ. ಜಿ. ವರದರಾಜರಾವ್ ಕೂಡ ಅದರ ಬಗ್ಗೆ ಚಕಾರ ಎತ್ತದಿರುವುದು ಇದೇ ಕಾರಣದಿಂದ ಎಂಬುದನ್ನು ದೇವೇಂದ್ರಮಾಧವನವರು ಅರ್ಥ ಮಾಡಿಕೊಳ್ಳದಿರುವುದು ಮತ್ತೂ ವಿಸ್ಮಯ. ಮೇಲಾಗಿ ಆ ಲೋಕೋತ್ತರ ವಿಸ್ಮಯಕಾರಿ ಪವಾಡದ ಬಗೆಗೆ ಕನಕದಾಸರು ಬರೆದ ಹಾಡೋ ಅಥವಾ ಉಳಿದ ದಾಸರು ಬರೆದ ಹಾಡೋ ಲಭ್ಯವಾಗುವವರೆಗೆ ಆ ಘಟನೆಯನ್ನೇ ಒಂದು ಪ್ರಕ್ಷಿಪ್ತ ಎಂದು ನಿರ್ಧರಿಸಬೇಕಾಗುತ್ತದೆ. ಏಕೆಂದರೆ ಬಾಳೆಹಣ್ಣಿನ ಪ್ರಸಂಗ, ಸಾಲಿಗ್ರಾಮದ ಪ್ರಸಂಗಗಳನ್ನೇ ಕುರಿತು ಪುರಂದರದಾಸರು ಹಾಡನ್ನು ಕಟ್ಟಿರುವಾಗ, ಅದಕ್ಕಿಂತಲೂ ವೈಭವಶೀಲವಾಗಿ ಮೆರೆಸುವ ಪವಾಡಸದೃಶ ಘಟನೆಯ ಬಗ್ಗೆ ಬರೆಯದೆ ಇರುತ್ತಿದ್ದರೆ? ಹೋಗಲಿ, ಕನಕದಾಸರ ಸಹಾಧ್ಯಾಯಿಗಳೂ, ಒಂದರ್ಥದಲ್ಲಿ ಮಿತ್ರರೂ ಗುರುಗಳೂ ಆದ ವಾದಿರಾಜರು ಬರೆಯದೆ ಇರುತ್ತಿದ್ದರೆ?

ದೇವಾಲಯ ಪ್ರವೇಶ ಮಾಡಲು ಮಡಿವಂತ ಮಾಧ್ವರು ಕನಕದಾಸರಿಗೆ ಅವಕಾಶ ಕೊಡಲಿಲ್ಲ. ಛಲವಂತ ಕನಕದಾಸರು ಬಡಪೆಟ್ಟಿಗೆ ಬಿಡಲಿಲ್ಲ ದೇವರನ್ನು ಭಜಿಸುತ್ತಾ 'ಅಹರ್ನಿಶಿ ನಿಂತರು; ಮಡಿವಂತರ ಒಡಲೊಳಗೆ ಗುಡುಗುಡ ಸದ್ದಾಗುವಂತೆ ಹಾಡುತ್ತಲೇ ಹೋದರು. ಕನಕದಾಸರಂಥ ಅಪರೋಕ್ಷ ಜ್ಞಾನಿಗೆ ಆದ ಅನ್ಯಾಯವನ್ನು ಸಹಿಸಲೂ ಆಗದ, ಮಡಿವಂತರನ್ನು ಎದುರು ಹಾಕಿಕೊಳ್ಳಲೂ ಆಗದ ವಾದಿರಾಜರು ರಾಜಿಮಾರ್ಗವನ್ನು ಕಂಡುಹಿಡಿದರು. ಹೊರಗಿನಿಂದಲೇ ಕೃಷ್ಣನ ದರ್ಶನವಾಗುವಂತೆ ಗೋಡೆಯಲ್ಲಿ ಒಂದು ಕಿಟಕಿಯನ್ನು ಇಡಿಸಿದ್ದು. ಕನಕದಾಸರಿಗೆ ನೋವಾಗದಿರಲೆಂದು, ನೈಚ್ಯಭಾವನೆಯಿಂದ ನರಳದಿರಲೆಂದು, ದೇವಾಲಯ ಪ್ರವೇಶ ಮಾಡುವ ಮುನ್ನ ತಾವೂ ಕೂಡ ಆ ಕನಕನ ಕಿಂಡಿಯಲ್ಲಿ ಕೃಷ್ಣದರ್ಶನ ಮಾಡಿಯೇ ಹೋಗುವ ಸಂಪ್ರದಾಯವನ್ನು ಪ್ರಾರಂಭಿಸಿ, ಉಳಿದವರೂ ತಪ್ಪದೆ ಅನುಸರಿಸುವಂಥ ಪರಿಸ್ಥಿತಿಯನ್ನು ಸೃಷ್ಟಿಸಿದ್ದು ವಾಸ್ತವ ಸಂಗತಿಯೆಂದು ತೋರುತ್ತದೆ ಪೂರ್ವಾಭಿಮುಖವಾಗಿದ್ದ ಕೃಷ್ಣ ಪಶ್ಚಿಮಾಭಿಮುಖವಾಗಿ ತಿರುಗಿ ಗೋಡೆಯಲ್ಲಿ ಬಿರುಕು ಮಾಡಿದ ಎಂಬುದೆಲ್ಲ ಆಮೇಲಿನ ಸೇರ್ಪಡೆ; ಕನಕದಾಸರ ಸಮಕಾಲೀನ ಹರಿದಾಸರು ತೀರಿಹೋದ ಮೇಲೆ ಪೋಣಿಸಿದ ಪ್ರಕ್ಷಿಪ್ತ ಪ್ರಸಂಗ. ಇಲ್ಲದಿದ್ದರೆ ಸಮಕಾಲೀನ ಹರಿದಾಸರು ಹಾಡಿನ ಮೂಲಕ ಆ ದಿವ್ಯಘಟನೆಯನ್ನು ಕೊಂಡಾಡದೆ ಇರುತ್ತಿರಲಿಲ್ಲ ಎಂಬುದನ್ನು ಮರೆಯಬಾರದು. ಸಾಮಾನ್ಯವಾಗಿ ಗರ್ಭಗುಡಿ ಹಿಂಭಾಗದಲ್ಲಿದ್ದು ಮುಂಭಾಗದಲ್ಲಿ ವಿಶಾಲವಾದ ಜಾಗವಿರುತ್ತದೆ. ಆದರೆ ಉಡುಪಿಯಲ್ಲಿ ತದ್ವಿರುದ್ಧ. ಅಂದರೆ ಕೃಷ್ಣವಿಗ್ರಹ ಪ್ರತಿಷ್ಠಾಪನೆಗೊಂಡದ್ದೇ ಪಶ್ಚಿಮಾಭಿಮುಖವಾಗಿ ಎಂಬುದು ಇದರಿಂದ ಗೊತ್ತಾಗುತ್ತದೆ. ಪೂರ್ವಾಭಿಮುಖ

ವಾಗಿ ಇದ್ದ ವಿಗ್ರಹ ಪಶ್ಚಿಮಾಭಿಮುಖವಾಗಿ ತಿರುಗಿದ್ದು ಕನಕದಾಸರ ಭಕ್ತಿಯ ಆತ್ಮಶಕ್ತಿಯ ಔನ್ನತ್ಯಕ್ಕೆ ದೊರಕಿದ ಜಯ ಎಂಬ ಕಲ್ಪಿತ ಕಥೆ ಹುಟ್ಟಿಕೊಂಡದ್ದು ಕಾಲಕ್ರಮೇಣ ಎಂಬುದು ಹೆಚ್ಚು ಸಂಭವನೀಯ ಸತ್ಯವಾಗಿ ತೋರುತ್ತದೆ. ಏಕೆಂದರೆ ದೇವಾಲಯ ಪ್ರವೇಶವನ್ನು ನಿಷೇಧಿಸಿ ಕನಕದಾಸರಿಗೆ ಅವಮಾನವೀಯ ಅನ್ಯಾಯವನ್ನು ಅವಮಾನವನ್ನು ಮಾಡಿದರು ಎಂಬ ಸುದ್ದಿ ಜನಜೀವನದಲ್ಲಿ ಅಸಹನೆಯ ಕಾಳ್ಗಿಚ್ಚಾಗಿ ಧಗದಗಿಸತೊಡಗಿದಾಗ, ಅದರಿಂದ ಮತ-ಮಠಕ್ಕೆ ಹಾನಿಯಾಗಬಾರದೆಂದು ಕಣ್ಣು ಕೋರೈಸುವ ಪವಾಡಸದೃಶ ದೈವಿಕ ಘಟನೆಯ ಮುಂಗಾರು ಮಳೆಯನ್ನು ಸುರಿಸಿ ಆ ಮೂಲಕ ಅದು ತಾನಾಗಿಯೇ ನಂದಿ ಹೋಗುವಂತೆ ಮಾಡಲು, ಅದರ ಜೊತೆ ಜೊತೆಯಲ್ಲೇ ಪರೋಕ್ಷವಾಗಿ ಉಡುಪಿಯ ಕ್ಷೇತ್ರಕ್ಕೆ, ಮಾಧ್ವಮತಕ್ಕೆ ದಿಗಂತವ್ಯಾಪಿಯಾದ ಪ್ರಚಾರವನ್ನು ಅನಾಯಾಸವಾಗಿ ಗಿಟ್ಟುವಂತೆ ಮಾಡಲು, ಪರಂಪರಾಬಲದ ಜಾಣರು ಇಂಥ ಥಳಕುತಟವಟದ ತಂತ್ರವನ್ನು ಮಾಡಿರಬೇಕು ಎಂಬುದನ್ನು ಪರಂಪರೆಯ ಜಾಣತನವಿಲ್ಲದವರು ಇನ್ನೂ ಅರ್ಥಮಾಡಿಕೊಳ್ಳದಿರುವ ಬಗ್ಗೆ, ಅವರು ತಿನ್ನಿಸಿದ ಆ ಅಫೀಮಿನ ಅಮಲಿನಲ್ಲೇ ಇನ್ನೂ ಇರುವುದರ ಬಗ್ಗೆ ಯೋಚಿಸದೆ. ದೇವೇಂದ್ರ ಮಾಧವನವರು, ಹುಟ್ಟಿದ ಮಗುವಿಗೆ ಹೊಲಿದಿರುವ ಆ ಓಲಿಗರಿಯ ಕುಲಾವಿಯ ಬಗ್ಗೆ ತಲೆಕೆಡಿಸಿ ಕೊಂಡಿರುವುದು ಪ್ರಬುದ್ಧತೆಯ ಲಕ್ಷಣವೆಂದು ತೋರುವುದಿಲ್ಲ. (೨) ಕನಕದಾಸರು ಕುರುಬರು ಎಂದು ಪ್ರಚಾರವಾಗಿರುವುದಕ್ಕೆ 'ನಾವು ಕುರುಬರು, ನಮ್ಮ ದೇವರು ಬೀರಯ್ಯ' ಎಂಬ ಹಾಡು ಕಾರಣ ಎಂದು, ಅದನ್ನು ಸಾರಾಸಗಟಾಗಿ ನಿರಾಕರಿಸುವ ಕಟ್ಟಿ ಶೇಷಾಚಾರ್ಯರ, ಡಾ. ಬಸವಲಿಂಗ ಸೊಪ್ಪಿಮಠ ಅವರ ಹೇಳಿಕೆಗಳನ್ನು ಮಾಧವನವರು ಉದಾಹರಿಸಿ ತಮ್ಮ ವಾದವನ್ನು ಮಂಡಿಸಿದ್ದಾರೆ. ಅವರಿಬ್ಬರ ಹೇಳಿಕೆಗಳು ಹೇಗೆ ದೋಷಪೂರ್ಣ ಎಂಬುದನ್ನು ಈ ಲೇಖನದ ಎರಡು ಮತ್ತು ಮೂರನೆಯ ಭಾಗಗಳಲ್ಲಿ ವಿಶದಪಡಿಸಿರುವುದರಿಂದ ಮತ್ತೆ ಇಲ್ಲಿ ಪುನರುಕ್ತಗೊಳಿಸುವ ಅಗತ್ಯವಿಲ್ಲ. ಬೆಟ್ಟವನ್ನು ಒರಗಬೇಕೆ ವಿನಾ ಮೈಮೇಲೆ ಕುಸಿದು ಬೀಳುವ ಶಿಥಿಲ ಗೋಡೆಯನ್ನಲ್ಲ ಎಂಬುದನ್ನು ಮಾಧವನವರು ಮನಗಂಡಿಲ್ಲ ಎಂಬುದು ಇದರಿಂದ ತಿಳಿದು ಬರುತ್ತದೆ. (೩) ದಾಸಯ್ಯನನ್ನು ಕರೆಸುವುದು, ಹಣೆಗೆ ನಾಮಹಚ್ಚಿ ಕೊಳ್ಳುವುದು ಕುಲಸ್ಥರ ಮನೆಗೆ ಬಿಕ್ಷೆಗೆ ಹೋಗುವುದು ಇಂಥ ಆಚರಣೆಗಳು ಬೇಡರಲ್ಲಿದ್ದ ಹಾಗೆ ಕುರುಬರಲ್ಲಿವೆಯೆ ? ಎಂದು ಪ್ರಶ್ನಿಸಿದ್ದಾರೆ. ಲೋಕಾನುಭವದ ಅಭಾವ ಇಂಥ ಪ್ರಶ್ನೆಗಳಿಗೆ ಮೂಲ. ಜನಾಂಗೀಯ ಅಧ್ಯಯನವನ್ನೂ ಮಾಡದೆ ಅಥವಾ ಕುರುಬರ ಚರಿತ್ರೆ ಎಂಬ ಗ್ರಂಥವನ್ನೂ ಅಭ್ಯಸಿಸದೆ ಇಂಥ ಪ್ರಶ್ನೆ ಕೇಳುವುದು ಪ್ರಬುದ್ಧ ಮಾರ್ಗವಲ್ಲ. ಆ ಗ್ರಂಥದಲ್ಲಿ ದಾಸ ಅಥವಾ ದಾಸರಿ ಕುರುಬರು ಎಂಬ ಬೆಡಗು ಇರುವುದನ್ನು ಉಲ್ಲೇಖಿಸಿರುವುದೇ ಅಲ್ಲದೆ ವೈಷ್ಣವಾಚರಣೆಯ ವಿವರವನ್ನೂ ನೀಡಲಾಗಿದೆ—"ಗೊರವಯ್ಯಗಳಂತೆಯೇ ಸಂದರ್ಭಾನುಸಾರವಾಗಿ ಭಿಕ್ಷವನ್ನು

ಬೇಡುವ ದಾಸಯ್ಯಗಳೆಂಬುದೊಂದು ಪಂಗಡವಿರುವುದು. ಇವರು ವಿಷ್ಣು ಭಕ್ತರು. ಇವರು ನಾಮಗಳನ್ನು ಹಚ್ಚುವರು. ಕೊರಳಲ್ಲಿ ತುಳಸೀಮಣಿಯ ಸರವನ್ನು ಹಾಕಿಕೊಳ್ಳುವರು. ಇವರು ಭಿಕ್ಷೆಗೆ ಹೋಗುವಾಗ ಕಂಕುಳಲ್ಲಿ ಭವನಾಶಿ, ಕೈಯಲ್ಲಿ ಗರುಡಸ್ತಂಭ, ಜಾಗಟೆ, ಶಂಖ—ಇವುಗಳನ್ನು ತೆಗೆದುಕೊಂಡು ಹೋಗುವರು. ಬಾಯಲ್ಲಿ ವಿಷ್ಣುಸ್ತೋತ್ರವನ್ನು ಹೇಳಿಕೊಂಡು ಕೈಯಲ್ಲಿ ಜಾಗಟೆಯನ್ನು ಬಾರಿಸುತ್ತಾ ಶಂಖವನ್ನು ಊದುವರು. ಕುರುಬರಲ್ಲಿಯೂ ಶೈವ, ವೈಷ್ಣವ ಎಂಬ ಎರಡು ಭೇದಗಳಿರುವುವು. ವಿಷ್ಣುಭಕ್ತರ ಮನೆಯಲ್ಲಾಗುವ ಶುಭಾಶುಭ ಕಾರ್ಯಗಳಿಗೆ ದಾಸಯ್ಯಗಳನ್ನು, ಶಿವಭಕ್ತರ ಮನೆಯಲ್ಲಾಗುವ ಶುಭಾಶುಭ ಕಾರ್ಯಗಳಿಗೆ ಗೊರವಯ್ಯಗಳನ್ನು ಕರೆದು ಕಟ್ಟಳೆಗಳನ್ನು ತೀರಿಸಿಕೊಳ್ಳುವರು" (ಪು. 25).

(೪) "ಬೀರಪ್ಪ ಬಚ್ಚಮ್ಮ ಎಂಬುವರು ಕನಕದಾಸರ ತಂದೆತಾಯಿಗಳೆಂಬ ಬಗ್ಗೆ ಪೂರ್ವದ ದಾಖಲೆಗಳೇ ಇಲ್ಲ ಎಂಬುದು ಡಾ. ಪುರೋಹಿತರ ಆಧಾರಪೂರ್ಣ ಹೇಳಿಕೆ" ಎಂದು ದೇವೇಂದ್ರ ಮಾಧವನವರು ಹೇಳಿದ್ದಾರೆಯೇ ವಿನಾ, ಆ ಆಧಾರಗಳು ಯಾವುವು ಎಂಬುದನ್ನು ಹೆಸರಿಸದಿರುವುದು, ವಾದದ ಕೊರತೆಯಾಗಿ ಪರಿಣಮಿಸಿದೆ. 1912ರಲ್ಲಿ ಪ್ರಕಟವಾದ 'ಸಚಿತ್ರ ಕನಕದಾಸರ ಚರಿತ್ರೆ' ಎಂಬ ಯಕ್ಷಗಾನ ಕೃತಿಯನ್ನಾಗಲೀ, 1926ರಲ್ಲಿ ಪ್ರಕಟವಾದ 'ಕುರುಬರ ಚರಿತ್ರೆ' ಗ್ರಂಥವನ್ನಾಗಲೀ, 1928ರಲ್ಲಿ ಪ್ರಕಟವಾದ ಸುಬೋಧ ರಾಮರಾಯರ 'ಕರ್ಣಾಟಕ ಹರಿದಾಸ ಕೀರ್ತನ ತರಂಗಿಣಿ' ಗ್ರಂಥವನ್ನಾಗಲೀ ಡಾ. ಪುರೋಹಿತರು ನೋಡಿದ್ದರೆ ಪೂರ್ವದ ದಾಖಲೆಗಳಿಲ್ಲ ಎಂದು ಹೇಳಲು ಹೋಗುತ್ತಿರಲಿಲ್ಲ ಎಂಬುದನ್ನು ದೇವೇಂದ್ರ ಮಾಧವನವರು ಗಮನಿಸಬೇಕು. ಪಿ.ಹೆಚ್‌ಡಿ. ಪ್ರಬಂಧಗಳೆಲ್ಲ ವೇದಗಳಲ್ಲ. ಅವುಗಳಲ್ಲಿ ಎಷ್ಟೋ ಸಂತೆ ಹೊತ್ತಿಗೆ ಮೂರು ಮೊಳ ಜಾತಿಯವು. ಆದ್ದರಿಂದ ಬೇಕಾದಷ್ಟು ಲೋಪ ದೋಷಗಳು ಅರೆಕೊರೆಗಳು ಇರುತ್ತವೆ ಎಂಬ ಅರಿವಿಲ್ಲದೆ ಹೇಳಿದ ಮಾತಾಗಿದೆ ಇದು.

(೫) ಡಾ. ಜಿ. ವರದರಾಜರಾವ್ ಕನಕದಾಸರು ಬೇಡರೆಂದು ಸ್ಪಷ್ಟವಾಗಿ ಹೇಳಿದ್ದಾರೆ ಎಂಬ ದೇವೇಂದ್ರ ಮಾಧವನವರ ಹೇಳಿಕೆ ಓದುಗರನ್ನು ಅಡ್ಡದಾರಿಗೆಳೆಯುವಂಥದು. ಇದು ಸಂಶೋಧನಾ ವಿಮರ್ಶೆಯ ಮುಕ್ತ ಧೋರಣೆ ಎನ್ನಿಸುವುದಿಲ್ಲ. ಡಾ. ಜಿ. ವರದರಾಜರಾಯರು Mysore tribes and castes ಗ್ರಂಥದಲ್ಲಿ ಉಕ್ತವಾದ 'ಕುರುಬರು ತಮ್ಮನ್ನು ಕನಕಜಾತಿಯವರು ಎಂದು ಕರೆದುಕೊಳ್ಳುತ್ತಾರೆ' ಎಂಬುದನ್ನೂ 'ಎಲ್ಲ ಹಿಂದೂ ದೇವರುಗಳನ್ನು ಪೂಜಿಸುತ್ತಾರೆ' ಎಂಬುದನ್ನೂ ಉಲ್ಲೇಖಿಸಿ, ಜೊತೆಗೆ ಬೇಲೂರು ಕೇಶವದಾಸರು ಎಸ್. ಕೆ. ರಾಮಚಂದ್ರರಾಯರು 'ರಾಮಾನುಜ ಮತದ ಪ್ರಭಾವಕ್ಕೆ ಕುರುಬರೂ ಒಳಗಾದರು' ಎಂಬುದನ್ನು ನೆನೆದು "ಕನಕದಾಸರು ಈ ಉಪವರ್ಗಕ್ಕೆ ಸೇರಿದವರಿರಬಹುದೆಂದು ಹೇಳಬಹುದು. ಆಗ ಕುರುಬ ಜನಾಂಗಕ್ಕೆ ಕನಕದಾಸರಲ್ಲಿ ಇರುವ ಅಪಾರವಾದ ಅಭಿಮಾನಕ್ಕೂ ನಾವು ಸಮಾಧಾನ ಹೇಳಬಹುದು" ಎಂದು ಹೇಳಿದ್ದಾರೆಯೇ ವಿನಾ, ಕನಕದಾಸರು

ಬೇಡರೆಂದು ಹೇಳಿಲ್ಲ. ಹೇಳಿಲ್ಲದ ವಿಷಯವನ್ನು ಹೇಳಿದ್ದಾರೆ ಎಂದನ್ನುವುದು ತೀರ ಕೆಳಮಟ್ಟದ ಅಭಿರುಚಿ ಎನ್ನಿಸಿಕೊಳ್ಳುತ್ತದೆ (೬) "ಪ್ರೊ. ದೇ. ಜವರೇಗೌಡರ ಸಂಪಾದಕತ್ವದಲ್ಲಿ ಹೊರಬಂದ 'ಕನಕ ಸಾಹಿತ್ಯ ದರ್ಶನ' ಗ್ರಂಥದಲ್ಲಿ ಕನಕದಾಸರ ಜಾತಿಗೆ ಸಂಬಂಧಿಸಿ ಬಹುಪಾಲು ಲೇಖಕರು ಹಿಂದಿನವರು ಹೇಳಿದ್ದನ್ನೇ ಪ್ರಸ್ತಾಪಿಸಿ ಕೈತೊಳೆದುಕೊಂಡಿದ್ದಾರೆ. ಕನಕದಾಸರು ಕುರುಬರೆಂಬ ಬಗ್ಗೆ ಹೊಸ ಆಧಾರಗಳನ್ನು ಕೊಟ್ಟಿಲ್ಲ ಮತ್ತು ಜ್ಯೋತಿ ಹೊಸೂರರ ಪೊಳ್ಳು ಹೇಳಿಕೆ, ವಾದಗಳಿಂದ ಇವರು ಪ್ರಭಾವಿತವಾಗಿರುವುದು ಸ್ಪಷ್ಟವಾಗಿದೆ" ಎಂಬ ದೇವೇಂದ್ರ ಮಾಧವನವರ ಹೇಳಿಕೆ ನಗುವನ್ನೂ ಬರಿಸುತ್ತದೆ, ವಿಷಾದವನ್ನೂ ತರಿಸುತ್ತದೆ. ಕನಕದಾಸರು ಕುರುಬರು ಎಂಬ ಬಗ್ಗೆ ಹೊಸ ಆಧಾರಗಳನ್ನು ಕೊಟ್ಟಿಲ್ಲ—ಎಂಬ ಮಾತು ನಗೆಬರಿಸುವಂಥದು. ಪ್ರಾಥಮಿಕ, ಮಾಧ್ಯಮಿಕ, ಪ್ರೌಢಶಾಲೆಗಲ್ಲೆಲ್ಲ ಒಬ್ಬನೇ ಅಪ್ಪನ ಹೆಸರನ್ನು ಬರೆಸಿ ಬರೆಸಿ ಹಳೆಯದಾಯಿತೆಂದು ಕಾಲೇಜಿನಲ್ಲಿ ಹೊಸ ಅಪ್ಪನ ಹೆಸರು ಬರೆಸು ಎಂದು ಕೇಳಿದಂತಿದೆ ! ಇನ್ನು ಜ್ಯೋತಿ ಹೊಸೂರರ ಪೊಳ್ಳು ಹೇಳಿಕೆ, ವಾದಗಳಿಂದ ಇವರು (ಆ ಗ್ರಂಥದ ಲೇಖಕರು) ಪ್ರಭಾವಿತರಾಗಿರುವುದು ಸ್ಪಷ್ಟವಾಗಿದೆ—ಎಂಬ ದೇವೇಂದ್ರ ಮಾಧವನವರ ಆರೋಪ ವಿಷಾದನೀಯ. ಜ್ಯೋತಿ ಹೊಸೂರರ ಬರವಣಿಗೆಯ ಸತ್ತ್ವ ಮತ್ತು ಸಮತೂಕ ಸಾಧಿಸಬೇಕಾದರೆ ಮಾಧವನವರು ಇನ್ನೂ ಹೆಚ್ಚು ಕಾಲ ಮಾಗಬೇಕಾಗುತ್ತದೆ. ಮಾಗಿಲ್ಲದಿರುವುದರಿಂದಲೇ ಜ್ಯೋತಿ ಹೊಸೂರರ ವಾದವನ್ನು ಪೊಳ್ಳು ಹೇಳಿಕೆ ಎಂದು ಕರೆದಿರುವುದು ಹಾಗೂ ಉಳಿದವರು ಅವರಿಂದ ಪ್ರಭಾವಿತರಾಗಿದ್ದಾರೆ ಎಂಬ ಹಸಿಸುಳ್ಳನ್ನು ಆರೋಪಿಸಿರುವುದು. ಡಾ. ಜಿ. ವರದರಾಜರಾವ್ ಕನಕದಾಸರು ಬೇಡರು ಎಂದು ಹೇಳದಿದ್ದರೂ, ಅವರು ಹೇಳಿದ್ದಾರೆ ಎಂದು ವಾದಿಸಿರುವ ದೇವೇಂದ್ರ ಮಾಧವನವರ ಹೇಳಿಕೆಯನ್ನು ಬೇಕಾದರೆ 'ಪೊಳ್ಳು' ಎಂದು ಹೇಳಬಹುದೇ ವಿನಾ, ಜ್ಯೋತಿ ಹೊಸೂರರ ವಾದವನ್ನಲ್ಲ. (೭) "ಕನಕದಾಸರ ಜಾತಿ ವಿಚಾರ ತಿಳಿಸುವ ಮಹತ್ವದ ದಾಖಲೆಯೊಂದಿದೆ. ಇಲ್ಲಿಯವರೆಗೆ ಮಂಥನ ಮಾಡಿದ ಮಹನೀಯರ ಲಕ್ಷ್ಯಕ್ಕೆ ಅದು ಬಂದಿಲ್ಲ. ಅದೇ ಕನಕದಾಸರ ಬೆಡಗು (ಗೋತ್ರ). ಕುರುಬರಿಗೂ ಕನಕದಾಸರ ಬೆಡಗು ಗೊತ್ತಿಲ್ಲ. ಆದರೆ ಬೇಡರು ಮಾತ್ರ ಅದನ್ನು ದಾಖಲಿಸುತ್ತಾ ಬಂದಿದ್ದಾರೆ. ಕನಕದಾಸರು 'ಮಂದಲ' ಗೋತ್ರದವರು. 1959ರಲ್ಲಿ ಪ್ರಕಟವಾದ ವಾಲ್ಮೀಕರ ಪುರಾಣದಲ್ಲಿ ಕನಕದಾಸರ ಗೋತ್ರವೂ ಇದೆ."

—ಮಾಧವನವರು ಕಲ್ಪಿತ ಭ್ರಮಾಲೋಕದಲ್ಲಿ ಕಣ್ಣಾಟ್ಟಿಕಟ್ಟಿದ ಕುದುರೆಯಂತೆ ಅತ್ತಿತ್ತ ನೋಡದೆ ಓಡುತ್ತಿದ್ದಾರೆ ಎಂಬುದು ಮೇಲಿನ ಮಾತುಗಳಿಂದ ತಿಳಿದು ಬರುತ್ತದೆ. 'ಕುರುಬರಿಗೂ ಕನಕದಾಸರ ಬೆಡಗು ಗೊತ್ತಿಲ್ಲ' ಎಂಬ 'ಕಣಿ' ಹೇಳಿಕೆಯ ಸರ್ವಜ್ಞ ಧೋರಣೆ ಅಪ್ರಬುದ್ಧತೆಯ ಆಲಾಪವಲ್ಲದೆ ಬೇರೆಯಲ್ಲ. ಅಂಡೆಕುರುಬರು ಎಂಬುದು ಹಾಲುಮತ ಕುರುಬರ ಬೆಡಗುಗಳಲ್ಲೊಂದು. 'ಕುರುಬರ

ಚರಿತ್ರೆ' ಗ್ರಂಥದಲ್ಲಿ 'ಹಾಲುಮತ ಪುರಾಣ' ಗ್ರಂಥದಲ್ಲಿ ಅದು ದಾಖಲಾಗಿರುವುದನ್ನು ಗಮನಿಸಬಹುದು. 1912 ರಲ್ಲಿ ಪ್ರಕಟವಾದ 'ಸಚಿತ್ರ ಕನಕದಾಸರ ಜೀವನ ಚರಿತ್ರೆ' ಎಂಬ ಯಕ್ಷಗಾನ ಕೃತಿಯಲ್ಲಿ, 1926 ರಲ್ಲಿ ಪ್ರಕಟವಾದ 'ಕುರುಬರ ಚರಿತ್ರೆ' ಕೃತಿಯಲ್ಲಿ, 1928 ರಲ್ಲಿ ಪ್ರಕಟವಾದ ಸುಬೋಧರಾಮರಾಯರ 'ಕರ್ನಾಟಕ ಹರಿದಾಸ ಕೀರ್ತನ ತರಂಗಿಣಿ' ಕೃತಿಯಲ್ಲಿ ಕನಕದಾಸರು ಹಾಲುಮತದ ಅಂಡೆಕುರುಬರು ಎಂಬ ಬೆಡಗಿಗೆ ಸೇರಿದವರು ಎಂಬುದು ಉಕ್ತವಾಗಿರುವಾಗ, 1959 ರಲ್ಲಿ ಪ್ರಕಟವಾದ 'ವಾಲ್ಮೀಕಿರ ಪುರಾಣ' ದಲ್ಲಿ ಕನಕದಾಸರ ಬೆಡಗು 'ಮಂದಲ' ಎಂದಿದೆಯೆಂದೂ, ಇದು ಕುರುಬರಿಗೆ ತಿಳಿದಿಲ್ಲವೆಂದೂ ಹೇಳುವುದು 'ಊರೆಲ್ಲ ನಕ್ಕಮ್ಯಾಲೆ ನಮ್ಮನೆ ಕಿವುಡ ನಕ್ಕ' ಎಂಬ ಗಾದೆಮಾತನ್ನು ನೆನಪಿಗೆ ತರುತ್ತದೆ. ಮೊದಲು ಹುಟ್ಟಿದ ಕಣ್ಣಿಗಿಂತ ಆಮೇಲೆ ಹುಟ್ಟಿದ ಹಲ್ಲಿಗೇ ಹೆಚ್ಚು ಬೆಲೆ ಎಂದು ಮಾಧವನವರು ತಿಳಿದುಕೊಂಡಿರುವುದು ದುರದೃಷ್ಟಕರ.

'ಬೇಡರು ಮಾತ್ರ ಕನಕದಾಸರ ಬೆಡಗನ್ನು ದಾಖಲಿಸುತ್ತಾ ಬಂದಿದ್ದಾರೆ' ಎಂದು ಹೇಳಿರುವ ದೇವೇಂದ್ರಮಾಧವನವರು, 1959ರಲ್ಲಿ ಪ್ರಕಟವಾದ ಆ ಕೃತಿಯೊಂದನ್ನು ಬಿಟ್ಟು ಉಳಿದಾವ ಕೃತಿಗಳಲ್ಲಿ ದಾಖಲಿಸುತ್ತಾ ಬಂದಿದ್ದಾರೆ ಎಂಬುದನ್ನು ಹೇಳಿದ್ದರೆ ಅವರ ವಾದಕ್ಕೆ ಪುಷ್ಟಿದೊರಕುತ್ತಿತ್ತು. ಇಲ್ಲಿ ಜಿ. ವರದರಾಜರಾವ್ ಅವರ ಮಾತನ್ನು ಉದಾಹರಿಸುವುದು ಸೂಕ್ತ—"ವಾಲ್ಮೀಕಿ ಗೋತ್ರಜರೆಂದು ಕರೆದುಕೊಳ್ಳುವ ನಾಯಕರು ತಮ್ಮ ಜನಾಂಗದ ಪ್ರಮುಖರನ್ನು ತಿಳಿಸುವಲ್ಲಿ ಕಣ್ಣಪ್ಪ, ವೆಲಗುಂಟವೀರ, ಕುಮಾರರಾಮ, ಭೀಮಕಂದ ಮೊದಲಾದವರನ್ನು, ಕನ್ನಡನಾಡಿನ ಅನೇಕ ಪಾಳೆಯಗಾರರನ್ನು ಉದಾಹರಿಸಿರುವರಲ್ಲದೆ, ಅವರು ಎಲ್ಲಿಯೂ ಕನಕದಾಸರ ಹೆಸರನ್ನು ಹೇಳಿರುವುದು ನನ್ನ ಗಮನಕ್ಕೆ ಬಂದಿಲ್ಲ (ನೋಡಿ : 'ವಾಲ್ಮೀಕಿ ನಾಯಕುಲ ಜೀವಿತ ಚರಿತ್ರಮು' ಲೇ|| ವೈ. ವಿ. ಸುಬ್ಬಯ್ಯನಾಯ್ಡು, ಕರ್ನೂಲು ; 'ವಾಲ್ಮೀಕಿ ವಂಶಪಾವನ' ಭಾಗ ೧ : ಲೇ || ವಿ. ರಂಗರಾಯಕ, ಪಾವಗಡ 1938)".

ಹೀಗೆ ನಾಯಕರ ಇತಿಹಾಸ ಸಂವೀಕ್ಷಣೆಯ ಗ್ರಂಥಗಳಲ್ಲೇ ಕನಕದಾಸರ ಹೆಸರಿನ ದಾಖಲೆ ಇಲ್ಲದಿರುವಾಗ, 'ಮೊದಲಿನಿಂದ ಕನಕದಾಸರ ಬೆಡಗನ್ನು ದಾಖಲಿಸುತ್ತಾ ಬಂದಿದ್ದಾರೆ' ಎಂಬ ವಾದಕ್ಕೆ ಎಳ್ಳುಕಾಳು ಮುಳ್ಳುಮೊನೆಯಷ್ಟು ಬೆಲೆ ಸಿಗುತ್ತದೆಯೆ ? ಆದರೆ ಕುರುಬರಲ್ಲಿ ಕನಕಯ್ಯನ ಜಾತಿ ಎಂಬುದೊಂದು ಬೆಡಗೇ ಇದೆ. ಅಷ್ಟೇ ಏಕೆ ತಮಿಳುನಾಡಿನಲ್ಲೂ ಕುರುಬರು ತಮ್ಮ ಜಾತಿಯನ್ನು 'ಕನಕೇಯನ್' ಎಂದು ದಾಖಲಿಸುವವರಿದ್ದಾರೆ. ಹೀಗಿರುವಾಗ ದೇವೇಂದ್ರಮಾಧವನವರು ಹಿಂದೆ ಗೊತ್ತಿಲ್ಲದೆ ಮುಂದೆ ಗೊತ್ತಿಲ್ಲದೆ ಇಂಥ ಅಪಕ್ವ ಆಧಾರವನ್ನು, ಸಮುದ್ರದಾಳಕ್ಕೆ ಮುಳುಗಿ ಮುತ್ತನ್ನು ಹೊತ್ತುತಂದವರಂತೆ ಕಪ್ಪೆಚಿಪ್ಪನ್ನು ಹೊತ್ತುತಂದು 'ಇದು ಕುರುಬರಿಗೂ ಗೊತ್ತಿಲ್ಲ' ಎಂದು ಹೇಳಿದರೆ ನಗು ಬಾರದಿರದು. ವಾಸ್ತವ ಸತ್ಯಕ್ಕಾಗಿ ಇಷ್ಟೆಲ್ಲ ಹೇಳಬೇಕಾಯಿತು. ಕನಕದಾಸರಂಥ ಮಹಾತ್ಮರು ಕುರುಬರಲ್ಲಿ ಹುಟ್ಟಿದ್ದರೂ

ಅವರು ಕುಲಾತೀತರು; ಎಲ್ಲರ ಸ್ವತ್ತು. ಆದ್ದರಿಂದ ದೇವೇಂದ್ರ ಮಾಧವನವರು ಇಂಥ ದುರ್ಬಲ ಆಧಾರಗಳ ಭಾವುಕ ಜಗ್ಗಾಟದಿಂದ ಕಾಲಶಕ್ತಿಗಳನ್ನು ವ್ಯಯ ಮಾಡುವ ಬದಲು, ಅವರ ಸಾಹಿತ್ಯಾಧ್ಯಯನವನ್ನು ಮಾಡಿದರೆ ಹೆಚ್ಚು ಫಲಕಾರಿ.

೫

ಕಾ. ತ. ಚಿಕ್ಕಣ್ಣನವರ ಸಂಪಾದಕತ್ವದಲ್ಲಿ ಪ್ರಕಟವಾಗಿರುವ 'ಕನಕಕಿರಣ' ಗ್ರಂಥದಲ್ಲಿ ಡಾ. ಎಚ್. ಎಸ್. ವೆಂಕಟೇಶಮೂರ್ತಿಯವರು "ಕೀರ್ತನ ಸಾಹಿತ್ಯದಲ್ಲಿ ಕನಕದಾಸರ ಸ್ಥಾನ–ಒಂದು ತೌಲನಿಕ ಅಭ್ಯಾಸ" ಎಂಬ ಲೇಖನವನ್ನು ಬರೆದಿದ್ದಾರೆ. ಅದರಲ್ಲಿ ವಚನಸಾಹಿತ್ಯ ದಾಸಸಾಹಿತ್ಯಗಳ ಆಶಯ ಧೋರಣೆಗಳನ್ನು, ಕನಕಪುರಂದರರ ಒಲವು ನಿಲುವುಗಳನ್ನು ತೌಲನಿಕವಾಗಿ ವಿಚಾರಮಾಡಿದ್ದಾರೆ, ಇತಿಮಿತಿಗಳನ್ನು ಗುರುತಿಸಿದ್ದಾರೆ. ಸಮಾಜ ವಿಮರ್ಶೆಯ ಕೀರ್ತನೆಗಳಲ್ಲಿ ಪುರಂದರರಿಗಿಂತ ಕನಕರಲ್ಲಿ ಹೆಚ್ಚಿನ 'ವಿಮರ್ಶನ ಧೈರ್ಯ' ಇರುವುದನ್ನು ಮೆಚ್ಚಿಕೊಂಡಿದ್ದಾರೆ. ಆದರೆ ಕನಕದಾಸರ ವ್ಯಕ್ತಿನಿಷ್ಠ ಕೀರ್ತನೆಗಳಲ್ಲಿ ಇಂಥ ಅರ್ಥಪೂರ್ಣತೆ ಕಂಡುಬರುವುದಿಲ್ಲವೆಂದು "ನೀ ಮಾಯೆಯೊಳಗೊ ನಿನ್ನೊಳು ಮಾಯೆಯೊ, ತಲ್ಲಣಿಸದಿರು ಕಂಡ್ಯ ತಾಳು ಮನವೆ, ತನು ನಿನ್ನದು ಜೀವನ ನಿನ್ನದು, ಡಿಂಬದಲ್ಲಿರುವ ಜೀವ ಕಂಬಸೂತ್ರ ಗೊಂಬೆಯಂತೆ" ಕೀರ್ತನೆಗಳನ್ನು ಹೆಸರಿಸಿ ಹೀಗೆ ಹೇಳಿದ್ದಾರೆ—"ಕನಕದಾಸರಲ್ಲಿ ಸಾಮಾನ್ಯವಾಗಿ ಕಂಡುಬರುವ 'ಕವಿಯ ಎಚ್ಚರ'ದ ಶಬ್ದಮೋಹ, ಸುತ್ತು ಬಳಸಿನ ಅರ್ಥಕ್ಲೇಶ ಅವರ ಈ ಶ್ರೇಷ್ಠ ಕೃತಿಗಳಲ್ಲಿ ಕಂಡುಬರುವುದಿಲ್ಲವಾದರೂ ಪುರಂದರ ಮೊದಲಾದ ಹಿರಿಯ ಹರಿದಾಸರ ಸುಪ್ರಸಿದ್ಧ ಹಾಡುಗಳ ಪ್ರಭಾವ ಕನಕದಾಸರ ಶ್ರೇಷ್ಠ ಕೃತಿಗಳಲ್ಲಿ ಸೂಕ್ಷ್ಮವಾಗಿ ಕಂಡುಬರುವುದು ಮತ್ತು ಕನಕದಾಸರ ಶ್ರೇಷ್ಠ ಕೃತಿಗಳೂ ಸಹ ಶ್ಲಾಘ್ಯವಾದ ಹೋಲಿಕೆಗಳೊಂದಿಗೆ ಬೆಳೆಯುವುದೇ ಹೊರತು, ಒಟ್ಟು ಕೀರ್ತನೆಯನ್ನೇ ವ್ಯಾಪಿಸಿ ಅರ್ಥವರ್ತುಲಗಳ ನಿರಂತರ ಸುರುಳಿ ಬಿಚ್ಚಬಲ್ಲ ಪ್ರತಿಮಾ ನಿರ್ಮಾಣದಿಂದಲ್ಲ. ಕನಕದಾಸರ ಅತ್ಯುತ್ತಮ ಕೃತಿಗಳು ತಮ್ಮ ಪ್ರಾಮಾಣಿಕ ಭಾವದ ತುಂಬು ಮೊರೆಯಿಂದ, ಕೆಲವು ಅರ್ಥವತ್ತಾದ ಉಪಮಾನಗಳ ಸಹಾಯದಿಂದ, ಸೂಕ್ಷ್ಮವಾದ ಚಿಂತನೆಗಳ ಗ್ರಹಿಕೆಯಿಂದ ತಮ್ಮಷ್ಟಕ್ಕೇ ಒಂದು ಒಟ್ಟಾದ ಅಖಂಡತೆಯನ್ನು ಸಾಧಿಸುವುದಾದರೂ, ಪುರಂದರದಾಸರ ಗಿಳಿಯು ಪಂಜರದೊಳಿಲ್ಲ, ಹರಿ ಕುಣಿದ, ಗುಮ್ಮನ ಕರೆಯದಿರೆ, ಕದವ ಮುಚ್ಚಿದಳಿದಕೊ ಮೊದಲಾದ ಕೃತಿಗಳಂತೆ ತಮ್ಮ ಪ್ರತಿಮಾನಿಷ್ಠತೆಯಿಂದ ಅರ್ಥನಾದವನ್ನು ಆಕಾರಗೆಡದಂತೆ ಹಿಗ್ಗಿಸಿಕೊಳ್ಳಬಲ್ಲ ಸಾಮರ್ಥ್ಯವನ್ನು ಪಡೆಯದೆ ಹೋಗುತ್ತವೆ. ಕನಕದಾಸರು ಹರಿದಾಸರಲ್ಲಿ ಕವಿ ಎಂಬ ಹೇಳಿಕೆ ಈ ಹಿನ್ನೆಲೆಯಲ್ಲೇ ಪ್ರಶ್ನಾರ್ಹವಾಗುವುದು. ಕೀರ್ತನೆಗಳಲ್ಲದೆ, ಶುದ್ಧ ಕಾವ್ಯಕೃತಿಗಳನ್ನು ಅವರು ಬರೆದಿದ್ದಾರೆ ಎಂಬರ್ಥದಲ್ಲಿ ಮಾತ್ರ ಈ ಹೇಳಿಕೆ ಉಚಿತವಾಗಬಹುದಷ್ಟೆ. ಕೀರ್ತನೆಗಳನ್ನೇ ತೆಗೆದುಕೊಂಡರೆ

ಪುರಂದರದಾಸರ ಕೃತಿಗಳು, ಸಾಹಿತ್ಯಿಕ ದೃಷ್ಟಿಯಿಂದ, ಕನಕದಾಸರ ಕೀರ್ತನೆಗಳಿಗಿಂತ ಹೆಚ್ಚು ಸಮರ್ಥವಾದವು ಎಂಬುದರಲ್ಲಿ ಸಂದೇಹವಿಲ್ಲ".

ಕನಕದಾಸರ ಕೀರ್ತನೆಗಳನ್ನು ಪುರಂದರರ ಅಂಕಿತಹಾಕಿ ಕಲಬೆರಕೆತನದಿಂದ ಲಪಟಾಯಿಸಿರುವ ಸತ್ಯವನ್ನು ಮನಗಾಣದೆಯೇ 'ಪುರಂದರ ಮೊದಲಾದ ಹಿರಿಯ ಹರಿದಾಸರ ಸುಪ್ರಸಿದ್ಧ ಹಾಡುಗಳ ಪ್ರಭಾವ ಕನಕದಾಸರ ಶ್ರೇಷ್ಠ ಕೃತಿಗಳಲ್ಲಿ ಕಂಡುಬರುವುದು' ಎಂಬ ವಿಮರ್ಶಾ ಹೇಳಿಕೆ ನೀಡಿರುವುದು ಕನಕದಾಸರಿಗೆ ಎಸಗಿದ ಅನ್ಯಾಯವೆಂದೇ ಹೇಳಬೇಕಾಗುತ್ತದೆ.

'ಕನಕದಾಸರ ಅತ್ಯುತ್ತಮವಾದ ಕೃತಿಗಳು, ಪುರಂದರದಾಸರ ಕೃತಿಗಳಂತೆ ತಮ್ಮ ಪ್ರತಿಮಾ ನಿಷ್ಠತೆಯಿಂದ ಅರ್ಥನಾದವನ್ನು ಆಕಾರಗೆಡದಂತೆ ಹಿಗ್ಗಿಸಿಕೊಳ್ಳಬಲ್ಲ ಸಾಮರ್ಥ್ಯವನ್ನು ಪಡೆಯದೆಹೋಗುತ್ತವೆ' ಎಂಬ ವಿಮರ್ಶಾ ಹೇಳಿಕೆಯೂ, ಉದಾಹರಣೆಯ ಬಲವಿಲ್ಲದೆ, ಒಬ್ಬರನ್ನು ಅಟ್ಟಕ್ಕೇರಿಸಿ ಮತ್ತೊಬ್ಬರನ್ನು ಬುಟ್ಟಿಗೆಸೆಯುವ ಪಕ್ಷಪಾತ ದೃಷ್ಟಿಯಿಂದ ಕೂಡಿರುವುದನ್ನು ಕಾಣುತ್ತೇವೆ.

ಸುಪ್ರಸಿದ್ಧ ಕವಿ ಹಾಗೂ ವಿಮರ್ಶಕರಾದ ಡಾ. ಜಿ. ಎಸ್. ಶಿವರುದ್ರಪ್ಪ ಅವರು 'ನೀ ಮಾಯೆಯೊಳಗೊ ನಿನ್ನೊಳು ಮಾಯೆಯೊ' ಎಂಬ ಕೀರ್ತನೆಯಲ್ಲಿ "ಹೆಜ್ಜೆ ಹೆಜ್ಜೆಗೂ ವಿಸ್ತರಿಸುತ್ತಾ ಹೋಗುವ ಆಶ್ಚರ್ಯಮೂಲವಾದ ಜಿಜ್ಞಾಸೆ ತನ್ನ ವಿಚಾರದ ವಿಲಾಸದಿಂದ, ತಾತ್ವಿಕ ಜಿಜ್ಞಾಸೆಯಲ್ಲದೆ ಸೌಂದರ್ಯದ ಜಿಜ್ಞಾಸೆಯೂ ಆಗಿ, ಕಡೆಗೆ ಈ ಲೋಕದ ಮೂಲಭೂತ ವಿಸ್ಮಯದ ಹೊಳಪಿನಲ್ಲಿ ನಿಲುಗಡೆಯನ್ನು ಕಂಡುಕೊಳ್ಳುವ ರೀತಿ ಅಪೂರ್ವವಾಗಿದೆ" ಎಂದು ಮನಸಾರೆ ಮೆಚ್ಚಿದ್ದರೂ, ವೆಂಕಟೇಶಮೂರ್ತಿಯವರು ಮಾತ್ರ ಹೀಗೆ ಸಾವೇರಿರಾಗ ಹಾಡಿರುವುದು ಸೋಜಿಗವಾಗಿ ಕಾಣುತ್ತದೆ. ಆದ್ದರಿಂದ ಅವರೇ ಹೆಸರಿಸಿರುವ ಪುರಂದರದಾಸರ 'ಹರಿ ಕುಣಿದ' ಎಂಬ ಕೀರ್ತನೆಯನ್ನು ಉದಾಹರಿಸಿ, ಅದು ಹೇಗೆ ಕನಕದಾಸರ ಕೀರ್ತನೆಗಳಿಗಿಂತ ಸಾಹಿತ್ಯಿಕ ದೃಷ್ಟಿಯಿಂದ ತುಂಬ ಮೇಲ್ಮಟ್ಟದ್ದಾಗಿದೆ ಅಥವಾ ಇಲ್ಲ ಎಂಬುದನ್ನು ನೋಡೋಣ :

ಹರಿ ಕುಣಿದ–ನಮ್ಮ
ಹರಿ ಕುಣಿದ ।ಪ।

ಅಕಳಂಕ ಚರಿತ
ಮಕರ ಕುಂಡಲಧರ
ಸಕಲರ ಪಾಲಿಪ
ಹರಿ ಕುಣಿದ ।೧।

ಅರಳೆಲೆ ಮಾಗಾಯಿ
ಕೊರಳ ಮುತ್ತಿನ ಸರ
ತರಳೆಯರೊಡಗೂಡಿ
ಹರಿ ಕುಣಿದ ।೨।

ಅಂದುಗೆ ಪಾಡಗ
ಬಿಂದಲಿ ಬಾಪುರಿ
ಚಂದದಿ ನಲಿವುತ
ಹರಿ ಕುಣಿದ ।೩।

ಉಟ್ಟ ಬಟ್ಟೆಯ ದಟ್ಟಿ
ಇಟ್ಟ ಕಾಂಚಿಯ ಧಾಮ
ದಿಟ್ಟಮಲ್ಲರ ಗಂಡ
ಹರಿ ಕುಣಿದ ।೪।

ಪರಮ ಭಾಗವತರ
ಕೇರಿಯೊಳಾಡುವ
ಪುರಂದರ ವಿಠಲ
ಹರಿ ಕುಣಿದ ।೫।

ಪ್ರತಿಯೊಂದು ಚರಣದಲ್ಲೂ ಒಡವೆವಸ್ತುಗಳ ಪಟ್ಟಿಯನ್ನು ಕೊಟ್ಟು ಹರಿ ಕುಣಿದ ಎಂದು ಅಂತ್ಯವಾಗುವ ಈ ಎಲ್ಲ ಚರಣಗಳಲ್ಲಿ "ಯಾವ ಪ್ರತಿಮಾ ನಿಷ್ಠತೆಯಿದೆ ? ಅದರಿಂದ ಅರ್ಥನಾದವನ್ನು ಆಕಾರಗೆಡದಂತೆ ಹಿಗ್ಗಿಸಿಕೊಳ್ಳಬಲ್ಲ ಸಾಮರ್ಥ್ಯವನ್ನು ಪಡೆದುಕೊಂಡಿದೆ ?" ಎಂಬುದನ್ನು ಸ್ವತಃ ಕವಿಗಳಾದ ಎಚ್. ಎಸ್. ವೆಂಕಟೇಶಮೂರ್ತಿಯವರು ಎಳೆಎಳೆಯಾಗಿ ವಿಶ್ಲೇಷಿಸಿ, ಅರ್ಥವಾಗದ ಓದುಗರಿಗೆ ಮೂರನೆಯ ಕಣ್ಣನ್ನು ಮೂಡಿಸಬೇಕು. ಅವರು ಹಾಗೆ ಮಾಡದಿದ್ದರೆ ಓದುಗರಿಗೆ ಬೇರೆ ದಾರಿ ಇಲ್ಲ—ತಿರುಪತಿಯ ವೆಂಕಟೇಶಮೂರ್ತಿಯ ಮೊರೆಹೋಗುವುದರ ವಿನಾ !

ಇನ್ನು ಉದ್ಧೃತಭಾಗದ ಕೊನೆಯ ಮಾತುಗಳು ಪಕ್ಷಪಾತದ ಪ್ರತಿರೂಪ ವಾಗಿರುವುದನ್ನು ಯಾರಾದರೂ ಮನಗಾಣಬಹುದು, ಅವರೇ ಹೇಳಿದ 'ಹರಿ ಕುಣಿದ' ಎಂಬ ಕೀರ್ತನೆಯ ಸಾಹಿತ್ಯಿಕ ಗುಣ, ಕನಕದಾಸರ 'ನೀ ಮಾಯೆಯೊಳಗೊ ನಿನ್ನೊಳು ಮಾಯೆಯೊ' ಎಂಬ ಕೀರ್ತನೆಯ ಸಾಹಿತ್ಯಿಕ ಗುಣಕ್ಕಿಂತ ಮೇಲೆ ಅಥವಾ ಕೀಳೆ ಎಂಬುದು ಓದುಗರಿಗೆ ವೇದ್ಯವಾಗುತ್ತದೆ.

'ಶುದ್ಧ ಕಾವ್ಯಕೃತಿಗಳನ್ನು ಬರೆದಿದ್ದಾರೆ ಎಂಬರ್ಥದಲ್ಲಿ ಮಾತ್ರ ಕನಕದಾಸರನ್ನು ಕವಿ ಎಂದು ಒಪ್ಪಿಕೊಳ್ಳಬಹುದೇ ವಿನಾ ಕೀರ್ತನೆಗಳಲ್ಲಿ ಕವಿ ಎನ್ನಿಸಿಕೊಳ್ಳುವ ಕಾವ್ಯಗುಣ ಇಲ್ಲ' ಎನ್ನುವ ವೆಂಕಟೇಶಮೂರ್ತಿಯವರ ಹೇಳಿಕೆ ಮೇಲ್ವರ್ಗದ ಪರಂಪರಾಗತ ಅಸೂಯೆಯ ಪಳಯುಳಿಕೆಯ ಪ್ರತೀಕವಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. ಡಾ. ಜಿ. ಎಸ್. ಶಿವರುದ್ರಪ್ಪ ಅವರ ಮಾತುಗಳು ಪ್ರಸ್ತುತ ಸಂದರ್ಭದಲ್ಲಿ ಹೆಚ್ಚು ಬೆಳಕನ್ನು ಚೆಲ್ಲುತ್ತವೆ—"ಪುರಂದರದಾಸರ ಕೀರ್ತನೆಗಳ ಸಂಖ್ಯೆಗೆ ಹೋಲಿಸಿದರೆ ಕನಕದಾಸರ ಕೀರ್ತನೆಗಳು ಅತ್ಯಲ್ಪವಾಗಿ ಕಾಣುತ್ತವೆ ; ಆದರೆ ಕನಕದಾಸರ ಕೀರ್ತನೆಗಳ ಸತ್ವವನ್ನು ಗಮನಿಸಿದರೆ, ಅವು ಪುರಂದರದಾಸರ ಕೀರ್ತನೆಗಳ ಸತ್ವದೊಂದಿಗೆ ಸಮಸ್ಪರ್ಧಿಯಾಗಬಲ್ಲವು. ಹಾಗೆ ನೋಡಿದರೆ ಪುರಂದರದಾಸರ

ಕೀರ್ತನೆಗಳಿಗಿಂತ ಕನಕದಾಸರ ಕೀರ್ತನೆಗಳಲ್ಲಿ ಕಾವ್ಯಗುಣ ಒಂದು ಕೈ ಮಿಗಿಲಾಗಿಯೇ ಇರುವಂತೆ ತೋರುತ್ತದೆ. ಅದಕ್ಕೆ ಕಾರಣ ಕನಕದಾಸರು ಪ್ರಧಾನತಃ ಕವಿಗಳು ಎನ್ನುವುದೇ ಆಗಿದೆ. ಪುರಂದರದಾಸರ ಕೀರ್ತನೆಗಳಂತೆ ಮುಖ್ಯವಾದ ಕಾವ್ಯಗುಣ ಕೇವಲ ಪಲ್ಲವಿಯಲ್ಲಿ ಮಡುಗಟ್ಟಿ, ಉಳಿದ ಚರಣಗಳಲ್ಲಿ ಅದರ ಸಮರ್ಥನೆಯು ತರ್ಕವಾಗಿಯೋ ಅಥವಾ ಪಲ್ಲವಿಯಲ್ಲಿನ ಧ್ವನಿಯನ್ನು ವಾಚ್ಯವಾಗಿ ವಿವರಿಸುವ ಪದ್ಧತಿಯಲ್ಲಿಯೋ ಪರ್ಯವಸಾನವಾಗುವುದು ಕನಕದಾಸರಲ್ಲಿ ಕಡಮೆಯೆಂದೇ ಹೇಳಬಹುದು. ಕನಕದಾಸರಲ್ಲಿ ಕಂಡುಬರುವ ಆಶ್ಚರ್ಯ, ಜಿಜ್ಞಾಸೆ, ಕಲ್ಪಕತೆಗಳು ಬೇರೆಯವರಲ್ಲಿ ವಿರಳವೆಂದೇ ಹೇಳಬಹುದು."

ಡಾ. ಜಿ. ಎಸ್. ಶಿವರುದ್ರಪ್ಪನವರ ಈ ನಿಲುವಿಗೆ ತದ್ವಿರುದ್ಧವಾಗಿರುವ ಡಾ. ಎಚ್. ಎಸ್. ವೆಂಕಟೇಶ್ವರಮೂರ್ತಿಯವರ ನಿಲುವಿನಿಂದ "ಎಲ್ಲರಲ್ಲಲ್ಲದಿದ್ದರೂ ಕೆಲವರಲ್ಲಾದರೂ ಅಪ್ರಜ್ಞಾರೂಪವಾಗಿ ಪರಂಪರೆಯ ಅಸೂಯೆ ಇಣಕಿಹಾಕುತ್ತದೆ" ಎಂಬುದು ಸೂಚಿತವಾಗುತ್ತದೆ. ಆದರೆ ಸತ್ಯವನ್ನು, ಸತ್ತ್ವವನ್ನು ಎಲ್ಲ ಕಾಲಕ್ಕೂ ತುಳಿಯಲು ಸಾಧ್ಯವಿಲ್ಲ ಎಂಬುದು ಅಷ್ಟೇ ಸತ್ಯ ಎನ್ನುವ ಮಾತನ್ನು ಮರೆಯಬಾರದು ಅಷ್ಟೆ.

ಕೆ. ಕುಶಾಲಪ್ಪಗೌಡ

ಬೆಟ್ಟದ ಮೇಲೊಂದು ಮನೆಯನು ಮಾಡಿ

'ಮನೆಯನೆಂದೂ ಕಟ್ಟದಿರು, ಗುರಿಯನೆಂದೂ ಮುಟ್ಟದಿರು' ಎಂದು ಕನ್ನಡದ ಹಿರಿಯರೂ, ಮಹಾಕವಿಗಳೂ ಆದ ಕುವೆಂಪು ಅವರು ಬರೆದ ಕವನದ ಸಾಲುಗಳನ್ನು ಹಿಂದೆ ಅನೇಕ ಸಲ ಓದಿದ್ದರೂ, ಈಗ ನನಗೆ ಅದರ ವಾಚ್ಯಾರ್ಥವೇ ಮುಖ್ಯವೆಂದು ಕಾಣಿಸಲು ತೊಡಗಿತ್ತು. ಓದು ಕೇವಲ ಓದಿನಲ್ಲಿಯೇ ಮುಕ್ತಾಯವಾಗುತ್ತದೆ ಹೊರತು ಕಾರ್ಯದಲ್ಲಿ ಪ್ರಯೋಗಕ್ಕೆ ಬರುವುದು ತೀರ ವಿರಳ. ನಾನು ಇದುವರೆಗೆ ನನಗಾಗಿ ಮನೆಯೊಂದನ್ನು ಕಟ್ಟಿರಲಿಲ್ಲ. ಆದರೆ ನನ್ನ ಸ್ನೇಹಿತರು, ಸಹೀಕರು, ಮಾತ್ರವಲ್ಲ, ನನಗಿಂತ ಪದವಿಯಲ್ಲಿ ಕನಿಷ್ಠರು, ವಯಸ್ಸಿನಲ್ಲಿ ಕಿರಿಯರು, ಬಣ್ಣದಲ್ಲೂ ಕರಿಯರು, ಹೆಚ್ಚೇಕೆ, ಆ ಕವಿಗಳ ಅಪ್ಪಟ ಭಕ್ತರು ಸಹ, ಎಲ್ಲರೂ, ತಮತಮಗೆ ಬೇಕಾದಂತೆ ನಗರದಲ್ಲಿ ಚಂದದ ಮನೆಗಳನ್ನು ಕಟ್ಟಿಕೊಂಡು ತಾವು ನೆಮ್ಮದಿಯಾಗಿ ಬದುಕುತ್ತಿದ್ದೇವೆ ಎಂದುಕೊಂಡಿದ್ದುದು ನನಗೆ ಗೊತ್ತಿತ್ತು. ಮನೆಗಳು ಎಂದರೆ ಬೆಂಕಿಪೆಟ್ಟಿಗೆಗಳನ್ನು ಮೇಲೆ ಮೇಲೆ ಅಡಕಿದಂತೆ ; ಇವುಗಳನ್ನು 'ಫ್ಲ್ಯಾಟ್ಸ್' ಎಂದು ಅನ್ವರ್ಥವಾಗಿ ಕರೆಯುವುದು ; ಇವುಗಳಲ್ಲಿ ಚಂದವಿದೆಯೆಂದು ನನಗೆ ತಿಳಿಯುತ್ತಿರಲಿಲ್ಲ. ನಾನೊಬ್ಬನಾದರೂ, ಮಹಾಕವಿಗಳ ಸಂದೇಶವನ್ನು ಕಾರ್ಯತಃ ಪಾಲಿಸುತ್ತಿದ್ದೇನೆಂದು ನನಗೆ ಒಳಗೊಳಗೇ ಹೆಮ್ಮೆಯಾಗುತ್ತಿತ್ತು.

ಅನಿವಾರ್ಯವಾಗಿ ಸಂಸಾರ ಕಟ್ಟಿಕೊಂಡುದರಿಂದ ನಗರದಲ್ಲಿ ಬಾಡಿಗೆ ಮನೆಯಲ್ಲಿ ವಾಸಿಸಬೇಕಿತ್ತು. ಮನೆ ಮಾಲಿಕರು ಕೇಳಿದಷ್ಟು ಬಾಡಿಗೆ, ಹೇಳಿದಷ್ಟು ಮುಂಗಡ, ತೆರಬೇಕಾಗಿತ್ತು. ಹಾಗೆ ನೋಡಿದರೆ, ನಮ್ಮ ನಗರಗಳಲ್ಲಿ ಎಲ್ಲರಿಗೂ ಮನೆಯಿದೆಯೇ ? ಮನೆಯಿಲ್ಲದವರು ಎಷ್ಟೋ ಮಂದಿ ಇದ್ದಾರೆ. ಅವರು ಬಾಡಿಗೆ ಮನೆಯಲ್ಲಿ ಸಹ ವಾಸ ಮಾಡುವುದಿಲ್ಲ. ಜೋಪಡಿಗಳನ್ನೂ ಕಟ್ಟಿಕೊಳ್ಳುವುದಿಲ್ಲ. ಬೀದಿಯಲ್ಲೋ, ಫುಟ್‌ಪಾತ್‌ಗಳ ಮೇಲೆ ತಮ್ಮ ಸಂಸಾರ ತೂಗಿಸುತ್ತಾರೆ. ಮೂರು ಕಲ್ಲುಗಳನ್ನಿಟ್ಟು ಒಲೆ ಹೂಡುತ್ತಾರೆ. ಕಸಕಡ್ಡಿಗಳನ್ನು ಹೆಕ್ಕಿ, ಒಟ್ಟಿ, ಒಲೆ ಉರಿಸಿ, ಅಲ್ಯೂಮಿನಿಯಂ ಪಾತ್ರೆಯಲ್ಲಿ ಗಂಜಿ ಬೇಯಿಸುತ್ತಾರೆ. ತಮ್ಮ ಕೋಳಿ, ನಾಯಿ, ಬೆಕ್ಕು, ಮಕ್ಕಳು ಮರಿಗಳೊಡನೆ ಅವರ ಜೀವನ ಸಾಗುತ್ತದೆ. ಮನೆ, ಬಾಗಿಲು, ಬೀಗ, ಕಳ್ಳರು,

ಎಂಬ ತೊಂದರೆ ತಗಾದೆಗಳಿಲ್ಲದೆ ಹಾಯಾಗಿಯೇ ಇರುತ್ತಾರೆ. ನಿಜವಾಗಿ ನೋಡಿದರೆ, ಕವಿವಾಣಿಯನ್ನು ಅಕ್ಷರಶಃ ಪಾಲಿಸುವವರು ಇವರೇ ಅಲ್ಲವೆ? ನಾವು, ಸ್ವಂತ ಮನೆಯಿಲ್ಲದಿದ್ದರೇನು? ಅಷ್ಟೇ ಸೌಕರ್ಯಗಳನ್ನುಳ್ಳ ಬಾಡಿಗೆ ಮನೆಯನ್ನು ಹುಡುಕಿ, ಅದರಲ್ಲಿ ವಾಸಿಸುತ್ತೇವೆ. ಆದರೆ ಇವರುಗಳು? ನನ್ನಂಥವರಿಗಿಂತ, ನಿಜ ಜೀವನದಲ್ಲೂ, ಆ ಕವಿ ವಾಣಿಯನ್ನು ಓದದೆ, ಕೇಳದೆ, ಬದುಕುವ ಇವರೇ ಮೇಲಲ್ಲವೆ? ನಾವು ಓದಿ ಏನು ಪ್ರಯೋಜನ? ಎಂದು ಅನೇಕ ಬಾರಿ ಯೋಚಿಸಿದ್ದುಂಟು. ಮತ್ತೆ ಕವಿಗಳು ಹೇಳಿದ್ದಾದರೂ, 'ಮನೆಯನ್ನು ಕಟ್ಟದಿರು' ಎಂದೇ ವಿನಾ, 'ಮನೆಯಲೆಂದೂ ವಾಸ ಮಾಡದಿರು' ಎನ್ನಲಿಲ್ಲವಲ್ಲ ಎಂದು ನಾನೇ ಸಮಾಧಾನಪಟ್ಟುಕೊಳ್ಳುತ್ತಲೂ ಇದ್ದೆನೆನ್ನಿ!

ಬಾಡಿಗೆಯ ಮನೆಯ ಮಾಲಿಕರು ಎಲ್ಲ ಒಂದೇ ಗುಂಪಿಗೆ ಸೇರಿದ ಜನ. ಮೊದಲೆಲ್ಲ ಬಾಡಿಗೆ ಮೂರು ತಿಂಗಳ ಹಣದ ಮೊತ್ತವನ್ನು ಮುಂಗಡವಾಗಿ ಕೊಡುವುದೆಂದಿದ್ದರೆ, ಈಗೀಗ ಹತ್ತು ತಿಂಗಳ, ಅಥವಾ ಒಂದು ವರ್ಷದ ಹಣವನ್ನು ಮುಂಗಡವಾಗಿ ಕೇಳುತ್ತಾರೆ ಆದಕ್ಕೆ ರಶೀದಿಯಿಲ್ಲ. ನಮಗೆ ಬಡ್ಡಿಯೂ ಇಲ್ಲ. ಮತ್ತೆ ಸರಕಾರದವರು ತುಟ್ಟಿಭತ್ಯ ಕೊಡುವುದನ್ನು ಪ್ರಕಟಿಸುವ ಸಂದರ್ಭ ಬಂದಾಗಲೆಲ್ಲ ಇವರೂ ಬಾಡಿಗೆಯನ್ನು ಏರಿಸುತ್ತಾರೆ. ಬಾಡಿಗೆದಾರರು ಮನೆ ಬಿಡುವುದಾದರೆ, ಮೂರು ತಿಂಗಳ ಮೊದಲೇ ನೋಟೀಸು ಕೊಡಬೇಕು. ಆದರೆ ಮಾಲಿಕರಿಗೆ ಮಾತ್ರ ಈ ನಿಬಂಧನೆಯಿಲ್ಲ. ಇಷ್ಟ ಬಂದಾಗ 'ಮನೆ ಖಾಲಿ ಮಾಡಿ' ಎಂದು ಸಣ್ಣ ಮಾತನ್ನು ತಣ್ಣಗೆ ಹೇಳಿ ಬಿಡುತ್ತಾರೆ. ನಾವು ಅವರ ಮನೆ ಬಿಟ್ಟು ಬೇರೆ ಮನೆಗೆ ಹೋದರೂ, ನಾವು ಕೊಟ್ಟಿದ್ದ ಎಡ್ವಾನ್ಸ್ ಹಿಂದಿರುಗಿಸಲು ಕೂಡಲೇ ಮನಸ್ಸು ಮಾಡುವುದಿಲ್ಲ. ಇನ್ನೊಬ್ಬ ಗಿರಾಕಿ ಬಂದ ಮೇಲೆ ಅವನಿಂದ ಪಡೆದು ಆ ಮೇಲೆ ನಮ್ಮದನ್ನು ಕೊಡುತ್ತಾರೆ-ಅರ್ಧ ಮನಸ್ಸಿನಿಂದ, ಆಗ ಬಾ, ಈಗ ಬಾ, ಹೋಗಿ ಬಾ ಎಂದು ಸತಾಯಿಸಿ. ಒಮ್ಮೊಮ್ಮೆ ನಗರ ಕಾರ್ಪೋರೇಷನ್ನಿನವರು, ಮನೆ ತೆರಿಗೆಯ ಅಧಿಕಾರಿಗಳು, ವಿಚಾರಣೆಗೆಂದು ಬಂದಾಗ, 'ನಾವು ಮನೆ ಮಾಲಿಕರಿಗೆ ಸಂಬಂಧಿಕರು; ಬಾಡಿಗೆಯೆಂದೇನೂ ಕೊಡುವುದಿಲ್ಲ. ಫ್ಯಾನು, ಫರ್ನಿಚರು, ಲೈಟು, ನೀರಿಗೆಂದು ತಿಂಗಳಿಗೆ ನೂರೈವತ್ತು ರೂಪಾಯಿ ಮಾತ್ರ ಕೊಡುತ್ತಿದ್ದೇವೆ' ಎಂಬ ತಾಜಾ ಬಿಳಿಯ ಸುಳ್ಳನ್ನು ಹೇಳಬೇಕು!

ನನಗೆ ಸುಳ್ಳು ಹೇಳಲು ಗೊತ್ತಿಲ್ಲವೆಂದರೆ ನೀವು ನಗಬಹುದು. ಕಾರ್ಪೋರೇಷನ್ ಅಧಿಕಾರಿಗಳೂ ನಗುತ್ತಿದ್ದರು. ಅವಮಾನದಿಂದ, 'ಭೂಮಿ ದೇವೀ ಬಾಯಿ ತೆರೆ' ಎಂದು ನಾನು ಆಗ ಪ್ರಾರ್ಥಿಸುತ್ತಿದ್ದೆ. 'ಕಲಿಯುಗದ ಧರ್ಮರಾಯ" ಕಲಿಯುಗದ ಸತ್ಯಹರಿಶ್ಚಂದ್ರ!' ಎಂದೆಲ್ಲ ನನ್ನ ಮಿತ್ರರು ಅಣಕವಾಡಿದ್ದಾರೆ, ನಕ್ಕಿದ್ದಾರೆ. ಬಾಡಿಗೆ ಮನೆಯಲ್ಲಿ ವಾಸ ಮಾಡಿದ ತಪ್ಪಿಗೆ ಈ ಅನಿವಾರ್ಯ ಸುಳ್ಳನ್ನು ಹೇಳದೆ ಬೇರೆ ಉಪಾಯವಿರಲಿಲ್ಲ. ಕಷ್ಟಪಟ್ಟು ಬೆವರಿಳಿಸಿ ಗಳಿಸಿದ ನನ್ನ ದುಡ್ಡಿನಿಂದ ತೆಗೆದ

ಫ್ಯಾನನ್ನು, ಫರ್ನೀಚರನ್ನು ಮಾಲಿಕನದೆಂದು ಅನ್ಯರೆದುರು 'ಡಿಕ್ಲೇರ್' ಮಾಡ ಬೇಕಿತ್ತು! ಪುರಾಣದಲ್ಲಿ ಈಶ್ವರ ನಂಜನ್ನು ಕುಡಿದು ವಿಷಕಂಠನಾದನಂತೆ ಎಂದು ಕೇಳಿದ್ದೇವೆ. ಇಂತಹ ಯಾವುದೋ ಸಂಗತಿಯನ್ನು ಅದು ರೂಪಕಗೊಳಿಸಿ ಹೇಳಿದು ದಾಗಿರಬಹುದು ಎಂದೆನಿಸಿತು. ಅಷ್ಟು ಮಾತ್ರವಲ್ಲ, ಪ್ರತಿ ತಿಂಗಳೂ, ಸಾವಿರ ದಿನ್ನೂರು ರೂಪಾಯಿ ಬಾಡಿಗೆ ಕೊಡುತ್ತಾ ಕೊಟ್ಟ ಹಣ ನೂರೈವತ್ತು ರೂಪಾಯಿ ಎಂದು ನಾನೇ—ಈ ನನ್ನ ಅಮೂಲ್ಯ ಲೇಖನಿಯಲ್ಲಿ ಬರೆದು, ರುಜು ಹಾಕಿ, ದಿನಾಂಕವನ್ನೂ ಗುರುತಿಸಿ ಕೊಡಬೇಕಾಗಿತ್ತು. ಮಾಲಿಕರು ಅದನ್ನು ಭದ್ರವಾಗಿ ತಮ್ಮ ಫೈಲಿನಲ್ಲಿರಿಸಿ, ನನ್ನೆಡೆಗೆ ಮಂದಹಾಸ ಬೀರುತ್ತಿದ್ದರು. ಜತೆಗೆ ಧಾರಾಳ ವಾಗಿ ಮಾತಾಡುತ್ತಿದ್ದರು. 'ನೀವು ನಮ್ಮ ಬಂಧುಗಳಂತೆ. ಏನೋ ಪೂರ್ವ ಜನ್ಮದ ಋಣಾನುಬಂಧ! (ಇದೇ ಸರಿಯಾದ ಪದಪ್ರಯೋಗ) ನಮ್ಮ ಮನೆಯನ್ನು ನಿಮ್ಮ ಸ್ವಂತ ಮನೆಯಂತೆ ನೋಡಿಕೊಂಡಿದ್ದೀರಿ" ಎಂದೆಲ್ಲ ನುಣ್ಣಗೆ ನುಡಿಯು ತ್ತಿದ್ದರು. ಇದು ನಾನು ಆ ಮನೆಯಲ್ಲಿ ವಾಸವಿದ್ದ ಹತ್ತು ವರ್ಷಗಳಲ್ಲಿ, ಪ್ರತಿ ತಿಂಗಳೂ, ಬಾಡಿಗೆ ಹಣ ಕೊಡಲು ಹೋದಾಗ ನಡೆಯುತ್ತಿದ್ದ ಏಕಮುಖವಾದ ಸಂಭಾಷಣೆ. ನನಗಾದರೋ ಆಗ, 'ಇರಬಾರದು, ಏಳಬಾರದು, ನುಡಿಯಬಾರದು' ಎಂಬ ಸ್ಥಿತಿಯಾಗುತ್ತಿತ್ತು. ಆಫೀಸಿಗೆ ಹೊತ್ತಾಗುತ್ತಿತ್ತು.

ನಮ್ಮ ಸ್ವಂತ ಮನೆಯಂತೆ ನೋಡಿಕೊಳ್ಳಬೇಕಾದ ನಿರ್ಬಂಧವನ್ನು ಅವರು ನಮ್ಮ ಮೇಲೆ ಮೊದಲೇ ಒಡ್ಡಿದ್ದರು. ಗೋಡೆಗಳಿಗೆ ಮೊಳೆ ಹೊಡೆಯಬಾರದು. ಟಿ.ವಿ., ರೇಡಿಯೋಗಳನ್ನು ದೊಡ್ಡದಾಗಿಟ್ಟು ಗಟ್ಟಿಯಾಗಿ ಅರಚಿಸಬಾರದು. ನೀರನ್ನು ಮಿತವಾಗಿ ಬಳಸಬೇಕು....ಗಾಳಿಯ ಬಗ್ಗೆ ಅವರಿಗೇನು ಮಾಡಲು ಸಾಧ್ಯವಿರಲಿಲ್ಲ. ಹಾಗಾಗಿ ಅವರು ಆ ಬಗ್ಗೆ ಏನೂ ಹೇಳಲಿಲ್ಲ. ಮತ್ತೆ ಮಹಡಿ ಯಲ್ಲಿರುವ ನಾವು ದಡ ದಡ ನಡೆದು ಸದ್ದು ಮಾಡಬಾರದು. ಪಾತ್ರೆಗಳನ್ನು ಬೀಳಿಸಿ ಶಬ್ದಮಾಡಬಾರದು....ಹೀಗೇ ಹಲವಾರು. ಇವನ್ನೆಲ್ಲ ನಾನೂ, ನನ್ನ ಸಾಧು ಹೆಂಡತಿ ಮಕ್ಕಳೂ ಸರಿಯಾಗಿ ಪಾಲಿಸುತ್ತಿದ್ದೆವು. ಒಮ್ಮೊಮ್ಮೆ ಅತಿಥಿಗಳು ಬಂದಾಗ, ಎಲ್ಲ ಮನೆಗಳಲ್ಲಾಗುವಂತೆ, ಪಾತ್ರೆಗಳು ಡಣ್ಣನೆ ಕೆಳಗೆ ಬಿದ್ದು ಘಂಟಾ ನಾದವಾದಂತಾದಾಗ, ನಾನು ಅಡುಗೆ ಮನೆಗೆ ಧಾವಿಸಿ ಕಣ್ಣಿಂದಲೇ ಪ್ರಶ್ನಿಸುತ್ತಿದೆ. ಆಗ, 'ಪಾತ್ರೆ, ಎಣ್ಣೆ ಪಸೆಯಿಂದಾಗಿ, ಕೈಯಿಂದ ಜಾರಿತು!' ಎಂಬ ಉತ್ತರ, ನಗೆಯ ಬೆಳ್ದಿಂಗಳೊಡನೆ ಹೊರಚಿಮ್ಮುತ್ತಿತ್ತು. ಆಗ ನಾನು, 'ಹೌದು, ಜಾರಿದರೆ ವಸ್ತುಗಳು ಕೆಳಗೆ ಬೀಳುತ್ತವೆ. ತಪ್ಪು ನಿನ್ನದಲ್ಲ ಭೂಮಿಯ ಗುರುತ್ವಾಕರ್ಷಣೆ ಯಿಂದ ಹಾಗಾಗುತ್ತದೆ. ಬಿದ್ದ ಪಾತ್ರೆಯಿಂದಾಗಿ, ಸಮೀಪದ ಗಾಳಿಯ ಕಣಗಳು ತೀವ್ರವಾಗಿ ಕಂಪಿಸಿ, ನಮ್ಮ ಕಿವಿಯ ತಮ್ಮಟೆಗೆ ಅಪ್ಪಳಿಸಿ, ದೊಡ್ಡ ಶಬ್ದ ನಮಗೆ ಕೇಳಿಸುವಂತಾಗುತ್ತದೆ' ಎಂದು ಕಲಿತು ಮರೆತ ಭೌತವಿಜ್ಞಾನವನ್ನು ಹೊರ ಚೆಲ್ಲುತ್ತಿದ್ದೆ. ಅಷ್ಟರಲ್ಲಿ ಕೆಳಗಿಂದ ಯಜಮಾನರ ಕೆಲಸದ ಹುಡುಗ ನಾವಿದ್ದ ಎರಡನೇ

ಮಹಡಿಗೆ ಒಂದೇ ಉಸಿರಿಂದ ಹತ್ತಿ ಏದುತ್ತಾ ಬಂದು ಏನೆಂದು ಕೇಳುತ್ತಿದ್ದ. ಕೆಳಮುಖವಾದ ಗುರುತ್ವಾಕರ್ಷಣೆ ಪಾತ್ರೆಯನ್ನು ಕೆಳಕ್ಕೆ ಸೆಳೆದರೆ, ಶಬ್ದದ ಮೇಲ್ ಮುಖವಾದ ಗುರುತರಾಕರ್ಷಣೆ ಕೆಲಸದ ಹುಡುಗನನ್ನು ಮೇಲಕ್ಕೆ ಎಳೆಯಿತು ಎಂದು, ಅತಿಥಿಗಳು ಹೋದ ಮೇಲೆ ನಾವೆಲ್ಲ ಸೇರಿ ನಗೆಯಾಡುತ್ತಿದ್ದೆವು. ಶಬ್ದಕ್ಕೂ ಗುರುತ್ವಾಕರ್ಷಣ ಶಕ್ತಿಯಂತಹ ಶಕ್ತಿಯಿದೆ—ಎಂಬುದು ನಾನು ಕಂಡುಹಿಡಿದ ಹೊಸತಾದ ವೈಜ್ಞಾನಿಕ ಸಿದ್ಧಾಂತ! ಇದರ ವಿವರವನ್ನು ಇನ್ನೊಮ್ಮೆ ಮಂಡಿಸಬೇಕೆಂದಿದ್ದೇನೆ.

ಬೇರೆಲ್ಲ ನಿಬಂಧನೆಗಳನ್ನು ಪಾಲಿಸಲು ಕಷ್ಟವೇನಾಗಲಿಲ್ಲವಾದರೂ ಗೋಡೆಗೆ ಮೊಳೆ ಹೊಡೆಯಬಾರದು ಎಂಬುದರಿಂದ ಸ್ವಲ್ಪ ಪೇಚಿಗಿಟ್ಟುಕೊಂಡಿತು. ಅಂದರೆ, ಇಷ್ಟೆ. ವರ್ಷಕ್ಕೊಮ್ಮೆ ಬರುವ ಜನವರಿ, ಹೊಸ ವರ್ಷ. ಅವರಿವರಿಂದ ದೊರೆತ, ಅಂದವಾದ, ಸುಂದರವಾದ, ಆಕರ್ಷಕವಾದ, ಚಂದವಾದ, ಕ್ಯಾಲಂಡರುಗಳನ್ನು ತೂಗಹಾಕಬೇಕಲ್ಲ? ಎತ್ತರದಲ್ಲಿ ತೂಗುತ್ತಿದ್ದ ಮನಮೋಹಕವಾದ ಸಿನೆಮಾ ನಟಿಯ ಸುಂದರ ಕಾಲುಗಳನ್ನೇ ಪ್ರಧಾನ ಪ್ರದರ್ಶನವಾಗಿದ್ದ ಇದನ್ನು ಕಂಡ ರಸಿಕ ಮಿತ್ರರೊಬ್ಬರು ಕ್ಯಾಲಂಡರನ್ನು, ಕಾಲ (= ಕಾಲಿನ) + ಅಂಡರ್ (= ಕೆಳಗೆ) ಎಂದು ವ್ಯಾಖ್ಯಾನಿಸಿದ್ದರು. ಗೋಡೆಗೆ ಮೊಳೆ ಹೊಡೆಯದಿದ್ದರೆ ಇವುಗಳನ್ನು ತೂಗಹಾಕಲು ಹೇಗೆ ಸಾಧ್ಯ? ಹೇಗೆಲ್ಲ ಮಾಡಿ, ನೂಲಿನಿಂದ ಕಿಟಕಿಯ ಕಂಬಿಗಳಿಗೆ ಕಟ್ಟಿ ಸುಧಾರಿಸಬಹುದೆಂದರೆ, ಗಾಳಿಗೆ ಪರಪರ ಹಾರುತ್ತ ಕೆಲವೇ ಸಮಯದಲ್ಲಿ ಅವೆಲ್ಲ ಹರಿದು ಹೋಗುತ್ತಿದ್ದುವು. ಇದರಿಂದ ಮಾತ್ರ ನಮಗೆ ತುಂಬ ಆತಂಕವಾಗುತ್ತಿತ್ತು. ಒಟ್ಟಿನಲ್ಲಿ ಈ ತೊಂದರೆಗಳನ್ನು ಹೇಗೋ ಸುಧಾರಿಸಿಕೊಂಡಿದ್ದೆ. ಮನೆಯ ಯಜಮಾನರು ಬಾಡಿಗೆ ಹೆಚ್ಚು ಮಾಡಿದಾಗೆಲ್ಲ ಎದುರುವಾದ ಮಾಡಲು ತಿಳಿಯದೆ ತೆಪ್ಪಗೆ ಕೊಡುತ್ತಿದ್ದೆನಾದರೂ ಮನಸ್ಸಿನಲ್ಲಿ ಕೊತ ಕೊತ ಕುದಿಯುತ್ತಿದ್ದೆ. ಅಂತಹ ಸಂದರ್ಭದಲ್ಲಿ ನನ್ನ ಮನಸ್ಸಿನ ಬೇಗುದಿಯನ್ನು ಯಾರಲ್ಲಾದರೂ ಹೇಳಿಕೊಂಡರೇನೇ ಸಮಾಧಾನ. ಹೀಗೆ ನನ್ನ ಹಿರಿಯ ಮಿತ್ರರಾದ ಸೋತಪುರಾಣಿಕರಲ್ಲಿ ಈ ಬಗ್ಗೆ ಹೇಳಿದಾಗ, ಅವರ ಮಾತು ನನಗೆ ಒಂದು ರೀತಿಯ ಸಮಾಧಾನ ಕೊಡುತ್ತಿತ್ತು.

"ಬಾಡಿಗೆ ಏರಿಸದೆ, ಪಾಪ, ಮನೆ ಮಾಲೀಕ ಏನು ಮಾಡಬಲ್ಲ? ನಮ್ಮ ಸರಕಾರವೇ ವರ್ಷವರ್ಷವೂ ಆ ತೆರಿಗೆ, ಈ ತೆರಿಗೆ ಎಂದು ತೆರಿಗೆಗಳನ್ನು, ಪ್ರಯಾಣ ದರಗಳನ್ನು, ಏರಿಸುತ್ತಲೇ ಹೋಗುತ್ತದೆ. ಪೆಟ್ರೋಲ್, ಸೀಮೆಣ್ಣೆ, ಸಕ್ಕರೆ, ಪೋಸ್ಟ್‌ಕವರ್ ಎಂದು ಮೊದಲೆಲ್ಲ ಎರಡು ಮೂರು ವರ್ಷಕ್ಕೊಮ್ಮೆ, ಆಮೇಲೆ ವರ್ಷಕ್ಕೊಮ್ಮೆ ಈಗೀಗ ವರ್ಷಕ್ಕೆ ಎರಡು ಮೂರು ಸಲ ಬೆಲೆ ಏರಿಸುತ್ತಲೇ ಹೋಗುತ್ತದೆ. "ವಿದೇಶಗಳಿಗೆ ಹೋಲಿಸಿದರೆ, ನಮ್ಮ ತೆರಿಗೆಯ ಮಟ್ಟ ಬಹಳ ಕಡಿಮೆ; ಬೆಲೆಯೇರಿಕೆ ಒಮ್ಮೊಮ್ಮೆ ಜಾಗತಿಕ ಕಾರಣಗಳಿಂದ ಏರಿದರೂ, ನಮ್ಮಲ್ಲಿ ಹತೋಟಿಯಲ್ಲಿದೆ." ಎಂದು ದೇಶೋದ್ಧಾರಮಾಡಲು ಸ್ವಾತಂತ್ರ್ಯ ಬಂದಂದಿ

ನಿಂದಲೂ ಹೆಣಗುತ್ತಿರುವ ಮಂತ್ರಿ ಮಹಾಶಯರು ಪತ್ರಿಕೆಗಳಲ್ಲಿ, ಆಕಾಶವಾಣಿಯಲ್ಲಿ, ದೂರದರ್ಶನದಲ್ಲಿ, ಗಂಟಲು ಬಿರಿಯುವಂತೆ ಘೋಷಿಸುತ್ತಿದ್ದಾರೆ. ನಾವು ಅದನ್ನು ನಂಬುವಂತೆ ನಮ್ಮ 'ಬ್ರೈನ್‌ವಾಶ್' ಮಾಡುತ್ತಾರೆ. ಸಿನೆಮಾ ಟಿಕೇಟು, ಹೋಟೆಲು ಕಾಫಿ, ತಿಂಡಿ ತಿನಿಸು—ಹೀಗೆ ಎಲ್ಲದಕ್ಕೂ ಎಲ್ಲರೂ ಬೆಲೆಯೇರಿಸುತ್ತಲೇ ಇರುವಾಗ, ಹೀಗೆ ಏರುವುದೇ ನಮ್ಮ ಪ್ರಗತಿಯು ಹೆಗ್ಗುರುತೆಂದು ಉಳಿದವರೆಲ್ಲ ತಿಳಿದಿರುವಾಗ, ಮನೆ ಮಾಲಿಕನೂ ಬಾಡಿಗೆಯ ಮಟ್ಟಿಗೆ ಪ್ರಗತಿಶೀಲನಾಗಿದ್ದಾನೆ. ಇದೆಲ್ಲವೂ ಸರ್ವತೋಮುಖವಾದ ಪ್ರಗತಿ ಅಲ್ಲದೆ ಮತ್ತೇನು? ಪ್ರಗತಿಪಥದಲ್ಲಿ ನೀವೂ ಪಾಲುಗಾರರೆಂಬುದು ನಿಮಗೆ ಹೆಮ್ಮೆಯಲ್ಲವೇ?"—ಎಂದು ಚಿಕ್ಕ ಭಾಷಣ ವನ್ನೇ ಕೊಟ್ಟುಬಿಟ್ಟರು.

ಈ ಸ್ತೋತಪುರಾಣಿಕರೇ ಹೀಗೆ. ನಾವೆಲ್ಲ ಒಂದು ವಸ್ತುವಿನ ಎದುರಿಗೆ ನೋಡಿದರೆ ಅವರು ಎದುರಿಂದಲೇ ಅದರ ಹಿಂಬದಿಯನ್ನು ನೋಡುತ್ತಾರೆ. ಅವರ ಕಣ್ಣಿನಲ್ಲಿ ಅಥವಾ ಮನಸ್ಸಿನಲ್ಲಿ ಎಕ್ಸ್‌ರೇ ಇದೆಯೇನೋ ಎಂಬ ಸಂದೇಹ ನನಗೆ ಅನೇಕ ಬಾರಿ ಬಂದಿದೆ. ಕೆಟ್ಟದನ್ನೂ ಒಳ್ಳೆಯದೆಂಬುದಾಗಿ ತೋರಿಸುವಂತೆ ಮಾತನಾಡಿ, ಆ ಕೆಟ್ಟದ್ದು ಕೆಟ್ಟದ್ದೆಂದೇ ನಮ್ಮ ಮನಸ್ಸಿನಲ್ಲಿ ಬೇರೂರುವಂತೆ ಮಾಡು ವುದರಲ್ಲಿ ಅವರು ನಿಸ್ಸೀಮರು. ಬರೆದರೆ ಅವರದೇ ಒಂದು ಪುರಾಣವಾದೀತು. ಪ್ರಸ್ತುತ ವಿಷಯದ ಕಡೆಗೆ ತಿರುಗೋಣ.

ಹೀಗೆ ನಾನು ಸ್ವಂತ ಮನೆಯಿಲ್ಲದೆ ಅಲ್ಪ ಸ್ವಲ್ಪ ತೊಂದರೆಗಳನ್ನು ಅನುಭವಿಸುತ್ತಿದ್ದೇನೋ ನಿಜ. ಪ್ರಪಂಚದಲ್ಲಿ ಹುಟ್ಟಿದ ಮೇಲೆ ತೊಂದರೆಯಿಲ್ಲ ದಿರುತ್ತದೆಯೆ? ಸನ್ಯಾಸಿಗೂ ತೊಂದರೆಯಿದೆ—ಹೆಂಡತಿಯಿಲ್ಲದೆ! ಹೆಂಡತಿಯಿರುವ ಸಂಸಾರಿಗೂ ತೊಂದರೆಯಿದೆ. ಹೆಂಡತಿಯಿರುವುದರಿಂದ! ಹೀಗೆ ನಾನಿದನ್ನೆಲ್ಲ ಸರ್ವ ಸಾಧಾರಣವಾಗಿ ಭಾವಿಸಿಕೊಂಡಿದ್ದೆನಾದರೂ, ನನ್ನ ಮಿತ್ರವೃಂದದವರಿಗೆಲ್ಲ ನನ್ನ ಮೇಲೆ ಅಪಾರವಾದ ಅನುಕಂಪವಿತ್ತೆಂದು ತೋರಿಸುತ್ತಿದ್ದರು. ನನಗೆ ಸ್ವಂತ ಮನೆಯಿಲ್ಲ—ನಾನು ಮನೆ ಕಟ್ಟಿಸಲು ಅವರಂತೆ ಸಾಲ ಸಿಗುವಲ್ಲಿಂದೆಲ್ಲ ಸಾಲ ಮಾಡಿ, ಸಿಗುವ ತಿಂಗಳ ಸಂಬಳದಲ್ಲಿ ಬಹು ಪಾಲು ಸಾಲದ ಕಂತುಗಳಿಗೋಸ್ಕರ ಕಟ್ಟಿ, ತಮ್ಮ ಸಂಸಾರ ತೂಗಿಸಲು ಮತ್ತೆ, ಕಂಡಕಂಡವರೊಡನೆ ಅಂದರೆ ಅಂಗಡಿಯವನು, ಹಾಲಿನವನು, ಅವರು, ಇವರು ಎಂದು ಹಲ್ಲು ಗಿಂಜಿ, ಕಷ್ಟಪಡದೆ, ಹಾಯಾಗಿ ಗೂಳಿಯಂತೆ ಗಾಳಿ ಮೂಸುತ್ತ ಇದ್ದೇನೆಂದು ಅವರಿಗೆ ಅನುಕಂಪ. ತಿಂಗಳು ತಿಂಗಳು ಸಿಗುವ ಸಂಬಳದ ಇಡಿಗಂಟನ್ನು ಹೊತ್ತುಕೊಂಡು ಮನೆಗೆ ಠೀವಿಯಿಂದ ಹೋಗುತ್ತಿರುವ ನಾನು, ಕಂತುಗಳಿಗಾಗಿ ಕಳೆದುಳಿದ ಇಷ್ಟೋ ಅಷ್ಟೋ ದುಡ್ಡನ್ನು ಇಟ್ಟುಕೊಂಡು ಸ್ತೋತ್ರ ಮುಖದಿಂದ ಜೋಲು ನಡಿಗೆಯನ್ನು ನಡೆಯುವ ಅವರು—ಹೀಗೆ ಅವರಿಗೆ ನನ್ನ ಮೇಲೆ ಅನುಕಂಪ ಬಾರದೆ ಇರಲು ಹೇಗೆ ಸಾಧ್ಯ? ಆದುದರಿಂದಲೇ ಅವರಿಂದ ನನಗೆ ಬಾಲ ಹೋದ ನರಿಯ ಉಪದೇಶ ಧಾರಾಳವಾಗಿ

ದೊರೆಯುತ್ತಿತ್ತು. ಪ್ರಪಂಚದಲ್ಲಿ ಉಪದೇಶ ತಾನೆ ಅಗ್ಗವಾಗಿ ಲಭ್ಯವಾಗುತ್ತಿರುವುದು.

"ನೀವು ಇನ್ನೂ ಹೀಗಿರುವುದು ಸರಿಯಲ್ಲ. ಬಾಡಿಗೆ ಮನೆಯಲ್ಲಿ ಎಷ್ಟು ದಿನ ಇರಲು ಸಾಧ್ಯ? ಇಂದಿದ್ದು ನಾಳೆ ಹೋಗು ಎಂದಾಗಲೆಲ್ಲ ನಾವು ಹೊರಡಲೇ ಬೇಕು. ಕಷ್ಟವೋ, ನಷ್ಟವೋ ನಮ್ಮದೇ ಆದ ಸೂರಿನ ಕೆಳಗೆ ನಾವು ವಾಸಿಸುವುದು ಎಂದೂ ಮೇಲು" ಎಂದು ಒಬ್ಬರು ಆರಂಬಿಸಿದರೆ, ಇನ್ನೊಬ್ಬರು:

"ನೋಡಿ, ಈಗ ನೀವು ಕೊಡುತ್ತಿರುವುದಕ್ಕಿಂತ ಸ್ವಲ್ಪ ಹೆಚ್ಚು ಹಣ ಕೊಡುತ್ತಿದ್ದರಾಯ್ತು. ಕೆಲವು ವರ್ಷಗಳಲ್ಲಿ ಕಂತು ಮುಗಿಯುತ್ತದೆ. ಮನೆಯೂ ನಮ್ಮದಾಗುತ್ತದೆ. ಅಷ್ಟರವರೆಗೆ ನಿಮ್ಮ ಮನೆಗೆ ನೀವೇ ಬಾಡಿಗೆ ಕೊಟ್ಟಂತೆ. ಈಗ ಕಷ್ಟಪಟ್ಟರೆ ಮುಂದೆ ಸುಖವುಂಟು. ಈಗ ನೀವು ಇಷ್ಟು ಬಾಡಿಗೆ ಕೊಡುತ್ತಿದ್ದೀರಲ್ಲ, ಅದೇನು ಹಿಂದೆ ಬರುತ್ತದೆಯೇ? ಅದು ಹೊಳೆಗೆ ಸುರಿದಂತೆ''— ಎಂದರು.

"ಆ ಕೆಲವು ವರ್ಷಗಳು ಕಳೆಯುವವರೆಗೆ ಹೇಗೆ ಜೀವಿಸುವುದು ಎಂಬುದೇ ನನ್ನ ಸಮಸ್ಯೆ, ಸ್ವಾಮಿ!

"ನಿನ್ನೆ ನಿನ್ನೆಗೆ, ಇಂದು ಇಂದಿಗೆ, ಇರಲಿ ನಾಳೆಯು ನಾಳೆಗೆ"

ಎಂದು ಶ್ರೀ ಕುವೆಂಪು ಅವರು ಎಷ್ಟು ಸುಂದರವಾಗಿ ಹಾಡಿದ್ದಾರೆ? ಅಲ್ಲದೆ ಇದೇ ಭಾವನೆಯನ್ನು ಉಮರ್ ಖಯಾಮನೆಂಬ ಪರ್ಷಿಯನ್ ಕವಿ ಎಷ್ಟೋ ಶತಮಾನಗಳ ಹಿಂದೆಯೇ ಹೇಳಿದ್ದನ್ನು ಡಿ.ವಿ.ಜಿ.ಯವರ ಅನುವಾದದಲ್ಲೂ ನೀವು ಕೇಳಿಲ್ಲವೆ? ಇಲ್ಲವಾದರೆ ಕೇಳಿ:

"ನಿನ್ನೆ ಸತ್ತಿಹುದು, ನಾಳೆ ಹುಟ್ಟದೆ ಇಹುದು
ಇಂದು ಸುಖವಿರಲದನು ನೆನೆದಳುವುದೇಕೆ?"

ಹೌದಲ್ಲವೇ? ನಾಳೆಯ ಸುಖಕ್ಕಾಗಿ, ಇಂದು ನಾನು ಮಾತ್ರವಲ್ಲದೆ ನನ್ನ ಹೆಂಡತಿ ಮಕ್ಕಳನ್ನೂ ಕಷ್ಟಪಡುವಂತೆ ಮಾಡಲು ನನಗೆ ಇಷ್ಟವಿಲ್ಲ'' ಎಂದು ಉದಾರ ಬುದ್ಧಿಯಿಂದ ಉತ್ತರಿಸಿಬಿಟ್ಟೆ.

ಇದು ಅವರನ್ನು ಸ್ವಲ್ಪ ರೇಗಿಸಿದಂತೆ ಕಂಡಿತು. ಸ್ವಲ್ಪ ಒರಟಾಗಿ ''ಎಲ್ಲದಕ್ಕೂ ಧೈರ್ಯಬೇಕು. ಅದಿಲ್ಲದಿದ್ದರೆ ಏನೂ ಸಾಧ್ಯವಿಲ್ಲ''—ಎಂದು ಚುಚ್ಚಿ ನುಡಿದರು.

ನನಗೆ ಗೊತ್ತಿದ್ದವರೊಬ್ಬರು ಹುಚ್ಚು ಸಾಹಸ ಮಾಡಿ, ಎಲ್ಲ ಕಡೆಯಿಂದಲೂ ಸಾಲ ಮಾಡಿ, ವೈಭವದ ಮನೆ ಕಟ್ಟಿಸಿದರು. ತುಂಬ ಖರ್ಚು ಮಾಡಿ, ಗೃಹ ಪ್ರವೇಶವನ್ನೂ ಮಾಡಿದ್ದರು. ನಾವೆಲ್ಲ ನಮ್ಮ ಶುಭಾಶಯಗಳನ್ನು ಹೊತ್ತುಕೊಂಡು

ಹೋಗಿದ್ದೆವು; ಅಭಿನಂದಿಸಿದ್ದೆವು; ಸಿಹಿ ತಿಂಡಿಯನ್ನು ತಿಂದಿದ್ದೆವು. ಇಷ್ಟೆಲ್ಲ ಆಗಿ, ಅವರ ಸಾಲದ ಬಾಲವಾಗಿ ಬಡ್ಡಿಯೂ ಬೆಳೆದು, ಸಾಲದಷ್ಟೇ ಉದ್ದವಾಯ್ತು. ಮತ್ತೆ ಕೆಲವು ವರ್ಷಗಳಲ್ಲಿ ಸಾಲವೂ ಅದರ ಬಾಲವೂ ಇಮ್ಮಡಿಸಿ, ಅವರಿಗೆ ಹೊರಲಾಗದ ಹೊರೆಯಾಗಿ, ಆ ಮನೆಯನ್ನು ಬೇರೆ ಉಪಾಯವಿಲ್ಲದೆ ಮಾರಲೇಬೇಕಾಯ್ತು. ಇಲಿ ತನ್ನ ಉಗುರು ಸವೆಸಿ ಬಿಲ ತೋಡಿದ್ದೇ ಬಂತು. ಹಾವು ಬಂದುದೇ ಇಲಿಯನ್ನೂ ತಿಂದು, ಬಿಲವನ್ನೂ ತನ್ನದಾಗಿಸಿಕೊಂಡಿತು!

ಇದನ್ನು ಉದಾಹರಿಸಿ ಮಿತ್ರರಿಗೆಂದೆ: "ನಾನು ಗಳಿಸಿದ, ಉಳಿಸಿದ, ಹಣದಿಂದ ಬಿಲದಂತಹ ಮನೆ ಕಟ್ಟಿಸಿ, ಅದರಲ್ಲಿ ಹೆಗ್ಗಣದಂತೆ ಇದ್ದುಕೊಳ್ಳಲು ನನ್ನಿಂದಾಗದು. ಈ ನಗರದಲ್ಲಿ ಮನೆ ಕಟ್ಟಿಸಿದರೆ ನನಗೆ ನನ್ನ ಪುಸ್ತಕಗಳನ್ನಿರಿಸಲೇ ಜಾಗ ಸಾಲದು. ಎಲ್ಲ ಅನುಕೂಲವಿರುವಂತೆ ಕಟ್ಟಿಸಿದರೆ ನಮ್ಮ ಮಿತ್ರರಿಗೊದಗಿದ ಗತಿಯೇ ನನಗೂ ಆದೀತು ಆದುದರಿಂದ ಇಲ್ಲಿರುವಷ್ಟು ದಿನ ಹಾಯಾಗಿದ್ದು, ನಿವೃತ್ತಿಯ ಸಮಯ ಊರಲ್ಲಿ ಹೋಗಿ ಅಲ್ಲೆ ಮನೆಯೊಂದನ್ನು ಕಟ್ಟಿಸಿ ನೆಮ್ಮದಿಯಲ್ಲಿರಬೇಕು. ಇದೇ ನನ್ನ ಯೋಚನೆ'' ಎಂದು ನಿರ್ಧಾರದ ಧ್ವನಿಯಲ್ಲಿ ಹೇಳಿದೆ.

ಇನ್ನು ಈ ಮೂರ್ಖಶಿಖಾಮಣಿಗೆ ಬುದ್ಧಿ ಹೇಳಿ ಪ್ರಯೋಜನವಿಲ್ಲವೆಂದುಕೊಂಡರೇನೋ ಮಿತ್ರರು, ಮತ್ತೆ ಅಂದಿನಿಂದ, ಆ ವಿಷಯವನ್ನು ಎತ್ತಲಿಲ್ಲ.

ಸಾಮಾನ್ಯವಾಗಿ ಸಂಸಾರ ದೊಡ್ಡದಾದಾಗ ಸಂಸಾರಿಗನಿಗೆ ಹಲವು 'ಬೇಕು'ಗಳು ಉಂಟಾಗುತ್ತವೆ. ಗೃಹಸ್ಥನಿಗೆ ತನ್ನ ಹೆಂಡತಿ ಮಕ್ಕಳ ತಗಾದೆಗಳು ಆರಂಭವಾಗುತ್ತವೆ. ಅವರಿಗೆ ಇವನಿಗಿಂತ ಹೆಚ್ಚು ಪ್ರಪಂಚಜ್ಞಾನವಿರುತ್ತದೆ. ಇವನಾದರೋ ನಿತ್ಯ ಆಫೀಸಿಗೆ ಹೋಗುವುದು, ಅಲ್ಲಿಯ ಕೆಲಸ ಕಾರ್ಯಗಳಲ್ಲೆ ಮುಳುಗಿ ಹೋಗಿ, ಕಣ್ಣುಪಟ್ಟಿ ಕಟ್ಟಿದ ಕುದುರೆಯಂತೆ ಬೇರೇನನ್ನೂ ನೋಡದೆ ಕೇಳದೆ ಹೋಗುವುದು, ಬರುವುದು ಮಾಡುತ್ತಿರುತ್ತಾನೆ. ಅವನ ಪ್ರಪಂಚ ಬಹಳ ಚಿಕ್ಕದು. ಆದರೆ ಹೆಂಡತಿ ಮಕ್ಕಳು ಹಾಗಲ್ಲ. ಅವರು ವಿವಿಧ ವರ್ಗದ ಜನರನ್ನು ನೋಡುತ್ತಾರೆ, ತಿಳಿಯುತ್ತಾರೆ. ತಮ್ಮ ಸಮಾನ ಅಂತಸ್ತಿನವರೊಡನೆ ಹೋಲಿಸಿಕೊಳ್ಳುತ್ತಾರೆ. ಅದರ ಕಾರಣವಾಗಿ, ಎರಡು ವಿಷಯಗಳಿಂದ ಅವರು ಕೊರಗುತ್ತಾರೆ. ಒಂದು, ತಮ್ಮ ಸರಿಸಮಾನರಿಗೆ ತಾವು ಯಾವ ರೀತಿಯಿಂದಲೂ ಕಡಮೆಯಾಗಬಾರದೆಂದು. ಎರಡು, ತಮ್ಮ ಸರಿ ಸಮಾನರಿಗಿಂತ ತಾವು ಎಲ್ಲ ರೀತಿಯಿಂದಲೂ ಮೇಲಾಗಬೇಕೆಂದು. ಇದರಿಂದ ಯಜಮಾನನ ಮೇಲೆ ಎಲ್ಲಿಲ್ಲದ ಒತ್ತಡ ತರಲಾರಂಭಿಸುತ್ತಾರೆ.

ಮತ್ತೆ ಯಜಮಾನ ಕತ್ತೆ ದುಡಿದಂತೆ ದುಡಿದು, ಹಣ ಮತ್ತು ಸಂಪತ್ಸಾಧನಗಳ ಗಳಿಕೆಯೊಂದೇ ತನ್ನ ಗುರಿಯೆಂದು ಜೀವನದಲ್ಲಿ ದೊರೆಯುವ ಅಲ್ಪ ಸಂತೋಷವನ್ನೂ ಹಾಳುಮಾಡಿಕೊಂಡು ಡಯಾಬಿಟಿಸ್, ಬ್ಲಡ್‌ಪ್ರೆಷರ್, ಹೃದಯ ದೌರ್ಬಲ್ಯ ಮುಂತಾದ ಶ್ರೀಮಂತ ಕಾಹಿಲೆಗಳನ್ನು ತಾನಾಗಿ ಬರಿಸಿಕೊಳ್ಳುತ್ತಾನೆ. ನನ್ನ ಪುಣ್ಯದಿಂದ, ನನ್ನ ಹೆಂಡತಿ ಮಕ್ಕಳಿಂದ ನನಗೆ ಈ ತಗಾದೆಗಳು ಎಂದೂ ಬಂದಿರಲಿಲ್ಲ.

ಹೀಗಾಗಿ ನೆಮ್ಮದಿಗೆ ಭಂಗವುಂಟಾಗಲಿಲ್ಲವೆಂಬುದೂ ಹೆಮ್ಮೆಯಿಂದ ನಾನು ಹೇಳಿಕೊಳ್ಳುವ ವಿಷಯ.

ಅಂತೂ ಕಾಲ ನಿಲ್ಲುವುದಿಲ್ಲ; ಓಡುತ್ತದೆ. ಇನ್ನೆರಡೇ ವರ್ಷಗಳಲ್ಲಿ ನಾನು ನಿವೃತ್ತನಾಗಲಿದ್ದೇನೆ. ಸಹಜವಾಗಿ ಆಗ ವರಮಾನ ಕಡಮೆಯಾಗುತ್ತದೆ. ಇಷ್ಟರ ವರೆಗೆ 'ಊರು' 'ಊರು' ಎಂದು ಬಡಕೊಂಡರೂ, ಈಗ ಅಲ್ಲಿ ನಾನು ಪರದೇಶಿಯಂತೆ ಕಂಡುಬರಲಾರಂಭಿಸಿತು! ಎಲ್ಲಿ ಬಂದು ತಮ್ಮಲ್ಲೆ ವಕ್ಕರಿಸುತ್ತಾನೋ ಎಂದು ಸಮೀಪದವರು, ಮೆಲ್ಲ ಮೆಲ್ಲ ದೂರವಾಗಲೂ ಪ್ರಾರಂಭಿಸಿದರು. ಇದರ ಸೂಕ್ಷ್ಮವನ್ನೆಲ್ಲ ಮೊದಲೇ, ಆರನೇ ಇಂದ್ರಿಯಜ್ಞಾನದಿಂದ ತಿಳಿದುಕೊಂಡು, ತಿಳಿದರೂ ಹೇಳದ ಸಹದೇವನಂತೆ, ಮೌನವಾಗಿದ್ದ ಹೆಂಡತಿ ಮಕ್ಕಳು, ಈಗಲಾದರೂ ಬುದ್ಧನಿಗೆ ಜ್ಞಾನೋದಯವಾದಂತೆ ನನಗೂ ಜ್ಞಾನೋದಯವಾಯ್ತಲ್ಲ ಎಂದು ನಗೆ ಬೆರೆತ ಪರಿಹಾಸಕ್ಕೆ ತೊಡಗಿದರು. ಇಷ್ಟರಲ್ಲೆ ಮನೆಯೊಡೆಯ, ನಾವು ಮನೆ ಬಿಡಬೇಕೆಂಬ ಅಪ್ಪಣೆ ಮಾಡಿದ!

ಹತ್ತು ವರ್ಷಗಳಿಂದ ವಾಸವಿದ್ದ ಮನೆ! ಚಾಪೆಯಷ್ಟು ಅಗಲವಿದ್ದ ಎರಡು ಮೂರು ಕೋಣೆಗಳಿಂದ ಕೂಡಿದ್ದು, ನಾಟಕದ ಸ್ಟೇಜ್‌ನಂತೆ, ಒಮ್ಮೆ 'ಸಿಟ್ಟಿಂಗ್ ರೂಂ' ಒಮ್ಮೆ 'ಡೈನಿಂಗ್ ಹಾಲ್', ಒಮ್ಮೆ 'ಬೆಡ್ ರೂಂ' ಎಂದೆಲ್ಲ ಸಂದರ್ಭಕ್ಕೆ ಸರಿಯಾಗಿ ಬದಲಾಯಿಸಿ, ಇದ್ದ ಸಾಮಾನುಗಳನ್ನು ಆಚೀಚೆ ಎಳೆದಾಡಿ ಬೆಳಿಗ್ಗೆ ರಾತ್ರಿ ಪರದಾಡುತ್ತಿದ್ದರೂ, ಹಾಯಾಗಿದ್ದ, ಒಗ್ಗಿಕೊಂಡಿದ್ದ ಮನೆ! 'ಬಿಟ್ಟಲ್ಲಿಯೆ ಬೀಡು, ಮತ್ತೆ ಆಡಿದಲ್ಲಿ ಅಂಗಳು' ಎಂದು ಬೇಂದ್ರೆಯವರ ಹಾಡಿನಲ್ಲಿದ್ದಂತೆ ನಾವೆಲ್ಲ ಇಲ್ಲಿ ಬೀಡು ಬಿಟ್ಟಾಗಿತ್ತು. ಈ ಅಂಗಳದಲ್ಲೆ ನಮ್ಮ ಮಕ್ಕಳು ಆಡಿ, ನಾವು ಓಡಾಡಿಯಾಗಿತ್ತು. ಮಾಲಿಕತ್ವವನ್ನು ಬಿಟ್ಟು ಬೇರೆಲ್ಲ ರೀತಿಯಿಂದಲೂ ಮನೆ ನಮ್ಮದೇ ಎಂಬ ಭಾವನೆ ನಮ್ಮದಾಗಿತ್ತು. ಇನ್ನು ನನ್ನ ನಿವೃತ್ತಿಗೆ ಎರಡೇ ವರ್ಷ; ಮತ್ತೆ ಈ ಮನೆಯಲ್ಲಿರುವ ನಮ್ಮ ಸಾಮಾನುಗಳೊಡನೆ ಹೇಗೂ ನಾವು ಹೊರಡುತ್ತೇವೆ. ಆದರೆ ಈಗ ಇನ್ನೊಂದು ಮನೆ ಹುಡುಕಿ, ಹೆಚ್ಚಾದ ಬಾಡಿಗೆ ಕೊಟ್ಟು, ಮುಂಗಡ ತೆತ್ತು, ಲಾರಿ ಬಾಡಿಗೆ ಮತ್ತು ಕೂಲಿ ಕೊಟ್ಟು ಸಾಮಾನು ಸಾಗಿಸುವುದೆಂದರೆ ಸಾಮಾನ್ಯ ಕೆಲಸವಲ್ಲ. ಇದರ ಬದಲು ಇನ್ನಷ್ಟು ಹೆಚ್ಚು ಬಾಡಿಗೆ ಕೊಡುತ್ತೇನೆ. ಇನ್ನು ಎರಡೇ ವರ್ಷ. ಹೇಗಾದರೂ ಸಹಿಸಿಕೊಳ್ಳಿ; ನೀವು ಕೇಳಿದಷ್ಟು ಬಾಡಿಗೆ ಕೊಡುತ್ತೇನೆ ಎಂದು ಗೋಗರೆದರೂ ಪ್ರಯೋಜನವಾಗಲಿಲ್ಲ. 'ಮೂರ್ಖಂಗೆ ಬುದ್ಧಿಯನು ನೂರ್ಕಾಲ ಹೇಳಿದರು, ಗೋರ್ಕಲ್ಲ ಮೇಲೆ ಮಳೆಗರೆದಂತೆ'—ಎಂದು ಸರ್ವಜ್ಞ ಹೇಳಿದ್ದಾನೆ. ತುಪ್ಪ ಹಾಲು, ಜೇನು, ಯಾವುದರಿಂದಲೇ ಅಭಿಷೇಕ ಮಾಡಲಿ, ಶಿಲಾಮೂರ್ತಿ, ಶಿಲಾಮೂರ್ತಿಯಾಗಿಯೇ ಇರುತ್ತದಷ್ಟೆ! ಮನೆ ಮಾಲಿಕರೂ ಈ ರೀತಿಯಾದವರೇ ನನ್ನ ಸಾಮ, ದಾನ, ಭೇದೋಪಾಯಗಳು ಫಲಿಸಲಿಲ್ಲ. ಕೊನೆಯ ದಂಡೋಪಾಯಕ್ಕೆ ನನ್ನಲ್ಲಿ ಸಾಮರ್ಥ್ಯವಿರಲಿಲ್ಲ. ಅಂತೂ ಕಷ್ಟದಿಂದ ಆ ಮನೆ

ಬಿಟ್ಟು ಸ್ನೇಹಿತರ ನೆರವಿನಿಂದ ಮತ್ತೊಂದು ಮನೆಯಲ್ಲಿ ತಳವೂರಿದೆ—ಹೆಂಡತಿ ಮಕ್ಕಳೊಡನೆ. ಯಾವುದೊಂದೂ ನಮಗೆ ಶಾಶ್ವತವಲ್ಲ ಎಂಬ ತತ್ವಜ್ಞಾನ ಹೊರ ಹೊಮ್ಮಲಾರಂಭಿಸಿತು.

ಇನ್ನು ಕವಿಗಳು, ಕಾವ್ಯಗಳು ಎಂದು ಕಾಲ ಕಳೆಯುವಂತಿರಲಿಲ್ಲ. ಊರಲ್ಲಾಗಲೀ, ಕಾಡಲ್ಲಾಗಲೀ, ಮನೆಯೊಂದು ಆಗಲೇ ಬೇಕೆಂದು ನಿರ್ಧಾರ ಮಾಡಿಕೊಂಡೆ. ಆದರೆ ನನಗೆ ಎಚ್ಚರವಾಗುವಷ್ಟರಲ್ಲಿ ತುಂಬ ಬೆಳಗಾಗಿತ್ತು! ನಾನು ಬಯಸಿದ ಜಾಗದಲ್ಲಿ ಮನೆ ಕಟ್ಟಲು ಸ್ಥಳವಿರಲಿಲ್ಲ. ನನಗಿಂತ ಮೊದಲೇ ಎಚ್ಚರಗೊಂಡವರು ಸೈಟುಗಳನ್ನೆಲ್ಲ ಖರೀದಿಸಿದ್ದರು. ನನ್ನ ಕಲ್ಪನೆಯಲ್ಲಿ ಸಳಸಳನೆ ಹರಿಯುವ ಹೊಳೆಯ ಸಮೀಪ, ಎತ್ತರವಾದ ಸ್ಥಳ, ಸುತ್ತಲೂ ತಂಪು ನೆರಳು ಕೊಡುತ್ತಿರುವ ಮರಗಳು, ಕಣ್ಣು ಹರಿಸಿದಲ್ಲೆಲ್ಲ ಹಸಿರು ಚಿಮ್ಮುವ ಬನಸಿರಿ—ಎಲ್ಲ ಬೇಕೆಂದು ಆಸೆಪಟ್ಟಿದ್ದೆ. ಕಾರಣ, 'ನೋಡಿ ನಿರ್ಮಲ ಜಲ ಸಮೀಪದಿ ಮಾಡಿಕೊಂಡರು ಪರ್ಣಶಾಲೆಯ' ಎಂಬ ಪಾರ್ತಿ ಸುಬ್ಬನ ಪಂಚವಟೀ ರಾಮಾಯಣದ ಹಾಡಿನಿಂದ ನಾನು ತುಂಬ ಪ್ರಭಾವಿತನಾಗಿದ್ದೆ. ಆದರೆ ಆಸೆಯೊಂದಿಗೆ ತಕ್ಕ ಸಮಯದಲ್ಲಿ ಕಾರ್ಯಚಟುವಟಿಕೆಯೂ ಇಲ್ಲದಿದ್ದವರಿಗೆ, ಗಾಳಿಯನ್ನು ಮಾತ್ರ ಕೈ ತುಂಬ ಹಿಡಿಯಲು ಸಾಧ್ಯ!

ಹೇಗೋ ಕಷ್ಟಪಟ್ಟು ಹುಡುಕಿ, ಹುಡುಕಿಸಿ, ಬರಡಾದ ಎತ್ತರವಾದ ಕಿರುಬೆಟ್ಟದ ನೆತ್ತಿಯಲ್ಲಿ, ಖಾಲಿ ಜಾಗ ದೊರಕಿತುದೇ ವರದಾನವೆಂದು ಪಡೆದುಕೊಂಡೆ—ಆಗತ್ಯಕ್ಕಿಂತ ಹೆಚ್ಚು ಹಣ ಖರ್ಚು ಮಾಡಿ. ಇನ್ನೇನು ಮನೆ ಆಗಿಯೇ ಹೋಯ್ತು ಎಂದು ಕನಸು, ಹಗಲುಗನಸು, ಕಾಣಲು ತೊಡಗಿದೆ. ಸುಮಾರು ಅದೇ ಸಮಯ, ಏಕೆ ಆ ಚಪಲ ಬಂತೋ ಗೊತ್ತಿಲ್ಲ, ಹಸ್ತಸಾಮುದ್ರಿಕ ಬಲ್ಲ ಮಹಾಶಯರೊಬ್ಬರಿಗೆ ನನ್ನ ಅಂಗೈ ತೋರಿಸಿ ಅವಲಕ್ಷಣ ಹೇಳಿಸಿಕೊಂಡೆ! 'ನೀವು ನಿಮ್ಮ ಸ್ವಂತ ಮನೆ ಮಾರು ಮಾಡಿಕೊಂಡು ಎಂದೂ ಇರಲಾಗುವುದಿಲ್ಲ'—ಎಂದು ಆ ಮಹಾಶಯನ ನಲ್ನುಡಿ! ಒಳ್ಳೆಯ ವಿಚಾರವೇನಾದರೂ ಹೇಳಿದ್ದರೆ ಕೂಡಲೇ ನಂಬಿಬಿಡುತ್ತಿದ್ದೆ. ಆದರೆ ಈಗ ನಂಬಲಾರೆ, ನಂಬದಿರಲಾರೆ ಎಂಬ ಸ್ಥಿತಿಗೆ ನನ್ನನ್ನು ನಾನೇ ತಂದುಕೊಂಡೆ. ಪರಿಣಾಮವಾಗಿ ನನ್ನ ಉತ್ಸಾಹ ಸ್ವಲ್ಪ ಮಟ್ಟಿಗೆ ತಗ್ಗಿತು. ಆದರೂ ಕೈ ಕಟ್ಟಿ ಕುಳಿತುಕೊಳ್ಳಲು ಸಮಯವಲ್ಲ. ನನಗೆ ಗುರುತಿರುವ ಇಂಜಿನಿಯರ್ ಒಬ್ಬರಲ್ಲಿ ಮನೆಯ ನೀಲಿ ನಕಾಶೆ ತಯಾರಿಸಲು, ಅಂದಾಜು ವೆಚ್ಚ ಲೆಕ್ಕ ಹಾಕಲು ಕೇಳಿಕೊಂಡೆ.

ಮಕ್ಕಳಿಗೋ ಎಲ್ಲಿಲ್ಲದ ಉತ್ಸಾಹ! ಮನೆಯ ವರ್ಣಮಯ ಚಿತ್ರ ಅವರ ಕಣ್ಣ ಮುಂದೆ ಚಲಚ್ಚಿತ್ರದ ಸುರುಳಿಯಂತೆ ಬಿಚ್ಚ ತೊಡಗಿತು. ಅದೂ, ಕಪ್ಪು ಬಿಳುಪಿನ ಚಿತ್ರವಲ್ಲ, ಈಸ್ಟ್‌ಮ್ಯಾನ್ ಕಲರ್, ಗ್ಯಾವಾ ಕಲರ್, ಆರ್‌ವೋ ಕಲರ್ ... ಇತ್ಯಾದಿಯಾಗಿ! ಎಲ್ಲವನ್ನೂ ಕೇಳಿಸಿಕೊಂಡ ಇಂಜಿನಿಯರ್, ಕಾರ್ಯ

ಪ್ರವೃತ್ತರಾದರು. ಒಂದೇ ವಾರದಲ್ಲಿ ನೀಲಿ ನಕಾಶೆಯೊಂದಿಗೆ ಹಾಜರಾದರು. ಅಂದಾಜು ವೆಚ್ಚವನ್ನು ಈಗಲೇ ಹೇಳಿಬಿಟ್ಟರೆ ಮೀನು ಗಾಳವನ್ನು ಕಚ್ಚದೆ ಹಿಂಜರಿಯಬಹುದು. ಆದುದರಿಂದ ಭರ್ಜರಿಯಾದ ನೀಲಿ ನಕಾಶೆ, ಅತ್ಯಾಧುನಿಕವಾದ ಸೌಕರ್ಯಗಳು, ಮನೆಯೆಂದರೆ ಇದೇ ಮನೆ !—ಎಂಬಂತೆ ತಯಾರಿಸಿ ನಮ್ಮ ಮುಂದೆ ಮೇಜಿನ ಮೇಲೆ ಹರಡಿ, ಬಣ್ಣಿಸತೊಡಗಿದರು. ನನ್ನ ಪಾಡು ಇರಲಿ ! ನನಗೆ ಸರಿಯಾಗಿ ನಗಲೂ ತಿಳಿಯುವುದಿಲ್ಲ. ಮಕ್ಕಳು ತಮ್ಮ ಗಾಂಭೀರ್ಯವನ್ನು ಮರೆತು, ಈ ರೂಂ ನನಗೆ, ಇದು ನನಗೆ, ಹಾಗೆ, ಹೀಗೆ ಎಂದು ಪರಸ್ಪರ ಕಿತ್ತಾಟ, ಹರದಾಟ, ಅರಚಾಟ, ನಡೆಸಿದರು. ಅನೇಕ ಸಲ ಒಬ್ಬರ ಬೆನ್ನಿಗೆ ಒಬ್ಬರು ಪ್ರೀತಿಯ ಗುದ್ದು ಕೊಟ್ಟುಕೊಂಡರು. ನಗೆ ಚಟಾಕಿಗಳನ್ನು ಹಾರಿಸಿದರು. ಹೆಂಡತಿ ಮೌನದ ಕನಿಕರ ಬೆರೆತ ದೃಷ್ಟಿಯಿಂದ ನನ್ನೆಡೆಗೆ ನೋಡುತ್ತಿದ್ದಳು. ನಾನು ಗಂಭೀರನಾದರೆ, ಏನೋ ಬಲವಾದ ಚಿಂತೆ ನನ್ನನ್ನು ಕಾಡುತ್ತಿದೆಯೆಂದು ಅನುಭವದಿಂದ ಅರಿತ ಸಹಧರ್ಮಿಣಿ; ಕನಿಕರ ಬೆರೆತ ನೋಟವನ್ನು ನನ್ನೆಡೆಗೆ ಬೀರುತ್ತಿರುವ ಅನೇಕ ಸಂದರ್ಭಗಳಿಗೆ ಕೊರತೆಯೇನಿರಲಿಲ್ಲ. ಹೀಗೆ ಈ ಮನೆಯನ್ನು ಮಕ್ಕಳೇ ಆಕ್ರಮಿಸಿಕೊಂಡರೆ, ಮತ್ತೆ ನಾನು, ನನಗೆ ಮತ್ತು ನನ್ನ ಹೆಂಡತಿಗೆ ಎಲ್ಲಿ ಜಾಗ ? ಎಂದು ಯೋಚಿಸುತ್ತಿದ್ದೆ. ಕಾರಣ, ಮಕ್ಕಳು ಮಾಡಿಕೊಂಡ ಹಂಚಿಕೆಯಲ್ಲಿ ನಮಗಲ್ಲಿ ಜಾಗವೇ ಉಳಿದಂತೆನಿಸಲಿಲ್ಲ. ಮತ್ತೆ ಇನ್ನೊಂದು ತರದಿಂದಲೂ ಯೋಚನೆಯಾಯ್ತು. ನಮಗಿಂತ ಹೆಚ್ಚು ಮಕ್ಕಳಿರುವ ತಂದೆ ತಾಯಿಗಳ ಪಾಡೇನು ? ಅವರು ಎಂತಹ ಮನೆ ಕಟ್ಟಿಸಬೇಕಾದೀತು ? ಶ್ರೀಕೃಷ್ಣನಿಗೆ ಹದಿನಾರು ಸಾವಿರ ಹೆಂಡತಿಯರೇ ಇದ್ದರಂತೆ. ಇನ್ನು ಮಕ್ಕಳೆಷ್ಟಿದ್ದುವೋ ? ಆಗ ಅವರಿಗೆಲ್ಲ ಎಷ್ಟು ಮನೆಗಳನ್ನು ಆತ ಕಟ್ಟಿಸಿರಬಹುದು ? ಶ್ರೀರಾಮ ಇವನಷ್ಟು ಶ್ರೀಮಂತನಾಗಿರದಿದ್ದನೇ ? ಹಾಗಾಗಿ, ಏಕಪತ್ನೀವ್ರತ, ಮತ್ತೆ ಗರ್ಭಿಣಿ ಹೆಂಡತಿಯನ್ನು ಕಾಡಿಗೆ ಯಾವುದೋ ನೆವದಿಂದ ಕಳುಹಿಸಲು ಕಾರಣವಾಯ್ತೆ ? ಇದನ್ನೆಲ್ಲ ನೆನೆಸಿದಾಗ ಸ್ವಲ್ಪ ನಗು ಬಂತು. ಅದು ನನ್ನ ಹೆಂಡತಿಯ ಕಣ್ಣುಗಳಲ್ಲೂ ಮಿನುಗಿತು. ಇಷ್ಟು ಹೊತ್ತು ಮೌನವಾಗಿ, ನಗುತ್ತಿದ್ದ ಇಂಜಿನಿಯರ್, ನಗೆಯನ್ನು ಹಿಂದಿಕ್ಕಿ, ಗಂಭೀರರಾದರು. ಮೀನು ಗಾಳಕ್ಕೆ ಬಾಯಿ ಹಾಕಲಿದೆ—ಎಂದು ಅದಕ್ಕೆ ಸಿದ್ಧರಾದಂತೆ ಕಾಣಿಸಿತು.

ಮುಂದೆ ಮನೆ ಕಟ್ಟಲು ಆಗಬಹುದಾದ ಅಂದಾಜು ವೆಚ್ಚ, ಮನೆಯ ಕೆಲಸವನ್ನು ಪೂರ್ತಿಗೊಳಿಸಲು ತಗಲುವ ಸಮಯ ಮುಂತಾದವುಗಳ ವಿವರಣೆ ನೀಡಿದರು. ತಾವೇ ಕಾಂಟ್ರ್ಯಾಕ್ಟರ್ ಆಗಿ, ಮನೆಯನ್ನು ಪೂರ್ತಿಗೊಳಿಸಿ ಕೊಡುವ ಭರವಸೆಯನ್ನೂ ಕೊಟ್ಟರು. ಕಾಲ ಕಾಲಕ್ಕೆ ನಾನು ಸಂದಾಯ ಮಾಡಬೇಕಿದ್ದ ಹಣದ ವಿವರ ತಿಳಿಸಿದರು. ಮೊದಲೆರಡು ಸಾರಿಗೆ ಕೊಡುವಷ್ಟು ಹಣವೇನೋ ನನ್ನ ಉಳಿಕೆಯ ಆಪತ್ ಧನವಾಗಿತ್ತು. ಆದರೆ ಮುಂದಿನದಕ್ಕೆ ? ಈ ಯೋಚನೆ ದೀರ್ಘವಾಗಿ ನನ್ನನ್ನು ಬಾಧಿಸತೊಡಗಿತು. ಮನೆ ಕಟ್ಟಲು ಸಾಲ ಕೊಡುವುದಾಗಿ

ಪ್ರಕಟಿಸುವ ನಾನಾ ಸಂಸ್ಥೆಗಳಿಂದ ಫಾರ್ಮುಗಳನ್ನು, ವಿವರಗಳನ್ನು ತರಿಸಿಕೊಂಡರೆ, ಅವುಗಳ ನಿಬಂಧನೆಗನುಸರಿಸಿ ನಾನು ಯಾವುದಕ್ಕೂ ಅರ್ಹನಲ್ಲವೆಂದು, ಸತ್ಯದರ್ಶನ ವಾಯ್ತು. ಅಂದರೆ ಈ ಹಣಕಾಸು ಸಂಸ್ಥೆಯವರು ನಮ್ಮಂಥವರಿಗೆ ಸಹಾಯ ಮಾಡುವುದಕ್ಕಾಗೇನೂ ಕುಳಿತಿಲ್ಲ. ಅವರಿಗೆ ಲಾಭ ಬರಬೇಕು. ಸಾಲ ಪಡೆಯುವವರು ಪಡೆದುದನ್ನು ತೀರಿಸುವ ಬಗ್ಗೆ ಬೇರೆ ಆಸ್ತಿಗಳದ್ದೇನಾದರೂ ಹೊಣೆ ಕೊಡಬೇಕು. ಸಾಲಿಗನಿಗೆ ಬಡ್ಡಿಯನ್ನೂ ಸಾಲವನ್ನೂ ಕಂತಿನ ರೂಪದಲ್ಲಿ ಕಟ್ಟಿ ತೀರಿಸಲು ತಕ್ಕಷ್ಟು ನಿವೃತ್ತಿ ಪೂರ್ವ ಉದ್ಯೋಗಾವಧಿ ಇರಬೇಕು. ಹೀಗೆಲ್ಲ ಇದ್ದು, ಸಾಲ ಪಡೆದ ಅರ್ಧಾಂಶ ಹಣ, ವಿಧ ವಿಧದ ಸರ್ಟಿಫಿಕೇಟುಗಳನ್ನು ದೊರಕಿಸಿಕೊಳ್ಳಲು ಖರ್ಚಾಗುತ್ತದೆಂದು ಹಾಗೆ ಸಾಲಪಡೆದವರ ಅನುಭವ. ಅಂದರೆ, ಪ್ರತಿಯೊಂದು ಸರ್ಟಿಫಿಕೇಟು ಪಡೆಯಲೂ, ಕೊನೆಯ ಪೇದೆಯಿಂದಾರಂಭಿಸಿ, ತುದಿಯ ಅಧಿಕಾರಿಯವರೆಗೆ, ಮುಂಗೈಗೆ ತುಪ್ಪ, ಜೇನು, ಸವರಿಯೇ ಕೆಲಸ ಮಾಡಿಸಿಕೊಳ್ಳಬೇಕಾದಂತಾದುದು, ಪ್ರಗತಿ ಪಥದಲ್ಲಿ ಸಾಗುತ್ತಿರುವ ನಮ್ಮ ನಾಡಿನ ಈ ಕಾಲದ ವೈಶಿಷ್ಟ್ಯ. ಅಂತೂ ತಡವಾಗಿ ಜ್ಞಾನೋದಯವಾದ ನನಗೆ, ತಕ್ಕ ಶಾಸ್ತಿಯಾಯ್ತೆಂದುಕೊಂಡೆ. ಜತೆಯಲ್ಲೆ, ಈ ಸರ್ಟಿಫಿಕೇಟುಗಳನ್ನು ಪಡೆಯಲು ಅಲೆದಾಡುವ ಶ್ರಮ ತಪ್ಪಿತಲ್ಲ ಎಂದೂ ಹರ್ಷಿಸಿದೆ

ಸ್ವಂತ ಮನೆ ಕಟ್ಟಿಸಲು ಇಷ್ಟು ತೊಂದರೆಯಿರುವುದರಿಂದ, ಬಾಡಿಗೆ ಮನೆಯೇ ಲೇಸು—ಎಂದು ಈಗ ನನಗೆ ಮನೆ ಮಾಲಿಕರಮೇಲೆ ಸಹಜವಾದ ಅನುಕಂಪ ತಲೆಯೆತ್ತಿತು. ಅದರಲ್ಲಿ ವಾಸಮಾಡುವುದರಿಂದ ನಮಗಿರುವ ಕೆಲವು ಅನಾನುಕೂಲತೆಗಳನ್ನು ಮರೆತು, ಅನುಕೂಲತೆಗಳನ್ನೇ ನೆನೆಯತೊಡಗಿದೆ—ಹಂಸ ಕ್ಷೀರ ನ್ಯಾಯದಿಂದ! ಮುಖ್ಯವಾಗಿ, ಲೈಟು ಬಿಲ್ಲು, ನೀರಿನ ಬಿಲ್ಲು, ಮುಂತಾದವುಗಳನ್ನು ಕಟ್ಟಲು ನಾವೇ ಹೋಗಿ ಕ್ಯೂ ನಿಂತು ನಮ್ಮ ಅಮೂಲ್ಯ ಸಮಯವನ್ನು ಹಾಳು ಮಾಡಬೇಕಾಗಿಲ್ಲ. ಮನೆಯ ನೀರೆತ್ತುವ ಪಂಪು ಹಾಳಾದರೆ, ರಿಪೇರಿಯವನನ್ನು ಹುಡುಕಿಕೊಂಡು ಹೋಗುವ ಪರದಾಟ ನಮಗಿಲ್ಲ. ಮನೆ ಮಾಲಕನಿಗೂ ನೀರಿನ ಅಗತ್ಯವಿದ್ದೇ ಇದೆ. ಅವನೇ ರಿಪೇರಿಯವನನ್ನು ಕರೆಸುತ್ತಾನೆ. ಆಗ, ಮನೆಯಲ್ಲಿ ಬಾಡಿಗೆಗಿದ್ದವರೆಲ್ಲ ಸುತ್ತ ಜಮಾಯಿಸುತ್ತಾರೆ. ತಲೆಗೊಂದು ಮಾತಾಡುತ್ತ ಅನೇಕ ಸೂಚನೆ, ಸಲಹೆಗಳನ್ನು ಕೊಡುತ್ತ ಇರುತ್ತಾರೆ. ಮನೆ ಮಾಲಕನೂ, ದೊಡ್ಡ ದನಿಯಿಂದ ಮೋಟರು ತುಂಬಹೊತ್ತು ಓಡುವುದರಿಂದ ಆಗಾಗ ಹಾಳಾಗುತ್ತದೆ ಎಂದು ಪರ್ಯಾಯವಾಗಿ ನಾವೆಲ್ಲ ನೀರನ್ನು 'ನೀರಿನಂತೆ ಖರ್ಚು ಮಾಡುವುದರಿಂದ' ಹೀಗಾಗುತ್ತದೆಯೆಂದು ತಪ್ಪನ್ನು ನಮ್ಮ ತಲೆಗೇರಿಸಲು ನೋಡುತ್ತಾನೆ. ಮತ್ತೆ ರಿಪೇರಿಗೆ ಅಷ್ಟು ಖರ್ಚಾಯ್ತು, ಇಷ್ಟು ಖರ್ಚಾಯ್ತು ಎಂದು ಒತ್ತಿ ಒತ್ತಿ ಹೇಳಿ, ನಾವೆಲ್ಲ ನಾವಾಗಿಯೇ ಅದನ್ನು ಹಂಚಿಕೊಳ್ಳಲು ಮುಂದಾಗುತ್ತೇವೆಯೋ ಎಂದು ನಿರೀಕ್ಷಿಸುತ್ತಾನೆ. ಆದರೆ ಅಷ್ಟರಲ್ಲಿ ಪಂಪು ಸರಿಯಾದುದೇ ತಡ, ಅಷ್ಟರವರೆಗೆ

ತಡೆ ಹಿಡಿದಿದ್ದ ನಮ್ಮ ನಮ್ಮ ಕಾರ್ಯಗಳನ್ನು ಪೂರೈಸಲು ತ್ವರೆಗೊಂಡು ಅವನನ್ನು ಅಲ್ಲಿಯೇ ಬಿಟ್ಟು, ಎಲ್ಲರೂ ನಮ್ಮ ನಮ್ಮ ಗೂಡುಗಳತ್ತ ಧಾವಿಸುತ್ತೇವೆ ಮಾಲಿಕನ ಅರಣ್ಯ ರೋದನ ನಿಲ್ಲುತ್ತದೆ; ಅಥವಾ ನಮಗೆ ಕೇಳಿಸುವುದಿಲ್ಲ. ಸ್ವಂತ ಮನೆಯಾದರೆ ಹೀಗೆಲ್ಲ ಮಾಡಲು ಹೇಗೆ ಸಾಧ್ಯ? ಹೀಗೆ ಬಾಡಿಗೆ ಮನೆ ಕಡೆಗೇ ನನ್ನ ಒಲವು ಒಂದು ತೂಕ ಹೆಚ್ಚಾಗಿ, ಮನಸ್ಸು ಆ ಕಡೆಗೇ ಬಾಗಿತು.

ತುಂಬ ವಯಸ್ಸಾದಮೇಲೆ ಪ್ರೇಮೋದಯವಾದಂತೆ, ಈಗ ಬಾಡಿಗೆ ಮನೆಯ ಕಡೆಗೇ ಒಲವು ಹೆಚ್ಚಾದರೂ, ಏನೂ ಮಾಡುವಂತಿರಲಿಲ್ಲ. 'ಉಳುವವನೇ ಹೊಲದೊಡೆಯ' ಎಂದು ಕೆಲವು ವರ್ಷಗಳ ಹಿಂದೆ ಸರಕಾರ ವೋಟು ದಕ್ಕಿಸುವ ಪರಮೋದ್ದೇಶದಿಂದ ಸಾರಿತ್ತು. ಹಾಗೆ ಅನೇಕರು ಭೂಮಿಗೆ ಒಡೆಯರಾದರು. ತಮ್ಮ ಉಳುವ ಕಾಯಕವನ್ನು ಮರೆತು, ಒಡೆಯರಾದ ಹುಮ್ಮಸ್ಸಿನಿಂದ, ಪೋಕಿಗಳಾಗಿ, ಹೆಗಲಮೇಲೆ ಶಾಲು ಹಾಕಿಕೊಂಡು, ಪೇಟೆ ಬೀದಿಗಳನ್ನೆಲ್ಲ ಅಳೆಯುತ್ತ, ಕೆಂಪು ಬೋರ್ಡಿನ ಅಂಗಡಿಯೆದುರು ನಿಂತು 'ತೆರೆ ಕದವನ್' 'ತೆರೆ ಕದವನ್' ಎಂದು ತ್ವರೆಗೊಳಿಸುವವರಾದರು. ಇನ್ನೆಲ್ಲಾದರೂ ಹೊಸ ಸರಕಾರ ಬಂದು, ಹಳೆಯ ಸರಕಾರವನ್ನು ಮೀರಿಸುವ ಉದ್ದೇಶದಿಂದ, 'ವಾಸಿಸುವವನೇ ಮನೆಯೊಡೆಯ' ಎಂದು ಸಾರಿಬಿಟ್ಟೀತೋ ಎಂದು ಮನೆ ಮಾಲಕರು ಅಂಜಿ, ಜಾಗರೂಕರಾಗಿ, ದೀರ್ಘಕಾಲದವರೆಗೆ ತಮ್ಮ ಮನೆಯಲ್ಲಿ ಒಬ್ಬನನ್ನೇ ಒಕ್ಕಲಾಗಿ ಇರಿಸಿಕೊಳ್ಳುವುದಿಲ್ಲ. ನನ್ನನ್ನು ಒಕ್ಕಲೆಬ್ಬಿಸಲೂ ಹಿಂದಣ ಮಾಲಕರಿಗೆ ಇದೇ ಕಾರಣವಾಗಿರಬಹುದೇ ಎಂಬ ಸಂದೇಹ ನನಗೆ ಬಂದಿದೆ. ಇನ್ನು ರಿಟಯರ್ ಆಗಿ, ವರಮಾನ ಕಡಮೆಯಾಗಿರುವ ನಾನು, ಪರ್ಮನೆಂಟ್ ಆಗಿ ಬಾಡಿಗೆ ಮನೆಯಲ್ಲಿ ನೆಲಸಲು ನನ್ನಂಥವನಿಗೆ ಯಾರೂ ಮನೆ ಕೊಡಲಾರರು. ಮನೆ ಮಾಲಕರೆಲ್ಲ ಆಗಾಗ ಟ್ರಾನ್ಸ್‌ಫರ್ ಆಗುವಂಥ ಉದ್ಯೋಗಿಗಳನ್ನೇ ಬಯಸುತ್ತಾರೆ. ಇದರಲ್ಲಿ ಅವರಿಗೆ ದ್ವಿಗುಣ ಲಾಭವಿದೆ. ಒಂದು, ಮನೆ ಎಂದೂ ತಮ್ಮ ಅಂಕೆಗೊಳಪಟ್ಟೆ ಇರುತ್ತದೆ. ಎರಡು, ಹಳೆ ಗಿರಾಕಿ ಹೊರಟು ಹೊಸ ಗಿರಾಕಿ ಬರುವಾಗ ಬಾಡಿಗೆ ಹೆಚ್ಚು ಮಾಡಲು ತುಂಬ ಅನುಕೂಲವಾಗುತ್ತದೆ.

ಅದು ಹಾಗಿರಲಿ. ಇತ್ತ ನನ್ನ ಮನೆಯ ಕೆಲಸ ಆರಂಭಿಸಿತ್ತು. ಆಪದ್ಧನ ಕರಗಿತು. ಈಗ ಸಾಲಕ್ಕೆ ಪರದಾಡುವಂತಾಯ್ತು. ಭಾಗ್ಯಲಕ್ಷ್ಮಿ, ಧನಲಕ್ಷ್ಮಿ, ಶ್ರೀಲಕ್ಷ್ಮಿ ಎಂಬ ಅನೇಕಾನೇಕ ಲಾಟರಿಗಳ ಟಿಕೇಟುಗಳನ್ನು ನನ್ನ ಜಂಭಬಿಟ್ಟು, ಗುಟ್ಟಿನಲ್ಲಿ ತೆಗೆಯತೊಡಗಿದೆ. ಹಿಂದೆಲ್ಲ 'ಅಂಥ ಅದೃಷ್ಟವಂತ ನಾನಾಗಿದ್ದಿದ್ದರೆ, ನಾನು ಹೀಗಿರುತ್ತಿರಲಿಲ್ಲ. ಆದುದರಿಂದ ನಾನು ಲಾಟರಿ ಟಿಕೇಟು ತೆಗೆಯುವುದಿಲ್ಲ. ಹಾಗೆ ಧರ್ಮಕ್ಕೆ ಬರುವ ದುಡ್ಡು ನನಗೆ ಬೇಡ' ಎಂದು ಜಂಭ ಮಾಡುತ್ತಿದ್ದೆ. ಆದರೆ ಈಗ? ಆಪತ್ಕಾಲಕ್ಕೆ ಪಾಪವಿಲ್ಲ ಎಂಬಂತೆ ಅದೃಷ್ಟ ಪರೀಕ್ಷೆಗೂ ಇಳಿದೆ. ಆದರೆ ಯಾವ ಲಕ್ಷ್ಮಿಯ ಕಟಾಕ್ಷವೂ ನನ್ನ ಮೇಲೆ ಬೀಳಲಿಲ್ಲ ಒಮ್ಮೆ ಯಾರೋ

ಹೇಳಿದ್ದರು. ಲಾಟರಿ ಬಿದ್ದರೆ ಅದರ ಅರ್ಧ ಹಣವನ್ನು ಯಾವುದೋ ದೇವರಿಗೆ ಕೊಡುತ್ತೇನೆಂದು ಹರಕೆ ಹೇಳಿಕೊಂಡರೆ ಲಾಟರಿ ಬೀಳುತ್ತದೆ–ಆ ದೇವರ ಸತ್ಯದಿಂದ ಎಂದು! ಮೊದಲು ಅದನ್ನು ಕೇಳಿದಾಗ, ನಮ್ಮ ಸ್ವಾರ್ಥಕ್ಕಾಗಿ, ದೇವರನ್ನೂ ಲಂಚಾವತಾರಿಯನ್ನಾಗಿ ಮಾಡಬಾರದೆಂದು ವಿವೇಕ ತಾಳಿದ್ದೆ. ಆದರೆ ಈಗ, ನೋಡೋಣ ಎಂದು ಅದನ್ನೂ ಪರೀಕ್ಷಿಸಿಯಾಯ್ತು. ಆ ದೇವರಿಗೆ ಏನು ಕೆಲಸವಿತ್ತೋ ಏನೋ? ತನ್ನ ದೇವಿಯೊಡನೆ, ನನಗಿಂತಲೂ ದೊಡ್ಡ ಭಕ್ತರು ಕರೆದೆಡೆಗೆ, ವಿಹಾರ ಹೋಗಿದ್ದನೋ ಏನೋ? ನನ್ನ ಮೂಕ ಮನವಿ ಅವನಿಗೆ ತಲಪಲೇ ಇಲ್ಲ.

ಇನ್ನೇನು ಮಾಡಲಿ? ಎಂದು ಗಾಢವಾದ ಚಿಂತೆಯಲ್ಲಿ ಮುಳುಗಿ, ನಿದ್ದೆಯಿಲ್ಲದೆ ಹೊರಳುತ್ತ, ಅನೇಕ ರಾತ್ರಿಗಳನ್ನು ಕಳೆದು, ಕಣ್ಣು ಗುಳಿಬಿದ್ದು ಕಂಗಾಲಾದಾಗ, ಅದನ್ನು ನೋಡಲಾರದೆ ಹೆಂಡತಿ, ತನ್ನ ಒಡವೆಗಳನ್ನು ಮಾರಿಯೋ, ಬ್ಯಾಂಕಿನಲ್ಲಿ ಅಡವಿಟ್ಟೋ, ಹಣ ತೆಗೆಯಿರಿ, ಅಷ್ಟಾದರೂ ಆಯ್ತು—ಎಂದಳು, ಅಪಾರ ಕರುಣೆಯಿಂದ ಹಿಂದೆ ಒಡವೆಗಳ ಪ್ರಸ್ತಾಪ ಬಂದಾಗಲೆಲ್ಲ, ''ಸುಮ್ಮನೆ ಇದ್ದ ಹಣವನ್ನೆಲ್ಲ ಆಭರಣಗಳಿಗೆ ಖರ್ಚುಮಾಡಿ, ಅವುಗಳನ್ನು ಪೆಟ್ಟಿಗೆಯೊಳಗೆ ಭದ್ರಪಡಿಸಿಟ್ಟರೇನು ಬಂತು? ಅವು ಮರಿ ಹಾಕುತ್ತವೆಯೆ? ಅದರ ಬದಲು ಹಣ ಬ್ಯಾಂಕಿನಲ್ಲಿದ್ದರೆ ಬಡ್ಡಿಯಾದರೂ ಬಂದೀತು'' ಎಂದು ಬಾಯಿ ಬಡಿದು, ಆಚೆ ಆಭರಣವೂ ಇಲ್ಲ, ಈಚೆ ಹಣವೂ ಉಳಿಯಲಿಲ್ಲವೆಂಬ ಅವಸ್ಥೆಗೆ ಒಳಗಾಗಿದ್ದೆ. ಆದರೂ ಕೆಲವು ಅಪೂರ್ವ ಸಂದರ್ಭಗಳಲ್ಲಿ ಅಲ್ಪ ಸ್ವಲ್ಪ ಒಡವೆಗಳನ್ನೇನೋ ಅವಳ ಪ್ರೀತ್ಯರ್ಥ ಮಾಡಿಸಿದ್ದೆನಾದರೂ, ಅದೇನು ಲೆಕ್ಕಕ್ಕೆ ಬರುವಂಥದಲ್ಲ. ಅಂತೂ ಆಪತ್ಕಾಲದಲ್ಲಿ, ತನ್ನಲ್ಲಿ ಇದ್ದ ಬದ್ದದನ್ನು ತಾನಾಗಿ ಕೊಡಲು ಮುಂದೆ ಬಂದ ಅವಳ ಉದಾರ ಮನಸ್ಸಿಗೆ, ಏನು ಹೇಳಲೆಂದು ತಿಳಿಯದೆ ಮೌನವಾದೆ. ಶ್ರೀಕೃಷ್ಣನ ತುಲಾಭಾರದಲ್ಲಿ ರುಕ್ಮಿಣಿ ಕೇವಲ ಒಂದು ತುಳಸೀ ದಳದಲ್ಲಿ ಅವನನ್ನು ಸಮತೂಕ ಮಾಡಿದಳಂತೆ. ಮತ್ತೆ ವಿಚಾರ ಮಾಡಿ ನೋಡಿದಾಗ, ನಿವೃತ್ತಿ ಪೂರ್ವದಲ್ಲಿ ನನ್ನ ಕ್ಷೇಮನಿಧಿಯಿಂದಲೇ ಹಣ ಪಡೆಯಬಹುದೆಂದು ತಿಳಿದು ಬೆಳಕಿನ ಹುಚ್ಚು ಹೊಳೆಯೇ ಹರಿದಂತಾಯ್ತು. ಹಾಗೆ ಹೀಗೆ ಮಾಡಿ, ಮನೆ ಕೆಲಸ ಪೂರೈಸಿ, ಇನ್ನು ನಾವದಕ್ಕೆ ಪ್ರವೇಶಿಸಬಹುದೆಂದು ತಿಳಿದಾಗ, ಹಿಂದೆ ಓದಿದ್ದ ಕವಿಗಳ ಕವಿತಾಸಂದೇಶವೆಲ್ಲ ಮರತೇ ಹೋಗುವಂತಾಯ್ತು.

ಅಂತೂ ಇಂತೂ, ಬೆಟ್ಟದ ಮೇಲೊಂದು ಮನೆ ನನಗಾಯ್ತು. ನನಗೆಂದರೆ ನನಗೆ ಮಾತ್ರವಾಯ್ತು. ಮಕ್ಕಳಿಗೆ ನಗರದ ವಾತಾವರಣವಿಲ್ಲದೆ ಭ್ರಮನಿರಸನವಾಗಿ, ಸ್ವಲ್ಪ ಸಮಯದಲ್ಲಿಯೇ ಹಿಡಿಸದಂತಾಯ್ತು. ಕ್ರಮ ಕ್ರಮವಾಗಿ ನಗರದಲ್ಲಿ ಉದ್ಯೋಗ ದೊರೆತ ಅವರಿಗೆ ಈ ಮನೆಯಲ್ಲಿ ನಿತ್ಯ ವಾಸಿಸಲು ಅಸಾಧ್ಯವಾಗಿ, ಮತ್ತೆ ನಗರಗಳಿಗೇ ಕಾಲ್ತೆಗೆದರು. ಎಲ್ಲಕ್ಕಿಂತ ಮೊದಲು ನನ್ನ ಅರ್ಧಾಂಗಿ, ಬಹಳ ಅವಸರ

ಪಟ್ಟವಳಂತೆ. ಎಂದೂ ನನ್ನ ನೆರಳಾಗಿದ್ದವಳು, ಅಥವಾ ನನಗೆ ನೆರಳಾಗಿದ್ದವಳು, ನನ್ನನ್ನು ಬಿಟ್ಟು ಶಾಶ್ವತವಾದ ಮನೆಯಲ್ಲಿ ವಿಶ್ರಾಂತಿಗೆಂದು ತೆರಳಿಬಿಟ್ಟಳು.

ಹೌದು! ನನ್ನ ಬೆಟ್ಟದ ಮೇಲಣ ಮನೆ ಸುಂದರವಾಗಿದೆ ದೂರದಲ್ಲಿ ಬೆಟ್ಟಗಳ ಸಾಲುಗಳು ಬಾನಿಗೆ ತಲೆಯೆತ್ತಿ, ಕೋಟೆಯ ಸಾಲಿನಂತೆ ಸುತ್ತುವರಿದಿವೆ. ಕೆಳಗಿನ ಸಾಲುಗಳಲ್ಲಿ ಹೆಮ್ಮರಗಳು ಹಸಿರುಡುಗೆಯನುಟ್ಟು, ಎಲ್ಲಿಗೋ ದಿಬ್ಬಣ ಹೊರಡಲು ಸಿದ್ಧವಾಗಿ, ಸಾಲಾಗಿ ಗುಂಪುಗೊಂಡ ವನರಾಣಿಯರಂತಿವೆ. ಬೆಳಿಗ್ಗೆ ಮತ್ತು ಸಂಜೆ, ಸೂರ್ಯ ಕುಂಕುಮಧೂಳಿಯಂತಿರುವ ಕೆಂಬಣ್ಣವನ್ನು ಎರಚುತ್ತಾನೆ; ಮೃದುವಾದ ತಂಗಾಳಿ ಬೀಸುತ್ತಿದೆ; ಕಾಗೆ ಕೂಗುತ್ತಿದೆ, ಕೋಗಿಲೆಯುಲಿಯುತ್ತಿದೆ, ಹಕ್ಕಿಗಳು ಚಲಿಪಿಲಿಗುಟ್ಟುತ್ತಿವೆ. ಹಾಲು ಚೆಲ್ಲಿದಂತಿರುವ ಬೆಳ್ದಿಂಗಳ ರಾತ್ರಿ ಮಹಡಿಯ ಮೇಲೆ ಹತ್ತಿ ನಿಂತರೆ: ಬೆಳ್ಳಿ ಚಂದ್ರ ನಗುತ್ತಾನೆ; ಮಿರ ಮಿರ ಮಿನುಗುವ ತಾರೆಗಳು ಕಣ್ಣು ಮಿಟುಕಿಸುತ್ತವೆ. ನೀಲವಾದ ಬಾನು ಮೌನವಾಗಿ ಮನಮೋಹಿಸುತ್ತದೆ. ಒಮ್ಮೊಮ್ಮೆ ಚಿಕ್ಕ ತಿಳಿ ಮೋಡಗಳು ಚಂದ್ರನಿಗಡ್ಡ ಬಂದಾಗ, ವಿನೋದಕ್ಕೆ ಚಂದ್ರ ತಾರೆಯರೊಡನೆ ತೆಪ್ಪವನ್ನೇರಿ, ನೀಲ ಜಲರಾಶಿಯಲ್ಲಿ ತೇಲುತ್ತ ವಿಹರಿಸುತ್ತಿರುವಂತೆ ಕಾಣಿಸುತ್ತದೆ. ಇನ್ನು ಮಳೆಗಾಲ ಆರಂಭಿಸಿತೆಂದರೆ ಮತ್ತೆ ಗುಡುಗಿನ ಮೊಳಗು, ಮಿಂಚಿನ ನರ್ತನ ಎಲ್ಲ ನನ್ನೆದುರಿಗೇ ನಡೆಯುತ್ತದೆ. ನಾನೊಬ್ಬನೇ ವೀಕ್ಷಕ. ನಗುತ್ತಲೇ ಅಳುತ್ತಿರುವಂತೆ ಮಿಂಚಿನ ಮಿಂಚು—ಮಳೆಯ ಸುರಿವು; ಅತ್ತುಕೊಂಡೇ ನಗುತ್ತಿರುವಂತೆ ಮಳೆಯ ಸುರಿವು—ಮಿಂಚಿನ ಮಿಂಚು; ಹೀಗೆ ಎಲ್ಲವೂ ಇದೆ; ಎಲ್ಲವೂ ಇದೆ. ಏಕೆಂದರೆ ಈ ಬೆಟ್ಟದ ಮೇಲಿನ ನನ್ನ ಮನೆಯಲ್ಲಿ ಈಗ ನಾನಿದ್ದೇನೆ. ನಾನೊಬ್ಬನೇ ಇದ್ದೇನೆ. ಇಲ್ಲಿ ಮೃಗಗಳು ಯಾವುವೂ ಇಲ್ಲ. ಆದುದರಿಂದ ಅವುಗಳ ಅಂಜಿಕೆ ನನಗೆ, ಅಥವಾ ನನ್ನ ಅಂಜಿಕೆ ಅವುಗಳಿಗೆ ಇರುವಂತಿಲ್ಲ. ಹೀಗೆ ಇಲ್ಲಿ ಸಮರವಿಲ್ಲ; ಸಾಮರಸ್ಯವಿದೆ. ಹೊರಗೆಲ್ಲಿಯೂ ಶಾಂತಿಯಿದೆ, ಪ್ರಶಾಂತಿಯಿದೆ! ಆದರೆ ಒಳಗೆ?

ಡಾ. ಆರ್. ರಾಮಕೃಷ್ಣ

ಕುವೆಂಪು ಅವರ ಶಿಶುಸಾಹಿತ್ಯ : ಒಂದು ವಿವೇಚನೆ

(1)

ಶ್ರೀ ಕುವೆಂಪು ಅವರು ಕನ್ನಡ ಸಾರಸ್ವತ ಪ್ರಪಂಚದ ಮಹಾಸಾಹಿತಿ. ಕನ್ನಡ ಭಾಷೆಯ ಅಭಿವ್ಯಕ್ತಿಯ ಸಾಧ್ಯತೆಗಳೆಲ್ಲವನ್ನೂ ಸಮರ್ಥವಾಗಿ ಬಳಸಿಕೊಂಡು ಸಾಹಿತ್ಯದ ಎಲ್ಲ ಪ್ರಕಾರಗಳಲ್ಲೂ ಕೃತಿಗಳನ್ನು ರಚಿಸಿ, ಕನ್ನಡಕ್ಕೆ ಉನ್ನತ ಸ್ಥಾನಮಾನವನ್ನು ತಂದುಕೊಟ್ಟವರು. ಗದ್ಯ ಪದ್ಯಗಳೆರಡರಲ್ಲೂ ಸಮಾನ ಪ್ರಭುತ್ವಗಳಿಸಿರುವುದು ಅವರ ವಿಶಿಷ್ಟತೆ. ಅವರು ಶಿಶುಸಾಹಿತ್ಯಕ್ಕೆ ಕೊಟ್ಟ ಕೊಡುಗೆಯನ್ನು ಪರಿಶೀಲಿಸುವುದೇ ಈ ಪ್ರಬಂಧದ ಮುಖ್ಯ ಉದ್ದೇಶ.

ಕುವೆಂಪು ಅವರು ರಚಿಸಿರುವ ಶಿಶುಸಾಹಿತ್ಯ ಕೃತಿಗಳು ಒಟ್ಟು ಒಂಬತ್ತು. ಅವು : ಅಮಲನ ಕಥೆ (1924), ಹಾಳೂರು (1926), ಬೊಮ್ಮನ ಹಳ್ಳಿಯ ಕಿಂದರಜೋಗಿ (1928)—ಇವು ಮೂರು ಕಥನ ಕವನಗಳು; ನನ್ನ ಮನೆ (1946), ಮರಿವಿಜ್ಞಾನಿ (1947), ಮೇಘಪುರ (1947)—ಇವು ಮೂರು ಕವನಸಂಕಲನಗಳು; ಮೋಡಣ್ಣನ ತಮ್ಮ (1926), ನನ್ನ ಗೋಪಾಲ (1930)—ಇವೆರಡು ನಾಟಕಗಳು; ಮತ್ತು ನರಿಗಳಿಗೇಕೆ ಕೋಡಿಲ್ಲ (1977) ಎಂಬುದು ಕಥೆ. ಈ ಎಲ್ಲ ಕೃತಿಗಳೂ ಮಕ್ಕಳ ಅನುಭವ, ಆಲೋಚನೆ, ಕಲ್ಪನಾಸಾಮರ್ಥ್ಯಗಳಿಗೆ ಅನುಗುಣವಾಗಿ ರಚನೆಗೊಂಡಿವೆ. ಅವುಗಳಲ್ಲಿ ಮನಸೆಳೆವ, ಮನರಂಜಿಸುವ ಅಭಿವ್ಯಕ್ತಿಗಳಿವೆ, ಉದಾತ್ತ ತತ್ವಗಳಿವೆ, ಉನ್ನತ ದರ್ಶನವಿದೆ. ಮಕ್ಕಳ ಕುತೂಹಲಾಸಕ್ತಿಯನ್ನು ಕೆರಳಿಸುವಲ್ಲಿ, ಅವರ ಜ್ಞಾನದಾಹವನ್ನು ಹೆಚ್ಚಿಸುವಲ್ಲಿ ನೆರವಾಗಿ ಸಾರ್ಥಕತೆ ಪಡೆದುಕೊಂಡಿವೆ.

(2)

'ಅಮಲನ ಕಥೆ' ಕುವೆಂಪು ಅವರ ಮೊಟ್ಟಮೊದಲ ಶಿಶುಸಾಹಿತ್ಯ ಕೃತಿ. ಕಥೆ, ಪ್ರಾರ್ಥನೆ, ವರ್ಣನೆಗಳಿಂದ ಕೂಡಿರುವ ಈ ಕೃತಿಯಲ್ಲಿ 190 ಚೌಪದಿಗಳಿವೆ. ಭಕ್ತಿಯೇ ಸ್ಥಾಯಿಭಾವವಾಗಿರುವ ಈ ಕಥನಕವನ ಗೋವಿನ ಗೀತೆಯ ಧಾಟಿಯಲ್ಲಿದೆ.

ಮಕ್ಕಳಲ್ಲಿ ಸಾತ್ವಿಕ ಗುಣಗಳನ್ನು ಬೆಳೆಸುವುದೇ ಈ ಕವನದ ಮುಖ್ಯ ಉದ್ದೇಶವಾಗಿದೆ. ಅಡವಿಯ ತರುಗಳನ್ನು ಕಡಿದು, ಮಾರಿ, ಬಂದಹಣದಿಂದ ಜೀವನ ನಿರ್ವಹಣೆ ಮಾಡುತ್ತ, ಹರಿನಾಮ–ಸ್ಮರಣೆಯ ಮೂಲಕ ಅಚ್ಯುತ ಪದವಿಯನ್ನು ಪಡೆದವನು ಅಮಲ. ಒಮ್ಮೆ ಕಾಡಿನಲ್ಲಿ ಮರ ಕಡಿದು ವಿಶ್ರಮಿಸಿಕೊಳ್ಳುತ್ತಿದ್ದಾಗ, ಶಬರನ ಹಿಂಸೆಗೊಳಗಾಗಿದ್ದ ಹರಿಣವೊಂದು ಅವನ ಬಳಿ ಬಂದು, ರಕ್ಷಿಸಬೇಕೆಂದು ಬೇಡಿಕೊಳ್ಳುತ್ತದೆ. ಅಮಲ ಅಭಯಹಸ್ತ ನೀಡುತ್ತಾನೆ. ಅಮಲನಿಗೂ ಶಬರನಿಗೂ ವಾಗ್ವಾದ ನಡೆಯುತ್ತದೆ, ಜಗಳವಾಗುತ್ತದೆ. ಅಮಲ ಸೋಲುತ್ತಾ ಬರುತ್ತಾನೆ. ಆಗ ಅಮಲನ ಪ್ರಾರ್ಥನೆಗೆ ಓಗೊಟ್ಟು ದೇವರು ಪ್ರತ್ಯಕ್ಷನಾಗುತ್ತಾನೆ. ಕತ್ತಲಾದರೂ ತಂದೆ ಮನೆಗೆ ಬಾರದಿರಲು, ಅಮಲನ ಮಗ ಮಧುರ, ತಂದೆಯನ್ನು ಹುಡುಕಿಕೊಂಡು ಅಲೆಯುತ್ತಿರುವಾಗ, ಭಯಂಕರ ಗಾಳಿ ಮೋಡ, ಸಿಡಿಲು ಮಳೆಗಳು ಅವನನ್ನು ತತ್ತರಗೊಳಿಸುತ್ತವೆ. ಆಗ ಅವನು ದೇವರನ್ನು ಪ್ರಾರ್ಥಿಸುತ್ತಾನೆ. ದೇವರು ಪ್ರತ್ಯಕ್ಷನಾಗಿ ಮಧುರನ ಕಷ್ಟವನ್ನು ಕಳೆಯುತ್ತಾನೆ. ಬಳಿಕ ದೇವ ದೇವನ ದಿವ್ಯವಾಣಿ ಮೊಳಗುವ ಪರಿಯಿದು :

ಯಾರು ನನ್ನನು ಭಕ್ತಿಯಿಂದಲಿ
ಪಾರು ಮಾಡೈ ಎನುತ ಕರೆವರೊ
ದೂರದಿಂದಲೆ ಬರುತಲವರನು
ಪಾರು ಮಾಡುವೆನೆಂದಿಗು (163)

ನಾಡಿನೊಳಗಿಹ ಬಾಲರಾದರು
ಪಾಡಲೆನ್ನನು ಹರುಷದಿಂದಲೆ
ಕಾಡಿನೊಳಗಿಹ ಯೋಗಿಗೀಯುವ
ಗಾಢ ಸುಖವನು ಕೊಡುವೆನು ! (167)

ಹೀಗೆ ಅಮಲ ಮಧುರರು ಹರಿಯ ನಾಮಸ್ಮರಣೆಯಿಂದ ಭಗವಂತನನ್ನು ಒಲಿಸಿಕೊಳ್ಳುವುದೇ ಇಲ್ಲಿಯ ಕಥೆಯಾಗಿದೆ. ಅಲ್ಲದೆ

ಹರಿಯು ಹರನೂ ಬೇರೆ ಎನ್ನುತ
ಬರಿದೆ ಭೇದವ ಮಾಡಲೊಲ್ಲದ
ನರನು ಯಾವಜ್ಜನ್ಮದಲ್ಲಿಯು
ಹರಿಯ ಬಲದಿಂದಿರುವನು— (168)

ಎನ್ನುವ ತತ್ತ್ವಬೋಧೆಗೆ ಈ ಕಥನಕವನ ಮಾಧ್ಯಮವಾಗಿದೆ.

‘ಹಾಳೂರು’ ಸರಳ ರಗಳೆಯಲ್ಲಿ ರಚಿತವಾಗಿರುವ 538 ಸಾಲುಗಳಲ್ಲಿ ಹಬ್ಬಿರುವ ಒಂದು ನೀಳ್ಗವನ. ಹಳ್ಳಿಯ ವ್ಯಥೆಯೇ ಇಲ್ಲಿಯ ಕಥೆ. ಆಧುನಿಕ ನಾಗರಿಕತೆಯ ಪ್ರಭಾವದಿಂದಾಗಿ ಹಳ್ಳಿಯ ಮಂದಿಯೆಲ್ಲ ಪಟ್ಟಣದ ಜೀವನಕ್ಕೆ ಮನಸೋತು, ಪಟ್ಟಣಗಳನ್ನು ಸೇರಿದ ಬಳಿಕ, ಪಾಳಾದ ಹಾಳೂರನ್ನು ಕಂಡು ಕಂಬನಿದುಂಬಿ ಕವಿ ಕೊಟ್ಟಿರುವ ಗತವೈಭವದ ಚಿತ್ರಗಳೇ ಈ ಕವನದ ವಸ್ತು.

ಬಾ, ಪುರದ ಗೆಳೆಯನೇ, ಹಾಳೂರ ನೋಡು :
ಹಾಳೂರು ಇದು ನಮ್ಮ ರೈತರಿಹ ಬೀಡು ;
ದೇಶಕನ್ನವ ನೀಡುವರಿಗೆಲ್ಲ ಗೂಡು.
ನಮ್ಮೂರ ದಿನದಿನವು ಆಗುತಿದೆ ಕಾಡು ! 04

ಎಂಬುದಾಗಿ ಹಳ್ಳಿಯನ್ನು ಪುರದ ಗೆಳೆಯನಿಗೆ ಪರಿಚಯ ಮಾಡಿಕೊಡುವುದರಿಂದ ಕವಿತೆ ಆರಂಭವಾಗುತ್ತದೆ. ಅಂದಿನ ಹಳ್ಳಿಯ ಶುಭ್ರ ಜೀವನವಾಗಲಿ, ಪಂಚಾಯಿತರ ಕೂಡು, ಊರಗೌಡನ ಕಟ್ಟೆಯಾಗಲಿ ಇಂದು ಕಾಣಿಸುವುದಿಲ್ಲ. ಅರೆಬಿದ್ದ ಗೋಡೆಗಳ ಮುರುಕಲು ಗುಡಿಸಲುಗಳ ಹಾಳಾದ ಹಳ್ಳಿ ಇಂದು ಅಳುವ ಕಂದರವಾದರೂ—

ಬಾ ಗೆಳೆಯ, ಬಾ ಮುಂದೆ, ಹಾಳೂರ ನೋಡು ;
ಹಾಳಾದ ವೈಭವಕೆ ಮನ್ನಣೆಯ ಮಾಡು— 52

ಎಂದು ಕವಿ ಪುರದ ಗೆಳೆಯನನ್ನು ಕೇಳಿಕೊಳ್ಳುವರು.

ಹಳ್ಳಿಯ ಶುಚಿ ಸರಳ ಜೀವನದ ಮಹತ್ವ ತಿಳಿಸುತ್ತ, ಪಟ್ಟಣ ಜೀವನದ ಅನರ್ಥಗಳನ್ನು ಅರುಹುತ್ತ—

ಅತಿಭೋಗವದುರೋಗ, ಕೊಲ್ಲುವುದು ಬೇಗ ;
ಪುರಗಳಿಂದೈತಂದಿಹುದು ಹಳ್ಳಿಗೀಗ.
ಸಾಮಾನ್ಯ ಜೀವನವು ಪರಮ ಸುಧೆಯಂತೆ
ಮಿತಿಮೀರಿದತಿಭೋಗ ಘೋರ ವಿಷದಂತೆ
ದೇಶಗಳು ಹಾಳಾದುದತಿ ಭೋಗದಿಂದ
ನೀತಿನಾಶವು ಕೀರ್ತಿನಾಶವದರಿಂದ.
ಬೇಸಾಯದಾಧಾರದಿಂದಿರುವ ದೇಶ
ಎಂದಿಗೂ ಸುಖಕರವು, ಅದಕ್ಕಿಲ್ಲ ನಾಶ ! 530

ಹಳ್ಳಿಯಿಲ್ಲದ ದೇಶವದು ನಿತ್ಯ ರೋಗಿ,
ಕೊಳೆಯುವುದು ನಿರ್ಜೀವ ಶವದಂತೆಯಾಗಿ.
ಹಳ್ಳಿಗಳಿರುವ ದೇಶವದು ಸದಾ ಭೋಗಿ !
ಅದೆ ಎಂದಿಗಾನಂದದಿಂದಿರುವ ಯೋಗಿ !
ಅಮ್ಮ ಭಾರತಿ, ಹಳ್ಳಿ ಹಾಳಾಗದಿರಲಿ !
ನಿನಗೆಂದು ಸುಖ ಶಾಂತಿಯಾನಂದವಿರಲಿ !
ಹಳ್ಳಿಗಳ ಮಾತಾಯಿ, ಭಾರತಿಯೆ, ಅಮ್ಮಾ,
ಹಳ್ಳಿಗಳು ಹಾಳಾಗದಂತೆ ಸಲಹಮ್ಮಾ ! 538

ಎಂಬುದಾಗಿ ಕವನ ಕೊನೆಗೊಳ್ಳುತ್ತದೆ. ಹಳ್ಳಿ ಮತ್ತು ಅಲ್ಲಿಯ ಜನರ ಔನ್ನತ್ಯಕ್ಕಾಗಿ ಕವಿ ಸ್ಪಂದಿಸುವ ರೀತಿಯನ್ನು ಇಲ್ಲಿ ಸ್ಪಷ್ಟವಾಗಿ ಕಾಣಬಹುದು.

ಬ್ರೌನಿಂಗ್ ಕವಿಯ 'The pied piper of Hamelin' ಎಂಬ ಕೃತಿಯ ಛಾಯಾನುವಾದವೆಂದು ಹೇಳಲಾಗಿರುವ 'ಬೊಮ್ಮನಹಳ್ಳಿಯ ಕಿಂದರಿಜೋಗಿ' ಮಕ್ಕಳ ಮಹಾಕಾವ್ಯವೆಂದೇ ಹೆಸರಾಗಿದೆ. ಇದು ಮೊದಲಬಾರಿಗೆ ಮಹಾರಾಜ

ಕಾಲೇಜಿನ ವಿದ್ಯಾರ್ಥಿಗಳು ಕರ್ನಾಟಕ ಸಂಘದಿಂದ ಪ್ರಕಟಿಸಿದ 'ಕಿರಿಯ ಕಾಣಿಕೆ' ಎಂಬ ಸಂಕಲನದಲ್ಲಿ ಪ್ರಕಟವಾಯಿತು. ಕುವೆಂಪು ಅವರಿಗೆ ಅಪಾರ ಯಶಸ್ಸನ್ನು ತಂದುಕೊಟ್ಟ ಸುಪ್ರಸಿದ್ಧ ಕಥನ ಕವನವಿದು. ಇದನ್ನು ಓದಿ ಕುಣಿಯದ ಮಕ್ಕಳಿಲ್ಲ. ಮಕ್ಕಳ ಮನಸ್ಸನ್ನು ಅತಿಯಾಗಿ ಸೂರೆಗೊಂಡ ಕೃತಿಯಿದು. ಶಿಶುಸಾಹಿತ್ಯಕ್ಕೆ ಅಪೂರ್ವವಾದ ಕೊಡುಗೆಯಿದು.

ಬೊಮ್ಮನಹಳ್ಳಿಯಲ್ಲಿ ಇಲಿಗಳಿಂದಾಗುವ ಹಾವಳಿಯನ್ನು ಕವಿ ಅದ್ಭುತವಾಗಿ ತಿಳಿಸಿದ್ದಾರೆ. ಇಲಿಗಳು—

ಎಲ್ಲರ ಮೇಲೆಯು ಕೈಬಾಯಿಕ್ಕಿ
ಹೆದರಿಕೆಯಿಲ್ಲದೆ ಬೆದರಿಕೆಯಿಲ್ಲದೆ
ಕುಣಿದುವು ಯಾರನು ಲೆಕ್ಕಿಸದೆ !

ಕೈಯಲ್ಲಿರುವಾ ಸಟ್ಟುಗವ
ಭೀತಿಯೆ ಇಲ್ಲದೆ ನೆಕ್ಕಿದುವು !
ಈ ಪರಿ ತಿನ್ನುತ ಸೊಕ್ಕಿದುವು ;
ಧಾನ್ಯವ ನೆಲ್ಲೆಯು ಬಿಕ್ಕಿದುವು !
ಸಿದ್ಧೋಜೈಗಳು ಶಾಲೆಗೆ ಹೋಗಿ
ಪಾಠವ ಬೋಧಿಸುತ್ತಿದ್ದಾಗ

ಅಂಗಿಯ ಜೇಬಿಂ ಹೆಳವಿಲಿಯೊಂದು
ಚಂಗನೆ ನೆಗೆಯಿತು ತೂತನು ಮಾಡಿ.
ಲೇವಡಿ ಎಬ್ಬಿಸೆ ಬಾಲಕರೆಲ್ಲ

ಗುರುಗಳಿಗಾಯಿತು ಬಲು ಗೇಲಿ !
ಬೆಳಗಿನ ಜಾವದಿ ಏಳುತ ನೋಡಲು
ಭಟ್ಟಾಶಾಸ್ತ್ರಿಯ ಜನಿವಾರ
ಇಲಿಗಳಿಗಾಗಿತ್ತಾಹಾರ !

ಇಲಿಗಳನ್ನು ನಾಶಮಾಡಲು ಪ್ರಯತ್ನಪಟ್ಟವರ ಗತಿ ಕೂಡ ನೆಟ್ಟಗಾಗಲಿಲ್ಲ—

ಕಡಿದರೆ ಮುರಿದುವು ಕತ್ತಿಗಳೆಲ್ಲ !
ಹೊಡೆದರೆ ಮುರಿದುವು ಕೋಲುಗಳು !
ಇಲಿಗಳ ಬೇಟೆಯನಾಡುತಲಿರಲು !
ಮುರಿದುವು ತಿಮ್ಮನ ಕಾಲುಗಳು !

ಬೇಟೆಯನಾಡಲು ಅಡುಗೆಯ ಮನೆಯಲಿ
ಬಿದ್ದಳು ಬಳೆಯೊಡೆದಚ್ಚಮ್ಮ !

ಭೃಂಗಾಮಲಕದ ತೈಲವ ಹಚ್ಚಿದ
ಶೇಷಕ್ಕನ ನುಣ್ಣನೆ ಫಣಿವೇಣಿ
ಬೆಳಗಾಗೇಳುತ ಕನ್ನಡಿ ನೋಡೆ
ಇಲಿಗಳಿಗಾಗಿತ್ತೂಟದ ಫೇಣಿ ;

ಈ ಮೇಲಿನ ಸಾಲುಗಳಲ್ಲಿ ಬಂದಿರುವ ತಿಳಿಹಾಸ್ಯ, ವರ್ಣನೆ, ಓದುವ, ಕೇಳುವ ಎಲ್ಲ ಮಕ್ಕಳಲ್ಲೂ ಆನಂದವನ್ನುಂಟುಮಾಡುವುದರಲ್ಲಿ ಸಂದೇಹವಿಲ್ಲ.

ಗೌಡನ ಬಳಿ ಹೋದ ಊರವರ ನುಡಿಗಳಲ್ಲಿ ಮೂಡಿರುವ ಸಹಜತೆಯಿದು :

"ಥೂ ! ಛೀ ! ಗೌಡನೆ ನೀ ಹಾಳಾಗ !
ಮಾರಿಯು ಇಲಿಗಳ ಕೊಲ್ಲಿಸೊ ಬೇಗ !
ತೆರಿಗೆಯ ಮಾತ್ರಾ ಕಾಸೂ ಬಿಡದೆ
ಹೊಡೆದೂ ಬೈದು ಎತ್ತುವೆ ನೀನು.

ಜನರ ಶಾಪವಿದು :

ನಿನ್ನ ರುಮಾಲಿನ ಜರಿ ಹಾಳಾಗ,
ನಿನ್ನೀ ಗಂಟಲು ಕಟ್ಟೀ ಹೋಗ !

ಊರಜನರ ಸಲಹೆಗಳೆಲ್ಲಾ ಮುಗಿದಮೇಲೆ, ಗೌಡ ತನ್ನ ನಿರ್ಣಯವೊಂದನ್ನು ಹೇಳುತ್ತಾನೆ.

ಇಲಿಗಳ ಕೊಲ್ಲಲು ದಾರಿಯನಾರು
ತೋರಿಸಿ ಕೊಡುವರೊ ಅವರಿಗೆ ಆರು
ಸಾವಿರ ನಾಣ್ಯಗಳೀಯುವೆ ನಾನು ;
ತಿಳಿದವರಿದ್ದರೆ ಬನ್ನಿರಿ ! ಏನು?

ಇದನ್ನು ಕೇಳಿದ ಜನರು ಒಬ್ಬರ ಮೊಗವನ್ನು ಒಬ್ಬರು ನೋಡಿ ಮಾತಾಡದೆ ಇದ್ದರು. ಆದರೆ ಆ ವೇಳೆಗೆ ಕಿಂದರಿಜೋಗಿ ಬರುವನು. ಅವನ ಪ್ರವೇಶದ ಸನ್ನಿವೇಶವೇ ಮಕ್ಕಳ ಕುತೂಹಲವನ್ನು ಇಮ್ಮಡಿಗೊಳಿಸುತ್ತದೆ.

ಏನಿದು ಗುಜುಂಗುಜು ಗುಂಪಿನಲಿ?
ನೋಡಿದರೇನಾಶ್ಚರ್ಯವನು?
ಆಲಿಸಿ ; ದೂರದ ಕಿಂದರಿ ನಾದ !
ಬರುವನು ಯಾರೋ ಕಿಂದರಿ ಜೋಗಿ.

ಕವಿ ಕೊಟ್ಟಿರುವ ಕಿಂದರಿಜೋಗಿಯ ಚಿತ್ರ ಅತ್ಯಂತ ಆಕರ್ಷಣೀಯವಾಗಿದೆ ; ಅದ್ಭುತವಾಗಿದೆ. ಕಣ್ಣಿಗೆ ಕಟ್ಟುವಂತೆ ಇರುವ ಜೋಗಿಯ ವರ್ಣನೆಗೆ ಮಕ್ಕಳು ಮಾರುಹೋಗುತ್ತಾರೆ. ತಮ್ಮ ಪರಿಸರದಿಂದ ಹೊರತಾದ ಅಂಶಗಳನ್ನು ವಿಚಾರಗಳನ್ನು ಅವರು ಅತ್ಯಂತ ಆಸಕ್ತಿಯಿಂದ ಕೇಳುತ್ತಾರೆ—

ಬಂದನು ಬಂದನು ಕಿಂದರಿಜೋಗಿ !
ಕೆದರಿದ ಕೂದಲ ಗಡ್ಡದ ಜೋಗಿ !
ನಾನಾ ಬಣ್ಣದ ಬಟ್ಟೆಯ ಜೋಗಿ !
ಕೈಯಲಿ ಕಿಂದರಿ ಹಿಡಿದಾ ಜೋಗಿ !

ಕುದುರೆಯು ಗೊರಸಿನ ಅಡಿಗಳ ಜೋಗಿ !
ಕಡವೆಯು ಕೊಂಬೆಯು ತಲೆಯಾ ಜೋಗಿ !
ಆನೆಯು ಕಿವಿಗಳ ಕಿಂದರಜೋಗಿ !
ಹಂದಿಯು ದಾಡೆಯು ಕೋರೆಯು ಜೋಗಿ !
ಮಂಗನ ಮೂತಿಯು ಮುಡಿದಿಹ ಜೋಗಿ !

ಹತ್ತಿರ ಬಂದ ಜೋಗಿ. ಗೌಡನನ್ನು 'ಇಲಿಗಳನ್ನೆಲ್ಲ ಕೊಂದರೆ ಆರುಸಾವಿರ ನಾಣ್ಯಗಳೀಯುವೆಯೇನು ?' ಎಂದು ಕೇಳುತ್ತಾನೆ.

"ಬೇಕಾದುದ ನಾ ಕೊಡುವೆನು ಜೋಗಿ ;
ಆರೇಕಿನ್ನೆರಡಾದರೂ ಕೊಡುವೆನು.
ಬೇಕಾದುದನೆಲ್ಲವ ನೀ ಕೇಳು ;
ಊರೇ ನಿನ್ನದು ; ನಾ ನಿನ್ನಾಳು !

ಎಂಬುದಾಗಿ ಗೌಡ ಹೇಳುತ್ತಾನೆ.

ಕಿಂದರಿ ನಾದಕ್ಕೆ ಮರುಳಾದ ಇಲಿಗಳ ಹಟ್ಟಿ ಬಹು ಆಕರ್ಷಕ :

ಸಣ್ಣಿಲಿ, ದೊಡ್ಡಿಲಿ, ಮೂಗಿಲಿ, ಸುಂಡಿಲಿ
ಅಣ್ಣಿಲಿ, ತಮ್ಮಿಲಿ, ಅವ್ವಿಲಿ, ಅಪ್ಪಿಲಿ
ಮಾವಿಲಿ, ಬಾವಿಲಿ, ಅಕ್ಕಿಲಿ, ತಂಗಿಲಿ
ಗಂಡಿಲಿ, ಹೆಣ್ಣಿಲಿ, ಮುದುಕಿಲಿ, ಹುಡುಗಿಲಿ
ಎಲ್ಲಾ ಬಂದುವು ಓಡೋಡಿ,
ಜೋಗಿಯು ಬಾರಿಸೆ ಕಿಂದರಿಯ !

ಬಂದುವು ನಾನಾ ಬಣ್ಣದ ಇಲಿಗಳು,
ಕೆಂಪಿನ ಇಲಿಗಳು, ಹಳದಿಯ ಇಲಿಗಳು
ಬೆಳ್ಳಿಲಿ, ಕರಿಯಿಲಿ, ಗಿರಿಯಿಲಿ, ಹೊಲದಿಲಿ
ಕುಂಕುಮರಾಗದ, ಚಂದನರಾಗದ
ಹಸುರಿನ ಬಣ್ಣದ, ಪಚ್ಚೆಯ ವರ್ಣದ
ಸಂಜೆಯ ರಾಗದ, ಗಗನದ ರಾಗದ,
ನಾನಾ ವರ್ಣದ, ಇಲಿಗಳು ಬಂದುವು.

ಈ ಶಬ್ದ ಚಿತ್ರಕ್ಕೆ ಮಕ್ಕಳು ಮಾರುಹೋಗುತ್ತಾರೆ !

ಇಲಿಗಳನ್ನೆಲ್ಲ ನಾಶಮಾಡಿ, ಕಿಂದರಿಜೋಗಿ ಗೌಡನ ಬಳಿ ಬಂದು :

" ಗೌಡನೆ, ನಾಣ್ಯಗಳನು ಕೊಡು " ಎಂದ
ಗೌಡನು ನೋಡಿದ ಬೆರಗಾಗಿ !
" ಸಾವಿರ ಆರೂ " ಎಂದನು ಜೋಗಿ !
ಗೌಡನು ನಿಂತನು ತಲೆದೂಗಿ !

ಜೋಗಿ ಮತ್ತು ಗೌಡ ಇವರಿಬ್ಬರ ಈ ನಾಟಕೀಯ ಸಂವಾದ ಮನಮುಟ್ಟುವಂತಿದೆ. ಗೌಡ ತನ್ನ ಮಾತನ್ನು ಉಳಿಸುವುದಿಲ್ಲ. ಹಣದ ಆಸೆಗೆ ಬಲಿಯಾಗುತ್ತಾನೆ. ಅಲ್ಲದೆ

ಜೋಗಿಗೆ ತಿರಸ್ಕಾರದ ಮಾತುಗಳನ್ನೂ ಆಡುತ್ತಾನೆ. ಅವನ ದುಷ್ಟತನದಿಂದ ಕೋಪ ಗೊಂಡ ಕಿಂದರಿಜೋಗಿಯಲ್ಲಿ ಪ್ರತೀಕಾರದ ಹೆಡೆ ಬಿಚ್ಚಿಕೊಳ್ಳುತ್ತದೆ—

ಜೋಗಿಯು
ಕಂಗಳ ಕೆರಳಿಸುತಿಂತೆಂದ !
"ಆಡಿದ ಭಾಷೆಯ ತಪ್ಪುವೆಯಾ ?
ಸಾವಿರ ಆರನು ಕೊಡದಿರೆ ನೀನು
ಮತ್ತೀ ಕಿಂದರಿ ಬಾರಿಸುವೆ !
ನಿಮ್ಮೀ ಹಳ್ಳಿಯನಾರಿಸುವೆ !"

ಎಂದು ಹೇಳಿ ತನ್ನ ಅದ್ಭುತವಾದ ಕಿಂದರಿಯನ್ನು ಬಾರಿಸುವನು. ಇಲಿಗಳನ್ನು ಸೆಳೆದ ಕಿಂದರಿನಾದ ಮಕ್ಕಳನ್ನು ಸೆಳೆಯಿತು.

ಟಿಂಗ್ ಟಿಂಗ್ ! ಟಿಂಗ್ ಟಿಂಗ್ ! ನಾದವ ಕೇಳಿ
ಚಂಗ್ ಚಂಗ್ ನೆಗೆದರು ಬಾಲಕರೋಡಿ
ಕಿಂದರಿ ಜೋಗಿಯು ಹೊರಟನು ಮುಂದೆ,
ಬಾಲಕರೆಲ್ಲರು ಹರಿದರು ಹಿಂದೆ !
ಜೋಗಿಯು ಬಾರಿಸೆ ಕಿಂದರಿಯ
ಬಂಡೆಯ ದವಡೆಯನಾಕಳಿಸುತ್ತಾ

ಬಾಯನು ತೆರೆಯಿತು ಆ ಗಿರಿಯು !
ಜೋಗಿಯು ನುಗ್ಗಿದನದರಲ್ಲಿ
ಹಿಂದೆಯೆ ಹೋದರು ಬಾಲಕರು

ಮಕ್ಕಳನ್ನು ಕಳೆದುಕೊಂಡ ಜನ ದುಃಖತಪ್ತರಾಗಿ ಬೊಮ್ಮನಹಳ್ಳಿಗೆ ಹಿಂದಿರುಗುವರು. ಆಗ ಅವರಿಗೆ ಮನದಟ್ಟಾಗುವ ವಿಚಾರ—

ಭಾಷೆಯ ಕೊಟ್ಟರೆ, ಮೂರ್ತೀ ನಾವು
ಮೋಸವ ಮಾಡದೆ ಸಲ್ಲಿಸಬೇಕು
ಆದುದರಿಂದ, ಮೂರ್ತೀ, ಕೇಳು ;
ಸತ್ಯವನೆಂದೂ ತ್ಯಜಿಸದೆ ಬಾಳು !

ಎಂಬುದು. ಇದನ್ನು ಮನಗಾಣಿಸುವುದಕ್ಕಾಗಿಯೇ ಕವಿ ಇಂಥ ರಮ್ಯ ಅದ್ಭುತ ಕಥೆಯನ್ನು ಸೃಷ್ಟಿಸಿದ್ದಾರೆ. ನುಡಿದಂತೆ ನಡೆಯಬೇಕು ಎಂಬ ನೀತಿಯನ್ನು ಪ್ರತಿಪಾದಿಸಿದ್ದಾರೆ.

ಈ ಕಥನಕವನ ಪ್ರಕಟವಾದಂದಿನಿಂದ ಚಿಕ್ಕವರು ದೊಡ್ಡವರೆನ್ನದೆ ಎಲ್ಲರಿಗೂ ಆಕರ್ಷಕ ಕೃತಿಯಾಗಿದೆ. ಇದನ್ನು ಕುರಿತಂತೆ ಡಾ. ಜೀಶಂಪ ಅವರ ನುಡಿಗಳನ್ನು ಇಲ್ಲಿ ಪರಿಭಾವಿಸಬಹುದು : ಕನ್ನಡ ಪದಗಳ ಈ ಪದಲಾಲಿತ್ಯ ಕಿಂದರಿಯ ನಾದ ವಾಗಿಯೇ ನಮ್ಮ ಕಿವಿಗಳಲ್ಲಿ ನುಡಿಯುತ್ತದೆ, ಮನಸ್ಸಿನಲ್ಲಿ ಮಿಡಿಯುತ್ತದೆ, ಹೃದಯ

ವನ್ನು ಅರಳಿಸುತ್ತದೆ! ಕಿಂದರಿಜೋಗಿ ಬೊಮ್ಮನಹಳ್ಳಿಯ ಮಕ್ಕಳನ್ನೆಲ್ಲ ತನ್ನ ಕಿಂದರಿನಾದದಲ್ಲಿ ಮೋಹಿಸಿ ಬಂಡೆಯ ಬಾಯನ್ನು ಸೇರಿಕೊಂಡು ಕಣ್ಮರೆಯಾದ; ಆದರೆ ಕುವೆಂಪು ನುಡಿಸಿದ ಕಿಂದರಿನಾದ 'ಬೊಮ್ಮನಹಳ್ಳಿ' ಕಿಂದರಿಜೋಗಿ ಕಥನ ಕವನ ರೂಪದಲ್ಲಿ ಇನ್ನೂ ತನ್ನ ನಾದದಿಂದ ಕನ್ನಡದ ಮಕ್ಕಳನ್ನೆಲ್ಲ ಸೆಳೆಯುತ್ತಲೇ ಇದೆ![1]

(3)

ನನ್ನ ಮನೆ, ಮರಿವಿಜ್ಞಾನಿ, ಮೇಘಪುರ—ಈ ಕವನಸಂಕಲನಗಳಲ್ಲಿ ಸಾಮಾನ್ಯವಾಗಿ ತಾಯಿಯ ವಾತ್ಸಲ್ಯ, ಮಕ್ಕಳ ಮುಗ್ಧತೆ, ಪ್ರಕೃತಿ—ಇವೇ ಪ್ರಧಾನ ವಸ್ತು.

'ನನ್ನ ಮನೆ' ಎಂಬುದು ಮಕ್ಕಳ ಎಳೆಯ ಭಾವನೆಗಳನ್ನು ಬಿಂಬಿಸುವ 14 ಕವನಗಳ ಸಂಗ್ರಹ. ಇಲ್ಲಿಯ ಕವನಗಳಲ್ಲಿ ಕವಿಯ ಕನ್ನಡ ಪ್ರೇಮವನ್ನೂ ಪ್ರಕೃತಿ ಪ್ರೀತಿಯನ್ನೂ ಕಾಣಬಹುದು. ಕವಿಯ ಉಜ್ವಲ ಕನ್ನಡ ಪ್ರೇಮಕ್ಕೆ ಒಂದು ಉದಾಹರಣೆ :

ಕನ್ನಡ ಎನೆ ಕುಣಿದಾಡುವುದೆನ್ನೆದೆ
ಕನ್ನಡ ಎನೆ ಕಿವಿ ನಿಮಿರುವುದು !
ಕಾಮನ ಬಿಲ್ಲನು ಕಾಣುವ ಕವಿಯೊಲು
ತೆಕ್ಕನೆ ಮನ ಮೈ ಮರೆಯುವುದು.
ಕನ್ನಡ ! ಕನ್ನಡ, ಹಾ ಸವಿಗನ್ನಡ !
ಕನ್ನಡದಲಿ ಹರಿ ಬರೆಯುವನು ;
ಕನ್ನಡದಲಿ ಹರ ತಿರಿಯುವನು !
ಕನ್ನಡದಲ್ಲಿಯೆ ಬಿನ್ನಹಗೈದೊಡೆ
ಹರಿವರಗಳ ಮಳೆ ಕರೆಯುವನು !
ಹರಿ ಮುರಿಯದೆ ತಾ ಪೊರೆಯುವನು ! (ಪು. 5)

'ಪೊದೆಯ ಹಕ್ಕಿ, ಎದೆಯ ಹಕ್ಕಿ' ಎಂಬ ಕವನದಲ್ಲಿ ಕವಿಯ ತಾದಾತ್ಮ್ಯತೆಯನ್ನು ಮನಗಾಣಬಹುದು. ಕವಿಗೆ ತನ್ನ ಎದೆಯೊಳೊಂದು ಹಕ್ಕಿಯಿದೆ ಎಂಬುದು ಹೊರಗೆ ಕಾಣುವ ಹಕ್ಕಿಯ ಹಾಡಿನಿಂದ ತಿಳಿಯಿತು. ಹೊರಗೆ ಕಾಣುವ ಹಕ್ಕಿಯನ್ನು ಒಲಿದುದೂ ಕೂಡ ತನ್ನಲ್ಲಿಯ ಎದೆಯ ಹಕ್ಕಿಗಾಗಿಯೇ.

ಟುವ್ವಿ ! ಟುವ್ವಿ ! ಟುವ್ವಿ ! ಟುವ್ವಿ !
ಎಂದು ಹಕ್ಕಿ ಕೂಗಿತು
ಅದರ ಹಾಡು ಬಂದು ಎನ್ನ
ಎದೆಯ ಗೂಡ ತಾಗಿತು !

---

1. ಡಾ. ಜೀಶಂಪ 'ಸಹ್ಯಾದ್ರಿ' ಪು. 1077, 1975.

ಆಗ ಎನ್ನ ಎದೆಯೊಳೊಂದು
ಹಕ್ಕಿ ಇರುವುದೆಂಬುದನ್ನು
ನಾನು ಗೊತ್ತು ಹಿಡಿದೆನು !

ಎದೆಯ ಹಕ್ಕಿಗಾಗಿ ಪೊದೆಯ
ಹಕ್ಕಿಯನ್ನು ಒಲಿದೆನು ! (ಪು. 8)

ಕವಿಯ ಮನಸ್ಸು, ಹಕ್ಕಿ ಹಾಡೂ ಇಲ್ಲಿ ಒಂದಕ್ಕೊಂದು ಸಂಬಂಧ ಪಡೆದಿವೆ. ಪ್ರಕೃತಿಯೊಂದಿಗೆ ತಾದಾತ್ಮ್ಯ ಪಡೆದಾಗ, ನಮ್ಮತನವನ್ನು ಮರೆತು ಆನಂದವನ್ನು ಅನುಭವಿಸಬಹುದು ಎಂಬ ವಿಚಾರವನ್ನು ಕವಿ ಈ ಕವನದಲ್ಲಿ ತಿಳಿಸಿದ್ದಾರೆ.

ಮಲೆನಾಡಿನ ಮಡಿಲಲ್ಲಿ ಬೆಳೆದು ಬಂದ ಕವಿ, ಕೋಗಿಲೆಯ ದನಿಯೊಡನೆ ತಮ್ಮ ದನಿಯನ್ನೂ ಬೆರೆಸಿ ಹಾಡಿದ್ದಾರೆ. ನಿದರ್ಶನಕ್ಕೆ 'ಬಣ್ಣದ ಚುಕ್ಕಿ' ಕವನ ಗಮನಿಸಬಹುದು—

ಹಕ್ಕಿ, ಹಕ್ಕಿ, ಹಾರುವ ಹಕ್ಕಿ,
ಬಾರೆಲೆ ಹಕ್ಕಿ, ಬಣ್ಣದ ಚುಕ್ಕಿ !
ಗೆಳೆಯರು ಆಡುವರಾರೂ ಇಲ್ಲ !
ಕಳೆಯುವುದೆಂತೀ ಕಾಲವನೆಲ್ಲ ?
ಬಾ, ಬಾ, ನನಗೂ ಹಾಡಲು ಕಲಿಸು ;
ಬಾ, ಬಾ, ನನಗೂ, ಹಾರಲು ಕಲಿಸು.
ಹೂವಿನ ರಸವನು ಕೊಡುವೆನು ನಿನಗೆ,
ಸುಗ್ಗಿಯ ಕಾಳನು ಸುರಿವೆನು ನಿನಗೆ.

ಬಾ, ಬಾ, ಆಡುವ ಹಗಲೆಲ್ಲ !
ಬಾ, ಬಾ, ಹಾಡುವ ದಿನವೆಲ್ಲ! (ಪು.10)

ಮೇಲಿನ ಈ ಕವನ ಚಿಣ್ಣರ ಅಂತರಾಳಕ್ಕೆ ಇಳಿಯುವ ಸಾಮರ್ಥ್ಯ ಪಡೆದಿದೆ.

ಮಳೆಬಿಲ್ಲನ್ನು ಕುರಿತಾದ ಒಂದು ಸುಂದರ ಪದ್ಯ 'ಕಾಮನಬಿಲ್ಲು ಕಮಾನು ಕಟ್ಟಿದೆ'. ಈ ಕವನದ ಭಾಷೆಯ ಸೊಗಸು, ನಾದಮಾಧುರ್ಯ ಮಕ್ಕಳನ್ನು ಆಕರ್ಷಿಸುತ್ತದೆ.

ಕಾಮನಬಿಲ್ಲು ಕಮಾನು ಕಟ್ಟಿದೆ
ಮೋಡದ ನಾಡಿನ ಬಾಗಿಲಿಗೆ !
ಬಣ್ಣಗಳೇಳನು ತೋರಣ ಮಾಡಿದೆ,
ಕಂದನ ಕಣ್ಣಿಗೆ ಚಂದವ ಮಾಡಿದೆ,
ಹಣ್ಣಿನ ಹೂವಿನ ಹೊನ್ನನು ಕೂಡಿದೆ ;
ಮಕ್ಕಳಿಗೋಕುಳಿಯಾಟವನಾಡಿದೆ,
ತೆಂಗಿನ ತೋಟದ ಬುಡದಲಿ ಮೂಡಿದೆ ;
ಭೂಮಿಗೆ ಬಾನಿಗೆ ಸೇತುವೆ ಹೂಡಿದೆ (ಪು. 16)

ಮಳೆ ಬಿಲ್ಲು " ಭೂಮಿಗೆ ಬಾನಿಗೆ ಸೇತುವೆ ಹೂಡಿದೆ " ಎಂಬ ಕಲ್ಪನೆ—ವಿಶೇಷವಾಗಿ ಮೆಚ್ಚತಕ್ಕ ಅಂಶ.

ಕವಿ ತಾನು ಹುಟ್ಟಿ ಬೆಳೆದದ್ದು, ನುಡಿ ಕಲಿತದ್ದು, ಆಟ ಕಲಿತದ್ದು ಮೊದಲು ಮನೆಯಲ್ಲಿಯೇ. ಈ ವಿಚಾರಗಳು 'ನನ್ನ ಮನೆ (1–2)' ಕವನಗಳಲ್ಲಿ ವ್ಯಕ್ತಗೊಂಡಿವೆ. 'ಮೂರ್ತಿಯ ಬೆಳ್ಮುಗಿಲು' ಎಂಬುದು ಮಕ್ಕಳ ಮನಸ್ಸನ್ನು ಸೆರೆಹಿಡಿಯುವ ಸುಂದರ ಕಲ್ಪನೆಗಳನ್ನೊಳಗೊಂಡ ಕವನ.

ತಿಳಿಬೆಳುದಿಂಗಳ ಸವಿನೊರೆ ಹಾಲೊಳು
ತೇಲ್ವ ಚಿರೋಟಿಗಳೇನಮ್ಮಾ ?
ನೀಲಿಯ ನೀರೊಳು ಬಾನಮ್ಮನಿಟ್ಟಿಹ
ಬೆಣ್ಣೆಯ ಮುದ್ದೆಗಳೇನಮ್ಮಾ?

ಮೇಲಿನ ಲೋಕದ ದಿವಿಜರ ಮಕ್ಕಳು
ನೀಲಿಯ ಕೊಳದಲಿ ತೇಲಲು ಬಿಟ್ಟಿಹ
ಸೋಪಿನ ಬೆಳ್ನೊರೆಯೇನಮ್ಮಾ ?
ಕಾಗದದಾಟದ ನೌಕಾಸೇನೆಯು
ಬಿನದಕೆ ತೇಲಿಹರೇನಮ್ಮಾ ? (ಪು. 21)

ಈ ಸಂಕಲನದಲ್ಲಿ ಮಕ್ಕಳ, ಕಲ್ಪನೆ, ಅನುಭವವಲಯಕ್ಕೆ ಬರುವ ಉಪಮೆ, ರೂಪಕ, ಪ್ರತಿಮೆಗಳನ್ನು ಸೃಷ್ಟಿಸಿರುವುದು ಮೆಚ್ಚತಕ್ಕ ಸಂಗತಿ. ಮಕ್ಕಳಿಗೆ ಪರಿಚಿತವಾದ ವಸ್ತುಗಳನ್ನೇ ಆಧರಿಸಿ, ಆ ಮೂಲಕ ಭಾವವನ್ನು ಬೆಳೆಸಿಕೊಂಡು ಹೋಗಿರುವುದು ಇದರಲ್ಲಿಯ ಎಲ್ಲ ಕವನಗಳ ವಿಶಿಷ್ಟತೆ.

ಮರಿವಿಜ್ಞಾನಿ : ಇದು ಹೆಸರೇ ಸೂಚಿಸುವಂತೆ, ಮಕ್ಕಳ ಮನಸ್ಸು ತಾಳುವ ವೈಜ್ಞಾನಿಕ ನಿಲುವಿನ 13 ಕವನಗಳನ್ನು ಒಳಗೊಂಡ ಸಂಕಲನ. ಸೃಷ್ಟಿಯ ರಹಸ್ಯವನ್ನರಿಯಲು ಮಕ್ಕಳು ಕಾರಣಗಳನ್ನು ಹುಡುಕುವುದು ಸಹಜ. ಮಗು ತನ್ನದೇ ಆದ ತಿಳಿವಳಿಕೆಯ ದೃಷ್ಟಿಯಿಂದ ವೈಜ್ಞಾನಿಕ ವಿಷಯಗಳನ್ನು ಅರ್ಥೈಸಲು ಪ್ರಯತ್ನವನ್ನು ನಡೆಸುತ್ತದೆ. ಈ ಅಂಶ 'ಮೂರ್ತಿಯ ವಿಜ್ಞಾನ' ಎಂಬ ಕವನದಲ್ಲಿ ಸುಂದರವಾಗಿ ಮೂಡಿಬಂದಿದೆ :

ದೇವರಲೋಕದ ಬಾಲಕರಾಡುವ
ಉಕ್ಕಿನ ಚೆಂಡದು, ಕೇಳಮ್ಮಾ !
ಮೇಲಿನ ಲೋಕದ ನೆಲವದು, ಅಮ್ಮಾ,
ಚಿನ್ನದ ಉಕ್ಕಿನ ನೆಲವಮ್ಮಾ !

ಚೆಂಡಾಡಲುಕ್ಕಿನ ಚೆಂಡೆದ್ದು ಬೀಳೆ
ಗುಡುಗಾಗಿ ಕೇಳುವುದೆಮಗಮ್ಮಾ !
ಉಕ್ಕಿನ ಚೆಂಡೆದ್ದು ಬೀಳಲು ಕಿಡಿಯೆದ್ದು
ಮಿಂಚಾಗಿ ತೋರುವುದೆಮಗಮ್ಮಾ ! (ಪು. 15)

ಬಾಲರ ಮೈಬೆವರಿ ನೀರಾಗಿ ಸೋರಲು
ಮಳೆಯಾಗಿ ಬೀಳುವುದೆಮಗಮ್ಮಾ !
ಉಕ್ಕಿನ ಧೂಳೆದ್ದು ಕಾರ್ಮುಗಿಲಂದದಿ
ತೇಲುತ್ತ ಬರುವುದು ಕೇಳಮ್ಮಾ ! (ಪು. 16)

ಇಲ್ಲೆಲ್ಲ ಮನರಂಜನೆಯೇ ಪ್ರಮುಖ ಅಂಶವಾಗಿದೆ.

ಕಂದನ ಹಿರಿಮೆಯನ್ನೇ ಹೇಳುವ ಕಂದನೇ ಪರಂಜ್ಯೋತಿಯೆಂದು ಕಲ್ಪಿಸಿರುವ ' ಜೋಗುಳ ' ಎಂಬ ಕವನ ಹಾಡಲು ಬರುವಂಥದು.

ಮಲಗು ಮಲಗೆಲೆ ಕಂದಾ ಜೋ ! ಜೋ !
ಮಲಗು ಎನ್ನಾನಂದಾ ಜೋ ! ಜೋ !
ನಿದ್ದೆಯಾರದು ಚೆಂದ ಜೋ ! ಜೋ !
ಮುದ್ದು ಕಂದಾ ಮಲಗು ಜೋ ! ಜೋ !

ಕಂದಾ ! ಪರಂಜ್ಯೋತಿ ಜೋ ಜೋ !
ಪುಣ್ಯಾತ್ಮನಚ್ಯುತನೆ ಜೋ ಜೋ !
ಶಿವ ನೀನು ! ಶಿವ ನೀನು ! ಜೋ ಜೋ !
ಶಿವ ನೀನು ಜೋ ! ಶಿವ ನೀನು ಜೋ !
ಜೋ ಜೋ ಜೋ ! (ಪು. 17)

' ಹೂವಿನ ಬೇಲಿ ' ಎಂಬ ಕವನದಲ್ಲಿ ತನ್ನ ತಂಗಿಯನ್ನು ಹೂತೋಟಕ್ಕೆ ಬಾ ಎಂದು ಸಂತೋಷದಿಂದ ಕರೆಯುತ್ತದೆ—

ತೋಟದ ಬೇಲಿಯು ಹೂಮಯವಾಗಿದೆ
ಬಾರಪ್ಪ, ತಂಗಿಯೆ, ಹೂ ಕೊಯ್ಯಲು !
ಹೂವಿನ ಮಧುವನು ಹೀರಲು ಬಂದಿವೆ
ಬಗೆ ಬಗೆ ಬಣ್ಣದ ಹಕ್ಕಿಗಳು !

ಉದಯದ ಊರಿಂದ ಬಂದಿಹವವುಗಳು
ತಂದಿವೆ ವಿಧ ವಿಧ ಹಾಡುಗಳ :
ಹೂಗಳ ಕೊಯ್ಯುವ ನೆವದಿಂದ ಕದಿಯೋಣ
ಅವುಗಳ ಕೊರಲಿನ ಇಂಚರವ ! (ಪು. 18)

ಇಂತೆಯೇ ಹಿರೇತನ, ಆಟ ಮುಗಿಯುವ ಮುನ್ನ, ಕೈಮುಚ್ಚಾಟ, ಅಮ್ಮನ ಮೂರ್ತಿ ಮುಂತಾದ ಕವನಗಳಲ್ಲಿ ವೈಜ್ಞಾನಿಕ ಅಂಶಗಳನ್ನೂ ಮಗು ಮತ್ತು ಮಾತೆಯರ ಅವ್ಯಾಜ ಪ್ರೀತಿ ವಾತ್ಸಲ್ಯಗಳನ್ನು ಕಾಣಬಹುದು.

ಮೇಘಪುರ : ಕೃತಿಯ ಶೀರ್ಷಿಕೆಯೇ ಸೂಚಿಸುವಂತೆ ಕಲ್ಪನಾ ಪ್ರಧಾನವಾದ ಕವನ ಸಂಕಲನವಿದು. ಇದರಲ್ಲಿ 12 ಕವನಗಳಿವೆ. ಇವುಗಳ ಸುಂದರ ಸಹಜ ಶೈಲಿ ಮಕ್ಕಳ ಮನವನ್ನು ಅಪಹರಿಸುವ ಶಕ್ತಿ ಪಡೆದಿದೆ. ಉದಾಹರಣೆಗೆ ' ತೊರೆಯ ಬಳಿ ' ಕವನವನ್ನು ಗಮನಿಸಬಹುದು :

ಎಲ್ಲಿಂದ ನೀ ಬರುವೆ ?
ಎಲ್ಲಿಗೋಡುತಲಿರುವೆ ?
ಆರನೀ ಪರಿ ಕರೆವೆ ?
ಏಕಿಂತು ಮೊರೆವೆ ?—ಓ ಮುದ್ದು ತೊರೆಯೆ !

ನಿನ್ನಾಟವನು ನೋಡಿ
ನಿನ್ನೊಡನೆ ನಲಿದಾಡಿ
ನಿನ್ನಂದದೊಳೆ ಹಾಡಿ
ನಿನಗೆನ್ನ ನೀಡಿ—ಓ ಮುದ್ದು ತೊರೆಯೆ ! (ಪು. 9)

ಮೇಘಪುರ ಎಂಬುದು ಒಂದು ಸುಂದರ ಕಲ್ಪನೆ. ಪ್ರಕೃತಿಯ ಸೌಂದರ್ಯವನ್ನು ಕಲ್ಪನೆಯ ಮೂಸೆಯಲ್ಲಿ ಸೆರೆಹಿಡಿದಿಟ್ಟಿರುವ ಈ ಕವನದಲ್ಲಿ ಕವಿ ತಾಯಿಯ ವಾತ್ಸಲ್ಯಪಥದಿಂದ ಹೊರಹೋಗಲು ಬಯಸುವ, ಸ್ವಾತಂತ್ರ್ಯದ ಬಯಕೆಯ ಮಗುವನ್ನು ಚಿತ್ರಿಸಿದ್ದಾರೆ. ಸೃಷ್ಟಿಯ ಸೌಂದರ್ಯವನ್ನು ಸವಿಯಲು ತಾಯಿಯ ತಡೆಯಿರುವುದನ್ನು ಕಂಡ ಮಗು ಅವಳ ಪ್ರೀತಿಯ ಬಂಧನದಿಂದ ತಪ್ಪಿಸಿಕೊಳ್ಳಲಾರದೆ ನೊಂದು ನುಡಿಯುವ ನುಡಿಗಳಿವು :

ನಿನ್ನ ಕರಗಳು, ತಾಯೆ,
ನನ್ನ ಸೆರೆಗೈದಿಹವು
ಇನ್ನು ನಾನವ ಸಹಿಸೆ !
ಲೋಕವಿದು ಸಾಕು ಆ
ನಾಕ ಬೇಕಮ್ಮಾ (ಪು. 23)

ಹೀಗೆಯೇ ಎಳಬಿಸಿಲು, ಹಕ್ಕಿಗಳು, ಏಕೆ? ಹೊಂಬಿಸಿಲು, ನಗು, ಮುದ್ದುಮಗೂ ಕವನಗಳೂ ಮಕ್ಕಳಿಗೆ ಪ್ರಿಯವಾಗುತ್ತವೆ.

(4)

ನಾಟಕ ಪ್ರಕಾರ ಮಕ್ಕಳಿಗೆ ಬಹು ಪ್ರಿಯವಾದುದು. ಅನುಕರಣ ಕಲೆ ಮಕ್ಕಳಿಗೆ ಬೇಗ ಸಿದ್ಧಿಸುವುದರಿಂದ ನಾಟಕಗಳನ್ನು ಅವರು ಹೆಚ್ಚು ಇಷ್ಟಪಡುತ್ತಾರೆ. ಕುವೆಂಪು ಅವರ 'ಮೋಡಣ್ಣನ ತಮ್ಮ' ಮತ್ತು 'ನನ್ನ ಗೋಪಾಲ' ಎಂಬೆರಡು ನಾಟಕಗಳು ಮಕ್ಕಳನ್ನೇ ಗಮನದಲ್ಲಿಟ್ಟುಕೊಂಡು ರಚಿಸಿದವಾದರೂ ಹಿರಿಯರ ಮೇಲೂ ಇವು ತಮ್ಮ ಪ್ರಭಾವವನ್ನು ಬೀರಿವೆ. ಹಿರಿಯರೂ ಕಲಿಯಬಹುದಾದ ಅನೇಕ ಮೌಲ್ಯಗಳು ಈ ನಾಟಕಗಳಲ್ಲಿ ಪ್ರತಿಪಾದಿತವಾಗಿವೆ.

'ಮೋಡಣ್ಣನ ತಮ್ಮ' ಲಯಬದ್ಧವಾದ ಪ್ರಾಸಾನುಪ್ರಾಸಗಳಿಂದ ಕೂಡಿರುವ ಪದ್ಯ ನಾಟಕ. ಮಕ್ಕಳಲ್ಲಿ ಸಹಜವಾಗಿಯೇ ಕಾಣಿಸಿಕೊಳ್ಳುವ ಕಲ್ಪನಾಶಕ್ತಿ ಮತ್ತು ಸ್ವತಂತ್ರ ಮನೋಭಾವವನ್ನು ವ್ಯಕ್ತಪಡಿಸುವ ವಸ್ತು ಇದರಲ್ಲುಂಟು. ಮಕ್ಕಳಿಗೂ ಪ್ರಕೃತಿಗೂ ಬಹು ಹತ್ತಿರದ ನಂಟು. ವಿಧ ವಿಧ ವಿನ್ಯಾಸದಲ್ಲಿ ತೇಲುತ್ತಿರುವ ಮೋಡಗಳನ್ನು ಕಂಡು ಆಶ್ಚರ್ಯಚಕಿತರಾಗಿ ತದೇಕಚಿತ್ತರಾಗಿ ಅವನ್ನೇ

ಗಮನಿಸುತ್ತ ನಿಲ್ಲುವ ಎಳೆಯರು ಇಲ್ಲದಿಲ್ಲ. ಈ ನಾಟಕದಲ್ಲಿ ಹುಡುಗನೊಬ್ಬ ಮೋಡದ ಮೇಲೇರಿ ಹೋಗಲು ಕಾತರದಿಂದ ಮೋಡಣ್ಣನನ್ನು ಅನೇಕ ಬಗೆಯಾಗಿ ಅರ್ತನಾಗಿ ಬೇಡಿಕೊಳ್ಳುವುದೇ ನಾಟಕದ ವಸ್ತುವಾಗಿದೆ.

ಸ್ವಚ್ಛಂದವಾಗಿ ವಿಹರಿಸುತ್ತಿರುವ ಮೋಡ, ಹುಡುಗನಿಗೆ ತನ್ನಣ್ಣನಂತೆ ಕಾಣುತ್ತದೆ. ಮೋಡದ ಜೊತೆ ತಾನೂ ವಿಹರಿಸಬೇಕೆನಿಸುತ್ತದೆ. ಆಗ ಮೋಡ ವನ್ನು ಕುರಿತು ಅವನು :

ಓ ಮೋಡಣ್ಣಾ, ಓ ಮೋಡಣ್ಣಾ,
ನಾನು ಬರುವೆನೊ ಕೈ ನೀಡಣ್ಣಾ !

ಎಂಬುದಾಗಿ ವಿನಯದಿಂದ ಬೇಡಿಕೊಳ್ಳುತ್ತಾನೆ. ಬಾಲಕನ ಮೊರೆಯನ್ನು ಕೇಳಿದ ಮೋಡಣ್ಣ :

ಬರಬೇಡಣ್ಣಾ ! ಬರಬೇಡಣ್ಣಾ
ಅವ್ವನು ಬೈವಳು ನೀ ನೋಡಣ್ಣಾ !

ಎನ್ನುತ್ತಾನೆ. ಆದರೆ ಹುಡುಗ ಸುಮ್ಮನಾಗುವುದಿಲ್ಲ—

ಬಲು ಸಂತೋಷದಿ ತೇಲುವೆಯಣ್ಣ ;
ಬಳಲದ ಆಟವನಾಡುವೆಯಣ್ಣ

ಮಿಂಚಿನ ಬಳಿಯೋ ನೀನಿರುವೆ ;
ಮಿಂಚಿನ ಬಳೆಯನೆ ಧರಿಸಿರುವೆ.

ದೂರದ ಗಿರಿಗಳ ಏರುವೆ ನೀನು ;
ದೂರದ ಪುರಗಳ ನೋಡುವೆ ನೀನು (ಪು. 3)

ತನ್ನೊಡನೆ ಬರಬೇಕೆಂದು ಆಶಿಸಿದ ಹುಡುಗನಿಗೆ ಮೋಡಣ್ಣ ಮತ್ತೆ ಅವ್ವನ ಬೆದರಿಕೆಯನ್ನು ಹುಟ್ಟಿಸುತ್ತಾನೆ. ಇದಕ್ಕೆ ಹುಡುಗ ನಿರಾಶನಾಗುತ್ತಾನೆ. ದಿಕ್ಕು ಕಾಣದೆ ಸುತ್ತಲೂ ನೋಡುತ್ತಾನೆ. ಗಿರಿಯಣ್ಣ, ಕಾಡಣ್ಣರನ್ನು ಸಹಾಯಕ್ಕೆ ಕರೆಯುತ್ತಾನೆ. ಕಡೆಗೆ ಮೋಡಣ್ಣನನ್ನೇ ಮರೆಹೋಗುತ್ತಾನೆ. ಹುಡುಗನ ಆಸೆ ಕಂಡು ಮೋಡಣ್ಣನಿಗೆ ಕನಿಕರವಾಗುತ್ತದೆ. ಹುಡುಗನಿಗೆ ತನ್ನ ಕರ್ತವ್ಯದ ಹೊಣೆಯನ್ನು ಹೇಳುತ್ತಾನೆ ! ಆಗ ಹುಡುಗನಿಗೆ ತಾನು ಹಟ ಹೂಡಿದುದು ತಪ್ಪೆಂದು ಗೋಚರವಾಗುತ್ತದೆ. ಮೋಡಣ್ಣನಲ್ಲಿ ಕ್ಷಮೆ ಬೇಡಿ, ತನಗೆ ಬುದ್ಧಿಮಾತು ಹೇಳುವಂತೆ ಪ್ರಾರ್ಥಿಸಿಕೊಳ್ಳುತ್ತಾನೆ. ಮೋಡಣ್ಣ ಹುಡುಗನನ್ನು ಕುರಿತು :

ಧರ್ಮಮೇಘ ನೀನಾಗಲು ಬೇಕು ;
ಧರ್ಮದ ಮಳೆಯನು ಸುರಿಸಲು ಬೇಕು !

ಸತ್ಯವನೆಂದಿಗು ಬಿಡಬೇಡ ;
ಮಿಥ್ಯೆಯನೆಂದೂ ಹಿಡಿಯಲು ಬೇಡ !

ಚಿತ್ತದಿ ಭಕ್ತಿಯ ಬೀಜವನು
ಬಿತ್ತುತ ಪಡೆಯೈ ಮುಕ್ತಿಯನು !

ದೇವರ ದಿನವೂ ಭಜಿಸಲು ಬೇಕೊ ;
ಪಾವನನಾತನ ನೆನೆಯಲು ಬೇಕೊ ;
ಮಾನವರೆಲ್ಲ ದೇವರ ಪುತ್ರರು
ಆದುದರಿಂದವರೆಲ್ಲಾ ಮಿತ್ರರು !
ಜಾತಿ ವೈರಗಳ ಮರೆಯಲು ಬೇಕೊ
ನೀತಿ ನಡತೆಗಳ ಕಲಿಯಲು ಬೇಕೊ ! (ಪು. 12)

ಈ ಮಾತುಗಳಿಂದ ಮಾನವರೆಲ್ಲ ಒಂದು ; ಅವರೆಲ್ಲ ದೇವರ ಪುತ್ರರು. ಜಾತಿ ಮತಗಳ ದ್ವೇಷ ತೊರೆದು ಒಂದಾಗಿ ಬಾಳಬೇಕು, ತಾರತಮ್ಯ ಕೂಡದೆಂಬ ಕವಿಸಂದೇಶ ವ್ಯಕ್ತವಾಗಿದೆ.

ಆಲಿಸಿ ಮರೆಯುವ ನುಡಿಗಳಿವಲ್ಲ ;
ಊಹನೆ ಮಾತ್ರದ ಕವಿತಗಳಲ್ಲ.
ಬಾಲನೆ ಅನುಸರಿಸಿವುಗಳನೆಲ್ಲ ! .
ಹೊತ್ತಾಯಿತು ಹೋಗುವೆ ನಾನೀಗ ;
ಕತ್ತಲಿಳಿಯುತಿದೆ ನಡೆ ನೀ ಬೇಗ (ಪು. 14)

ಎಂದು ವೋಡಣ್ಣ ಹೇಳುತ್ತಿರುವಂತೆಯೇ ತಾಯಿಯ ಕೂಗು ಕೇಳಿಸುತ್ತದೆ— ವೋಡಣ್ಣ ಹುಡುಗನನ್ನು ಕುರಿತು :

ಆಗೋ ಅವ್ವನು ಕರೆವಳು ಕೇಳಣ್ಣ ;
ಇಗೊ ಹೊರಡುವೆ ನಾನೆಲೆ ಕಿಟ್ಟಣ್ಣ.
ನನ್ನುಪದೇಶವ ಮರೆಯದಿರು ;
ನಿನ್ನಾತ್ಮನ ನೀ ತೊರೆಯದಿರು (ಪು. 15)

ಎಂದು ಹೇಳಿ ಅಂತರಿಕ್ಷದಲ್ಲಿ ಅಡಗುತ್ತಾನೆ.

ಈ ನಾಟಕ ಮಕ್ಕಳಲ್ಲಿರುವ ಕೌತುಕ ಮನಸ್ಸನ್ನು ಕೆರಳಿಸಿ, ಅವರ ಮನಸ್ಸಿನಲ್ಲಿ ಉದಾತ್ತ ಭಾವನೆಯನ್ನು ಅರಳಿಸುವಲ್ಲಿ ಸಹಕಾರಿಯಾಗಿದೆ.

'ನನ್ನ ಗೋಪಾಲ' ಎಂಬುದು ಒಂಬತ್ತು ನೋಟಗಳಿಂದ ಕೂಡಿರುವ ಗದ್ಯ ಶೈಲಿಯ ನಾಟಕ. ಇದರಲ್ಲಿ ನಿರ್ಮಲಭಕ್ತಿಗೆ ಭಗವಂತ ಒಲಿಯುವನೆಂಬ ತತ್ತ್ವದ ಪ್ರತಿಪಾದನೆಯಿದೆ. ವಿಧವೆಯಾದ ತಾಯಿಯ ಅನನ್ಯ ಭಕ್ತಿಯಿಂದಾಗಿ ಅವಳ ಮಗನಿಗೆ ಬನದ ಗೋಪಾಲನು ಅಣ್ಣನಾಗಿ ದರ್ಶನಕೊಟ್ಟ ಕಥೆ ಈ ನಾಟಕದ ಕಥಾವಸ್ತು. ತನ್ನ ಒಬ್ಬನೇ ಮಗನಾದ ಗೋಪಾಲನಿಗೋಸ್ಕರ ವೇಣುಗೋಪಾಲನನ್ನು ಅತ್ಯಂತ ಶ್ರದ್ಧೆ ಭಕ್ತಿಗಳಿಂದ ಪ್ರಾರ್ಥಿಸಿ ಒಲಿಸಿಕೊಳ್ಳುವ ವಿಧವೆಯಾದ ತಾಯಿಯ ಚಿತ್ರ ಹಾಗೂ ತಾಯಿಯ ಮಾತಿನಲ್ಲಿ ನಂಬಿಕೆಯಿಟ್ಟು ತನ್ನ ಮುಗ್ಧ ಭಕ್ತಿಯಿಂದ ಬನದ ಗೋಪಾಲನನ್ನು ಒಲಿಸಿಕೊಳ್ಳುವ ಬಾಲಕ ಗೋಪಾಲನ ಚಿತ್ರ— ಇವು ಈ ನಾಟಕದಲ್ಲಿ ಅಪೂರ್ವವಾದ ಮೂಡಿಬಂದಿವೆ.

ಬಾಲಕ ಗೋಪಾಲ ಬಡ ಹುಡುಗ. ಅವನ ತಾಯಿ ವಿಧವೆ. ನೂಲುಮಾರಿ ಬಂದ ಹಣದಿಂದ ಜೀವನ ನಡೆಸುತ್ತಿರುತ್ತಾಳೆ. ತನ್ನ ಒಬ್ಬನೇ ಮಗನಾದ ಗೋಪಾಲನನ್ನು ವಿದ್ಯಾವಂತನನ್ನಾಗಿ ಮಾಡಬೇಕೆಂಬುದೇ ಅವಳ ಆಸೆ. ಗೋಪಾಲ ಓದುವುದಕ್ಕಾಗಿ ಕಾಡನ್ನು ದಾಟಿ ಹೋಗಬೇಕಾಗುತ್ತದೆ. ಹಾಗೆ ಹೋಗಲು ತನಗೆ ಹೆದರಿಕೆಯಾಗುತ್ತದೆಂದು ತಾಯಿಗೆ ತಿಳಿಸಿದಾಗ ವೇಣುಗೋಪಾಲನ ಭಕ್ತಳಾದ ಆಕೆ, 'ನಿನಗೆ ಹೆದರಿಕೆಯಾದಾಗ ಕಾಡಿನಲ್ಲಿರುವ ನಿನ್ನ ಅಣ್ಣ, ನನ್ನ ಹಿರಿಯಮಗ ಗೋಪಾಲನನ್ನು ಕೂಗು. ಅವನು ಬಂದು ನಿನ್ನನ್ನು ಕಾಡು ದಾಟಿಸುತ್ತಾನೆ' ಎಂದು ಹೇಳುತ್ತಾಳೆ. ಅದರಂತೆ, ಗೋಪಾಲ ಮನೆಗೆ ಹಿಂದಿರುಗಿ ಕಾಡಿನ ಮಧ್ಯೆ ಬರುವಾಗ ಹೆದರಿಕೆಯಾಗುತ್ತದೆ. ತಾಯಿಯ ಮಾತನ್ನು ನೆನೆದು 'ಅಣ್ಣಾ ಏ ಗೋಪಾಲಣ್ಣಾ' ಎಂದು ಕೂಗುತ್ತಾನೆ. ಭಗವಂತ ಬನದ ಗೋಪಾಲನಾಗಿ ಬಂದು ಧೈರ್ಯವಾಗಿ ಮನೆಗೆ ಹೋಗು ಎಂದು ಹೇಳುತ್ತಾನೆ. ಮನೆಗೆ ಬಂದ ಮಗನಿಂದ ವಿಷಯ ತಿಳಿದ ತಾಯಿ :

'ಪುಣ್ಯವಂತನು ನೀನು, ಮಗನೆ, ನಿನ್ನನ್ನು ಹೆತ್ತವಳು ನಾನೂ ಧನ್ಯಳಾದೆ' 'ನನ್ನ ಬಡತನವಿಂದು ಮರೆಯಾಯ್ತು. ನನ್ನ ವೈಧವ್ಯವಿಂದು ಅಳಿದುಹೋಯ್ತು. ಇನ್ನೆನ್ನ ಭಾಗ್ಯಕ್ಕೆ ಎಣೆಯಿಲ್ಲ' (ಪು. 12)—ಎಂದು ಸಂತೋಷಪಡುತ್ತಾಳೆ.

ಬಾಲಕ ಗೋಪಾಲನ ಮುಗ್ಧಭಕ್ತಿ ಪ್ರಕಟವಾಗುವುದು, ಗುರುಗಳಿಗೆ ಗುರುದಕ್ಷಿಣೆಯನ್ನು ಅರ್ಪಿಸಬೇಕಾದ ಸಂದರ್ಭದಲ್ಲಿ. ಬನದ ಗೋಪಾಲ ಕೊಟ್ಟ ಮೊಸರುತುಂಬಿದ ಮಣ್ಣಿನ ಕುಡಿಕೆಯನ್ನೇ ಗುರುಗಳಿಗೆ ಕಾಣಿಕೆಯಾಗಿ ಕೊಡುತ್ತಾನೆ. ಜೊತೆಯ ಬಾಲಕರೆಲ್ಲರು ಚಿನ್ನ, ಬೆಳ್ಳಿ ತಟ್ಟೆಗಳನ್ನು, ಧೋತ್ರಿ, ಜರತಾರಿ ಪಂಚೆ ಮುಂತಾದವನ್ನು ಕೊಡುತ್ತಾರೆ. ಆದರೆ ಎಷ್ಟು ಸುರಿದರೂ ಅಕ್ಷಯವಾಗುವ ಮೊಸರಿನ ಕುಡಿಕೆಯನ್ನು ಕಂಡು ಗುರುಗಳಿಗೆ ಆಶ್ಚರ್ಯವಾಗುತ್ತದೆ. ಗೋಪಾಲನನ್ನು ವಿಚಾರಿಸಿ, ತಾನೂ ಬನದ—ಗೋಪಾಲನನ್ನು ಕಾಣಲು ಇಚ್ಛಿಸಿ, ಬಾಲಕ ಗೋಪಾಲ ನೊಡನೆ ಬನಕೆ ಬರುತ್ತಾರೆ. "ಅಣ್ಣಾ ಗುರುಗಳು ನಿಮ್ಮನ್ನು ನೋಡಬೇಕಂತೆ. ಇಲ್ಲಿ ಬಾಣ್ಣಾ" ಎಂದು ಗೋಪಾಲ ಕರೆದರೂ, ಬನದ ಗೋಪಾಲ ಕಾಣಿಸಿಕೊಳ್ಳುವುದಿಲ್ಲ. ಅದಕ್ಕೆ ಬದಲಾಗಿ 'ತಮ್ಮಾ, ಗೋಪಾಲ, ನಿನ್ನ ತಾಯಿಯ ಭಕ್ತಿ, ನಿನ್ನೊಲ್ಮೆ ಇವುಗಳಿಗೆ ಮೆಚ್ಚಿ ನಿನಗೆ ಕಾಣಿಸಿಕೊಂಡು ನಿನ್ನೊಡನೆ ಆಟವಾಡುತ್ತೇನೆ. ನಿಮ್ಮ ಗುರುಗಳಿಗೆ ಹೇಳು : ನನ್ನನ್ನು ನೋಡುವ ಕಾಲ ಅವರಿಗಿನ್ನೂ ಬಂದಿಲ್ಲ. ಅವರಿನ್ನೂ ಬಹುಕಾಲ ಕಾಯಬೇಕು' (ಪು. 40). ಎಂಬ ವಾಣಿ ಕೇಳಿಸುತ್ತದೆ. ಗುರುಗಳಿಗೆ ಭಕ್ತಿಯ ನಿಜವಾದ ಅರಿವು ಮೂಡುತ್ತದೆ. ಅವರು ಬೇಸರಿಸದೆ ತಮ್ಮ ಶಿಷ್ಯ ಗೋಪಾಲನ ಭಾಗ್ಯಕ್ಕೆ ಸಂತೋಷಪಡುತ್ತಾರೆ. 'ಭಕ್ತನಿಗೂ ಭಗವಂತನಿಗೂ ಭೇದವಿಲ್ಲ' ಎಂದು ಅವನನ್ನು ಮುದ್ದಾಡುತ್ತಾರೆ. ಈ ನೋಟದಲ್ಲಿ ನಾಟಕ ಮುಕ್ತಾಯಗೊಳ್ಳುತ್ತದೆ.

ಭಕ್ತಿಯ ಮಹತ್ವವನ್ನು ಬಿಂಬಿಸುವಲ್ಲಿ ಈ ಪುಟ್ಟ ನಾಟಕ ಅತ್ಯಂತ ಯಶಸ್ವಿಯಾಗಿದೆ. ಇಲ್ಲಿ ನಿರೂಪಿತವಾಗಿರುವ ಬಾಲಕ ಗೋಪಾಲನ ಮುಗ್ಧಭಕ್ತಿ ಮತ್ತು ಮಾತೃವಾತ್ಸಲ್ಯ ಮಕ್ಕಳ ಮನಸ್ಸನ್ನು ಮುಟ್ಟುತ್ತವೆ. ಭಾಷೆ ಸಹಜ ಸುಂದರವಾಗಿದೆ. ಎಲ್ಲ ಮಕ್ಕಳೂ ಓದಿ ಅರ್ಥಮಾಡಿಕೊಳ್ಳುವಷ್ಟು ಸರಳವಾಗಿದೆ.

(5)

'ನರಿಗಳಿಗೇಕೆ ಕೋಡಿಲ್ಲ?' ಎಂಬುದು ಪ್ರಾಣಿಕಥೆ. ಇದನ್ನು ಬರೆದದ್ದು ಸುಮಾರು ಐವತ್ತು ವರ್ಷಗಳ ಹಿಂದೆ 'ಮಕ್ಕಳ ಪುಸ್ತಕ' ಎಂಬ ಮಾಸಪತ್ರಿಕೆಯಲ್ಲಿ ಪ್ರಕಟವಾಗಿತ್ತು. ಪ್ರಾಣಿಕಥೆಯಾದ್ದರಿಂದ ಮಕ್ಕಳ ಮನರಂಜನೆಗೆ ಹೆಚ್ಚು ಅವಕಾಶವುಂಟು. ಈ ಕಥೆ ನರಿಯಣ್ಣನ ದ್ರೋಹವನ್ನು ಕುರಿತದ್ದು : ನರಿಯಣ್ಣ ಗುಬ್ಬಕ್ಕನ ಮೂರು ಮಕ್ಕಳನ್ನು ನುಂಗಿಕೊಂಡಾಗ, ಕರಡ್ಯಣ್ಣ ನರಿಯಣ್ಣನಿಗೆ ಗುದ್ದುಕೊಟ್ಟು ಗುಬ್ಬಕ್ಕನ ಮಕ್ಕಳನ್ನು ರಕ್ಷಿಸುವುದು, ಅನಂತರ ಹುಲಿಯಣ್ಣನು ನರಿಯಣ್ಣನಿಗಿದ್ದ ಎರಡು ಕೋಡುಗಳನ್ನೂ ಶಿಕ್ಷೆಗಾಗಿ ಮುರಿಯುವುದು 'ಇನ್ನು ಮೇಲೆ ನರಿಯಣ್ಣನ ಜಾತಿಗೆ ಕೋಡುಗಳಿರದೆ ಹೋಗಲಿ' ಎಂಬುದಾಗಿ ಕರಡ್ಯಣ್ಣ ಶಾಪ ಕೊಡುವುದು—ಇದು ಕಥಾವಸ್ತು. ಕಥೆಯಲ್ಲಿಯ ಗುಬ್ಬಕ್ಕನ ಸಂಸಾರ ಮತ್ತು ಹುಲಿಯಣ್ಣ–ಕರಡ್ಯಣ್ಣ–ನರಿಯಣ್ಣಗಳಿಗೆ ನಡೆಸುವ ಊಟೋಪಚಾರಗಳಲ್ಲಿ ಮನುಷ್ಯ ಸಹಜವಾದ ನಡವಳಿಕೆಗಳೇ ಇವೆ. ಕಥೆ ಮಾನವೀಯ ಭಾವನೆಗಳಿಂದ ತುಂಬಿದೆ.

(6)

ಇಲ್ಲಿಯವರೆಗಿನ ಸಮೀಕ್ಷೆಯಿಂದ ಕುವೆಂಪು ಅವರ ಶಿಶುಸಾಹಿತ್ಯದ ಸ್ವರೂಪವೆಂಥದು ಎಂಬುದು ಅರಿವಾಗದಿರದು. ಮಕ್ಕಳ ಬೌದ್ಧಿಕ ಮಟ್ಟಕ್ಕೆ ಕಲ್ಪನೆಗೆ ಅನುಗುಣವಾಗಿ ಅವರ ಶಿಶುಸಾಹಿತ್ಯ ರಚನೆಗೊಂಡಿದೆ.
ಕುವೆಂಪು ಅವರೇ ಹೇಳಿರುವಂತೆ :

> ದೊಡ್ಡವರೆಲ್ಲರ ಹೃದಯದಿ ಕಟ್ಟಿಹ
> ತೊಟ್ಟಿಲ ಲೋಕದಲಿ
> ನಿತ್ಯ ಕಿಶೋರತೆ ನಿದ್ರಿಸುತಿರುವುದು
> ವಿಸ್ಮೃತನಾಕದಲಿ :
> ಮಕ್ಕಳ ಸಂಗದೊಳೆಚ್ಚರಗೊಳ್ಳಲಿ
> ಆನಂದದ ಆ ದಿವ್ಯ ಶಿಶು
> ಹಾಡಲಿ ಕುಣಿಯಲಿ ಹಾರಲಿ ಏರಲಿ
> ದಿವಿಜತ್ವಕೆ ಈ ಮನುಜ ಪಶು !
>
> (ಶ್ರೀ ತಾರಿಣಿಗೆ, ಮೇಘಪುರ)

ಮಕ್ಕಳ ಆಟಪಾಟಗಳನ್ನು ಗಮನಿಸಿದಾಗ ಸುಪ್ತಚಿತ್ತದಲ್ಲಿ ಅಡಗಿರುವ ಕಿಶೋರಪ್ರಜ್ಞೆ ಜಾಗೃತವಾಗಿ ಮಕ್ಕಳ ಆಸೆ ಆಕಾಂಕ್ಷೆಗಳನ್ನೂ ಅವರ ಶಕ್ತಿಸಾಮರ್ಥ್ಯಗಳನ್ನೂ ಪ್ರತಿಬಿಂಬಿಸುವ ಸಾಹಿತ್ಯ ಅವತರಿಸುತ್ತದೆ.

ಪುಸ್ತಕ ವಿಮರ್ಶೆ

ನೀಲಾಂಬಿಕೆ: ಲೇಖಕರು: ಎಸ್. ಎಸ್. ಭೂಸರಡ್ಡಿ, ಪ್ರಕಾಶಕರು: ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಮುದ್ರಣ: ಜನವರಿ 1991 ಪುಟ: 43 ಬೆಲೆ: ರೂ. 1–00.

ಕರ್ನಾಟಕ ವಿಶ್ವವಿದ್ಯಾಲಯವು ತನ್ನ ಪ್ರಸಾರಾಂಗದ ಮುಖಾಂತರ ಕೈಗೊಂಡು ನಡೆಸುತ್ತಿರುವ ಜ್ಞಾನಪ್ರಸಾರದ ಯೋಜನೆಗಳ ಪೈಕಿ ಒಂದಾದ 'ಉಪನ್ಯಾಸ ಗ್ರಂಥಮಾಲೆ' ಮಾಲಿಕೆಯ 403 ನೆಯ ಪುಸ್ತಕವಿದು. ಇಲ್ಲಿಯ ಆರು ಅಧ್ಯಾಯ ಗಳು 43 ಪುಟಗಳಲ್ಲಿ ಹರಡಿಕೊಂಡಿವೆ. ಪ್ರಸ್ತಾವನೆ, ಅನುಭಾವಿಗಳ ದೃಷ್ಟಿಯಲ್ಲಿ ನೀಲಾಂಬಿಕೆ, ಕಾವ್ಯ ಪುರಾಣಗಳಲ್ಲಿ ನೀಲಮ್ಮ, ಪುರಾತನರ ತ್ರಿವಿಧಿಯಲ್ಲಿ ನೀಲಮ್ಮ, ಗರತಿಯರ ಹಾಡಿನಲ್ಲಿ ನೀಲಮ್ಮ, ವಚನ ವಿವೇಚನೆ-ಇವು ಪ್ರಸ್ತುತ ಪುಟ್ಟ ಪುಸ್ತಕದ ಅಧ್ಯಾಯಗಳು. ಭಕ್ತಿಭಂಡಾರಿ ಬಸವಣ್ಣನವರ ಧರ್ಮಪತ್ನಿಯಾದ ನೀಲಾಂಬಿಕೆ ಕಲ್ಯಾಣದ ಅನುಭವ ಮಂಟಪದ ಕ್ರಿಯಾಶೀಲ ಅನುಪಮ ಅನುಭಾವಿ ಕರ್ನಾಟಕದ ಸಾಂಸ್ಕೃತಿಕ ಚರಿತ್ರೆಯಲ್ಲಿ ಶ್ರೇಷ್ಠ ಶಿವಶರಣೆಯರ ಸಾಲಿನಲ್ಲಿ ದೇದೀಪ್ಯಮಾನವಾಗಿ ಬೆಳಗುತ್ತಿರುವ ಒಂದು ತೇಜೋರತ್ನ. ನೀಲಾಂಬಿಕೆಯ ಸಾಧನೆ ಬೋಧನೆಗಳು ಇಂದಿಗೂ ಕೂಡ ಅನುಕರಣೀಯವಾಗಿವೆ. ಸಂಕೀರ್ಣ ಪ್ರಪಂಚದಿಂದ ಪಾರಮಾರ್ಥ ಸಾಧಿಸಿದ ಆಕೆಯ ವ್ಯಕ್ತಿತ್ವ ಚೇತೋಹಾರಿಯಾಗಿದೆ, ಚೈತನ್ಯಮಯವಾಗಿದೆ. ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಅಕ್ಕಮಹಾದೇವಿಯನ್ನು ಬಿಟ್ಟರೆ ನೀಲಾಂಬಿಕೆಯ ಸ್ಥಾನವೇ ದೊಡ್ಡದೆಂದು ಅನೇಕರು ಅಭಿಪ್ರಾಯಪಟ್ಟಿದ್ದಾರೆ. 10 ಸ್ವರ ವಚನ ಗಳನ್ನು ಸುಮಾರು 126 ವಚನಗಳನ್ನು ರಚಿಸಿರುವ ನೀಲಾಂಬಿಕೆ ಧೀಮಂತೆ; ಹೃದಯ ಶ್ರೀಮಂತೆ 'ಬಸವಣ್ಣನವರಂಥ ಭಕ್ತರಿಲ್ಲ, ನೀಲಮ್ಮನಂಥ ಶರಣೆಯಿಲ್ಲ, ಮಲ್ಲಮ್ಮನಂಥ ಸೊಸೆಯಿಲ್ಲ'–ಎಂಬುದು ನಾಣ್ಣುಡಿಯಾಗಿದೆ.

ಈ ಕಿರುಕೃತಿಯಲ್ಲಿ ಲೇಖಕರು, ಉಪಲಬ್ಧವಿರುವ ಸಾಹಿತ್ಯದ ಆಧಾರದಿಂದ ನೀಲಾಂಬಿಕೆಯ ಸಮಗ್ರವಾದ ಜೀವನ ಚರಿತ್ರೆಯನ್ನು ನಿರೂಪಿಸುವ ಪ್ರಯತ್ನ ಮಾಡಿದ್ದಾರೆ. ನೀಲಾ, ನೀಲಾಂಬೆ, ನೀಲಾಂಬಿಕೆ, ನೀಲಲೋಚನೆ, ನೀಲಲೋಚನೆ ಯಮ್ಮ, ನೀಲಮ್ಮತಾಯಿ, ನೀಲಮ್ಮ ಮುಂತಾದ ಪರ್ಯಾಯ ನಾಮಗಳಿಂದ ಪ್ರಖ್ಯಾತಳಾಗಿರುವ ನೀಲಾಂಬಿಕೆ ಇಂದಿಗೂ ಜನಮನದಲ್ಲಿ ಅಚ್ಚೊತ್ತಿನಿಂತ ಮಹಾ ಶರಣೆ. ವೀರವಿರಾಗಿಣಿ ಅಕ್ಕಮಹಾದೇವಿ ಪ್ರಪ್ರಥಮ ಕವಯಿತ್ರಿಯಾಗಿ ಬೆಳಗಿದರೆ, ನೀಲಾಂಬಿಕೆ ಪ್ರಪ್ರಥಮವಾಗಿ ಭಾವಗೀತೆಗಳನ್ನು (ಶೋಕಗೀತೆ) ರಚಿಸಿ ಮನ್ನಣೆ ಪಡೆದಿದ್ದಾಳೆ. ಉನ್ನತ ನಿಲುವಿನ ಶ್ರೇಷ್ಠ ವಚನಕಾರ್ತಿಯಾಗಿ, ಅನುಭವ ಮಂಟಪದ ಕ್ರಿಯಾಶೀಲ ಜೇಷ್ಠ ಸದಸ್ಯೆಯಾಗಿ, ಮಹಾಮನೆಯ ಅನ್ನಪೂರ್ಣೆಯಾಗಿ, ಶಿವಶರಣೆ ಯರ ಧುರೀಣೆಯಾಗಿ, ವೈಚಾರಿಕ ಪ್ರಜ್ಞೆಯನ್ನು ಅರಳಿಸಿಕೊಂಡ ಚೈತನ್ಯಶಕ್ತಿಯಾಗಿ

ಬಾಳಿದ ನೀಲಾಂಬಿಕೆಯ ಜೀವನ ಚರಿತ್ರೆ ರೋಮಾಂಚಕಾರಿಯಾಗಿದೆ, ಸ್ಫೂರ್ತಿದಾಯಕವಾಗಿದೆ. 'ಸಂಸಾರದಿಂದ ಸದ್ಗತಿ' ಪಡೆದ, ಪುಣ್ಯದ ಪುತ್ಥಳಿ ನೀಲಾಂಬಿಕೆ. 'ಸತಿಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ' ಎಂಬ ವಾಣಿಗೆ ಉತ್ತಮ ಉದಾಹರಣೆಯಾಗಿದ್ದಾಳೆ. 'ಗಂಡ ಹೆಂಡಿರ ಮನಸ್ಸು ಒಂದಾದರೆ ದೇವರ ಮುಂದೆ ನಂದಾದೀಪ ಹಚ್ಚಿದಂತೆ' ಎಂದಿರುವ ಅಂಬಿಗರ ಚೌಡಯ್ಯನ ವಚನಕ್ಕೆ ಜ್ವಲಂತ ನಿದರ್ಶನವಾಗಿದ್ದಾಳೆ (ಪು. 2)

ನೀಲಾಂಬಿಕೆಯ ಸಮಕಾಲೀನ ಶಿವಶರಣರು ಆಕೆಯ ವಿಶಿಷ್ಟ ಗುಣಗಳನ್ನು ಮುಕ್ತಕಂಠದಿಂದ ಸ್ತುತಿಸಿದ್ದಾರೆ. ಈ ಪೈಕಿ ಕಿನ್ನರಿ ಬೊಮ್ಮಯ್ಯ, ಗಣದಾಸಿ ವೀರಣ್ಣ, ಶಿವಯೋಗಿ ಸಿದ್ಧರಾಮ, ಬಾಲಬೊಮ್ಮಣ, ಅಕ್ಕಮಹಾದೇವಿ, ಪ್ರಭುದೇವ, ಎಡೆಯೂರ ತೋಂಟದ ಸಿದ್ಧಲಿಂಗೇಶ್ವರ, ಅಖಂಡೇಶ್ವರ ಮುಖ್ಯರು. ಕಲ್ಯಾಣಮ್ಮ, ಗೌರವ್ವ, ಸೋಮವ್ವೆ, ವಿಮಲಾದೇವಿ, ಶಿವಮಾಯಿದೇವಿ, ಕಾಳವ್ವೆ ಮೊದಲಾದವರಿಗೆ ಆಧ್ಯಾತ್ಮಿಕ ವಿಷಯದಲ್ಲಿ ಯುಕ್ತ ಮಾರ್ಗದರ್ಶನಮಾಡಿ ಮುನ್ನಡೆಸಿದ ಹಿರಿಮೆ ನೀಲಾಂಬಿಕೆಯದು. ಶಿವಯೋಗ ಸಾಧನೆಯಲ್ಲಿ ವಿಶೇಷ ಪರಿಣತಿ ಸಾಧಿಸಿದ ಲಿಂಗಮ್ಮ, ಲಕ್ಕಮ್ಮ, ರಾಯಮ್ಮ, ವರದಾನಿ ಗುಡ್ಡವ್ವೆ ಮೊದಲಾದ ಶರಣೆಯರು ನೀಲಾಂಬಿಕೆಯ ಉನ್ನತವಾದ ನಿಲುವಿಗೆ ತಲೆಬಾಗಿದ್ದರು. ವರದಾನಿ ಗುಡ್ಡವ್ವೆಯಂತೂ ನೀಲಾಂಬಿಕೆಯನ್ನು ಗುರುಸ್ವರೂಪವೆಂದು ಭಾವಿಸಿದ್ದಳು (ಪು. 6).

ಸಿದ್ಧನಂಜೇಶನ ಗುರುರಾಜ ಚಾರಿತ್ರ, ಸಿಂಗಿರಾಜ ಪುರಾಣ, ಶಿವಕವಿ ಸಿದ್ಧನಂಜೇಶನ ನೀಲಮ್ಮನ ಸ್ತೋತ್ರ, ಲಕ್ಕಣದಂಡೇಶನ ಶಿವತತ್ತ್ವ ಚಿಂತಾಮಣಿ, ಮುಖಬೋಳು ಸಿದ್ಧರಾಮನ ಷಟ್‌ಸ್ಥಲತಿಲಕ, ಸರ್ವಜ್ಞನ ತ್ರಿಪದಿಗಳು, ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರ ರತ್ನಾಕರ, ಬಾಲಲೀಲಾ ಮಹಾಂತ ಶಿವಯೋಗಿಗಳ ಕೈವಲ್ಯದರ್ಪಣ ಮುಂತಾದ ಕೃತಿಗಳಲ್ಲಿ ನೀಲಮ್ಮನ ಪೂಜ್ಯತೆ, ಪ್ರತಿಷ್ಠೆ, ಪ್ರಭಾವ, ಹಿರಿಮೆಗರಿಮೆಗಳು ಹೃದಯಂಗಮವಾಗಿ ಮೂಡಿಬಂದಿವೆ (ಪು. 9). ಶ್ರೀ ಮಲ್ಲಿಕಾರ್ಜುನರು ಸಂಪಾದಿಸಿರುವ ಪುರಾತನರ 46 ತ್ರಿವಿಧಿಗಳು ನೀಲಮ್ಮನ ಬಹುಮುಖ ವ್ಯಕ್ತಿತ್ವದ ಸ್ಪಷ್ಟ ಪರಿಚಯ ಮಾಡಿಕೊಟ್ಟಿವೆ (ಪು. 12-13). ಕುಟ್ಟುವಾಗ, ಬೀಸುವಾಗ, ಮದುವೆಯ ಸಡಗರ ಸಮಾರಂಭ ನಡೆದಾಗ ನೀಲಮ್ಮನನ್ನು ಸ್ತೋತ್ರಮಾಡುವ ಹೇರಳ ಪದಗಳು ದೊರೆಯುತ್ತವೆ. ಹಳ್ಳಿಯ ಹೆಣ್ಣುಮಕ್ಕಳಿಗೆ ನೀಲಮ್ಮನೆಂದರೆ ಪಂಚಪ್ರಾಣ. ಅವಳನ್ನು ಹೊಗಳುವುದೆಂದರೆ ಎಲ್ಲಿಲ್ಲದ ಆನಂದ, ಉತ್ಸಾಹ. ಈ ಬಗೆಯಾಗಿ ಜನಪದ ಸಾಹಿತ್ಯದಲ್ಲಿ ನೀಲಮ್ಮನಿಗೆ ಜೇಷ್ಠ ಶ್ರೇಷ್ಠಸ್ಥಾನ ಮೀಸಲು (ಪು. 14). ಪ್ರಸ್ತುತ ಪುಸ್ತಕದ ಕೊನೆಯ ಇಪ್ಪತ್ಮೂರು ಪುಟದಲ್ಲಿ ನೀಲಾಂಬಿಕೆಯ ವಚನ ವಿವೇಚನೆ ನಡೆದಿದೆ (ಪು. 21-43). ನೀಲಾಂಬಿಕೆಯ ಸ್ವತಂತ್ರ ಮನೋಧರ್ಮ, ವೈಚಾರಿಕತೆಯ ಪ್ರತಿಭೆ, ಉನ್ನತ ನಿಲುವು, ದಾರ್ಶನಿಕ ದೃಷ್ಟಿ ಮುಂತಾದ ಅಂಶಗಳನ್ನು ಲೇಖಕರು ಸರಿಯಾಗಿಯೇ

ಗುರುತಿಸಿದ್ದಾರೆ. ಆಕೆಯ ಚೈತನ್ಯಶಕ್ತಿ, ಪ್ರತಿಭೆ ಪಾಂಡಿತ್ಯ, ಅನುಭವ, ಆತ್ಮತತ್ತ್ವ, ಜಿಜ್ಞಾಸೆಗಳನ್ನು ಪ್ರಕಟಪಡಿಸುವ ಅನೇಕ ವಚನಗಳನ್ನು ಉದಾಹರಿಸಿದ್ದಾರೆ. ನೀಲಾಂಬಿಕೆಯ ಉನ್ನತ ವ್ಯಕ್ತಿತ್ವವನ್ನು ಓದುಗರಿಗೆ ಪರಿಚಯ ಮಾಡಿಕೊಡುವಲ್ಲಿ ಲೇಖಕರು ಯಶಸ್ವಿಯಾಗಿದ್ದಾರೆ.

ಶರಣ ಸಂದೇಶ : ಲೇಖಕರು : ಎಂ. ಬಿ. ಹೂಗಾರ, ಪ್ರಕಾಶಕರು : ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಪ್ರಥಮ ಮುದ್ರಣ : ಮಾರ್ಚ್ 1991 ಪುಟ : 45 ಬೆಲೆ : ರೂ. 1=00.

ಉಪನ್ಯಾಸ ಗ್ರಂಥಮಾಲೆ ಮಾಲಿಕೆಯ 406ನೆಯ ಪುಸ್ತಕವಿದು. ಶರಣ ಸಂದೇಶಗಳನ್ನು ಪರಿಚಯಿಸುವ ಒಂದು ಪುಟ್ಟ ಕೃತಿಯಿದು. ಒಬ್ಬನೇ ದೇವ, ದುಡಿದು ಉಣ್ಣು, ಮಾನವ ಕುಲವೊಂದೇ, ಹೆಣ್ಣು ಮಾಯೆಯಲ್ಲ, ಆಚಾರವೇ ಸ್ವರ್ಗ, ಲೋಕದ ಡೊಂಕ ನೀವೇಕೆ ತಿದ್ದುವಿರಿ? ಮಾತೆಂಬುದು ಜ್ಯೋತಿರ್ಲಿಂಗ ಎಂಬ ಸಂದೇಶಗಳನ್ನು ಲೇಖಕರು ವಿವರವಾಗಿ ತಿಳಿಸಿಕೊಟ್ಟಿದ್ದಾರೆ. ವಚನಗಳನ್ನು ಉದಾಹರಿಸಿ, ವಿಶ್ಲೇಷಿಸಿ, ವಿವರಿಸುವ ಮೂಲಕ ಓದುಗರಿಗೆ ವಿಷಯ ಮನದಟ್ಟಾಗುವಂತೆ ಮಾಡಿದ್ದಾರೆ. ವಚನಕಾರರು ಸಮಗ್ರ ಬದಲಾವಣೆಗೆ ಮುಂಗೋಳಿಯಾದರು. ಜಾತಿ ಮತಗಳ ಬೇರನ್ನು ಕಿತ್ತೊಗೆದು, ಗಂಡುಹೆಣ್ಣೆಂಬ ಲಿಂಗಭೇದವನ್ನು ಬಿಟ್ಟು, ಉಚ್ಚ-ನೀಚವೆಂಬ ಅನೀತಿಯನ್ನು ತೆಗೆದೊಗೆದು, ಸಕಲರ ಕಲ್ಯಾಣ ಕುರಿತು ತರ್ಕಬದ್ಧವಾದ ಆಲೋಚನೆ ಮಾಡಿದವರು ಶರಣರು. ಕಾಯಕಕ್ಕೆ ದೈವತ್ವದ ಜೀವ ತುಂಬಿದವರು ಶರಣರನ್ನು ಬಿಟ್ಟರೆ ಜಗತ್ತಿನಲ್ಲಿ, ಬಹುಶಃ ಮತ್ತಾರು ಇರಲಿಕ್ಕಿಲ್ಲ! (ಪು. 2). ಶರಣ, ಪರಮಾತ್ಮನಿಗೆ ಆಳ-ಆಗಲ, ಹಮ್ಮು-ಬಿಮ್ಮು, ಇಲ್ಲದವಗೆ ಶರಣಾದವ(ಳು). ತಾನು ಸತಿ ಆತ ಪತಿ. ಸಚ್ಚಾರಿತ್ರ್ಯದಿಂದ ಬದುಕ ಸಾಗಿಸಿ ಪರಮಾತ್ಮನ ಪ್ರೀತಿಗೆ ಪಾತ್ರನಾಗಬೇಕೆಂಬ ಹಂಬಲವುಳ್ಳವ(ಳು). ಈತ ಬದುಕಿನಲ್ಲಿ ಕಂಡುಂಡುದ್ದನ್ನು ಹೇಳಿಕೊಂಡಿದ್ದಾನೆ. ಹಾಗೆ ಆತ ಹೇಳಿದ್ದು ಅವನ ಸಂದೇಶ. ನಾಳಿನ ಜನಾಂಗದ ಒಳಿತಿಗಾಗಿ ತಮ್ಮ ಅಂತರಂಗದ ಅನುಭವದ ನುಡಿಕಿಡಿಗಳನ್ನು ಶರಣರು ನಮಗೆ ಬಿಟ್ಟುಹೋಗಿದ್ದಾರೆ. ಅವರ ಬದುಕೇ ಒಂದು ಸಂದೇಶವಾಗಿರುವುದನ್ನು ನಾವು ಗುರುತಿಸಬಹುದು (ಪು. 4).

ಶರಣರು ಒಬ್ಬನೇ ದೇವ ಎಂದು ಹೇಳಿದರು. ಈ ಅದ್ಭುತ ಪ್ರಪಂಚದ ಸೃಷ್ಟಿ ಆತನಿಂದಾಗಿದ್ದು ಅವನಿಗೆ ಭಿನ್ನ-ಭಿನ್ನ ಹೆಸರುಗಳಿರಬಹುದು. ಒಬ್ಬನೇ ದೇವ ಎಂಬುದನ್ನು ತಿಳಿಯದವರಿಗೆ ಹಲವು ವಿಧಗಳಿಂದ ದೇವನ ಬಗ್ಗೆ ಸ್ಪಷ್ಟಚಿತ್ರವನ್ನು ಕೊಟ್ಟರು. ಕಲ್ಲನ್ನು ಪೂಜಿಸಿದವರು ಕತ್ತೆಗಳಾಗಿ ಹುಟ್ಟಿದರು, ದೇವನನ್ನು ಅರ್ಥ ಮಾಡಿಕೊಳ್ಳದೆ ಬರಿಮಣ್ಣನ್ನು ಪೂಜೆಮಾಡಿದವರು ಮನಹೀನರಾದರು. ಗಿಡಮರಗಳನ್ನು ಪೂಜಿಸಿದವರು ಮಣ್ಣಲ್ಲಿ ಮರೆಯಾದರು. ದೇವರ ಪೂಜಿಸಿದವರು ಕೂಡ

ಸ್ವರ್ಗಕ್ಕೇರದೆ ಹೋದರು. ಅಖಂಡ ಚೈತನ್ಯ ಸ್ವರೂಪನಾದ ಪರಮಾತ್ಮನ, ಶಿವನ ಭಕ್ತ ಇವರೆಲ್ಲರಿಗಿಂತ ಶ್ರೇಷ್ಠನೆಂದು ಅಂಬಿಗರ ಚೌಡಯ್ಯ ಹೇಳಿದ್ದಾನೆ (ಪು. 7).

ಶರಣರು ಕಾಯಕಕ್ಕೆ ಬಹಳ ಮಹತ್ವಕೊಟ್ಟವರು. ಪ್ರತಿಯೊಬ್ಬ ವ್ಯಕ್ತಿಯೂ ದುಡಿದು ಉಣ್ಣಬೇಕು. ಆಲಸಿಗಳಿಗೆ ಶರಣಧರ್ಮದಲ್ಲಿ ಎಡೆಯಿರಲಿಲ್ಲ. ಕಾಯಕದಲ್ಲಿ ನಿರತನಾದೊಡೆ ಲಿಂಗ ಬಂದರೂ ಮರೆಯಬೇಕು, ಜಂಗಮಬಂದರೂ ಮರೆಯಬೇಕು ಎಂಬ ಧ್ಯೇಯ ಅವರದು (ಪು. 11). ಶರಣರು ಬರೀ ದುಡಿಮೆಯನ್ನೇ ಹೇಳಲಿಲ್ಲ. ದುಡಿಮೆಯಲ್ಲೇ ದೇವರನ್ನು ಕಾಣಲು ಸೂಚಿಸಿದರು. ವ್ಯಕ್ತಿ ಎಂಥ ಉನ್ನತ ಮಟ್ಟದ ಆಧ್ಯಾತ್ಮಿಕ ಜೀವಿಯೇ ಆಗಿರಲಿ ದೇಹ ಶ್ರಮದಿಂದ ತನ್ನ ಅನ್ನವನ್ನು ತಾನು ಸಂಪಾದಿಸಬೇಕಾದ್ದು ಕಡ್ಡಾಯವೆಂದು ನಿಯಮ ಮಾಡಿದರು. ಕಾಯಕ ಯಾವುದಾದರೂ ಸರಿ, ಅದರಲ್ಲಿ ಮೇಲುಕೀಳೆಂಬ ಭಾವನೆ ಸಲ್ಲದು, 'ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ, ಹಾಸನಿಕ್ಕಿ ಸಾಲಿಗನಾದ, ವೇದವನೋದಿ ಹಾರುವನಾದ' ಎಂಬ ವಚನದಲ್ಲಿಯ ನುಡಿಗಳನ್ನು ಗಮನಿಸಿದರೆ ಕಮ್ಮಾರ, ಮಡಿವಾಳ, ಬ್ರಾಹ್ಮಣ ಇವರು ಮಾಡುವ ಕೆಲಸಗಳಲ್ಲಿ ಸಮಾನತೆ ಇದ್ದದ್ದು ಕಂಡುಬರುತ್ತದೆ. ಒಬ್ಬ ಮಡಿವಾಳನ ಕಾಯಕಕ್ಕೂ ವೇದ ಪಠಿಸುವ ಬ್ರಾಹ್ಮಣನ ಕಾಯಕಕ್ಕೂ ಒಂದೇ ಮಹತ್ವವಿದ್ದುದು ತಿಳಿದುಬರುತ್ತದೆ. ಬಸವಣ್ಣನ ಕಾಲದಲ್ಲಿ ಒಬ್ಬ ವೇಶ್ಯೆ ಕೂಡ ಆದರ್ಶ ಬದುಕನ್ನು ಬದುಕಲು ನಿರ್ಣಯಿಸಿದ್ದಳು. ವಿಶೇಷವಾಗಿ ಹಣದಾಸೆಗೆ ಕೈಯೊಡ್ಡುವುದು ವೇಶ್ಯೆಯರಲ್ಲಿ ಸರ್ವೇಸಾಮಾನ್ಯ. ಆದರೆ ಕಾಯಕನಿಷ್ಠೆಯ ಸೂಳೆ ಸಂಕವ್ವೆಯ ವಚನವೊಂದನ್ನು ಗಮನಿಸಿ:

ಒತ್ತೆಯ ಹಿಡಿದು ಮತ್ತೊತ್ತೆಯ ಹಿಡಿಯೆ
ಹಿಡಿದೆಡೆ ಬತ್ತಲೆ ನಿಲಿಸಿ ಕೊಲುವರಯ್ಯಾ
ವ್ರತಹೀನನರುದು ಬೆರೆದೆಡೆ
ಕಾದಕತ್ತಿಯಲಿ ಕೈಕಿವಿ ಮೂಗ ಕೊಯ್ವರಯ್ಯಾ
ಒಲ್ಲೆನೊಲ್ಲೆ ಬಲ್ಲೆನಾಗಿ ನಿಮ್ಮಾಣೆ ನಿರ್ಲಜ್ಜೇಶ್ವರಾ

ಒಮ್ಮೆ ಒತ್ತೆ ಹಿಡಿದು ಮತ್ತೆ ಒತ್ತೆ ಹಿಡಿಯಲಾರೆ. ಒಂದುವೇಳೆ ಹಾಗೆ ಮಾಡಿದರೆ ಭಗವಂತ ಶಿಕ್ಷೆ ಕೊಡುವನು. ಬತ್ತಲೆ ನಿಲಿಸಿ ಕೊಲುವರಯ್ಯಾ ಎಂದು ಹೇಳುವಳು. ಹೆಚ್ಚಾಗಿ ಹೊನ್ನು ಸುರಿಸಿದರೂ ತನ್ನ ಮಾತನ್ನು ನಡೆಯನ್ನು ಬದಲಿಸಲಾರಳು. ಕಾಯಕದಲ್ಲಿ ಅಂಥ ನಿಷ್ಠೆ ಅವಳದು. ಇದಲ್ಲದೆ ತನ್ನೊಡನೆ ಭೋಗಸುಖ ಬಯಸಿ ಬಂದಾತ ಕೂಡ ಶುದ್ಧಾಚಾರದವನೇ ಇರಬೇಕು. ವ್ರತಹೀನ ಎನ್ನುವುದು ಗೊತ್ತಾಗಿಯೂ ಬೆರೆದರೆ ಭಗವಂತ ಕಾದಕತ್ತಿಯಿಂದ ಕಿವಿ ಮೂಗು ಕತ್ತರಿಸುವನು. ಹೀಗೆ ತಮ್ಮ ಕಾಯಕ, ಕಾಯಕಕ್ಕೆ ಸಂಬಂಧಿಸಿದ ವ್ಯಕ್ತಿಗಳ ಶುದ್ಧ ಮನಸ್ಸು, ಕಾಯಕ ಮಾಡಿದಷ್ಟಕ್ಕೇ ತಕ್ಕ ಕೂಲಿ ಪಡೆಯುವ ಶರಣರ ಮನೋಭಾವ ಮೆಚ್ಚುವಂಥದು (ಪು. 13).

ಶರಣರು ಮಾನವಕುಲವೊಂದೇ ಎಂದು ಸಾರಿಹೇಳಿದರು. ತನ್ನ ಹೃದಯದಲ್ಲಿ ವಾಸ ಮಾಡುತ್ತಿರುವ ಪರಮಾತ್ಮನನ್ನು ಅರ್ಥಮಾಡಿಕೊಂಡವರೆಲ್ಲರ ಕುಲವು ಒಂದೇ. ಲಿಂಗವಿದ್ದೆಡೆಯಲ್ಲಿ ಹೊಲೆಯುಂಟೇ? ಎಂಬುದಾಗಿ ಬಸವಣ್ಣ ಪ್ರಶ್ನಿಸಿದ್ದಾನೆ. 'ಕೊಲುವವನೇ ಮಾದಿಗ, ಹೊಲಸು ತಿಂಬುವವನೇ ಹೊಲೆಯ' ಎಂಬುದು ಕುಲದ ಬಗ್ಗೆ ಇರುವ ವ್ಯಾಖ್ಯೆ.

ಸೆಟ್ಟಿಯೆಂಬೆನೆ ಸಿರಿಯಾಳನ ?
ಮಡಿವಾಳನೆಂದೆಂಬೆನೆ ಮಾಚಯ್ಯನ ?
ಡೋಹಾರನೆಂದೆಂಬೆನೆ ಕಕ್ಕಯ್ಯನ ?
ಮಾದಾರನೆಂದೆಂಬೆನೆ ಚೆನ್ನಯ್ಯನ ?
ಆನು ಹಾರುವನೆಂದರೆ ಕೂಡಲಸಂಗಯ್ಯ ನಗುವನಯ್ಯ—

ಎನ್ನುತ್ತಾನೆ ಬಸವಣ್ಣ, ಅವನ ಈ ಮನೋಭಾವ ಅಂದಿನ ಕೆಲವು ಶೀಲವಂತರೆನ್ನಿಸಿಕೊಂಡವರಲ್ಲಿ ಇರಲಿಲ್ಲ. ಜಾತಿಯ ನಿರ್ಮೂಲನೆಗೆ ಶರಣರು ಮಾಡಿದ ಕಳಕಳಿಯ ಚಳವಳಿ ಮೆಚ್ಚುವಂಥದು; ಅನುಸರಿಸುವಂಥದು. (ಪು. 18). ವ್ಯಕ್ತಿಯ ವ್ಯಕ್ತಿತ್ವ ಅವನ ಹುಟ್ಟನ್ನು ಅನುಸರಿಸಿ ಬರುವುದಿಲ್ಲ. ನಮ್ಮ ನಾಡಿನಲ್ಲಿಯ ಋಷಿಗಳು, ಸಂತರು, ಜ್ಞಾನಿಗಳೆನಿಸಿಕೊಂಡವರು ಎಲ್ಲರೂ ಉಚ್ಚಕುಲದಲ್ಲಿ ಹುಟ್ಟಿದವರೇನಲ್ಲ. ಇದನ್ನು ತಿಳಿದೇ ಬಸವಣ್ಣ ತನ್ನ ವಚನವೊಂದರಲ್ಲಿ ಮನಗಾಣಿಸಿರುವ ನುಡಿಗಳಿವು !

ವ್ಯಾಸ ಬೋಯಿತಿಯ ಮಗ
ಮಾರ್ಕಂಡೆಯ ಮಾತಂಗಿಯ ಮಗ
ಮಂಡೋದರಿ ಕಪ್ಪೆಯ ಮಗಳು
ಕುಲವನರಸದಿರಿಂ ಭೋ ಕುಲದಿಂದ ಮುನ್ನೇನಾದಿರಿಂಭೋ ?
ಸಾಕ್ಷಾತ್ ಅಗಸ್ತ್ಯ ಕಬ್ಬಿಲ ದುರ್ವಾಸ ಮುಚ್ಚಿಗ
ಕಶ್ಯಪ ಕಮ್ಮಾರ ಕೌಂಡಿನ್ಯನೆಂಬ ಋಷಿ
ಮೂರು ಭುವನವನರಿಯೆ ನಾವಿದ ಕಾಣಿಭೋ
ನಮ್ಮ ಕೂಡಲಸಂಗನ ವಚನ ಎಂತೆಂಬುದು

'ನ ಸ್ತ್ರೀ ಸ್ವಾತಂತ್ರ್ಯಮರ್ಹತಿ' ಎಂಬ ಮಾತು ಜನಜನಿತವಾಗಿದ್ದ ಕಾಲದಲ್ಲಿ, ಸ್ತ್ರೀ ಒಂದು ಶಕ್ತಿ, ಅವಳು ಕೇವಲ ಪುರುಷನ ಉಪಭೋಗದ ಸಾಧನವಲ್ಲ. ಅವಳೂ ಪರಮಾತ್ಮನನ್ನೂ ಕಾಣಬಲ್ಲಳು—ಎಂಬ ವಿಚಾರವನ್ನು ಮನದಟ್ಟು ಮಾಡಿಕೊಟ್ಟವರು ಶರಣರು. ಅಕ್ಕಮಹಾದೇವಿ ಚೆನ್ನಮಲ್ಲಿಕಾರ್ಜುನನೇ ಗಂಡನೆಂದು ನಂಬಿದ್ದಳು. ತನ್ನ ಅನುಭವವನ್ನು ವಚನಗಳ ಮುಖೇಣ ಹೇಳಿದ್ದಾಳೆ. ಅಂತೆಯೇ ಗಂಗಾಂಬಿಕೆ, ನೀಲಾಂಬಿಕೆ, ಮುಕ್ತಾಯಕ್ಕ, ನಾಗಲಾಂಬಿಕೆ, ಸತ್ಯಕ್ಕ, ಲಿಂಗಮ್ಮ, ಲಕ್ಕಮ್ಮ, ಕಾಳವ್ವೆ—ಮೊದಲಾದ ಶರಣೆಯರು, ಸ್ತ್ರೀ ಏನೆಲ್ಲವನ್ನೂ ಸಾಧಿಸಬಹುದೆಂಬುದಕ್ಕೆ ಜ್ವಲಂತ ಉದಾಹರಣೆಯಾಗಿದ್ದಾರೆ. ಗಂಡುಹೆಣ್ಣುಗಳ ಮೂಲಭೂತ ಸಾಮರ್ಥ್ಯದಲ್ಲಿ

ಯಾವ ವ್ಯತ್ಯಾಸವೂ ಇಲ್ಲವೆಂಬುದು ಶರಣರ ಅಭಿಪ್ರಾಯ. 'ಮೊಲೆ ಮುಡಿಗಳು ಬಂದರೆ ಹೆಣ್ಣೆಂಬರು, ಗಡ್ಡಮೀಸೆ ಬಂದರೆ ಗಂಡೆಂಬರು, ಒಳಗೆ ಸುಳಿವಾತ್ಮ ಗಂಡೂ ಅಲ್ಲ ಹೆಣ್ಣೂ ಅಲ್ಲ' ಎಂಬ ದೇವರ ದಾಸಿಮಯ್ಯನ ನುಡಿ ಸ್ತ್ರೀ ಪುರುಷರು ಸಮಾನರೆಂಬುದನ್ನು ಸ್ಪಷ್ಟಪಡಿಸುತ್ತದೆ (ಪು. 22).

ಆಚಾರವೆಂದರೆ ನಾವು ಬದುಕುವ ಪರಿ. ತಾವು ಬದುಕಿದ ರೀತಿಯಲ್ಲಿ ಉಳಿದವರೂ ಬದುಕಲೆಂದು ಶರಣರು ಆಶಿಸಿದರು. ಅವರು ತಮ್ಮ ವಿಚಾರಗಳನ್ನು ಆಚರಣೆಯಲ್ಲಿ ತಂದು, ಮತ್ತೊಬ್ಬರಿಗೆ ಮಾರ್ಗದರ್ಶಕರಾದರು. ಶರಣರ ನಡೆನುಡಿ ಒಂದಾಗಿತ್ತು. 'ನುಡಿಯೊಳಗಾಗಿ ನಡೆಯದಿದ್ದಡೆ ಪರಮಾತ್ಮ ಎಂತು ಮೆಚ್ಚುವನು'? ಎನ್ನುತ್ತಾರೆ ಶರಣರು. ಅವರು ಆಚಾರದಲ್ಲಿಯೇ ನಾಕವನ್ನು ಕಂಡವರು. 'ವ್ರತಭ್ರಷ್ಟನ ಲಿಂಗ ಬಾಹ್ಯನ ಕಂಡಡೆ ಸತ್ತ ನಾಯ ಕಾಗೆಯ ಕಂಡಂತೆ, ಅವರೊಡನೆ ನುಡಿಯಲಾಗದು ಭೀಮೇಶ್ವರಾ' ಎಂಬುದಾಗಿ ಕಾಳವ್ವೆ ಹೇಳಿದ್ದಾಳೆ. ಆಚಾರಶೀಲವ್ಯಕ್ತಿ ಅತಿಯಾಸೆ ಮಾಡಬಾರದು ಎಂಬುದು ಶರಣರ ನಿಯಮ (ಪು 27).

ಲೋಕದಲ್ಲಿ ಹಲವಾರು ಬಗೆಯ ಜನರಿದ್ದಾರೆ. ಅವರ ತಪ್ಪನ್ನು ತಿದ್ದುವುದು ಆಗದ ಕೆಲಸ. ಇನ್ನೊಬ್ಬರ ತಪ್ಪನ್ನು ತಿದ್ದುವ ಮುನ್ನ ತನ್ನ ತಪ್ಪಿನ ಅರಿವು ಕೂಡ ಇರಬೇಕು. ಶರಣರು ಮತ್ತೊಬ್ಬರಿಗೆ ಉಪದೇಶ ಮಾಡುವ ಮುನ್ನ ತಮ್ಮ ತಮ್ಮ ಮನವನ್ನೇ ಶೋಧಿಸಿಕೊಳ್ಳುತ್ತಿದ್ದರು. ಈ ವಿಚಾರವನ್ನು ಬಸವಣ್ಣ ಸ್ಪಷ್ಟಪಡಿಸಿರುವ ಪರಿಯಿದು :

ಲೋಕದ ಡೊಂಕ ನೀವೇಕೆ ತಿದ್ದುವಿರಿ
ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ
ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ
ನೆರೆಮನೆಯ ದುಃಖಕ್ಕೆ ಅಳುವವರ ಮೆಚ್ಚ
ಕೂಡಲ ಸಂಗಮದೇವ !

ಶರಣರು ಮಾತುಗಳಿಗೆ ಬಹು ಮಹತ್ವಕೊಟ್ಟವರು. ಮಾತನಾಡಿದರೆ ಹೋಯಿತು, ಮುತ್ತು ಒಡೆದರೆ ಹೋಯಿತು ಎಂಬುದು ಅವರಿಗೆ ತಿಳಿದಿತ್ತು. ಮಾತು ಮುತ್ತು ಅದನ್ನು ಸರಿಯಾಗಿ ಸದುಪಯೋಗವಾಗುವಂತೆ ಬಳಸಬೇಕೆಂಬುದು ಅವರ ವಿಚಾರ. ಬಸವಣ್ಣನ ಒಂದು ವಚನವನ್ನಿಲ್ಲಿ ಪರಿಭಾವಿಸಬಹುದು :

ನುಡಿದರೆ ಮುತ್ತಿನ ಹಾರದಂತಿರಬೇಕು
ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು
ನುಡಿದರೆ ಸ್ಫಟಿಕದ ಶಲಾಕೆಯಂತಿರಬೇಕು
ನುಡಿದರೆ ಲಿಂಗ ಮೆಚ್ಚಿ ಅಹುದಹುದೆನಬೇಕು
ನುಡಿಯೊಳಗಾಗಿ ನಡೆಯದಿದ್ದರೆ
ಕೂಡಲ ಸಂಗಮದೇವನೆಂತೊಲಿವನಯ್ಯಾ?

ಹೃದಯದಿಂದ ಬಂದ ಮಾತುಗಳು ಹೃದಯವನ್ನು ಪ್ರವೇಶಿಸುತ್ತವೆ. ಶರಣರ ನುಡಿಗಳಿಗೆ ಅಂಥ ಮಹೌಲ್ಯವುಂಟು. ಮನದೆರೆದು ಮಾತಾಡಿದ ಶರಣರ ಹೃದಯದಲ್ಲಿ ಪರಮಾತ್ಮ ಮೈದೋರುವನು—ಇಂಥ ಶರಣರ ಸೊಳ್ನುಡಿಗಳು ಯಾವ ವ್ಯಕ್ತಿಯ ಮನಸ್ಸಿಗೆ ತಾನೆ ತಟ್ಟುವುದಿಲ್ಲ? ತೃಪ್ತಿಯನ್ನು ತರಲಿಕ್ಕಿಲ್ಲ? (ಪು. 41). ಶರಣರು ನಾಡಿನ ಜನತೆಗೆ ಕೊಟ್ಟ ಸಂದೇಶಗಳಿಗೆ ಬೆಲೆ ಬರಬೇಕಾದರೆ ಅವನ್ನು ಆಚರಣೆಯಲ್ಲಿ ತರಬೇಕು ಶರಣರ ಸಂದೇಶ ನಮ್ಮ ಬಾಳಿಗೆ ಬೆಳಕಾಗಲಿ ಎಂಬುದು ಲೇಖಕರ ಆಶಯ.

—ಡಾ. ಆರ್. ರಾಮಕೃಷ್ಣ

'ಕನ್ನಡ ತಿರುಳ ಕನ್ನಡ ಮತ್ತು ಸಮಾಜ'—ಡಾ. ಕೆ. ಕುಶಾಲಪ್ಪಗೌಡ ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ, ಬೆಂಗಳೂರು–6, 1991, ಪು. 66.

ಅರವತ್ತಾರು ಪುಟಗಳಲ್ಲಿ ಪ್ರವಹಿಸಿರುವ ಕುಶಾಲಪ್ಪಗೌಡರ ಕನ್ನಡ ಭಾಷೆಯ ವಿಚಾರಧಾರೆ ಅತ್ಯಂತ ವೈಜ್ಞಾನಿಕವಾದ ರೀತಿಯಲ್ಲಿ ಅನಾವರಣಗೊಂಡು ಓದುಗರ ಜ್ಞಾನ ತೃಷೆಯನ್ನು ತಣಿಸುತ್ತದೆ, ಇಲ್ಲಿ. ಹಂತ ಹಂತವಾಗಿ ವಿಷಯವನ್ನು ಬೆಳೆಸುತ್ತ, ವಿಷಯ ಪ್ರತಿಪಾದನೆಗೆ ಪೂರಕವಾಗಿ ನಾನಾ ಆಕರಗಳಿಂದ ಪುರಾವೆಗಳನ್ನು ಒದಗಿಸುತ್ತ, ಸರಿಕಂಡ ಪ್ರಾಚೀನರ ಅಭಿಪ್ರಾಯಗಳನ್ನು ಮುಕ್ತವಾಗಿ ಪ್ರಶಂಸಿಸುತ್ತ; ಸರಿಯಲ್ಲದವುಗಳನ್ನು ಅಷ್ಟೇ ಖಂಡತುಂಡವಾಗಿ ಅಲ್ಲಗಳೆಯುತ್ತ, ಅಗತ್ಯಬಿದ್ದ ಕಡೆ ಕನ್ನಡದ ಉಳಿವಿಗಾಗಿ ಎಚ್ಚರಿಕೆಯ ಚಾಟಿಯನ್ನು ಝಳಪಿಸುತ್ತ ಸಾಗಿರುವ ಗೌಡರ ಬರವಣಿಗೆ, ನ್ಯಾಯಾಲಯದಲ್ಲಿ ಪ್ರಬುದ್ಧ ವಕೀಲನೊಬ್ಬ ತನ್ನ ಹರಿತವಾದ ವಾಕ್ ಚಾತುರ್ಯದಿಂದ ವಿಷಯ ಮಂಡಿಸಿ ಬೆರಗುಗೊಳಿಸುವಂತೆ, ಅಭ್ಯಾಸಿಗಳನ್ನು ಸೆರೆಹಿಡಿಯುತ್ತದೆ. ಒಂದೂವರೆ ಸಾವಿರ ವರ್ಷಗಳಷ್ಟು ಹಳೆಯದಾದ ಕನ್ನಡ ಭಾಷೆಯಲ್ಲಿ ಕಾಲದಿಂದ ಕಾಲಕ್ಕೆ ಆದ ಬದಲಾವಣೆಗಳನ್ನು, ಬೆಳವಣಿಗೆಯನ್ನು, ಅವಸ್ಥಾಂತರಗಳನ್ನು ಭಾಷಾವಿಜ್ಞಾನದ ಹಿನ್ನೆಲೆಯಲ್ಲಿ ಪರಿಶೀಲಿಸಿರುವ ಒಂದು ಉತ್ತಮ ಕೈಪಿಡಿ ಈ ಗ್ರಂಥ. ಹಾಗೆ ನೋಡಿದರೆ ಈ ಕೃತಿಯಲ್ಲಿ ಪ್ರಸ್ತಾಪಿಸಲಾಗಿರುವ ವಿಷಯದಲ್ಲಿ ಹೊಸದೇನೂ ಇಲ್ಲ. ಕನ್ನಡ ಸಾಹಿತ್ಯದ ಹಿನ್ನೆಲೆಯನ್ನು ಬಲ್ಲ, ಭಾಷಾ ಚರಿತ್ರೆಯ ಬಗೆಗೆ ಅರಿವಿರುವ, ಭಾಷಾವಿಜ್ಞಾನದಲ್ಲಿ ಪ್ರವೇಶವಿರುವ ಯಾರಿಗಾದರೂ ಇದು ತಿಳಿಯುವಂಥದು. ಇದಕ್ಕೆ ಕಾರಣ, ಗ್ರಂಥದಲ್ಲಿ ಉದ್ಧೃತವಾಗಿರುವ ಪಂಪ, ರನ್ನ, ಕೇಶಿರಾಜ, ಕವಿರಾಜಮಾರ್ಗಕಾರ, ಚಂದ್ರರಾಜ ಮೊದಲಾದವರ ಮಾತುಗಳು ಮೇಲಿಂದಮೇಲೆ ಕೇಳುತ್ತಲೇ ಬಂದಿರುವಂಥವು. ಆದರೆ ಈ ಮಾತುಗಳನ್ನು ಪ್ರಸ್ತುತ

ಲೇಖಕರು ಸಾಂದರ್ಭಿಕವಾಗಿ ಬಳಸಿಕೊಂಡಿರುವ ರೀತಿ, ಇವುಗಳಿಗೆ ವಸ್ತುನಿಷ್ಠ ವಿವೇಚನೆಯಿಂದ ಕೈಗೊಂಡಿರುವ ಚಿಕಿತ್ಸೆ ಸ್ವೋಪಜ್ಞವಾದುದು.

'ಕನ್ನಡ, ತಿರುಳ ಕನ್ನಡ ಮತ್ತು ಸಮಾಜ' ಎಂಬ ಈ ವಿಷಯವನ್ನು ಹನ್ನೆರಡು ಉಪಶೀರ್ಷಿಕೆಗಳನ್ನಿಟ್ಟುಕೊಂಡು ಚರ್ಚಿಸಲಾಗಿದೆ. 'ಭಾಷೆಯ ಸಾಮಾನ್ಯ ಸ್ವರೂಪ ಮತ್ತು ಲಕ್ಷಣಗಳು' ಎಂಬ ತಲೆಬರಹದೊಡನೆ ಕೃತಿ ತೆರೆದುಕೊಳ್ಳುತ್ತದೆ. ಭಾಷೆ ಎಂದರೇನು? ಮಾನವನ ಭಾವಾಭಿವ್ಯಕ್ತಿಗೆ ಇದು ಸಾಧನವಾದದ್ದು ಹೇಗೆ? ಕನ್ನಡ ಭಾಷೆಯಲ್ಲಿರುವ ಸ್ವರಗಳು, ವರ್ಗೀಯ ಮತ್ತು ಅವರ್ಗೀಯ ವ್ಯಂಜನಗಳಾವುವು? ಧ್ವನಿಮಾ, ರೂಪಿಮಾ, ಪದ ಹಾಗೂ ವಾಕ್ಯ ಇವುಗಳನ್ನು ಭಾಷಾವಿಜ್ಞಾನಿಯೊಬ್ಬ ವ್ಯಾಖ್ಯಾನಿಸುವುದು ಹೇಗೆ? ಮುಂತಾದ ವಿಷಯಗಳು ಈ ಭಾಗದಲ್ಲಿ ಪ್ರಸ್ತಾಪಿಸಲ್ಪಟ್ಟಿವೆ. ವಿಶ್ಲೇಷಣೆಯಲ್ಲಿನ ಸರಳತೆ ಮತ್ತು ಖಚಿತತೆಯಿಂದ ವಿಷಯಗಳು ಸುಲಭಗ್ರಾಹ್ಯವಾಗಿವೆ.

'ಕನ್ನಡ' ಶೀರ್ಷಿಕೆಯಡಿಯಲ್ಲಿ ಕನ್ನಡ ಭಾಷೆ ಯಾವ ವರ್ಗಕ್ಕೆ ಸೇರುತ್ತದೆ? ಆ ವರ್ಗದ ಪ್ರಚಲಿತ ಭಾಷೆಗಳಾವುವು? ಅವುಗಳಲ್ಲಿ ಲಿಖಿತರೂಪ ಯಾವ ಭಾಷೆಗಳಿಗಿದೆ? ಅಧ್ಯಯನ ಸೌಲಭ್ಯದ ದೃಷ್ಟಿಯಿಂದ ಅವುಗಳನ್ನು ಹೇಗೆ ವಿಂಗಡಿಸಿಕೊಳ್ಳಲಾಗಿದೆ? ಎಂಬ ವಿವರಗಳಿಗೆ ಮುನ್ನಣೆ ಕೊಡಲಾಗಿದೆ. ಜೊತೆಗೆ ಇಂಡೋಆರ್ಯನ್ ಗುಂಪಿನ ಪ್ರಧಾನ ಸದಸ್ಯ ಭಾಷೆಯಾದ ಸಂಸ್ಕೃತ ಮತ್ತು ದ್ರಾವಿಡ ಗುಂಪಿನ ಪ್ರಧಾನ ಸದಸ್ಯ ಭಾಷೆಯಾದ ಕನ್ನಡ ಇವುಗಳ ನಡುವಣ ಧ್ವನ್ಯಾತ್ಮಕ, ವ್ಯಾಕರಣಾತ್ಮಕ ಹಾಗೂ ಕೋಶಾತ್ಮಕ ವಿವರಗಳೂ ಅಧಿಕಾರಯುತವಾಗಿ ಮೂಡಿಬಂದಿವೆ. ಅಲ್ಲದೆ ಕನ್ನಡವನ್ನು ಇತರ ಗ್ರಾಂಥಿಕ ದ್ರಾವಿಡ ಭಾಷೆಗಳಾದ ತಮಿಳು, ತೆಲುಗು, ಮಲಯಾಳಂಗಳೊಡನೆಯೂ ರಚನಾತ್ಮಕ ದೃಷ್ಟಿಯಿಂದ ತುಲನೆ ಮಾಡಲಾಗಿದೆ.

ಮತ, ಆಚರಣೆ, ಸೈನ್ಯ, ಆಡಳಿತ, ವಿದ್ಯಾಭ್ಯಾಸ, ಮನರಂಜನೆ, ವೃತ್ತಿ, ವ್ಯಾಪಾರ, ವಾಣಿಜ್ಯ ಮುಂತಾದ ಹಲವಾರು ಉದ್ದೇಶಗಳಿಗಾಗಿ ಕನ್ನಡ ಭಾಷೆ ಅನ್ಯಭಾಷೆಗಳಾದ ಅರೇಬಿಕ್, ಪರ್ಷಿಯನ್, ಪೋರ್ಚುಗೀಸ್, ಇಂಗ್ಲಿಷ್-ಮುಂತಾದ ಭಾಷೆಗಳಿಂದ ಅಪಾರ ಪದ ಸಂಪತ್ತನ್ನು ಎರವಲು ಪಡೆದಿದೆ. ಇದರಿಂದ "ಕನ್ನಡ ಭಾಷೆಯ ಶಬ್ದಕೋಶ ಹೆಚ್ಚಿತೇ ವಿನಾ ಭಾಷಿಕವಾಗಿ ಬೇರೆ ಯಾವ ಪರಿಣಾಮವೂ ಆಗಲಿಲ್ಲ" ಎಂಬುದು ಗೌಡರ ಸ್ಪಷ್ಟ ಅಭಿಮತ. ಹೀಗೆಂದ ಮಾತ್ರಕ್ಕೆ ಅವರಿಗೆ ಭಾಷಾಸ್ವೀಕರಣ ಪ್ರಕ್ರಿಯೆಯ ಪ್ರವೃತ್ತಿಯ ಅರಿವಿಲ್ಲವೆಂದರ್ಥವಲ್ಲ. ಬೆಳೆಯುವ ಭಾಷೆಗೆ ಸ್ವೀಕರಣದ ಮಹತ್ವ ಏನು? ಎಂಬುದು ಅವರಿಗೆ ಗೊತ್ತಿದೆ. ಆದರೆ "ಬೂಟಾಟಿಕೆಯ ಚಪಲಕ್ಕೆ ಬಲಿಯಾಗಿ, ತನ್ನ ಸ್ವಂತ ಸಂಪತ್ತನ್ನು ಕಳಕೊಂಡ ಕಾರಣದಿಂದಲೇ ನಮ್ಮಲ್ಲಿದ್ದಿರಬಹುದಾದ ಪದ ಸಮುದಾಯ ನಶಿಸಿ, ಅದರ ಸ್ಥಾನದಲ್ಲಿ ಅನ್ಯದೇಶ್ಯ ಪದಗಳು ವಿಜೃಂಭಿಸುತ್ತಿವೆ" ಎಂಬ ಆತಂಕ ಅವರದು.

ಕನ್ನಡದ ಕಾಲಘಟ್ಟಗಳನ್ನು ಪೂರ್ವದ ಹಳಗನ್ನಡ, ಹಳಗನ್ನಡ, ನಡುಗನ್ನಡ ಮತ್ತು ಹೊಸಗನ್ನಡ ಎಂದು ಪರಿಭಾವಿಸುವುದು ರೂಢಿಯಾಗಿದೆ ಈ ವಿಷಯವನ್ನೆತ್ತಿ ಕೊಂಡು ಗೌಡರು ಸವಿಸ್ತಾರವಾಗಿ ಚರ್ಚಿಸಿ, ಈ ನಿಟ್ಟಿನ ಭಿನ್ನಾಭಿಪ್ರಾಯಗಳನ್ನು, ಮತಭೇದಗಳನ್ನು ಆಧಾರಗಳೊಡನೆ ದಾಖಲಿಸಿದ್ದಾರೆ. ಜೊತೆಗೆ, ನೃಪತುಂಗ ಪೂರ್ವಯುಗ (5ರಿಂದ 9ನೇ ಶತಮಾನ), ಪಂಪ ಮತ್ತು ಪಂಪಾನಂತರದ ಯುಗ (10-12ನೇ ಶತಮಾನ), ಬಸವೇಶ್ವರಾನಂತರದ ಯುಗ (13–15ನೇ ಶತಮಾನ), ಪುರಂದರದಾಸ ಮತ್ತು ಅವರ ಅನಂತರದ ಯುಗ (16-18ನೇ ಶತಮಾನ) ಮತ್ತು ಆಧುನಿಕ ಕನ್ನಡ ಯುಗ (19 ನೇ ಶತಮಾನ)–ಹೀಗೆ ಈ ಕಾಲಘಟ್ಟಗಳಲ್ಲಿ ಕನ್ನಡ ಭಾಷೆಯಲ್ಲಾದ ಧ್ವನ್ಯಾತ್ಮಕ, ರೂಪಾತ್ಮಕ ವ್ಯತ್ಯಯಗಳನ್ನು ವಿವರಣಾತ್ಮಕ ಭಾಷಾ ವಿಜ್ಞಾನದ ಹಿನ್ನೆಲೆಯಲ್ಲಿ ಪರಿಶೀಲಿಸಿ ನಿದರ್ಶನಗಳನ್ನಿತ್ತು ವಿಶ್ಲೇಷಿಸಿದ್ದಾರೆ. ಕುಶಾಲಪ್ಪ ಗೌಡರ ಪಾಂಡಿತ್ಯದ ಆಳ-ವಿಸ್ತಾರಗಳು ಈ ವಿಶ್ಲೇಷಣೆಯಲ್ಲಿ ಎದ್ದು ಕಾಣುತ್ತವೆ.

'ತಿರುಳಗನ್ನಡ' ಎಂಬ ಪದ ಸೋಲಿಗ ಕನ್ನಡ, ಇರುಳ ಕನ್ನಡ ಎಂಬಂತೆ ತಿಳಿಯಲು ಅನುವು ಮಾಡಿಕೊಡುತ್ತದೆ. ಆದುದರಿಂದ ಅದನ್ನು ಬಿಡಿಸದೆ 'ತಿರುಳ್ಗನ್ನಡ' ಎಂದೇ ಕರೆದಿದ್ದರೆ ಹೆಚ್ಚು ಪರಿಗ್ರಾಹ್ಯವಾಗುತ್ತಿತ್ತು. ಏನೇ ಇರಲಿ ತಿರುಳ್ಗನ್ನಡದ ಪ್ರಸ್ತಾಪ ಸಮಗ್ರವಾಗಿ ಈ ಕೃತಿಯಲ್ಲಿ ಒಡಮೂಡಿದೆ. ಕವಿರಾಜ ಮಾರ್ಗಕಾರನ ಕಾವ್ಯಯೋಗ್ಯವಾದ ಕನ್ನಡ ಹೇಗಿರಬೇಕೆಂಬ ಸ್ಪಷ್ಟನೆಯಿಂದ ಹಿಡಿದು ಆಧುನಿಕ ಕನ್ನಡದ ಶಿಷ್ಟ ಅಥವಾ ಪ್ರಮಾಣ ರೂಪದವರೆಗೂ ಚಾಚಿಕೊಂಡಿರುವ ವಿವರಗಳು ತುಂಬಾ ಉಪಾದೇಯವಾಗಿವೆ. ಶಿಷ್ಟಭಾಷೆಯ ಅಗತ್ಯ ಹಾಗೂ ಅನಿವಾರ್ಯತೆ ಮತ್ತು ಶಿಷ್ಟಭಾಷೆಯೊಂದು ಸಮಷ್ಟಿರೂಪದಲ್ಲಿ ಎಲ್ಲ ಕಡೆಯೂ ವ್ಯಾಪಿಸಬಹುದಾದ ಸಾಧ್ಯತೆಯ ಅಸಂಭಾವ್ಯತೆ-ಎರಡನ್ನು ಗೌಡರು ಸ್ಪಷ್ಟ ವಿಚಾರಗಳಿಂದ ಪುಷ್ಟೀಕರಿಸಿ ದ್ದಾರೆ.

'ಶಾಸನಗಳ ಬರಹದಲ್ಲಿ ಕಂಡು ಬರುವ ಅಕ್ಷರ ಪಲ್ಲಟಗಳು' ಎಂಬ ಭಾಗ ಕೃತಿಯಲ್ಲಿ ಅಮೂಲ್ಯವಾದದ್ದು. ಶಾಸ್ತ್ರೀಯವಾಗಿ ಇದನ್ನು ಪರಿವೀಕ್ಷಿಸಲಾಗಿದೆ. ಇಲ್ಲಿನ ವೈಚಾರಿಕ ಅಂಶಗಳ ಹಿಂದೆ ಶಾಶನಶಾಸ್ತ್ರದ ಪರಿಜ್ಞಾನ ಎದ್ದು ಕಾಣುತ್ತದೆ. ಹೀಗಾಗಿ ಕುಶಾಲಪ್ಪ ಗೌಡರ ತಜ್ಞತೆ ಭಾಷಾವಿಜ್ಞಾನಕ್ಕಷ್ಟೇ ಸೀಮಿತವಾಗಿಲ್ಲ ಎಂಬುದು ಇದರಿಂದ ಮನದಟ್ಟಾಗುತ್ತದೆ. ಮಹಾಪ್ರಾಣ, ಅಲ್ಪಪ್ರಾಣ, ಊಷ್ಮ ಧ್ವನಿಗಳು, 'ಹ' ಕಾರ, ಟಿ ಕಾರ ಮತ್ತು ಜಿ ಕಾರಗಳ ಪ್ರಯೋಗ ವೈಚಿತ್ರ್ಯಗಳನ್ನು ಕೂಲಂಕುಷವಾಗಿ ವಿವರಿಸಲಾಗಿದೆ. ಕನ್ನಡ ಶಾಸನಗಳಲ್ಲಿ ಶಿಷ್ಟಕನ್ನಡಕ್ಕಿಂತ ಭಿನ್ನವಾಗಿ ತೋರುವ ಅಂಶಗಳ ಬಗೆಗೆ, ಸಾಹಿತ್ಯ ಭಾಷಾರೂಪದಲ್ಲಿ ಕಂಡುಬರುವ ವಿಕಲ್ಪ, ವ್ಯತ್ಯಯ ಇತ್ಯಾದಿಗಳ ಬಗೆಗೆ ಮತ್ತು ಕನ್ನಡ ಭಾಷೆಯ ಪ್ರಾದೇಶಿಕ ಸಾಮಾಜಿಕ ಪ್ರಭೇದಗಳು ಶಿಷ್ಟರೂಪದೊಡನೆ ನಡೆಸಿರುವ ಸಂಘರ್ಷಗಳ ಬಗೆಗೆ ಈ ಕೃತಿಯಲ್ಲಿ ಸಾಕಷ್ಟು ಮಾಹಿತಿ ಲಭ್ಯವಿದೆ.

ಒಟ್ಟಿನಲ್ಲಿ ಈ ಕೃತಿ ಗಾತ್ರದಲ್ಲಿ ಕಿರಿದಾದರೂ ಅದು ಒಳಗೊಂಡಿರುವ ವಸ್ತು, ವಿಷಯ ವಿಶ್ಲೇಷಣಾ ಸಾಮರ್ಥ್ಯ ಮತ್ತು ವೈಚಾರಿಕ ನೆಲೆಗಟ್ಟಿನಿಂದಾಗಿ ಹಿರಿದಾದ ಸ್ಥಾನವನ್ನು ಪಡೆದಿದೆ ಎಂದು ಹೇಳಿದರೆ ಉತ್ಪ್ರೇಕ್ಷೆಯಾಗಲಾರದು.

—ಡಾ. ಸೋಮಶೇಖರಗೌಡ

ಹನಿ ಮಿನಿ : ಲೇ. : ಸಿ. ಪಿ. ಕೆ. ಪ್ರ. : ಚಿತ್ರಭಾನು ಪ್ರಕಾಶನ, ಮೈಸೂರು–12. ಪು. iv + 44, 1989, ಬೆಲೆ : ರೂ. 10–00.

'ಹನಿ ಮಿನಿ' ಎಂಬುದು ಹೆಸರೇ ಸೂಚಿಸುವಂತೆ ಸಿ.ಪಿ.ಕೆ. ಅವರ ನೂರೊಂದು ಕಿರುಗವನಗಳ ಸಂಕಲನ; ಶತಕವೆಂದು ಕರೆಯಬಹುದಾದ ಒಂದು ಮುಕ್ತಕ ಕೃತಿ. ಈ ಕಿರುಗವನಗಳು ತಮ್ಮ ಒಡಲಲ್ಲಿ ವಚನಗಳ ಸ್ವರೂಪ–ಲಕ್ಷಣಗಳನ್ನು ಅಡಕಮಾಡಿ ಕೊಂಡಿವೆ ಎಂದರೂ ತಪ್ಪಾಗುವುದಿಲ್ಲ. ತಮ್ಮ ಕವನಗಳಲ್ಲಾಗಲಿ, ವಚನ ಗಳಲ್ಲಾಗಲೀ ಭಾವಸೌಂದರ್ಯವನ್ನೂ ಧ್ವನಿಪೂರ್ಣತೆಯನ್ನೂ ಸಾಧಿಸಿರುವ ಸಿ.ಪಿ.ಕೆ. ಅವರು ಈ ಹನಿಗವನಗಳಲ್ಲೂ ಅದೇ ಗುಣಗಳನ್ನು ಪ್ರಕಟಿಸಿದ್ದಾರೆ. ಲೋಕದ ನಡೆವಳಿಕೆ ಎಷ್ಟು ವೈವಿಧ್ಯಮಯವಾದುದು, ಎಷ್ಟು ವಿಲಕ್ಷಣವಾದುದು, ಎಷ್ಟು ಭಾವಪ್ರಚೋದಕವಾದುದು ಎಂಬುದು ಇಲ್ಲಿನ ಕವನಗಳ ಆಸ್ವಾದನೆಯ ಮೂಲಕ ಮನದಟ್ಟಾಗುತ್ತ ಹೋಗುತ್ತದೆ. ಕಿರುಗವನಗಳಿಗೆ ಹೆಸರಿಡುವುದು ಬಹು ಕಷ್ಟದ ಕೆಲಸ ; ಆದರೆ ಸಿ.ಪಿ.ಕೆ. ಅವರು ಮೂರು ಸಾಲೇ ಇರಲಿ ಒಂಬತ್ತು ಸಾಲೇ ಇರಲಿ, ಭಾವಕ್ಕೊಪ್ಪುವ ಅರ್ಥಗರ್ಭಿತವಾದ ಹೆಸರುಗಳನ್ನು ಎಲ್ಲ ಕವಿತೆಗಳಿಗೂ ಕೊಟ್ಟಿದ್ದಾರೆ. ಉಗ್ರಾಣ, ಅಲ್ಲ, ನಾಪತ್ತೆ, ದ್ವಂದ್ವ, ತಿರುಗುಮುರುಗು, ಉರುಳು, ಜೋಕೆ, ರೇಖೆ, ಸುಡುಗಾಡು, ಆಸನ, ಮೋಡಿ, ಮೇಳ ಎಂಬಂತೆ ಆ ಹೆಸರುಗಳೂ ಸಹ ಕುತೂಹಲಕಾರಿ ಯಾಗಿವೆ.

ಇಲ್ಲಿನ ಕವಿತೆಗಳಲ್ಲಿ ತರ್ಕ, ನೀತಿ, ಹಾಸ್ಯ, ವ್ಯಂಗ್ಯ, ವಿಡಂಬನೆ, ಚತುರೋಕ್ತಿ ಚಿಂತನೆ ಮುಂತಾದುವು ತಾವೇ ತಾವಾಗಿ ವಿಜೃಂಭಿಸಿವೆ. ಈ ಕೆಲವು ಉದಾಹರಣೆ ಗಳನ್ನು ಸವಿಯೋಣ :

ತರ್ಕದ ಪರಿ 'ವೃದ್ಧಿ'ಯಲ್ಲಿ ಇಂತಿದೆ :

> ಸಹಜ ಸೌಂದರ್ಯಕ್ಕೆ ಅಲಂಕಾರ ಮಾಡಿದರೆ
> ಸೌಂದರ್ಯ ಹೆಚ್ಚುತ್ತದೆ;
> ಹಾಗೆಯೆ,
> ಕುರೂಪಕ್ಕೆ ಅಲಂಕಾರ ಮಾಡಿದರೆ
> ಕುರೂಪ ಹೆಚ್ಚುತ್ತದೆ !

'ವೃದ್ಧಿ'ಯಲ್ಲಿ ತರ್ಕದ ಸೊಗಸಿದ್ದರೆ 'ಶುದ್ಧಿ'ಯಲ್ಲಿ ನೀತಿಯು ಮೆರುಗಿರುವುದನ್ನು ಪರಿಭಾವಿಸಿ :

ಯಾವ ಹೊಳೆಯೂ ತೊಳೆಯಲಾರದು
ನಮ್ಮ ಪಾಪಗಳನ್ನ,
ನಮ್ಮ ಕಣ್ಣೀರ ಧಾರೆಯ
ವಿನಾ !

ಹಾಸ್ಯಕ್ಕಂತೂ ಇಲ್ಲಿ ಬೇಕಾದಷ್ಟು ಸರಸವಾದ ಪದ್ಯಗಳು ಸಿಕ್ಕುತ್ತವೆ. ಮದುವೆಗಳು ಎಲ್ಲಾದರೂ ಆಗಲಿ, 'ಪ್ರಸ್ತ'ವನ್ನು ಗಮನಿಸಿ :

" ಮದುವೆಗಳು ಸ್ವರ್ಗದಲ್ಲಿ ಆಗುತ್ತವೆ "
ನಿಜವಿರಬಹುದು ;
ಆದರೆ ಪ್ರಸ್ತಗಳಾಗುವುದಂತೂ
ಭೂಮಿಯಲ್ಲಿ !

'ತ್ಯಾಗ'ದ ಈ ವೈಖರಿಯನ್ನು ನೋಡಿ :

ಕನ್ನಡಿಯಲ್ಲಿ ನರೆಗಂಡು ಸಂಸಾರತ್ಯಾಗ
ಮಾಡಿದವರ ಕತೆಗಳನ್ನೋದಿದ್ದೇವೆ.
ನನಗೂ ನರೆ ಬಂದುವು ;
ತ್ಯಜಿಸಬೇಕೆಂದಿದ್ದೇನೆ :
ಕನ್ನಡಿಯನ್ನೆ !

'ಹೆಣ್ಣು' ಎಂಬ ಮಾತಿಗಿರುವ ವ್ಯಂಗ್ಯಾರ್ಥ ಇಲ್ಲಿ ಪರಿಭಾವಿಸಿದಷ್ಟೂ ವಿಸ್ತಾರವಾಗು ವುದನ್ನು ಪರಿಶೀಲಿಸಿ :

ಹೆಣ್ಣು ಹೊನ್ನು ಮಣ್ಣು ಎನ್ನುವ
ಪುನರುಕ್ತಿ ಏಕೆ ?
ಹೆಣ್ಣು ಎಂದರೆ
ಸಾಲದೆ ?

ಸಂಶೋಧಕನೊಬ್ಬನು ವಿಡಂಬನೆಗೆ ಗುರಿಯಾಗಿರುವ ಈ 'ವಿಪರ್ಯಾಸ'ವನ್ನು ನೋಡಿ :

ಆತ ಮತ್ತೆಲ್ಲವನ್ನೂ ಮರೆತು
ಸ್ತ್ರೀಯರನ್ನು ಒಲಿಸಿಕೊಳ್ಳುವುದು ಹೇಗೆಂಬ
ವಿಷಯದಲ್ಲಿ ಸುದೀರ್ಘ ಸಂಶೋಧನೆ ನಡೆಸಿ
ಬರೆದು ಪ್ರಕಟಿಸಿ ಭಾರಿ ಹೊತ್ತಗೆ,
ಸಂತೃಪ್ತಿಯ ನಿಟ್ಟುಸಿರು ಬಿಡುವ ಹೊತ್ತಿಗೆ
ಯಾರೋ ಅವನ ಹೆಂಡತಿಯನ್ನು
ಒಲಿಸಿಕೊಂಡಿದ್ದರು !

'ನಡುವೆ' 'ಉದಯ' ಎಂಬೆರಡು ಚತುರೋಕ್ತಿಗಳನ್ನು ನೋಡಿ :

ಒಂದು ಹೊಸ ಗಾದೆ
ಗಂಡ ಹೆಂಡಿರ ಮುದ್ದಾಟದಲ್ಲಿ
ಮಗು ಬಡವಾಯಿತು

ಅಂತ್ಯೋದಯ–
ಅದರ ನೆಪದಲ್ಲಿ ಕೆಲವರಿಗಾದರೂ
ಆಗುತ್ತಿದೆಯಷ್ಟೆ ಅರ್ಥೋದಯ ?
ಸಾಕು.

ಓದುಗರನ್ನು ಚಿಂತನೆಗೆ, ಆಲೋಚನೆಗೆ ಹಚ್ಚುವ ಸುಂದರವಾದ ಹಲವು ತುಣುಕು ಗಳು ಇಲ್ಲಿವೆ. ಕಣ್ಣಿನ 'ಅದ್ಭುತ'ತೆಯನ್ನು ಕವಿ ವರ್ಣಿಸುವುದನ್ನು ನೋಡಿ :

ಗ್ರಹತಾರೆ ನೀಹಾರಿಕೆಗಳು
ಅದ್ಭುತ ನಿಜ.
ಆದರೆ ಅವನ್ನೆಲ್ಲ ಒಳಗೊಳ್ಳುವ
ಮನುಷ್ಯನ ಕಣ್ಣು ಅವಕ್ಕಿಂತ
ಅದ್ಭುತ !

ವೃದ್ಧಾಪ್ಯವೇ ಒಂದು 'ರೋಗ' ಎಂಬ ಆಲೋಚನೆಯನ್ನು ನೋಡಿ :

ವೃದ್ಧಾಪ್ಯದಲ್ಲಿ ರೋಗಗಳು ಬರುವುದು
ಸಹಜ :
ಒಂದು ವೇಳೆ ಬರದಿದ್ದರೂ
ವೃದ್ಧಾಪ್ಯವೇ ಒಂದು ರೋಗ !

ಸಿ.ಪಿ.ಕೆ. ಅವರು ಇಲ್ಲಿ ಬಳಸಿರುವ ಭಾಷೆ–ಶೈಲಿ ಬಹು ಚೇತೋಹಾರಿಯಾಗಿದೆ. ಪ್ರಾಸಬದ್ಧವಾದ ಪದಗಳ ಜೋಡಣೆ ಕೆಲವೆಡೆ ಶಬ್ದಾಲಂಕಾರವಾಗಿ ಮಾತ್ರವೇ ನಿಲ್ಲದೆ ಅರ್ಥಾಲಂಕಾರವಾಗಿಯೂ ಶೋಭಿಸಿರುವುದು ಸಂತೋಷವನ್ನುಂಟುಮಾಡುತ್ತದೆ. 'ನಗರ' ಎಂಬ ಕಿರುಗವಿತೆಯನ್ನು ಸವಿಯಿರಿ :

ನಗರ
ಎನ್ನುವುದು
ಹಳ್ಳಿಗಳ ನುಂಗುವ
ಅಜಗರ !
ಇದಕ್ಕೆ ಸದಾ ಜಾಗರ !

ನಗರ, ಅಜಗರ, ಜಾಗರಗಳು ತಂದಿರುವ ಉಕ್ತಿವೈಚಿತ್ರ್ಯ ಮನೋಹರವಾದುದು.

ಸಿ.ಪಿ.ಕೆ. ಅವರ ಈ 'ಹನಿ ಮಿನಿ' ನಮ್ಮನ್ನು ನಗಿಸುತ್ತದೆ, ನಮ್ಮನ್ನು 'ಶಾಂತ'ರನ್ನಾಗಿಸುತ್ತದೆ ; ಸರಿ, ಇಲ್ಲಿಗೆ ತೀರಿತು ಎಂದು ಸುಮ್ಮನಾದರೆ ಮತ್ತೆ ಯಾವಾಗಲೋ 'ನಾನು ನಕ್ಕದ್ದೇಕೆ, ನಾನು ಶಾಂತನಾದದ್ದೇಕೆ' ಎಂಬುದಕ್ಕೆ ಉತ್ತರವನ್ನು ನಮ್ಮ ಮನಸ್ಸು ಆ ಕೃತಿಯ ಪುಟಗಳನ್ನು ಮತ್ತೆಮತ್ತೆ ತಿರುವಿ ಹಾಕುತ್ತಾ ಕಂಡುಕೊಳ್ಳುತ್ತದೆ.

ಸಂಕಲನದ ಕೊನೆಯಲ್ಲಿ ಸಂಸ್ಕೃತದಿಂದ ಅನುವಾದಿಸಿರುವ ಹದಿಮೂರು ಸ್ವಾರಸ್ಯವಾದ ಸುಭಾಷಿತಗಳಿವೆ. ಇವೂ ಸಹ ಸಿ.ಪಿ.ಕೆ. ಅವರ ಸ್ವಂತ ಕಿರುಗವಿತೆಗಳ ಜಾಡಿಗೆ ಹೊಂದಿಕೊಳ್ಳುತ್ತವೆ ; ಅನುವಾದ ಅಚ್ಚುಕಟ್ಟಾಗಿದೆ.

—ಕೆ. ಅನಂತರಾಮು

ಉತ್ತರ ಕನ್ನಡ ಜಿಲ್ಲೆಯ ಬುಡಕಟ್ಟು ಜನಾಂಗಗಳ ಜಾನಪದ: ಎನ್.ಆರ್. ನಾಯಕ. ಕ.ವಿ.ವಿ. ಪ್ರಸಾರಾಂಗ, ಧಾರವಾಡ, ೧೯೮೯, ಬೆಲೆ ರೂ. ೧–೦೦

ಮನುಷ್ಯನ ಒಟ್ಟು ಸಂಸ್ಕೃತಿಯನ್ನು ತಿಳಿದುಕೊಳ್ಳಲು ಒಂದೊಂದೂ ಸಂಸ್ಕೃತಿ ಸಮೂಹದ ಸಮಗ್ರ ಅಧ್ಯಯನ ಕೈಕೊಳ್ಳುವ ಯತ್ನಗಳು ಇತ್ತೀಚೆಗೆ ಹೆಚ್ಚು ಹೆಚ್ಚು ನಡೆಯುತ್ತಿವೆ. ಕರ್ನಾಟಕದಲ್ಲೂ ಜಾತಿ, ಬುಡಕಟ್ಟು ಸಮಾಜಗಳನ್ನು ಪ್ರತ್ಯೇಕವಾಗಿ ಹಾಗೂ ತೌಲನಿಕ ವಿಧಾನದಲ್ಲಿ ಅಭ್ಯಾಸ ನಡೆಸುವ ಪ್ರವೃತ್ತಿ ಕಂಡುಬಂದಿದೆ. ಇದರಿಂದಾಗಿ ಬೇರೆ ಬೇರೆ ಸಮಾಜಗಳ ವೈಲಕ್ಷಣ್ಯಗಳನ್ನು ತಿಳಿದುಕೊಳ್ಳಲು ಸಾಧ್ಯವಾಗುವುದರೊಂದಿಗೆ ಒಟ್ಟು ಮಾನವನ ನಡವಳಿಕೆಯ ಬಗೆಗೂ ಸ್ಪಷ್ಟ ತಿಳಿವಳಿಕೆ ಮೂಡುತ್ತದೆ. ಡಾ. ಎನ್. ಆರ್. ನಾಯಕ ಅವರ "ಉತ್ತರ ಕನ್ನಡ ಜಿಲ್ಲೆಯ ಬುಡಕಟ್ಟು ಜನಾಂಗಗಳ ಜಾನಪದ" ಉತ್ತರ ಕನ್ನಡದ ಬುಡಕಟ್ಟುಗಳ ಸಂಸ್ಕೃತಿಯ ಒಂದು ಇಣುಕುನೋಟವನ್ನು ಒದಗಿಸುತ್ತದೆ. ಇಲ್ಲಿ ನಾಯಕ ಅವರು ಒಕ್ಕಲಿಗ ಬುಡಕಟ್ಟಿಗೆ ಸೇರಿದ ಹಾಲಕ್ಕಿ ಒಕ್ಕಲು, ಗೊಂಡ ಒಕ್ಕಲು, ಗಾವೊಕ್ಕಲು, ಕೊಟ್ಟೆ ಒಕ್ಕಲು, ಕರೆ ಒಕ್ಕಲು ಪಂಗಡಗಳ ಜೀವನ ಮತ್ತು ಸಂಸ್ಕೃತಿಯನ್ನು ಮಾನವ ಶಾಸ್ತ್ರೀಯ ವಿಧಾನದಲ್ಲಿ ನಿರೂಪಿಸಿದ್ದಾರೆ. ಪ್ರಬಂಧೋಪನ್ಯಾಸಕ್ಕಾಗಿ ಸಿದ್ಧಪಡಿಸಿದ ಬರಹ ಇದಾಗಿದ್ದರೂ ಇದರಲ್ಲಿ ತೌಲನಿಕ ದೃಷ್ಟಿ ಅಳವಟ್ಟಿದ್ದು ಸಂಶೋಧನೆಯ ಎಲ್ಲ ವಿಧಿ ವಿಧಾನಗಳನ್ನೂ ಕ್ರಮಬದ್ಧವಾಗಿ ಪಾಲಿಸಲಾಗಿದೆ. ವಿಷಯ ಸಂಗ್ರಹಣೆ ಮತ್ತು ಪ್ರತಿಪಾದನೆಯಲ್ಲೂ ಅದೇ ಸಮರ್ಪಕತೆಯುಂಟು.

ಉತ್ತರ ಕನ್ನಡದ ಬುಡಕಟ್ಟು ಸಮಾಜಗಳ ಜೀವನ ಮತ್ತು ಸಂಸ್ಕೃತಿಯನ್ನು ಬಹು ಸರಳ ರೀತಿಯಲ್ಲಿ ಪರಿಚಯಿಸುವ ಈ ಕೃತಿಯು ಪರಿವಿಡಿ ಉಪನ್ಯಾಸದ ಒಟ್ಟು ಸ್ವರೂಪವನ್ನೇ ಕಣ್ಣಿಗೆ ಕಟ್ಟಿಕೊಡುತ್ತದೆ. ಮೊದಲನೆಯ ಅಧ್ಯಾಯದಲ್ಲಿ ಉತ್ತರ ಕನ್ನಡ ಜಿಲ್ಲೆಯ ಬುಡಕಟ್ಟುಗಳ ಪರಿಚಯವಿದೆ. ಎರಡನೆಯ ಅಧ್ಯಾಯದಲ್ಲಿ ಬುಡಕಟ್ಟು ಸಮಾಜಗಳ ಸಮಾಜ ವ್ಯವಸ್ಥೆ, ಸಂಪ್ರದಾಯ, ನಂಬಿಕೆ ಮತ್ತು ವೈದ್ಯದ ಪರಿಶೀಲನೆಯುಂಟು. ಬುಡಕಟ್ಟುಗಳ ಧಾರ್ಮಿಕ ಆಚರಣೆ, ಕಲೆ ಮತ್ತು ಕ್ರೀಡೆಗಳ ಪ್ರತ್ಯೇಕ ಪ್ರಸ್ತಾಪವನ್ನು ಮೂರನೆಯ ಅಧ್ಯಾಯದಲ್ಲಿ ಮಾಡಲಾಗಿದೆ. ಕೊನೆಯ ಅಧ್ಯಾಯ ಬುಡಕಟ್ಟು ಸಮಾಜಗಳ ಮೌಖಿಕ ಸಾಹಿತ್ಯದ ಸ್ವಾರಸ್ಯಪೂರ್ಣ ವಿವೇಚನೆಗೆ ಮೀಸಲಾಗಿದೆ. ಅದರಲ್ಲಿ ಮೂಲ ಮಹಾಭಾರತದಿಂದ ಮಾರ್ಪಾಡು ಸಾಧಿಸಿದ ದ್ರೌಪದಿ ವಸ್ತ್ರಾಪಹರಣ ಹಾಗೂ ಅಭಿಮನ್ಯುವಧಾ ಪ್ರಸಂಗಗಳನ್ನು ಕುರಿತು ಲೇಖಕರು ನಡೆಸಿರುವ ವಿವೇಚನೆ ಕುತೂಹಲಕರವಾಗಿದೆ.

ಹುಟ್ಟು, ಮದುವೆ, ಸಾವು—ಈ ಸಂದರ್ಭಗಳಲ್ಲಿ ಬ್ರಾಹ್ಮಣರ ಪೌರೋಹಿತ್ಯ ವನ್ನು ಬಯಸದೆ ಬುಡಕಟ್ಟಿನ ಮುಂಖಡರಿಗೇ ಪ್ರಾಶಸ್ತ್ಯ ನೀಡಿ ತಮ್ಮ ಬುಡಕಟ್ಟಿನ ಮೂಲಸ್ವರೂಪವನ್ನು ಉಳಿಸಿಕೊಂಡಿರುವುದು ಈ ಸಮಾಜಗಳ ವಿಶೇಷ. ಜೊತೆ

ಜೊತೆಗೇ ಉಳಿದ ಹಿಂದುಗಳು ಆಚರಿಸುವ ಹಬ್ಬ ಹರಿದಿನಗಳನ್ನು ಆಚರಿಸುವುದು, ಜಾತ್ರೆ, ರಥೋತ್ಸವಗಳಲ್ಲಿ ಬೆರೆಯುವುದು, ಅಕ್ಷರಾಭ್ಯಾಸ ನಡೆಸುವುದು—ಈ ಮುಂತಾದ ಚಟುವಟಿಕೆಗಳಿಂದ ಹಂತ ಹಂತವಾಗಿ ಇವರು ಬುಡಕಟ್ಟು ಗುಣಧರ್ಮಗಳ ಪೊರೆಗಳನ್ನು ಕಳಚಿಕೊಳ್ಳುತ್ತಿರುವುದು ಗಮನಾರ್ಹ.

ಒಟ್ಟಿನಲ್ಲಿ ಗ್ರಾಮ, ನಗರ ಸಂಸ್ಕೃತಿಗಳ ಪ್ರಭಾವಕ್ಕೊಳಗಾಗದೆ ತಂತಮ್ಮ ಮೂಲ ಸಂಸ್ಕೃತಿಯನ್ನು ಉಳಿಸಿ ಬೆಳೆಸಿಕೊಂಡು ಬಂದಿರುವ ಈ ಬುಡಕಟ್ಟು ಸಮಾಜಗಳ ಜನತೆ ಇಂದಿಗೂ ಅನನ್ಯ ಜೀವನ ಮತ್ತು ಸಂಸ್ಕೃತಿಗೆ ಹೆಸರಾಗಿದ್ದಾರೆ. ಇಂದಿಗೂ ಗುಡ್ಡಗಾಡುಗಳಲ್ಲೇ ನೆಲೆಸಿರುವ ಈ ಸಮಾಜಗಳ ಆಚಾರ ವಿಚಾರ, ಸಾಹಿತ್ಯ ಕುತೂಹಲಕಾರಿಯಾಗಿದ್ದು ಅಭ್ಯಾಸಯೋಗ್ಯವಾಗಿದೆ. ಶ್ರೇಣೀಕೃತ ಜಾತಿವ್ಯವಸ್ಥೆಯಲ್ಲಿ ಬೆರೆಯದೆ ಸಾಂಸ್ಕೃತಿಕ ಅನನ್ಯತೆಯನ್ನು ಕಾಯ್ದುಕೊಂಡಿರುವ ಈ ಬುಡಕಟ್ಟು ಸಮಾಜಗಳ ಜಾನಪದ ಅಧ್ಯಯನ ಇನ್ನೂ ಸಮಗ್ರವಾಗಿ ನಡೆಯುವುದು ಯುಕ್ತ.

—ಡಾ. ಅಂಬಳಿಕೆ ಹಿರಿಯಣ್ಣ

ಹೂ ಮುಡಿದ ಖಡ್ಗಗಳ ಮೇಲೆ : ಕೆ. ಗೋವಿಂದರಾಜು ; ಪ್ರಕಾಶಕರು : ಚಿತ್ರಕೂಟ ಪ್ರಕಾಶನ, ಚಿಕ್ಕಮಗಳೂರು; ಪುಟ 56 + xiv; ಬೆಲೆ ರೂ 15; 1991

ಪ್ರಸ್ತುತ ಬದುಕಿನ ಪ್ರಾಮಾಣಿಕ ಸ್ಪಂದನದಿಂದ ಸೃಜನಶೀಲವಾದ ಅಭಿವ್ಯಕ್ತಿಯನ್ನು ಪಡೆದಿರುವ ಇಲ್ಲಿನ ಕವನಗಳು ಶ್ರೀ ಕೆ. ಗೋವಿಂದರಾಜು ಅವರ ಕಾವ್ಯಸೃಷ್ಟಿ ಶಕ್ತಿಯ ಸಮರ್ಥ ಸಂಕೇತಗಳಾಗಿವೆ. ದಲಿತ ಹಾಗೂ ಬಂಡಾಯ ಕಾವ್ಯದ ಸೃಜನಶೀಲ ದೋಷವಾದ 'ಅತಿವಾಚ್ಯ' ಹಾಗೂ 'ಘೋಷಣೆ'ಗಳಿಂದ ದೂರಾಗಿ ಸೂಚ್ಯ, ಸಂಕೇತ, ವಿಡಂಬನೆ ಮತ್ತು ಪ್ರತಿಮಾರ್ಥಗಳಲ್ಲಿ ಕಾವ್ಯವನ್ನು ನಡೆಯಿಸಿಕೊಂಡು ಹೋಗಿರುವುದರಲ್ಲಿ ಕವಿಯ ಪ್ರತಿಭೆಯನ್ನು ಕಾಣಬಹುದಾಗಿದೆ. ಸಮಾಜದ ನಾನಾ ಸಮಸ್ಯೆಗಳ ಹಿನ್ನೆಲೆಯಲ್ಲಿ ಈ ಸಂಕಲನದ ಕವನಗಳು ಹುಟ್ಟುಪಡೆದಿವೆ. ಒಟ್ಟು ಬದುಕನ್ನು ದಲಿತ ದೃಷ್ಟಿಯಿಂದ ನೋಡುವ ಇಲ್ಲಿನ ಕವನಗಳಲ್ಲಿ ಸಾಮಾಜಿಕ ಕಳಕಳಿ ಹಾಗೂ ಮಾನವೀಯ ಅಂತಃಕರಣಗಳು ಎದ್ದು ಕಾಣುತ್ತವೆ ; ದಲಿತ ಬದುಕಿನ ಹಲವು ಮುಖಗಳನ್ನು ನಿರಾಡಂಬರವಾಗಿ ಕಂಡರಿಸಲಾಗಿದೆ.

ಬದುಕಿನ ಘೋರ ಅನ್ಯಾಯಗಳು, ಶೋಷಣೆಗಳು ಹಾಗೂ ಸಾಮಾಜಿಕ ಕ್ರೌರ್ಯಗಳನ್ನು ಕಾವ್ಯಕ್ಕಿಳಿಸುವಾಗ ಕವಿ ವಹಿಸುವ ಸಂಯಮ ಮೆಚ್ಚುವಂಥದ್ದು. ಇಂಥ ಕಡೆಗಳಲ್ಲಿ ಕವಿ ಆತ್ಮೀಯ ಧಾಟಿಯಲ್ಲಿ ಕಾವ್ಯವನ್ನು ಸಂವಹನಿಸುತ್ತಾರೆ. ತನ್ನನ್ನು ಕಾಡಿರುವ, ಕಾಡುತ್ತಿರುವ ಸಮಸ್ಯೆಗಳ ಬಗ್ಗೆ ಸಹೃದಯ ಓದುಗರೂ

ಚಿಂತಿಸುವಂತೆ ಮಾಡುವಲ್ಲಿ ಇವರ ಕಾವ್ಯದ ಪರಿಣಾಮವನ್ನು ಕಾಣಬಹುದಾಗಿದೆ. ವೈಯಕ್ತಿಕ ಅನುಭವದ ನೆಲೆಗಟ್ಟಿನ ಮೇಲೆ ಹುಟ್ಟಿಪಡೆಯುವ ಕವನಗಳು ಸಾರ್ವತ್ರಿಕ ಅನುಭವದ ಸಂದರ್ಭದಲ್ಲೂ ಸಲ್ಲುವುದರ ಮೂಲಕ ಸಾಮಾಜಿಕವಾಗಿ ಸಾರ್ಥಕ್ಯವನ್ನು ಕಂಡುಕೊಳ್ಳುತ್ತವೆ.

ಈ ಸಂಕಲನದ ಹೆಚ್ಚಿನ ಕವನಗಳು ಸಂಕೀರ್ಣವಾದ ಪ್ರತಿಮೆಗಳನ್ನು ಒಳಗೊಂಡಿವೆ. ಪ್ರಮುಖವಾಗಿ ಪೌರಾಣಿಕ ಪ್ರತಿಮೆಗಳ ಆಶ್ರಯದಲ್ಲಿ ಕವಿಯ ಆಶಯ ಅಭಿವ್ಯಕ್ತವಾಗಿದೆ. ಕೆಲವು ಕವನಗಳಲ್ಲಿ ಇಂಥ ಪ್ರತಿಮೆಗಳು ಸಾರ್ಥಕ್ಯವನ್ನೂ ಕಂಡಿವೆ. ಭಾಷಾದಾರಿದ್ರ್ಯವಿಲ್ಲದ ಕವಿ ಸಹಜವಾದ ಮತ್ತು ಸ್ವೋಪಜ್ಞವಾದ ಪದಪ್ರಯೋಗಗಳಿಂದ ವಿಶಿಷ್ಟರೆನ್ನಿಸುತ್ತಾರೆ. ಇಲ್ಲಿನ ಕವನಗಳ ಗೇಯತೆ ವಾಚನೀಯತೆಗೆ ಸಹಾಯಕವಾಗುವಂತೆ, ಅಕೃತಕವಾಗಿ ಕಾವ್ಯದ ನಡೆಗೆ ಸೂಕ್ತ ಹಳಿಯಾಗಿದೆ. ನವೋದಯ ಕವಿತೆಗಳಂತೆ ಪ್ರಾರಂಭವಾಗುವ ಇಲ್ಲಿನ ಪದ್ಯಗಳು ನವ್ಯದ ಸಂಕೀರ್ಣತೆಯಲ್ಲಿ ದಲಿತ-ಬಂಡಾಯದ ದ್ರವ್ಯವನ್ನು ಸ್ರವಿಸುತ್ತವೆ.

ಕೆ. ಗೋವಿಂದರಾಜುರವರ ಕವನಗಳ ಸಂಕೀರ್ಣತೆ ಕವನವೊಂದನ್ನು ಸಮಗ್ರವಾಗಿ ಗ್ರಹಿಸುವ ಸಂದರ್ಭದಲ್ಲಿ ಅಲ್ಲಲ್ಲಿ ತೊಡಕಾಗುತ್ತದೆ. ಹಾಗೆಂದಾಕ್ಷಣ ಸಂಕೀರ್ಣತೆಯನ್ನು ಕಡಿಮೆಯಾಗಿಸಿಕೊಳ್ಳಬೇಕೆಂದಾಗಲಿ, ಸರಳತೆಯನ್ನೇ ಇನ್ನಷ್ಟು ಮೈಗೂಡಿಸಿಕೊಳ್ಳಬೇಕೆಂದಾಗಲಿ ಅರ್ಥವಲ್ಲ. ಕವಿತೆಯೊಂದನ್ನು ಅದರ ಸಂಕೀರ್ಣತೆಯಲ್ಲೇ ಅರ್ಥಮಾಡಿಕೊಳ್ಳಲು ಬೇಕಾದ ಕೀಲಿಕೈಗಳನ್ನು ಕವನದ ಒಳಗೇ ಒದಗಿಸಿಕೊಟ್ಟಾಗ ಸಂಕೀರ್ಣತೆ ಯಶಸ್ವಿಯಾಗುತ್ತದೆ. ಕೆಲವೊಮ್ಮೆ ಕವಿ ವಾಚ್ಯದ ಮೊರೆ ಹೋಗುವುದುಂಟು. (ಇಂಥ ಸಂದರ್ಭಗಳು ತೀರಾ ಕಡಿಮೆ). ಅತಿಯಾದ ಸಂಕೀರ್ಣತೆ ಹಾಗೂ ವಾಚ್ಯಗಳು ದೂರಾದಾಗ ಕಾವ್ಯತ್ವ ಸಿದ್ಧಿಸುತ್ತದೆ ; ಸಂವಹನ ಸುಲಭವಾಗುತ್ತದೆ. ಈ ಎಚ್ಚರ ಕವಿಗಿರುವುದಕ್ಕೆ ಈ ಸಂಕಲನದ ಕವನಗಳಲ್ಲೇ ನಿದರ್ಶನಗಳು ದೊರೆಯುತ್ತವೆ. ಅಂಥ ಕವನಗಳ ನೆಲೆಗಟ್ಟಿನಲ್ಲಿ ಬೆಳೆದು ಉತ್ತಮ ಕವಿತೆಗಳನ್ನು ನೀಡುವ ಸಾಮರ್ಥ್ಯ ಖಂಡಿತ ಈ ಕವಿಗಿದೆ. ತುಂಬು ಭರವಸೆಯನ್ನು ಹುಟ್ಟಿಸಬಲ್ಲ ಶ್ರೀ ಕೆ. ಗೋವಿಂದರಾಜುರವರಿಂದ ಮಹತ್ವದ ಕವನಗಳನ್ನು ನಿರೀಕ್ಷಿಸಬಹುದು.

—ಮೈಸೂರು ಕೃಷ್ಣಮೂರ್ತಿ

ಉತ್ತರ ಕನ್ನಡ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಚಳುವಳಿ—ಆರು ಉಪನ್ಯಾಸಗಳು. ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾನಿಲಯ ಧಾರವಾಡ; ಜುಲೈ ೧೯೯೦. ಪುಟ : ೪+೧೩೪=೧೩೮. ಬೆಲೆ. ರೂ. ೨೪-೦೦.

'ಉತ್ತರ ಕನ್ನಡ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಚಳುವಳಿ' ಈ ಕೃತಿ ಪ್ರಸಾರಾಂಗದ ಜ್ಞಾನ ಪ್ರಸಾರದ ಉದ್ದೇಶವನ್ನು ಸಫಲಗೊಳಿಸಿದೆ. ಇಲ್ಲಿ ಸ್ವಾನುಭವಿಗಳ ಬೋಧನೆ

ಪ್ರೇರಣೆಯ ಲೇಖನಗಳಲ್ಲಿ ಹಾಗೂ ಚಿಂತಕರ ವಿಚಾರಪೂರ್ಣ ಲೇಖನಗಳಲ್ಲಿ ಚಿಂತನೆ, ಬೋಧನೆ, ಪ್ರೇರಣೆಗಳ ಸಂಗಮವಾಗಿ ಸ್ವಾತಂತ್ರ್ಯಸಂಗ್ರಾಮ ಚಿತ್ರಿತವಾಗಿದೆ.

ಭಾರತದ ಸ್ವಾತಂತ್ರ್ಯ ಚಳವಳಿ ಎಂದಾಕ್ಷಣ ಕೇವಲ ಗಾಂಧೀಜಿ, ನೆಹರು, ಪಟೇಲ್, ಅಜಾದ್, ಭಗತ್‌ಸಿಂಗ್, ಲಾಲ್, ಪಾಲ್, ಮೊದಲಾದ ರಾಷ್ಟ್ರೀಯ ನೇತಾರರು ಹಾಗೂ ಜಲಿಯನ್ ವಾಲಾಬಾಗ್, ಚೌರಿಚೌರಾ, ದಂಡಿ ಸತ್ಯಾಗ್ರಹ ಮುಂತಾದ ಘಟನೆಗಳಷ್ಟೇ ಪ್ರಮುಖ ಎನಿಸಿವೆ. ಆದರೆ ಅವುಗಳಷ್ಟೇ ಅಲ್ಲ, ಅಲ್ಲಲ್ಲಿ ಸ್ಥಳೀಯ ವೀರನೇತೃತ್ವದ ಉಗ್ರ ಹೋರಾಟವೂ ನಡೆದಿದೆ ಎಂಬುದಕ್ಕೆ ಇಂಥ ಕೃತಿಗಳು ಕನ್ನಡಿಯಾಗುತ್ತವೆ. ಈ ಕಿರುಹೊತ್ತಿಗೆಯಲ್ಲಿ ಆರು ವಿಶಿಷ್ಟ ಲೇಖನಗಳಿವೆ. ಕೆಲವು ಲೇಖನಗಳಲ್ಲಿ ಕೆಲವು ವಿಚಾರಗಳು ಪುನರಾವರ್ತನೆಯಾಗಿದ್ದರೂ, ಪ್ರತಿ ಲೇಖನವೂ ವಿಭಿನ್ನ ಅನುಭವ ನೀಡುತ್ತದೆ.

ಡಾ. ಸೂರ್ಯನಾಥ ಕಾಮತ್‌ರು, 'ಉತ್ತರ ಕನ್ನಡದಲ್ಲಿ ರಾಷ್ಟ್ರೀಯ ಜಾಗೃತಿಯ ಹಿನ್ನೆಲೆ' ಲೇಖನದಲ್ಲಿ ಸಂಶೋಧಕನ ದೃಷ್ಟಿ, ಚಿಂತಕನ ಮನಸ್ಸಿನಿಂದ ಐತಿಹಾಸಿಕ ಕಾರಣಗಳನ್ನು ಹುಡುಕಿದ್ದಾರೆ. ಬ್ರಿಟಿಷ್ ಅಧಿಕಾರದ ಬರ್ಬರತೆ, ಕಂದಾಯ, ಅರಣ್ಯ ಇಲಾಖೆಗಳ ರೈತ ವಿರೋಧಿ ನೀತಿ, ರೈಲ್ವೆಮಾರ್ಗದ ವಂಚನೆ, ಉಪ್ಪಿನ ಕಾನೂನು, ಬೆಲೆ ಏರಿಕೆ, ಅಮಾನವೀಯ ದೌರ್ಜನ್ಯ ಮೊದಲಾದ ಕಾರಣ ಗಳನ್ನು ಅಂಕಿ ಸಂಖ್ಯೆಗಳ ಆಧಾರಗಳಿಂದ ಸ್ಪಷ್ಟಪಡಿಸಿದ್ದಾರೆ. ಆದರೆ ಕೇವಲ ವ್ಯಾವಹಾರಿಕವಾದ ಆರ್ಥಿಕ, ರಾಜಕೀಯ ಕಾರಣಗಳೇ ಸ್ವಾತಂತ್ರ್ಯ ಚಳುವಳಿಯ ಜೀವಾಳ ಎನ್ನಲಾಗದು. ಏಕೆಂದರೆ ಪ್ರಾಣದಹಂಗು ತೊರೆದು ರಣರಂಗಕ್ಕಿಳಿಯ ಬೇಕಾದರೆ ನಾಯಕರುಗಳ ನೈತಿಕ ನೇತೃತ್ವ, ಸಾಂಸ್ಕೃತಿಕವಾದ ಧಾರ್ಮಿಕವಾದ ಭಾವನಾತ್ಮಕ ತುಡಿತಗಳು ಕಾರಣಗಳಾಗಬಹುದು. ಕಾಮತ್‌ರು ಬಿಟ್ಟ ಇಂಥ ಆಂತರಿಕ ಕಾರಣಗಳನ್ನು ಅನಸೂಯಶರ್ಮ, ಜೋಗಿ ಬೀರಣ್ಣ ನಾಯಕರು ತಮ್ಮ ಲೇಖನಗಳಲ್ಲಿ ಗುರುತಿಸಿದ್ದಾರೆ.

ಅಣ್ಣಾಗುರೂಜಿ ಅವರ ನೆನಪಿನಲ್ಲಿ ಸಾರ್ಥಕತೆಯ ಗೆಲುವಿದೆ, ಯೌವನದ ಹುರುಪಿದೆ. ಹುದ್ಲಿ ಪಚ್ಚಾಪುರ ಅಕ್ಕತಂಗೇರ ಹಾಳದ ವೀರರು ಸುಧಾಳ ರೈಲ್ವೆ ನಿಲ್ದಾಣವನ್ನು ಧಗಧಗಿಸಿದ್ದರಲ್ಲಿ, ೧೯೪೨ ರಲ್ಲಿ ತಂತಿ ತಾರುಕಂಬಗಳನ್ನು ತುಂಡರಿಸಿದ ಸಂಘಟನಾ ಚಾತುರ್ಯದಲ್ಲಿ, ಅಕ್ಕತಂಗೇರಹಾಳ ಕೊಳವಿಯ ವೀರ ಮಹಿಳೆಯರು ಕಾಗದಪತ್ರಗಳನ್ನು ಸುಟ್ಟಿದ್ದರಲ್ಲಿ, ದಫ್ತರ್‌ನಾಶ, ಫೌಜುದಾರನಪೇಚು, ರಸ್ತೆ ಸುರಾಭಿಷೇಕ ಮೊದಲಾದ ವೀರಕಾರ್ಯಗಳ ಗರ್ಭದಲ್ಲಿ ಸ್ವಾತಂತ್ರ್ಯದ ಸುಮವನ್ನು ಕಾಣುತ್ತಾರೆ. ಇಲ್ಲಿನ ಸ್ಮರಣೆಯಲ್ಲಿ ಪ್ರಚೋದನೆ ಇಲ್ಲ, ಪ್ರೇರಣೆ ಇದೆ.

ಅನಸೂಯ ಶರ್ಮಾ ಅವರು ಸ್ವಾತಂತ್ರ್ಯ ಚಳವಳಿಯಲ್ಲಿ ಉತ್ತರ ಕನ್ನಡ ಜಿಲ್ಲೆಯ ಧೀರ ವನಿತೆಯರನ್ನು ಕುರಿತಂತೆ ಭಾವತುಂಬಿ ಬರೆಯುತ್ತಾರೆ. ಲೇಖನ ಕಥೆಯೇನೋ ಎಂಬಂತೆ ರಸಾನುಭವ ನೀಡುತ್ತದೆ. ಆದರೆ ಆನಂದವಾಗುವುದಿಲ್ಲ.

ಬದಲಿಗೆ ಬ್ರಿಟಿಷರ ದೌರ್ಜನ್ಯಕ್ಕೆ ಬಲಿಯಾದ ವೀರಮಾತೆಯರ ನೆನಪು ಕಣ್ಣೀರು ತರುತ್ತದೆ. ನಾವು ಅಂಥವರ ಮಕ್ಕಳು ಎಂಬ ಅಭಿಮಾನವನ್ನು ಮೂಡಿಸುತ್ತದೆ.

ಉತ್ತರಕನ್ನಡ ಜಿಲ್ಲೆಯ ಮಹಿಳೆಯರಿಗೆ ಪ್ರೇರಕವಾಗಿದ್ದ ಹಾಗೂ ಪ್ರತಿಕೂಲವಾಗಿದ್ದ ಕಾರಣಗಳನ್ನು ಚರ್ಚಿಸುವ ಶರ್ಮ, ಚಳವಳಿಯ ಉಗ್ರತೆಯನ್ನು, ವಿಚಾರವಂತಿಕೆಯನ್ನು, ಛಲವನ್ನು, ವೀರತ್ವವನ್ನು, ಮಹಿಳೆಯರು ನಡೆಸಿದ ಜಂಗಲ್ ಸತ್ಯಾಗ್ರಹ, ಉಪ್ಪಿನ ಸತ್ಯಾಗ್ರಹ, ಅಸಹಕಾರ ಚಳವಳಿ, ಕರನಿರಾಕರಣ ಚಳವಳಿ, ಪಿಕೇಟಿಂಗ್ ಮೊದಲಾದ ಚಳವಳಿಗಳಲ್ಲಿ ಗುರುತಿಸುತ್ತಾರೆ. ಚಳವಳಿಯಲ್ಲಿನ ಸ್ತ್ರೀಯರ ಪಾತ್ರ ಪುರುಷರಿಗೂ ಸ್ಫೂರ್ತಿನೀಡಿತು. ಹೊಡೆತ ಬಡಿತ, ಎದೆಕೂಸನ್ನು ಕಸಿದು ಎಸೆದಂಥ, ಮಾನಭಂಗದಂಥ ದೌರ್ಜನ್ಯಗಳಿಗೆ ತುತ್ತಾದರೂ, ಬಿಡದ ಅಚಲನಿಷ್ಠೆ, ನಿರಂತರ ಹೋರಾಟ ಕರ್ನಾಟಕದ ಮಹಿಳೆಯರ ಬಗ್ಗೆ ಹೆಮ್ಮೆ ಮೂಡಿಸುವಂತಿದೆ.

ಅಂಕೋಲೆ, ಉಪ್ಪಿನ ಸತ್ಯಾಗ್ರಹದಲ್ಲಿ 'ಕರ್ನಾಟಕದ ಸಮರಭೂಮಿ' ಕರನಿರಾಕರಣ ಚಳವಳಿಯಲ್ಲಿ 'ಕರ್ನಾಟಕದ ಬಾರ್ಡೋಲಿ' ಎಂದು ಕರೆಯುವ ಜೋಗಿ ಬೀರಣ್ಣ ನಾಯಕರು, ಅಂಕೋಲೆ ತಾಲೋಕಿನಾದ್ಯಂತ 'ನಾಡವರು' ವಹಿಸಿದ ಸೇನಾಪತ್ಯ ಹಾಗೂ ಕರ್ನಾಟಕ ರಾಜ್ಯದ ಸ್ವಾತಂತ್ರ್ಯ ಚಳವಳಿಯ ಕೇಂದ್ರತ್ವ ಇವುಗಳಿಂದಾಗಿ ದೊರೆತ ರಾಷ್ಟ್ರೀಯ ಮಾನ್ಯತೆಯನ್ನು ಕನ್ನಡಿಗನ ಎದೆತುಂಬಿ ಬರುವಂತೆ ಕಟ್ಟಿಕೊಟ್ಟಿದ್ದಾರೆ. ಇವರು ಕೆಲವು ಚಳವಳಿಗಳಲ್ಲಿ ರಾಷ್ಟ್ರದ ಕೆಲವೆಡೆಗಳಲ್ಲಿ ಹಾಗೂ ಅಂಕೋಲ ತಾಲ್ಲೋಕಿನಲ್ಲಿ ಜರುಗಿದ ಘಟನೆಗಳನ್ನು ತೌಲನಿಕವಾಗಿ ವೀಕ್ಷಿಸಿ ಅಂಕೋಲ ಚಳವಳಿ ಹೇಗೆ ಅಹಿಂಸಾತ್ಮಕ ಹಾಗೂ ತತ್ವನಿಷ್ಠ ಎಂಬುದನ್ನು ಉಲ್ಲೇಖಿಸಿ, ರಾಷ್ಟ್ರದ ಸ್ವಾತಂತ್ರ್ಯ ಚಳುಳಿವಯ ಇತಿಹಾಸದಲ್ಲಿ ಅಂಕೋಲೆಯ ಸ್ಥಾನವನ್ನು ಖಚಿತಪಡಿಸಿದ್ದಾರೆ.

ಡಾ. ಎಸ್. ಎ. ಪಾಟೀಲರು ತಮ್ಮ ಲೇಖನದಲ್ಲಿ ಗಾಂಧಿ, ಮಹಾತ್ಮ ಗಾಂಧೀಜಿಯಾಗಿ ರೂಪುಗೊಂಡದ್ದರ ಬಗ್ಗೆ ವಿವರ ನೀಡಿದ್ದಾರೆ. ಗಾಂಧೀಜಿ ಜಗತ್ತಿನ ಮಾನವೀಯ ಮೌಲ್ಯಗಳನ್ನು ವಶಪಡಿಸಿಕೊಂಡು "ಸತ್ಯಾಗ್ರಹ ದುರ್ಬಲರ ಅಸ್ತ್ರವಲ್ಲ ಬಲಿಷ್ಠಳ್ಳವರ ಅಸ್ತ್ರ .... ಅಹಿಂಸೆಯಿಂದ ಹಿಂಸೆಯನ್ನು ಸತ್ಯದಿಂದ ಅಸತ್ಯವನ್ನು ಪ್ರೀತಿಯಿಂದ ದ್ವೇಶವನ್ನು ಗೆಲ್ಲಬೇಕು .... ಸತ್ಯಾಗ್ರಹಿಯು ಪ್ರೀತಿ ಮತ್ತು ಸತ್ಯದ ಆಯುಧಗಳನ್ನು ಉಪಯೋಗಿಸುತ್ತಾನೆ" ಎಂದು ವಿಶ್ಲೇಷಿಸುತ್ತ ವಿಶ್ವಶಾಂತಿಗೆ ಗಾಂಧೀಜಿಯವರ ಸತ್ಯಾಗ್ರಹ ಎಷ್ಟು ಅನಿವಾರ್ಯ ಎಂಬುದನ್ನು ಗುರುತಿಸಿದ್ದಾರೆ. ಜಗತ್ತಿನ ನೆಲೆಯಲ್ಲಿ ಗಾಂಧೀವಿಚಾರದ, ಭಾರತೀಯತೆಯ ಸ್ಥಾನದ ಮಹತ್ವದ ಬಗ್ಗೆ ಒರೆಹಚ್ಚಿದ್ದಾರೆ.

ಸ್ವಾತಂತ್ರ್ಯ ಚಳವಳಿಯ ಉಗ್ರತೆ, ಅಲ್ಲಿನ ಆದರ್ಶ, ಎದೆಯನ್ನು ಎತ್ತರಕ್ಕೆ ಎತ್ತುವ ಉನ್ನತ ಮೌಲ್ಯಗಳ ಬಗ್ಗೆ ಬಿಂಬಿರಿ ಬೀಗುವ ನಾವು ಸ್ವಾತಂತ್ರ್ಯನಂತರದ

ಭಾರತದ ಭೀಕರ ಸ್ಥಿತಿಗತಿಗಳನ್ನು ಕಂಡು ಜರ್ರನೆ ಕುಗ್ಗಿ ನೆಲಕ್ಕುರುಳುತ್ತೇವೆ. ಇಂಥ ಅದಲುಬದಲಾದ ಮೌಲ್ಯಗಳನ್ನು ಕುರಿತು 'ಅಂದು–ಇಂದು' ಎಂದು ಪ್ರೊ. ಎಲ್. ಟಿ. ಶರ್ಮಾ ಸ್ವಾತಂತ್ರ್ಯ ಚಳವಳಿಯ ಬಾನ್ನೆಗೆತದ ಇತಿಹಾಸವನ್ನು ಸೂಕ್ಷ್ಮವಾಗಿ ಅವಲೋಕಿಸಿದ್ದಾರೆ. ೧೯೪೭ರ ಹಿಂದೆ ಅಂದರೆ ಅಂದು ದಾದಾಬಾಯಿನವರೋಜಿ, ಗೋಖಲೆ, ತಿಲಕ್, ಗಾಂಧೀಜಿ ಮೊದಲಾದ ರಾಷ್ಟ್ರೀಯ ನಾಯಕರ ಸಾಧನೆ ಚಿಂತನೆಯ ಫಲವಾಗಿ ಒಡಮೂಡಿದ ಸ್ವಾತಂತ್ರ್ಯ, ಸ್ವರಾಷ್ಟ್ರ, ಸ್ವಾವಲಂಬನೆ, ಸ್ವಯಂ ಆಡಳಿತ, ಪ್ರಜಾತಂತ್ರ, ಸತ್ಯ, ಅಹಿಂಸೆ—ಮುಂತಾದ ಮೌಲ್ಯಗಳು ಸ್ವಾತಂತ್ರ್ಯಗಳಿಸಿದ ಶಕ್ತಿಗಳು. ಆದರೆ ೧೯೪೭ರ ಅನಂತರ ಅಂದರೆ ಇಂದು ಯಾವ ಮೌಲ್ಯಗಳೂ ಉಳಿದಿಲ್ಲ, ಅಲ್ಲ ಉಳಿಸಿಕೊಂಡಿಲ್ಲ! ೧೯೪೭ರ ಚಳವಳಿಯಲ್ಲಿ ಗಾಂಧೀಜಿ ಅವರ ಅಹಿಂಸೆ ಮೂಲೆಗುಂಪಾಗಿ ಹಿಂಸೆ ತಲೆ ಎತ್ತಿದ್ದನ್ನು ಇತಿಹಾಸದಲ್ಲಿ ಗುರುತಿಸುತ್ತಾರೆ. ಆ ಹಿಂಸೆ ನಿಂತಿಲ್ಲ, ಅದು ಪ್ರತ್ಯೇಕತಾವಾದ, ದೌರ್ಜನ್ಯ, ನಿರುದ್ಯೋಗ, ಬಡತನಗಳಲ್ಲಿ ಕಾಣಿಸಿಕೊಳ್ಳುತ್ತದೆ ಎಂಬ ಸುಡುವಾಸ್ತವದ ಕಡೆ ಕೈತೋರುತ್ತಾರೆ.

ಒಟ್ಟಾರೆ 'ಉತ್ತರ ಕನ್ನಡ ಜಿಲ್ಲೆಯಲ್ಲಿ ಸ್ವಾತಂತ್ರ ಚಳವಳಿ' ಒಂದು ಉತ್ತಮ ದಾಖಲೆ. ಇಲ್ಲಿ ಚಳವಳಿಯ ಸಿಡಿಲು ಗುಡುಗನ್ನು, ಹೋರಾಟಗಾರರ ಕಣ್ಣೀರಿನ ಕಥೆ, ರಾಷ್ಟ್ರೀಯ ನೆಲೆಯಲ್ಲಿ ಉತ್ತರಕನ್ನಡ ಜಿಲ್ಲೆ, ಜಗತ್ತಿನ ನೆಲದಲ್ಲಿ ಭಾರತೀಯ, ಗಾಂಧೀಜಿಯ ವಿಚಾರದ ಸ್ಥಾನದ ಮಹತ್ವ, ಗಾಂಧಿ ಮೌಲ್ಯದ ಅವಸಾನ–ಮುಂತಾದ ಅಂಶಗಳನ್ನು ವಿವರಿಸಿದೆ.

ಆದರೆ ಉತ್ತರ ಕನ್ನಡ ಜಿಲ್ಲೆಯ ತತ್ವನಿಷ್ಠ ಹೋರಾಟ ಕೇವಲ ತಿಲಕ, ಗಾಂಧೀಜಿಯರ ಪ್ರೇರಣೆಯಿಂದಲೇ ನಡೆಯಿತೋ ಅಥವಾ ಸ್ಥಳೀಯವಾಗಿ ಗಾಂಧಿಯಂಥ ತತ್ವನಿಷ್ಠ, ಮೌಲ್ಯಬದ್ಧ, ನಾಯಕರ ನೈತಿಕ ನೇತೃತ್ವ ಇತ್ತೊ? ಇದ್ದದ್ದೇ ಆದರೆ ಅಂಥ ನಾಯಕರ ನೈತಿಕ ಜೀವನವೇನು? ಅವರ ವೈಚಾರಿಕ ವ್ಯಕ್ತಿತ್ವವೇನು? ಅದು ಸ್ಥಳೀಯ ಜನಸಾಮಾನ್ಯರ ಮೇಲೆ ಬೀರಿದ ಪ್ರಭಾವವೇನು? ಎಂಬ ಪ್ರಶ್ನೆಗಳಿಗೆ ಈ ಕೃತಿಯಲ್ಲಿ ಉತ್ತರ ಸಿಗುವುದಿಲ್ಲ. ಸಿಕ್ಕರೂ ಅದು ಅಸ್ಪಷ್ಟ–ಹಾಗು ತುಂತುರು. ಆದರೆ ರಾಷ್ಟ್ರೀಯ ನಾಯಕರ ಮಾಣಿಕ್ಯದ ಬೆಳಕಿನಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಪ್ರಜ್ವಲಿಸಿದ ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸವನ್ನು ಪರಿಣಾಮಕಾರಿಯಾಗಿ ಚಿತ್ರಿಸಲಾಗಿದೆ.

—**ಬಿ. ವಿ. ವಸಂತಕುಮಾರ್**, ಎಂ.ಎ.

ಹಾಮಾನಾ ಹೊತ್ತಗೆಗಳು ; ಡಾ. ಹಾ.ಮಾ. ನಾಯಕರ ಕೃತಿಗಳ ವರ್ಗೀಕೃತ ವರ್ಣನಾತ್ಮಕ ಗ್ರಂಥಸೂಚಿ ; (ಸಂ.) ಡಾ. ಎಚ್. ಎಸ್. ಸುಜಾತಾ, ರೀಡರ್ ಕನ್ನಡ ವಿಭಾಗ, ಡಿ. ಬನುಮಯ್ಯ ಕಾಲೇಜು, ಮೈಸೂರು 570 024 ; ಪ್ರಥಮ ಮುದ್ರಣ, ಮೇ 1991 ; ಸುಹಾಸ ಪ್ರಕಟಣೆಗಳು, 53 ಸುಹಾಸ 6ನೇ ಬ್ಲಾಕ್, ಕುವೆಂಪು ನಗರ, ಮೈಸೂರು-570 023 ; ಡೆಮ್ಮಿ ಅಷ್ಟದಳ, 123+xx ; ಬೆಲೆ 80 ರೂ.

ಡಾ. ಎಚ್. ಎಸ್. ಸುಜಾತಾ ಅವರು ಖ್ಯಾತ ಬರಹಗಾರ ಡಾ. ಹಾ. ಮಾ. ನಾಯಕರ ಸಾಹಿತ್ಯವನ್ನು ಕುರಿತ ವರ್ಗೀಕೃತ ವರ್ಣನಾತ್ಮಕ ಗ್ರಂಥಸೂಚಿಯನ್ನು ಸಿದ್ಧಪಡಿಸಿದ್ದಾರೆ. ಅದು ವಿಮರ್ಶೆಗಾಗಿ ನನ್ನ ಬಳಿ ಬಂದಿರುವುದು ನನಗೆ ತುಂಬಾ ಸಂತೋಷ ತಂದಿದೆ. ಪುಸ್ತಕವನ್ನು ಕೈಯಲ್ಲಿ ಹಿಡಿದೊಡನೆ, ಅದನ್ನು ಓದುವ ಮೊದಲೇ ಅದರ ಸೌಂದರ್ಯ, ಮುದ್ರಣದ ಅಂದ ಹಾಗೂ ಆಕರ್ಷಕ ಮುಖಪುಟಗಳು ನನ್ನ ಮನ ಸೆಳೆದಿವೆ. ಒಂದು ವಾರ ಕಾಲ ಈ ಪುಸ್ತಕದಲ್ಲಿ ನಾನು ಮುಳುಗಿಹೋದೆ. ದೋಷರಹಿತವಾಗಿ ಹೊರಬಂದಿರುವ ಇದನ್ನು ನೋಡಿ ಸಂತೋಷಪಟ್ಟೆ. ಶೈಲಿ ಮತ್ತು ನಿರೂಪಣಾ ವಿಧಾನಗಳಿಂದ ಪುಸ್ತಕದ ಓದಿಕೆ ಒಂದು ಕಷ್ಟದ ಕೆಲಸವೆನಿಸಲೇ ಇಲ್ಲ ; ಅದೊಂದು ಸಂತಸದ ಕ್ರಿಯೆ ಆಯಿತು. ಗ್ರಂಥಪಾಲ ತರಬೇತಿಯೆಂಬುದೇನನ್ನೂ ಪಡೆಯದ ಒಬ್ಬ ಶೈಕ್ಷಣಿಕ ವ್ಯಕ್ತಿ ತನ್ನ ಈ ಕೃತಿರಚನೆಯಲ್ಲಿ ವೃತ್ತಿಪರರನ್ನು ಹಿಂದೆ ಹಾಕಿರುವುದನ್ನು ನೋಡಿ ಬೆರಗಾಗಿದ್ದೇನೆ. ಬಹುಶಃ ವೃತ್ತಿ ತರಬೇತಿಯ ಬಂಧನ ವಿಲ್ಲದ್ದರಿಂದಲೇ ಈ ಅದ್ಭುತ ಯಶಸ್ಸು ಅವರಿಗೆ ದೊರಕಿದೆ ಎಂದು ನಾನು ಭಾವಿಸುತ್ತೇನೆ.

ಈ ಚೊಕ್ಕವಾದ ಪುಸ್ತಕದ ಹಿನ್ನೆಲೆಯ ಬಗೆಗೆ ಎರಡು ಮಾತು. ಡಾ. ಹಾ. ಮಾ. ನಾಯಕರ ಮಾರ್ಗದರ್ಶನದಲ್ಲಿ ಎಂ. ಎಸ್. ಪುಟ್ಟಣ್ಣನವರ ಜೀವನ ಮತ್ತು ಕೃತಿಗಳನ್ನು ಕುರಿತ ಪ್ರೌಢಪ್ರಬಂಧವನ್ನು ಸಾದರ ಪಡಿಸಿದ್ದಾದ ಮೇಲೆ ಕಾಲೇಜಿನಲ್ಲಿ ಎಂದಿನ ಅಧ್ಯಾಪನ ವೃತ್ತಿಗೆ ಮರಳಿದ ಸುಜಾತಾ, ಫಲಿತಾಂಶಕ್ಕಾಗಿ ಕಾಯುತ್ತಿದ್ದ ದಿನಗಳು ಅವು. ಇದು 1980ರಲ್ಲಿನ ಸಂಗತಿ. ಕಣ್ಣಿನಲ್ಲಿನ ಒಂದು ಬಾಧೆಯಿಂದಾಗಿ ಅತೀವ ಯಾತನೆಯಿಂದ ನರಳುತ್ತಿದ್ದರೂ ಅದನ್ನು ಮರೆಯಲು ಸುಜಾತಾ ಅವರಿಗಿದ್ದ ಒಂದೇ ಒಂದು ದಾರಿ ವೈದ್ಯರ ಸಲಹೆಯನ್ನು ಕಡೆಗಣಿಸಿ ಹೊಸದಾಗಿ ಪ್ರಕಟವಾದ ಪುಸ್ತಕಗಳ ಮೇಲೆ ಕಣ್ಣಾಡಿಸುವುದಾಗಿತ್ತು. ಆಗ ಅವರಿಗೆ ಹಾ. ಮಾ. ನಾಯಕರು ಸಂಪಾದಿಸಿದ, ಆಗ ತಾನೇ ಪ್ರಕಟವಾದ 'ಗೋಕಾಕ ಗ್ರಂಥಾವಳಿ' ಕಣ್ಣಿಗೆ ಬಿತ್ತು. ಹಾ. ಮಾ. ನಾಯಕರು ಅನುಮತಿ ಕೊಟ್ಟಿದ್ದೇ ಆದ ಪಕ್ಷದಲ್ಲಿ ನಾಯಕರ ಕೃತಿಗಳಿಗೆ ಸಂಬಂಧಿಸಿದಂತೆ ವರ್ಗೀಕೃತ ವರ್ಣನಾತ್ಮಕ ಗ್ರಂಥಸೂಚಿಯನ್ನು ಸಿದ್ಧಪಡಿಸಬೇಕು ಎಂಬ ಆಸೆ ಬಲಗೊಂಡಿತು. ಮೊದಲಿಗೆ ನಾಯಕರು ಒಪ್ಪದೇ ಇದ್ದುದರಿಂದ ತೀವ್ರ ನಿರಾಶೆಯಾಯಿತು. ಆದರೆ ಮತ್ತೆ ಮತ್ತೆ ಒತ್ತಾಯಪಡಿಸಿ ಅವರನ್ನು ಒಪ್ಪಿಸಿದರು. ಒಪ್ಪಿಗೆ ಪಡೆದ ಮೇಲೆ ಸುಜಾತ ಪಟ್ಟ

ಸಂತಸ ಆಸ್ಪಿಷ್ಟಲ್ಲ, ತಕ್ಷಣವೇ ಕೆಲಸವನ್ನು ಪ್ರಾರಂಭಿಸಿದರು. ತನ್ನ ಗ್ರಂಥ ಸೂಚಿಯು ನಾಯಕರ ಕನ್ನಡ ಮತ್ತು ಇಂಗ್ಲಿಷ್ ಬರವಣಿಗೆಗಳೆಲ್ಲವನ್ನೂ ಹಾಗೂ ಅವರನ್ನು ಕುರಿತು ಪ್ರಕಟವಾಗಿರುವ ಕೃತಿಗಳನ್ನೂ ಒಳಗೊಳ್ಳಬೇಕೆಂದು ನಿರ್ಧರಿಸಿದರು. ನಿಯತಕಾಲಿಕೆಗಳಲ್ಲಿ ಆಗಾಗ ಪ್ರಕಟವಾದ ನಾಯಕರ ಲೇಖನ ಗಳನ್ನು ಈ ಸೂಚಿಯಲ್ಲಿ ಸೇರಿಸಲಿಲ್ಲ.

ಒಂದುನೂರ ಹದಿನೈದು ಕನ್ನಡ ಕೃತಿಗಳಲ್ಲಿ ಮೂರು ಕತೆ, ವ್ಯಕ್ತಿಚಿತ್ರ, ಪ್ರಬಂಧಗಳು ; ಒಂದು ಜೀವನ ಚರಿತ್ರೆ ; ಮೂರು ಬಾಲಸಾಹಿತ್ಯ ; ಹದಿನಾಲ್ಕು ವಿಚಾರ ವಿಮರ್ಶೆ ; ಹದಿಮೂರು ಅಂಕಣಬರಹ, ಆಕಾಶವಾಣಿ ಚಿಂತನ ; ಮೂರು ಅನುವಾದ ; ನಲವತ್ತೊಂಬತ್ತು ಸಂಪಾದಿತ ; ಹದಿಮೂರು ಪಠ್ಯಪುಸ್ತಕಗಳು ; ಹದಿನಾರು ಸೂಚಿ ಕೋಶ, ಪರಾಮರ್ಶನ ಕೃತಿಗಳು. ಐದು ಇಂಗ್ಲಿಷ್ ಕೃತಿಗಳಲ್ಲಿ ನಾಲ್ಕು ಸಂಪಾದಿತ ಮತ್ತು ಒಂದು ಸಂಶೋಧನೆ. ಇತರ ಭಾಷೆಗಳಿಗೆ ಹೋಗಿರುವ ನಾಯಕರ ಮೂರು ಕೃತಿಗಳು ಮತ್ತು ಅವರನ್ನು ಕುರಿತ ಒಂದು ಕನ್ನಡ ಕೃತಿ ಇವುಗಳೂ ಇಲ್ಲಿ ಸೇರಿವೆ. ಒಟ್ಟು ಹನ್ನೆರಡು ವಿಭಾಗಗಳಲ್ಲಿ ಒಂದುನೂರಇಪ್ಪತ್ತ ನಾಲ್ಕು ಗ್ರಂಥಗಳನ್ನು ವರ್ಗೀಕರಿಸಲಾಗಿದೆ. ಗ್ರಂಥಸೂಚಿಯ ವಿನ್ಯಾಸ ಹದಿಮೂರು ಮುಖ್ಯ ಶೀರ್ಷಿಕೆಗಳಲ್ಲೂ ಹತ್ತು ಅನುಬಂಧಗಳಲ್ಲೂ ಇರುವಂತಹದು ಹಾಗೂ ವೃತ್ತಿ ಸೂಚಿಕಾರರಿಗೆ ಪ್ರತ್ಯಕ್ಷ ನಿದರ್ಶನದಂತೆ ಬೋಧಪ್ರದವಾಗಿಯೂ ಇದೆ. ಅದೃಷ್ಟವಶಾತ್ ಡಾ. ಸುಜಾತಾ ವೃತ್ತಿಪರ 'ತರಬೇತಿ ಪಡೆದ' ಗ್ರಂಥಪಾಲಿಕೆಯಲ್ಲ. ಆತ್ಮೀಯತೆಯಿಲ್ಲದ, ಶುಷ್ಕವಾದ, ನೀರಸವಾದ ಮಾಮೂಲು ಯಾಂತ್ರಿಕ ಸೂಚಿ ಯಾಗುವುದನ್ನು ಅವರು ತಪ್ಪಿಸಿದ್ದಾರೆ.

ಒಬ್ಬ ಒಳ್ಳೆಯ ಲೇಖಕನ ವರ್ಗೀಕೃತ ವರ್ಣನಾತ್ಮಕ ಗ್ರಂಥಸೂಚಿಯೊನ್ನು ವುದು ಕೇವಲ ವ್ಯವಸ್ಥಿತ ಅಂಶೀಕರಣವೋ ಸಂಕೇತಗಳ ಗೋಜಲೋ ಆಗುವುದಿಲ್ಲ ; ಬದಲಿಗೆ ಅದೊಂದು ಹೊಸ ದರ್ಶನ ಒದಗಿಸುವ ನಿರೂಪಣೆಯಾಗುತ್ತದೆ; ಗೌರವಾನ್ವಿತ ಮೆಚ್ಚುಗೆ, ಬೆಚ್ಚನೆಯ ಆತ್ಮೀಯತೆಗಳಿಂದ ತುಂಬಿದ ವೃತ್ತಾಂತವಾಗುತ್ತದೆ ಎಂಬುದನ್ನು ಸುಜಾತ ಅತ್ಯಂತ ಯಶಸ್ವಿಯಾಗಿ ತೋರಿಸಿಕೊಟ್ಟಿದ್ದಾರೆ. ಇಲ್ಲಿನ ವರ್ಣನೆಗಳು ಹೆಚ್ಚಿನ ಅರ್ಥವಂತಿಕೆಯನ್ನು ಒಳಗೊಂಡಿವೆ.

ಯಾವ ವೃತ್ತಿಪರ ಗ್ರಂಥಸೂಚೀಕಾರನೂ ಸೊಗಸಾದ ಅರ್ಪಣೆಯ ಕವಿತೆ ಯೊಂದಿಗೆ ತನ್ನ ಕೃತಿಯನ್ನು ಪ್ರಾರಂಭ ಮಾಡುತ್ತಿರಲಿಲ್ಲ. ಹಿತಕರವೂ ಉಚಿತವೂ ಆದ ಈ ಕೆಲವು ಸಾಲುಗಳನ್ನು ಆಲಿಸಿ :

> "ಚಿನ್ನದ ಅಂತಃಕರಣಕ್ಕೆ ಉಕ್ಕಿನ ನಿಶ್ಚಯದ ಜೊತೆ,
> ವಿಲಕ್ಷಣವಲ್ಲದ ವಿರಳ ಹೊಂದಿಕೆ.

ಅಪರೂಪದ ಗುಣ ಕಂಡಾಗ ಮುಕ್ತಮನದ ನಿರ್ಮಲ ಪ್ರಶಂಸೆ,
....
ಕಣ್ಣ ಹೊಳಪಿನಲಿ ಸಂತಸವ ಅಭಿವ್ಯಕ್ತಿಸುವ ಚಾತುರ್ಯ,
ಅಂಗೀಕಾರದ ಮುದ್ರೆ ಒತ್ತದಿದ್ದಾಗ ಮುಖ ನಿರ್ವಿಕಾರ,
....
ಶ್ರೀಮದ್ಗಾಂಭೀರ್ಯದ ತೆರೆ ಸರಿಸಿ ಇಣುಕುನೋಟ ಬೀರಿದವರು
ಮೂಕವಿಸ್ಮಿತರು. ಸಹಜ ಚಿಮ್ಮುವ ಆದರ, ವಿಶ್ವಾಸಗಳ ಕಂಡಾಗ,
....
ನಾರು, ಸಿಪ್ಪೆಗಳ ನಡುವೆ ಅಡಗಿರುವ ತೆಂಗಿನ ಸಿಹಿನೀರು, ಕೊಬರಿಗಳ ನೆನಪು.
(ತೆಂಗಿನ ಸಿಹಿನೀರು ಕೊಬರಿ)

ಈ ಗ್ರಂಥಸೂಚಿಗೆ ವಿಶೇಷ ರಂಗು ಬಂದಿರುವುದು ವಸ್ತುವಿಗೂ ಸಂಪಾದಕರಿಗೂ ನಡುವೆ ನಿರ್ವಿಹಿತವಾದ ಆತ್ಮೀಯ ಸಂಬಂಧದಿಂದ.

ಆಯಾ ನಿರ್ದಿಷ್ಟವರ್ಗದಲ್ಲಿ ಏನು ಸೇರಿದೆ ಎಂಬುದರ ಬಗೆಗೆ ಕೊಟ್ಟಿರುವ ಸಾರವತ್ತಾದ, ಅಡಕವಾದ ಹಾಗೂ ಬಿಗಿಯಾಗಿ ಹೆಣೆದ ನಿರೂಪಣೆಗಳು ಈ ಕೃತಿಯ ಒಂದು ಹೆಚ್ಚಿನ ವಿಶೇಷ. ನನಗೆ ಆಶ್ಚರ್ಯವಾಗುವುದು ವಿವರಕ್ಕೆ ನೀಡಿರುವ ಮಹತ್ತ್ವ ಮತ್ತು ನಿರೂಪಣೆಯ ಖಚಿತತೆಗಳಿಂದ.

ಶ್ರೀ ಟಿ. ವಿ. ವೆಂಕಟರಮಣಯ್ಯನವರು ಈ ಕೃತಿಯ ವಿಮರ್ಶೆ ಮಾಡುತ್ತಾ 'ಗ್ರಂಥಲೋಕ' (ಸಂಪುಟ 15, ಸಂಚಿಕೆ 9)ದಲ್ಲಿ ಹೀಗೆ ಹೇಳುತ್ತಾರೆ, "ಏಕವ್ಯಕ್ತಿ ಗ್ರಂಥಸೂಚಿಗಳ ಸಾಲಿನಲ್ಲಿ ನಿಸ್ಸಂಶಯವಾಗಿ ಒಂದು ವಿಶಿಷ್ಟ ಹಾಗೂ ಮಾದರಿ ಸೂಚಿಯಾಗಿ ನಿಲ್ಲುತ್ತದೆ. ಗ್ರಂಥಾಲಯಶಾಸ್ತ್ರ ಪರಿಣತರು ತಮ್ಮ ಕ್ಷೇತ್ರಕ್ಕೆ ವಿದ್ವತ್ ಲೋಕದವರು ಕಾಲಿರಿಸುತ್ತಿರುವುದರಿಂದ ಮುಜುಗರಪಟ್ಟುಕೊಂಡಾರು! ನಿಜವಾಗಿ ಸಂಪಾದಕಿ ವೃತ್ತಿ ಸೂಚೀಕಾರರ ಅಸೂಯೆಗೆ ಪಾತ್ರರಾಗಿದ್ದಾರೆ!"

ನಾನು ಈ ಅಭಿಪ್ರಾಯವನ್ನು ಸಂಪೂರ್ಣವಾಗಿ ಅನುಮೋದಿಸುತ್ತೇನೆ. ನಾನು ಸುಮಾರು ಐವತ್ತು ವರ್ಷಗಳಿಗಿಂತಲೂ ಹೆಚ್ಚುಕಾಲ ಈ ಕ್ಷೇತ್ರದಲ್ಲಿದ್ದೇನೆ. ಗ್ರಂಥಸೂಚಿ ನನ್ನ ಪ್ರಮುಖ ಆಸಕ್ತಿ. ವಸ್ತು ಮತ್ತು ನಿರೂಪಣೆ ಎರಡೂ ಹೀಗೆ ಅತ್ಯುನ್ನತ ಹಂತವನ್ನು ತಲುಪಿರುವ ಕೃತಿಯನ್ನು ನಾನು ನೋಡಿರುವುದು ತುಂಬ ಅಪರೂಪ. ಇಲ್ಲಿ ಆಚಾರವೂ ಕೆಟ್ಟಿಲ್ಲ, ಆಕಾರವೂ ಕೆಟ್ಟಿಲ್ಲ. ವಿದ್ವತ್ಪೂರ್ಣವಾದ ವಸ್ತು, ಸುಂದರ ಮುದ್ರಣ, ಅತ್ಯುತ್ತಮವಾದ ರಕ್ಷಾಪುಟ ವಿನ್ಯಾಸ, ಮೋಹಕವಾದ ವರ್ಣಮಯ ಮುಖಚಿತ್ರ!

ಈ ಸಾಧನೆಗೆ ಕನ್ನಡ ಸಾಹಿತ್ಯ ಪರಿಷತ್ತೋ ಮೈಸೂರು ವಿಶ್ವವಿದ್ಯಾನಿಲಯವೋ ಪ್ರಶಸ್ತಿ ಪತ್ರವನ್ನೂ ಚಿನ್ನದ ಪದಕವನ್ನೂ ನೀಡಿ ಪುರಸ್ಕರಿಸಬೇಕು ಎಂದು ನನ್ನ ಅಭಿಪ್ರಾಯ.

ಕಡೆಯಲ್ಲಿ ಸಂಪಾದಕಿಯನ್ನು ಕುರಿತು ಕೆಲವು ಮಾತುಗಳನ್ನು ಹೇಳಬಯಸು ತ್ತೇನೆ. ಮೈಸೂರು ವಿಶ್ವವಿದ್ಯಾನಿಲಯದಿಂದ ಡಾಕ್ಟೊರೇಟ್ ಪಡೆದ ಪ್ರೌಢಪ್ರಬಂಧ ವಲ್ಲದೆ ಡಾ. ಸಾರ್ಲ ವೆಂಕಟೇಶ್ವರ ರಾವ್ ಅವರ ತೆಲುಗು ನಾಟಕ 'ಸೀತಜೋಸ್ಯಂ'ನ ಕನ್ನಡ ಅನುವಾದವನ್ನು ಅವರು ಪ್ರಕಟಿಸಿದ್ದಾರೆ. ಈ ಅನುವಾದಕ್ಕೆ ಎ. ಎನ್. ಮೂರ್ತಿರಾವ್, ಎಸ್. ವಿ. ಪರಮೇಶ್ವರ ಭಟ್ಟ, ರಂ. ಶ್ರೀ. ಮುಗಳಿ, ನಿರಂಜನ, ಶ್ರೀನಿವಾಸ ಹಾವನೂರ, ಪ್ರಧಾನ್ ಗುರುದತ್ತ ಮತ್ತು ಪಿ. ಎಸ್. ಶ್ರೀಧರಮೂರ್ತಿ ಮೊದಲಾದ ಪ್ರಖ್ಯಾತ ಬರಹಗಾರರ ಪ್ರಶಂಸೆ ದೊರೆತಿದೆ. ಗೌರೀಶ ಕಾಯ್ಕಿಣಿಯವರು ಈ ಪುಸ್ತಕವನ್ನು ಕುರಿತು "ತುಂಬ ಅಚ್ಚುಕಟ್ಟಾಗಿದೆ, ಸಹಜವಾಗಿದೆ. ಶ್ರೀ ಸಾರ್ಲರೇ ಕನ್ನಡದಲ್ಲಿ ಬರೆದಂತೆ ಇದೆ, ಇದು ಅನುವಾದವೆಂದು ಅನಿಸುವುದಿಲ್ಲ. ಇದು ಅನುವಾದ ಕೌಶಲ್ಯದ ಯಥಾರ್ಥ ಪ್ರಶಸ್ತಿ ... ಕನ್ನಡ ಶೈಲಿಗೆ ಹೊರತಾದ ವಾಕ್‌ಪ್ರಯೋಗಗಳು ಎಲ್ಲಿಯೂ ಕಣ್ಣು ಕುಕ್ಕುವುದಿಲ್ಲ" ಎಂದು ಹೇಳುತ್ತಾರೆ. ಪುಸ್ತಕಕ್ಕೆ ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿಯ ಶ್ರೇಷ್ಠ ಸೃಜನಶೀಲ ಅನುವಾದ ಪ್ರಶಸ್ತಿ ದೊರೆತಿದ್ದು ಅಚ್ಚರಿಯಲ್ಲ.

ಒಂದು ಪ್ರಸಂಗವನ್ನು ಉಲ್ಲೇಖಿಸಿ ಈ ವಿಮರ್ಶೆಯನ್ನು ಮುಗಿಸುತ್ತೇನೆ. ತೆರೆದ ಹೃದಯದ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡು ಆಸ್ಪತ್ರೆಯಿಂದ ಮನೆಗೆ ಹಿಂದಿರುಗು ತ್ತಿದ್ದ ನನ್ನ ಮಿತ್ರರೂ ಹಿಂದೆ ವಿದ್ಯಾರ್ಥಿಯಾಗಿದ್ದವರೂ ಆದ ಶ್ರೀ ಎಚ್. ವೈ. ಶಾರದಾಪ್ರಸಾದರು, ನಾನು ಮೆಟ್ಟಿಲು ಹತ್ತಿ ಹೋಗಲಾಗದಿದ್ದ ಸಂದರ್ಭವನ್ನು ತಿಳಿದು ಅವರೇ ಬಂದರು. ಅಲ್ಪಾರೋಗ್ಯದ ಅವರು ತಾನು ಕ್ಷೇಮವಾಗಿರುವುದನ್ನು ತಿಳಿಸಲು ಬಂದಿದ್ದರು. ಆಗ ನಾನು ಡಾ. ಸುಜಾತಾ ಅವರ ಗ್ರಂಥಸೂಚಿಯನ್ನು ನೋಡುತ್ತಿದ್ದೆ. ಅವರೆಂದರು, "ನಾಯಕರು ಬಹು ಶ್ರೇಷ್ಠ ಬರಹಗಾರರು. ಅದೂ ಅಲ್ಲದೆ ಯಾರ ವಿಷಯದಲ್ಲಿಯೂ ಒಂದು ಕುಹಕ ಮಾತೂ ಆಡಿಲ್ಲ."

ಇದು ಒಬ್ಬ ಸಜ್ಜನ ಒಬ್ಬ ಸಮರ್ಥ ಲೇಖಕನಿಗೆ ನೀಡಿದ ಅರ್ಹಪ್ರಶಂಸೆ ಎಂದು ನನಗೆನ್ನಿಸಿತು.

ಇಂಗ್ಲಿಷ್ ಮೂಲ : **ಡಾ. ಬಿ. ಎಸ್. ಕೇಶವನ್**
ಅನುವಾದ : **ಶ್ರೀ ಆರ್. ಎಲ್. ಅನಂತರಾಮಯ್ಯ**

ಕಾಳಿದಾಸನ ಕೃತಿಗಳು : ಪ್ರೊ. ಎಸ್. ವಿ. ಪರಮೇಶ್ವರಭಟ್ಟ, ಕನ್ನಡ ವಿಭಾಗ, ಮುಂಬಯಿ ವಿಶ್ವವಿದ್ಯಾನಿಲಯ, 1991, ಪು. 80 ಬೆಲೆ 20–00 ರೂ. ಗಳು.

ಪ್ರೊ|| ಎಸ್. ವಿ. ಪರಮೇಶ್ವರಭಟ್ಟರ 'ಕಾಳಿದಾಸನ ಕೃತಿಗಳು' ಎಂಬುದು ಮೇಘದೂತ, ಕುಮಾರಸಂಭವ, ಅಭಿಜ್ಞಾನ ಶಾಕುಂತಲ ಎಂಬೀ ಕೃತಿಗಳಿಗೆ

ಸಂಬಂಧಿಸಿದಂತೆ ಒಂದೊಂದು ವಿಮರ್ಶಾತ್ಮಕ ಬರೆಹಗಳನ್ನೊಳಗೊಂಡ ಗ್ರಂಥ. ಉಪನ್ಯಾಸರೂಪದಲ್ಲಿ ನಿರೂಪಿತವಾದ ಸಂಗತಿಗಳು ಇಲ್ಲಿ ಲೇಖನಗಳಾಗಿ ಅಣಿಗೊಂಡಿವೆ.

ಕೃತಿಯ ಆರಂಭದಲ್ಲಿರುವ 'ಮೇಘದೂತ'ದಲ್ಲಿ ಕಾಳಿದಾಸನ ಕಲಾವಿಲಾಸ' ಎಂಬುದು ಈ ಸಂಕಲನದ ವಿಸ್ತಾರವಾದ ಬರೆಹ. 'ಮೇಘದೂತ' ಕಾವ್ಯವನ್ನು ಆಸ್ವಾದಿಸಲು ಬೇಕಾದ ಹಿನ್ನೆಲೆಯನ್ನು ಲೇಖಕರು ಆರಂಭದಲ್ಲಿ ಕಟ್ಟಿಕೊಟ್ಟಿದ್ದಾರೆ. ಮೂಲಕೃತಿಯ ಒಂದೊಂದೂ ಪದ್ಯದ ಭಾವವನ್ನು ತಿಳಿಯಾದ ಗದ್ಯದಲ್ಲಿ ಹೇಳಿ, ಒಂದೊಂದರಲ್ಲೂ ತೋರಿಬರುವ ವೈಶಿಷ್ಟ್ಯಗಳನ್ನು ವಿಶ್ಲೇಷಣೆಮಾಡಿದ್ದಾರೆ. ಹೀಗಾಗಿ ಒಟ್ಟು ಲೇಖನವು ಪ್ರಾಯೋಗಿಕ ವಿಮರ್ಶೆಯ ಸ್ವರೂಪವನ್ನು ತಾಳಿಕೊಂಡಿದೆ. "ಕಾಳಿದಾಸನು ತನ್ನ ಪೂರ್ವಮೇಘದಲ್ಲಿ ಪ್ರಕೃತಿಯ ದೃಶ್ಯವೈವಿಧ್ಯಗಳನ್ನು ಮುಖ್ಯವಾಗಿ ಚಿತ್ರದಂತೆ ಚಿತ್ರಿಸಿದ್ದಾನೆ. ಅದಕ್ಕೆ ಚೌಕಟ್ಟು ಎಂಬಂತೆ ಮಾನವ ಹೃದಯದ ವ್ಯಾಪಾರವನ್ನು ಚಿತ್ರಿಸಿದ್ದಾನೆ. ಉತ್ತರಮೇಘದಲ್ಲಿಯಾದರೋ ವಿರಹಿನಿಯಾದ ಯಕ್ಷಸತಿಯ ಮನೋವೈಫಲ್ಯಗನ್ನು ಮುಖ್ಯ ಚಿತ್ರವನ್ನಾಗಿ ಚಿತ್ರಿಸಿ ಅದಕ್ಕೆ ಚೌಕಟ್ಟು ಎಂಬಂತೆ ಅಲಕಾನಗರದ ಸೌಂದರ್ಯ ವಿಶೇಷಗಳನ್ನು ಚಿತ್ರಿಸಿದ್ದಾನೆ. ಒಟ್ಟಿನಲ್ಲಿ ಇದೊಂದು ಪ್ರೇಮಸಂಹಿತೆ ; ಇದೊಂದು ಸ್ನೇಹಸೂಕ್ತ. ಮಾನವನಲ್ಲಿಯೂ ಪ್ರಕೃತಿಯಲ್ಲಿಯೂ ಅಭೇದಭಾವವನ್ನು ಕಲ್ಪಿಸಿ ಅವೆರಡೂ ಒಂದಕ್ಕೊಂದು ಪೂರಕವಾಗಿ ತಮ್ಮ ತಮ್ಮ ಕಲ್ಯಾಣವನ್ನು ಸಾಧಿಸಿಕೊಳ್ಳುತ್ತಿವೆ ಎಂಬುದನ್ನು ತೋರಿಸಿದ್ದಾನೆ" ಎನ್ನುವ ಮಾತುಗಳಲ್ಲಿ ಪರಮೇಶ್ವರಭಟ್ಟರು 'ಮೇಘದೂತ'ದ ಕಾವ್ಯೋದ್ದೇಶವನ್ನು ಸಮರ್ಥವಾಗಿ ಹಿಡಿದಿಟ್ಟಿದ್ದಾರೆ. ಈ ಕಾವ್ಯೋದ್ದೇಶವು ಹೇಗೆ ಸಫಲವಾಗಿದೆಯೆಂಬುದನ್ನು ಪುಷ್ಟೀಕರಿಸುವ ಬಗೆಯಲ್ಲಿ ಒಟ್ಟು ಲೇಖನ ರೂಪುಗೊಂಡಿದೆ.

'ಕುಮಾರಸಂಭವ'ದಲ್ಲಿ ಕಾಮದಹನ ಚಿತ್ರದ ಅಂತರಾರ್ಥ' ಎಂಬುದು ಎರಡನೆಯ ಲೇಖನ. "ಶರೀರಲಾವಣ್ಯ, ತೋರಿಕೆಯ ವಿಲಾಸ, ಬಾಹ್ಯಸೌಂದರ್ಯ, ಭೋಗಪರಿಸರ ಇವುಗಳ ನೆರವನ್ನಷ್ಟೇ ಕಾಮ ಅಪೇಕ್ಷಿಸುವುದು. ಈ ಕಾಮಕ್ಕೆ ಇದರ ಇಷ್ಟಾರ್ಥಪೂರ್ಣವಾಗುವುದಕ್ಕೆ ಸುಳ್ಳು, ಮೋಸ, ಒಳಸಂಚು, ಪಿತೂರಿ ಇವು ಅಗತ್ಯ. ಈ ಕಾಮವನ್ನೇ ಈಶ್ವರನು ಸುಟ್ಟಿದ್ದು. ಜೀವನವಿಕಾಸದ ಹಾದಿಯಲ್ಲಿ ಕಂಟಕವಾಗಿ ಬರುವ ಈ ಕಾಮವನ್ನು ಸುಟ್ಟಿಲ್ಲದೆ ನಿರ್ಮಲ ಪ್ರೇಮ ನಮಗೆ ಅನುಭವವೇದ್ಯವಾಗುವುದಿಲ್ಲ. ನಮ್ಮ ದಿನನಿತ್ಯದ ಸಾವಿರ ಸಾವಿರ ಪ್ರಸಂಗಗಳಲ್ಲಿ ಇಂತಹ ವ್ಯಕ್ತಿಯ ಮಣ್ಣಿನ ಕಾಮಣ್ಣನ ಆಟದ ಕುಹಕ ಕುತ್ಸಿತ ಕುಚೋದ್ಯಗಳೇ ಹೆಚ್ಚು. ಮುಕ್ಕಣ್ಣನು ಸುಟ್ಟುಬೂದಿಮಾಡಿದ್ದು ಈ ಕುಹಕದ ಮುಕ್ಕಣ್ಣನನ್ನು" ಎಂದು ಆ ಪ್ರಸಂಗದ ರಹಸ್ಯಾರ್ಥವನ್ನು ಉದ್ಘಾಟಿಸಿದ್ದಾರೆ. ಒಟ್ಟು ಪ್ರಸಂಗವು ಆ ಅಂತರಾರ್ಥವನ್ನು ಪೋಷಿಸುವ ಪ್ರತಿಮೆಯಾಗಿ ಮೂಡಿಬಂದಿರುವ ಬಗೆಯನ್ನು ವಿವರವಿವರವಾಗಿ ಪರಿಶೀಲನೆಮಾಡಿದ್ದಾರೆ. ತಪಸ್ಸಿನ ಅಗ್ನಿಯಲ್ಲಿ ಪಾರ್ವತಿಯ ಪ್ರೇಮದ

ಅಪರಂಜಿಯು ಕಾಮದ ಕಾಳಿಕೆಯನ್ನು ಕಳೆದುಕೊಂಡು ಪರಿಶುದ್ಧವಾದ ಬಗೆಯನ್ನು ಪರಮೇಶ್ವರಭಟ್ಟರು ಮನಮುಟ್ಟುವಂತೆ ವಿಮರ್ಶಿಸಿದ್ದಾರೆ. ಶಿವಪಾರ್ವತಿಯರ ಮಿಲನದಲ್ಲಿ ಪ್ರೇಮಾದ್ವೈತದ ಪವಿತ್ರ ಭಾವನೆಯಿರುವುದನ್ನು ಎತ್ತಿ ಹಿಡಿದಿದ್ದಾರೆ.

ಕಾಳಿದಾಸನ 'ಅಭಿಜ್ಞಾನ ಶಾಕುಂತಲ' ನಾಟಕದ ವಿವರಣಾತ್ಮಕ ಪರಿಶೀಲನೆ 'ಅಭಿಜ್ಞಾನ ಶಾಕುಂತಲದಲ್ಲಿ ಕಾಳಿದಾಸನ ಹಿರಿಮೆ' ಎಂಬ ಕೊನೆಯ ಲೇಖನದಲ್ಲಿದೆ. ಕಾಳಿದಾಸನ ವಿಶಿಷ್ಟವೂ ಬಹುಮುಖವೂ ಶ್ರೀಮಂತವೂ ಆದ ಪ್ರತಿಭೆ ಈ ನಾಟಕದಲ್ಲಿ ಉದ್ದಕ್ಕೂ ಹರಡಿಕೊಂಡಿರುವ ಪರಿಯನ್ನು ಲೇಖಕರು ಒಂದೊಂದೂ ಅಂಕದ ಘಟನಾವಳಿಗಳ ಆತ್ಮೀಯ ಚಿತ್ರಣದ ಮೂಲಕ ತೋರಿಸಿಕೊಟ್ಟಿದ್ದಾರೆ. ಆ ನಾಟಕದ ರಸಸ್ಥಾನಗಳನ್ನು ಗುರುತಿಸಿಕೊಟ್ಟಿದ್ದಾರೆ. ಪಾತ್ರಪೋಷಣೆ, ಸಂಭಾಷಣೆ, ಸನ್ನಿವೇಶ ನಿರ್ಮಾಣ, ಮಾನವ ಸ್ವಭಾವಗಳ ಸಂಕೀರ್ಣಚಿತ್ರಣ ಮುಂತಾದ ವಿವರಗಳಲ್ಲಿ ಕಾಳಿದಾಸನ ಪ್ರತಿಭಾಶ್ರೀ ಕ್ರಿಯಾಶೀಲವಾಗಿರುವ ಬಗೆಯನ್ನು ಸೂಕ್ಷ್ಮವಾಗಿ ವಿವೇಚಿಸಿದ್ದಾರೆ. ಕನ್ನಡಿಯಲ್ಲಿ ಆನೆಯನ್ನು ಅಡಕಮಾಡುವಂತೆ ಶಾಕುಂತಲ ನಾಟಕದ ವೈಶಿಷ್ಟ್ಯಗಳನ್ನು ಸಂಪೂರ್ಣವಾಗಿ ವಿಮರ್ಶಿಸಿರುವ ಸಾರ್ಥಕ ಪ್ರಯತ್ನವಿದು.

ಪ್ರೊ. ಎಸ್. ವಿ. ಪರಮೇಶ್ವರಭಟ್ಟರು ಕಾಳಿದಾಸನ ಕೃತಿಶ್ರೇಣಿಯನ್ನು ಅಂಗೈನೆಲ್ಲಿಯಾಗಿಸಿಕೊಂಡವರು. ಆತನ ಕೃತಿಗಳನ್ನು ಸಮಗ್ರವಾಗಿ ಕನ್ನಡಕ್ಕೆ ಅನುವಾದಿಸಿಕೊಟ್ಟವರು. ಪರಕಾಯ ಪ್ರವೇಶ ಅಥವಾ ಪರಹೃದಯಪ್ರವೇಶವೆಂಬ ಕೌಶಲದಿಂದ ಕಾಳಿದಾಸನ ಭಾವವಿಲಾಸವನ್ನೆಲ್ಲ ಹೊಸಗನ್ನಡಕ್ಕೆ ಹೊತ್ತು ತಂದವರು. ಈ ಲೇಖನಗಳಲ್ಲಿ ಅವರು ಆ ಮಹಾಕವಿಯ ಹೃದಯಾಂತರಾಳವನ್ನು ಹೊಕ್ಕು, ಕವಿಯ ಆಶಯಗಳನ್ನು ಸಮರ್ಪಕವಾಗಿ ಹೊರಗೆಡವಿದ್ದಾರೆ. ಇಲ್ಲಿನ ಬರೆಹಗಳಲ್ಲಿ ಪರಮೇಶ್ವರಭಟ್ಟರ ಆಳವಾದ ಪಾಂಡಿತ್ಯ, ಕಾಳಿದಾಸನ ಕೃತಿಗಳ ಮೇಲೆ ಅವರಿಗಿರುವ ಪ್ರಭುತ್ವ, ಅವರ ಕವಿಹೃದಯ, ವೈಶಿಷ್ಟ್ಯಗಳನ್ನು ಗುರುತಿಸುವ ವಿಮರ್ಶನ ಕೌಶಲ ಮುಂತಾದ ಹಿರಿಯ ಗುಣಗಳು ವ್ಯಕ್ತವಾಗಿವೆ. ಕಾಳಿದಾಸನ ಕೃತಿಗಳನ್ನು ಅಧ್ಯಯನ ಮಾಡುವ ಸಹೃದಯರಿಗೆ ಇದೊಂದು ಮಣಿದರ್ಪಣವೆನ್ನಬಹುದು.

—ಡಾ|| ಕೆ. ಅನಂತರಾಮು

ಶಾಸನಗಳಲ್ಲಿ ಕರ್ನಾಟಕದ ಸ್ತ್ರೀಸಮಾಜ, ಲೇ: ಡಾ. ಚೆನ್ನಕ್ಕ ಎಲಿಗಾರ; ಪ್ರ: ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ; ಪು. ೩೦೮ + xxviii + ೧೬ ಪ್ಲೇ; ಬೆಲೆ: ರೂ. ೯೫–೦೦; ೧೯೮೦.

ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ಸಾದರಪಡಿಸಿದ ಮಹಾಪ್ರಬಂಧ. ಡಾ. ಎಂ. ಚಿದಾನಂದಮೂರ್ತಿಗಳ "ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ" ಕೃತಿಯ ಮಾರ್ಗದಲ್ಲಿ ಹುಟ್ಟಿದ ಹೊಸಕೃತಿ. ಅದರ

ಒಂದು ಅಧ್ಯಾಯ ಈ ಮಹಾಪ್ರಬಂಧದ ಪೂರ್ಣ ಹರಹು-ವಿಸ್ತಾರ . ಡಾ. ಚಿದಾನಂದ ಮೂರ್ತಿಗಳ ಗ್ರಂಥದ xivನೆಯ ಅಧ್ಯಾಯ " ಸಾಮಾಜಿಕ ವ್ಯವಸ್ಥೆ " : ಸಮಾಜದಲ್ಲಿ ಸ್ತ್ರೀಯರಿಗಿದ್ದ ಸ್ಥಾನ-ಬಾಲ್ಯ-ವಿದ್ಯಾಭ್ಯಾಸ-ವಿವಾಹ-ಬಹುಪತ್ನೀಕತ್ವ-ಗೃಹಿಣಿ-ವಿಧವೆ-ಸ್ತ್ರೀಯರು ಮತ್ತು ಧರ್ಮ-ಸ್ತ್ರೀಯರು ಮತ್ತು ರಾಜಕೀಯ-ದೇವದಾಸಿ ಪದ್ಧತಿ-ಸ್ತ್ರೀಯರು ಮತ್ತು ಸಾಹಿತ್ಯ-ಜಾತಿ ಪದ್ಧತಿ-ಬ್ರಾಹ್ಮಣರು-ಶಿಲ್ಪಿಗಳು-ಇತರ ಜಾತಿಗಳು-ಕೆಲವು ಸಾರ್ವಜನಿಕ ಚಟುವಟಿಕೆಗಳು : ಆರಾಮ (ಸಾರ್ವಜನಿಕ ಉದ್ಯಾನ), ಅಗ್ಗಿಷ್ಟಗೆ, ಅರವಟ್ಟಿಗೆ, ಸತ್ರ, ತಟಾಕನಿರ್ಮಾಣ—ಈ ಸಂಗತಿಗಳೇ ಪ್ರಸ್ತುತ ಪುಸ್ತಕದ ವಸ್ತು. ಈ ವಿಷಯಗಳನ್ನೇ ಡಾ. ಚೆನ್ನಕ್ಕ ೧೪ ಅಧ್ಯಾಯಗಳಲ್ಲಿ ವಿಸ್ತರಿಸಿ ಬರೆದಿದ್ದಾರೆ ; ಕಾಲಪರಿಮಿತಿಯನ್ನು ಕ್ರಿ.ಶ. ೧೧೫೦ ರಿಂದ ೧೩೩೬ಕ್ಕೆ ಬೆಳಸಿದ್ದಾರೆ. ಆದುದರಿಂದ ಇದರ ವ್ಯಾಪ್ತಿಯು ಅವರೇ ಸೂಚಿಸಿರುವ ಹಾಗೆ ಕ್ರಿ.ಶ. ೪೫೦ ರಿಂದ ೧೩೩೬ರ ವರೆಗೆ. " ನಮ್ಮ ಇತಿಹಾಸದಲ್ಲಿ ಒಂದು ಮಹತ್ವದ ಮೇರೆಯಾಗಿರುವ ವಿಜಯನಗರ ಸಾಮ್ರಾಜ್ಯೋದಯದವರೆಗಿನ ಸಮಯವ್ಯಾಪ್ತಿಯನ್ನು ಹೊಂದಿದೆ ". ಪ್ರಾಚೀನ ಇತಿಹಾಸದ (Ancient History) ಕಾಲಾವಧಿಗೆ ಇದು ಸರಿಹೋಗುತ್ತದೆ. ವಿಜಯನಗರದ ಅಸ್ತಿತ್ವ, ಮುಸಲ್ಮಾನ ರಾಜ್ಯಗಳ ಅಸ್ತಿತ್ವ " ಅರ್ವಾಚೀನ ಇತಿಹಾಸ " (Modern History) ಎನ್ನಿಸಿಕೊಳ್ಳುತ್ತದೆ ಎಂಬುದನ್ನು ಇಲ್ಲಿ ಇನಿತು ಜ್ಞಾಪಕಕ್ಕೆ ತಂದುಕೊಳ್ಳಬೇಕು. ಆದುದರಿಂದ ಅವಧಿಯ ಮಿತಿಯನ್ನು ಡಾ. ಚೆನ್ನಕ್ಕ ಹೆಚ್ಚು ಸಮಂಜಸವಾಗಿ ನಿರ್ಧರಿಸಿಕೊಂಡು ವಿವರಿಸಿಕೊಟ್ಟಿದ್ದಾರೆ—ವಸ್ತುವಿನ ಸ್ವರೂಪವನ್ನು. ಶಾಸನ ಪ್ರಪಂಚದಲ್ಲಿ ಸ್ತ್ರೀ ಸಮಾಜದ ಮೌಲ್ಯಗಳು ಕ್ರಿ.ಶ. ೧೧೫೦-೧೩೩೬ರ ಮಧ್ಯದಲ್ಲಿ ಅಷ್ಟೇನು ವಿಶೇಷವಾಗಿ ಬದಲಾವಣೆಗಳನ್ನು ಹೊಂದಿಲ್ಲ. ಅರ್ಥಾತ್ ಈ ನದಿಯ ಪಾತ್ರ-ಪರಂಪರಾಗತಸರಿತದ ಪಾತ್ರ—ಅಷ್ಟೇನು ಬದಲಾಗಿಲ್ಲ ಎಂಬುದನ್ನು ಕಾಣಬಹುದು.

ಈ ಪ್ರಬಂಧವನ್ನು ಬರೆಯುವಲ್ಲಿ ಡಾ. ಎಂ. ಚಿದಾನಂದಮೂರ್ತಿಗಳ ಹಾಗೆ ಶಾಸನಗಳನ್ನು ಪ್ರಧಾನ ಸಾಮಗ್ರಿಯನ್ನಾಗಿ ಮತ್ತು ಜನಪದ ಹಾಗೂ ಶಿಷ್ಟಪದ ಸಾಹಿತ್ಯವನ್ನು ಗೌಣವಾಗಿ ಬಳಸಿಕೊಳ್ಳಲಾಗಿದೆ. ಪ್ರಾಚೀನ ಕರ್ನಾಟಕದ ಮಹಿಳೆಯರ ಇತಿಹಾಸವನ್ನು ವಿವೇಚನೆಮಾಡುವಾಗ ಇಂದಿನ ಕರ್ನಾಟಕವನ್ನು ಮಾತ್ರ ಗಮನದಲ್ಲಿರಿಸಿಕೊಂಡು ವಿಷಯ ಸಂಗ್ರಹ ಮಾಡಿದೆ. ಆದರೆ ಕೆಲವುಸಲ ಹೊರ ಪ್ರಾಂತಗಳಲ್ಲಿ ದೊರೆತ ಶಾಸನಗಳನ್ನೂ ಇಲ್ಲಿ ಗಮನಿಸಲಾಗಿದೆ ಎಂದಿದ್ದಾರೆ. (ಪು. ೭). ಪ್ರಾಚೀನ ಕರ್ನಾಟಕದ ಅಧ್ಯಯನ ಮಾಡುವವರಿಗೆ ಇದು ಅನಿವಾರ್ಯ. ಏಕೆಂದರೆ ಪ್ರಾಚೀನ ಕರ್ನಾಟಕಕ್ಕೆ ಸಂಬಂಧಿಸಿದಂತೆ ಸಮಗ್ರ ಶಾಸನಸಂಪತ್ತು, ಯಾವುದು ಬರವಣಿಗೆಗಳಿಗೆ ಮೂಲ ಆಕರವೊ, ಆ ಸಂಪತ್ತನ್ನು ಇದುವರೆಗೆ ಎಲ್ಲಿಯೂ ಸಂಗ್ರಹಿಸಿ ಪ್ರಕಟಿಸಿಲ್ಲ. ಎಂದರೆ ದಿವಂಗತ ಬಿ. ಎಲ್. ರೈಸ್ ಮಹೋದಯರ ಹಾಗೆ, ಅಂದಿನ ಮೈಸೂರು ಸಂಸ್ಥಾನಕ್ಕೆ ಸಂಬಂಧಪಟ್ಟ ಒಂಬತ್ತು ಜಿಲ್ಲೆಗಳಿಗೆ

ಸಂಗ್ರಹಿಸಿದ ಹಾಗೆ, ಉಳಿದ ಕರ್ನಾಟಕದ ಭಾಗಕ್ಕೆ (ಆಕರ ಸಾಮಗ್ರಿಯನ್ನು ಎಪಿಗ್ರಾಫಿಯ ಕರ್ನಾಟಿಕ ಸಂಪುಟಗಳ ಹಾಗೆ) ಅಂದಿನ ರೀತಿಯಲ್ಲಿ ಸರ್ವೇಮಾಡಿ ಪ್ರಕಟಿಸಿಲ್ಲ. ಈ ಮಾದರಿಯ ಸಂಪುಟಗಳು ಬರುವವರೆಗೆ ಸಮಗ್ರ ಕರ್ನಾಟಕ ಎಂಬ ಮಾತು ಇನಿತು ಪೊಳ್ಳನ್ನು ಹೊಂದಿದ—ನ್ಯೂನತೆಯಿಂದ ಕೂಡಿದ–ಮಾತಾಗುತ್ತದೆ. ಈ ಕೊರತೆ ಈ ಅಧ್ಯಯನದಲ್ಲೂ ಇದೆ. ಪಿಎಚ್.ಡಿ. ಪ್ರಬಂಧಗಳಿಗೆ ಮಾರ್ಗದರ್ಶನ ಮಾಡುವ ಮಹನೀಯರು ಮೊದಲು ವಸ್ತುವನ್ನು ಅರಿತುಕೊಂಡು–ಅದನ್ನು ಒಂದು ಇತಿಮಿತಿಗೆ ಅಳವಡಿಸಿ–ಆಕರಗಳ ಸಾಮಗ್ರಿ ಸಿದ್ಧವಾಗದ ಪ್ರದೇಶಗಳನ್ನು ಗಮನಿಸಿ ಕ್ಷೇತ್ರಕಿರಿದಾದರೂ ಉಪಲಬ್ಧ ಸಾಮಗ್ರಿಯನ್ನು ಒಂದೆಡೆ ತಂದು ಪ್ರಬಂಧವನ್ನು ಸಂಪೂರ್ಣಮಾಡುವಂತೆ ನಿರ್ದೇಶಿಸಬೇಕು. ಅಪ್ರಕಟಿತ ಸಾಮಗ್ರಿಯನ್ನು ಪಿಎಚ್.ಡಿ. ಪ್ರಬಂಧಕ್ಕೆ ಆಕರವನ್ನಾಗಿ ಅನುಬಂಧರೂಪದಲ್ಲಿ ಜೋಡಿಸಬೇಕು. ಇಂತಹ ಅಧ್ಯಯನ ಒಂದೇ ತಾಲ್ಲೂಕಿಗೆ–ಒಂದೇ–ಊರಿಗೆ–ಸಂಬಂಧಪಟ್ಟರೂ ಚಿಂತೆ ಇಲ್ಲ. ಏನನ್ನು ಹೊಸದಾಗಿ ಸಂಶೋಧಿಸಿಕೊಟ್ಟಿದ್ದಾರೆ ಎಂಬುದು ಮುಖ್ಯ; ಪುಟ ಸಂಖ್ಯೆಗಳು ಮುಖ್ಯವಲ್ಲ.

'ವಿದ್ಯಾಭ್ಯಾಸ' ವಿಷಯವನ್ನು ಎತ್ತಿಕೊಂಡರೆ ಪಂಪನ ಕೃತಿ ಆದಿಪುರಾಣದಲ್ಲಿ ಒಂದು ವಿಶದವಾದ ವರ್ಣನೆಯು ಬರುತ್ತದೆ; ವೃಷಭದೇವನು ತನ್ನ ಇಬ್ಬರು ಮಕ್ಕಳಾದ ಬ್ರಹ್ಮೀ ಹಾಗೂ ಸುಂದರಿಯರಿಗೆ ಕಲಿಸಿದ ಸಂಗತಿಗಳು ಇಂತಿವೆ:

ವ|| ಆದಱಿಂ ನಿಮಗೆ ವಯಸಮೆಂಬುದು ವಿದ್ಯಾಭ್ಯಾಸ ಯೋಗ್ಯಮೆಂದು ವಿಶಾಲ ಹೇಮಪಟ್ಟಕದೊಳ್ ಆತ್ಮಹೃತ್ಪದ್ಮಪದ್ಮೆಯಂ ಸರಸ್ವತಿಯಂ ಪೂಜಾಪೂರ್ವಕಮಧಿವಾಸಿಸಿ ನಿಜತನೂಜೆಯರಿರ್ವರುಮನೆರಡುಂ ಕೆಲದೊಳಿರಿಸಿ

ಮುನ್ನಂ ತ್ರಿಲೋಕಗುರು ಸಿ
ದ್ಧನ್ನಮಯೆಂದಱಿಪಿ ಮುಖ್ಯ ಮಂಗಳ ಪದಮಂ
ಕನ್ನೆಗೆ ಪಿರಿಯಾಕೆಗೆ ಬಱಿ
[ಯು]ನ್ನಯದಿಂ ಬರೆದು ತೋಱಿದಂ ಲಿಪಿಗಳುಮಂ || ೮–೫೯

ವ|| ಅಂತಕಾರಾದಿ ಹಕಾರಾಂತ ಸ್ವರವ್ಯಂಜನಭೇದಭಿನ್ನ ಶುದ್ಧಾಕ್ಷರಂಗಳುಮಂ ಅಯೋಗವಾಹ ಚತುಷ್ಕಮುಮಂ ಸಂಯೋಗಾಕ್ಷರಂಗಳುಮಂ ಬ್ರಹ್ಮಿಗೆ ದಕ್ಷಿಣ ಹಸ್ತದೊಳುಪದೇಶಂಗೆಯ್ದು,

ಸುಂದರಿಗೆ ಗಣಿತಮಂ ದಳಿ
ತೇಂದೀವರನಯನೆಗೆಡದ ಕಯ್ಯೊಳ್ ಭವ್ಯಾ
ನಂದಕರಂ ಸ್ಥಾನಕ್ರಮ
ದಿಂದಂ ಪುರುದೇವನಱಿಯೆ ತೋಱಿದನಾಗಳ್ || ೮–೬೦

ವ|| ಮತ್ತಂ ಸ್ವಯಂಭುವಾಭಿಧಾನಪದವಿದ್ಯಾಚ್ಛಂದೋವಿಚಿತ್ಯಲಂಕಾರಂಗಳೆಂಬ ಮೂಱಱಿಂ ಪೆಸರ್ವಡೆದ ವಾಙ್ಮಯಮುಮಂ, ಸಮುಸ್ತಕಳಾಕಲಾಪಮುಮಂ ಆದಿಬ್ರಹ್ಮನುಪದೇಶಂಗೆಯ್ದು ನಿಜಾತ್ಮಜೆಯರಿರ್ವರುಮಂ ವಿದ್ಯಾಪರಿಪೂರ್ಣೆಯರುಮಪ್ಪಂತು ಮಾಡಿ .... [ಆದಿಪುರಾಣ (ಸಂ.) ಎಸ್. ಜಿ. ನರಸಿಂಹಾಚಾರ್]

ಹಲವು ಲಿಪಿಗಳನ್ನು : ಸ್ವರ, ವ್ಯಂಜನ, ಅಯೋಗವಾಹ ಸಾಲ್ಕು, ಸಂಯೋಗಾಕ್ಷರ ಇಂತು ಶುದ್ಧಾಕ್ಷರಗಳನ್ನು ; ಸ್ವಯಂಭೂವಿನ ' ಅಭಿಧಾನಪದ ' ' ಛಂದೋವಿಚಿತಿ ' ಹಾಗೂ ಅಲಂಕಾರ ಎಂಬ ವಾಙ್ಮಯವನ್ನೂ (ಸಾಹಿತ್ಯವನ್ನೂ) ಸಮಸ್ತ ಕಲೆಗಳನ್ನೂ ಆ ಕನ್ನೆಯರಿಗೆ ಕಲಿಸಿದ ಎನ್ನುವಲ್ಲಿ ಹತ್ತನೆಯ ಶತಮಾನದಲ್ಲಿ ಸ್ತ್ರೀಯರಿಗೆ ಕಲಿಸುತ್ತಿದ್ದ, (ಕನಿಷ್ಠ ಪಕ್ಷ) ಮೇಲ್ತರಗತಿಯ ವ್ಯಕ್ತಿಗಳಿಗೆ ಹೇಳಿಕೊಟ್ಟ, ಸಂಗತಿಗಳ ಸಮಕಾಲೀನ ವಿವರ ಇಲ್ಲಿ ಇದೆ. ಈಗಲೂ ಸರ್ವರಿಗೂ ವಿದ್ಯೆ ಮುಟ್ಟುತ್ತಿಲ್ಲ ! ಹಿಂಗಾಲು ಶಕ್ತಿ ಇರುವರಿಗೆ ಮಾತ್ರ ಅದು ಸಾಧ್ಯ. ಆದುದರಿಂದ ಪ್ರಾಚೀನ ಕಾಲದಲ್ಲಿ ಮಾತ್ರ ಅದೇನು ಸೀಮಿತವಾಗಿದ್ದಿಲ್ಲ ; ಈಗಲೂ ಸೀಮಿತವೆ; ಯೋಗ್ಯರಾದವರೆಲ್ಲರಿಗೂ ದೊರೆಯುತ್ತದೆ ಎಂಬ ಗ್ಯಾರಂಟೀ ಇಲ್ಲ.

ಸ್ತ್ರೀಸಮಾಜವನ್ನು ಗೃಹಿಣೀ ಸಮಾಜ ಮತ್ತು ಸೂಳೆಸಮಾಜ ಎಂದು ಎರಡು ಅಧ್ಯಾಯಗಳಲ್ಲಿ ವಿಭಜಿಸಿ ಅಧ್ಯಯನಮಾಡಿದ್ದಾರೆ. ಗೃಹಿಣೀ ಸಮಾಜವನ್ನು ಬಾಲ್ಯ–ದಾಂಪತ್ಯ–ವೈಧವ್ಯ ಎಂದು ಮೂರು ರೀತಿಯಲ್ಲಿ ವಿಂಗಡಿಸಿಕೊಂಡು ಸ್ತ್ರೀಯರು ಸಾಮಾನ್ಯವಾಗಿ ಹೇಗೆ ಇದ್ದರೆಂಬುದನ್ನು ವಿವರಿಸಿದ್ದಾರೆ. ಕೆಲವರಾದರೂ ಪುತ್ರಿಯನ್ನೂ "ಸುಪುತ್ರಿ ಕುಲದೀಪಿಕೆ" ಎಂದು ಹೇಳಿರುವುದು ಗಮನಾರ್ಹ. ಈ ಶಾಸನದ ಕಾಲ ಕ್ರಿ.ಶ. ೧೧೮೪ ಎಂದರೆ ಸ್ತ್ರೀಯನ್ನು ಅಷ್ಟು ಹಿಂದೆಯೇ "ಕುಲದೀಪಿಕೆ" ಎಂದು ಹೇಳಿರುವುದು ಸ್ತ್ರೀಯರ ಬಗ್ಗೆ—ಹೆಣ್ಣು ಮಗುವಿನ ಬಗ್ಗೆ—ಇತ್ತೀಚಿನ ಕೆಲ ನಾರೀಪರ ವಾದಿಸುವವರು ಯೋಚಿಸಬೇಕು. ನಾರಿಯರನ್ನು ಕೇವಲ ಹೀನದೃಷ್ಟಿಯಿಂದ ನೋಡುತ್ತಿದ್ದರೆನ್ನುವುದು ಅಷ್ಟು ಸಮಂಜಸವಲ್ಲ. ಒಂದು ಕುಟುಂಬ ಎಂಬ ಬಂಡಿಗೆ ಪುರುಷ ಸ್ತ್ರೀ ಇಬ್ಬರೂ ಎರಡು ಚಕ್ರಗಳು. ಅವು ಸಮ ಸಮವಾಗಿ ಹೋದರೆ ಸಂಸಾರದಲ್ಲಿ ಸಾಮರಸ್ಯ ಇರುತ್ತದೆ ; ಇಲ್ಲದಿದ್ದರೆ ಆ ಗಾಡಿ ಮುಂದಕ್ಕೆ ಹೋಗುವಲ್ಲಿ ಅನೇಕ ಅಡೆತಡೆಗಳನ್ನು ಎದುರಿಸಬೇಕಾಗುತ್ತದೆ ಅಷ್ಟೇ ಅಲ್ಲ. ಅದರ ನಡೆಯಲ್ಲಿ ಪ್ರಗತಿಯೆ ಇರದು ! ಸಮಾಜ ಶಕಟಕ್ಕೆ ಎರಡೂ ಬೇಕೇಬೇಕು ಮತ್ತು ಅವುಗಳಲ್ಲಿ ತಿಳಿವಳಿಕೆಯ ಹೊಂದಾಣಿಕೆ ಇರಬೇಕು. ವಿವಾಹದ ಪ್ರಸಕ್ತಿ ಬಂದಲ್ಲಿ ಕರ್ನಾಟಕದಲ್ಲಿ ಆಗ ಪ್ರಚಲಿತವಾಗಿದ್ದ ' ರಾಕ್ಷಸ ' ' ಸ್ವಯಂವರ ' ' ಬಾಲ್ಯ ವಿವಾಹ ' ಇತ್ಯಾದಿಗಳ ವಿವರಣೆ ಇಲ್ಲಿ ಇದೆ. ಮದುವೆಯ ವಯಸ್ಸು, ಮದುವೆಯ ಸಂದರ್ಭ, ಮದುವೆಯ ಸಂಬಂಧ, ಉಡುಗೊರೆ, ಮದುವೆಯ ಕರ (ಹಂದರವಣ) | ಮದುವೆಯ ತೆರ | ಮದುವೆದೆರೆ, ಬಹುಪತ್ನಿತ್ವ ಇತ್ಯಾದಿಗಳ ವಿವರಣೆ–ವಿಶ್ಲೇಷಣೆ ಇಲ್ಲಿದೆ. ವರ್ಣಗಳು ವರ್ಗಗಳು ಈ ಕಾಲದಲ್ಲಿ, ಮತ್ತೆ ಯಾವಕಾಲಕ್ಕೂ, ಮಹತ್ವದ ಪಾತ್ರವನ್ನು ವಹಿಸುವದನ್ನು ತಿಳಿಸಿದ್ದಾರೆ. ಮದುವೆಯ ಸಂದರ್ಭದಲ್ಲಿ ಬ್ರಾಹ್ಮಣ ಮೊದಲುಮಾಡಿ ಶೂದ್ರರವರೆಗಿನ ಎಲ್ಲ ಪ್ರಜೆಗಳೂ ' ಮದುವೆ ತೆರಿಗೆ ' ಹಣವನ್ನು ಕೊಡುತ್ತಿದ್ದರೆಂಬುದನ್ನು ವಿವರವಿವರವಾಗಿ ಬರೆದಿದ್ದಾರೆ. ಈ ತೆರಿಗೆ ಹಣ ಹಾಗೂ ಧಾನ್ಯದ ಸ್ವರೂಪದಲ್ಲೂ ಇದ್ದುದು ಕಂಡುಬರುತ್ತದೆ. ಮದುವೆಯ

ಸಂದರ್ಭದಲ್ಲಿ ವರ ಹಾಗೂ ವಧೂ ಎರಡೂ ಪಕ್ಷದವರು ತೆರಿಗೆಯನ್ನು ನೀಡಬೇಕಿತ್ತು. ಈ ತೆರಿಗೆ ಹೆಚ್ಚಾಗಿ ರಾಜಬೊಕ್ಕಸಕ್ಕೆ ಹೋಗದೆ ಊರಿನ ದೇವಸ್ಥಾನ ಕೆರೆಕಟ್ಟೆಗಳ ನಿರ್ಮಾಣಕ್ಕೆ ಇಲ್ಲವೆ ಜೀರ್ಣೋದ್ಧಾರ ಕೆಲಸಗಳಿಗೆ ಬಳಸಲಾಗುತ್ತಿತ್ತು.

ಕರ್ನಾಟಕದಲ್ಲಿ 'ಅಳಿಯ ಸಂತಾನ' ವ್ಯವಸ್ಥೆಯು ಇದ್ದಿರಬೇಕೆಂದು ಊಹಿಸಿ ಅದು ಕರಾವಳಿತೀರದ ಶಾಸನಗಳಲ್ಲಿ ಬರುವುದನ್ನು ತಿಳಿಸಿದ್ದಾರೆ. ಗಂಡು ಮಕ್ಕಳು ಮದುವೆ ಆದಕೂಡಲೆ ಅತ್ತೆಯ ಮನೆಗೇ ಇರಲು ಹೋಗುತ್ತಾರೆ. ಕುಟುಂಬದ ವ್ಯವಹಾರವೆಲ್ಲ ಮನೆಯೊಡತಿಯ ಕೈಯಲ್ಲಿ. ಮನೆಯಲ್ಲಿ ಹುಟ್ಟಿದ ಗಂಡು ಮಕ್ಕಳಿಗಿಂತ ಬಂದ ಅಳಿಯಂದಿರಿಗೇ ಹೆಚ್ಚು ಗೌರವ. ಕರಾವಳೀ ತೀರದಲ್ಲೂ ಈ ಪದ್ಧತಿಯು ಕೇವಲ ಕೇರಳಕ್ಕೆ ಅನಿಕೊಂಡ ದಕ್ಷಿಣ ಕನ್ನಡ ಜಿಲ್ಲೆಯ ಪ್ರದೇಶದಲ್ಲಿ ಇದ್ದಿತೆಂದು ಹೇಳಬಹುದು. ಏಕೆಂದರೆ ಅವರ ಅಧ್ಯಯನದಲ್ಲಾಗಲಿ ಇತರರ ಅಧ್ಯಯನದಲ್ಲಾಗಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ—ಉತ್ತರ ಹಾಗೂ ಇತರ ಕರ್ಣಾಟಕದ ಭಾಗಗಳಲ್ಲಿ ಈ ಪದ್ಧತಿಯು ಇದ್ದಂತೆ ಇದುವರೆಗೆ ಬೆಳಕಿಗೆ ಬಂದಿಲ್ಲ. ಇದನ್ನು ಸರಿಯಾಗಿ ಗುರುತಿಸಿದ್ದಾರೆ.

ಸಾತವಾಹನರ ದೊರೆಗಳು ಗೌತಮಿಪುತ್ರ ಸಾತಕರ್ಣಿ ಮೊದಲಾದವರು ಅಳಿಯ ಸಂತಾನಕ್ಕೆ ಸಂಬಂಧಪಟ್ಟವರು ಎಂದು ಗುರುತಿಸಲಾಗಿದೆ. ತಾಯಿಯ ಹೆಸರಿನಿಂದ ಗುರುತಿಸುವುದು—ಉಲ್ಲೇಖಿಸುದುದು—ಈ ಮಾತಿಗೆ ನಿದರ್ಶನ ಎಂದಿದ್ದಾರೆ (ಪು. ೨೩). ಈ ಅಭಿಪ್ರಾಯವನ್ನು ಒಪ್ಪಲು ಕಷ್ಟವಾಗುತ್ತದೆ. ಏಕೆಂದರೆ ಆರ್ಯ ಸಂಸ್ಕೃತಿಯಲ್ಲಿಯೂ ತಂದೆಯ ಹೆಸರು ಗುರುತಿಲ್ಲದಾಗ ಆ ಮಗನನ್ನು ತಾಯಿಯ ಹೆಸರಿನೊಂದಿಗೆ ಗುರುತಿಸಲಾಗುತ್ತದೆ ಉದಾಹರಣೆಗೆ 'ಜಾಬಾಲಿ' ಋಷಿಯನ್ನು ಜ್ಞಾಪಕಕ್ಕೆ ತಂದುಕೊಳ್ಳಬಹುದು. ಉತ್ತರ ಪ್ರದೇಶ ರಾಜ್ಯದಲ್ಲಿರುವ ಜೌನಪುರ ಬಳಿಯ ಗ್ರಾಮ 'ಮುಸಾನಗರ' ಊರಲ್ಲಿ ದೊರಕಿದ ಇಟ್ಟಿಗೆಯ ಮೇಲೆ "ದೇಬಕಿ ಅಶ್ವಾತಾಯನಿ ಪುತಸ ದೇಬಿಮಿತಸ ಅಶ್ವಮೇಧ" ಎಂದು ಬರೆದಿದೆ. ಆರ್ಯ ಸಂಸ್ಕೃತಿಯಲ್ಲಿ ತಾಯಂದಿರ ಹೆಸರನ್ನು ಹೇಳಬಾರದೆಂದೇನಿಲ್ಲ. ಕೌಸಲೇಯ (ರಾಮ) ಕೌಂತೇಯ, ಗಾಂಧಾರೀಜ ಇತ್ಯಾದಿಗಳನ್ನು ನೆನಪಿಗೆ ತಂದುಕೊಂಡರೆ ಸಾಕು. ಆದುದರಿಂದ ತಾಯಿಯ ಹೆಸರನ್ನು ಬೆರಸಿಬರೆದಾಕ್ಷಣ ಸಾತಕರ್ಣಿಗಳು—ಸಾತವಾಹನರು—ಅಳಿಯಸಂತಾನದವರಾಗಬೇಕಿಲ್ಲ. ಕದಂಬ ಮನೆತನವೇ ಬೇರೆ, ಸಾತಕರ್ಣಿಗಳ ಮನೆತನವೇ ಬೇರೆ. "ಕದಂಬ ಮನೆತನದ ಅರಸರನ್ನು ಸಾಮಾನ್ಯವಾಗಿ ಗೌತಮಿಪುತ್ರ ಸಾತಕರ್ಣಿ ಎಂಬಂತೆ" (ಪು. ೨೩) ಈ ಹೇಳಿಕೆ ಸಾಧುವಲ್ಲ. ಮಾರ್ಗದರ್ಶಕ ಡಾ. ಎಂ. ಎಂ. ಕಲಬುರ್ಗಿ ಅದಕ್ಕೂ ಹೆಚ್ಚು ಹೊಣೆಗಾರರಾದ ಡಾ. ಜಿ. ಎಸ್. ಗಾಯಿ, ಯಾರು ಈ ಮಹಾಪ್ರಬಂಧದ ಸಮೀಕ್ಷಕರೊ ಅವರು ತಿದ್ದಬೇಕಾಗಿದ್ದಿತು. ಇವರು ತಿದ್ದಿಕೊಟ್ಟಿದ್ದರೆ 'ವಿದ್ಯಾರ್ಥಿನಿ' ಆಗಿದ್ದ ಶ್ರೀಮತಿ ಚೆನ್ನಕ್ಕ ಎಲಿಗಾರ್ ಖಂಡಿತವಾಗಿಯೂ ತಿದ್ದಿಕೊಳ್ಳುತ್ತಿದ್ದಳು. ಪರೀಕ್ಷಕರಿಗೆ ಹೊಣೆ ಇದೆಯಲ್ಲವೆ? ದೋಷಗಳು ಇಂತಹ ಕೃತಿಯಲ್ಲಿ ಬರಬಾರದಲ್ಲವೆ?

ಇಂತಹದೇ ಇನ್ನೊಂದು ದೋಷ ಪಂಪನ ಕೃತಿ ‘ ಆದಿಪುರಾಣಂ ’ ಇದನ್ನು ದಿವಂಗತ ಪ್ರೊ. ಡಿ. ಎಲ್. ಎನ್. ಅವರು ಸಂಪಾದಕರು ಎಂದು ಬರೆದಿರುವುದು (ಪು. ೧೪ ಮತ್ತು ಪು. ೮೨).

ಇಂತಹ ಕೆಲವು ದೋಷಗಳನ್ನು ಬಿಟ್ಟರೆ ಈ ಗ್ರಂಥ ತುಂಬ ಚೆನ್ನಾಗಿ ಬಂದಿದೆ. ಡಾ. ಗಾಯಿ ಅವರು ಬರೆದಿರುವಂತೆ ಸಾಕಷ್ಟು ಸಾಕ್ಷ್ಯಾಧಾರಗಳನ್ನು ಡಾ. ಚೆನ್ನಕ್ಕ ಒದಗಿಸಿ ಬರೆದಿದ್ದಾರೆ. “The Thesis of Smt. Channakka Yaligar is a distinct Contribution to the study of Women in Karnataka as gleaned from the inscriptions”. ಇಂತಹ ಇನ್ನೂ ಕೆಲವು ಪುಸ್ತಕಗಳು ಅವರ ಲೇಖನಿಯಿಂದ ಮೂಡಿಬರಲಿ ಎಂದು ಹಾರೈಸುತ್ತೇನೆ.

—ಸೀತಾರಾಮ ಜಾಗೀರ್‌ದಾರ್

ಕೆ.ಸಂ. ೫೫೦—ಎಂ.ಯು.ಪಿ.ಎಂ.—೮೨೫ ಪ್ರತಿಗಳು—೨೫–೧೧–೧೯೯೨

ಸಂಪಾದಕೀಯ

ಮ್ಯಾಗ್ಸೇಸೇ ಪ್ರಶಸ್ತಿ

೧೯೯೧, ಕನ್ನಡಕ್ಕೆ ಮತ್ತೊಂದು ಕೀರ್ತಿಯ ಗರಿ ಮೂಡಿದ ವರ್ಷ. ರೇಮನ್ ಮ್ಯಾಗ್ಸೇಸೇ ಪ್ರಶಸ್ತಿ, ಕನ್ನಡದ ಖ್ಯಾತ ನಾಟಕಕಾರ, ನಿರ್ದೇಶಕ, ಚಿಂತಕ, ವಿಮರ್ಶಕ, ಪ್ರಕಾಶಕ ಹಾಗೂ ಒಳ್ಳೆಯ ಸಂಘಟಕ ಮತ್ತು ಸಂಚಾಲಕ ಶಕ್ತಿಯ ಶ್ರೀ ಕೆ.ವಿ. ಸುಬ್ಬಣ್ಣ ಅವರ ಮೂಲಕ ಕನ್ನಡಕ್ಕೆ ಬಂದಿದೆ. ಮಲೆನಾಡಿನ ಮೂಲೆಯೊಂದರಲ್ಲಿ ಸದ್ದಿಲ್ಲದೆ ಕಲಾಸೇವೆಯಲ್ಲಿ ನಿರತರಾದ ಸುಬ್ಬಣ್ಣ ಅವರ ಸಾಧನೆ ಹೆಗ್ಗೋಡನ್ನು ಥಾಟಿ ಬೆಳೆಯಿತು, ಮೆರೆಯಿತು. ಆಕಾರದಲ್ಲಿ ವಾಮನನಂತಿದ್ದರೂ ತಮ್ಮ ಸಾಧನೆಯ ಮೂಲಕ ತ್ರಿವಿಕ್ರಮನಂತೆ ಬೆಳೆದ ಸುಬ್ಬಣ್ಣನವರು ಬಹುಮುಖ ಪ್ರತಿಭೆಯ ವ್ಯಕ್ತಿತ್ವವನ್ನು ಅಲ್ಪಕಾಲದಲ್ಲಿಯೇ ತೋರಿದವರು.

ಹೆಗ್ಗೋಡು ಇಂದು ಮಲೆನಾಡಿನ ಮೂಲೆಯ ಒಂದು ಸಣ್ಣ ಹಳ್ಳಿಯಾಗಿ ಉಳಿದಿಲ್ಲ. ಸುಬ್ಬಣ್ಣನವರ ಮೂಲಕ ಅದು ಕಲಾಕಾಶಿಯೆನಿಸಿ, ರಾಷ್ಟ್ರ, ಅಂತರರಾಷ್ಟ್ರಮಟ್ಟದಲ್ಲಿ ಅದರ ಹೆಸರು ಕೇಳಿಬರುತ್ತಿದೆ. ಸುಬ್ಬಣ್ಣನವರ ಕ್ರಿಯಾಶೀಲ ವ್ಯಕ್ತಿತ್ವ ಹಮ್ಮಿಕೊಂಡ ಹಲವಾರು ಬಿಡುವಿಲ್ಲದ ಚಟುವಟಿಕೆಗಳು ಇದಕ್ಕೆ ಕಾರಣ. ಕಲೆ, ಸಾಹಿತ್ಯ, ಸಂಸ್ಕೃತಿಗಳ ಜಾಗೃತಿಯನ್ನುಂಟುಮಾಡುವ ಉದ್ದೇಶವನ್ನಷ್ಟೇ ಇಟ್ಟುಕೊಳ್ಳದೆ, ಜನಾಕರ್ಷಣೀಯವಾದ ಹೊಸ ಹೊಸ ಪ್ರಯೋಗಗಳನ್ನು ಮಾಡುವುದರ ಮೂಲಕ ಪ್ರಸಿದ್ಧಿಗೆ ಬಂದ ಸುಬ್ಬಣ್ಣನವರು ನಾಟಕ ಹಾಗೂ ಸಿನಿಮಾ ರಂಗಗಳಲ್ಲಿ ತಮ್ಮದೇ ಆದ ವಿಶಿಷ್ಟ ಕೊಡುಗೆಯನ್ನು ಕೊಟ್ಟವರು.

ವೃತ್ತಿ ವ್ಯವಸಾಯವಾದರೂ, ಪ್ರವೃತ್ತಿಯಾಗಿ—ನಾಟಕ ಸಿನಿಮಾ ಸಾಹಿತ್ಯ ಮುಂತಾದುವನ್ನು ಹಚ್ಚಿಕೊಂಡ ಸುಬ್ಬಣ್ಣನವರು ಆ ಕ್ಷೇತ್ರಗಳಲ್ಲಿ ಒಂದು ಬಗೆಯ ಕ್ರಾಂತಿಯನ್ನೇ ಉಂಟುಮಾಡಲು ಕಾರಣರಾದವರು. ದುಡಿಯುವ ಮನಸ್ಸುಳ್ಳ ವ್ಯಕ್ತಿಗೆ ಸ್ಥಳ ಸ್ಥಾನ ಮುಖ್ಯ ಅಲ್ಲ ಎಂಬುದಕ್ಕೆ ಸುಬ್ಬಣ್ಣನವರೇ ಸಾಕ್ಷಿ. ಹೆಗ್ಗೋಡು ಪ್ರಚಾರಕ್ಕೆ ಬಂದದ್ದು, ಸುಬ್ಬಣ್ಣನವರಿಂದ, ಅವರ ಸಾಧನೆ—ಸಿದ್ಧಿಗಳಿಂದ. ಅವರು ಯಾವುದೇ ಪ್ರತಿಷ್ಠಿತ ಸ್ಥಾನವನ್ನು ಹೊಂದಿದವರಲ್ಲ, ಉಳಿದವರಂತೆ ಅವರೂ ಒಬ್ಬ ಬೇಸಾಯಗಾರ. ಆದರೆ ಅವರ ಸಾಧನೆಗೆ ಚೈತನ್ಯಶಾಲಿಯಾಗಿ ನಿಂತದ್ದೆಂದರೆ—ಏನನ್ನಾದರೂ ಸಾಧಿಸಿ ತೋರಬೇಕೆಂಬ ಹುಮ್ಮಸ್ಸು. ಬಹುಶಃ ಎಲ್ಲ ಸಾಧನೆಯ ಮೂಲವೂ ಇದೇ ಅನ್ನಿಸುತ್ತದೆ. ಅದು ಸುಬ್ಬಣ್ಣನವರಲ್ಲಿ ಧಾರಾಳವಾಗಿ ಕಂಡುಬರುವ ಅಂಶ.

ಹೆಗ್ಗೋಡಿನಂತಹ ಸಣ್ಣ ಹಳ್ಳಿಯಲ್ಲಿದ್ದುಕೊಂಡೇ ಸುಬ್ಬಣ್ಣನವರು ಮಾಡಿದ ಸಾಧನೆಗಳು ಹಲವಾರು. ಏಕಾಂಗ ವೀರನಾಗಿ ಅವರು ಸ್ಥಾಪಿಸಿದ ಅಕ್ಷರ ಪ್ರಕಾಶನ, ಕರ್ನಾಟಕದ ನಾಟಕ ಚಳುವಳಿಗೆ ಪ್ರೇರಕವಾದ 'ನೀನಾಸಂ' ಸ್ಥಾಪನೆ, ಹೆಗ್ಗೋಡಿನಲ್ಲಿ ನಡೆದ ಹಲವು ನಾಟಕ–ಸಿನಿಮಾ ಶಿಬಿರಗಳು, ಅಲ್ಲಿ ಸ್ಥಾಪನೆಗೊಂಡ ನೀನಾಸಂ ಚಿತ್ರ ಸಮಾಜ; ಅಷ್ಟೆ ಅಲ್ಲ ಉದ್ದಕ್ಕೂ ಅವರು ರಂಗಭೂಮಿಯ ಶಿಕ್ಷಣ, ಕಮ್ಮಟಗಳು, ನೀನಾಸಂ ತಿರುಗಾಟ, ಇವುಗಳ ಮೂಲಕ ಅವರು ತೋರುತ್ತಬಂದ ಆಸಕ್ತಿ ಎಲ್ಲರ ಗಮನವನ್ನು ಸೆಳೆದದ್ದಷ್ಟೇ ಅಲ್ಲ; ಆ ಮೂಲಕ ಹೊಸತೊಂದರ ನಿರ್ಮಾಣಕ್ಕೆ ಕಾರಣವಾದದ್ದು ಗಮನಾರ್ಹ. ಈ ಸಂಬಂಧವಾಗಿ ಅವರು ರಚಿಸಿರುವ ಹಲವು ಕೃತಿಗಳೂ ಮೌಲಿಕವಾದುವುಗಳೇ.

ಸುಬ್ಬಣ್ಣನವರ ಪ್ರತಿಭೆ, ಉತ್ಸಾಹ, ಶ್ರದ್ಧೆ, ನಿಷ್ಠೆ ಮತ್ತು ದೂರದೃಷ್ಟಿ—ಇವು ಅವರ ಬಹುದೊಡ್ಡ ಸಾಧನೆಗೆ ಬೆನ್ನೆಲುಬಾಗಿವೆ. ಕರ್ನಾಟಕದಲ್ಲಿ 'ಸುಬ್ಬಣ್ಣ'ಂದಿರು ಬಹಳವಿರಬಹುದು, ಆದರೆ 'ಹೆಗ್ಗೋಡು ಸುಬ್ಬಣ್ಣ' ಒಬ್ಬರೇ. ತಮ್ಮ ಸಾಧನೆಯಿಂದ ಊರಿನ ಹೆಸರನ್ನು ಅಮರವಾಗಿಸಿದ ಅವರು, ಆ ಮೂಲಕ ಕರ್ನಾಟಕದ ಹೆಸರನ್ನೂ, ಕನ್ನಡದ ಹೆಸರನ್ನೂ ಮೆರೆಸಲು ಕಾರಣವಾಗಿದ್ದಾರೆ. ರಂಗಭೂಮಿ, ಸಿನಿಮಾ ಹಾಗೂ ಸಾಹಿತ್ಯ ಕ್ಷೇತ್ರಗಳಲ್ಲಿಯ ಅಪೂರ್ವ ಕೊಡುಗೆಗಾಗಿ ಅವರಿಗೆ ಈ ಪ್ರಶಸ್ತಿ ದೊರೆತಿದೆ. ಈ ಸಂದರ್ಭದಲ್ಲಿ ಅವರನ್ನು ಹೃತ್ಪೂರ್ವಕವಾಗಿ ಅಭಿನಂದಿಸುವುದು ನಮ್ಮೆಲ್ಲರ ಕರ್ತವ್ಯ.

ಕಂಬನಿ

ಡಾ. ಅನುಪಮಾ ನಿರಂಜನ

ದಿನಾಂಕ : ೧೪–೨–೧೯೯೧ರಂದು ನಿಧಾನರಾದ ಡಾ. ಅನುಪಮಾ ನಿರಂಜನ ಅವರ ಹೆಸರು ಕನ್ನಡ ಸಾಹಿತ್ಯ ಲೋಕದಲ್ಲಿ ಚಿರಪರಿಚಿತವಾದುದು. ಸುಪ್ರಸಿದ್ಧ ವೈದ್ಯರಾಗಿದ್ದ ಅನುಪಮಾ ಅವರು ಕನ್ನಡದ ಒಬ್ಬ ಗಟ್ಟಿ ಲೇಖಕಿಯೂ ಹೌದು. ಕಥೆ, ಕಾದಂಬರಿ, ಪ್ರವಾಸಕಥನ, ಆತ್ಮಕಥನ, ಮಕ್ಕಳ ಸಾಹಿತ್ಯ, ವೈದ್ಯಕೀಯ ಸಾಹಿತ್ಯಗಳಲ್ಲಿ ಅರವತ್ತಕ್ಕೂ ಹೆಚ್ಚಿನ ಗ್ರಂಥಗಳನ್ನು ರಚಿಸಿದ ಡಾ. ಅನುಪಮಾ ಅವರ ನಿಧನಕ್ಕಾಗಿ 'ಪ್ರಬುದ್ಧ ಕರ್ಣಾಟಕ' ಸಂತಾಪ ಸೂಚಿಸುತ್ತದೆ.

ಡಾ. ಅನುಪಮಾ ನಿರಂಜನ ಅವರ ನೈಜನಾಮ ವೆಂಕಟಲಕ್ಷ್ಮಿ. ಅವರ ಸಾಹಿತ್ಯನಾಮ ಅನುಪಮಾ. ಪ್ರಗತಿಶೀಲ ಚಳವಳಿಯ ಪ್ರಮುಖ ಲೇಖಕರಾಗಿದ್ದ

ನಿರಂಜನ ಅವರನ್ನು ಮದುವೆ ಆಗುವುದರ ಮೂಲಕ ಅನುಪಮಾ ಅವರು ತಮ್ಮ ಸಾಹಿತ್ಯ ಬದುಕಿಗೆ ಪುಷ್ಟಿಯನ್ನು ತಂದುಕೊಂಡರೆಂದು ಹೇಳಬಹುದು. ಅನುಪಮಾ ಅವರು ತಮ್ಮ ಜೀವನದಲ್ಲಿ ಹೆಚ್ಚು ನೋವನ್ನುಂಡವರು. ಬದುಕಿನ ಆ ನೋವೇ ಅವರ ಸಾಹಿತ್ಯ ಸೃಷ್ಟಿಯ ಮೂಲ ಸೆಲೆಯಾಯಿತು.

ಡಾ. ಅನುಪಮಾ ಅವರು ತಮ್ಮ ಹದಿಮೂರನೆಯ ವಯಸ್ಸಿನಲ್ಲಿ ಬರವಣಿಗೆ ಆರಂಭಿಸಿದರಂತೆ. 'ನಯನಾ', 'ಶುಭಾ'–ಇವು ಅವರ ಕೈಬರಹದ ಕಥಾಸಂಕಲನಗಳು. ಅವರ ಮೊದಲ ಕಥಾಸಂಕಲನ 'ಕಣ್ಮಣಿ' ಪ್ರಕಟವಾದಾಗ ಅವರಿಗೆ ಹದಿನೆಂಟು ವರ್ಷ. ಅನಂತರ ೧೯೫೪ರಲ್ಲಿ 'ಅನಂತಗೀತೆ', 'ಸಂಕೋಲೆಯೊಳಗಿಂದ' ಕಾದಂಬರಿಗಳು ಪ್ರಕಟವಾದವು. ತರುವಾಯ ಅವರು ೨೨ ಕಾದಂಬರಿಗಳನ್ನು, ನೂರಾರು ಕಥೆಗಳನ್ನು ಬರೆದು ಸುಪ್ರಸಿದ್ಧ ಲೇಖಕಿಯಾಗಿಬಿಟ್ಟರು. 'ಕಣ್ಮಣಿ', 'ಹೃದಯ ಸಮುದ್ರ' 'ರೂವಾರಿಯ ಲಕ್ಷ್ಮಿ', 'ಒಂದು ಗಿಣಿಯ ಕಥೆ'—ಮುಂತಾದ ಕಥಾಸಂಕಲನಗಳನ್ನು ಹೊರತಂದಿರುವ ಅನುಪಮಾ ಅವರು ತಮ್ಮ ಕಥೆಗಳಲ್ಲಿ ಜೀವನದ ನೈಜತೆಗೆ, ಅನುಭವದ ವಾಸ್ತವಿಕತೆಗೆ ಹೆಚ್ಚು ಒತ್ತುಕೊಟ್ಟಿದ್ದಾರೆ. 'ಹೃದಯ ವಲ್ಲಭ', 'ಅನಂತಗೀತೆ', 'ಋಣ', 'ನೂಲು ನೇಯ್ದ ಚಿತ್ರ', 'ಶ್ವೇತಾಂಬರಿ', 'ಹಿಮದ ಹೂ', 'ಎಳೆ', 'ಘೋಷ', 'ಮಾಧವಿ' 'ಆಳ' 'ಚಿತ್ತಮೋಹನ'—ಇವು ಅನುಪಮಾ ಅವರ ಮಹತ್ವದ ಕಾದಂಬರಿಗಳು.

ಡಾ. ಅನುಪಮಾ ಅವರನ್ನು, ಶಿಶು ಸಾಹಿತ್ಯದಲ್ಲಿ ಹೆಸರು ಮಾಡಿದ ಏಕೈಕ ಮಹಿಳೆ ಎಂದು ಹೇಳಬಹುದು. ಅವರ ಶಿಶು ಸಾಹಿತ್ಯ ಸಂಪುಟಗಳಾದ 'ದಿನಕ್ಕೊಂದು ಕಥೆ' ಅತ್ಯಂತ ಗಮನಾರ್ಹವಾದುದು. ಅವರ ದಾಂಪತ್ಯ ವಿಜ್ಞಾನ ಕೃತಿಗಳು ವೈಜ್ಞಾನಿಕ ತಳಹದಿಯ ಮೇಲೆ ರಚಿತವಾಗಿದ್ದು, ತುಂಬ ಜನಪ್ರಿಯತೆಯನ್ನು ಪಡೆದಿವೆ. 'ನೆನಪು: ಸಿಹಿ–ಕಹಿ' ಅನುಪಮಾ ಅವರ ಭಿನ್ನ ರೀತಿಯ, ವಿಶಿಷ್ಟ ಮಾದರಿಯ ಆತ್ಮಕಥನ; ಕನ್ನಡದ ಉತ್ತಮ ಆತ್ಮಕಥೆಗಳ ಸಾಲಿಗೆ ಸೇರುವಂಥದು. ಹೀಗೆ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಉತ್ತಮ ಕೃಷಿ ಮಾಡಿದ ಡಾ. ಅನುಪಮಾ ಅವರಿಗೆ ಅನೇಕ ಬಹುಮಾನ, ಪ್ರಶಸ್ತಿಗಳೂ ಸಂದಿವೆ.

ಡಾ. ರಾ. ಯ. ಧಾರವಾಡಕರ

ದಿನಾಂಕ: ೧೨–೪–೧೯೯೧ರಂದು ನಿಧನರಾದ ಡಾ. ರಾ.ಯ. ಧಾರವಾಡಕರ ಅವರದು ಬಹುಮುಖ ಪ್ರತಿಭೆಯ ವ್ಯಕ್ತಿತ್ವ. ಭಾಷಾಶಾಸ್ತ್ರಜ್ಞರಾಗಿ, ಪ್ರಬಂಧಕಾರರಾಗಿ, ಚಿಂತಕರಾಗಿ, ವಿಮರ್ಶಕರಾಗಿ, ಸಂಶೋಧಕರಾಗಿ, ಉತ್ತಮ ವಾಗ್ಮಿಗಳಾಗಿ—ಇವರು ಪಡೆದ ಹೆಸರು, ಗಳಿಸಿದ ಕೀರ್ತಿ ಅಪಾರವಾದುದು. ಕನ್ನಡ ಮತ್ತು ಇಂಗ್ಲಿಷ್–ಎರಡೂ ವಿಷಯಗಳನ್ನು ಬೋಧಿಸುತ್ತಿದ್ದ ಧಾರವಾಡಕರ ಅವರು

ಒಬ್ಬ ಪ್ರಥಮ ಶ್ರೇಣಿಯ ಯಶಸ್ವೀ ಅಧ್ಯಾಪಕರು. ಜೊತೆಗೆ ಉತ್ತಮ ಆಡಳಿತಗಾರರೂ ಹೌದು. ಶ್ರೀಯುತರ ನಿಧನಕ್ಕಾಗಿ 'ಪ್ರಬುದ್ಧ ಕರ್ಣಾಟಕ' ಸಂತಾಪ ಸೂಚಿಸುತ್ತದೆ.

ಸುಮಾರು ಅರವತ್ತಕ್ಕಿಂತಲೂ ಹೆಚ್ಚು ಕೃತಿಗಳನ್ನು ಧಾರವಾಡಕರ ಅವರು ರಚಿಸಿದ್ದಾರೆ. 'ಪತ್ರಿಕಾ ವ್ಯವಸಾಯ', 'ಕರ್ನಾಟಕದಲ್ಲಿ ವೃತ್ತ ಪತ್ರಿಕೆಗಳು', 'ಸಾಹಿತ್ಯ ಸಮೀಕ್ಷೆ', 'ಆರು ಪ್ರಬಂಧಗಳು' 'ಧೂಮ್ರ ವಲಯಗಳು', 'ಕನ್ನಡ ಭಾಷಾಶಾಸ್ತ್ರ', 'ಹೊಸಗನ್ನಡ ಸಾಹಿತ್ಯದ ಉದಯಕಾಲ' 'ದೇವರು ಧರ್ಮ' 'ಕನ್ನಡದಲ್ಲಿ ಕಾನೂನು ಸಾಹಿತ್ಯ' 'ನಾನು ಕಂಡ ಅಮೆರಿಕ' 'ಶ್ರೀನಮನ' 'ತೂರಿದ ಚಿಂತನೆಗಳು'—ಇವು ಅವರ ಪ್ರಮುಖ ಕೃತಿಗಳು. ಸರ್ಕಾರದ ರಾಜ್ಯಭಾಷಾ ಆಯೋಗದ ಸದಸ್ಯರಾಗಿ ಕೆಲಸಮಾಡಿದ ಇವರಿಗೆ ಹಲವಾರು ಪ್ರಶಸ್ತಿ ಬಹುಮಾನಗಳು ಲಭಿಸಿವೆ. ಅನೇಕ ಸಂಘ-ಸಂಸ್ಥೆಗಳು ಇವರಿಗೆ ಪುರಸ್ಕಾರ, ಗೌರವ-ಮನ್ನಣೆ ನೀಡಿವೆ. ಅಮೇರಿಕಾ ಫೌಂಡೇಶನ್‌ದ ಆಮಂತ್ರಣ ಪಡೆದು ಫುಲ್‌ಬ್ರೈಟ್ ಸ್ಕಾಲರ್ ಎಂದು ೧೯೬೪ರಲ್ಲಿ ಅಮೇರಿಕಾದಲ್ಲಿ ಉಪನ್ಯಾಸ ನೀಡಿದ್ದಾರೆ. ೧೯೬೩ರಲ್ಲಿ ಸರ್ಕಾರವು ಇವರಿಗೆ 'ಸಾರ್ವಜನಿಕ ಸೇವಾ ಪ್ರಶಸ್ತಿ' ನೀಡಿ ಗೌರವಿಸಿತು. ಅದೇ ವರ್ಷ ಸಿದ್ಧಗಂಗಾ ಕ್ಷೇತ್ರದಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸಾಹಿತ್ಯ ಗೋಷ್ಠಿಯ ಅಧ್ಯಕ್ಷರಾಗಿದ್ದರು. ಇವರ 'ಪತ್ರಿಕಾ ವ್ಯವಸಾಯ', 'ಸಾಹಿತ್ಯ ಸಮೀಕ್ಷೆ' 'ಕನ್ನಡ ಭಾಷಾಶಾಸ್ತ್ರ', 'ತೂರಿದ ಚಿಂತನೆಗಳು', 'ನಾನು ಕಂಡ ಅಮೆರಿಕ' 'ಆರು ಪ್ರಬಂಧಗಳು'—ಕೃತಿಗಳಿಗೆ, ಪ್ರತಿಷ್ಠಿತ ಸಂಸ್ಥೆಗಳ ಪುರಸ್ಕಾರಗಳು ಲಭಿಸಿವೆ. ಇವರ ಸಮಗ್ರ ಸಾಹಿತ್ಯ ಮತ್ತು ವ್ಯಕ್ತಿತ್ವವನ್ನು ಗೌರವಿಸಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಇವರಿಗೆ ೧೯೮೯ರ ಗೌರವ ಪ್ರಶಸ್ತಿ ನೀಡಿದೆ.

ಧಾರವಾಡಕರ ಅವರ ಅಭಿಮಾನಿಗಳು ಮತ್ತು ಶಿಷ್ಯರು ೧೯೯೦ರಲ್ಲಿ ಇವರನ್ನು ಸಾರ್ವಜನಿಕವಾಗಿ ಸನ್ಮಾನಿಸಿ, ಅದರ ನೆನಪಿಗಾಗಿ 'ಪ್ರಬಂಧ ಪ್ರಪಂಚ' ಎಂಬ ಬೃಹತ್ ಪ್ರಮಾಣದ ಅಭಿನಂದನಾ ಗ್ರಂಥವನ್ನು ಸಮರ್ಪಿಸಿದರು.

‘ಪ್ರಬುದ್ಧ ಕರ್ಣಾಟಕ’ಕ್ಕೆ ವಿನಿಮಯವಾಗಿ ಬರುವ ಪತ್ರಿಕೆಗಳು

Annals of Oriental Research, University of Madras, *Brahmavidya*, Adyar, Madras; *Bulletin of the School of Oriental and African Studies*, London; *Journal of the Andhra Historical Research Society*, Rajahmundry; *Journal of the Karnataka Historical Research Society*, Dharwar; *Quarterly Journal of the Mythic Society*, Bangalore; *The Indian P.E.N.*, Bombay; *Annals of the Venkateswara Oriental Institute*, Tirupati; *The Jaina Siddhanta Bhaskara and the Jaina Gazette*, Arrah; *Bulletin of the Deccan College Research Institute*, Poona; *Publication of the Kannada Research Office*, Dharwar; *Annals of the Bhandarkar Oriental Research Institute*, Poona; *Journal of the Karnataka University*, Dharwar; *Public Affairs*, Bangalore.

‘ಪ್ರಪಂಚ’, ಹುಬ್ಬಳ್ಳಿ; ‘ಆಂಧ್ರ ಸಾಹಿತ್ಯ ಪರಿಷತ್ಪತ್ರಿಕೆ’ (ತೆಲುಗು), ಕಾಕಿನಾಡ; ‘ಪುಸ್ತಕ ಪ್ರಪಂಚ’, ಮೈಸೂರು; ‘ಕನ್ನಡ ನುಡಿ’, ಬೆಂಗಳೂರು; ‘ಸೋವಿಯೆತ್ ದೇಶ’, ಮದ್ರಾಸು; ‘ಪ್ರಕಾಶ’, ಉಡುಪಿ; ‘ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ’, ಬೆಂಗಳೂರು; ‘ಕರ್ಣಾಟಕ ಭಾರತಿ’, ಧಾರವಾಡ; ‘ಸಾಧನೆ’, ಬೆಂಗಳೂರು; ‘ಪರಂಜ್ಯೋತಿ’, ಹುಬ್ಬಳ್ಳಿ; ‘ಸಪ್ತಗಿರಿ’, ತಿರುಪತಿ; ‘ಲೋಚನ’, ಬೆಂಗಳೂರು; ‘ತುಳುವ’, ಉಡುಪಿ.

ಮೈಸೂರು ವಿಶ್ವವಿದ್ಯಾನಿಲಯದ ತ್ರೈಮಾಸಿಕಗಳು

★ ಪ್ರಬುದ್ಧ ಕರ್ಣಾಟಕ

★ ಮಾನವಿಕ ಕರ್ಣಾಟಕ

★ ವಿಜ್ಞಾನ ಕರ್ಣಾಟಕ

ವಾರ್ಷಿಕ ಚಂದಾ

(ಪ್ರತಿಯೊಂದಕ್ಕೂ ಅಂಚೆ ವೆಚ್ಚ ಸೇರಿ)

ವಿದ್ಯಾರ್ಥಿಗಳಿಗೆ	....	ಐದು ರೂಪಾಯಿ
ಇತರರಿಗೆ	....	ಹತ್ತು ರೂಪಾಯಿ
ಸಂಸ್ಥೆಗಳಿಗೆ	....	ಹದಿನೈದು ರೂಪಾಯಿ

(ಆಜೀವ ಸದಸ್ಯತ್ವ: ನೂರು ರೂಪಾಯಿಗಳು)
(ಪ್ರತಿಯೊಂದಕ್ಕೂ)

ನಿರ್ದೇಶಕರು
'ಪ್ರಸಾರಾಂಗ'
ಮಾನಸಗಂಗೋತ್ರಿ, ಮೈಸೂರು-೫೭೦ ೦೦೬